(B) 025244-1 SRS

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹದಿಮೂರನೇ ವಿಧಾನಸಭೆಯ ಐದನೇ ಅಧಿವೇಶನ

FIFTH SESSION OF THE THIRTEENTH LEGISLATIVE ASSEMBLY

ಸಂಪುಟ – ೨ (ಕ್ರಮಾಂಕ – ೩)

Volume - 2 (No. 3)

(೯ನೇ ಮಾರ್ಚ್ ೨೦೧೦)

(9th March 2010)

ಭಾಗ – ೨

PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

9 | 3 | [illegible] (No. [illegible])

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹದಿಮೂರನೇ ವಿಧಾನಸಭೆಯ ಐದನೇ ಅಧಿವೇಶನ

FIFTH SESSION OF THE THIRTEENTH LEGISLATIVE ASSEMBLY

ಸಂಪುಟ – ೨ (ಕ್ರಮಾಂಕ – ೩)

Volume - 2 (No. 3)

(೯ನೇ ಮಾರ್ಚ್ ೨೦೧೦)

(9th March 2010)

ಭಾಗ – ೨

PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ
ಹದಿಮೂರನೇ ವಿಧಾನಸಭೆಯ
ಐದನೇ ಅಧಿವೇಶನ

ಶ್ರೀ ಕೆ.ಜಿ. ಬೋಪಯ್ಯ
ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ
ವಿಷಯಾನುಕ್ರಮಣಿಕೆ
ಸಂಪುಟ – 2 (ಕ್ರಮಾಂಕ – 3)
(9ನೇ ಮಾರ್ಚ್ 2010)

ಮಂಗಳವಾರ, ದಿನಾಂಕ: 9ನೇ ಮಾರ್ಚ್ 2010

	ಪುಟ ಸಂಖ್ಯೆ
1. ಪ್ರಶ್ನೋತ್ತರಗಳು : (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು. (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. ಅನುಬಂಧ – I	785–848
2. ಸಭೆಯ ಮುಂದಿಡಲಾದ ಕಾಗದ ಪತ್ರಗಳು : ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಶೀಲನೆಗಾಗಿ ಬಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009 ಅನುಬಂಧ – II	848
3. ವಿತ್ತೀಯ ಕಾರ್ಯಕಲಾಪಗಳು : 2009–10ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಹಾಗೂ ಅಂತಿಮ ಕಂತು) ಮಂಡಿಸುವುದು. ಮುಖ್ಯಮಂತ್ರಿಗಳ ಪರವಾಗಿ – ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು)	849–854

ಪುಟ ಸಂಖ್ಯೆ

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು : 854–863

(1) ಅಡಿಕೆ ಬೆಂಬಲ ಬೆಲೆಯ ಬಗ್ಗೆ.

– ಶ್ರೀ ಯು.ಟಿ.ಖಾದರ್

(2) ಪ್ರತಿ ಶಾಸಕರಿಗೆ ಪ್ರದೇಶಾಭಿವೃದ್ಧಿಗಾಗಿ ವರ್ಷಕ್ಕೆ ಒಂದು ಕೋಟಿ ರೂ. ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರ ಬಗ್ಗೆ.

– ಶ್ರೀ ಯು. ಟಿ. ಖಾದರ್

– ಶ್ರೀ ಎಂ. ಟಿ. ಕೃಷ್ಣಪ್ಪ

– ಶ್ರೀ ಸಿ. ಎಂ. ಉದಾಸಿ
(ಲೋಕೋಪಯೋಗಿ ಸಚಿವರು)

– ಶ್ರೀ ಹೆಚ್. ಡಿ. ರೇವಣ್ಣ

– ಶ್ರೀ ಟಿ. ಬಿ. ಜಯಚಂದ್ರ

5. ನಿಯಮ 69ರ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು : 863–926

(ಅ) ಪ್ರಸಿದ್ಧ ಗೋಕರ್ಣ ದೇವಸ್ಥಾನವನ್ನು ಶ್ರೀ ರಾಮಚಂದ್ರಪುರ ಮಠಕ್ಕೆ ಸರ್ಕಾರವು ಹಸ್ತಾಂತರ ಮಾಡಿರುವ ವಿಚಾರದಲ್ಲಿ ನೀಡಿರುವ ಸೂಚನೆ ಬಗ್ಗೆ.

– ಶ್ರೀ ಹೆಚ್.ಡಿ.ರೇವಣ್ಣ

– ಶ್ರೀ ಎಸ್. ಸುರೇಶ್ ಕುಮಾರ್
(ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು)

– ಶ್ರೀ ಎಂ.ಟಿ.ಕೃಷ್ಣಪ್ಪ

– ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು)

– ಶ್ರೀ ಟಿ.ಬಿ.ಜಯಚಂದ್ರ

– ಶ್ರೀ ಹೆಚ್.ಕೆ.ಕುಮಾರಸ್ವಾಮಿ

ಪುಟ ಸಂಖ್ಯೆ

(ಆ) ಕಾರಂಜಾ ನೀರಾವರಿ ಯೋಜನೆಯ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಕೆಲವು ಗ್ರಾಮಗಳ ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಫಲವತ್ತಾದ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವ ವಿಚಾರ

– ಶ್ರೀ ಬಂಡೆಪ್ಪ ಕಾಶಂಪೂರ್
– ಶ್ರೀ ರಾಜಶೇಖರ್ ಪಾಟೀಲ್
– ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

6. ವಿತ್ತೀಯ ಕಾರ್ಯಕಲಾಪಗಳು : 927–960

2010–2011ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ
– ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

7. ಶಾಸನ ರಚನೆ : 960–980

ವಿಧೇಯಕ ಮಂಡನೆ

(ಅ) ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ 2010
– (ಮಂಡಿಸಲಾಗಿದೆ) ಅನುಬಂಧ – III
– ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

(ಆ) ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2010
– ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು)
– ಮಂಡಿಸಲಾಗಿದೆ ಅನುಬಂಧ – IV

ಪುಟ ಸಂಖ್ಯೆ

8. ಗಮನ ಸೆಳೆಯುವ ಸೂಚನೆಗಳು : 980–1005

(1) ಕರ್ನಾಟಕ ರಾಜ್ಯದ ಮೊದಲನೇ ಮುಖ್ಯಮಂತ್ರಿಯಾದ ಶ್ರೀ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನ ಸೌಧದ ಪರಿಸರದಲ್ಲಿ ಸ್ಥಾಪಿಸುವ ಬಗ್ಗೆ.

– ಶ್ರೀ ಎನ್. ಸಂಪಂಗಿ

– ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು & ಸಂಸದೀಯ ವ್ಯವಹಾರಗಳ ಸಚಿವರು)

(2) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಜನ ಸಾಮಾನ್ಯರು ತೊಂದರೆ ಅನುಭವಿಸುತ್ತಿರುವ ಬಗ್ಗೆ.

– ಶ್ರೀ ಅಭಯಚಂದ್ರ ಜೈನ್

– ಶ್ರೀ ಯು.ಟಿ.ಖಾದರ್

– ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಸಚಿವರು)

(3) ಹಾಸನ ಜಿಲ್ಲೆ ಅರಕಲಗೂಡು ಕ್ಷೇತ್ರದ ರಸ್ತೆಗಳು ತೀರಾ ಹದಗೆಟ್ಟಿದ್ದು ಹಾಗೂ ಲೆಕ್ಕಶೀರ್ಷಿಕೆ 5054ರ ಅಡಿಯಲ್ಲಿ ಪ್ರಸಕ್ತ ವರ್ಷ ಯಾವುದೇ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಕ್ಷೇತ್ರದ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿರುವ ಬಗ್ಗೆ.

– ಶ್ರೀ ಎ. ಮಂಜು

– ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)

ಪುಟ ಸಂಖ್ಯೆ

(4) ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಆದಾಯ ಪರಿಗಣನೆ ಇಲ್ಲದೆ (ಎಪಿಎಲ್ ಮತ್ತು ಬಿಪಿಎಲ್) ಫಲಾನುಭವಿಗಳಿಗೆ ಅಡಿಕೆ ತೋಟ, ಅರಣ್ಯ ಬೆಳೆಸುವುದು, ಅಡಿಕೆ ಬೇಸಾಯ, ನೀರು ಶೇಖರಣೆಯ ಹೊಂಡ ಮತ್ತು ಗಮ್ಮಿ ಮಾಡಲು ಅವಕಾಶವಿದೆ ಎಂದು ಸರ್ಕಾರವು ಸೂಚಿಸಿರಲೂ ಸಹ ಶಿವಮೊಗ್ಗ ಜಿಲ್ಲಾ ಪಂಚಾಯತಿಯವರು ಸದರಿ ಆದೇಶವನ್ನು ಹಿಂದಕ್ಕೆ ಪಡೆದು ರೈತರು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ತೊಂದರೆ ಉಂಟಾಗಿರುವ ಬಗ್ಗೆ.

- ಶ್ರೀ ಕಿಮ್ಮನೆ ರತ್ನಾಕರ್
- ಶ್ರೀ ಜಗದೀಶ್ ಶೆಟ್ಟರ್
  (ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಸಚಿವರು)
- ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್

9. ಅನುಬಂಧ – **II, III, IV :** **1005-1793**

* * * * *

ಕರ್ನಾಟಕ ವಿಧಾನಸಭೆ

ಮಂಗಳವಾರ 9ನೇ ಮಾರ್ಚ್ 2010ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಂಡಿತ್ತು.
ಅಧ್ಯಕ್ಷರು ಶ್ರೀ ಕೆ.ಜಿ.ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

ಬೀದರ್ ನಗರ ಸಭೆಯಿಂದ 900 ಮನೆಗಳ ಹಂಚಿಕೆ

19 (431) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರಸಭೆ ವತಿಯಿಂದ ಜಮೀನ್ ಸ್ತಾಪುರ್ ಹತ್ತಿರದ ಸಂಕೀರ್ಣದಲ್ಲಿರುವ 900 ಮನೆಗಳನ್ನು ಹಂಚಿಕೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಮನೆಗಳನ್ನು ಯಾರು ಯಾರಿಗೆ ಹಂಚಿಕೆ ಮಾಡಲಾಗಿದೆ; ವಿವರಗಳನ್ನು ನೀಡುವುದು;

ಇ) ಈ ಮನೆಗಳನ್ನು ನೀಡಲು ಸರ್ಕಾರ ಅನುಸರಿಸಿರುವ ಮಾನದಂಡನೆಗಳೇನು; ಪ್ರತಿಯನ್ನು ನೀಡುವುದು;

ಈ) ಈ ಮನೆಗಳಿಗೆ ಸರ್ಕಾರ ನಿಗದಿಪಡಿಸಿರುವ ಮೊತ್ತ ಎಷ್ಟು;

ಉ) ಈ ಸಂಕೀರ್ಣವು ಈಗ ಯಾವ ಸ್ಥಿತಿಯಲ್ಲಿದೆ;

ಊ) ಬೀದರ್ ನಗರಸಭೆಯವರು ಸಂಕೀರ್ಣದಲ್ಲಿರುವವರಿಂದ ಹೆಚ್ಚಿಗೆ ಹಣವನ್ನು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು (ವಿವರಗಳನ್ನು ನೀಡುವುದು)?

ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಇಲ್ಲ, 892 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಆ)

ಪ.ಜಾತಿ	ಪ.ಪಂ	ಇತರೆ	ಒಟ್ಟು
316	32	544	**892**

ಇ) ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮರವರ ಪತ್ರ ಸಂಖ್ಯೆ: 01/ಜಿ ಇಎನ್/11/2002, ದಿನಾಂಕ: 09/07/2003ರ ಪ್ರಕಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಂಚಿಕೆ ಮಾಡಲಾಗಿದೆ. ಪ್ರತಿ ಲಗತ್ತಿಸಿದೆ.

ಈ) ಪ್ರತಿ ಮನೆಗಳಿಗೆ ರೂ.25,000=00 ದಂತೆ ಸಾಲದ ರೂಪದಲ್ಲಿ ನಿಗಧಿಪಡಿಸಿದೆ.

ಉ) ಉತ್ತಮ ಸ್ಥಿತಿಯಲ್ಲಿದೆ.

ಊ) ಬಂದಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 GEN 11 2002/ 9810 **09.07.2003**

(ಕನ್ನಡ ಅವತರಣಿಕೆ)

ಪ್ರಾಮುಖ್ಯ

ಎಲ್ಲಾ ಜಿಲ್ಲಾಧಿಕಾರಿಗಳಿಗೆ

ಪ್ರಿಯ ಜಿಲ್ಲಾಧಿಕಾರಿಗಳೇ,

ವಿಷಯ : ಆಶ್ರಯ ಮತ್ತು ಅಂಬೇಡ್ಕರ್ ವಸತಿ ಕಾರ್ಯಕ್ರಮಗಳು – ವಾಸವಿಲ್ಲದೇ ಇರುವ ಮನೆಗಳು ಮಂಜೂರಾದ ಫಲಾನುಭವಿಗಳ ಬದಲಿಗೆ ಬೇರೆ ಜನರು ಮನೆಗಳಲ್ಲಿ ವಾಸವಾಗಿರುವುದು ಪರಿಗಣಿಸಬೇಕಾದ ಅಂಶಗಳು – ಮಾರ್ಗಸೂಚಿಗಳು :

ಮೇಲಿನ ಅಂಶಗಳ ಬಗ್ಗೆ ಹಲವು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇಂತಹ ಸಂದರ್ಭಗಳಲ್ಲಿ ಅನುಸರಿಸ ಬೇಕಾದ ನಿಯಮಾವಳಿಗಳ ಬಗ್ಗೆ ಮಾರ್ಗಸೂಚಿಗಳನ್ನು ನೀಡಬೇಕೆಂದು ಕೋರಿದ್ದಾರೆ. ಅದಕ್ಕಾಗಿ ಈ ಮಾರ್ಗಸೂಚಿಗಳನ್ನು ನೀಡಲಾಗಿದೆ.

ನಾವೆಲ್ಲರೂ ಒಪ್ಪುವ ಅಂಶವೆಂದರೆ ವಾಸಕ್ಕಾಗಿ ನಿರ್ಮಿಸಿದ ಮನೆಗಳಲ್ಲಿ ಫಲಾನುಭವಿಗಳು ವಾಸವಿಲ್ಲದೇ ಇದ್ದಲ್ಲಿ, ಮನೆಗಳ ನಿರ್ಮಾಣದ ಉದ್ದೇಶ ಸಫಲವಾದಂತೆ ಆಗುವುದಿಲ್ಲ. ಅಲ್ಲದೆ ಮಂಜೂರಾದ ಫಲಾನುಭವಿಗಳು ಅಂತಹ ಮನೆಗಳನ್ನು ಇತರರಿಗೆ ಬಾಡಿಗೆಗೆ ಕೊಟ್ಟಲ್ಲಿ ಅಂತಹವರಿಗೆ ಮನೆಯ ಅವಶ್ಯಕತೆ ಇಲ್ಲವೆಂದು ಗೊತ್ತಾಗುತ್ತದೆ ಹಾಗೂ ಇದರಿಂದ ಯೋಜನೆಯ ನಿಯಮಾವಳಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ.

ವಿಷಯದಲ್ಲಿ ಸೂಚಿಸಿರುವ ಅಂಶಗಳು ಎರಡು ಬೇರೆ ಬೇರೆ ಸಂದರ್ಭಗಳಲ್ಲಿ ಉದ್ಭವಿಸಬಹುದು – ಮೊದಲನೆಯದಾಗಿ ಮನೆ ನಿರ್ಮಾಣ ಮಾಡುವ ನಿವೇಶನ ಫಲಾನುಭವಿಯ ಸ್ವಂತದಾಗಿದ್ದು ಯಾವುದೇ ಸರ್ಕಾರಿ ಸಹಾಯ ಇಲ್ಲದೇ ನಿವೇಶನ ಪಡೆದುಕೊಂಡಿರುವುದು ಮತ್ತು ಎರಡನೆ ಯದಾಗಿ ಫಲಾನುಭವಿಗಳಿಗೆ ಆಶ್ರಯ ನಿವೇಶನ ಯೋಜನೆ ಅಥವಾ ಇನ್ಯಾವುದೇ ಸರ್ಕಾರಿ ಯೋಜನೆಯಡಿಯಲ್ಲಿ ನಿವೇಶನಗಳನ್ನು ಒದಗಿಸಿ ರುವುದು. ಈ ಎರಡೂ ಬಗೆಯ ಸಂದರ್ಭಗಳಲ್ಲಿ ಬೇರೆ ಬೇರೆಯಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ.

ವಾಸವಿಲ್ಲದೇ ಇರುವ ಖಾಲಿ ಮನೆ

ದಿಕ್ಸೂಚಿಗಳು – ಪರಿಗಣಿಸಬೇಕಾದ ಅಂಶಗಳು

1. ಮನೆಯಲ್ಲಿ ವಾಸಿಸದೇ ಹಾಗೇ ಬಿಟ್ಟು ಬಿಟ್ಟಿರುವುದು.
2. ಮನೆಗೆ ಬೀಗ ಹಾಕಿರುವುದು, ನಿರಂತರವಾಗಿ ವಾಸಿಸದೇ ಇರುವುದು, ಮನೆಯಲ್ಲಿ ಅಡಿಗೆ ಮಾಡುವ ಸೂಚನೆಗಳು ಇಲ್ಲದೇ ಇರುವುದು, ಸಾಲ ಮರುಪಾವತಿ ಮಾಡದೆ ಇರುವುದು.

ನಗರ ಸ್ಥಳೀಯ ಸಂಸ್ಥೆಗಳ (ಮಹಾನಗರ ಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿ ಸೇರಿದಂತೆ) ವತಿಯಿಂದ ಈ ಕೆಳಕಂಡ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

1. ಫಲಾನುಭವಿಯು ಸರ್ಕಾರಿ ಸಹಾಯ ಇಲ್ಲದೆ ಸ್ವಂತವಾಗಿ ನಿವೇಶನಗಳನ್ನು ಪಡೆದಿರುವ ಸಂದರ್ಭಗಳಲ್ಲಿ: ಇಂತಹ ಪರಿಸ್ಥಿತಿಯಲ್ಲಿ ಮನೆ ನಿರ್ಮಾಣಕ್ಕೆ ಫಲಾನುಭವಿಗೆ ನೀಡಲಾಗಿರುವ ಸಾಲ ಮತ್ತು ಸಹಾಯಧನ ಎರಡನ್ನೂ ಹಿಂದಕ್ಕೆ ಪಡೆಯುವ ಸಲುವಾಗಿ ನೋಟಿಸ್ ಜಾರಿ ಮಾಡುವುದು, ಹಾಗು ಬಾಕಿ ಇರುವ ಒಟ್ಟು ಮೊತ್ತವನ್ನು 5 ಕಂತುಗಳಿಗೆ ಮೀರದಂತೆ 11% ರ ಬಡ್ಡಿ ಸಮೇತ ಬಾಕಿ ಮೊತ್ತದ ಮರುಪಾವತಿ ಆಗುವವರೆಗೆ ವಸೂಲಿ ಮಾಡುವುದು. ಒಂದು ವೇಳೆ ಫಲಾನುಭವಿಯು ಮೇಲೆ ಸೂಚಿಸಿರುವ ಮೊತ್ತವನ್ನು ನಿಗದಿತ ಸಮಯದಲ್ಲಿ ಪಾವತಿ ಮಾಡದೆ ಹೋದಲ್ಲಿ ಅಂತಹವರಿಂದ ಬರಬೇಕಾದ ಸಾಲವನ್ನು ಭೂ ಕಂದಾಯ ಬಾಕಿ ಎಂದು ವಸೂಲು ಮಾಡಲು ತಪ್ಪದೆ ಕ್ರಮ ಜರುಗಿಸುವುದು.
2. ಫಲಾನುಭವಿಗೆ ಸರ್ಕಾರಿ ಯೋಜನೆಗಳ ಅನ್ವಯ ನಿವೇಶನ ಮಂಜೂರಾಗಿರುವ ಸಂದರ್ಭಗಳಲ್ಲಿ: ಈ ಕೆಳಕಂಡ ಕ್ರಮವನ್ನು ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಲು ಸೂಚಿಸಿದೆ.
   1. ಜಿಲ್ಲಾಧಿಕಾರಿಗಳ ಸಾಮಾನ್ಯ ಅಥವಾ ವಿಶೇಷ ಅನುಮತಿ ಪಡೆದು ನಗರ ಸ್ಥಳೀಯ ಸಂಸ್ಥೆಗಳು ಅಂತಹ ಮನೆ ಮಂಜೂರಾತಿ ರದ್ದು ಪಡಿಸುವುದು ಮತ್ತು ಫಲಾನುಭವಿಯು ಈಗಾಗಲೇ ಕೊಟ್ಟಿರುವ ವಂತಿಗೆಯನ್ನು ಮುಟ್ಟುಗೋಲು ಹಾಕಿ ಕೊಳ್ಳುವುದು.
   2. ಜಿಲ್ಲಾಧಿಕಾರಿಗಳ ಅನುಮತಿ ಪಡೆದು ನಗರ ಸ್ಥಳೀಯ ಸಂಸ್ಥೆಗಳು ಆಶ್ರಯ ಯೋಜನೆ ಅನ್ವಯ ಅರ್ಹರಾಗಿರುವ ಇತರೆ ಯಾವುದೇ ಫಲಾನುಭವಿಗಳಿಗೆ ಹೊಸದಾಗಿ ಮಂಜೂರಾತಿ ಮಾಡುವುದು – ಇಂತಹ ಪ್ರಕರಣಗಳಲ್ಲಿ ದಾಖಲೀಕರಣವನ್ನು ತಕ್ಷಣ ಪೂರ್ಣಗೊಳಿಸಬೇಕು ಮತ್ತು ಎಲ್ಲಾ ಫಲಾನುಭವಿಗಳಿಂದ 3

ಸಾಲದ ಕಂತುಗಳನ್ನು ಮುಂಗಡವಾಗಿ ಹಾಗೂ ಫಲಾನುಭವಿಯ ಸ್ವಸಹಾಯ ವಂತಿಗೆಯಾಗಿ ರೂ. 5000/- ಗಳನ್ನು ಅನ್ವಯವಾಗುವ ಎಲ್ಲಾ ಫಲಾನು ಭವಿಗಳಿಂದ ಮನೆ ಮಂಜೂರು ಮಾಡುವ ಸಮಯದಲ್ಲಿ ಪಡೆಯತಕ್ಕದ್ದು ಅಲ್ಲದೆ ಸಾಲದ ಮೊತ್ತವನ್ನು ನಿಯಮಾನುಸಾರ 180 ಮಾಸಿಕ ಸಮ ಕಂತುಗಳಲ್ಲಿ ವಸೂಲಿ ಮಾಡಬೇಕಾಗುತ್ತದೆ.

ಮನೆಯನ್ನು ಇತರರಿಗೆ ಪರಭಾರೆ ಮಾಡುವುದು:

ದಿಕ್ಸೂಚಿಗಳು : ಪರಿಗಣಿಸಬೇಕಾದ ಅಂಶಗಳು

ಯಾವುದೇ ಫಲಾನುಭವಿಗೆ ಮಂಜೂರಾಗಿರುವ ಮನೆಯಲ್ಲಿ ಫಲಾನುಭವಿಗಳ ತಕ್ಷಣದ ಕುಟುಂಬದ ಸದಸ್ಯರಲ್ಲದೆ ಬೇರೆ ಜನ ವಾಸವಾಗಿರುವುದು (ತಕ್ಷಣದ ಕುಟುಂಬದ ಸದಸ್ಯರೆಂದರೆ ಫಲಾನುಭವಿಯ ತಂದೆ ತಾಯಿಗಳು, ಹೆಂಡತಿ ಮಕ್ಕಳು, ಅಕ್ಕ ತಂಗಿಯರು ಮಾತ್ರ)

ಇಂತಹ ಪ್ರಕರಣಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ತೆಗೆದುಕೊಳ್ಳಬೇಕಾದ ಕ್ರಮ ಈ ಕೆಳಗಿನಂತೆ ಇರತಕ್ಕದ್ದು.

1. ತಪ್ಪಿತಸ್ಥ ಫಲಾನುಭವಿಯಿಂದ ಈಗಾಗಲೇ ಸಂದಾಯವಾಗಿರುವ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು.
2. ಅಂತಹ ಮನೆಯಲ್ಲಿ ವಾಸವಾಗಿರುವ ಬಾಡಿಗೆದಾರರಿಂದ ಕೊಡಲಾಗುತ್ತಿರುವ ಬಾಡಿಗೆಯನ್ನು ಜಪ್ತಿ ಮಾಡಿಕೊಳ್ಳುವುದು ಹಾಗೂ ಬಾಡಿಗೆಯನ್ನು ನೇರವಾಗಿ ನಗರ ಸ್ಥಳೀಯ ಸಂಸ್ಥೆಗಳ ಕಛೇರಿಗೆ ಕಟ್ಟುವಂತೆ ಕ್ರಮ ತೆಗೆದುಕೊಳ್ಳುವುದು ಮತ್ತು ವಸೂಲಾದ ಮೊತ್ತಕ್ಕೆ ಸೂಕ್ತ ರಸೀದಿಯನ್ನು ನೀಡುವುದು. ಈ ರೀತಿ ವಸೂಲಾದ ಮೊತ್ತವನ್ನು ಆಶ್ರಯ ಸಾಲ ವಸೂಲಾತಿ ಲೆಕ್ಕ ಶೀರ್ಷಿಕೆಗೆ – (6216–02–800–1–11) ಕಟ್ಟುವುದು.

3. ಜಿಲ್ಲಾಧಿಕಾರಿಗಳು ಸಾಮಾನ್ಯ ಅಥವಾ ನಿರ್ದಿಷ್ಟ ಆದೇಶದ ಮೇರೆಗೆ ನಗರ ಸ್ಥಳೀಯ ಸಂಸ್ಥೆಗಳು ಮನೆಯ ಮಂಜೂರಾತಿಯನ್ನು ರದ್ದುಗೊಳಿಸಿ ಫಲಾನುಭವಿಗಳು ಈಗಾಗಲೇ ಕಟ್ಟಿರುವ ಸಾಲ ಅಥವಾ ವಂತಿಗೆಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.
4. ನಗರ ಸ್ಥಳೀಯ ಸಂಸ್ಥೆಗಳು, ಫಲಾನುಭವಿಯು ಪಡೆದ ನಿವೇಶನ;
   i. ಸರ್ಕಾರಿ ಸಹಾಯ ಪಡೆಯದೇ ಹೊಂದಿದ್ದಲ್ಲಿ ಫಲಾನುಭವಿಯಿಂದ ಒಟ್ಟು ಬಾಕಿ ಇರುವ ಸಾಲ ಮತ್ತು ಸಹಾಯ ಧನವನ್ನು 11% ಬಡ್ಡಿಯೊಂದಿಗೆ ಗರಿಷ್ಠ 5 ಕಂತುಗಳಲ್ಲಿ ವಸೂಲಿ ಮಾಡಬೇಕು ಹಾಗೂ ಇದು ಸಾಧ್ಯವಿಲ್ಲದೇ ಇದ್ದಲ್ಲಿ ಬಾಕಿ ಇರುವ ಸಂಪೂರ್ಣ ಮೊತ್ತವನ್ನು ಭೂ ಕಂದಾಯವೆಂದು ವಸೂಲು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.
   ii. ಸರ್ಕಾರದ ಸಹಾಯದೊಂದಿಗೆ ಪಡೆದಿದ್ದಲ್ಲಿ ಜಿಲ್ಲಾಧಿಕಾರಿಗಳ ಸಾಮಾನ್ಯ ಅಥವಾ ನಿರ್ದಿಷ್ಟ ಅನುಮತಿ ಮೇರೆಗೆ ಅಂತಹ ಮನೆಯನ್ನು ಇತರ ಅರ್ಹ ಫಲಾನುಭವಿಗೆ ಈ ಕೆಳಗಿನಂತೆ ವಿತರಿಸುವುದು:
      a) ಮನೆಯಲ್ಲಿ ವಾಸವಾಗಿರುವ ಬಾಡಿಗೆದಾರರಿಗೆ – ಫಲಾನುಭವಿಯು ಅರ್ಹರಾಗಿದ್ದಲ್ಲಿ ಮನೆಗಳಲ್ಲಿ ವಾಸವಾಗಿರುವ ಬಾಡಿಗೆದಾರರಿಗೆ ವಿತರಿಸಬಹುದು. ದಾಖಲೀಕರಣವನ್ನು ಪೂರ್ಣಗೊಳಿಸಿ ಅಂತಹವರಿಂದ 3 ತಿಂಗಳ ಸಾಲದ ಕಂತುಗಳನ್ನು ಹಾಗೂ ಅನ್ವಯವಾಗುವುದಾದಲ್ಲಿ ಫಲಾನುಭವಿಗಳ ಸ್ವಸಹಾಯ ವಂತಿಗೆ ರೂ. 5000/– ಗಳನ್ನು ತಪ್ಪದೆ ಮನೆ ವಿತರಿಸುವುದಕ್ಕಾಗಿ ಪಡೆದುಕೊಳ್ಳುವುದು ಹಾಗೂ ಉಳಿದ ಮಾಸಿಕ ಕಂತುಗಳನ್ನು ನಿಯಮಾನುಸಾರ ಮುಂದಿನ ತಿಂಗಳುಗಳಲ್ಲಿ ವಸೂಲಿ ಮಾಡುವುದು:

b) ಒಂದು ವೇಳೆ ಮನೆಗಳಲ್ಲಿ ವಾಸವಾಗಿರುವ ಬಾಡಿಗೆದಾರರು ನಿಯಮಾನುಸಾರ ಅರ್ಹ ಫಲಾನುಭವಿಗಳು ಆಗದೇ ಇರುವ ಸಂದರ್ಭದಲ್ಲಿ ಸಹ ಆ ಮನೆಗೆ ನೀಡಲಾಗಿರುವ ಸಾಲ ಮತ್ತು ಸಹಾಯ ಧನವನ್ನು 11% ರ ಬಡ್ಡಿಯೊಂದಿಗೆ ಹಾಗೂ ನಿವೇಶನಕ್ಕೆ ಸಂಬಂಧಿಸಿದಂತೆ ಮೊತ್ತವನ್ನು (ಮಹಾನಗರ ವ್ಯಾಪ್ತಿಯಲ್ಲಾದರೆ ರೂ.15000/–ಗಳನ್ನು, ನಗರಸಭೆ ವ್ಯಾಪ್ತಿಯಲ್ಲಾದರೆ ರೂ. 10000/– ಗಳನ್ನು, ಪುರಸಭೆ ವ್ಯಾಪ್ತಿಯಲ್ಲಾದರೆ ರೂ. 5000/–ಗಳನ್ನು ಮತ್ತು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಾದರೆ ರೂ.2500/–ಗಳನ್ನು) ಪಾವತಿ ಮಾಡಿದಲ್ಲಿ ಅವರಿಗೆ ವಿತರಿಸಬಹುದು. ಬಡ್ಡಿ ತರಬೇಕಾದ ಅವಧಿಯನ್ನು ಗೊತ್ತುಪಡಿಸುವುದು ಹೇಗೆಂದರೆ ಯಾವ ಶ್ರೇಣಿಯಿಂದ ಮನೆ ಕಟ್ಟಲಾಗಿದೆ ಎಂಬುದು ಆಧಾರವಾಗಿರುತ್ತದೆ. (ಉದಾಹರಣೆಗೆ – 1997–98 ನೇ ಶ್ರೇಣಿ ಮನೆ ಆಗಿದ್ದಲ್ಲಿ ಬಡ್ಡಿಯು 1.4.1998 ರಿಂದ ಕಟ್ಟತಕ್ಕದ್ದು.) ಈ ವ್ಯವಸ್ಥೆಗೆ ಬಾಡಿಗೆದಾರರು ಒಪ್ಪದೆ ಇದ್ದಲ್ಲಿ ಅಂತಹವರಿಗೆ 3 ತಿಂಗಳ ನೋಟೀಸ್ ಜಾರಿ ಮಾಡಿ ಅವರನ್ನು ಮನೆಯಿಂದ ಹೊರಗೆ ಹಾಕುವುದು ಹಾಗೂ ಈ ಅವಧಿಯಲ್ಲಿಯೂ ಸಹ ಬಾಡಿಗೆಯನ್ನು ತಪ್ಪದೆ ವಸೂಲಿ ಮಾಡಬೇಕು.

c) ಮತ್ತೆ ಯಾವುದೇ ಅರ್ಹ ಫಲಾನುಭವಿಯು ಇದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮಂಜೂರು ಮಾಡಿ ವಿತರಿಸಬಹುದು.

d) ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳು ಯಾವುದೇ ಸಾರ್ವಜನಿಕ ಸೌಲಭ್ಯ ಒದಗಿಸುವುದಕ್ಕಾಗಿ ಅಂತಹ ಮನೆಗಳನ್ನು ಉಪಯೋಗಿಸಿಕೊಳ್ಳಲು ಬಯಸಿದಲ್ಲಿ ಹಾಗೆ ಮಾಡಬಹುದು. ಆದರೆ ಪ್ರತಿ ತಿಂಗಳು

ಸಾಲದ ಕಂತುಗಳನ್ನು ತುಂಬಬೇಕು ಹಾಗೂ ಆ ಮನೆಗೆ ನೀಡಲಾಗಿರುವ ಸಹಾಯಧನ ಹಾಗೂ ಅದಕ್ಕೆ ಸಂಬಂಧಿಸಿದ ಬಡ್ಡಿಯನ್ನು ಒಂದೇ ಕಂತಿನಲ್ಲಿ ತುಂಬಬೇಕು.

ಮೇಲಿನ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಸರಿಸುವುದು ಮತ್ತು ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಈ ಸಂಬಂಧವಾಗಿ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎನ್. ಶಿವಸ್ಯೆಲಂ)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು ಎಲ್ಲಾ ನಗರಸಭೆಗಳ ಆಯುಕ್ತರು / ಪುರಸಭೆ / ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

(11-00 AM)

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ, ಬೀದರ್‌ನಲ್ಲಿ ಈ ಲೇಔಟ್‌ನಲ್ಲಿ 2002ರಲ್ಲಿ 892 ಮನೆಗಳನ್ನು ಹಂಚಿದ್ದಾರೆ. ಈಗ ಅಲ್ಲಿ ಸುಮಾರು 400–500 ಜನ ವಾಸ ಮಾಡುತ್ತಿದ್ದಾರೆ. ಆ ಮನೆಗಳನ್ನು ಮುನ್ಸಿಪಾಲಿಟಿ ಕಡೆಯಿಂದ ಆಶ್ರಯ ಯೋಜನೆಯಲ್ಲಿ ಕೊಡಲಾಗಿದೆ. ಮೊನ್ನೆ ಮಾನ್ಯ ಸಚಿವರು ಬಂದಾಗ ಅವರ ಗಮನಕ್ಕೆ ಕೂಡ ತಂದಿದ್ದೇವೆ. ಅಲ್ಲಿರುವವರು ಕೂಲಿ ಕೆಲಸ ಮಾಡುವಂತಹ ಕಡು ಬಡವರು. ಆಶ್ರಯ ಮನೆ ಕೊಡುವಾಗ initial deposit ಕೂಡ ತೆಗೆದುಕೊಂಡಿದ್ದಾರೆ. ಆದರೆ ಈಗ ಏನಾಗಿದೆ ಎಂದರೆ ಇವರಿಗೆ ಜ್ಞಾನೋದಯವಾಗಿ ಅಸಲು 26,000 ರಿಂದ 27,000 ಮತ್ತು ಅದಕ್ಕೆ ಬಡ್ಡಿ 10,000 ಒಟ್ಟು ಎಲ್ಲಾ ಸೇರಿ 37,000 ರೂಪಾಯಿಯನ್ನು ಒಂದು ತಿಂಗಳಿನಲ್ಲಿ ಹಣವನ್ನು ಕೊಡಬೇಕೆಂದು ಆ

ಲೇಔಟ್‌ನಲ್ಲಿರುವವರಿಗೆ ನೋಟಿಸ್ ಕೊಟ್ಟಿದ್ದಾರೆ. ಇಲ್ಲದಿದ್ದರೆ ನಾವು ಒಂದು ತಿಂಗಳಿನಲ್ಲಿ ಅಲ್ಲಿಂದ ಖಾಲಿ ಮಾಡಿಸಿಬಿಡುತ್ತೇವೆಂದು ಕೊಟ್ಟುಬಿಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಇಡೀ ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮೊನ್ನೆ ಸರ್ಕಾರದವರು ಬಡ್ಡಿ ಮಾಫ್ ಮಾಡಿದ್ದೇವೆಂದು ಹೇಳಿದರು. ಇವತ್ತಿಗೂ ಆಶ್ರಯ ಯೋಜನೆಯಡಿಯಲ್ಲಿ ಗ್ರಾಮೀಣ ಭಾಗದಲ್ಲಿಯಾಗಲಿ, ಪಟ್ಟಣದಲ್ಲಾಗಲಿ ಯಾರೂ ಒಂದು ಕಂತೂ ಕೂಡ ಕಟ್ಟಿಲ್ಲ. ಆದರೆ ಈ ರೀತಿಯಾಗಿ 900 ಮನೆಗಳು ಇರುವಂತಹ ಲೇಔಟ್‌ನಲ್ಲಿ ತಾರತಮ್ಯವಾಗುತ್ತಿದೆ. ಮಾನ್ಯ ಸಚಿವರು ಕರ್ನಾಟಕದಲ್ಲಿ ಬೇರೆಯವರಿಗೆ ಯಾವ ರೀತಿ ಮಾಡಿದ್ದೀರಿ ಅದೇ ರೀತಿ ಮಾಡಿ, ನೀವು ಬೇರೆಯವರಿಂದ ಕಟ್ಟಿಸಿಕೊಂಡರೆ ಇವರಿಂದಲೂ ಕಟ್ಟಿಸಿಕೊಳ್ಳಿ. ತಾವು ಬಂದಮೇಲೆ ತಮಗೆ ಬಹಳಷ್ಟು ಜನ represent ಮಾಡಿದ್ದಾರೆ. ಅದಕ್ಕೆ ಇದರ ಬಗ್ಗೆ ಮಾನ್ಯ ಸಚಿವರ ಕಡೆಯಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೋಳಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ 1997–98ನೇ ಸಾಲಿನಲ್ಲಿ ಸುಮಾರು 23 ಎಕರೆ ಜಮೀನಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಈ ನಿವೇಶನಗಳನ್ನು ಹಂಚಿಕೆ ಮಾಡಿದರು. 2000ನೇ ಇಸವಿಯಲ್ಲಿ ಈ ಮನೆಗಳನ್ನು ನಿರ್ಮಾಣ ಮಾಡಿ 892 ಮನೆಗಳನ್ನು ಅಲಾಟ್ ಮಾಡಿದರು. ಆದರೆ ಅಂದು ಆ ಮನೆಗಳಿಗೆ 180 ಕಂತು ಮಾಡಿ ಪ್ರತಿ ಕಂತು 290 ರೂಪಾಯಿ ಕಟ್ಟಬೇಕೆಂದು ಅವರಿಗೆ direction ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಅವರು ಒಂದು ಕಂತನ್ನು ಕಟ್ಟಿಲ್ಲ. ಈ ಮನೆಗಳಿಗೆ ಹೌಸಿಂಗ್ ಇಲಾಖೆಯಿಂದ ಲೋನ್ ಮಾಡಿ ಕೊಟ್ಟಿದ್ದು, ಈ ನಗರಸಭೆ ನೇರವಾಗಿ ಪೌರಾಡಳಿತ ಇಲಾಖೆ ವ್ಯಾಪ್ತಿಗೆ ಬರುವುದಿದ್ದರೂ ಕೂಡ ಇದಕ್ಕೆ ಲೋನ್ ಹೌಸಿಂಗ್ ಇಲಾಖೆ ಮುಖಾಂತರ ಮಾಡಿರುವುದು. ನಾನು ತಮಗೆ ಒಂದು ಸಲಹೆ ಕೊಡುತ್ತೇನೆ. ಇವತ್ತಿನಿಂದಾದರೂ ಅವರು ಕಮತು ಕಟ್ಟುವುದಕ್ಕೆ ಪ್ರಾರಂಭ ಮಾಡಿದರೆ ಅಸಲಿಗೆ ಬಡ್ಡಿ ರೂ.10,000 ಹಾಕಿದ್ದಾರೆಂದು ಏನು ಹೇಳಿದ್ದೀರಿ, ಅಲ್ಲಿ ಬಡವರು ಇರುವುದರಿಂದ ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಿ, ಬಡ್ಡಿಯನ್ನು waive ಮಾಡುವುದಕ್ಕೆ ಹೌಸಿಂಗ್ ಇಲಾಖೆ ಜೊತೆ ಚರ್ಚೆ ಮಾಡುತ್ತೇನೆ. ಆದುದರಿಂದ ಅವರು ಇವತ್ತಿನಿಂದ ಕಂತು ಕಟ್ಟುವುದಕ್ಕೆ

ಪ್ರಾರಂಭ ಮಾಡಿದರೆ ಅವರಿಗೂ ಒಳ್ಳೆಯದಾಗುತ್ತದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಒಬ್ಬರಾದರೂ ಕಂಡು ಕಟ್ಟಿದ್ದಾರ? ಇದರಲ್ಲಿ ಕಾನೂನು ಪ್ರಕಾರ ಲೋನ್ ಮಾಡಿ ಕೊಟ್ಟಿರುವುದು. ಇಡೀ ರಾಜ್ಯದಲ್ಲಿ ಒಬ್ಬರೂ ಒಂದು ರೂಪಾಯಿ ಕಟ್ಟದಿರುವಾಗ, ಈ ಒಂದು ಲೇಔಟ್‌ಗೆ ಕಂತು ಕಟ್ಟು ಎಂದರೆ ಎಲ್ಲಿ ಕಟ್ಟುವುದಕ್ಕಾಗುತ್ತದೆ? ಅದಕ್ಕಾಗಿ ವಿಶೇಷವಾಗಿ ಇದರ ವಿಚಾರದಲ್ಲಿ ಮಾಡಿರುವಂತಹ ಆದೇಶವನ್ನು ವಾಪಸ್ಸು ತೆಗೆದುಕೊಂಡು, ಇನ್ನು ಮುಂದಿನ ದಿನಗಳಲ್ಲಿ ಬೇರೆಯವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಾಗ ಯಾವ ರೀತಿಯ ನಿಯಮ ಅನ್ವಯಿಸುತ್ತದೆ ಇದಕ್ಕೂ ಅದೇ ನಿಯಮ ಅನ್ವಯಿಸುವ ನಿಟ್ಟಿನಲ್ಲಿ ಮಾಡಬೇಕು.

ಇಡೀ ರಾಜ್ಯದಲ್ಲಿ ಆಶ್ರಯ ಯೋಜನೆಗಳಡಿಯಲ್ಲಿ ಕಟ್ಟಿಸಿರುವ ಮನೆಗಳಿಗೆ ಆಶ್ರಯ ಕಮಿಟಿ ಮೂಲಕ ಎಲ್ಲಾ ಲೋನ್ ಕೊಟ್ಟಿರುವುದು. ಅದ್ಯಾವುದು ಉಚಿತ ಅಲ್ಲ. ಅಲ್ಲಿ ಕೊಟ್ಟಿರುವಂತಹ ಮನೆಗಳಿಗೆ ಮೂಲಭೂತ ಸೌಕರ್ಯವಿಲ್ಲ, ನಾನು ಎಷ್ಟೋ ಸಲ ಹೋಗಿದ್ದೇನೆ. ಅಲ್ಲಿನ ಸಿ.ಎಂ.ಸಿ.ಯವರು ಇದು ಗ್ರಾಮೀಣ ಭಾಗಕ್ಕೆ ಬರುತ್ತದೆ, ನಾವು ಅವರಿಗೆ ಹ್ಯಾಂಡ್ ಓವರ್ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಇವರು ನಮಗೆ ದುಡ್ಡು ಕೊಡಿ ಎಂದು ಕೇಳುತ್ತಾರೆ. ಮಾನ್ಯ ಸಚಿವರು ಬಡವರ ವಿಚಾರದಲ್ಲಿ ಬಹಳಷ್ಟು ಕಾಳಜಿ ವಹಿಸುತ್ತಾರೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅವರಪ್ಪ : ಇಲ್ಲಿ ಒಂದು ಕಡೆ ಮಾತ್ರ ವಸೂಲು ಮಾಡುತ್ತಿದ್ದಾರೆ. ಬೇರೆ ಯಾವ ಊರಿನಲ್ಲಿ ವಸೂಲು ಮಾಡುತ್ತಿದ್ದಾರೆ?

ಶ್ರೀ ಬಂಡೆಪ್ಪ ಕಾಶೆಂಪೂರ್ : ಬೇರೆ ಎಲ್ಲಿಯೂ ಇಲ್ಲ. ಇಲ್ಲಿ ಏನು ವಸೂಲು ಮಾಡುತ್ತಿದ್ದೀರಿ ಅದನ್ನು ಪೂರ್ತಿ ಕೈಬಿಟ್ಟು, ಇಡಿ ರಾಜ್ಯದಲ್ಲಿ ಯಾವಾಗ ವಸೂಲು ಮಾಡಬೇಕೆಂದು ಹೇಳುತ್ತಾರೋ ಆಗ ವಸೂಲು ಮಾಡಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : 11% ಬಡ್ಡಿ ಹಾಕುತ್ತಿದ್ದಾರೆ. ಅವರಿಗೆ ಕಂತು ಕಟ್ಟುವುದಕ್ಕೆ ಆಗುತ್ತಿಲ್ಲ, ಇನ್ನು ಬಡ್ಡಿ ಎಲ್ಲಿಂದ ಕಟ್ಟುತ್ತಾರೆ?

ಶ್ರೀ ಬಾಲಚಂದ್ರ ಜಾರಕಿಹೊಳಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಮನೆಗಳಿಗೆ ಸಂಬಂಧಪಟ್ಟಂತೆ ಸಾಲ ಮನ್ನಾ ಮಾಡಬೇಕೆಂದು

ಹೇಳಿದರು. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ನಮ್ಮ ಅನೇಕ ಇಲಾಖೆಗಳು ಬೇರೆ ಬೇರೆ ಬ್ಯಾಂಕುಗಳಾದ ವರ್ಲ್ಡ್ ಬ್ಯಾಂಕ್, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಲೋನ್ ತೆಗೆದುಕೊಳ್ಳುತ್ತೇವೆ. ನಾವು ಆ ರೀತಿ ಸಾಲ ಮಾಡಿಕೊಳ್ಳುತ್ತ ಹೋದರೆ ನಮಗೆ ಲೋನ್ ಹಿಂತಿರುಗಿ ಬರುವುದು ಕಷ್ಟವಾಗುತ್ತದೆ. ಇದೊಂದು ಸ್ಕೀಮ್ ಅಲ್ಲ, ನಾವು ಅನೇಕ ವಿಚಾರಗಳಲ್ಲಿ ಸಾಲ ಎಲ್ಲಾ ಮನ್ನಾ ಮಾಡಿಕೊಳ್ಳುತ್ತಾ ಹೋದರೆ ಬೇರೆ ಬೇರೆ ಸಂಸ್ಥೆಯಿಂದ ಬರುವಂತಹ ಲೋನ್‌ಗಳಿಗೆ ತೊಂದರೆಯಾಗುತ್ತದೆ. ಅದಕ್ಕೆ ತಾವೇನು ಗಂಭೀರವಾದ ವಿಷಯವನ್ನು ಎತ್ತಿದ್ದೀರಿ, ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಜಮಖಂಡಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವಿತರಣೆ ಬಗ್ಗೆ :

20 (115) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವಿತರಣೆ ವ್ಯವಸ್ಥೆ ದೋಷ ಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿತರಣೆಯ ದೋಷ ಸರಿಪಡಿಸಲು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹಣ ಮೀಸಲಿರಿಸಿದೆ?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು. ಜಮಖಂಡಿ ಪಟ್ಟಣದಲ್ಲಿ ಹಾಲೀ ಇರುವ ನೀರು ಸರಬರಾಜು ವಿತರಣಾ ವ್ಯವಸ್ಥೆಯು 1979–80ರಲ್ಲಿ ಅಳವಡಿಸಲಾಗಿದ್ದು ಇದನ್ನು 40000 ಜನಸಂಖ್ಯೆಗೆ ತಲಾ ದಿನಂಪ್ರತಿ 70 ಲೀಟರ್ ನೀರಿನ ಬೇಡಿಕೆಯನ್ನು ಪರಿಗಣಿಸಿ ವಿನ್ಯಾಸಗೊಳಿಸಲಾಗಿತ್ತು. ಈ ವಿತರಣಾ ಜಾಲದಲ್ಲಿ ಅಳವಡಿಸಿರುವ ಸಿ.ಐ., (CI) ಹಾಗೂ ಪಿ.ವಿ.ಸಿ., (PVC) ಕೊಳವೆಗಳು 30

ವರ್ಷ ಹಳೆಯದಾಗಿರುವುದರಿಂದ ಶಿಥಿಲಗೊಂಡಿರುತ್ತವೆ ಹಾಗೂ ನೀರಿನ ಸೋರಿಕೆ ಉಂಟಾಗುತ್ತಿದೆ. ಬೆಳೆಯುತ್ತಿರುವ ಪಟ್ಟಣದ ಈಗಿನ 70000 ಜನಸಂಖ್ಯೆಗೆ ಅವಶ್ಯವಿರುವ ಹೆಚ್ಚುವರಿ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ.

ಆ) ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿಲ್ಲ.

ಇ) ಜಮಖಂಡಿ ನಗರದ ನೀರು ಸರಬರಾಜು ವಿತರಣಾ ಕೊಳವೆ ಮಾರ್ಗದ ನವೀಕರಣಕ್ಕಾಗಿ (Remodelling) ಈ ಯೋಜನೆಯ ಸರ್ವೆಕ್ಷಣ, ವಿನ್ಯಾಸ ಹಾಗೂ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.1500.00 ಲಕ್ಷಗಳ ವೆಚ್ಚಗಳಾಗಬಹುದೆಂದು, ಮತ್ತು ಯೋಜನೆಯ ಅಂದಾಜು ಮೊತ್ತದ ಮೂರನೇ ಒಂದು ಭಾಗದಷ್ಟು ಮೊತ್ತವನ್ನು 2010-11ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಅನುವು ಮಾಡಲಾಗುವುದು.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೇ, ಜಮಖಂಡಿ ನಗರದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಹಿಪ್ಪರಗಿ ಮತ್ತು ಕೃಷ್ಣ ನದಿಯಿಂದ ಕುಡಿಯುವ ನೀರಿನ ಯೋಜನೆ ಒಂದು ವರ್ಷದಿಂದ ಚೆನ್ನಾಗಿ ಕೆಲಸ ಮಾಡುತ್ತಿತ್ತು, ಸಾಕಷ್ಟು ನೀರು ಬರುತ್ತಿತ್ತು. ಆದರೆ ಅಲ್ಲಿಂದ ಬರುತ್ತಿದ್ದಂತಹ ನೀರನ್ನು ನಗರದ ತುಂಬಾ ವಿತರಣೆ ಮಾಡುವಂತಹ ವ್ಯವಸ್ಥೆ ಸರಿಯಾಗಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ 1928ನೇ ಇಸವಿಯಲ್ಲಿ ಜಮಖಂಡಿಯಲ್ಲಿ ಮೊಟ್ಟಮೊದಲ ಬಾರಿಗೆ ಈ ರೀತಿ ಕುಡಿಯುವ ನೀರಿಗೆ ಯೋಜನೆಯನ್ನು ಮಾಡಿದಂತಹ ನಗರವಾಗಿದೆ. ಆ ವರ್ಷಗಳಲ್ಲಿ ಜನಸಂಖ್ಯೆ ಏನಿತ್ತು ಅದರ ಹತ್ತು ಪಟ್ಟು ಸುಮಾರು 70 ರಿಂದ 80 ಸಾವಿರದಷ್ಟು ಜನಸಂಖ್ಯೆ ಜಾಸ್ತಿಯಾಗಿದೆ. ಈ ಕುಡಿಯುವ ನೀರಿನ ಯೋಜನೆಗೆ ಬಳಸಲಾದಂತಹ CI pipe ಗಳು ಬಹಳ ವರ್ಷಗಳಾಗಿರುವುದರಿಂದ ತುಕ್ಕು ಹಿಡಿದು, ನೀರು ಪೈಪ್ ಒಳಗೆ ಹರಿಯುವುದಕ್ಕೆ ಸ್ಥಳ ಇಲ್ಲದಿರುವ ಕಾರಣ ಅಳತೆ ಕಡಿಮೆಯಾಗಿ ನೀರಿನ ಅವ್ಯವಸ್ಥೆಯಾಗಿದೆ. ಆದುದರಿಂದ ಅದನ್ನು ಸರಿಮಾಡುವ ದೃಷ್ಟಿಯಿಂದ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗುತ್ತದೆ. ಇವತ್ತು ಹತ್ತಾರು ಹಳ್ಳಿಗಳು ಮುಳುಗಡೆಯಾಗಿದ್ದರಿಂದ ಅಲ್ಲಿಂದ ಜನ ಜಮಖಂಡಿಗೆ ಬಂದು ವಸತಿ ಮಾಡಿರುವುದರಿಂದ, ಜನಸಂಖ್ಯೆ ಜಾಸ್ತಿಯಾಗಿದೆ ಮತ್ತು ಹೊಸ ಹೊಸ

ಬಡಾವಣೆಗಳಿಗೂ ನೀರಿನ ವ್ಯವಸ್ಥೆ ಇಲ್ಲ. ಕೃಷ್ಣ ನದಿಯಿಂದ ಬಂದಿರುವಂತಹ ನೀರನ್ನು ಸರಿಯಾಗಿ ವಿತರಣೆ ಮಾಡುವಂತಹ ವ್ಯವಸ್ಥೆಯಾದರೆ ಮಾತ್ರ ಈ ಕುಡಿಯುವ ನೀರಿನ ಸಮಸ್ಯೆಗೆ ನಾವು ಸರಿಯಾಗಿ ಸ್ಪಂದನೆ ಮಾಡಿದ ಹಾಗೆ ಆಗುತ್ತದೆ.

ಆ ದೃಷ್ಟಿಯಿಂದ 1979–80ನೇ ಇಸವಿಯಲ್ಲಿ ನಗರದ ಜನಸಂಖ್ಯೆ 40,000 ಇತ್ತು. ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವಂತೆ 1979–80ರಲ್ಲಿ ಸ್ವಲ್ಪಮಟ್ಟಿಗೆ ಹೊಸ ಪೈಪ್ ಹಾಕುವ ವ್ಯವಸ್ಥೆ ಆಗಿದೆ. ಆದರೆ ಇವತ್ತು ಬೆಳೆದಿರುವ ಜನಸಂಖ್ಯೆಗೆ ನೀರನ್ನು ಸರಿಯಾದ ರೀತಿಯಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇದಕ್ಕೆ ಹೊಸದಾಗಿ ಬೇಕಾಗುವಂಥ ವ್ಯವಸ್ಥೆಯನ್ನು ಮಾಡಿ, ನೀರಿನ ವಿತರಣೆ ಪ್ರತಿ ಬಡಾವಣೆಗಳಿಗೂ ಆಗುವ ಹಾಗೆ ಮಾಡಿ, ಎಲ್ಲಾ ಕಡೆಗಳಿಗೂ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು ಅಂದರೆ ಹೊಸದಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಇದೇ ವರ್ಷದಲ್ಲಿ ಅದಕ್ಕೆ ಬೇಕಾಗುವ ಅನುದಾನವನ್ನು ಇದೇ ವರ್ಷದ ಬಜೆಟ್‌ನಲ್ಲಿಟ್ಟರೆ ನಮ್ಮ ಸಾರ್ವಜನಿಕರ ಸಮಸ್ಯೆಗೆ ಪರಿಹಾರ ಕೊಡುವುದಕ್ಕೆ ಆಗುತ್ತದೆ. ಅದನ್ನು ಇದೇ ವರ್ಷದಲ್ಲಿ ಕೊಡುವುದಕ್ಕೆ ಸಾಧ್ಯ ಆಗುತ್ತದೆಯೇ ಎನ್ನುವ ಮಾತನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದರು. ಅದನ್ನು ಬಹಳ ಸ್ಪಷ್ಟವಾಗಿ ಉತ್ತರದಲ್ಲಿ ತಿಳಿಸಿದ್ದೇವೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ piped water supply ಏನಿದೆ, ಅದು ಇವತ್ತು ಸಮಸ್ಯೆ ಇಲ್ಲದೆಯೇ ಆಗಿದೆ. ಕಳೆದ ವರ್ಷ ಹಿಪ್ಪರಗಿ ಬ್ಯಾರೇಜ್‌ನ 2ನೇ ಹಂತದ ನೀರು ಸರಬರಾಜು ಯೋಜನೆಯನ್ನು 11 ಕೋಟಿ 84 ಲಕ್ಷ ರೂಪಾಯಿಗಳಿಗೆ ನಾವು ಸಂಪೂರ್ಣಗೊಳಿಸಿದ್ದೇವೆ. ಇವತ್ತು ಜಮಖಂಡಿ ನಗರಕ್ಕೆ Bulk Water Supply ಗೆ ಏನು ಸಮಸ್ಯೆ ಇಲ್ಲ. ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ಒಳಗಡೆ distribution network ಏನು ಇದೆ. ಅದು ಬಹಳ ಹಳೆಯದಾಗಿರುವುದರಿಂದ ಅಲ್ಲಿ ಸಮರ್ಪಕವಾಗಿ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲವೆಂಬುದು ನಿಜ. ಅದಕ್ಕೋಸ್ಕರ 2010–2011ನೇ ಸಾಲಿಗೆ ಸುಮಾರು 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಮ್ಮ Urban Water Supply ಮಂಡಳಿ ಅವರು ಯೋಜನೆಯನ್ನು ತಯಾರಿಸುತ್ತಿದ್ದು,

2010–2011ನೇ ಕ್ರಿಯಾ ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ 16 ಪಟ್ಟಣಗಳಿಗೆ 24 x 7 ಎನ್ನುವ scheme ಅಡಿಯಲ್ಲಿ ವಾರದಲ್ಲಿ 7 ದಿವಸಗಳು, ಒಂದು ದಿವಸದಲ್ಲಿ 24 ಗಂಟೆಗಳು ನೀರು ಕೊಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಬಿಜಾಪುರ ನಗರವೂ ಸಹ ಸೇರಿದೆ. ಈ 16 ನಗರಗಳ ಜೊತೆಗೆ ಜಮಖಂಡಿ ನಗರವೂ ಸೇರಿಸುವುದಕ್ಕೆ ಸಾಧ್ಯವೋ, ಹೇಗೆ ಎನ್ನುವ ಮಾತನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಜಮಖಂಡಿ ನಗರದ ಬಗ್ಗೆ ಇರುವ ಕಳಕಳಿ ಮತ್ತು ಆಸಕ್ತಿಯನ್ನು ಒಪ್ಪುತ್ತೇನೆ. ಈಗ 16 ಪಟ್ಟಣಗಳನ್ನು ಮೊದಲನೆಯ ಹಂತವಾಗಿ ತೆಗೆದು ಕೊಳ್ಳುತ್ತಿದ್ದೇವೆ, ಬರುವ ದಿವಸಗಳಲ್ಲಿ ಜಮಖಂಡಿ ನಗರವನ್ನು ಸೇರಿಸುವ ಬಗ್ಗೆ ಪರಿಶೀಲಿಸುತ್ತೇವೆ.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿ

22 (322) ಶ್ರೀ ವಿಶ್ವನಾಥ್, ಎಸ್.ಆರ್ (ಯಲಹಂಕ) : ಮಾನ್ಯ ಗೃಹ ಮತ್ತು ಮುಜರಾಯಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಹಿಂದಿನ ನೇಮಕಾತಿಯಲ್ಲಿ ಸೇವಾ ನಿರತ ಸಿಬ್ಬಂದಿಗಳಲ್ಲಿ ಎಷ್ಟು ಮಂದಿಗೆ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ ಸೇವಾಧಾರದ ಮೇಲೆ ನೇಮಕಾತಿ ಮಾಡಲಾಗಿದೆ?

ಇ) ಇಲಾಖೆಯಲ್ಲಿ ಪದವಿ ವಿದ್ಯಾರ್ಹತೆ ಹೊಂದಿ ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿದ್ದು, ಇವರಿಗೆ ಪ್ರತ್ಯೇಕ ನೇಮಕಾತಿ ಮೂಲಕ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ವಿ.ಎಸ್.ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) :

ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸಿವಿಲ್, ಎಫ್.ಪಿ.ಬಿ. ಮತ್ತು ವೈರ್‌ಲೆಸ್ ವೃಂದಕ್ಕೆ ಸೇರಿದಂತೆ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಖಾಲಿ ಇರುವ ಹುದ್ದೆಗಳ ಸಂಖ್ಯೆ: 702.

ಆ) ಸೇವಾನಿರತ ಅಭ್ಯರ್ಥಿಗಳಿಗೆ ಶೇಕಡಾ 10% ಮೀಸಲಾತಿ ಜಾರಿಗೆ ಬಂದ ದಿನಾಂಕದಿಂದ ಈ ಹಿಂದೆ ನಡೆಸಿದ ನೇಮಕಾತಿಗಳಲ್ಲಿ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಾಗಿ ಸೇವಾನಿರತ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ನೇರ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಸೇವಾನಿರತ ಪಿ.ಎಸ್.ಐ.ಗಳನ್ನು ನೇಮಕಾತಿ ಮಾಡಿದ ಬಗ್ಗೆ ವಿವರಗಳು:–

ವರ್ಷ	ಪಿಎಸ್ಐ (ಸಿವಿಲ್)	ಆರ್‌ಎಸ್ಐ	ಸ್ಪೇ ಆರ್‌ಎಸ್ಐ (ಕೆ.ಎಸ್. ಆರ್.ಪಿ)	ಪಿಎಸ್ಐ (ಎಫ್ ಪಿಬಿ)	ಪಿಎಸ್ಐ (ನಿಸ್ತಂತು)	ಒಟ್ಟು ಜುಮ್ಲಾ
1995–96	16	–	–	–	–	16
2000–01	09	–	–	–	–	09
2000–01 (ವಿಶೇಷ ನೇಮಕಾತಿ ಪಿಎಸ್ಐ (ಸಿವಿಲ್)	150	–	–	–	–	150
2002–03	36	06	–	–	–	42
2003–04 (ವಿಶೇಷ ನೇಮಕಾತಿ ಪಿಎಸ್ಐ (ಸಿವಿಲ್)	200	–	–	–	–	200
2004–05	31	–	–	–	–	31
2005–06	–	–	–	–	–	–
2006–07	33	–	03	–	–	36
2007–08	–	10	04	02	05	21
2008–09	–	–	–	–	–	–
2009–10	40	–	–	–	–	40
ಒಟ್ಟು	515	16	07	02	05	545

ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) 515, ರಿಸರ್ವ್ ಸಬ್–ಇನ್ಸ್‌ಪೆಕ್ಟರ್ 16, ಸ್ಪೆಷಲ್ ರಿಸರ್ವ್ ಸಬ್–ಇನ್ಸ್‌ಪೆಕ್ಟರ್(ಕೆ.ಎಸ್.ಆರ್.ಪಿ)–07, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಎಫ್.ಪಿ.ಬಿ)–02, ಮತ್ತು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ವೈರ್‌ಲೆಸ್)–05 ಒಟ್ಟು 545 ಹುದ್ದೆಗಳನ್ನು ಸೇವಾ ಆಧಾರದ ಮೇಲೆ ನೇರ ನೇಮಕಾತಿ ಮಾಡಲಾಗಿದೆ.

ಇ) ಇಲಾಖೆಯಲ್ಲಿ ಪದವಿ ವಿದ್ಯಾರ್ಹತೆ ಹೊಂದಿ ಪೊಲೀಸ್ ಕಾನ್ಸ್ ಟೇಬಲ್, ಮುಖ್ಯ ಕಾನ್ಸ್ ಟೇಬಲ್ ಮತ್ತು ಸಹಾಯಕ ಸಬ್–ಇನ್ಸ್‌ಪೆಕ್ಟರ್ ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿದ್ದು, ಇವರಿಗೆ ಈ ಕೆಳಕಂಡಂತೆ ಪ್ರತ್ಯೇಕ ನೇಮಕಾತಿ ಮೂಲಕ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

1) 2000–01ನೇ ಸಾಲಿನಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 10 ಎಸ್‌ಆರ್ ಡಿ 2000, ದಿನಾಂಕ: 11.08.2000 ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು (ಸಬ್–ಇನ್ಸ್‌ಪೆಕ್ಟರ್ ನೇಮಕಾತಿ) (ವಿಶೇಷ) ನಿಯಮಗಳು, 2000 ನಿಯಮವನ್ನು ಹೊರಡಿಸಿದ್ದು ಅದರ ಅನ್ವಯ 150 ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗಳಿಗೆ.
2) 2003–04ನೇ ಸಾಲಿನಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/282/ಪಿಇಐ/2002, ದಿನಾಂಕ: 07.04.2003 ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು (ಸಬ್–ಇನ್ಸ್‌ಪೆಕ್ಟರ್ ನೇಮಕಾತಿ) (ವಿಶೇಷ) ನಿಯಮಗಳು, 2003 ಹೊರಡಿಸಿದ್ದು ಅದರ ಅನ್ವಯ 200 ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗಿದೆ.
3) ಅಲ್ಲದೆ ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ಸಿಬ್ಬಂದಿ ವರ್ಗ ಒಳಗೊಂಡಂತೆ (ನೇಮಕಾತಿ) ನಿಯಮಗಳು 1994 ಮತ್ತು ನಿಯಮಗಳು 2004ರಲ್ಲಿ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗೆ 8 ವರ್ಷಗಳ ಕಾಲ ಸೇವೆ ನಿರ್ವಹಿಸಿರುವ ಸೇವಾ ನಿರತ ಪೊಲೀಸ್ ಕಾನ್ಸ್‌ಟೇಬಲ್, ಹೆಡ್‌ಕಾನ್ಸ್‌ಟೇಬಲ್ ಮತ್ತು ಸಹಾಯಕ ಸಬ್–ಇನ್ಸ್‌ಪೆಕ್ಟರ್

ಇವರುಗಳಿಗೆ ಶೇಕಡ 10% ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದ್ದು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

ಶ್ರೀ ಎಸ್.ಆರ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಪೊಲೀಸ್‌ನವರು ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿರುವಂಥದ್ದನ್ನು ತಾವೆಲ್ಲರೂ ಗಮನಿಸಿದ್ದೀರಿ. ಪದವೀಧರರು ಸುಮಾರು 5,000 ಕ್ಕಿಂತಲೂ ಹೆಚ್ಚಾಗಿ ಪೊಲೀಸ್ ಇಲಾಖೆಯಲ್ಲಿ Constable, Head Constable, Assistant Sub-Inspector ಆಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. Sub-Inspector ಹುದ್ದೆಗೆ ಪದವಿಯನ್ನು ಪಡೆದಿರಬೇಕೆಂದು ಕಡ್ಡಾಯವಿದೆ. ಆದರೆ Sub-Inspector ಗಿಂತ ಕೆಳಮಟ್ಟದಲ್ಲಿ Assistant Sub-Inspectors, Constables ಏನು ಇದ್ದಾರೆ. ಈಗ ಕರ್ತವ್ಯವನ್ನು ಮಾಡುತ್ತಿರುವಂಥ ಬಹಳಷ್ಟು ಜನರು ಪದವೀಧರರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ನನಗೆ ಒದಗಿಸಿರುವ ಉತ್ತರದಲ್ಲಿ 2000–01ರಲ್ಲಿ ಸುಮಾರು 150 ಜನರಿಗೆ ಮತ್ತು 2003–04ರಲ್ಲಿ ಸುಮಾರು 200 ಪದವೀಧರರಿಗೆ ಹುದ್ದೆಗಳನ್ನು ಮೇಲ್ಪಟ್ಟ ದರ್ಜೆಗೆ ಏರಿಸಿ ಕೊಟ್ಟಿರುವಂಥದ್ದು ಇದೆ. ಅದು ಆದಮೇಲೆ 2004 ರಿಂದ 2010 ರವರೆಗೂ ಕೇವಲ 178 ಜನರು Constable ಹುದ್ದೆಗಳಲ್ಲಿ ಏನು ಇದ್ದರು. ಅವರಿಗೆ Sub-Inspector ಹುದ್ದೆಗೆ 8% ನಲ್ಲಿ 10% ಮೀಸಲಾತಿಯನ್ನು ಏನು ಕಲ್ಪಿಸಿದ್ದಾರೆ, ಅದರಲ್ಲಿ ಕೊಟ್ಟಿದ್ದಾರೆ. ಇಲ್ಲಿ ಏನಾಗುತ್ತದೆಂದರೆ ಹೊಸದಾಗಿ ನಾವು Sub-Inspector ಗೆ ನೇಮಕಾತಿಯನ್ನು ಮಾಡಿದಾಗ ಅವರಿಗೆ 11 ತಿಂಗಳು ತರಬೇತಿಯನ್ನು ಕೊಡಬೇಕಾಗುತ್ತದೆ. ಆದರೆ ಇವರಿಗೆ 4 ತಿಂಗಳುಗಳು ತರಬೇತಿಯನ್ನು ಕೊಟ್ಟರೆ ಸಾಕು. ಆ ರೀತಿ ನಿಯಮಾವಳಿಯಲ್ಲಿದೆಯೆಂದು ನಾನು ಅಂದುಕೊಂಡಿದ್ದೇನೆ. ಈ 11 ತಿಂಗಳ ತರಬೇತಿ ಮತ್ತು 4 ತಿಂಗಳುಗಳ ತರಬೇತಿಯಲ್ಲಿ ಬಹಳಷ್ಟು ಆರ್ಥಿಕವಾಗಿ ಉಳಿಸುವಂಥ ಸಂಭಾವನೆ ಇದೆ. ಅವರಿಗೆ ಏನು ಅನಿಸುತ್ತದೆಂದರೆ 10 ವರ್ಷಗಳ ಸೇವೆ ಮಾಡಿದ್ದರೂ, ಈಗ ತಾನೇ ಬಂದವರು ಕೇವಲ ಪದವಿಯನ್ನು ಪಡೆದುಕೊಂಡಿರುತ್ತಾರೆ ಎಂಬ ಮಾತ್ರಕ್ಕೆ Sub-Inspector ಹುದ್ದೆಗೆ ತೆಗೆದುಕೊಂಡಾಗ, ಈಗಾಗಲೇ ಸೇವೆ ಸಲ್ಲಿಸುತ್ತಿರುವವರು ನಾವು ಇನ್ನು ಕೆಳ ಮಟ್ಟದಲ್ಲಿ ಇದ್ದೇವೆ ಎನ್ನುವ ಭಾವನೆ ಬರುತ್ತದೆ. ಏಕೆಂದರೆ

ಇವರಿಗೆ 20 ವರ್ಷಗಳಾದರೂ promotion ಸಿಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ನೀವು 10% ಮೀಸಲಾತಿಯನ್ನು ಏನು ಇಟ್ಟಿದ್ದೀರಿ, ಅದನ್ನು ಕನಿಷ್ಠ 50% ಮೀಸಲಾತಿ ಎಂದು ಇಟ್ಟರೆ, ಈ ತಾರತಮ್ಯ ಏನು ಇದೆ, ಅದು ನಿವಾರಣೆಯಾಗುತ್ತದೆ. ಇವರು ಈಗಾಗಲೇ ಪಡೆದಿದ್ದಾರೆ. ಇವರು ಬೇರೆ ಬೇರೆ ಘಟಕಗಳಲ್ಲಿ ಅವರು ಕೆಲಸ ಮಾಡಿ ಅನುಭವವಿರುವುದರಿಂದ ದಯವಿಟ್ಟು ಈ Constable, ASI, ದಫೇದಾರ್ ಹುದ್ದೆಯಲ್ಲಿ ಯಾರು ಪದವಿಯನ್ನು ಮಾಡಿದ್ದಾರೆ, ಅವರಿಗೆ Sub-Inspector ಹುದ್ದೆಗೆ ನೇಮಕಾತಿಯನ್ನು ಮಾಡುವಾಗ, ಕನಿಷ್ಠ 50% ಮೀಸಲಾತಿಯನ್ನು ಕೊಟ್ಟರೆ ಅವರಿಗೂ ಕೂಡ ಸಂತೋಷವಾಗುತ್ತದೆ. ನಮ್ಮನ್ನು ಸರ್ಕಾರ ಗುರುತಿಸಿ Sub-Inspector ಹುದ್ದೆಗೆ 50% ಮೀಸಲಾತಿ ಕೊಟ್ಟಿದ್ದಾರೆಂದು ಅವರು ಸಮರ್ಥವಾಗಿ ಕೆಲಸ ಮಾಡುತ್ತಾರೆಂಬ ನನ್ನ ಭಾವನೆಗೆ ಸನ್ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಡಾ: ವಿ.ಎಸ್.ಆಚಾರ್ಯ : ಮಾನ್ಯ ಅಧ್ಯಕ್ಷರೆ, ನೇಮಕಾತಿಯನ್ನು 5 ವರ್ಗಗಳ ಬೇರೆ ಬೇರೆ 5 ನಮೂನೆಯ Sub-Inspector ಹುದ್ದೆಗೆ ಪದವೀಧರರನ್ನು ನೇಮಕಾತಿ ಮಾಡುವ ಕ್ರಮ ಪ್ರಾರಂಭವಾದ ಮೇಲೆ, ಇದುವರೆಗೂ 545 ಜನರಿಗೆ ನೇಮಕಾತಿ ಆಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ 2000-2001ರಲ್ಲಿ, 2003-2004ರಲ್ಲಿ bulk ನೇಮಕಾತಿಯನ್ನು ವಿಶೇಷ ಆದೇಶದ ಮುಖಾಂತರ ಒಮ್ಮೆ 150 ಜನರನ್ನು, 200 ಜನರನ್ನು ನೇಮಕಾತಿ ಮಾಡಿದ್ದಾರೆ. ಈ ಪ್ರಶ್ನೆ ಇರುವಂಥದ್ದು ನಾವು ಆ ಕೆಟಗರಿಯಲ್ಲಿ ಮೇಲೆ ಬರುವುದಕ್ಕೆ 10% ಮಾತ್ರ ಆ ಒಂದು lateral entry ಯಲ್ಲಿ ಅವಕಾಶವಿದೆ. ಅದು ಕಾಲ ಕಾಲಕ್ಕೆ Sub-Inspector vacancies ಜಾಸ್ತಿ ಆದಾಗ ವಿಶೇಷ ನೇಮಕಾತಿ ಆದೇಶವನ್ನು ಹೊರಡಿಸಿ, ಆರ್ಥಿಕ ಇಲಾಖೆಯ ಮಂಜೂರಾತಿಯನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ಈಗ ಕೊನೆಯ ಬಾರಿ 2003-04ರಲ್ಲಿ ಆಗಿದ್ದು, ಈ ವರ್ಷದ ನೇಮಕಾತಿಯಲ್ಲೂ ನಾವು 400 ಜನರಲ್ಲಿ 40 ಜನರನ್ನು ಪದವೀಧರರನ್ನು ನೇಮಕಾತಿ ಮಾಡಿಕೊಳ್ಳಲು ಆಯ್ಕೆ ಪ್ರಕ್ರಿಯೆಯಲ್ಲಿ ಇದ್ದಾರೆ. ವಿಶೇಷ ನೇಮಕಾತಿ ಆಗುವ ಬಗ್ಗೆ ಅಗತ್ಯತೆಯನ್ನು ನೋಡಿಕೊಂಡು ನಾವು ಯೋಚನೆ ಮಾಡುತ್ತೇವೆ.

ಅಸಮರ್ಪಕ ವಿದ್ಯುತ್ ಸರಬರಾಜು

24 (51) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಮರ್ಪಕ ವಿದ್ಯುತ್ ಸರಬರಾಜಿನಿಂದ ರೈತರು ಬೆಳೆದಿರುವ ಬೆಳೆಗಳು ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರ ಕೃಷಿ ಪಂಪು ಸೆಟ್‌ಗಳಿಗೆ ಎಷ್ಟು ಗಂಟೆ ವಿದ್ಯುತ್ ಒದಗಿಸಲು ತೀರ್ಮಾನಿಸಲಾಗಿದೆ;

ಇ) ಈ ವಿದ್ಯುತ್ ಸರಬರಾಜಿಗೆ ಕಾಲಮಿತಿ ಏನಾದರೂ ನಿಗದಿ ಮಾಡಲಾಗಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) :

ಅ) ಪ್ರತಿ ವರ್ಷ ಶೇಕಡ 20 ರಷ್ಟು ಬೃಹತ್ ಪ್ರಮಾಣದ ವಿದ್ಯುತ್ ಬೇಡಿಕೆಯ ಹೆಚ್ಚಳದಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ದಿನವಹಿ 25 ಮಿಲಿಯನ್ ಯೂನಿಟ್‌ಗಳಷ್ಟು ಕೊರತೆ ಈಗ ಉಂಟಾಗಿದೆ.

ರೈತರ ಹಿತವನ್ನು ಕಾಪಾಡಲು ಸರ್ಕಾರವು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಆ) ರೈತರ ಕೃಷಿ ಪಂಪುಸೆಟ್ಟುಗಳಿಗೆ ದಿನವಹಿ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಗುಂಪುಗಳಲ್ಲಿ ಸರಬರಾಜು ಮಾಡಲು ತೀರ್ಮಾನಿಸಲಾಗಿದೆ.

ಇ) ರೈತರ ಕೃಷಿ ಪಂಪುಸೆಟ್ಟುಗಳಿಗೆ 3 ಫೇಸ್ ವಿದ್ಯುತ್ತನ್ನು ಗುಂಪುಗಳಲ್ಲಿ ಮತ್ತು ಸರದಿಯ ಪ್ರಕಾರ ಸರಬರಾಜು ಮಾಡಲಾಗುತ್ತಿದೆ.

ಶ್ರೀ ವಿ.ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅಸಮರ್ಪಕ ವಿದ್ಯುತ್ ಸರಬರಾಜಿನಿಂದ ರೈತರು ಬೆಳೆದಿರುವ ಬೆಳೆಗಳಿಗೆ ನಷ್ಟವಾಗುತ್ತಿರುವ ಬಗ್ಗೆ ಸರ್ಕಾರಕ್ಕೆ ಗೊತ್ತಿದೆಯಾ ಎಂದು ಕೇಳಿದರೆ, ಅದಕ್ಕೆ ಬೇರೆ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಅದು Vagua reply. 20% demand ಜಾಸ್ತಿಯಾಗುತ್ತಿದೆ, ಆದ್ದರಿಂದ ಅದಕ್ಕೆ ಎಷ್ಟು ಬೇಕೋ ಅಷ್ಟು ವಿದ್ಯುತ್ ಕೊಡುವುದಕ್ಕೆ ಆಗುತ್ತಿಲ್ಲವೆಂಬ ಮಾತನ್ನು ಹೇಳಿ, ರೈತರ ಹಿತವನ್ನು ಕಾಪಾಡಲು ಸರ್ಕಾರವು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆಯೆಂದು ಹೇಳಿದ್ದಾರೆ. ಇಲ್ಲಿ ಸಾಧ್ಯವಾದ ಎಂಬ ಮಾತು

ಇದೆಯಲ್ಲಾ, ಆ ಸಾಧ್ಯವಾದಷ್ಟು ಮಟ್ಟದಲ್ಲಿ ಮಾಡುವ ವೇಳೆಗೆ ರೈತರ ಉಸಿರು ಹೊರಟು ಹೋಗಿರುತ್ತದೆ. ಅವನ ಬೆಳೆಯ ಉಸಿರು ಮೊದಲೇ ಹೊರಟು ಹೋಗಿ ಬಿಡುತ್ತದೆ. ದಯವಿಟ್ಟು ರೈತರಿಗೆ ವಿದ್ಯುತ್ ಕೊಡುವ ವಿಚಾರದಲ್ಲಿ ಯಾವುದೇ ನಿರ್ಲಕ್ಷ್ಯ ಮಾಡುವುದು ಬೇಡ. ನೀವು ಕನಿಷ್ಟ 7 ಗಂಟೆ ಎಂದು ಹೇಳಿದ್ದೀರಿ, ಇಲ್ಲಿ ಉತ್ತರದಲ್ಲಿ 6 ಗಂಟೆ ಎಂದು ಒತ್ತಾಯ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಇದೇ ಮನೆಯಲ್ಲಿ ಮೊನ್ನೆ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿ 6 ಗಂಟೆ ಎಂದು ಉತ್ತರ ಕೊಟ್ಟಿದ್ದಾರೆ. ಅಧಿಕಾರಿಗಳು ಏಕೆ ಈ ತರಹ ತಪ್ಪು ಮಾಹಿತಿ ನಿಮಗೆ ಕೊಡುತ್ತಾ ಇದ್ದಾರೆ. ಅದರ ಬಗ್ಗೆ ದಯಮಾಡಿ ವಿವರಣೆ ಕೊಡಬೇಕು. ನೀವು ಕೊಡತಕ್ಕಂಥ ವಿದ್ಯುತ್ 7 ಗಂಟೆಗಳ ಬಗ್ಗೆ ಹಗಲು ಹೊತ್ತು ಎಷ್ಟು ಗಂಟೆ ಕೊಡುತ್ತೀರಿ, ರಾತ್ರಿ ಹೊತ್ತು ಎಷ್ಟು ಗಂಟೆ ಕೊಡುತ್ತೀರಿ, ಯಾವ ಯಾವ ಭಾಗದಲ್ಲಿ ಕೊಡುತ್ತೀರಿ ಎಂಬುದನ್ನು ನಿಖರವಾಗಿ ಒಂದು ಷೆಡ್ಯೂಲ್ ಮಾಡಿ. ಈಗ ವಿದ್ಯುತ್ ಕೊಡುತ್ತಿರುವುದಕ್ಕೆ ಯಾವುದೇ ಷೆಡ್ಯೂಲ್ ಇಲ್ಲ. ಅವರ ಇಷ್ಟದ ಹಾಗೆ ಆಫ್ ಮಾಡುತ್ತಾರೆ, ಅವರ ಇಷ್ಟದ ಹಾಗೆ ಕೊಡುತ್ತಾರೆ. ಎಲ್ಲೋ load over ಆಯಿತೆಂದು ಇನ್ನೊಂದು ಕಡೆ load off ಮಾಡುತ್ತಾರೆ. ಡ್ರೈ ಲ್ಯಾಂಡ್‌ಗೆ ಇವತ್ತಿಗೂ ಕೂಡ ವಿದ್ಯುತ್ ಬರುತ್ತಾ ಇಲ್ಲ. 6 ಗಂಟೆಯೂ ಬರುತ್ತಾ ಇಲ್ಲ, 7 ಗಂಟೆಯಂತೂ ಕೇಳುವ ಹಾಗೆಯೇ ರೀತಿಯಾಗಿ ರೈತರು ಅಪಾರ ವಾದಂಥ ನಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ದಯವಿಟ್ಟು ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರತಕ್ಕಂಥ ತಾವು ಕನಿಷ್ಟ ರೈತರ ಬೆಳೆ ಉಳಿಸಿಕೊಳ್ಳ ಬೇಕಾದರೆ, ಸಮ್ಮರ್ ಕ್ರಾಪ್ ಉಳಿಸಿಕೊಳ್ಳಬೇಕಾದರೆ, ತಾವು ಏನು 7 ಗಂಟೆ ವಿದ್ಯುತ್ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದೀರಿ, ಆ ಪ್ರಕಾರ ಕನಿಷ್ಟ ಮೇ 15ನೇ ತಾರೀಖಿನವರೆಗೆ 7 ಗಂಟೆ ವಿದ್ಯುತ್ ಕೊಡುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ದಯಮಾಡಿ ಕೊಡಬೇಕು.

ಶ್ರೀ ವೆಂಕಟರಾವ್ ನಾಡಗೌಡ : ಎಲ್.ಡಿ. ಅವರು ಎಲ್.ಡಿ. ಯಿಂದ ತೆಗೆಸಿಬಿಡುತ್ತಾರೆ. ಯಾವಾಗ ತೆಗೆಯುತ್ತಾರೋ, ಯಾವಾಗ ಹಾಕುತ್ತಾರೋ ಅದು ಗೊತ್ತಾಗುವುದಿಲ್ಲ. ಫೋನ್‌ನಲ್ಲೆ ಎಲ್.ಡಿ.ಯಿಂದ ತೆಗೆದುಬಿಡಿ ಎಂದು ಹೇಳಿಬಿಡುತ್ತಾರೆ, ಅವರು ತೆಗೆಯುತ್ತಾರೆ. ಹಾಗಾಗಿ ಯಾವಾಗ ಅಂಥಾ ಗೊತ್ತಾಗುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಮುನಿಯಪ್ಪನವರು ವಿದ್ಯುತ್ ಸಮಸ್ಯೆಯ ಬಗ್ಗೆ, ಅಸಮರ್ಪಕ ಪೂರೈಕೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಈಗಾಗಲೇ ಈ ಸದನದಲ್ಲಿ ವಿದ್ಯುತ್ ಪೂರೈಕೆಯ ಬಗ್ಗೆಯೇ ಬಹಳ ದೀರ್ಘವಾಗಿ ಚರ್ಚೆಯಾಗಿದೆ. ಮಾನ್ಯ ಮುನಿಯಪ್ಪನವರು ಕೂಡ ಚರ್ಚೆಯಲ್ಲಿ ಭಾಗವಹಿಸಿದ್ದರು. ಅವತ್ತು ಸರ್ಕಾರ ಏನೇನು ಕ್ರಮವನ್ನು ತೆಗೆದುಕೊಳ್ಳುತ್ತದೆಂಬ ಬಗ್ಗೆ ಬಹಳ ನಿಖರವಾಗಿ ವಿವರಣೆ ನೀಡಿತ್ತು. ಈಗ ಮೊದಲನೇ ಹಂತವಾಗಿ ಮಾರ್ಚ್, ಏಪ್ರಿಲ್, ಮೇ 15ನೇ ತಾರೀಖಿನವರೆಗೂ ಎಂದು ತಾವು ಏನು ಹೇಳಿದ್ದೀರಿ. ನಾವು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳುಗಳವರೆಗೂ ಯಾವುದೇ ರೀತಿಯ ಸಮಸ್ಯೆಗಳು ಬರಬಾರದೆಂದು ಹೊರಗಡೆಯಿಂದಲೂ ವಿದ್ಯುತ್ ಅನ್ನು ಖರೀದಿ ಮಾಡುತ್ತಿದ್ದೇವೆ.

(11-30 AM)

ಆರು ಗಂಟೆ three phase ಮತ್ತು ಆರು ಗಂಟೆ single phase ವಿದ್ಯುತ್ ಕೊಡಬೇಕು ಎಂದು ತೀರ್ಮಾನವಾಗಿದೆ. Roster ಕೂಡ announce ಮಾಡಿದ್ದೇವೆ.

ಶ್ರೀ ವಿ. ಮುನಿಯಪ್ಪ : ಏಳು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆ ಎಂದು ನಿಮ್ಮ ಮುಖ್ಯಮಂತ್ರಿಗಳೇ ಈ ಸದನದಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ನಾಲ್ಕೈದು ದಿವಸಗಳಲ್ಲೇ ಈ ರೀತಿ ವ್ಯತ್ಯಾಸವಾದರೆ ಅದಕ್ಕೆ ನಮ್ಮದು ಬಹಳ ಆಕ್ಷೇಪಣೆ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್: ನೀವು ಇದೇ ಜಾಗದಿಂದ ಉತ್ತರ ಕೊಡುತ್ತಿದ್ದುದನ್ನು ನಾನು ನೋಡಿದ್ದೇನೆ, ಅನುಭವಿಸಿದ್ದೇನೆ. ಈಗ ಆರು ಗಂಟೆ three phase ಮತ್ತು ಆರು ಗಂಟೆ single phase ವಿದ್ಯುತ್ತನ್ನು ಕೊಡಬೇಕೆಂದು ತೀರ್ಮಾನವಾಗಿದ್ದು schedule ಕೂಡ announce ಮಾಡಿದ್ದೇವೆ.

ಶ್ರೀ ವೆಂಕಟರಾವ್ ನಾಡಗೌಡ : L.D. ಯಿಂದ ತೆಗೆದು ಬಿಡುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದನ್ನು ಸರಿಪಡಿಸುತ್ತೇವೆ. Roster ಅನ್ನು ಅನುಸರಿಸಿ ಆ ಪ್ರಕಾರ ವಿದ್ಯುತ್ತನ್ನು ಪೂರೈಸುತ್ತೇವೆ.

ಶ್ರೀ ವಿ. ಮುನಿಯಪ್ಪ : Specific schedule announce ಮಾಡಬೇಕು.

ಶ್ರೀ ವೆಂಕಟರಾವ್ ನಾಡಗೌಡ : ವಿದ್ಯಾರ್ಥಿಗಳ ಸಲುವಾಗಿ ಬೆಳಗ್ಗೆ 7 ಗಂಟೆಯಿಂದ 11 ಗಂಟೆಯವರೆಗೆ ವಿದ್ಯುತ್ ಕೊಡುತ್ತೇವೆ ಎಂದು ಮುಖ್ಯಮಂತ್ರಿಯವರು ಇಲ್ಲಿ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ, ಅವರು ಉತ್ತರ ಕೊಡಲಿ, ಆಮೇಲೆ ಬೇರೆ ವಿಚಾರಗಳನ್ನು ಕೇಳಿ. ಉತ್ತರ ಕೊಡುವಾಗಲೇ ಹೀಗೆ ಮಧ್ಯೆ ಮಧ್ಯೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಅಸಮರ್ಪಕ ವಿದ್ಯುತ್ ಸರಬರಾಜಿನ ಬಗ್ಗೆ ನನ್ನಿಂದ ಸಮರ್ಪಕ ಉತ್ತರ ಬರದಿದ್ದರೆ ಆಗ ನೀವು ಕೇಳಬೇಕು. ನಾನು ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ : ಸಮರ್ಪಕವಾದ ಉತ್ತರ ಬರುತ್ತದೆ, ಆದರೆ ಅದರಂತೆ ಕರೆಂಟ್ ಬರಬೇಕಲ್ಲವೇ? ನಾವು ಕರೆಂಟ್ ಕೊಡುವುದಿಲ್ಲ ಎಂದು ಯಾವ ಸರ್ಕಾರದವರೂ ಹೇಳಿಲ್ಲ. ಅಲ್ಲಿ ರೈತರೆಲ್ಲ ಕರೆಂಟಿಗಾಗಿ ಮಿಕಿಮಿಕಿ ಮುಖ ನೋಡುತ್ತಿರುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಮಗೆ ಕರೆಂಟ್ ಬೇಕು. ಅದು ಬಿಟ್ಟು ಸಮರ್ಪಕ ಉತ್ತರವನ್ನು ತೆಗೆದುಕೊಂಡು ನಾವು ಏನು ಮಾಡೋಣ?

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ : ಕರೆಂಟಿನ ಬಗ್ಗೆ ಕೇಳಿದಾಗಲೆಲ್ಲ, ಕೊಡುತ್ತೇವೆ, ನೋಡುತ್ತೇವೆ, ಪರಿಶೀಲಿಸುತ್ತೇವೆ ಎನ್ನುವುದನ್ನು ಕೇಳಿಕೇಳಿ ಜನ ಸಾಕಾಗಿದ್ದಾರೆ, ನಂಬಿಕೆ ಕಳೆದುಕೊಂಡಿದ್ದಾರೆ. ಅದಕ್ಕಾಗಿ, ಅದಕ್ಕೆ ಬಂಡವಾಳ ಹೂಡಿ ಅದನ್ನು ಹೇಗೆ ಮಾಡುತ್ತೀರಿ ಎನ್ನುವುದನ್ನು ಸರಿಯಾಗಿ ಹೇಳಿ.

ಅಧ್ಯಕ್ಷರು : ಪುಟ್ಟೇಗೌಡರೇ ಕುಳಿತುಕೊಳ್ಳಿ, ಅವರು ಉತ್ತರ ಕೊಡಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಬಂಡವಾಳವನ್ನು ಹೂಡಿಯೇ ಇವತ್ತು ವಿದ್ಯುತ್ತನ್ನು ಖರೀದಿ ಮಾಡುತ್ತಿದ್ದೇವೆ. ಮಾರ್ಚ್ ತಿಂಗಳಲ್ಲಿ ಒಂದು ಸಾವಿರ ಮೆಗಾವಾಟ್ ಖರೀದಿ ಮಾಡುತ್ತಿದ್ದೇವೆ. ಏಪ್ರಿಲ್, ಮೇ, ಜೂನ್ ಈ

ಮೂರು ತಿಂಗಳುಗಳಲ್ಲಿ ತಲಾ 750 ಮೆಗಾವಾಟ್ ಖರೀದಿ ಮಾಡುತ್ತಿದ್ದೇವೆ. ಈ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಹಿಂದೆ ಯಾವುದೋ ಕಾಲದಲ್ಲಿ ಬಂಡವಾಳ ಹೂಡಿ, ವಿದ್ಯುತ್ತನ್ನು generate ಮಾಡಲು ಪ್ರಾರಂಭ ಮಾಡಿದ್ದರೆ ಇವತ್ತು ನಾನು, ನೀವು ಈ ಕಷ್ಟವನ್ನು ಅನುಭವಿಸಬೇಕಾಗಿರಲಿಲ್ಲ. ಇವತ್ತು ಬಂಡವಾಳ ಹೂಡಿದರೆ ನಾಳೆಯೇ ವಿದ್ಯುತ್ ಬರುವುದಿಲ್ಲ.

ಶ್ರೀ ಸಿ.ಎಸ್.ಪುಟ್ಟೇಗೌಡ : ಅವರು ಮಾಡಿದ ತಪ್ಪನ್ನೇ ನೀವೂ ಮಾಡಬೇಡಿ. ಅವರು ವಿದ್ಯುತ್ ಕೊಡಲಿಲ್ಲ, ನೀವು ಕೊಡುತ್ತೀರಿ ಎಂದೇ ಜನ ನಿಮಗೆ ಓಟು ಕೊಟ್ಟಿರುವುದು. ಹಿಂದಿನವರು ಮಾಡಿದುದು ಬೇಡ. ನಿಮ್ಮದೇನು ಎಂದು ನೀವು ಹೇಳಬೇಕಲ್ಲವೇ? ಉತ್ತರವನ್ನು ಯಾರು ಬೇಕಾದರೂ ಕೊಡುತ್ತಾರೆ, ಆದರೆ ದಯಮಾಡಿ ಕರೆಂಟ್ ಕೊಡಲು ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಮುಗಿಸಲಿ, ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಇದು ಪ್ರಶ್ನೋತ್ತರ ವೇಳೆ. ಅವರು ಉತ್ತರ ಕೊಡಲಿ. ಎಲ್ಲರೂ ಒಟ್ಟಿಗೆ ನಿಂತುಕೊಂಡು ಕೇಳಿದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಇದು ಪ್ರಶ್ನೋತ್ತರ. ಇದು Rule 60 ಅಲ್ಲ, 69 ಕೂಡ ಅಲ್ಲ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಎಲ್ಲರೂ ಒಟ್ಟಿಗೆ ನಿಂತುಕೊಂಡು ಕೇಳಿದರೆ ಹೇಗೆ? ಅವರು ಉತ್ತರ ಮುಗಿಸಲಿ. ಉತ್ತರ ಮುಗಿಸಲು ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಎಸ್. ಸುರೇಶ್‌ಕುಮಾರ್ : ಇದು question hour. Rule 60 ಅಲ್ಲ, Rule 69 ಅಲ್ಲ, ಅರ್ಧ ಗಂಟೆ ಕಾಲದ ಚರ್ಚೆಯೂ ಅಲ್ಲ. ಅವರ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಸರ್ಕಾರ ಒಂದು ದೀರ್ಘಾವಧಿ ಯೋಜನೆಯನ್ನು ಕೂಡ ಪ್ರಕಟ ಮಾಡಿದೆ. ಈ ಕೂಡಲೇ ಅಂದರೆ ಮಾರ್ಚ್ ತಿಂಗಳಲ್ಲಿ 1,000 ಮೆಗಾವಾಟ್ ವಿದ್ಯುತ್ತನ್ನು ಖರೀದಿ ಮಾಡುತ್ತೇವೆ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ತಲಾ 750 ಮೆಗಾವಾಟ್ ಖರೀದಿ

ಮಾಡುತ್ತಿದ್ದೇವೆ. ಯಾವ ಯಾವ ಭಾಗದಲ್ಲಿ ನಾವು ಮಾಡುತ್ತೇವೆ ಎಂದು ಈಗಾಗಲೇ specific schedule ಪ್ರಕಟ ಮಾಡಿದ್ದೇವೆ, ಅದನ್ನು ಪುನಃ ಪ್ರಕಟ ಮಾಡಿ, ಆ schedule ಗೆ ನಾವು ಬದ್ಧರಾಗಿರುತ್ತೇವೆ.

ಶ್ರೀ ವೆಂಕಟರಾವ್ ನಾಡಗೌಡ : ಏಳು ಗಂಟೆ ವಿದ್ಯುತ್ ಕೊಡುವ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಸ್. ಸುರೇಶ್‌ಕುಮಾರ್ : ಅದನ್ನು ನಾವು verify ಮಾಡಿ ಹೇಳುತ್ತೇನೆ.

(ಗೊಂದಲ)

ಶ್ರೀ ವಿ.ಮುನಿಯಪ್ಪ : ಮುಖ್ಯಮಂತ್ರಿಗಳು ಏಳು ಗಂಟೆ ಕಾಲ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದ್ದರು. ನೀವು ಆರು ಗಂಟೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಸ್.ಸುರೇಶ್‌ಕುಮಾರ್ : ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮೊನ್ನೆ ವಿದ್ಯುಚ್ಛಕ್ತಿ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಎಲ್ಲರ ಆತಂಕ ಏನಿದೆ ಎನ್ನುವುದನ್ನು ಅರ್ಥಮಾಡಿಕೊಂಡು ಬಹಳ ಸಮರ್ಪಕವಾದಂಥ ಉತ್ತರವನ್ನು ಕೊಟ್ಟರು. ಉತ್ತರ ಕೊಡುವಾಗ ಅವರು ಏನು ಹೇಳಿದರೆಂದರೆ, ಈಗ ನಾನು ಹೇಳುತ್ತಿದ್ದೇನೆ, ಪರಿಸ್ಥಿತಿ ಏನಾಗಿದೆ ಎಂದು ನಾಳೆ ಬೆಳಗ್ಗೆ ಹೋಗಿ ನೋಡಿ, ನಂತರ ಸಾಯಂಕಾಲ ನನಗೆ ಫೋನ್ ಮಾಡಿ ಹೇಳಿ ಎಂದು ಹೇಳಿದರು. ಮೂರ್‍ನಾಲ್ಕು ದಿವಸಗಳಲ್ಲಿ ಏನಾದರೂ ಬದಲಾವಣೆ ಯಾಗಿದೆಯೇ ನೋಡೋಣ ಎಂದು ನಾನು ಬೆಳಗ್ಗೆಯಿಂದಲೂ ಫೋನ್ ಮಾಡುತ್ತಲೇ ಇದ್ದೇನೆ. ನಾನು ಒಂದು ಮಾತನ್ನು ದುಃಖದಿಂದ ಹೇಳುತ್ತೇನೆ. ವಿದ್ಯುತ್ ಪೂರೈಕೆಗೆ ನೀವು ಪ್ರಯತ್ನ ಮಾಡುತ್ತಿರಬಹುದು. 1000 ಮೆಗಾವಾಟ್ ಖರೀದಿ ಮಾಡುತ್ತೀರೋ, 750 ಮೆಗಾವಾಟ್ ಖರೀದಿ ಮಾಡುತ್ತೀರೋ ಆ ವಿಷಯ ಬೇರೆ. Peak load ಇವತ್ತು ಜಾಸ್ತಿಯಾಗಿದೆ. ಏನಾದರೂ ಸುಧಾರಣೆಯಾಗಿದೆಯೇ ಎಂದು ನೋಡಿದರೆ, 30% ಸುಧಾರಣೆಯಾಗಿದೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಖಂಡಿತವಾಗಿಯೂ ಕೂಡ ಸಮರ್ಪಕವಾದ ರೀತಿಯಲ್ಲಿ ಆಗಿಲ್ಲ. ಎಲ್ಲರೂ ಏಕೆ ಈ ಬಗ್ಗೆ

ಕೇಳುತ್ತಾರೆ ಎಂದರೆ, ಇದು ಎಲ್ಲರಿಗೂ ಕಾಡುತ್ತಿರುವಂಥ ಪ್ರಶ್ನೆಯಾಗಿದೆ. ಸರ್ಕಾರದವರು ಏನು schedule ಅನ್ನು announce ಮಾಡುತ್ತಾರೆ, ಆ schedule ಪ್ರಕಾರ keep up ಮಾಡುವರೇ ಎನ್ನುವ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕು. ಇಲ್ಲಿ ಕೊಟ್ಟ ಮುಖ್ಯಮಂತ್ರಿಗಳ ಹೇಳಿಕೆಗೂ, ವಿದ್ಯುತ್ supply ಆಗುತ್ತಿರುವುದಕ್ಕೂ ಸಂಬಂಧವಿಲ್ಲ, ಸಮಾಧಾನ ತರುವಂಥದಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮುನಿಯಪ್ಪನವರ ಪ್ರಶ್ನೆಯನ್ನು ಮುಂದುವರೆಸಿ ಜಯಚಂದ್ರ ರವರು specific ಆಗಿ ಕೇಳಿದ್ದಾರೆ. ಸರ್ಕಾರ ಈ ಸಂದರ್ಭದಲ್ಲಿ ಭರವಸೆ ಕೊಡುತ್ತದೆ, ನಾವು ಏನು schedule announce ಮಾಡಿದ್ದೇವೆ, ಆ schedule ಗೆ ಬದ್ಧವಾಗಿ ನಾವು ವಿದ್ಯುತ್ತನ್ನು ಪೂರೈಕೆ ಮಾಡುತ್ತೇವೆ.

ಶ್ರೀ ವಿ.ಮುನಿಯಪ್ಪ : 1000 ಮೆಗಾವಾಟ್ ವಿದ್ಯುತ್ತನ್ನು purchase ಮಾಡುತ್ತಿದ್ದೇವೆ ಎಂದು 15 ದಿವಸಗಳಿಂದ ಹೇಳಿಕೆ ಕೊಡುತ್ತಲೇ ಇದ್ದೀರಿ. ಇನ್ನೂ ಅದು purchase ನಲ್ಲೇ ಇದೆ, ಅದು ಇನ್ನೂ supply ಆಗಲಿಲ್ಲ, ರೈತರಿಗೆ ಅದು ಮುಟ್ಟಲೇ ಇಲ್ಲ. ಬರೀ purchase ಎನ್ನುವುದರಲ್ಲೇ ಇದ್ದೀರಿ. ಇದರ ಬಗ್ಗೆ ಸರಿಯಾದಂಥ, ನಿಖರವಾದಂಥ ಉತ್ತರ ಬೇಕು. Purchase ಆಗಿ, ಸರಬರಾಜು start ಆಯಿತೇ, ಇಲ್ಲವೇ ಎನ್ನುವುದಕ್ಕೆ ದಯಮಾಡಿ ಸರ್ಕಾರ ಉತ್ತರ ಕೊಡಬೇಕು.

ಅಧ್ಯಕ್ಷರು : ಆಯಿತು, ಹೇಳಿದ್ದಾರೆ.

(ಗೊಂದಲ)

ಶ್ರೀ ವಿ. ಮುನಿಯಪ್ಪ : ಖರೀದಿಯಾಗಿದ್ದರೆ ಸರಬರಾಜು ಪ್ರಾರಂಭವಾಗಬೇಕಲ್ಲವೇ? ಸರಬರಾಜು ಆಗದಿದ್ದರೆ ಅದನ್ನು ಹೇಗೆ ಶೇಖರಿಸಿಟ್ಟುಕೊಳ್ಳಲು ಬರುತ್ತದೆ?

ಶ್ರೀ ಎಸ್. ಸುರೇಶ್‌ಕುಮಾರ್ : ನೀವೂ ಕೂಡ ಸಚಿವರಾಗಿದ್ದಿರಿ, ಅನುಭವವಿರುವಂಥವರು. ವಿದ್ಯುತ್ತನ್ನು ನಾವು purchase ಮಾಡಿ ಇಟ್ಟುಕೊಳ್ಳಲು ಆಗುವುದಿಲ್ಲ, ವಿದ್ಯುತ್ ಪೂರೈಕೆ ಆಗುತ್ತಿದೆ, ಸರಬರಾಜು ಮಾಡುತ್ತಿದ್ದೇವೆ. ಇನ್ನಷ್ಟು improve ಮಾಡುತ್ತೇವೆ.

ಅಧ್ಯಕ್ಷರು : ಆಯಿತು.

ಮೂಡಬಿದರೆಯಲ್ಲಿ ಬಾಕ್ಸೈಟ್ ಅದಿರಿನ ಗಣಿಗಾರಿಕೆ ಮಾಡಲು ಅನುಮತಿ ನೀಡುವ ಬಗ್ಗೆ

26 (467) ಶ್ರೀ ಅಭಯಚಂದ್ರ ಜೈನ್. ಕೆ (ಮೂಡಬಿದ್ರೆ) : ಮಾನ್ಯ ಮುಖ್ಯಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನ ಮೂಡಬಿದರೆ ಕ್ಷೇತ್ರದ ಮೂಡಬಿದರೆಯಲ್ಲಿ ಬಾಕ್ಸೈಟ್ ಅದಿರಿನ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆಯೇ, ಹಾಗಿದ್ದಲ್ಲಿ, ಗ್ರಾಮವಾರು, ಸರ್ವೆ ನಂಬರ್‌ವಾರು ವಿಸ್ತೀರ್ಣ ಹಾಗೂ ಪರವಾನಗಿ ವಿವರ ನೀಡುವುದು;

ಆ) ಇದರಿಂದಾಗಿ ಕೃಷಿ, ಪರಿಸರ, ವಾಸ್ತವ್ಯಕ್ಕೆ ತೊಂದರೆ ಉಂಟಾಗಿರುವ ಬಗ್ಗೆ ಸಾರ್ವಜನಿಕರು ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) -- ಇಲ್ಲ --

ಆ) -- ಪ್ರಶ್ನೆ ಉದ್ಭವಿಸುವುದಿಲ್ಲ --

ಶ್ರೀ ಕೆ. ಅಭಯಚಂದ್ರ ಜೈನ್ : ಉತ್ತರವನ್ನು ಒದಗಿಸಿದ್ದಾರೆ. ಮಂಗಳೂರು ತಾಲ್ಲೂಕಿನ ಮೂಡಬಿದ್ರೆ ಕ್ಷೇತ್ರದ ಮೂಡಬಿದ್ರೆಯಲ್ಲಿ ಬಾಕ್ಸೈಟ್ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಅಲ್ಲಿ ಸರ್ವೆ ಆಗುತ್ತಿದೆ. ಬಾಕ್ಸೈಟ್ ಗಣಿಗಾರಿಕೆ ಮಾಡಲು K.I.A.D.B. ಯಿಂದ ಒಂದು ವರ್ಷದಿಂದ ಅಲ್ಲಿ ಸರ್ವೆ ಆಗುತ್ತಿದೆ. ಆ ಊರಿನ ಗ್ರಾಮಸ್ಥರು ಅವರನ್ನು ಮೂರ್‍ನಾಲ್ಕು ಸಲ ಅಲ್ಲಿಂದ ಓಡಿಸಿದ್ದಾರೆ. ಆದರೂ ಕೂಡ ಇವತ್ತಿಗೂ ಅಲ್ಲಿನ ಜನರ ಆತಂಕ ಹೋಗಿಲ್ಲ. ಅಲ್ಲಿ ಬಾಕ್ಸೈಟ್ ಅದಿರಿನ ಗಣಿಗಾರಿಕೆಗೆ ಅನುಮತಿ ಕೊಟ್ಟರೆ ಊರಿನ ಪರಿಸರ ಹಾಳಾಗುತ್ತದೆ, ಕೃಷಿಕರಿಗೆ ಕಷ್ಟವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಹಾಲಿನ ಉತ್ಪಾದನೆಯಲ್ಲಿ ಕುಸಿತವಾಗುತ್ತಿದೆ. ದನಕರುಗಳಿಗೆ ಮೇಯಲು ಜಾಗವಿಲ್ಲ. ಈಗ ನೀವು ಅಲ್ಲಿ ಬಾಕ್ಸೈಟ್

ಗಣಿಗಾರಿಕೆಗೆ ಅವಕಾಶ ಕೊಟ್ಟರೆ, ದನಕರುಗಳು ಮೇವಿಗೆ ಹೋಗಲು ಕಷ್ಟವಾಗುತ್ತದೆ, ಕೃಷಿಕರಿಗೆ ತೊಂದರೆಯಾಗುತ್ತದೆ. ಹಾಗಾಗಿ ಬಾಕ್ಸೈಟ್ ಅದಿರಿನ ಗಣಿಗಾರಿಕೆಯನ್ನು ಕೈಬಿಟ್ಟರೆ ಒಳ್ಳೆಯದು.

ಶ್ರೀ ಎಸ್. ಸುರೇಶ್‌ಕುಮಾರ್ : ಮಂಗಳೂರು ತಾಲ್ಲೂಕಿನ ಮೂಡಬಿದ್ರೆ ಕ್ಷೇತ್ರದ ಮೂಡಬಿದ್ರೆಯಲ್ಲಿ ಬಾಕ್ಸೈಟ್ ಅದಿರಿನ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆಯೇ, ಹಾಗಿದ್ದಲ್ಲಿ, ಗ್ರಾಮವಾರು ಸರ್ವೆ ನಂಬರ್‌ವಾರು ವಿಸ್ತೀರ್ಣ ಹಾಗೂ ಪರವಾನಗಿ ವಿವರ ನೀಡುವುದು ಎನ್ನುವುದು ಅವರ ಪ್ರಶ್ನೆಯಾಗಿದೆ. ಅನುಮತಿಯನ್ನೇ ಕೊಟ್ಟಿಲ್ಲದ ಮೇಲೆ, ನಾವು ಇಲ್ಲ ಎಂದು ಉತ್ತರ ಕೊಟ್ಟಿದ್ದೇವೆ. ಸರ್ವೆ ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಸರ್ವೆ ಮಾಡುವುದಕ್ಕೂ, ಅನುಮತಿಗೂ ಸಂಬಂಧವಿಲ್ಲ. ಸರ್ಕಾರ ಅನುಮತಿ ಕೊಟ್ಟಿಲ್ಲ, ಇದು ಮೊದಲನೆಯದು. ನಿಮ್ಮ ಎರಡನೆಯ ಪ್ರಶ್ನೆ ಎಂದರೆ ಮೂಡಬಿದ್ರೆ ಕ್ಷೇತ್ರದ ಮೂಡಬಿದ್ರೆ, ತೆಂಕಣಜಾರು, ಬಡಗವಿಜಾರು, ನಿಟ್ಟೋಡಿ, ಪಾಲಡ್ಕ, ತೆರದಾಯಿ, ಪುತ್ತಿಗೆ ಈ ಗ್ರಾಮಗಳಿಗೆ ಸೇರಿದ ಸುಮಾರು 630 ಎಕರೆಯಲ್ಲಿ ನಮಗೆ ಬಾಕ್ಸೈಟ್ ಗಣಿಗಾರಿಕೆಗೆ ಅನುಮತಿ ಬೇಕು ಎಂದು ಆಶಾಪುರ ಮೈನ್ ಕೆಂ ಲಿಮಿಟೆಡ್ ರವರು ದಿನಾಂಕ: 20-3-2007 ರಲ್ಲಿ ಅರ್ಜಿ ಹಾಕಿದ್ದರು. ಅವರು ಅರ್ಜಿ ಹಾಕಿದ್ದು ನಮ್ಮ ಕಾಲದಲ್ಲಿ ಅಲ್ಲ. ಇದು ಅರಣ್ಯ ವ್ಯಾಪ್ತಿಗೆ ಬರುತ್ತದೆಯೇ ಎಂದು ಆಗ ಸರ್ಕಾರ ಅರಣ್ಯ ಇಲಾಖೆಯನ್ನು ಕೇಳಿತ್ತು. ಅರಣ್ಯ ಇಲಾಖೆಯವರು 5-9-2007ರಲ್ಲಿ ಒಂದು ಮಾಹಿತಿ ಕೊಟ್ಟರು: 630 ಎಕರೆ ಪೈಕಿ 447 ಎಕರೆ ಪ್ರದೇಶ ಪಶ್ಚಿಮ ಘಟ್ಟ ಪ್ರದೇಶದ ಹೊರಗಡೆ ಇದೆ ಎಂದು ಹೇಳಿ, ನೀವು ಇದನ್ನು ಪರಿಗಣಿಸಬಹುದು ಎಂದು ಹೇಳಿದ್ದರು. ಇದಾದ ಮೇಲೆ ನಮ್ಮ ಇಲಾಖೆಯ ಉಪ ನಿರ್ದೇಶಕರು ಜಾಗವನ್ನು ಪರಿಶೀಲನೆ ಮಾಡಿ, 630 ಎಕರೆ ಪೈಕಿ ಕೇವಲ 97 ಎಕರೆ ಮಾತ್ರ ಜಮೀನು ಮುಕ್ತವಾಗಿದೆ ಎಂದು ದಿನಾಂಕ: 14-11-2007ರಲ್ಲಿ ಒಂದು ವರದಿಯನ್ನು ಕೊಟ್ಟಿದ್ದರು. ಇಷ್ಟಾದರೂ ಕೂಡ ಸರ್ಕಾರ ಅನುಮತಿ ಕೊಟ್ಟಿಲ್ಲ. ಈಗ ಜಿಲ್ಲಾಧಿಕಾರಿಗಳಿಂದ ನಾವು ಒಂದು ಸ್ಪಷ್ಟ ಅಭಿಪ್ರಾಯವನ್ನು ಕೇಳಿದ್ದೇವೆ. ಆ ಅಭಿಪ್ರಾಯ ಬಂದ ಮೇಲೆ, ಸಾಮಾನ್ಯವಾಗಿ ನಾವು ಏನು procedure ಗಳನ್ನು follow ಮಾಡಬೇಕೋ, ಕ್ರಮಗಳನ್ನು ಅನುಸರಿಸಬೇಕೋ ಹಾಗೆ,

ಜನರ ಮಧ್ಯೆ ಒಂದು hearing ಕೊಟ್ಟು ಅವರ ಆಕ್ಷೇಪಣೆಗಳನ್ನು ತೆಗೆದುಕೊಂಡು ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆ.

ಆ ಅಭಿಪ್ರಾಯ ಬಂದ ಮೇಲೆ ಸಾಮಾನ್ಯವಾಗಿ ನಾವು ಏನೇನು procedure follow ಮಾಡಬೇಕು, ಕ್ರಮಗಳನ್ನು ಅನುಸರಿಸಬೇಕೋ ಹಾಗೆ ಜನರಿಗೆ, ಜನರ ಮಧ್ಯೆ ಒಂದು hearing ಕೊಟ್ಟು ಅವರ ಆಕ್ಷೇಪಣೆ, ಅವರ ಆತಂಕವೇನಿದೆ ಆ ಆತಂಕಕ್ಕೆ ಯಾವುದೇ ಅವಕಾಶ ಕೊಡದ ಹಾಗೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆ. As on today, ಯಾವುದೇ ಅನುಮತಿ ಕೊಟ್ಟಿಲ್ಲ. ಕೊಡುವ ಪ್ರಸಂಗ ಈಗ ಉದ್ಭವವಾಗಿಲ್ಲ.

ಶ್ರೀ ಕೆ. ಅಭಯ ಚಂದ್ರ ಜೈನ್ : ಒಂದು ವರ್ಷದ ಹಿಂದೆ ಇದರ ಬಗ್ಗೆ ದೊಡ್ಡ ಪ್ರತಿಭಟನೆಯಾಯಿತು. ಮೂಡಬಿದಿರೆಯ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ ನಡೆದು ಶಿವಮೊಗ್ಗದ ಮೂಲದ ಆಶಾ ಮೈನ್ಸ್ ಕಂಪನಿಗೆ ಯಾವುದೇ ಕಾರಣಕ್ಕೂ ಕೊಡಬಾರದು, ಅಲ್ಲಿ ಮೈನಿಂಗ್ ಮಾಡುವಾಗ ಪರಿಸರ ಹಾಳಾಗುತ್ತದೆನ್ನುವ ಸ್ಪಷ್ಟವಾದ ಮಾಹಿತಿ ಇದೆ. ಸರ್ವೆ ಮಾಡಲಿಕ್ಕೆ ಯಾರು ಅನುಮತಿ ಕೊಟ್ಟರು? 2007ರಲ್ಲಿ ಅನುಮತಿ ಕೊಟ್ಟಿದ್ದೇವೆಂದು ಹೇಳಿದಿರಿ.

ಶ್ರೀ ಎಸ್. ಸುರೇಶ್‌ಕುಮಾರ್ : ನಾವು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಮೂಡಬಿದಿರೆಯ ಜನತೆಗೆ ಯಾವುದೇ ರೀತಿಯ ಆತಂಕ ಬೇಡ. ಈಗ ಅನುಮತಿ ಕೊಡುವ ಸಂಗತಿ ಉದ್ಭವವಾಗಿಲ್ಲ.

ಶ್ರೀ ಯು.ಟಿ.ಖಾದರ್ : ಜಿಲ್ಲಾಧಿಕಾರಿಯವರ ಹತ್ತಿರ ಮಾಹಿತಿ ಕೇಳಿದ್ದೇವೆಂದು ಹೇಳಿದ್ದಾರೆ. ಸರ್ಕಾರದ ಗಮನಕ್ಕೆ ಬಾರದೆ ಯಾರಾದರೂ ಸರ್ವೆ ಮಾಡುವುದಕ್ಕೆ ಹೋಗುತ್ತಾರೆಯೇ? ಸರ್ಕಾರದ ಗಮನಕ್ಕೆ ಬಾರದೆ ಸರ್ವೆಗೆ ಹೋದರೆ ಏನಾಗಬಹುದು? ಇದಕ್ಕೆ ಅರ್ಥವಿದೆಯೇ?

(ಗೊಂದಲ)

ಅಧ್ಯಕ್ಷರು : ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಮತ್ತೆ ಅದನ್ನೇ ಕೇಳುವುದು ಬೇಡ.

(ಗೊಂದಲ)

ಅಧ್ಯಕ್ಷರು : ಉತ್ತರ ಕೊಟ್ಟಾಗಿದೆ. ಕುಳಿತುಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಉತ್ತರದಲ್ಲಿ 'ನ್ಯೂನತೆ ಇದೆ. ಎಲ್ಲಾ Procedure follow ಮಾಡಿದ್ದೇವೆಂದು ಹೇಳಿದ್ದಾರೆ. Mining lease ಕೊಡುವಾಗ public hearing ಮಾಡುವುದಿಲ್ಲ.

ಅಧ್ಯಕ್ಷರು : ಮತ್ತೆ ಮತ್ತೆ ಕೇಳಬೇಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು ಯಾವಾಗ public hearing ಮಾಡಿದ್ದೀರಿ ಹೇಳಿ? ತಾವು ಇಷ್ಟು mining lease ಕೊಟ್ಟಿದ್ದೀರಲ್ಲ, ಅವುಗಳಿಗೆಲ್ಲ public hearing ಮಾಡಿಯೇ ಕೊಟ್ಟಿದ್ದೀರಾ?

ಅಧ್ಯಕ್ಷರು : ಅದು ಈ ಪ್ರಶ್ನೆಯಲ್ಲಿ ಬರುವುದಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸದನಕ್ಕೆ ತಪ್ಪು ಮಾಹಿತಿ ಹೋಗುತ್ತಿದೆ. ನಾವು ಸದನಕ್ಕೆ ತಪ್ಪು ಮಾಹಿತಿ ಹೋಗುವುದಕ್ಕೆ ಬಿಡಬಾರದು. ಸಚಿವರು, ನಾವು ಯಾವುದೇ mining lease ಕೊಡುವುದಕ್ಕೆ ಮುಂಚೆ public hearing ಮಾಡುತ್ತೇವೆಂದು ಹೇಳಿದರು. ಅದು ತಪ್ಪು, ಯಾವುದೇ mining lease ಕೊಡುವುದಕ್ಕೆ ಮುಂಚೆ ಯಾವತ್ತೂ ಕೂಡ ಸರ್ಕಾರ public hearing ಮಾಡಿಲ್ಲ. ಮಾಡಬೇಕು ಆದರೆ ಮಾಡಿಲ್ಲ. ಇದರ ಬಗ್ಗೆ ಸಚಿವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸೀಮಿತವಾಗಿ ನಾನು ಉತ್ತರ ಕೊಟ್ಟಿದ್ದೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸಚಿವರು ಈ ರೀತಿ ಹೇಳಿದರೆ ಹೇಗೆ? ಸರ್ಕಾರ ಮೂಡಬಿದಿರೆಗೆ ಮಾತ್ರ ಸೀಮಿತವಾಗಿದೆಯೇ? ಅಥವಾ ಕಾಯ್ದೆಯಲ್ಲಿರುವಂತೆ ಅದಕ್ಕೆ ತಕ್ಕಂತೆ ಸರ್ಕಾರ ಸೀಮಿತವಾಗಿದೆಯೇ? ಈ ರೀತಿಯಾಗಿ ಹೇಳಿ you cannot mislead the House like this.

ಬೆಳ್ಳೂರು ಗ್ರಾಮಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ :

27 (509) ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸುರೇಶ್ ಗೌಡ : ಮಾನ್ಯ ಅಧ್ಯಕ್ಷರೆ, ತಾವು ಒಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. 1986ಕ್ಕೆ ಹಿಂದೆ ಆ ನಗರ ಪಟ್ಟಣ ಪಂಚಾಯಿತಿಯಾಗಿತ್ತು. ತದನಂತರ ಮಂಡಲ ಪಂಚಾಯಿತಿಯಾಯಿತು. ಇವತ್ತು ನಗರ ತುಂಬಾ ಬೆಳೆದಿದೆ. ಅಲ್ಲಿ Medical College, ITI, Engineering Colleges ಇವೆ. ಆದಿಚುಂಚನಗಿರಿ ಕ್ಷೇತ್ರವಿದೆ. ಅದರ ಜೊತೆಗೆ, ಅದು ಬಿ.ಎಂ. ಶ್ರೀಯವರ ಹುಟ್ಟೂರಾಗಿದೆ. ಜೊತೆಗೆ, ನಮ್ಮ ಕ್ಷೇತ್ರದಲ್ಲಿ ಒಂದು ಕಾಲದಲ್ಲಿ ಅದರಿಂದ ಹೆಚ್ಚಿನ ಆದಾಯ ಬರತಕ್ಕಂಥ ಪಟ್ಟಣ ಪಂಚಾಯಿತಿಯಾಗಿತ್ತು. ಅದು ಇವತ್ತು ಎಲ್ಲಾ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಈ ನಗರವನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸುತ್ತೇವೆನ್ನುವ ಆಶ್ವಾಸನೆಯನ್ನು ಸರ್ಕಾರ ಕೊಡಬೇಕು. ರಾಜ್ಯದಲ್ಲಿ ಬೇರೆ ಯಾವ್ಯಾವ ನಗರಗಳನ್ನು ಮೇಲ್ದರ್ಜೆಗೇರಿಸುತ್ತಿದ್ದೀರಿ? ಹಲವಾರು ಪಟ್ಟಣ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅದರಲ್ಲಿ ಇದೊಂದು ಇತಿಹಾಸ ಪ್ರಸಿದ್ಧವಾಗಿರುವ ನಗರವಾಗಿದೆ. ಬೇರೆ ನಗರಗಳನ್ನು ಮೇಲ್ದರ್ಜೆಗೇರಿಸುವ ಸಂದರ್ಭದಲ್ಲಿ ಯಾದರೂ ನಮ್ಮ ಈ ನಗರವನ್ನು ಮೇಲ್ದರ್ಜೆಗೇರಿಸುತ್ತೀರಾ ಎನ್ನುವ ಬಗ್ಗೆ ಸರ್ಕಾರ ದಯಮಾಡಿ ಉತ್ತರ ಕೊಡಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಈಗಾಗಲೇ ಸರ್ಕಾರ 10 ಸಾವಿರ ಜನಸಂಖ್ಯೆಗಿಂತ ಹೆಚ್ಚಿರುವ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ ಗಳನ್ನಾಗಿ ಮಾಡಬೇಕೆನ್ನುವ ಆಲೋಚನೆಯನ್ನು ಮಾಡಿದೆ. ಅದು ಸ್ವಾಗತಾರ್ಹವಾಗಿದೆ. ಆದರೆ, ಈ ತರಹ ಅನೇಕ ಪಂಚಾಯಿತಿಗಳನ್ನು

ಮಾಡಬೇಕೆನ್ನುವ ಒತ್ತಾಯ ಒಂದು ಕಡೆ ಇದೆ. ನನ್ನ ಕ್ಷೇತ್ರವಾದ ಟಿ. ನರಸೀಪುರದ ಬನ್ನೂರು ಪುರಸಭೆ ವ್ಯಾಪ್ತಿಗೆ ಚಾಮನಹಳ್ಳಿ ಎನ್ನುವ ಒಂದು ಗ್ರಾಮ ಬರುತ್ತದೆ. ಆ ಗ್ರಾಮವನ್ನು ಸುಮಾರು 5–6 ವರ್ಷಗಳ ಹಿಂದೆಯೇ ಪಟ್ಟಣ ಪಂಚಾಯಿತಿಗೆ ಸೇರಿಸಬೇಕೆಂದು resolution ಆಗಿತ್ತು. ಆದರೆ, ಅದಕ್ಕೆ ಪಟ್ಟಣ ಪಂಚಾಯಿತಿಯ ಸೌಕರ್ಯವೂ ಇಲ್ಲ, ಗ್ರಾಮ ಪಂಚಾಯಿತಿಯ ಸೌಕರ್ಯವಿಲ್ಲದೆ ಅಬ್ಬೇಪಾರಿಯಾಗಿ ಆ ಗ್ರಾಮ ಇದೆ. ದಯಮಾಡಿ, ಮಾನ್ಯ ಸಚಿವರು ಪಟ್ಟಣ ಪಂಚಾಯಿತಿಗಳನ್ನು ಮಾಡುವಂಥ ತೀರ್ಮಾನಕ್ಕೆ ಬದ್ಧರಾಗಿ ಈಗೇನು ಪ್ರಮುಖವಾಗಿ ನಗರೀಕರಣವಾಗುತ್ತಿದೆ, ಅದನ್ನು ಪಟ್ಟಣ ಪಂಚಾಯಿತಿಗಳಾಗಿ ಪರಿವರ್ತನೆ ಮಾಡುವ ಆಜ್ಞೆ ಹೊರಡಿಸುವುದು ಒಂದು ಕಡೆ. ಚಾಮನಹಳ್ಳಿ ಗ್ರಾಮವನ್ನು ಬನ್ನೂರಿಗೆ ಸೇರಿಸಬೇಕೆಂದೇನು ಕೇಳಿದ್ದೇವೆ ಅದನ್ನು ಮಾಡಿಕೊಡಬೇಕು. ನಮ್ಮ ಟಿ. ನರಸೀಪುರ, ಬೈರಾಪುರ ಮತ್ತು ತಿರುಮಕೂಡಲು ಗ್ರಾಮಗಳನ್ನು ಸೇರಿಸಿ ಪಟ್ಟಣ ಪಂಚಾಯಿತಿ ಮಾಡುತ್ತೇವೆಂದು ಕೂಡ ಹೇಳಿದ್ದಾರೆ, ಅದನ್ನೂ ಕೂಡ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸರ್ಕಾರವನ್ನು, ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ: ಮಾನ್ಯ ಸದಸ್ಯರಾದ ಸುರೇಶ್ ಗೌಡರು ಪ್ರಶ್ನೆ ಕೇಳಿದ್ದಾರೆ. ಅವರ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಆದರೆ, ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸು ವುದೇನೆಂದರೆ, ರಾಜ್ಯದಲ್ಲಿ ಸುಮಾರು 247 ಪ್ರಸ್ತಾವನೆಗಳು RDPR ನಿಂದ ನಗರಾಭಿವೃದ್ಧಿ ಇಲಾಖೆಗೆ ಎರಡು ವರ್ಷಗಳ ಹಿಂದೆ ಬಂದಿತ್ತು. ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯಾಗಿ ಮಾಡುವುದಕ್ಕೆ ಪರಿಶೀಲನೆ ಮಾಡಬೇಕೆಂದು ಅವರು ನಮ್ಮ ಮುಂದಿಟ್ಟಿದ್ದರು. ಸರ್ಕಾರ ನಮ್ಮ ಇಲಾಖೆ ಮತ್ತು ಹಣಕಾಸು ಇಲಾಖೆಯೊಂದಿಗೆ ಚರ್ಚೆ ಮಾಡಿದಾಗ 2009ರ ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ಚುನಾವಣಾ ಆಯೋಗದಿಂದ ಒಂದು ಪತ್ರ ಬಂತು. ಏನೆಂದರೆ, ತಾವು ಯಾವುದೇ ನಿರ್ಣಯ ತೆಗೆದುಕೊಳ್ಳುವುದಿದ್ದರೆ 2009ರ ಸೆಪ್ಟೆಂಬರ್ ತಿಂಗಳೊಳಗೆ ತೆಗೆದುಕೊಳ್ಳಬೇಕು, ಅದಾದನಂತರ ತಾವು ನಿರ್ಣಯ ತೆಗೆದುಕೊಳ್ಳಬಾರದು. ಏಕೆಂದರೆ, ನಾವು ಗ್ರಾಮ ಪಂಚಾಯಿತಿ ಚುನಾವಣೆಗೆ ತಯಾರಿ ಮಾಡಬೇಕಾಗಿದೆ ಎಂದು ನಮಗೆ ಪತ್ರ ಬರೆದಿದ್ದರು. ಅದರ ಜೊತೆಗೆ, 2011ರ census ಪ್ರಾರಂಭವಾಗಿರುವುದರಿಂದ ನಮಗೆ

ಆದೇಶವೇನಿದೆ ಎಂದರೆ, ಯಾವುದೇ border ಅನ್ನು ಎಲ್ಲಿಯೂ ಯಾವುದೇ change ಮಾಡಬಾರದೆಂದು ಇರುವುದರಿಂದ ಈಗಿನ ಹಂತದಲ್ಲಿ ಯಾವುದೇ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮಾಡುವುದಕ್ಕಾಗುವುದಿಲ್ಲ. ಅದರ ಬಗ್ಗೆ ಪರಿಶೀಲನೆಯನ್ನು ಯಾವಾಗ ಮಾಡಬಹುದೆಂದರೆ, ಈ census ಮುಗಿದನಂತರ ಅಂದರೆ ದಿ: 30-03-2011 ರಲ್ಲಿ census ಪೂರ್ಣ ಮುಗಿದ ನಂತರ ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಪರಿಶೀಲನೆ ಮಾಡುತ್ತದೆ. ಹಿರಿಯ ಸದಸ್ಯರಾದ ಸನ್ಮಾನ್ಯ ಮಹದೇವಪ್ಪನವರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಸಂಬಂಧಿಸಿದಂತೆ, ಈಗ ರಾಜ್ಯದಲ್ಲಿ ಸುಮಾರು 49 ಪಟ್ಟಣ ಪಂಚಾಯಿತಿಗಳು ತಾಲ್ಲೂಕು ಕೇಂದ್ರಗಳಲ್ಲಿರುವುದರಿಂದ ಈಗಾಗಲೇ ಅವುಗಳನ್ನು ಪುರಸಭೆಗಳನ್ನಾಗಿ ಮಾಡಬೇಕೆಂದು ಒಂದು ನಿರ್ಣಯಕ್ಕೆ ಬಂದಿದೆ. ಹಣಕಾಸು ಇಲಾಖೆಯ ಒಪ್ಪಿಗೆ ಪಡೆದ ನಂತರ ಮಾಡುತ್ತೇವೆ. ತಾವು ಹೇಳಿದ ಹಾಗೆ ಯಾವುದೇ village ಅನ್ನು ಈಗ ಸೇರಿಸುವುದಕ್ಕಾಗುವುದಿಲ್ಲ. ಯಾವುದೊಂದು ವ್ಯಾಪ್ತಿ ಇದೆ, ಟಿ. ನರಸೀಪುರ ಪಟ್ಟಣ ಪಂಚಾಯಿತಿ ಇದೆ ಅದನ್ನು ಪುರಸಭೆ ಎಂದು ಪರಿವರ್ತನೆ ಮಾಡಬಹುದು. ಆದರೆ, ಅದಕ್ಕೆ ಯಾವುದನ್ನೂ ಈಗ ಸೇರಿಸಲಿಕ್ಕಾಗುವುದಿಲ್ಲ. census ಮುಗಿದ ನಂತರ ಅದರ ಬಗ್ಗೆ ನಾವು ಖಂಡಿತ ಪರಿಶೀಲನೆ ಮಾಡುತ್ತೇವೆ. ಇದನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಅವರು ಬೆಳ್ಳೂರು ಗ್ರಾಮ ಪಂಚಾಯಿತಿ ಬಗ್ಗೆ ಕೇಳಿದರು. ಇಲ್ಲಿ ಎಲ್ಲವನ್ನೂ ಕೇಳುವುದಕ್ಕಾಗುವುದಿಲ್ಲ.

ಶ್ರೀ ಸುರೇಶ್‌ಗೌಡ : ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆಂದರೆ, ಈಗ ಗ್ರಾಮ ಪಂಚಾಯಿತಿ ಚುನಾವಣೆ ಬರುತ್ತಿದೆ, particularly ಬೆಳ್ಳೂರು ಗ್ರಾಮ ಪಂಚಾಯಿತಿಯ ಚುನಾವಣೆ ಇಲ್ಲ. ಅದಕ್ಕೆ ಚುನಾವಣೆ ಬರುವುದಕ್ಕೆ ಇನ್ನೂ ಎರಡೂವರೆ ವರ್ಷ ಸಮಯವಿದೆ. ಏಕೆಂದರೆ, ಅದಕ್ಕೆ ತಡವಾಗಿ ಚುನಾವಣೆಯಾಗಿದೆ. ಜೊತೆಗೆ, ಅದು ಹಿಂದೆ ಪಟ್ಟಣ ಪಂಚಾಯಿತಿಯಾಗಿತ್ತು. ಅದನ್ನು convert ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ, ಅದು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದರಿಂದ ದಯಮಾಡಿ ಅದನ್ನು ಪರಿಗಣಿಸಬೇಕು. ನೀವು ಮುಂದೆ ಯಾವಾಗಲಾದರೂ ಮಾಡಿ. ಆಗ ಇದಕ್ಕೆ ಮೊದಲ ಆದ್ಯತೆ ಮೇಲೆ ಪರಿಗಣಿಸಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ದಿ: 30-03-2011ರೊಳಗೆ ಮಾಡುವು ದಕ್ಕಾಗುವುದಿಲ್ಲ. ಅದಾದನಂತರ, ಖಂಡಿತ ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಮಹದೇವಪ್ಪನವರೆ, ತಾವು ಕೇಳಿದಂತೆ, ಚಾಮನಹಳ್ಳಿ ವಿಷಯವನ್ನು ಈ census ಮುಗಿದ ನಂತರವೇ ಪರಿಶೀಲನೆ ಮಾಡಲಿಕ್ಕಾ ಗುತ್ತದೆ. ಸರ್ಕಾರ ಖಂಡಿತ ಪರಿಶೀಲನೆ ಮಾಡುತ್ತದೆ.

ಶ್ರೀ ಸುರೇಶ್ ಗೌಡ : ನಗರಗಳಲ್ಲಿ extension ಗಳು ಬೆಳೆಯುತ್ತಿವೆ. ಆ extension ಗಳು ಆ ಗ್ರಾಮಕ್ಕೆ ಸೇರಿಕೊಳ್ಳುತ್ತವೆ.

ಅಧ್ಯಕ್ಷರು : ಮಾನ್ಯ ಎ. ಮಂಜುರವರೆ, ತಮ್ಮ ಪ್ರಶ್ನೆಯನ್ನು ಮಾನ್ಯ ಲೋಕೋಪಯೋಗಿ ಸಚಿವರ ಬಂದ ಮೇಲೆ ತೆಗೆದುಕೊಳ್ಳುತ್ತೇನೆ.

ಲಿಂಗಸುಗೂರು ಟಿ.ಸಿ.ಗಳ ವಿವರ ಹಾಗೂ ಅವುಗಳನ್ನು ವಿತರಣೆ ಮಾಡದಿರುವುದು

29 (296) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ತಾಲ್ಲೂಕಿಗೆ ಕೊಟ್ಟ ಟಿ.ಸಿ.ಗಳು ಎಷ್ಟು?

ಆ) ಅಭಿವೃದ್ಧಿ ವ್ಯವಸ್ಥೆಯಲ್ಲಿ (ಸಿಸ್ಟಮ್ ಇಂಪ್ರೂಮೆಂಟ್)ನಲ್ಲಿ ಮಸ್ಕಿ ಕ್ಷೇತ್ರಕ್ಕೆ ಎರಡು ವರ್ಷಗಳಿಂದ ಟಿ.ಸಿ. ಕೊಡದೆ ಇರುವುದಕ್ಕೆ ಕಾರಣವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಲಿಂಗಸುಗೂರು ತಾಲ್ಲೂಕಿಗೆ (ಮಾಹೆ ಏಪ್ರಿಲ್-09 ರಿಂದ ಜನವರಿ-10 ವರೆಗೆ) ಹೊಸ ಕಾಮಗಾರಿಗಳಿಗೆ ಕೊಟ್ಟಿರುವ ಟಿ.ಸಿ.ಗಳ ಸಂಖ್ಯೆ: 18 ಸುಟ್ಟು ಹೋಗಿರುವ ಟಿ.ಸಿ.ಗಳ ಬದಲಾಯಿಸುವುದಕ್ಕೆ 172 ಮತ್ತು ಅಭಿವೃದ್ಧಿ ಕೆಲಸಕ್ಕೆ 8 ಟಿ.ಸಿ.ಗಳನ್ನು ಕೊಡಲಾಗಿದೆ.

ಅ) ಅಭಿವೃದ್ಧಿ ವ್ಯವಸ್ತೆಯಲ್ಲಿ (ಸಿಸ್ಟಮ್ ಇಂಪ್ರೂಮೆಂಟ್)ನಲ್ಲಿ ಮಸ್ಕಿ ಕ್ಷೇತ್ರದಲ್ಲಿ 2008-09 ಸಾಲಿನಲ್ಲಿ 22 ಮತ್ತು 2009-10ನೇ ಸಾಲಿನಲ್ಲಿ 4 ಪರಿವರ್ತಕಗಳನ್ನು ಅಳವಡಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಅನಿರೀಕ್ಷಿತವಾಗಿ ಸಂಭವಿಸಿದ ಪ್ರವಾಹದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ವಿತರಣಾ ಪರಿವರ್ತಕಗಳು

ವಿಫಲಗೊಂಡಿರುತ್ತವೆ. ಸಾರ್ವಜನಿಕರಿಗೆ ವಿದ್ಯುತ್ತಿನ ತೊಂದರೆ ಆಗದಂತೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಿ ಪುನರ್ ಸಂಪರ್ಕ ನೀಡುವ ದೃಷ್ಟಿಯಿಂದ ಲಭ್ಯವಿರುವ ಪರಿವರ್ತಕಗಳನ್ನು ವಿಫಲಗೊಂಡ ಪರಿವರ್ತಕ ಗಳನ್ನು ಬದಲಾಯಿಸುವ ಕಾರ್ಯಕ್ಕೆ ನೀಡಲಾಗಿದೆ.

ಶ್ರೀ ಮಾನಪ್ಪ ವಜ್ಜಲ(ಪ್ರತಾಪಗೌಡ ಪಾಟೀಲ್ ಪರವಾಗಿ): ಮಾನ್ಯ ಅಧ್ಯಕ್ಷರೆ, ಆದರೆ, ಸಮಸ್ಯೆ ಏನೆಂದರೆ, ಮಸ್ಕಿ ಕ್ಷೇತ್ರ ನನ್ನ ಲಿಂಗಸುಗೂರು ಕ್ಷೇತ್ರಕ್ಕೆ ಸಮೀಪವಾದ ಕ್ಷೇತ್ರವಾಗಿದೆ. ಮಸ್ಕಿ ಕ್ಷೇತ್ರಕ್ಕೆ 2 ವರ್ಷಗಳಿಂದ System improvement ಮಾಡುವ ಸಲುವಾಗಿ ಇನ್ನೂ T.C. ಕೊಟ್ಟಿಲ್ಲ. ಅಲ್ಲಿರುವ ಪರಿಸ್ಥಿತಿ ಏನಾಗಬೇಕು? ಅಲ್ಲಿ improvement ಹೇಗಾಗಬಹುದು? ಇವತ್ತು ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ. ವಿಶೇಷವಾಗಿ ಅದು ಹಿಂದುಳಿದ ಕ್ಷೇತ್ರವಾಗಿದೆ. ಅದು SC/ST ಜನ ಹೆಚ್ಚು ವಾಸ ಮಾಡುವ ಕ್ಷೇತ್ರವಾಗಿದೆ. ಆ ಜನರಿಗೆ, ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುವ ಜನರಿಗೆ ಬೆಳಕಿಲ್ಲದ ಪರಿಸ್ಥಿತಿಯಾಗಿದೆ.

ಏನು ಉದ್ದೇಶವೆಂದರೆ, ಎರಡು ವರ್ಷಗಳಿಂದ T.C. ಕೂಡ supply ಮಾಡಲಿಲ್ಲವೆಂದರೆ ಅನ್ಯಾಯವಾಗುತ್ತದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಲಿಂಗಸುಗೂರು ಮತ್ತು ಮಸ್ಕಿ ಕ್ಷೇತ್ರಗಳಿಗೆ ಹೆಚ್ಚು ಗಮನ ಕೊಟ್ಟು ಅಲ್ಲಿರುವ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು. ಎರಡನೆಯದಾಗಿ, ಈಗಿರುವ ಪರಿಸ್ಥಿತಿ ಏನೆಂದರೆ T.C. ಸುಟ್ಟರೆ ಅದು repair ಆಗಿ ಮತ್ತೆ ಅಳವಡಿಸಬೇಕೆಂದರೆ ಅಧಿಕಾರಿಗಳು 2–3 ತಿಂಗಳು ಸಮಯ ತೆಗೆದುಕೊಳ್ಳುತ್ತಾರೆ. ಅಷ್ಟು ತಡವೇಕೆ ಆಗುತ್ತದೆ ಎಂಬ ಬಗ್ಗೆ ಸರ್ಕಾರ ಉತ್ತರದಲ್ಲಿ ತಿಳಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಪ್ರತಾಪಗೌಡ ಪಾಟೀಲ್‌ರವರ ಪ್ರಶ್ನೆಗೆ ಸರ್ಕಾರ ಈಗಾಗಲೇ ಉತ್ತರಿಸಿದೆ. ಉತ್ತರದಲ್ಲಿ ತಿಳಿಸಿರುವ ಹಾಗೆ 2008–09ನೇ ಸಾಲಿಗೆ 22 Transformer ಗಳನ್ನು ಈಗಾಗಲೇ ಒದಗಿ ಸಿದ್ದೇವೆ. 2009–10ನೇ ಸಾಲಿಗೆ 4 transformer ಗಳನ್ನು ಒದಗಿಸಿದ್ದೇವೆ. ಇಷ್ಟಾದರೂ ಕೂಡ ಆ ಕ್ಷೇತ್ರದಲ್ಲಿರುವ specific ಸಮಸ್ಯೆ ಬಗ್ಗೆ ಹೇಳಿದ್ದಾರೆ. ಅದನ್ನು ನಾನು GESCOM ನವರಿಗೆ ಹೇಳಿ ಅದಕ್ಕೆ ಪರಿಹಾರ ಕಂಡುಹಿಡಿ ಯುತ್ತೇವೆಂಬ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ.

ನಂದಿಕೂರು – ಶಾಂತಿ ಗ್ರಾಮ ಜೋಡಿ ವಿದ್ಯುತ್ ಲೈನ್

30 (120) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ನಂದಿಕೂರಿನಿಂದ ಹಾಸನ ಜಿಲ್ಲೆಯ ಶಾಂತಿ ಗ್ರಾಮದವರೆಗೆ ನಿರ್ಮಾಣ ಮಾಡಲು ಉದ್ದೇಶಿಸಿರುವ 400 ಕೆ.ವಿ. ಪ್ರತ್ಯೇಕವಾದ ಜೋಡಿ ವಿದ್ಯುತ್ ಪ್ರಸರಣ ಮಾರ್ಗ 1 ಮತ್ತು 2ರ ಕಾಮಗಾರಿ ಬಗ್ಗೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ಉದ್ದದ ಲೈನ್ ಅಳವಡಿಸಲಾಗುವುದು;

ಆ) ವಿದ್ಯುತ್ ಲೈನ್ ಹಾದು ಹೋಗುವ ಮಾರ್ಗದ ಗುರುತನ್ನು ಹಾಕಲಾಗಿದೆಯೇ;

ಇ) ಒಟ್ಟು ಎಷ್ಟು ಕಂಬಗಳನ್ನು ಅಳವಡಿಸಲಾಗುವುದು;

ಈ) ಖಾಸಗಿ ಭೂಮಿಯಲ್ಲಿ ಲೈನ್ ಹಾದು ಹೋಗುವುದಾದಲ್ಲಿ ಭೂಮಿಯ ಮಾಲೀಕರಿಗೆ ಪರಿಹಾರ ನೀಡಲಾಗುವುದೇ;

ಉ) ಪರಿಹಾರವನ್ನು ಯಾವ ಆಧಾರದಲ್ಲಿ ಯಾವ ದರದಲ್ಲಿ ನೀಡಲಾಗುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಉಡುಪಿ ಜಿಲ್ಲೆಯ ನಂದಿಕೂರಿನಿಂದ ಹಾಸನ ಜಿಲ್ಲೆಯ ಶಾಂತಿ ಗ್ರಾಮದವರೆಗ ನಿರ್ಮಣ ಮಾಡಲು ಉದ್ದೇಶಿಸಿರುವ 400 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವು ಒಟ್ಟು 180.026 ಕಿ.ಮೀ.ಗಳಷ್ಟು ಉದ್ದವಿದ್ದು, ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 53.029 ಕಿ.ಮೀ. ನಷ್ಟು ಉದ್ದಕ್ಕೆ ಹಾದು ಹೋಗಲಿದೆ.

ಆ) ಹೌದು.

ಇ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 159 ವಿದ್ಯುತ್ ಗೋಪುರಗಳನ್ನು (ಟವರ್‌ಗಳು) ನಿರ್ಮಿಸಲಾಗುವುದು. ಇಲ್ಲಿಯವರೆಗೆ ಒಟ್ಟು 54 ಸ್ಟಬ್‌ಗಳನ್ನು ಹಾಕಲಾಗಿದ್ದು, 2 ಟವರ್‌ಗಳನ್ನು ನಿರ್ಮಿಸಲಾಗಿದೆ.

ಈ) ಹೌದು.

ಉ) ಖಾಸಗಿ ಭೂಮಿಯಲ್ಲಿ ಮಾರ್ಗವು ಹಾದು ಹೋದಲ್ಲಿ, ನಿರ್ಮಾಣ ಕಾರ್ಯ ಮಾಡುವ ಸ್ಥಳದಲ್ಲಿ ಬೆಳೆದಿರುವ ಗಿಡ, ಮರ ಮತ್ತು ಬೆಳೆ ಹಾನಿಯಾದಲ್ಲಿ, ತೋಟಗಾರಿಕೆ ಇಲಾಖೆ ಮತ್ತು ಅರಣ್ಯ ಇಲಾಖೆ ಯವರ ಸಹಯೋಗದೊಂದಿಗೆ ನಷ್ಟ ಪರಿಹಾರವನ್ನು ನಿಗದಿಪಡಿಸಿ,

ಅದರಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಪರಿಹಾರವನ್ನು ನೀಡುತ್ತಿದೆ. ಇಲ್ಲಿಯವರೆಗೆ ಬೆಳ್ತಂಗಡಿ ತಾಲ್ಲೂಕಿನಲ್ಲಿ 54 ಸ್ಟಬ್‌ಗಳನ್ನು ಹಾಕಿರುವ ಜಮೀನಿನ 44 ಭೂ ಮಾಲೀಕರಿಗೆ ಒಟ್ಟು 68.27 ಲಕ್ಷ ನಷ್ಟ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ. ಉಳಿದ 105 ಸ್ಟಬ್‌ಗಳನ್ನು ಹಾಕಬೇಕಾಗಿದ್ದು, ಜಮೀನಿನ ಮಾಲೀಕರುಗಳಿಗೆ ಪರಿಹಾರವನ್ನು ವಿತರಿಸಬೇಕಾಗಿರುತ್ತದೆ.

ಶ್ರೀ ಹೆಚ್.ಗೋಪಾಲ ಭಂಡಾರಿ (ಶ್ರೀ ವಸಂತ ಬಂಗೇರರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ನಂದಿಕೂರಿನಿಂದ ಶಾಂತಿಗ್ರಾಮದ ವರೆಗೆ line ಎಳೆಯುವಾಗ ಕಾರ್ಕಳ ತಾಲ್ಲೂಕು, ಮೂಡಬಿದಿರೆ, ಬೆಳ್ತಂಗಡಿ ಇಷ್ಟು ಕಡೆಗಳಲ್ಲಿ ಅದು ಹಾದುಹೋಗುತ್ತದೆ. ಇಂಥ ಕಡೆಗಳಲ್ಲಿ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಎಲ್ಲರಿಗೂ ಪರಿಹಾರ ಸಿಕ್ಕಿಲ್ಲ. ಅದರ ಬಗ್ಗೆ ಸ್ಪಷ್ಟ ಮಾಹಿತಿಯೂ ಕೂಡ ಸಿಕ್ಕುತ್ತಿಲ್ಲ. ಈ ಸಮಸ್ಯೆಗಳ ಗಾಂಭೀರ್ಯತೆ ನನಗೆ ಅರ್ಥವಾಗಿದೆ. KMR ಕೇಂದ್ರ ಕಾರ್ಕಳದಲ್ಲಿದೆ. ಅಲ್ಲಿರುವ 11 ಲೈನ್‌ಗಳು ಈ ರೀತಿಯಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಹಾದುಹೋಗುತ್ತಿವೆ. ಅಲ್ಲಿರುವ ರೈತರಿಗೆ ಅಥವಾ ಮನೆ ಕಳೆದುಕೊಂಡವರಿಗೆ, ಕೃಷಿ ಬೆಳೆ ಕಳೆದುಕೊಂಡವರಿಗೆ ಯಾವ ಮಾಹಿತಿಯೂ ಕೊಡದೆ ದಿಢೀರನೆ ಬಂದು ಕಂಬ ನೆಡುತ್ತಾರೆ. ಆಮೇಲೆ ಅವರು ಒದ್ದಾಡಿ ತಿರುಗಾಡಿ ಕೊನೆಗೆ ಯಾವತ್ತಾದರೂ ಒಂದಿಷ್ಟು ಪರಿಹಾರ ಕೊಡುತ್ತಾರೆ. ಆದ್ದರಿಂದ, ಸ್ಪಷ್ಟವಾಗಿ ಕಂಬವನ್ನು ನೆಡುವಾಗ ಸರ್ವೆ ಮಾಡುವಾಗ ಅಲ್ಲಿ ಎಷ್ಟು ಜಾಗ ಹೋಗುತ್ತದೆ ಅದರಲ್ಲಿ ಎಷ್ಟು ಪರಿಹಾರ ಕೊಡುತ್ತೀರಿ ಈ ಬಗ್ಗೆ ಜನರಿಗೆ ಮಾಹಿತಿ ಕೊಟ್ಟ ನಂತರ ಕೆಲಸ ಪ್ರಾರಂಭ ಮಾಡುವುದು ಬಹಳ ಸೂಕ್ತವೆಂಬುದು ನನ್ನ ಅಭಿಪ್ರಾಯವಾಗಿದೆ. ಈ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಇನ್ನು 6 ತಿಂಗಳೊಳಗೆ ಉಡುಪಿ ಜಿಲ್ಲೆಯ ನಂದಿಕೂರು plant ಅನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ 400 KV line ಎಳೆಯಬೇಕಾಗಿದ್ದು 180 ಕಿ.ಮೀಟರ್ ದೂರವಿದೆ. ಆ 180 ಕಿ.ಮೀ ದೂರದಲ್ಲಿ forest ಬರುತ್ತದೆ. ಆದ್ದರಿಂದ, Forest Department ನಿಂದ clearance ತೆಗೆದುಕೊಂಡಿದ್ದೀರಾ? 4 ತಿಂಗಳು ಕೆಲಸ ಮುಗಿಸಿ 600 MW ವಿದ್ಯುತ್ ಅನ್ನು 4 ತಿಂಗಳಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಒಂದು ಪಕ್ಷ

ಇವರು 600 MW ವಿದ್ಯುತ್ ಅನ್ನು ತೆಗೆದುಕೊಳ್ಳದಿದ್ದರೆ agreement ಪ್ರಕಾರ ಪ್ರತಿ unit ಗೆ 2.50 ರೂ.ನಂತೆ ನಾಗಾರ್ಜುನ ಕಂಪನಿಯವರಿಂದ ವಿದ್ಯುತ್ ತೆಗೆದುಕೊಳ್ಳಲಿ ಬಿಡಲಿ ಸರ್ಕಾರ ಹಣ ಕೊಡಬೇಕಾಗುತ್ತದೆ. ಈ ಯೋಜನೆ ಎಷ್ಟು ವರ್ಷಗಳಲ್ಲಿ ಮುಗಿಯುತ್ತದೆ? ಕೆಲಸ ಪ್ರಾರಂಭವಾ ಗಿದೆಯೇ? 180 ಕಿ.ಮೀ.ನಲ್ಲಿ ಎಷ್ಟು ಕಿ.ಮೀಟರ್ ವರೆಗೆ ಕೆಲಸ ಪ್ರಾರಂಭವಾಗಿದೆ? ಇನ್ನೂ ಎಷ್ಟು ಕಿ.ಮೀಟರ್ ಕೆಲಸ ಆಗಬೇಕಾಗಿದೆ? ಇದು ಯಾವಾಗ ಪೂರ್ಣವಾಗುತ್ತದೆ? ಈ ಬಗ್ಗೆ ಹೇಳಬೇಕೆಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ವಸಂತ ಬಂಗೇರರವರು ವಿಶೇಷ ಪರಿಹಾರದ ಬಗ್ಗೆ ಕೇಳಿದ್ದಾರೆ. ಹೊಲಗಳಲ್ಲಿ, ಜಮೀನುಗಳಲ್ಲಿ tower ಹಾಕುವಾಗ ದಿಢೀರನೆ ಬಂದು ಹಾಕುತ್ತಾರೆಂದು ಹೇಳಿದ್ದಾರೆ. ಖಾಸಗಿ ಭೂಮಿಯಲ್ಲಿ ಎಲ್ಲಿ ವಿದ್ಯುತ್ ಮಾರ್ಗ ಹಾದು ಹೋಗುತ್ತದೆ ಅಲ್ಲಿ tower ಹಾಕುವಾಗ ಎಷ್ಟು crop loss ಆಗುತ್ತದೆ, ಅದಕ್ಕೆ ಪರಿಹಾರ ಕೊಡುವ ನೀತಿ ನಿಲುವು KPTCL ನಲ್ಲಿದೆ. ಅದರ ಪ್ರಕಾರ ಎಷ್ಟೆಷ್ಟು crop loss ಆಗಿದೆ, ಅದಕ್ಕೆ ಸಂಪೂರ್ಣ ಪರಿಹಾರ ಕೊಡುತ್ತೇವೆ. ಇದು KRTCL ನಿಂದ ಮುಂಚಿನಿಂದಲೂ ಇರುವ ಪದ್ಧತಿಯಾಗಿದೆ. ಇದು ನಮ್ಮ ರಾಜ್ಯದಲ್ಲಿ ಅಲ್ಲ. ಇಡೀ ದೇಶದಲ್ಲಿ ವಿಶೇಷವಾಗಿ ವಿದ್ಯುತ್ ಮಾರ್ಗಗಳನ್ನು ಹಾಕುವಾಗ ಎಲ್ಲೆಲ್ಲಿ tower and poll ಗಳನ್ನು ಹಾಕಲಾಗುತ್ತದೆ, ಅಲ್ಲಿ ಎಷ್ಟು crop loss ಆಗುತ್ತದೆ ಅದಕ್ಕೆ ಮಾತ್ರ ಪರಿಹಾರ ಕೊಡುವ ನೀತಿ ಇದೆ. ಇದನ್ನು ಕಟ್ಟುನಿಟ್ಟಾಗಿ ನಮ್ಮ ರಾಜ್ಯದಲ್ಲಿಯೂ ಅನುಸರಿಸುತ್ತಿದ್ದೇವೆ. ಎಲ್ಲಿ ಪರಿಹಾರ ಸಿಗಲಿಲ್ಲವೆನ್ನುವ ಮಾಹಿತಿ ಕೊಟ್ಟರೆ ಅದನ್ನು ಸರಿಪಡಿಸಿ ಕೂಡಲೆ ಪರಿಹಾರ ಕೊಡುವ ಕಾರ್ಯ ಮಾಡುತ್ತೇವೆ. ಎರಡನೆಯದಾಗಿ, ಮಾನ್ಯ ರೇವಣ್ಣನವರು ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ, ನಾಗಾರ್ಜುನ ಕಂಪನಿಯವರಿಗೆ ನಷ್ಟ ಭರಿಸಿಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ಯೋಜನೆ ಏನಿದೆ, ಈ ಕಾಮಗಾರಿ ಏನಿದೆ, ಇದನ್ನು ಸೆಪ್ಟೆಂಬರ್ 2010ನೇ ಇಸವಿಯೊಳಗೆ ಸಂಪೂರ್ಣಗೊಳಿಸುತ್ತಿದ್ದೇವೆ. ನಾವು ಹಾಕುತ್ತಿರುವ ಮಾರ್ಗದಲ್ಲಿ forest area ಯಾವುದೂ ಬರುತ್ತಿಲ್ಲ, ಆ ಸಮಸ್ಯೆ ಇಲ್ಲ. ನಿರ್ದಿಷ್ಟ, ನಿಗದಿತ ಸಮಯದಲ್ಲಿ ಈ ಯೋಜನೆಯನ್ನು ಮುಗಿಸಿಕೊಡುತ್ತೇವೆ. ಯಾವುದೇ ನಷ್ಟ ಭರಿಸುವ ಸಂದರ್ಭ ಉದ್ಭವಿಸುವುದಿಲ್ಲ.

ಶ್ರೀ ಸಿ.ಟಿ.ರವಿ : ಇಡೀ ದೇಶದಲ್ಲಿ ಬೆಳೆ ಪರಿಹಾರದ ಪಾಲಿಸಿ ಇದೆಯೆಂದು ಹೇಳುತ್ತಿದ್ದಾರೆ. ಆದರೆ, ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಕೊಡದಿರುವುದು ದೊಡ್ಡ ಅನ್ಯಾಯ. ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಕೊಡುವ ಪಾಲಿಸಿಯನ್ನು ಕರ್ನಾಟಕ ಸರ್ಕಾರ ತಂದು ದೇಶಕ್ಕೆ ಒಂದು ಮಾದರಿಯಾಗಬೇಕು. ಇಲ್ಲವೆಂದರೆ, ಆ ರೈತ ಯಾವ ಪಾಪ ಮಾಡಿರುತ್ತಾನೆ? ಲೈನ್ ಹೋಗುತ್ತದೆ ಎಂದ ತಕ್ಷಣ ಭೂಮಿ ಕಳೆದು ಕೊಳ್ಳಬೇಕು. Crop ಗೆ ಮಾತ್ರ ಪರಿಹಾರ ಕೊಡುತ್ತೇವೆ ಎಂದು ಹೇಳುವುದು ಬ್ರಿಟಿಷರ ಕಾಲದ ನೀತಿಯಾಗಿದೆ. ಈ ನೀತಿಯನ್ನು ಈಗಲೂ ಮುಂದುವರಿಸುವುದು ಸೂಕ್ತವಲ್ಲ. ಅದನ್ನು ಬದಲಾಯಿಸಬೇಕು.

ಶ್ರೀ ಹೆಚ್.ಗೋಪಾಲ ಭಂಡಾರಿ : ಸಿ.ಟಿ. ರವಿಯವರು ಹೇಳಿದ ಹಾಗೆ 400 KV line ಅಡಿಯಲ್ಲಿ, ಹತ್ತಿರದಲ್ಲಿ ನಿಲ್ಲಲಿಕ್ಕಾಗುವುದಿಲ್ಲ. ಪಕ್ಕದಲ್ಲಿ ವಾಸ್ತವ್ಯ ಮಾಡುವುದಕ್ಕಾಗುವುದಿಲ್ಲ. Tower ಹಾಕಿದಾಗ ಆ ಜಾಗ ಸಂಪೂರ್ಣವಾಗಿ waste ಆಗುತ್ತದೆ. ಆ tower ಹಾಕಿದ ಜಾಗಕ್ಕೆ ಪರಿಹಾರ ಕೊಡುವುದಿಲ್ಲ. ಆ line ಎಳೆದ ಅಡಿಯಲ್ಲಿ ಯಾವ ಕೃಷಿ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಮನೆ ಕಟ್ಟಲಿಕ್ಕೂ ಆಗುವುದಿಲ್ಲ. ಕೃಷಿ ಮಾಡಿದರೆ ಕಡಿದು ಹಾಕುತ್ತಾರೆ. ಈಗಿರುವ ತೆಂಗಿನ ಮರ, ಅಡಿಕೆ ಮರ ಅದನ್ನೆಲ್ಲ ಈಗಾಗಲೇ ಕಡಿದು ಹಾಕಲಿಕ್ಕೆ ಶುರು ಮಾಡಿದ್ದಾರೆ. Tower ಹಾಕಿದ ಜಾಗಕ್ಕಾದರೂ ಪರಿಹಾರವನ್ನು ರೈತರಿಗೆ ಕೊಡಬೇಕು. ಕೆಲವರಿಗೆ ಅರ್ಧ ಎಕರೆ ಮಾತ್ರ ಜಾಗವಿದ್ದು ಆ ಜಾಗವೂ ಹೋಗುತ್ತದೆ, ಮನೆಯೂ ಹೋಗುತ್ತದೆ, ಈ ಪರಿಸ್ಥಿತಿಯಾಗುತ್ತದೆ. ಅವರು ಹೇಳಿದ ಹಾಗೆ ಹಿಂದಿನ ಕ್ರಮ ಏನಿದೆ ಅದನ್ನು ಮರುಪರಿಶೀಲನೆ ಮಾಡಬೇಕು. ಆ ರೈತರಿಗೆ ಮಾಹಿತಿಯೇ ಇರುವುದಿಲ್ಲ. ಅದನ್ನು ನಾನು ನೋಡಿದ್ದೇನೆ. ತಮಗೆ ಬೇಕಾಗಿದ್ದರೆ ಸಂಬಂಧಪಟ್ಟವರು ಇದ್ದರೆ ಮಾಹಿತಿ ಕೊಡುತ್ತೇನೆ. ಆದರೆ, ರೈತರು ನಮ್ಮ ಹತ್ತಿರ ಬಂದು ಹೇಳಿಕೊಳ್ಳುತ್ತಾರೆ. ನನ್ನ ತಾಲ್ಲೂಕಿನಲ್ಲಿ ಇಂಥ ಲೈನ್‌ಗಳು ಬಹಳಷ್ಟು ಸಂಖ್ಯೆಯಲ್ಲಿ ಹಾದುಹೋಗುತ್ತವೆ. KMR sub station ನಮ್ಮ ಜಿಲ್ಲೆಗೆ ಬರುತ್ತದೆ ಎಂದಕೂಡಲೆ ನಮಗೆ ಬಹಳ ಸಂತೋಷವಾಯಿತು. ಈಗ 11 ಲೈನ್ ಹಾದುಹೋಗುತ್ತಿದ್ದು ಅದರಲ್ಲಿ ಎಲ್ಲಾ ರೈತರ ಜಾಗ ಹೋಗುತ್ತಿದೆ. ಅದರಿಂದಾಗಿ ಮನೆ, ಜಮೀನು ಕಳೆದುಕೊಳ್ಳುವ ರೈತರಿಗೆ ಮಾಹಿತಿಯನ್ನೇ ಕೊಡದೆ ದಿಢೀರನೆ ಬಂದು ಕಂಬ ಹಾಕುತ್ತಾರೆ. ಇದು ಅನ್ಯಾಯ.

ಶ್ರೀ ಎಸ್. ಸುರೇಶ್‌ಕುಮಾರ್ : ನಮಗೆ ವಿದ್ಯುತ್ ಕೂಡ ಬೇಡ. ಪೂರ್ಣಗೊಳಿಸುವುದು ಬೇಡವೇ?

ಶ್ರೀ ಹೆಚ್.ಗೋಪಾಲ ಭಂಡಾರಿ : ವಿದ್ಯುತ್ ಕೊಡುವ ಬಗ್ಗೆ ಆಕ್ಷೇಪವಿಲ್ಲ. ವಿದ್ಯುತ್ ಬೇಕೇ ಬೇಕು.

ಅಧ್ಯಕ್ಷರು : ನೀವು ಪರಿಹಾರ ಕೇಳಿದ್ದೀರಿ, ಅವರು ಉತ್ತರ ಕೊಡಲಿ.

ಶ್ರೀ ಹೆಚ್. ಗೋಪಾಲ ಭಂಡಾರಿ : ಲೈನ್ ಹಾಕುವುದಕ್ಕೆ ನಾವು ಆಕ್ಷೇಪ ಮಾಡಿಲ್ಲ. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಇದೆ. ಆದರೆ, ಭೂಮಿ ಕಳೆದುಕೊಂಡವರಿಗೆ ನ್ಯಾಯ ಕೊಡಿ ಎಂದು ಕೇಳುತ್ತಿದ್ದೇವೆ. ಉದಾಹರಣೆಗೆ, 159 ರಲ್ಲಿ 54ಕ್ಕೆ ಮಾತ್ರ ಪರಿಹಾರ ಕೊಟ್ಟಿದ್ದೀರಿ. ಇನ್ನು ಉಳಿದಿದ್ದಕ್ಕೆ ಪರಿಹಾರ ಕೊಟ್ಟಿಲ್ಲ. ರೈತರಿಗೆ ಮಾಹಿತಿ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಲ್ಲ ಟೈಂನಲ್ಲೂ protest ಮಾಡುತ್ತಾರೆ. ಅಲ್ಲಿಂದ ನೀರು ತರುವುದಕ್ಕೂ ಬಿಡುವುದಿಲ್ಲ. ವಿದ್ಯುತ್ ತರುವುದಕ್ಕೂ ಬಿಡುವುದಿಲ್ಲ. ಎಲ್ಲ partiality.

ಶ್ರೀ ಬಿ.ರಮಾನಾಥ ರೈ: ಮಾಡಿದವರು ಯಾರು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತರುವುದಕ್ಕೆ ಬಿಡುವುದಿಲ್ಲ, ಇಲ್ಲಿ ಬಂದು ವಿದ್ಯುತ್ ಇಲ್ಲವೆಂದು ಹೇಳುತ್ತೀರಿ. ರಮಾನಾಥ ರೈರವರು ಮಂತ್ರಿಯಾಗಿದ್ದರು, ಆಗ ಏನು ಮಾಡುತ್ತಿದ್ದರೆಂದು ಹೇಳಲಿ.

ಅಧ್ಯಕ್ಷರು : ಮಂತ್ರಿಯವರು ಉತ್ತರ ಹೇಳಲಿ.

ಶ್ರೀ ಹೆಚ್. ಗೋಪಾಲ ಭಂಡಾರಿ : ನಾವು ಲೈನ್ ಹಾಕಲಿಕ್ಕೆ ಆಕ್ಷೇಪ ಮಾಡಿಲ್ಲ. ಅವರು ತಪ್ಪು ತಿಳಿದುಕೊಂಡಿದ್ದಾರೆ. ಭೂಮಿ, ಜಮೀನು ಕಳೆದುಕೊಂಡವರಿಗೆ ನ್ಯಾಯ ಕೊಡಿ ಎಂದು ಮಾತ್ರ ಕೇಳುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಗೋಪಾಲ ಭಂಡಾರಿಯವರು ಎರಡು ಆಕ್ಷೇಪಣೆಗಳನ್ನು ಇಟ್ಟಿದ್ದಾರೆ. ಮೊದಲನೆಯದಾಗಿ, ರೈತರಿಗೆ ಇದರ ಮುನ್ಸೂಚನೆ ಇರುವುದಿಲ್ಲ. ಇದ್ದಕ್ಕಿದ್ದ ಹಾಗೆ ಬಂದು ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ.

(12-00PM)

ನಾನು ಇದರ ಬಗ್ಗೆ ಸೂಕ್ತವಾಗಿ ಪರಿಶೀಲಿಸಿ ಸೂಕ್ತವಾದ ಮಾಹಿತಿ ಯಾವ ಹೊಲದಲ್ಲಿ ಹಾದು ಹೋಗುತ್ತದೆ ಅವರಿಗೆ ಮುನ್ಸೂಚನೆ ಕೊಡುವ ರೀತಿ alignment ನಾವು ಕ್ರಮ ತೆಗೆದುಕೊಳ್ಳುತ್ತೇವೆ. Crop loss ಬಗ್ಗೆ

ಕೊಡುತ್ತೇವೆಂದು ಹೇಳಿದ್ದೇವೆ. Indian Telegraphic Act ಪ್ರಕಾರ ಈ ಒಂದು ಕಾರ್ಯ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿದೆ ಮುಂದೆ ಇದರ ಬಗ್ಗೆ ಯಾವ ರೀತಿ ಪರಿಹಾರ ಕೊಡಬಹುದು ಎಂದು ನಾವು ಪರಿಶೀಲಿಸೋಣ. ಮಾನ್ಯ ರೇವಣ್ಣನವರು ಒಂದು ಮಾತು ಹೇಳಿದರು. ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸ ಇತ್ತು. ಈಗೇನು ಈ ಯೋಜನೆಯನ್ನು ಕಾಮಗಾರಿ ಮಾಡುತ್ತಿದ್ದೇವೆ ಅಲ್ಲಿ forest land ಬರುತ್ತಿಲ್ಲ. ಮುಂದೆ forest land ಬರುತ್ತೆ ಅಲ್ಲಿ ಅನುಮತಿ ತೆಗೆದುಕೊಂಡು ಸೆಪ್ಟೆಂಬರ್‌ನಲ್ಲಿ ಈ ಕಾಮಗಾರಿ ಮುಗಿಸುತ್ತೇವೆ.

ಅಧ್ಯಕ್ಷರು : ಪುಟ್ಟರಾಜು ಅವರ ಪರವಾಗಿ ಎಂ.ಟಿ.ಕೃಷ್ಣಪ್ಪನವರು ತಾವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ಅಲ್ಲಿರುವಂಥ ಅಧಿಕಾರಿಶಾಹಿ ಏನು ಇದ್ದಾರೆ ಅವರು ಸ್ವಲ್ಪ ಜಾಗ್ರತೆ ವಹಿಸಬೇಕಾಗುತ್ತದೆ...

ಅಧ್ಯಕ್ಷರು : Please ಕುಳಿತುಕೊಳ್ಳಿ. ನಾನು ಈಗಾಗಲೇ ಬೇರೆ ಪ್ರಶ್ನೆ ಕೇಳಿದ್ದೇನೆ. ಪ್ರತಿಯೊಂದಕ್ಕೂ ಎದ್ದು ನಿಂತರೆ ಹೇಗೆ?

ಬೆಂಗಳೂರಿನಲ್ಲಿ ಕಡಿಮೆ ಆದಾಯವುಳ್ಳವರಿಗೆ ಬಿ.ಡಿ.ಎ.ನಿಂದ ವಿತರಿಸುವ ನಿವೇಶನಗಳು

16 (451) ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 01–5–2008 ರಿಂದ 22–2–2010 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು; (ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು);

ಆ) ಈ ನಿವೇಶನಗಳಲ್ಲಿ ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು (ಬಡಾವಣೆಗಳವಾರು ಮಾಹಿತಿ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ದಿನಾಂಕ: 01–5–2008 ರಿಂದ 22–2–2010 ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ ಮತ್ತು ಈ ಅವಧಿ ಯಲ್ಲಿ ನಿವೇಶನ ಹಂಚಿಕೆಗಾಗಿ ಯಾವುದೇ ಪ್ರಕಟಣೆ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ (ಮಾನ್ಯ ಸಿ.ಎಸ್.ಪುಟ್ಟರಾಜುರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಉತ್ತರಿಸಿದ್ದಾರೆ ಆದರೆ ನಮ್ಮ ಪ್ರಶ್ನೆಗೂ ಉತ್ತರಕ್ಕೂ ಅಸಂಬದ್ಧವಾದ ವಿಚಾರ. BDA ನಿಂದ 1–5–08 ರಿಂದ 22–2–10 ರವರೆಗೆ ಯಾವುದೇ ಸೈಟ್‌ನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಾರೆ. G-category ಯಾವುದು, ಯಾವ layout, ಏನೇನು ಆಗಿದೆ ಎನ್ನುವ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಯಾವ್ಯಾವು layout ನ್ನು ಮಾಡಿದ್ದಾರೆ? ಎಲ್ಲೆಲ್ಲಿ ಕೊಟ್ಟಿದ್ದಾರೆ ಎನ್ನುವ ಮಾಹಿತಿ ನನಗೆ ಸಿಕ್ಕಿಲ್ಲ. ದಯಮಾಡಿ ಮಾನ್ಯ ಸಚಿವರಲ್ಲಿ ವಿನಂತಿ ಏನೆಂದರೆ, ಯಾವ್ಯಾವ layout ನಲ್ಲಿ ಎಷ್ಟೆಷ್ಟು ಸೈಟ್ಸ್ ಬಿಡುಗಡೆಯಾಗಿದೆ? ಯಾರಿಗೆ ಕೊಟ್ಟಿದ್ದೀರಾ? G-category ಕೊಟ್ಟಿದ್ದೀರಾ? ಯಾರ್‍ಯಾರಿಗೆ ಏನೇನು ಕೊಟ್ಟಿದ್ದೀರಾ ಎನ್ನುವುದನ್ನು ಮಾನ್ಯ ಸಚಿವರು ಮಾಹಿತಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸದಸ್ಯರು ಪ್ರಶ್ನೆ ಏನು ಕೇಳಿದ್ದಾರೆಂದರೆ, ಆ category ಈ category ಎಂದಲ್ಲ.

ಅಧ್ಯಕ್ಷರು : ಪ್ರಶ್ನೆ ಬಹಳ specific ಆಗಿ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ನೋಡಿ ಅವರು ಬಹಳ clear cut ಆಗಿ ಕೇಳಿದ್ದಾರೆ. BDA ನಿಂದ ನಿವೇಶನಗಳನ್ನು ಯಾವ್ಯಾವ ಏರಿಯಾದಲ್ಲಿ ಮಾಡಿದಿರಿ? ಅದು ಯಾರಿಗೆ ಕೊಟ್ಟಿದ್ದಾರೆ? ಒಬ್ಬರಿಗೆ ಕೊಟ್ಟಿಲ್ಲವೆಂದರೆ, G-category ಯಲ್ಲಿ ಒಬ್ಬರಿಗೂ ಕೊಟ್ಟಿಲ್ಲವೆ? ಈ ತರಹ ಉತ್ತರ ಕೊಡುವುದಾದರೆ, ಅವರೇನು category ಕೇಳಿದ್ದಾರಾ? (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 1–5–08 ರಿಂದ 22–2–10 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು? ಇದರ ಜೊತೆಗೆ

ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದು ಬಹಳ clear cut ಆಗಿ ಕೇಳಿದ್ದಾರೆ. (2) ಈ ನಿವೇಶನಗಳಲ್ಲಿ ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು? ಬಡಾವಣೆಗಳವಾರು ಮಾಹಿತಿ ನೀಡುವುದು ಎಂದು ಕೇಳಿದ್ದಾರೆ. Middle income ಇರಬಹುದು, clear cut ಆಗಿ ಕೇಳಿದ್ದಾರೆ. ನಿವೇಶನಗಳನ್ನು ಕೊಟ್ಟಿದ್ದೀರೋ ಇಲ್ಲವೋ? ಹಾಗಾದರೆ ಒಂದು ಸೈಟ್ ಕೊಟ್ಟಿಲ್ಲವೆ? G-category ಇರಬಹುದು, ನಾವೇನು ಇಂಥ category ಎಂದೇನು ಹೇಳಿಲ್ಲ. ಕೊಟ್ಟಿಲ್ಲದಿದ್ದರೆ ನಾವು ಯಾವುದು ಕೊಟ್ಟಿಲ್ಲವೆಂದು ಹೇಳಬೇಡಿ. ಕೊಟ್ಟಿದ್ದರೆ ಇಂತಿಂಥ G-category ಯಲ್ಲಿ ಕೊಟ್ಟಿದ್ದೇವೆಂದು ಹೇಳಿ, ಅದಕ್ಯಾಕೆ ಮುಚ್ಚುಮರೆ ಇಡುತ್ತೀರಿ? ಅರ್ಧಂಬರ್ಧ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸುರೇಶ್‌ಕುಮಾರ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಈ ಪ್ರಶ್ನೆಯ ಮೇಲೆ ಹೆಚ್ಚು ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಪ್ರಶ್ನೆ ಇರುವುದು ಬಹಳ ಸಿಂಪಲ್. (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 1–5–08 ರಿಂದ 22–2–10 ರವರೆಗೆ ಹಂಚಿಕೆ ಮಾಡಲಾದ ನಿವೇಶನಗಳು ಸಂಖ್ಯೆ ಎಷ್ಟು? ಇದರ ಜೊತೆಗೆ ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದು ಅದು ಕೂಡ ಬಹಳ specific ಕೇಳಿದ್ದಾರೆ. ಅಂದರೆ general allotment ಎಷ್ಟೆಂದು ಕೇಳಿದ್ದಾರೆ. ಅದಕ್ಕೆ ದಿನಾಂಕ: 1–5–08 ರಿಂದ 22–2–10 ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಯಾವುದೇ ಬಡಾವಣೆಯಲ್ಲಿ general allotment ಎಲ್ಲೂ ಕೂಡ ಮಾಡಿಲ್ಲ. ಈ ಅವಧಿಯಲ್ಲಿ ನಿವೇಶನ ಹಂಚಿಕೆಗಾಗಿ ಯಾವುದೇ ಪ್ರಕಟಣೆ ಹೊರಡಿಸಿರುವುದಿಲ್ಲ. ಈ ಒಂದು ಪ್ರಶ್ನೆಗೆ ಉತ್ತರಿಸಿದ್ದೇವೆ. ನಿವೇಶನಗಳನ್ನು ಹಂಚಿಕೆ ಮಾಡದೇ ಇರುವಾಗ ಈ ನಿವೇಶನಗಳನ್ನು ಕಡಿಮೆ ಆದಾಯವುಳ್ಳವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಉದ್ಭವಿಸುವುದಿಲ್ಲ. ಈಗ ನೀವು ಒಂದು ಪ್ರಶ್ನೆ ಕೇಳುತ್ತಿದ್ದೀರಿ. G-categoryಗೆ ಕೊಟ್ಟಿಲ್ಲವೆ? ಎಷ್ಟು ಕೊಟ್ಟಿದ್ದೀರಿ?

ಶ್ರೀ ಎಂ.ಟಿ.ಕೃಷ್ಣಪ್ಪ : ನಾವು ಕೇಳುತ್ತಿರುವುದು ಯಾವುದೂ ಕೊಟ್ಟಿಲ್ಲವೆಂದಲ್ಲ. General, reservation ಕೇಳುತ್ತಿಲ್ಲ. ಯಾರ್‍ಯಾರಿಗೆ ಯಾವ್ಯಾವ category ಯಲ್ಲಿ ಕೊಟ್ಟಿದ್ದೀರಾ?

ಶ್ರೀ ಸುರೇಶ್ ಕುಮಾರ್ : ಕೃಷ್ಣಪ್ಪನವರೆ, ನೀವು ಈಗ ಕೇಳಿದ supplementary ಯನ್ನು ಒಪ್ಪಿಕೊಳ್ಳುತ್ತೇನೆ. ಈ question ಮೇಲ್ನೋಟಕ್ಕೆ ನೀವು ಬಡಾವಣೆ ಹಾಗೂ ನಿವೇಶನಗಳ ಅಳತೆವಾರು ಮಾಹಿತಿ ನೀಡುವುದು ಎಂದರೆ, it amounts to general allotment ಅಲ್ಲವೇ? ಈಗ ತಾವೇನು ಕೇಳುತ್ತಿದ್ದೀರಿ, G-category ನಲ್ಲಿ ಯಾರ್‍ಯಾರಿಗೆ ಕೊಡುತ್ತಾರೆ, ಯಾವ ರೀತಿ ಕೊಡುತ್ತಾರೆ, ಎನ್ನುವ ಬಗ್ಗೆ ಒಂದು ನೀತಿ ನಿಮಗೆ ಬಹಳ ಚೆನ್ನಾಗಿ ಗೊತ್ತು. ಆ ನೀತಿಯ ಅನ್ವಯ ಆ ನಿಯಮಗಳನ್ವಯ G-category ನಲ್ಲಿ ಈ ಅವಧಿಯಲ್ಲಿ 143 ನಿವೇಶನಗಳನ್ನು ಕೊಡಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಕಾನೂನು ಸಚಿವರು ಒಂದು ಮಾತು ಹೇಳಿದರು. ನನಗೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದರು.

ಅಧ್ಯಕ್ಷರು : ಪ್ರಶ್ನೆ ಅಷ್ಟು specific ಆಗಿ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ರೆಕಾರ್ಡ್‌ಗೆ ಹೋಗುತ್ತದೆ. ಇದುವರೆವಿಗೂ G-category ಯಲ್ಲಾಗಲಿ ಬೇರೆ category ಯಲ್ಲಾಗಲಿ ನನ್ನ ಜೀವನದಲ್ಲಿ ನಾನು ಕೇಳಿಲ್ಲ. ಅದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ

ಅಧ್ಯಕ್ಷರು : ನಿಮಗೆ ಹೇಳಿಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಯಾರ್‍ಯಾರು ಕೇಳಿದ್ದಾರೆ, ಯಾರ್‍ಯಾರಿಗೆ ಕೊಟ್ಟಿದ್ದಾರೆಂದು ಸಾರ್ವಜನಿಕರಿಗೆ ಹೇಳುವುದಕ್ಕೆ ಏಕೆ ಮುಚ್ಚಿಡುತ್ತೀರಿ? ಅದು ಬಿಟ್ಟು ನಿಮಗೆ ಚೆನ್ನಾಗಿ ಗೊತ್ತು ಎಂದರೆ ಅರ್ಥ ಏನು? ನನ್ನ ಜೀವನದಲ್ಲಿ ಇಲ್ಲಿಯವರೆಗೆ G-category ಯಲ್ಲಿ ಅರ್ಜಿ ಹಾಕಿಕೊಂಡು ಹೋಗಿಲ್ಲ.

ಶ್ರೀ ಸುರೇಶ್ ಕುಮಾರ್ : ಮಾನ್ಯ ರೇವಣ್ಣನವರೆ ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ತಾವು ಅರ್ಥ ಮಾಡಿಕೊಳ್ಳಿ. ಅಪಾರ್ಥ ಮಾಡಿಕೊಳ್ಳಬೇಡಿ.

ಶ್ರೀ ಹೆಚ್.ಡಿ.ರೇವಣ್ಣ : ಚೆನ್ನಾಗಿ ಗೊತ್ತು ಎಂದರೆ ಏನು ಅರ್ಥ ಸ್ವಾಮಿ? ನಾವು ಏನಾದರೂ ಸೈಟ್ ತೆಗೆದುಕೊಂಡಿದ್ದೇವೆಯೆ?

ಶ್ರೀ ಸುರೇಶ್ ಕುಮಾರ್ : ಸರ್ಕಾರದಲ್ಲಿ ಇದ್ದವರು. ನಾನು ಆ ರೀತಿಯಲ್ಲಿ ಹೇಳಿಲ್ಲ. ಆ ರೀತಿಯಾಗಿ ಹೇಳಿದ್ದರೆ ನಾನು ವಾಪಸ್ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು : ಈಗ ಆಯಿತು ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ 143 ಸೈಟ್ಸ್ ಹಂಚಿಕೆಯಾಗಿದೆ ಅಲ್ಲವೆ ಅದರ ಬಗ್ಗೆ ವಿವರ ಯಾವಾಗ ಒದಗಿಸುತ್ತೀರಿ?

ಶ್ರೀ ಸುರೇಶ್‌ಕುಮಾರ್ : ಮಾಹಿತಿಯನ್ನು ಸದಸ್ಯರಿಗೆ ಒದಗಿಸುತ್ತೇವೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಬಗ್ಗೆ

17 (511) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಮುಂಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತಿನ ಸಾಮರ್ಥ್ಯವೆಷ್ಟು;

ಆ) ರಾಜ್ಯದಲ್ಲಿ ಅವಶ್ಯಕತೆ ಇರುವ ವಿದ್ಯುತ್ತಿನ ಸಾಮರ್ಥ್ಯವೆಷ್ಟು;

ಇ) ಉತ್ಪಾದನೆಯು ವಿದ್ಯುತ್ತಿಗೂ ಅವಶ್ಯಕತೆಯ ವಿದ್ಯುತ್ತಿಗೂ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಸರಿದೂಗಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಜ್ಯದಲ್ಲಿ ಪ್ರಸ್ತುತ ದಿನವಹಿ ಎಲ್ಲಾ ಮೂಲಗಳಿಂದ 93 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇದಲ್ಲದೆ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ 32 ಮಿಲಿಯನ್ ಯೂನಿಟ್‌ಗಳು ದೊರೆಯುತ್ತಿದ್ದು, ಒಟ್ಟು 125 ಮಿಲಿಯನ್ ಯೂನಿಟ್‌ಗಳು ಲಭ್ಯವಾಗುತ್ತಿದೆ.

ಆ) ಪ್ರಸಕ್ತ ರಾಜ್ಯದ ದಿನವಹಿ ವಿದ್ಯುತ್ ಬೇಡಿಕೆ ಸುಮಾರು 150 ಮಿಲಿಯನ್ ಯೂನಿಟ್‌ಗಳಾಗಿರುತ್ತದೆ.

ಇ) ಹೌದು.

ಈ) ಪ್ರಸಕ್ತ ವರ್ಷವಾದ 2009–10ರಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆ ಸುಮಾರು 51,019 ಮಿಲಿಯನ್ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದ್ದು, ವಿದ್ಯುತ್ ಲಭ್ಯತೆಯ ಪ್ರಮಾಣ ಸುಮಾರು 44, 550 ಮಿಲಿಯನ್ ಯೂನಿಟ್ಟುಗಳೆಂದು ಅಂದಾಜಿಸಲಾಗಿದೆ. ಹೀಗಾಗಿ ಪ್ರಸಕ್ತ

ವರ್ಷವಾದ 2009–10 ರಲ್ಲಿಯೂ ಸಹ ರಾಜ್ಯವು ಸುಮಾರು 6,469 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಕಳೆದ ವರ್ಷವಾದ 2008–09 ರಲ್ಲಿ 1252 ಮೆ.ವ್ಯಾ. ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಹೆಚ್ಚುವರಿಯಾಗಿ ಸೇರ್ಪಡೆಗೊಂಡಿರುತ್ತದೆ.

ತಕ್ಷಣದ ವಿದ್ಯುತ್ ಕೊರತೆ ನೀಗಿಸಲು ಈ ಕೆಳಕಂಡ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ :

- ಫೆಬ್ರವರಿ 2010 ರ ಅಂತ್ಯದಲ್ಲಿ 750 ಮೆ.ವ್ಯಾ.ಗಳಷ್ಟು ಹೆಚ್ಚುವರಿ ವಿದ್ಯುತ್‌ನ್ನು ಖರೀದಿ ಮಾಡಲಾಗಿದೆ. ಮಾರ್ಚ್ 2010 ರಲ್ಲಿ 1,000 ಮೆ.ವ್ಯಾ.ಗಳಷ್ಟು ವಿದ್ಯುತ್‌ನ್ನು ಹೆಚ್ಚುವರಿಯಾಗಿ ಬಾಹ್ಯ ಮೂಲಗಳಿಂದ ಖರೀದಿ ಮಾಡಲಾಗುತ್ತಿದೆ.
- ಪ್ರಸಕ್ತ ವರ್ಷವಾದ 2010ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಿಗೆ ದಿನವಹಿ 750 ಮೆ.ವ್ಯಾ.ಗಳಷ್ಟು ಹೆಚ್ಚುವರಿಯಾಗಿ ವಿದ್ಯುತ್ ಖರೀದಿಸಲು ಸರ್ಕಾರವು ಕ್ರಮಗಳನ್ನು ಕೈಗೊಂಡಿದೆ.

ಅಲ್ಪಕಾಲಿಕ ಕ್ರಮಗಳು :–

- ರಾಯಚೂರು ಶಾಖೋತ್ಪನ್ನ 8ನೇ ವಿದ್ಯುತ್ ಘಟಕ – ಮಾರ್ಚ್ 2010ರ ಅಂತ್ಯಕ್ಕೆ – 250 ಮೆ.ವ್ಯಾ.
- ಉಡುಪಿ ಪವರ್ ಕಾರ್ಪೋರೇಷನ್ ಸಂಸ್ಥೆಯ ಮೊದಲನೆಯ ಘಟಕ (ಏಪ್ರಿಲ್ 2010 ಅಂತ್ಯಕ್ಕೆ) – 600 ಮೆ.ವ್ಯಾ.
- ಅಸಂಪ್ರದಾಯಕ ವಿದ್ಯುತ್ ಮೂಲಗಳಿಂದ (ಗಾಳಿ ವಿದ್ಯುತ್– 450 ಮೆ.ವ್ಯಾ + ಕಿರು ಜಲ – 122 ಮೆ.ವ್ಯಾ) – 572 ಮೆ. ವ್ಯಾ.

ಒಟ್ಟು – 1422 ಮೆ.ವ್ಯಾ

ಮಧ್ಯಮಾವಧಿ ಕ್ರಮಗಳು :–

- ಉಡುಪಿ ಪವರ್ ಕಾರ್ಪೋರೇಷನ್ ಸಂಸ್ಥೆಯ ಎರಡನೆಯ ಘಟಕ (ಆಗಸ್ಟ್ 2010 ಅಂತ್ಯಕ್ಕೆ) – 600 ಮೆ.ವ್ಯಾ.
- ಕೆ.ಪಿ.ಸಿ.ಎಲ್ – 683 ಮೆ.ವ್ಯಾ.

1) ಬಳ್ಳಾರಿ ಶಾಖೋತ್ಪನ್ನ 2ನೇ ವಿದ್ಯುತ್ ಘಟಕ–500 ಮೆ.ವ್ಯಾ.
2) ನಾಗಝರಿ ಪವರ್ ಹೌಸ್(ಉನ್ನತೀಕರಣ)–30 ಮೆ.ವ್ಯಾ
3) ಸೌರಶಕ್ತಿ – 3 ಮೆ.ವ್ಯಾ.
4) ಗಾಳಿ – 150 ಮೆ.ವ್ಯಾ.

- ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲು – 1,079 ಮೆ.ವ್ಯಾ.
- ಅಸಂಪ್ರದಾಯಕ ವಿದ್ಯುತ್ ಮೂಲಗಳಿಂದ – 1,138 ಮೆ.ವ್ಯಾ.

ಒಟ್ಟು – 3,500 ಮೆ.ವ್ಯಾ

ದೀರ್ಘಕಾಲಿಕ ಕ್ರಮಗಳು :–

- ಯರಮರಸ್ ಉಷ್ಣ ವಿದ್ಯುತ್ ಸ್ಥಾವರ – 1600 ಮೆ.ವ್ಯಾ.
- ಯಡ್ಲಾಪುರ ಉಷ್ಣ ವಿದ್ಯುತ್ ಸ್ಥಾವರ – 800 ಮೆ.ವ್ಯಾ.
- ಬಳ್ಳಾರಿ ಶಾಖೋತ್ಪನ್ನ 3ನೇ ಘಟಕ – 600 ಮೆ.ವ್ಯಾ.
- ಬಿಡದಿ ಅನಿಲ ವಿದ್ಯುತ್ ಘಟಕ – 1400 ಮೆ.ವ್ಯಾ.
- ಛತ್ತೀಸ್ ಗಡ ಉಷ್ಣ ವಿದ್ಯುತ್ ಸ್ಥಾವರ – 1600 ಮೆ.ವ್ಯಾ.
- ಬಿಜಾಪುರ ಜಿಲ್ಲೆ ಕುಡಿಗಿ ಪವರ್ ಪ್ರಾಜೆಕ್ಟ್‌ನಲ್ಲಿ (ಎನ್.ಟಿ.ಪಿ.ಸಿ) – 4,000 ಮೆ.ವ್ಯಾ. ಇದರಲ್ಲಿ ರಾಜ್ಯಕ್ಕೆ 2,000 ಮೆ.ವ್ಯಾ. ವಿದ್ಯುತ್ ಲಭ್ಯವಾಗಲಿದೆ.
- ಗುಲ್ಬರ್ಗ ಮತ್ತು ಘಟಪ್ರಭಗಳಲ್ಲಿ ಖಾಸಗೀ ವಲಯದಲ್ಲಿ ವಿದ್ಯುತ್ ಉತ್ಪಾದನಾ ಯೋಜನೆಗಳು – 2,640 ಮೆ.ವ್ಯಾ.
- ತದಡಿ ಅನಿಲ ಘಟಕ – 2100 ಮೆ.ವ್ಯಾ.
- ಗುಂಡ್ಯಾ ಜಲ ವಿದ್ಯುತ್ ಯೋಜನೆ – 400 ಮೆ.ವ್ಯಾ.
- ಶಿವನಸಮುದ್ರ ಜಲ ವಿದ್ಯುತ್ (Seasonal) – 345 ಮೆ.ವ್ಯಾ.
- ಜುರಾಲಾ ಜಲ ವಿದ್ಯುತ್ – 120 ಮೆ.ವ್ಯಾ.
- ಕೇಂದ್ರ ವಿದ್ಯುತ್ ಘಟಕಗಳಿಂದ ರಾಜ್ಯದ ಪಾಲು– 3042 ಮೆ.ವ್ಯಾ.

ಒಟ್ಟು – 16,647 ಮೆ.ವ್ಯಾ.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಲಾಗಿದೆ, ಆದರೆ ಸಮರ್ಪಕವಾಗಿ ಉತ್ತರ ಒದಗಿಸಿಲ್ಲ. ಏಕೆಂದರೆ, ಈಗಾಗಲೇ ನಮ್ಮ ವಿ.ಮುನಿಯಪ್ಪನವರು ಈ ಬಗ್ಗೆ ಪ್ರಶ್ನೆ ಹಾಕಿದ್ದರು. ಈಗಾಗಲೇ KEB ಬಗ್ಗೆ ಸಮರ್ಪಕವಾಗಿ ಯಾವ ರೀತಿ ಕೊಟ್ಟಿದ್ದೀರಿ ಎಂದರೆ, ನಾನು ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್ತಿನ ಸಾಮರ್ಥ್ಯವೆಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಅವರು 125 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಉತ್ತರಿಸಿದ್ದಾರೆ. ಇದರ ಜೊತೆಗೆ ಜಿಲ್ಲಾವಾರು ಮಾಹಿತಿ ಕೊಡಿ ಎಂದು ಕೇಳಿದ್ದೆ, ಆದರೆ ಅನಿವಾರ್ಯವಾಗಿ ಆ ಪ್ರಶ್ನೆ ಇಲ್ಲಿ ಬಂದಿಲ್ಲ. ಏಕೆಂದರೆ, ಪ್ರತಿ ಜಿಲ್ಲಾವಾರು ಗ್ರಾಮೀಣ ಪ್ರದೇಶದಲ್ಲಿ ಯಾವ ರೀತಿ ಸಮರ್ಪಕ ವಿದ್ಯುತ್‌ನ್ನು ಒದಗಿಸಬೇಕು, ಅದೇ ರೀತಿ ಪಟ್ಟಣ ಪ್ರದೇಶಗಳಲ್ಲಿ ನೀವು 6 ಗಂಟೆ ವಿದ್ಯುತ್‌ನ್ನು ಕೊಡುತ್ತೇವೆಂದು ಏನು ಹೇಳಿದಿರಿ, ಅದನ್ನು ಪಟ್ಟಣದಲ್ಲಿ ಎಷ್ಟು ಹೊತ್ತು ಗ್ರಾಮೀಣದಲ್ಲಿ ಎಷ್ಟು ಹೊತ್ತು ಕೊಡುತ್ತೀರೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಸುರೇಶ್‌ಕುಮಾರ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಅಮರೇಶ್‌ರವರು ಕೇಳಿರುವ ಪ್ರಶ್ನೆಗೆ ಸಮರ್ಪಕವಾದ ಉತ್ತರ ಒದಗಿಸಿದ್ದೇವೆ. ಅವರಿಗೆ ಇನ್ನು ಅಸಮರ್ಪಕ ಎನಿಸಿದರೆ ಆ ಅಸಮರ್ಪಕತೆಯನ್ನು ಪೂರೈಸೋಣ. ತಾವು ಎಷ್ಟು ಉತ್ಪಾದನೆಯಾಗುತ್ತಿದೆ ಎಂದು ಕೇಳಿದಕ್ಕೆ ನಾವು ಇಷ್ಟು ಉತ್ಪಾದನೆಯಾಗುತ್ತದೆ ಎಂದು ವಿದ್ಯುತ್ತಿನ ಸಾಮರ್ಥ್ಯ ಕೊಟ್ಟಿದ್ದೇವೆ. ಇದರ ಜೊತೆಗೆ ಇದನ್ನು ಸರಿದೂಗಿಸಲು ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದೀರಿ. ನಾವು short term and long term ಪ್ರಯತ್ನಗಳೆರಡನ್ನು ಹೇಳಿದ್ದೇವೆ. ಈಗಾಗಲೇ ಮಾನ್ಯ ಮುನಿಯಪ್ಪನವರ ಪ್ರಶ್ನೆಗೆ specific ಆಗಿ ಹೇಳಿದ ಹಾಗೆ, ಆಯಾಯ ಭಾಗದಲ್ಲಿ ಎಷ್ಟೆಷ್ಟು ಕರೆಂಟ್‌ನ್ನು ಯಾವ್ಯಾವ ಟೈಂನಲ್ಲಿ ಕೊಡುತ್ತೇವೆನ್ನುವ schedule ಅನ್ನು ಪ್ರಕಟಿಸುತ್ತೇವೆ. ಆ schedule ಪ್ರಕಾರ ಪೂರೈಸುತ್ತೇವೆ.

O. 14 F – 8

ರಾಜ್ಯ ಸರ್ಕಾರ ಮರಳು ವ್ಯಾಪಾರಕ್ಕೆ ರೂಪಿಸಿರುವ ಮಾನದಂಡಗಳ ಬಗ್ಗೆ

18 (450) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಮರಳು ವ್ಯಾಪಾರಕ್ಕೆ ರೂಪಿಸಿರುವ ಮಾನದಂಡಗಳೇನು;

ಆ) ಸ್ಪಷ್ಟವಾದ ಮರಳು ನೀತಿ ನಿಯಮ ಇಲ್ಲದೆ ಇರುವುದರಿಂದ, ಸರ್ಕಾರದ ಬೊಕ್ಕಸಕ್ಕೆ, ಸಾರ್ವಜನಿಕರಿಗೆ ಮತ್ತು ಮರಳು ಉದ್ದಿಮೆಯಲ್ಲಿ ತೊಡಗಿರುವವರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಳು ಉದ್ದಿಮೆಯಲ್ಲಿ ತೊಡಗಿರುವವರಿಗೆ ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಸರ್ಕಾರವು ಗಮನಹರಿಸುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಜ್ಯದಲ್ಲಿ ಮರಳು ಗುತ್ತಿಗೆಯನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ, 1994ರ ನಿಯಮ 21 (2-B) ರಂತೆ ಬಹಿರಂಗ ಹರಾಜು ಮೂಲಕ ನೀಡಲಾಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಐ 58 ಎಂಎಂಎನ್ 2002, ದಿ: 08-11-02 ರಂತೆ ಮರಳು ತೆಗೆದು ಮಾರಾಟ ಮಾಡುವವರಿಗೆ ಮುಂಗಡ ರಾಜಧನ ಪಾವತಿ ಆಧಾರದ ಮೇಲೆ 90 ದಿನಗಳ ಅವಧಿಗೆ ತಾತ್ಕಾಲಿಕ ಪರವಾನಗಿ ನೀಡಲಾಗುತ್ತಿದೆ. ಈ ಅವಧಿ ಮುಗಿದ ನಂತರ ಪುನಃ ಮುಂಗಡ ರಾಜಧನ ಪಾವತಿಸಿ ಪರವಾನಗಿ ಪಡೆಯಬಹುದು. ರಾಜ್ಯದಲ್ಲಿ ಮರಳು ನಿಕ್ಷೇಪಗಳ ಕೊರತೆ ಹಾಗೂ ಮರಳಿಗೆ ಹೆಚ್ಚಿನ ಬೇಡಿಕೆಯಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ ಸಿಐ 250 ಎಂಎಂಎನ್ 2009, ದಿ: 28-08-09 ರಂತೆ ರಾಜ್ಯದಿಂದ ಹೊರರಾಜ್ಯಗಳಿಗೆ ಸಾಮಾನ್ಯ ಮರಳು ಸಾಗಾಣಿಕೆಯನ್ನು ನಿಷೇಧಿಸಲಾಗಿದೆ.

ಆ) ಮರಳು ಗಣಿಗಾರಿಕೆಗಾಗಿ ಚಾಲ್ತಿಯಲ್ಲಿರುವ ನೀತಿ ನಿಯಮಗಳನ್ನು ಮರಳು ಉದ್ದಿಮೆದಾರರು ಮತ್ತು ಬಳಕೆದಾರರು ಅನುಸರಿಸ ಬೇಕಾಗುತ್ತದೆ. ಚಾಲ್ತಿಯಲ್ಲಿರುವ ನಿಯಮಗಳಲ್ಲಿನ ಕುಂದುಕೊರತೆಗಳನ್ನು

ನಿವಾರಿಸಲು ರಾಜ್ಯದಲ್ಲಿ ಹೊಸ ಮರಳು ನೀತಿಯನ್ನು ರೂಪಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಳು ಸಾಗಾಣಿಕೆದಾರರ ಅನುಕೂಲಕ್ಕಾಗಿ ಸರಳವಾದ ತಾತ್ಕಾಲಿಕ ಪರವಾನಗಿ ಪದ್ಧತಿಯನ್ನು ಈಗಾಗಲೇ ಜಾರಿಗೆ ತರಲಾಗಿದೆ. ಮರಳು ಉದ್ದಿಮೆದಾರರು ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಹೊಸ ಮರಳು ನೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ **ಯು.ಟಿ.ಖಾದರ್** : ಮಾನ್ಯ ಅಧ್ಯಕ್ಷರೆ, ಈ ಉತ್ತರ ನೋಡುತ್ತಿರುವಾಗ ಸರ್ಕಾರವು ಪರಿಶೀಲಿಸುತ್ತದೆ, ಇನ್ನೊಂದು ಕಡೆ ಕ್ರಮ ಕೈಗೊಳ್ಳಲಾಗುವುದು, ಎಂದು ಇರುವುದನ್ನು ನೋಡಿದಾಗ ಇದು ಪರಿಶೀಲಿಸುವ ಸರ್ಕಾರ ಮಾತ್ರ ಕ್ರಮ ತೆಗೆದುಕೊಳ್ಳುವ ಸರ್ಕಾರ ಅಲ್ಲ ಎಂದು ನಮಗೆ ಅರ್ಥವಾಗುತ್ತದೆ. ಏಕೆಂದರೆ, ಎಲ್ಲಾ ಕಡೆಗೂ ಆಲೋಚನೆ ಮಾಡಲಾಗುವುದು, ಪರಿಶೀಲಿಸಲಾಗುವುದು, ನೋಡಲಾಗುವುದು, ಇದೆ ಉತ್ತರ ಇದೆ. ಏಕೆಂದರೆ, ನಾವು ಕ್ಷೇತ್ರಗಳಿಗೆ ಹೋದಾಗ ನಿರ್ಧಿಷ್ಟವಾದ ಕ್ರಮ ಹೇಳಬೇಕಾಗುತ್ತದೆ. ಮರಳು ಸಾಗಾಣಿಕೆಯು ಇಡೀ ರಾಜ್ಯವ್ಯಾಪ್ತಿಯ ವಿಷಯ. ಅದು ನನ್ನ ಜಿಲ್ಲೆಯಲ್ಲಿ ನದಿಯ ಪ್ರದೇಶ ಒಂದು, ಇನ್ನೊಂದು ಗಡಿ ಪ್ರದೇಶ. ಇವೆರಡು ನನ್ನ ಕ್ಷೇತ್ರಗಳಿಗೆ ಬರುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಅಲ್ಲಿಯ ಸಮಸ್ಯೆ ಬಹಳ ಗಂಭೀರವಾಗಿದೆ. ಏಕೆ ಈ ಮಾತು ಹೇಳುತ್ತೇನೆಂದರೆ, ಮರಳು ಸಾಗಾಣಿಕೆ ಹೊರ ರಾಜ್ಯಗಳಿಗೆ ನಿಷೇಧಿಸಲಾಗಿದೆ ಎಂದು 2009 ರಲ್ಲಿ ರಾಜ್ಯ ಸರ್ಕಾರ ಒಂದು ಕಾನೂನು ತಂದಿತು. ಇದು ಬರಿ ಕಾನೂನಿನಲ್ಲಿ ಮಾತ್ರ ಇದಲ್ಲದೆ ಇದರ ನಂತರ black market, agents, ಎಂದೆಲ್ಲಾ ಸಮಸ್ಯೆಯಾಗಿ ನಮ್ಮ ಜಿಲ್ಲೆಯ ತಹಶೀಲ್ದಾರ್ ಮತ್ತು ಡಿ.ಸಿ.ಯವರಿಗೆ ಬೇರೆ ಕೆಲಸವಿಲ್ಲ. ಇದನ್ನು ಹೋಗಿ ಹಿಡಿಯುವುದು ನಿಲ್ಲಿಸುವುದೇ ಒಂದು ಕೆಲಸವಾಗಿದೆ, ಆದರೂ ಕೂಡ ಇದನ್ನು ನಿಲ್ಲಿಸುವುದಕ್ಕೆ ಆಗುತ್ತಿಲ್ಲ.

ಎರಡನೆಯದಾಗಿ ಹೇಳುವುದೇನೆಂದರೆ, ಇವತ್ತಿನ ದಿವಸ ಸ್ಥಳೀಯ ವಾಗಿರುವವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮರಳು ಸಿಗುತ್ತಿಲ್ಲ.

ಅಧ್ಯಕ್ಷರು : ತುಂಬಾ ಮಾತನಾಡುವುದಕ್ಕೆ ಹೋಗಬೇಡಿ. ಪೂರಕ ಪ್ರಶ್ನೆ ಮಾತ್ರ ಕೇಳಿ?

ಶ್ರೀ ಯು.ಟಿ.ಖಾದರ್ : 300 ರೂಪಾಯಿ ರಾಯಲ್ಟಿ ಕಟ್ಟಿ ಕೇರಳಾ ರಾಜ್ಯಕ್ಕೆ ತೆಗೆದುಕೊಂಡು ಹೋಗಿ ಒಂದು ಲೋಡ್ ಮರಳಿಗೆ 5 ರಿಂದ 10 ಸಾವಿರ ರೂಪಾಯಿವರೆಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಸ್ಥಳೀಯವರಿಗೆ ಮರಳು ಸಿಗುತ್ತಿಲ್ಲ. ಮಾನ್ಯ ಸಚಿವರಲ್ಲಿ ನನ್ನ ಕೋರಿಕೆ ಏನೆಂದರೆ, ಮರಳಿಗೆ ಸಂಬಂಧಪಟ್ಟಂತೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯ ಸಮಸ್ಯೆ ಇರುತ್ತದೆ. ಇವತ್ತಿನದಿವಸ ಮರಳು ಸಾಗಾಣಿಕೆಯಿಂದ ರಸ್ತೆ ಕೂಡ ಸಂಪೂರ್ಣವಾಗಿ ಹಾಳಾಗುವಂಥ ಪರಿಸ್ಥಿತಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನದಿಗಳಿಂದ ಮರಳನ್ನು ತೆಗೆಯುತ್ತಿದ್ದಾರೆ.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿ. ಈ ರೀತಿಯಾಗಿ ಮಾತನಾಡುತ್ತಾ ಹೋದರೆ ಹೇಗೆ?

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ರಾಜ್ಯದಲ್ಲೆಲ್ಲಾ ಮರಳು ಗಣಿಗಾರಿಕೆ ಎನ್ನತಕ್ಕಂಥದ್ದು ಒಂದು ದೊಡ್ಡ ದಾಂದಲೆಯಾಗಿದೆ. ಆದ್ದರಿಂದ, ಇದಕ್ಕೆ ಒಂದು ಸ್ಪಷ್ಟವಾದ ನೀತಿಯನ್ನು ಸರ್ಕಾರ ಮಾಡಬೇಕು. BBMP and Human Developmentಗೆ ಗಣಿಗಾರಿಕೆ ಸೀಮಿತ ಪ್ರಮಾಣದಲ್ಲಿ ಅಗತ್ಯ ಇದೆ. ಆದರೆ, ಅದನ್ನು ಬಳಸಿಕೊಂಡು ಎಲ್ಲಾ ಕಡೆ ದೊಡ್ಡ ಮಾಫಿಯಾ ತರಹ ಮಾಡಿದ್ದಾರೆ. ಇದು ಟಿ.ನರಸೀಪುರ ಮತ್ತು ಮೈಸೂರು ಜಿಲ್ಲೆಗಳಲ್ಲೆಲ್ಲಾ ಕಡೆ ನಡೆಯುತ್ತಿದೆ. ಆದ್ದರಿಂದ, ಇದಕ್ಕೆ ತಾವು ಸ್ಪಷ್ಟವಾದ ನೀತಿಯನ್ನು ತರಬೇಕು. ಇದಕ್ಕೆ ಸಂಬಂಧಪಟ್ಟಂತೆ ಇರುವ ಟೆಂಡರ್ ಗೈಡ್‌ಲೈನ್ಸ್ ಅನ್ನು ಉಲ್ಲಂಘನೆ ಮಾಡದ ರೀತಿಯಲ್ಲಿ ಸ್ಪಷ್ಟವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು. ನೀರಾವರಿ ಪ್ರದೇಶದಲ್ಲಿ ಲಾರಿಗಳು ಓಡಾಡಿ ಅಲ್ಲಿನ ಮೂಲಭೂತ ಸೌಕರ್ಯಗಳು ಹಾಳಾಗದ ರೀತಿಯಲ್ಲಿ ನೀವು ಒಂದು ಸ್ಪಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇವತ್ತಿನದಿವಸ ರಾಜ್ಯದಲ್ಲಿ ದೊಡ್ಡ ದಾಂದಲೆ ನಡೆಯುತ್ತಿದೆ. ಮತ್ತೆ ಮರಳು ಗಣಿಗಾರಿಕೆಯಿಂದ ಹಣಕಾಸಿನ ವಹಿವಾಟು ಆಗುವುದರಿಂದ ಎಸ್‌ಸಿ: ಎಸ್‌ಟಿ ಜನರಿಗೆ ಮತ್ತು ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗಕ್ಕೆ ಇದರಲ್ಲಿ ಮೀಸಲಾತಿ ಕೊಡುವುದಕ್ಕೆ 2005ನೇ ಇಸವಿಯಲ್ಲಿ ಪ್ರಕ್ಯೂರ್‌ಮೆಂಟ್‌ನಲ್ಲಿ ಮೀಸಲಾತಿ ಕೊಡಬೇಕೆಂದು ನಾವು ಆಜ್ಞೆ ಮಾಡಿದ್ದೆವು. ಆದ್ದರಿಂದ, ಇದನ್ನು incorporate ಮಾಡುವುದರ ಜೊತೆಗೆ

ಇದಕ್ಕೆ ಸ್ಪಷ್ಟವಾದ ನೀತಿಯನ್ನು ಮತ್ತು ನಿರ್ದಿಷ್ಟವಾದ ಕ್ರಮಗಳನ್ನು ತಾವು ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದಂಥ ಯು.ಟಿ.ಖಾದರ್ ರವರು ಮತ್ತು ಡಾ: ಹೆಚ್.ಸಿ.ಮಹದೇವಪ್ಪರವರು ಹೇಳಿದ ಹಾಗೆ ಚಿಕ್ಕಮಗಳೂರು ಜಿಲ್ಲೆ ಸೇರಿದಂತೆ ಮರಳಿನ ದೊಡ್ಡ ಮಾಫಿಯ ರಾಜ್ಯದಲ್ಲಿ ತಲೆ ಎತ್ತಿದೆ. ನನ್ನ ಜಿಲ್ಲೆಯಲ್ಲಿ ಮರಳನ್ನು ಹರಾಜು ಮಾಡುವುದಕ್ಕೆ ಏಳೆಂಟು ತಿಂಗಳಿಂದ ಬಿಟ್ಟಿಲ್ಲ. ಆದರೆ, ಪ್ರತಿ ದಿನ ನೂರಾರು ಲೋಡ್ ಮರಳನ್ನು ಜಿಲ್ಲೆಯಿಂದ ಮತ್ತು ರಾಜ್ಯದಿಂದ ಹೊರಕ್ಕೆ ಹೋಗುತ್ತಿದೆ. ಒಂದು ಲೋಡ್ ಮರಳನ್ನು ತುಂಬಿಕೊಡುವುದಕ್ಕೆ 4 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ. ಹೊರಗಡೆ ಒಂದು ಲೋಡ್‌ಗೆ 12 ರಿಂದ 13 ಸಾವಿರ ರೂಪಾಯಿವರೆಗೆ ಮಾರಾಟ ಮಾಡುತ್ತಾರೆ. ಈ ಒಂದು ದೊಡ್ಡ ಮರಳು ಮಾಫಿಯಾಗೆ ಅಧಿಕಾರಿಗಳು ಮತ್ತು ಪೊಲೀಸ್ ವ್ಯವಸ್ಥೆ ಕೂಡ ಶಾಮೀಲಾಗಿದೆ. ಆದ್ದರಿಂದ, ಮರಳು ಗಣಿ ನೀತಿಯನ್ನು ತಕ್ಷಣ ಜಾರಿಗೆ ತರದಿದ್ದರೆ ಇದೊಂದು ದೊಡ್ಡ ಮಾಫಿಯಾ ಆಗಿ ಈ ಮಾಫಿಯಾಗಳೇ ನಮ್ಮನ್ನು ಆಳುವುದಕ್ಕೆ ಪ್ರಾರಂಭವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಇದರಿಂದ ರಸ್ತೆಗಳು ಹಾಳಾಗುತ್ತಿವೆ ಮತ್ತೆ ಬರತಕ್ಕಂಥ ರಾಜಧನವೂ ಕೂಡ ತಪ್ಪಿ ಹೋಗುತ್ತಿದೆ. ಆದ್ದರಿಂದ, ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಕಡೂರಿನಲ್ಲಿ ಮರಳಿನ ಕ್ವಾರಿಗಳಿಲ್ಲ. ಏಕೆಂದರೆ, ಅಲ್ಲಿ ಯಾವುದೇ ಮೂಲಗಳಿಲ್ಲ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಿಂದ ಕಡೂರು ತಾಲ್ಲೂಕಿಗೆ ಮರಳು ಸಾಗಾಣಿಕೆಯಾಗ ಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೆ, ಅವರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿ. ಅವರು ಮಂಗಳೂರಿಗೆ ಸಂಬಂಧ ಪಟ್ಟಂತೆ ಪ್ರಶ್ನೆ ಕೇಳಿದ್ದಾರೆ. ಆದ್ದರಿಂದ, ನೀವು ಕಡೂರಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಈ ಸಂದರ್ಭದಲ್ಲಿ ನಾನು ಹೇಳುವುದೇ ನೆಂದರೆ, ಈ ಕ್ವಾರಿಗಳಿಗೆ ಲೈಸೆನ್ಸ್ ಕೊಡುವುದಾದರೆ ಕೊಡಿ. ಆದರೆ, ಇವತ್ತಿನ ದಿವಸ ಸಣ್ಣ ಜನತಾ ಮನೆಗಳನ್ನು ಕಟ್ಟುವುದಕ್ಕೆ ಟ್ರಾಕ್ಟರ್‌ನಲ್ಲಿ ಮರಳು ತೆಗೆದುಕೊಂಡು ಹೋಗುವವರಿಗೆ ತಹಶೀಲ್ದಾರ್ ಮತ್ತು ಪೊಲೀಸ್‌ನವರು

ಹಿಡಿದುಕೊಂಡು ಸುಮಾರು 2000 ರೂಪಾಯಿವರೆಗೆ ದಂಡ ಹಾಕುತ್ತಿದ್ದಾರೆ. ಹೊರ ರಾಜ್ಯಗಳಿಗೆ ಮರಳನ್ನು ಸಾಗಿಸಬಾರದೆಂದು ನೀವು ಕಾನೂನನ್ನು ಮಾಡಿದ್ದರೂ ಕೂಡ ಅಲ್ಲಿ ಸ್ಥಳೀಯವಾಗಿರುವಂಥ ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳಿ?

ಶ್ರೀ ಕೆ.ಎಂ.ಕೃಷ್ಣಮೂರ್ತಿ : ನಾನು ಪ್ರಶ್ನೆಯನ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಇದು ಪ್ರಶ್ನೆ ಆಗುವುದಿಲ್ಲ. ನೀವು ಉಪ ಪ್ರಶ್ನೆ ಕೇಳುವುದಾದರೆ ನಾನು allow ಮಾಡುತ್ತೇನೆ. ನೀವು ಈ ರೀತಿಯಾಗಿ ಮಾತಿಗೆ ನಿಂತರೆ ಹೇಗೆ? ಮಾನ್ಯ ಸಚಿವರೆ, ಉತ್ತರ ಕೊಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಕೃಷ್ಣಾ ನದಿಯಲ್ಲಿ ಈ ದಂಧೆ ನಡೆಯುತ್ತಿದೆ. ಒಂದು ಬೋಟ್ ಹಾಕಿ ಮರಳು ತೆಗೆಯುವುದಕ್ಕೆ ನನ್ನ ಕ್ಷೇತ್ರದ ಪಕ್ಕದಲ್ಲಿರುವ ಮಹಾರಾಷ್ಟ್ರ ರಾಜ್ಯದಲ್ಲಿ ಪರವಾನಿಗೆಯನ್ನು ಕೊಟ್ಟಿದ್ದಾರೆ. ಆದರೆ, ನಮ್ಮಲ್ಲಿ ಬೋಟ್ ಹಾಕಿಕೊಳ್ಳುವುದಕ್ಕೆ ಅನುಮತಿ ಇಲ್ಲ. ಇದಕ್ಕೆ ಸರ್ಕಾರ ಅನುಮತಿ ಕೊಡದಿದ್ದರೂ ಸಹ ಇವತ್ತಿನದಿವಸ ನೂರಾರು ಬೋಟ್‌ಗಳನ್ನು ಹಾಕಿಕೊಂಡು ಅನಧಿಕೃತವಾಗಿ ಮರಳನ್ನು ತೆಗೆಯುವಂಥ ದಂಧೆ ದಿನನಿತ್ಯ ನಿರಾತಂಕವಾಗಿ ನಡೆಯುತ್ತಿದೆ. ಇದನ್ನು ತಡೆಯಬೇಕು ಏಕೆಂದರೆ, ಉತ್ತರ ಕರ್ನಾಟಕದಲ್ಲಿ ಹೆಚ್ಚು ಮಳೆಯಾಗಿ ಸಾಕಷ್ಟು ಕಟ್ಟಡಗಳು ಬಿದ್ದು ಹೋಗಿವೆ. ಆದ್ದರಿಂದ, ಒಂದು ಬೋಟ್‌ಗೆ ಪರವಾನಿಗೆಯನ್ನು ಕೊಡಿ. ನೂರಾರು ಕೋಟಿ ರೂಪಾಯಿ ಇದರಿಂದ ರಾಜ್ಯದ ಖಜಾನೆಗೆ ರೆವಿನ್ಯೂ ಬರುತ್ತದೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಇದು ನಿಜಕ್ಕೂ ಗಂಭೀರವಾದಂಥ ವಿಷಯವಾಗಿದೆ. ಇದನ್ನು ನಿಮ್ಮ ಜಿಲ್ಲೆಯಲ್ಲಿಯೂ ಕೂಡ ಅನುಭವಿಸುತ್ತಿದ್ದೀರಿ. ಇದರಿಂದ ರಸ್ತೆಗಳು ಸಹ ಹಾಳಾಗುತ್ತಿವೆ ಮತ್ತೆ ಇದರಿಂದ ದೊಡ್ಡ ಮಾಫಿಯ ತಲೆ ಎತ್ತುತ್ತಿದೆ.

ಶ್ರೀ ಸಿದ್ದು ಸವದಿ : ಕೃಷ್ಣಾ ನದಿಯಲ್ಲಿ ಮರಳು ಗಣಿಗಾರಿಕೆ ಮಾಡುವುದಕ್ಕೆ ಅಧಿಕೃತ ಪರವಾನಿಗೆಯನ್ನು ಕೊಟ್ಟು ಮರಳು ತೆಗೆದರೆ ಒಳ್ಳೆಯದಾಗುತ್ತದೆ. ಇದರಿಂದ ರಾಜ್ಯಕ್ಕೂ ಕೂಡ ರೆವಿನ್ಯೂ ಬರುತ್ತದೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯಲ್ಲಿ ಮರಳು ತೆಗೆಯುವುದರಿಂದ ಫ್ಲೋರೈಡ್ ಅಂಶ ಅಧಿಕವಾಗಿದೆ. ಆದ್ದರಿಂದ, ಫ್ಲೋರೈಡ್ ಅಂಶ ಇರುವ ಪ್ರದೇಶಗಳಲ್ಲಿ ಮರಳನ್ನು ತೆಗೆಯಬಾರದೆಂದು ಒಂದು ಸುಗ್ರೀವಾಜ್ಞೆಯನ್ನು ಸರ್ಕಾರ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಜನತಾ ಮನೆ, ದೇವಸ್ಥಾನ ಮತ್ತು ಸರ್ಕಾರಿ ಕಟ್ಟಡಗಳಾದ ಸಮುದಾಯ ಭವನ ಮತ್ತೆ ಬೇರೆ ಬೇರೆ ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೋಸ್ಕರ ಮರಳು ತೆಗೆದುಕೊಂಡು ಹೋಗುವುದಕ್ಕೆ ಕಷ್ಟವಾಗಿದೆ. ಮತ್ತೆ ಜಿಲ್ಲಾ ಪಂಚಾಯತ್ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳಲ್ಲಿ ಮರಳು ಸಾಗಿಸುವುದರಿಂದ ಬಹುಶಃ ಸಂಪೂರ್ಣವಾಗಿ ಈ ರಸ್ತೆಗಳು ಹಾಳಾಗಿವೆ. ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಗಮನಿಸಿ ಇದಕ್ಕೊಂದು ಮರಳು ನೀತಿಯನ್ನು ಮಾಡಬೇಕಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ನದಿಗಳಲ್ಲಿ ದೋಣಿ, ಜೆಸಿಬಿ ಉಪಯೋಗಿಸಿ ಮರಳು ತೆಗೆಯುತ್ತಿದ್ದಾರೆ. ಅಂದರೆ, ಇರುವಂಥ ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಮರಳು ಮಾಫಿಯಾದಿಂದ ಪರಿಸರ ನಾಶವಾಗುತ್ತಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಇದರ ಬಗ್ಗೆ ಸರ್ಕಾರ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿದರೂರ್ ಶ್ರೀಶೈಲಪ್ಪ ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, ಮರಳು ಗಣಿಗಾರಿಕೆ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ವಿಚಾರವಾಗಿದೆ. ಆದ್ದರಿಂದ, ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿ ಕೊಡಿ. ಏಕೆಂದರೆ, ಇವತ್ತಿನ ದಿವಸ ಸರ್ಕಾರಿ ಕೆಲಸಗಳಿಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ನೋಡೋಣ.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಇಲಾಖೆ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಅಂದರೆ, ಮಾನ್ಯ ಖಾದರ್ ರವರಿಂದ ಪ್ರಾರಂಭವಾಗಿ ಡಾ: ಮಹದೇವಪ್ಪ

ರವರು, ಮಾನ್ಯ ಸಿ.ಟಿ.ರವಿ, ಮಾನ್ಯ ಕುಮಾರಸ್ವಾಮಿಯವರು, ಮಾನ್ಯ ಸಂಪಂಗಿಯವರು, ಮಾನ್ಯ ಸಿದ್ದುಸವದಿರೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ ಎರಡು ಅಂಶಗಳನ್ನು ನಾವು ತಿಳಿದುಕೊಳ್ಳ ಬೇಕಾಗಿದೆ. ಮರಳು ಬಹಳ ಅವಶ್ಯಕವಾದಂಥ ಸಾಮಗ್ರಿಯಾಗಿದೆ. ಇದರ ಜೊತೆಗೆ ಇನ್ನೊಂದು ಸತ್ಯ ಏನೆಂದರೆ ಇದರಲ್ಲಿ ದೊಡ್ಡ ದಂಧೆಯೇ ನಡೆಯುತ್ತಿದೆ. ಕೆಲವು ಸದಸ್ಯರು ಇದರ ಬಗ್ಗೆ ಮಾಫಿಯಾ ಎಂಬ ಪದವನ್ನು ಬಳಸಿರುವಂತೆ ಇವತ್ತಿನದಿವಸ ಇದು ನಡೆಯುತ್ತಿದೆ. ಇದನ್ನು ನಾವು ನಿಲ್ಲಿಸಿ ಪರಿಸರ ಮತ್ತು ಮಾನವ ಇವರೆಡನ್ನು ನಾವು ಬ್ಯಾಲೆನ್ಸ್ ಮಾಡಬೇಕು. ಮರಳಿಗೆ ಒಂದು ನೀತಿ ತರಬೇಕೆಂಬುದು ಎಲ್ಲರ ಒಂದು ಒಕ್ಕೊರಲಿನ ಅಭಿಪ್ರಾಯವಾಗಿದೆ. ಇದನ್ನು ಸರ್ಕಾರ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತದೆ. ಮರಳು ಸಾಗಾಣಿಕೆ ಮತ್ತು ಮರಳು ತೆಗೆಯುವದರ ಬಗ್ಗೆ ಒಂದು ನೀತಿಯನ್ನು ತರಬೇಕೆಂಬುದು ಸರ್ಕಾರದ ನಿಲುವು ಕೂಡ ಆಗಿದೆ. ಈಗಾಗಲೇ ಇದರ ಬಗ್ಗೆ ನಾವು ಪ್ರಗತಿಯಲ್ಲಿದ್ದೇವೆ. ಪಕ್ಕದ ತಮಿಳುನಾಡಿನಲ್ಲಿರುವ ಮರಳು ನೀತಿಯನ್ನು ನಾವು ಈಗಾಗಲೇ ಪರಿಶೀಲನೆ ಮಾಡಿದ್ದು, ಅದು ಸೂಕ್ತ ಎಂದು ಅನಿಸಿರುವುದರಿಂದ ಅದರ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದೇವೆ. ಎರಡನೆಯದು ಏನೆಂದರೆ, ಇಡೀ ರಾಜ್ಯಕ್ಕೆ ಏಕ ರೂಪದ ಮರಳು ನೀತಿ ತರುವುದಕ್ಕೆ ಇವತ್ತು ಸ್ವಲ್ಪ ಕಷ್ಟವಿದೆ. ಮಂಗಳೂರು ಮತ್ತು ಚಿಕ್ಕಮಗಳೂರು, ಟಿ.ನರಸೀಪುರ ಕಡೆಗಳಲ್ಲಿ ಬೇರೆ ಬೇರೆ ರೀತಿಯ ಸಮಸ್ಯೆ ಇದೆ. ಮತ್ತೆ ಫ್ಲೋರೈಟ್ ಅಂಶ ಇರುವ ಕಡೆ ಮರಳು ತೆಗೆಯವುದರಿಂದ ಏನೇನು ಸಮಸ್ಯೆ ಆಗುತ್ತದೆಂದು ವಿಶೇಷವಾಗಿ ಮಾನ್ಯ ಸಂಪಂಗಿಯವರು ಉಲ್ಲೇಖ ಮಾಡಿದ್ದಾರೆ. ಆದ್ದರಿಂದ, ಇಡೀ ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿರುವಂಥ ಸಮಸ್ಯೆಗಳನ್ನು ಅರಿತು ಅದಕ್ಕೆ ಸೂಕ್ತವಾಗಿ ರಾಜ್ಯದ ಒಂದು ಮರಳು ನೀತಿಯನ್ನು ತರುತ್ತದೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕಾದರೆ ಮುಂದೆ ಯಾವುದಾದರೂ ಸೂಕ್ತ ಸಂದರ್ಭದಲ್ಲಿ ಕೊಡಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ : ಮೀಸಲಾತಿ ಬಗ್ಗೆ ಕೂಡ ಯೋಚನೆ ಮಾಡಬೇಕು.

ಶ್ರೀ ಸುರೇಶ್‌ಕುಮಾರ್ : ಹೊಸ ಮರಳು ನೀತಿಯಲ್ಲಿ ಮೀಸಲಾತಿ ಅಳವಡಿಸುವುದಕ್ಕೆ ಪ್ರಯತ್ನಪಡುತ್ತೇವೆ.

ಅಧ್ಯಕ್ಷರು : ಮಾನ್ಯ ಖಾದರ್‌ರವರ ಪ್ರಶ್ನೆಯ ಮೇಲೆ ಬಹುತೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿರುವುದರಿಂದ ಇದನ್ನು ಅರ್ಧ ಗಂಟೆ ಕಾಲಾವಕಾಶದ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಆನಂತರ ಇದರ ಬಗ್ಗೆ ಎಲ್ಲರೂ ಚರ್ಚೆ ಮಾಡಿ.

ಮೈಸೂರು ಮಿನರಲ್ ಸಂಸ್ಥೆಯಲ್ಲಿ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂಪಡೆದಿರುವ ಬಗ್ಗೆ

21 (44) ಡಾ: ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರದೀಪ್ ಎಕ್ಸ್‌ಪೋರ್ಟ್ ಮತ್ತು ವೆಲ್ಲೀಷ್ ಸಂಸ್ಥೆಯು ಎಂಎಂಎಲ್ ಸಂಸ್ಥೆಯಲ್ಲಿ ಕಬ್ಬಿಣ ಅದಿರಿನ ಮಾರಾಟ ಬೆಲೆಯ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದನ್ನು ಕೇಂದ್ರ ಕಛೇರಿಯ ಕೆಲವು ಅಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರ ಅನುಮತಿಯಿಲ್ಲದೆ ಉಚ್ಚ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂಪಡೆದಿರುವುದು ನಿಜವಲ್ಲವೇ;

ಆ) ಸಂಸ್ಥೆಗೆ ಕೋಟ್ಯಾಂತರ ರೂ.ಗಳ ನಷ್ಟ ಉಂಟು ಮಾಡಿರುವ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಹಿಂದಿನ ವ್ಯವಸ್ಥಾಪಕರು ಆದೇಶಿಸಿದ್ದರೂ ಸಹ ಯಾವುದೇ ಶಿಸ್ತು ಕ್ರಮ ಕೈಗೊಳ್ಳದಿರಲು ಕಾರಣವೇನು (ಸಮಗ್ರ ಮಾಹಿತಿಯನ್ನು ಒದಗಿಸುವುದು).

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮೆ:ಪ್ರದೀಪ್ ಎಕ್ಸ್‌ಪೋರ್ಟ್ ಮತ್ತು ಇತರೆ ವಾಣಿಜ್ಯ ಸಂಸ್ಥೆಗಳಾದ ಮೆ:ಸ್ಕಂದ ಎಂಟರ್‌ಪ್ರೈಸಸ್, ಸುವಿ ಗ್ರಾನೈಟ್ಸ್, ಇಂಡಿಯನ್ ರಾಕ್ ಹಾಗೂ ವಿಕ್ಟರಿ ಎಕ್ಸ್‌ಪೋರ್ಟ್‌ರವರಿಗೆ ಒಟ್ಟು 2,05,000 ಮೆಟ್ರಿಕ್ ಟನ್ ಕಬ್ಬಿಣದ ಅದಿರಿನ ಪುಡಿಯನ್ನು ಸಂಸ್ಥೆಯು ಹಂಚಿಕೆ ಮಾಡಿದ್ದು, ಈ ಪೈಕಿ ಸರಬರಾಜು ಮಾಡದೆ ಬಾಕಿ ಇದ್ದ 1,20,391 ಮೆಟ್ರಿಕ್ ಟನ್ ಅದಿರನ್ನು ಸರಬರಾಜು ಮಾಡುವಂತೆ ಸಂಸ್ಥೆಗೆ ನಿರ್ದೇಶಿಸುವಂತೆ ಕೋರಿ ಖರೀದಿದಾರರು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 17461/2005ನ್ನು ದಾಖಲಿಸಿದ್ದು, ಈ ರಿಟ್ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 12.08.2005ರಂದು ನೀಡಿದ್ದ ಆದೇಶದಲ್ಲಿ, ಸದರಿ ಸಂಸ್ಥೆಗಳಿಗೆ 175000 ಮೆಟ್ರಿಕ್ ಟನ್ ಅದಿರನ್ನು ಸಂಸ್ಥೆಗಳಿಗೆ

ರೂ. 577/- ದರದಲ್ಲಿ ನೀಡುವಂತೆ ಆದೇಶಿಸಿದ್ದು, ಈ ಆದೇಶವು ಎಂ.ಎಂ.ಎಲ್. ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿದ್ದರಿಂದ, ಸಂಸ್ಥೆಯು ಮಾನ್ಯ ನ್ಯಾಯಾಲಯದಲ್ಲಿ ಪರಿಶೀಲನಾ ಅರ್ಜಿಯನ್ನು ದಾಖಲಿಸಿದ್ದಿತು. ಈ ಪರಿಶೀಲನಾ ಅರ್ಜಿಯಲ್ಲಿ ವಾದ-ವಿವಾದದ ಸಂದರ್ಭದಲ್ಲಿ, ಎಂ.ಎಂ.ಎಲ್. ಸಂಸ್ಥೆಗೆ ಇನ್ನೂ ಪ್ರತಿಕೂಲವಾದ ಆದೇಶ ಬರುವ ಸಂಭವವಿದ್ದುದರಿಂದ, ಸದರಿ ಪರಿಶೀಲನಾ ಅರ್ಜಿಯನ್ನು ಸಂಸ್ಥೆಯ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿಗಳು ಹಿಂದಕ್ಕೆ ಪಡೆದಿರುತ್ತಾರೆ. ನಂತರ, ಈ ಕ್ರಮವನ್ನು ಸಂಸ್ಥೆಯ 264ನೇ ಆಡಳಿತ ಮಂಡಳಿಯ ಸಭೆಯಲ್ಲಿ ಸ್ಥಿರೀಕರಿಸಲಾಗಿದೆ. ಹಾಗಾಗಿ, ಸಂಸ್ಥೆಯ ಅಧಿಕಾರಿಗಳು ಅನುಮತಿ ಇಲ್ಲದೆ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂದಕ್ಕೆ ಪಡೆದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆ)

1. ಸದರಿ ಪ್ರಕರಣದಲ್ಲಿ, ಒಟ್ಟು 2,95,391 ಮೆ. ಟನ್ ಅದಿರನ್ನು ಸಂಧಾನದ ಪತ್ರದ ದಿನಾಂಕ: 29.07.2005 ರನ್ವಯ ನೀಡಬೇಕೆಂದು ಇದೇ ಏಕ ಸದಸ್ಯ ಪೀಠವು ರಿಟ್ ಪಿಟಿಷನ್ ನಂ. 17461/2005 ರಲ್ಲಿ ಮತ್ತೊಂದು ಮಾರ್ಪಡಿಸಿದ ಆದೇಶವನ್ನು ದಿನಾಂಕ: 18.01.2008 ರಂದು ಹೊರಡಿಸಿತು.
2. ಈ ಮಾರ್ಪಡಿಸಿದ ಆದೇಶವನ್ನು ನಿಗಮದ ವತಿಯಿಂದ ಪ್ರಶ್ನಿಸಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲ್ ಸಂಖ್ಯೆ W.A. No. 342/2008 ಅನ್ನು ಸಲ್ಲಿಸಲಾಗಿ ಸದರಿ ರಿಟ್ ಅಪೀಲ್‌ನ್ನು ಎಂಎಂಎಲ್ ಪರವಾಗಿ ಎತ್ತಿ ಹಿಡಿದ ನ್ಯಾಯಾಲಯವು ರಿಟ್ ಪಿಟಿಷನ್ ನಂ. 17461/2005 ರಲ್ಲಿ ಹೊರಡಿಸಲಾದ ಹಿಂದಿನ ಆದೇಶವನ್ನು ವಜಾಗೊಳಿಸಿ ದಿನಾಂಕ: 24.04.2009 ರಂದು ತೀರ್ಪು ನೀಡಿದೆ.
3. ಈ ವಿಭಾಗೀಯ ಪೀಠದ ತೀರ್ಪಿನ ವಿರುದ್ಧ ಮೇಲ್ಕಂಡ ಸಂಸ್ಥೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಎಸ್‌ಎಲ್‌ಸಿ ನಂ2058/2009ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಎಂಎಂಎಲ್ ಪರವಾಗಿ ಸೂಕ್ತವಾದ ಮಂಡಿಸಲು ಕ್ರಮ ಕೈಗೊಳ್ಳಲಾಗಿದೆ.

4. ಈ ಪ್ರಕರಣದಲ್ಲಿ ಮತ್ತು ಇನ್ನಿತರ 6 ಅದಿರು ವಹಿವಾಟು, ಉತ್ಪಾದನೆ, ಕಾಮಗಾರಿ ಪ್ರಕರಣಗಳಲ್ಲಿ ಶ್ರೀ ಬಿ.ಟಿ.ಲಕ್ಷ್ಮಣ್, ಹಿಂದಿನ ಮುಖ್ಯ ಪ್ರಧಾನ ವ್ಯವಸ್ಥಾಪಕರು ನಿಗಮದ ಆರ್ಥಿಕ ಹಿತದೃಷ್ಟಿಗೆ ಧಕ್ಕೆ ಉಂಟಾಗುವಂತೆ ವರ್ತಿಸಿದ್ದು, ಶ್ರೀಯುತರ ವಿರುದ್ಧ ಶಿಸ್ತು ಕ್ರಮಗಳನ್ನು ಜರುಗಿಸಲಾಗಿದೆ. ಶ್ರೀಯುತರನ್ನು ದಿನಾಂಕ 07.04.2006ರಂದು ಅಮಾನತ್ತು ಗೊಳಿಸಲಾಗಿದ್ದು, ಇವರು ದಿನಾಂಕ: 30.06.2007 ರಂದು ಸೇವಾ ನಿವೃತ್ತಿ ತಲುಪಿರುತ್ತಾರೆ. ಈ ಅಧಿಕಾರಿಯು ತಮ್ಮ ವಿರುದ್ಧ ಹೂಡಲಾದ ಶಿಸ್ತು ಪ್ರಕರಣಗಳಲ್ಲಿ ಮೂರು ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲ ಯದಿಂದ ರಿಟ್ ಪಿಟಿಷನ್ ನಂ. 14915/2008ರಲ್ಲಿ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹಿ ಮಾಡಿದ್ದಾರೆ. I have nothing against any officer or officers. But the way the officers conducted the business caused crores of rupees loss to the Government and also Government Companies. ಸರ್ಕಾರದವರು ಎಂಎಂಎಲ್ ನಿಂದ ಪ್ರದೀಪ್ ಎಕ್ಸ್‌ಪೋರ್ಟ್‌ರವರಿಗೆ ಒಂದು ಲಕ್ಷ ಟನ್ ಕಬ್ಬಿಣದ ಅದಿರನ್ನು ಕೊಡಬೇಕೆಂದು ಆಗಿತ್ತು. ಇದರಲ್ಲಿ 69 ಸಾವಿರ ಟನ್ ಕಬ್ಬಿಣ ಅದಿರನ್ನು ಅವರು ತೆಗೆದುಕೊಂಡಿದ್ದು, ಅವಧಿ ಮುಗಿದ ಮೇಲೆ ಉಳಿದ 31 ಸಾವಿರ ಟನ್ ಕಬ್ಬಿಣದ ಅದಿರನ್ನು ಲಿಫ್ಟ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಅವರು ಕೇಳಿದ್ದರು.

ಇದರಲ್ಲಿ ಇವರು MMTC ದರಕ್ಕಿಂತ ಅತ್ಯಂತ ಕಡಿಮೆ ದರದಲ್ಲಿ ರೂ.577 ಗಳ ಇವರು ಕೊಟ್ಟಿದ್ದಾರೆ. MMTC ದರ ರೂ.2500 ಗಳು. ಆದರೆ ಇವರು ಕೊಟ್ಟಿರುವುದು 557 ರೂ.ಗಳು. ಇದರಿಂದ ಸರ್ಕಾರಕ್ಕೆ ಎಷ್ಟು ಲಾಸ್ ಆಯಿತು. ಇವರು ಹೇಳಿರುವುದು ಮೆ: ಪ್ರದೀಪ್ ಎಕ್ಸ್‌ಪೋರ್ಟ್ ಕಂಪನಿ ಯವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ವಾದ ನಡೆಯುತ್ತಾ ನಡೆಯುತ್ತಾ ಕೋರ್ಟಿನಲ್ಲಿ ಅವರಿಗೆ ಅನುಕೂಲವಾಗುತ್ತದೆನ್ನುವ ಕಾರಣಕ್ಕಾಗಿ ನಾವು ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದೇವೆಂದು ಹೇಳುತ್ತಾರೆ, ಎಷ್ಟು

ಬುದ್ಧಿವಂತಿಕೆಯಿಂದ ಲಾಯರ್‌ಗಳು ಮತ್ತು ನಮ್ಮ ಲೀಗಲ್ ಆಫೀಸರ್‌ಗಳು ವಾದ ಮಾಡುತ್ತಾ ಮಾಡುತ್ತಾ ಕಂಡು ಬಂದಿರುವುದು ನಮ್ಮ ವಿರುದ್ಧವಾಗುತ್ತದೆ ಇದನ್ನು ವಾಪಸ್ಸು ತೆಗೆದುಕೊಂಡು ಬಿಡೋಣವೆಂದು. ಇದರಲ್ಲಿ ಕೋಟ್ಯಾಂತರ ರೂ.ಗಳ ನಷ್ಟವಾಗಿರುವುದು ಇದರ ಬಗ್ಗೆ ನಾನು ಹೇಳಿ ಬಿಡುತ್ತೇನೆ. ಹೇಗೆ irresponsible officers have conducted themselves in causing loss of crores of rupees to the Government. ಇಲ್ಲಿ ಮಹೇಂದ್ರಜೈನ್‌ರವರು ಎಂ.ಡಿ. ಆಗಿದ್ದರು. ಮೆ:ಪ್ರದೀಪ್ ಎಕ್ಸ್‌ಪೋರ್ಟ್ ಕಡತ ಸಂಖ್ಯೆ: MML:MKT:5P:IOF: 2005-06 Marketing File No. ಪುಟ–31 ಕಂಡಿಕೆ 109 ರಲ್ಲಿ ಕರೆಕ್ಟಾಗಿ ತಮಗೆ ಹೇಳುತ್ತಿದ್ದೇನೆ. ಇಲ್ಲಿ ಅವರು ಏನು ಹೇಳಿದ್ದಾರೆ. MML ಸಂಸ್ಥೆಯ ಕಾನೂನು ಅಧಿಕಾರಿ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದು ಕಂಪನಿಯ ಹಿತದೃಷ್ಟಿಯನ್ನು ಕಡೆಗಣಿಸಿ ಸಂಸ್ಥೆಯ ಕೋಟ್ಯಾಂತರ ರೂ.ಗಳಿಗೆ ಕಾರಣರಾಗಿದ್ದಾರೆ. He is no less than an MD. ಈ ಕಂಡಿಕೆ ಎಲ್ಲವನ್ನು ಹೇಳಿದ್ದೇನೆ. ಮತ್ತು ಅವರು ಏನು ಹೇಳಿದ್ದಾರೆ. ಇದಕ್ಕೆ ಇವರ Law officer, General Manager and Legal Official ಇವರೆಲ್ಲಾ ಸೇರಿಕೊಂಡು M.D. ಯವರು ಪ್ರವಾಸದಲ್ಲಿದ್ದಾಗ Court ನಲ್ಲಿ ನಡೆಯುತ್ತಿರುವಂಥ ಘಟನೆ anticipate ಮಾಡಿ ಹಿಂದಕ್ಕೆ ತೆಗೆದುಕೊಂಡು MMTC ದರಕ್ಕಿಂತ ತೀರಾ ಕಡಿಮೆ ದರಕ್ಕೆ ಕೊಟ್ಟು ಕೋಟ್ಯಾಂತರ ರೂ.ಗಳ ನಷ್ಟವನ್ನು ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು the then MD ರವರು ಬರೆದಿರುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದೆ ಮಾಡಿದ್ದಾರೆ, ಇದರಿಂದ ದೊಡ್ಡ ನಷ್ಟ ಉಂಟಾಗಿದೆ, ಸರ್ಕಾರ ಅವರ ವಿರುದ್ಧ ಕ್ರಮ ತೆಗೆದುಕೊಂಡು ಇದರ ನಷ್ಟವನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಡಾ: ಮಹಾದೇವಪ್ಪನವರು ಪ್ರಶ್ನೆಯನ್ನು ಕೇಳಿದ್ದರು. ಆ ಪ್ರಶ್ನೆಗೆ ಇವತ್ತು ಅವರಿಗೆ ಉತ್ತರವನ್ನು ಕೊಟ್ಟಿರುತ್ತೇವೆ. ಅವರು detail ಆಗಿ ಹೋಗುತ್ತಿದ್ದಾರೆ ಪ್ರಶ್ನೋತ್ತರ ವೇಳೆಯಲ್ಲಿ ನಾವು ಅವರಿಗೆ

ಉತ್ತರವನ್ನು ಕೊಟ್ಟಿರುತ್ತೇವೆ. ನಾವು ಮೊದಲನೆಯದಾಗಿ ಹೇಳಿರುವುದೇನೆಂದರೆ ನಾವು ಆ ಕೇಸ್‌ನ್ನು withdraw ಮಾಡಿರುವುದರಲ್ಲಿ ಯಾವುದೇ ದುರುದ್ದೇಶ ಇರಲಿಲ್ಲವೆನ್ನುವುದು ಸರ್ಕಾರದ ನಿಲುವು. ನಾನು ಕೂಡ ಪರಿಶೀಲಿಸಿದ್ದೇನೆ. ತಾವು ಏನು ಹಾಗೆ ಮಾಡಿರಬಹುದೇ ಎಂದು ಹೇಳಿದರೆ, ನಾನು ಕೂಡ ಒಬ್ಬ advocate ಆಗಿ ಕೆಲವು ಪ್ರಸಂಗಗಳು ಬರುತ್ತವೆ. ಯಾವ ಪ್ರಸಂಗದಲ್ಲಿ withdraw ಮಾಡಬೇಕೆನ್ನುವುದು it is the discretion of the plaintiff or the petitioner. ನಾವು ಸದುದ್ದೇಶದಿಂದ ಆವತ್ತು withdraw ಮಾಡಿರುತ್ತೇವೆ. ಇದರ ಜೊತೆಗೆ ಹಿಂದಿನ ಒಬ್ಬ General Manager ಲಕ್ಷ್ಮಣ ಎನ್ನುವವರು ತಪ್ಪು ಮಾಡಿರುವುದರಿಂದ ಅವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಡಾ: ಹೆಚ್.ಸಿ.ಮಹಾದೇವಪ್ಪ : Already ಅವರು retire ಆಗಿರುತ್ತಾರೆ. ನಿಮ್ಮ MD ಯವರು ಏನು ಬರೆದಿದ್ದಾರೆ. ಆ ಪೈಲ್ ಇಲ್ಲಿದೆ ನೋಡಿ. ಏನೆಂದರೆ, Sri Laxman has already retired. ಸರ್ಕಾರಕ್ಕೆ ಕೋಟ್ಯಾಂತರ ರೂ.ಗಳ ನಷ್ಟವಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್ : ಬೇರೆ ಸ್ವರೂಪದಲ್ಲಿ ಅವರು ಚರ್ಚೆಗೆ ತರಲಿ ಚರ್ಚೆ ಮಾಡೋಣ. ಈಗ ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುತ್ತೇವೆ. ನಾವು ಸದುದ್ದೇಶದಿಂದ ಅದನ್ನು withdraw ಮಾಡಿರುತ್ತೇವೆ.

ಡಾ: ಹೆಚ್.ಸಿ.ಮಹಾದೇವಪ್ಪ : ಇದು ಈ ಪ್ರಶ್ನೆಗೆ ನಿಮ್ಮ ಉತ್ತರ ಅಲ್ಲವೇ ಅಲ್ಲ. It is not at all answer to my question.

ಅಧ್ಯಕ್ಷರು : ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ ಚರ್ಚೆ ಮಾಡೋಣ. ಇದು ಪ್ರಶ್ನೋತ್ತರ ಅದನ್ನೆ ಮತ್ತೆ ಮತ್ತೆ ಕೇಳುವುದೆ?

ಡಾ: ಹೆಚ್.ಸಿ.ಮಹಾದೇವಪ್ಪ : ಬೇರೆ ರೂಪದಲ್ಲಿ ತರುತ್ತೇವೆಂದು ಹೇಳಿದ್ದಾರೆ. ರೂಲ್ 69 ದಲ್ಲಿ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ನೀವು apply ಮಾಡಿ ಸರ್.

ರಾಜ್ಯದ ಜಿಲ್ಲೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ನೇಮಕ ಕುರಿತು

28 (11) ಶ್ರೀ ಮಂಜು. ಎ. (ಅರಕಲಗೂಡು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರನ್ನು ನೇಮಿಸಿದೆ; ಅವರುಗಳು ಯಾರು ಯಾರು, ಅವರ ಕಾರ್ಯವೈಖರಿಗಳೇನು?

ಆ) ಹಾಸನ ಜಿಲ್ಲೆಗೆ ಯಾವ ಸಚಿವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸಿದೆ?

ಇ) ಈ ಜಿಲ್ಲಾ ಉಸ್ತುವಾರಿ ಸಚಿವರು ಎಷ್ಟು ಬಾರಿ ಹಾಸನದಲ್ಲಿ ಕೆ.ಡಿ.ಪಿ. ಸಭೆ ನಡೆಸಿದ್ದಾರೆ?

ಈ) ಜಿಲ್ಲೆಯಲ್ಲಿ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ತ್ರೈಮಾಸಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

ಆ) ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರನ್ನು ಹಾಸನ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸಿದೆ.

ಇ) ಮಾನ್ಯ ಉಸ್ತುವಾರಿ ಸಚಿವರು ಒಂದು ಕೆ.ಡಿ.ಪಿ. ಸಭೆಯನ್ನು ನಡೆಸಿರುತ್ತಾರೆ.

ಈ) ಇಲ್ಲ.

ಅನುಬಂಧ – 1

ಕ್ರಮ ಸಂಖ್ಯೆ	ಸಚಿವರುಗಳ ಹೆಸರು	ಜಿಲ್ಲೆಗಳ ಹೆಸರು
1	ಶ್ರೀ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳು	ಶಿವಮೊಗ್ಗ
2	ಶ್ರೀ ಗೋವಿಂದ ಕಾರಜೋಳ	ಕೊಪ್ಪಳ ಮತ್ತು ಬಿಜಾಪುರ
3	--	ಚಿಕ್ಕಮಗಳೂರು
4	ಡಾ: ವಿ.ಎಸ್.ಆಚಾರ್ಯ	ಉಡುಪಿ
5	ಶ್ರೀ. ಸಿ.ಎಂ.ಉದಾಸಿ	ಹಾವೇರಿ ಮತ್ತು ರಾಯಚೂರು

6	ಡಾ: ಮಮ್ತಾಜ್ ಆಲಿಖಾನ್	ಚಿಕ್ಕಬಳ್ಳಾಪುರ
7	ಶ್ರೀ ರಾಮಚಂದ್ರಗೌಡ	ಮಂಡ್ಯ
8	ಶ್ರೀ ಆರ್.ಅಶೋಕ್	ಬೆಂಗಳೂರು ನಗರ (ಬೆಂಗಳೂರು ದಕ್ಷಿಣ ಜಿಲ್ಲೆಯ 14 ವಿಧಾನಸಭಾ ಕ್ಷೇತ್ರಗಳು)
9	ಶ್ರೀ ಎಸ್.ಎ.ರವೀಂದ್ರನಾಥ್	ದಾವಣಗೆರೆ
10	ಶ್ರೀ ಜನಾರ್ಧನ ರೆಡ್ಡಿ	ಬಳ್ಳಾರಿ
11	ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ	ಉತ್ತರ ಕನ್ನಡ
12	ಶ್ರೀ ಜಿ. ಕರುಣಾಕರ ರೆಡ್ಡಿ	ಚಿತ್ರದುರ್ಗ
13	ಶ್ರೀ ಬಿ.ಎನ್. ಬಚ್ಚೇಗೌಡ	ಬೆಂಗಳೂರು ಗ್ರಾಮಾಂತರ
14	ಶ್ರೀ ಬಸವರಾಜ ಬೊಮ್ಮಾಯಿ	ಬೆಳಗಾಂ
15	---	ಮೈಸೂರು
16	ಶ್ರೀ ಬಿ. ಶ್ರೀರಾಮುಲು	ಗದಗ
17	ಶ್ರೀ ರೇವೂ ನಾಯಕ ಬೆಳಮಗಿ	ಬೀದರ್
18	ಶ್ರೀ ಸುರೇಶ್ ಕುಮಾರ್. ಎಸ್.	ತುಮಕೂರು
19	ಶ್ರೀ ಜೆ.ಕೃಷ್ಣ ಪಾಲೇಮಾರ್	ದಕ್ಷಿಣ ಕನ್ನಡ ಮತ್ತು ಕೊಡಗು
20	ಶ್ರೀ ಅರವಿಂದ ಲಿಂಬಾವಳಿ	ಬಾಗಲಕೋಟೆ ಮತ್ತು ಹಾಸನ
21	---	ಕೋಲಾರ
22	ಶ್ರೀ ಹೆಚ್.ಹಾಲಪ್ಪ	ಚಾಮರಾಜನಗರ
23	ಶ್ರೀ ಲಕ್ಷ್ಮಣ್ ಎಸ್. ಸವದಿ	ಗುಲ್ಬರ್ಗಾ
24	ಶ್ರೀ ಮುರುಗೇಶ್ ನಿರಾಣಿ	ಧಾರವಾಡ
25	ಶ್ರೀ ಕಟ್ಟಾಸುಬ್ರಮಣ್ಯನಾಯ್ಡು	ಬೆಂಗಳೂರು ನಗರ (ಬೆಂಗಳೂರು ಉತ್ತರ ಜಿಲ್ಲೆಯ 14 ವಿಧಾನಸಭಾ ಕ್ಷೇತ್ರಗಳು) ಮತ್ತು ರಾಮನಗರ

ಶ್ರೀ ಎ.ಮಂಜು : ಇದೊಂದು ವಿಶೇಷವಾದಂಥ ಸಂಗತಿ, ಉಸ್ತುವಾರಿ ಸಚಿವರನ್ನು ನೇಮಿಸಿದ್ದೀರಿ ಯಾರು ಎಂದು ಕೇಳಿದ್ದೇನೆ, ಅವರು ಪಟ್ಟಿಯನ್ನು ಒದಗಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ

ಉದಾಸಿಯವರು ಉತ್ತರವನ್ನು ಹೇಳುತ್ತಿದ್ದಾರೆ. ಇದು ರೋಡ್ ಬಗ್ಗೆ ಅಲ್ಲ ಮಾನ್ಯ ರೇವಣ್ಣನವರೆ. ನಾನು ಪ್ರಶ್ನೆ ಕೇಳಿರುವುದು ಮುಖ್ಯಮಂತ್ರಿಯವರಿಗೆ, ಉತ್ತರ ಕೊಟ್ಟಿರುವುದು ಗೋವಿಂದ ಎಂ.ಕಾರಜೋಳರವರು, ಈಗ ಉತ್ತರ ಹೇಳುತ್ತಿರುವುದು ಲೋಕೋಪಯೋಗಿ ಸಚಿವರು. ಯಾರು ಏನು ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಹಾಸನ ಜಿಲ್ಲೆಗೆ ಯಾರು ಉಸ್ತುವಾರಿ ಸಚಿವರು ಎಂದು ಕೇಳಿರುತ್ತೇನೆ, ಸರ್ಕಾರ 20 ಅಂಶಗಳ ಕಾರ್ಯಕ್ರಮ ಅನುಷ್ಠಾನವಾಗುತ್ತಿವೆ ಎನ್ನುವುದರ ಬಗ್ಗೆಯೂ ಪ್ರಶ್ನೆ ಕೇಳಿದ್ದೇನೆ. ನೀವು ಪುಸ್ತಕದಲ್ಲಿ ಏನು ಪ್ರಿಂಟ್ ಆಗಿದೆ ಅದರ ಪ್ರಕಾರ ಪಾಪ ನೀವು ಹೇಳಿದ್ದೀರಿ. ಇಷ್ಟವಿಲ್ಲದಿರುವ ಮಂತ್ರಿಯನ್ನು ನಿಮ್ಮ ಸರ್ಕಾರ ನಮ್ಮ ಜಿಲ್ಲೆಗೆ ಉಸ್ತುವಾರಿ ಮಂತ್ರಿಯನ್ನಾಗಿ ಹಾಕಿದ್ದೀರಿ. ಇಷ್ಟವಿಲ್ಲದಿರುವ ಮಂತ್ರಿಗಳು ದಯವಿಟ್ಟು ನಮ್ಮ ಜಿಲ್ಲೆಯನ್ನು ಬಿಟ್ಟು ಹೋಗಬೇಕು, ಇಲ್ಲದಿದ್ದರೆ ಅವರು ರಾಜೀನಾಮೆ ಕೊಡಬೇಕು. ಆಗ ಅಭಿವೃದ್ಧಿ ಪರವಾಗಿಯಾದರೂ ಕೆಲಸವಾಗುತ್ತವೆ. ಈಗ ಅವರು ಜಿಲ್ಲೆಗೆ ಬರುವುದಿಲ್ಲ, ಕೆ.ಡಿ.ಪಿ. ಸಭೆ ಮಾಡಿರುವುದು ಎರಡು ವರ್ಷದಲ್ಲಿ ಒಂದೇ ಸಲ ಸಭೆ ಮಾಡಿದ್ದು ಎಂದು ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದೀರಿ. ಮೂರು ತಿಂಗಳಿಗೆ ಒಂದು ಸಲ ಮೀಟಿಂಗ್ ಮಾಡಬೇಕೆಂದು ಇದ್ದಾಗ ಅಭಿವೃದ್ಧಿ ಯಾವ ರೀತಿಯಾಗು ತ್ತದೆನ್ನುವುದರ ಬಗ್ಗೆ ನಮಗೆ ಏನು ಎನ್ನುವುದೇ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ನೀವು ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಎ. ಮಂಜು : ನೀವು ಉಸ್ತುವಾರಿ ಮಂತ್ರಿಗಳನ್ನು ನೇಮಕ ಮಾಡಿದ್ದು ಅವರು ಇಲ್ಲಿಗೆ ಬರುತ್ತಿಲ್ಲ. ಆ ಮಂತ್ರಿಗಳಿಗೆ ಇಷ್ಟವಿಲ್ಲದಿರು ವುದರಿಂದ ಆ ಮಂತ್ರಿಗಳು ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ಬೇರೆ ಮಂತ್ರಿಗಳನ್ನಾದರೂ ಉಸ್ತುವಾರಿ ಸಚಿವರನ್ನಾಗಿ ನಮ್ಮ ಜಿಲ್ಲೆಗೆ ಹಾಕಬೇಕು. ನೀವು ದುರುದ್ದೇಶದಿಂದ ಹಾಸನ ಜಿಲ್ಲೆಗೆ ಏನು ಮಾಡಲೇಬಾರದೆಂದು ತಿಳಿದುಕೊಂಡು ನೀವು ಬೇಕಾಬಿಟ್ಟಿ ಮಂತ್ರಿಯನ್ನು ಹಾಕಿದ್ದೀರಿ. ನೀವು ಅವರನ್ನು ತೆಗೆಯಬೇಕು. ಕೆ.ಡಿ.ಪಿ.ಮೀಟಿಂಗ್‌ಗೆ....

ಅಧ್ಯಕ್ಷರು : ಇದು ಉಪ ಪ್ರಶ್ನೆ ಆಗುವುದಿಲ್ಲ. ಅವರು ಕೊಟ್ಟಿರುವ ಉತ್ತರ ಸರಿಯಿಲ್ಲದಿದ್ದರೆ ಅದಕ್ಕೆ ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಎ. ಮಂಜು : ಅಭಿವೃದ್ಧಿ ಕೆಲಸ ಕುಂಠಿತವಾಗಿರುವ ಬಗ್ಗೆ ಕೇಳಿದರೆ, ಇದರಿಂದ ಕುಂಠಿತವಾಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ನೀವೇ ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಅವರಿಗೆ ಎಲ್ಲಾ ಗೊತ್ತಿದೆ, ಮಾನ್ಯ ಮಂಜು ಮತ್ತು ರೇವಣ್ಣನವರಿಗೆ ಕಷ್ಟವಾಗಬಾರದೆಂದು ಅವರು ಒಂದೇ ಒಂದು ಮೀಟಿಂಗಿಗೆ ಬಂದಿರುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಚಿಕ್ಕಮಗಳೂರಿನಲ್ಲಿ ಕೂಡ ಎರಡು ವರ್ಷಕ್ಕೆ 3–4 ಕೆ.ಡಿ.ಪಿ. ಮೀಟಿಂಗ್ ಮಾಡಿದ್ದಾರೆ. ಸರ್ಕಾರದಿಂದ ಯಾರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡಿರುತ್ತೀರಿ ಅವರಿಗೆ ಸರ್ಕಾರದಿಂದ ಆದೇಶವನ್ನು ಕೊಟ್ಟು ಪ್ರತಿ ಮೂರು ತಿಂಗಳಿಗೊಂದು ಸಲ ಕೆ.ಡಿ.ಪಿ. ಮೀಟಿಂಗ್ ಕರೆಯುವುದಕ್ಕೆ ಸರ್ಕಾರಕ್ಕೆ ಆದೇಶವನ್ನು ನೀಡಬೇಕು.

ಶ್ರೀ ತನ್ವೀರ್ ಶೇಠ್ : ಮಾನ್ಯ ಅಧ್ಯಕ್ಷರೆ, ಹಾಸನ, ಚಿಕ್ಕಮಗಳೂರು ಜಿಲ್ಲೆಗೆ ಅಷ್ಟೆ ಅಲ್ಲ. ನಮ್ಮ ಮೈಸೂರು ಜಿಲ್ಲೆಗೆ ಉಸ್ತುವಾರಿ ಸಚಿವರೆ ಇಲ್ಲ. ಜೊತೆಗೆ, ತ್ರೈಮಾಸಿಕ ಸಭೆ ಕೂಡ ಇಲ್ಲ.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಏನು ಸಂಬಂಧ. ನೀವು ಬೇರೆ ರೀತಿಯಲ್ಲಿ ಬೇಕಾದರೆ ತೆಗೆದುಕೊಂಡು ಬನ್ನಿ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) (ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎ. ಮಂಜುರವರು ಕೇಳಿರುವ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದರು ಸಹಿತ ಅವರು ಪದೇ ಪದೇ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಸನ್ಮಾನ್ಯ ಉಸ್ತುವಾರಿ ಸಚಿವರು ಸುಮಾರು 7 ಸಲ ಆ ಜಿಲ್ಲೆಗೆ ಹೋಗಿದ್ದಾರೆ. ಒಂದು ಸಲ ಕೆ.ಡಿ.ಪಿ.ಮೀಟಿಂಗ್ ಮಾಡಿದ್ದಾರೆನ್ನುವುದು ಅವರ ಆಕ್ಷೇಪ ಇದೆ. ಕೆ.ಡಿ.ಪಿ. ಮೀಟಿಂಗ್ ಆಗದಿದ್ದರೂ ಸಹಿತ 7 ಸಲ ಜಿಲ್ಲೆಗೆ ಹೋಗಿರ ಬೇಕಾದಂಥ ಸಂದರ್ಭದಲ್ಲಿ ಪ್ರಗತಿ ಬಗ್ಗೆ ಪ್ರಗತಿ ಪರಿಶೀಲನೆಯ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಸತತ ಸಂಪರ್ಕದಲ್ಲಿದ್ದಾರೆನ್ನುವುದು ನಮ್ಮ ಗಮನದಲ್ಲಿರುವುದರಿಂದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಯಾವುದೇ ಅಡಚಣೆ ಆಗಿಲ್ಲ, ಅವರು ಪ್ರತಿ ಮೂರು ತಿಂಗಳಿಗೊಂದು ಸಲ ಬರಬೇಕಾಗಿತ್ತು ಎನ್ನುವಂಥ ಅವರ ಬಯಕೆ ಏನಾಗಿದೆ ಮುಂದಿನ ದಿವಸಗಳಲ್ಲಿ ಅದನ್ನು ಸರಿಪಡಿಸುವುದಕ್ಕೆ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆಂದು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಸನ ಮತ್ತು ಬಾಗಲಕೋಟೆ ಎರಡು ಜಿಲ್ಲೆಯ ಉಸ್ತುವಾರಿ ಅವರಿಗೆ ಇರುವುದರಿಂದ ಸ್ವಲ್ಪ ವಿಳಂಬವಾಗಿರುವುದು ಇಲ್ಲಿ ಸ್ವಾಭಾವಿಕ ಎನ್ನುವುದನ್ನು

ಹೇಳುವುದಕ್ಕೆ ಬಯಸುತ್ತೇನೆ. ಅಭಿವೃದ್ಧಿ ದೃಷ್ಟಿಯಿಂದ ಆಗಬೇಕಾದ ಎಲ್ಲಾ ಕೆಲಸಗಳ ಬಗ್ಗೆ ಅವರು ಗಮನಹರಿಸಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಮಂಜು : ಅವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. 7 ಸಲ ಅಲ್ಲ ಅವರು 10 ಸಲ ಜಿಲ್ಲೆಗೆ ಬಂದಿರಬಹುದು, ಅದು ಅವರು ಖಾಸಗಿಯಾಗಿ ಬಂದಿರತಕ್ಕಂಥದ್ದು. ಅವರು ಒಬ್ಬ ಮಂತ್ರಿಯಾಗಿ ಹಾಸನ ಜಿಲ್ಲೆಗೆ ಬರಬೇಕೆಂದು ನಾವು ಎಸ್ಪೆಕ್ಟ್ ಮಾಡುತ್ತಿರುವುದು. ಎರಡು ವರ್ಷವಾದರೂ ಒಬ್ಬ ಮಂತ್ರಿಗಳು ಬರಲಿಲ್ಲವೆಂದರೆ ಏಕೆ ಮಂತ್ರಿಗಳು ಇರಬೇಕು ಈ ಸರ್ಕಾರದಲ್ಲಿ ಅವರಿಗೆ ರಾಜೀನಾಮೆ ಕೊಡುವುದಕ್ಕೆ ಹೇಳಿ. ಸರ್ಕಾರದಿಂದ ಇದಕ್ಕೆ ಒಂದು ಅರ್ಥ ಬೇಡವೆ? ಏನು ಅಭಿವೃದ್ಧಿ ಆಗಿದೆ ನಿಮ್ಮ ಇಲಾಖೆಯ ಬಗ್ಗೆ ಹೇಳಿ ನೋಡೋಣ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 9.3.2010ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 160 ಪ್ರಶ್ನೆಗಳ ಪೈಕಿ 91 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : (ಮಂಡಿಸಲಾಯಿತು)

ಅನುಬಂಧ – I

(12-30 PM)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಅಧ್ಯಕ್ಷರು : ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರ್ಯಾಲೋಚನೆಗಾಗಿ ಬಂದಿರುವ ವಿಧೇಯಕವನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿ (ವಿ.ಸ.) : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಶೀಲನೆಗಾಗಿ ಬಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ನ್ನು ಈಗ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅನುಬಂಧ – II

3. ವಿತ್ತೀಯ ಕಾರ್ಯಕಲಾಪಗಳು :

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, 2009-10 ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಹಾಗೂ ಅಂತಿಮ ಕಂತು)ನ್ನು ಕೆಳಕಂಡಂತೆ ಮಂಡಿಸುತ್ತಿದ್ದೇನೆ.

1. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕೃಷಿ ಮತ್ತು ತೋಟಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **22852.56** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

2. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಪಶುಸಂಗೋಪನೆ ಮತ್ತು ಮೀನುಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **9429.21** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

3. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆರ್ಥಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **210475.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದ್ದಲ್ಲಿ **6045.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

4. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಿ.ಆ.ಸು.ಇ.'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **4322.14** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

5. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಒಳಾಡಳಿತ ಮತ್ತು ಸಾರಿಗೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **468.23** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1354.50** ಲಕ್ಷ ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

6. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **29339.17** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **33475.88** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

7. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **3685.25** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

8. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಹಕಾರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5176.69** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **2018.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

9. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಮಾಜ ಕಲ್ಯಾಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5904.01** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **500.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

10. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1352.89** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **108.25** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

11. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1009.42** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1200.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

12. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆಹಾರ ಮತ್ತು ನಾಗರೀಕ ಸರಬರಾಜು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **30027.60** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

13. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಂದಾಯ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **302928.31** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **1800.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

14. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಾಹಿತಿ ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **300.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

15. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಸತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ **658.68** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

16. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಶಿಕ್ಷಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **7705.08** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

17. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾಣಿಜ್ಯ ಮತ್ತು ಕೈಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2834.85** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **7597.20** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

18. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ನಗರಾಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5481.01** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **30000.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

19. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಲೋಕೋಪಯೋಗಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **371.51** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **68753.30** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

20. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಜಲಸಂಪನ್ಮೂಲ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **139.17** ಲಕ್ಷ ರೂ.ಗಳಿಗೆ

ಮತ್ತು ಬಂಡವಾಳ ಲೆಕ್ಕದಲ್ಲಿ **40306.70** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

21. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **5573.28** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **2600.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

22. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾರ್ಮಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **422.51** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

23. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಇಂಧನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **20.00** ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **100000.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

24. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕನ್ನಡ ಮತ್ತು ಸಂಸ್ಕೃತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **4724.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

25. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ

12484.24 ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **12600.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

26. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾನೂನು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2056.89** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

27. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1835.16** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

ಅಧ್ಯಕ್ಷರು : (ಮಂಡಿಸಲಾಯಿತು.)

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(1) ವಿಷಯ : ಅಡಿಕೆ ಬೆಂಬಲ ಬೆಲೆಯ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರವು ಬಿಳಿಯ ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಿಸಿದೆ. ಒಂದು ಬೆಂಬಲ ಬೆಲೆಯನ್ನು ಘೋಷಿಸಿದ ನಂತರ ಅಲ್ಲಿಯ ಅಡಿಕೆ ಬೆಳೆಗಳಿಗೆ ಪ್ರಯೋಜನ ಆಗಬೇಕೇ ಹೊರತು ಇದರಿಂದ ತೊಂದರೆಯಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಏಕೆಂದರೆ, ಆ ಅಡಿಕೆ ಬೆಂಬಲ ಬೆಳೆಯು ಇರುವಾಗ ಮಾರ್ಕೆಟ್ ವ್ಯಾಲ್ಯೂ 75.00 ರೂಪಾಯಿಗಳು ಇತ್ತು. ಈಗ ಅದು 70.00 ರೂಪಾಯಿಗಳಿಗೆ ಬಂದು ನಿಂತಿದೆ. Campco ಮುಖಾಂತರ ಕೊಡುವಂತಹ ಬೆಂಬಲ ಬೆಲೆಯು 75.00 ರೂಪಾಯಿಗಳಿಗೆ ಬಂದು ಮುಟ್ಟಿದೆ. ಅದರ ಉಲ್ಲೇಖದಲ್ಲಿ ಎರಡು ಷರತ್ತನ್ನು ಹಾಕಿದ್ದಾರೆ. ಒಂದು ಷರತ್ತು ಯಾವುದೆಂದರೆ, 30% ಮಾತ್ರ ಅಂದರೆ ದಿವಸಕ್ಕೆ 100 ಜನ

ಬೆಳೆಗಾರರು ಬಂದರೆ 30 ಜನರಿಗೆ ಮಾತ್ರ ಬೆಂಬಲ ಬೆಲೆಯನ್ನು ಕೊಡಬೇಕು.

ಅಧ್ಯಕ್ಷರು : ಆಯಿತು. ನೀವು ಸ್ಪಷ್ಟವಾಗಿ ಕೇಳಿದ್ದೀರಿ.

ಶ್ರೀ ಯು.ಟಿ.ಖಾದರ್ : ಇನ್ನೊಂದು 6.00 ರೂಪಾಯಿಗಳಿಗೆ ಮಾತ್ರ 69.00ದ ರೂಪಾಯಿ ಬೆಲೆ ಬಂದ ಅಡಿಕೆಗೆ 6.00 ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಇದರಲ್ಲಿ 69.00 ರೂಪಾಯಿ ಗಳನ್ನು ಹಾಕುವುದು ಕಡಿಮೆ.

ಅಧ್ಯಕ್ಷರು : Explanation ಗೆ ಅವಕಾಶ ಎಲ್ಲಿದೆ?

ಶ್ರೀ ಯು.ಟಿ.ಖಾದರ್ : ಇದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ. ಅಲ್ಲಿ ಗಲಾಟೆಯನ್ನು ಮಾಡುತ್ತಿದ್ದಾರೆ. ಈ ಒಂದು ಬೆಳೆಗೆ ಬೆಂಬಲ ಬೆಲೆಯನ್ನು ಘೋಷಿಸುವ ಮೂಲಕ Campco ಗೆ ಮತ್ತು ಯಾರು ಗುಜರಾತಿನ ಸೇಟುಗಳಿಗೆ ಅಡಿಕೆ ಮಾಫಿಯಾಗಳಿಗೆ ಮಾತ್ರ ಇದರಿಂದ ಪ್ರಯೋಜನವಾಗಿದೆ. ಅಡಿಕೆ ಬೆಳೆಗಾರರಿಗೆ ಯಾರಿಗೂ ಇದರಿಂದ ಪ್ರಯೋಜನವಾಗಿರುವುದಿಲ್ಲ. ಆದಕಾರಣ ಮಾರ್ಕೇಟ್ ದರ ಯಾವುದು ಇದೆ ಅದಕ್ಕೆ ಶೇಕಡ 10 ರಷ್ಟು ಸೇರಿಸಿಕೊಡುವಂತಹ ಕೆಲಸಗಳು ಆಗಬೇಕು ಆಗ ಮಾತ್ರ ರೈತರಿಗೆ ಇದರಿಂದ ಪ್ರಯೋಜನವಾಗುತ್ತದೆ. ಇದನ್ನು ಸರಿಪಡಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಯು.ಟಿ.ಖಾದರ್ ರವರು ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರಿಗೆ ಬೆಂಬಲ ಬೆಳೆಯ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಕೃಷಿ ಸಚಿವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಆಯಿತು. ತಮ್ಮದೇ ಇನ್ನೊಂದು ಇದೆ ಅದನ್ನು ಕೇಳಿ.

(2) ಪ್ರತಿ ಶಾಸಕರಿಗೆ ಪ್ರದೇಶಾಭಿವೃದ್ಧಿ ಎಂದು ವರ್ಷಕ್ಕೆ ಒಂದು ಕೋಟಿ ರೂ. ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರ ಬಗ್ಗೆ :

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಸಭಾಧ್ಯಕ್ಷರೆ, ಪ್ರತಿ ಶಾಸಕರಿಗೆ ಪ್ರದೇಶಾಭಿವೃದ್ಧಿ ಎಂದು ಹೇಳಿ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಅದರೆ ಮೊನ್ನೆ ಮಾರ್ಚಿನ ಮೊದಲ ವಾರದವರೆಗೆ ನಮಗೆ ಕೇವಲ 50 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಮೊನ್ನೆ ಪ್ರಥಮವಾರದಲ್ಲಿ ಮತ್ತೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ಡಿ.ಸಿ. ಆಫೀಸಿಗೆ ಕಳುಹಿಸಿದ್ದಾರೆ. ಅದನ್ನು ಕಳುಹಿಸಿ ಅದರ ಜೊತೆಗೆ ಒಂದು ಷರತ್ತನ್ನು ಹಾಕಿದ್ದಾರೆ. ಅದು ಯಾವುದೆಂದರೆ, ಈ ಹಣವನ್ನು ಮಾರ್ಚಿ ತಿಂಗಳು ಮುಗಿಯುವ ಒಳಗಡೆ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಖರ್ಚು ಮಾಡದೆ ಇದ್ದರೆ ಅದನ್ನು return ಕಳುಹಿಸಬೇಕೆಂದು ಹೇಳಿದ್ದಾರೆ. ಶಾಸಕರನ್ನು ಮೂರ್ಖರನ್ನಾಗಿ ಮಾಡುವುದು ಸರಿಯಲ್ಲವೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಅನುದಾನದ ಪ್ರಶ್ನೆಯಲ್ಲ. ಯಾರು ಈ ಸುತ್ತೋಲೆಯನ್ನು ಕಳುಹಿಸಿರುವ ಅಧಿಕಾರಿ ಇದ್ದಾರೆ ಅವರು ಈ ಬಗ್ಗೆ ಆಲೋಚನೆಯನ್ನು ಮಾಡಬೇಕು. ಕಳೆದ ಒಂದು ವರ್ಷದಿಂದ ಕೊಟ್ಟಂತಹ 50 ಲಕ್ಷ ರೂಪಾಯಿಗಳನ್ನು ಈಗಲೂ ಕೂಡ ಅದಕ್ಕೆ estimate ಆಗದೆ ಬಿಲ್ಲು ಕೂಡ ಇನ್ನು ಆಗಿರುವುದಿಲ್ಲ. ಇದು ಇನ್ನು 20 ದಿವಸಗಳಲ್ಲಿ ಆಗುವುದಕ್ಕೆ ಸಾಧ್ಯವಿದೆಯೇ? ಆದ್ದರಿಂದ ಈ ಷರತ್ತನ್ನು ಹಿಂದಕ್ಕೆ ಪಡೆದುಕೊಂಡು ಆ ಹಣವನ್ನು ಮತ್ತೆ ಡಿ.ಸಿ.ಯವರ ಪಿ.ಡಿ. ಅಕೌಂಟ್‌ಗೆ ಇರುವುದಕ್ಕೆ ಅವಕಾಶ ವನ್ನು ಮಾಡಿಕೊಡಬೇಕು ಯಾರು ಈ ಸುತ್ತೋಲೆಯನ್ನು ಹೊರಡಿಸಿದ್ದಾರೆ, ಅವರ ವಿರುದ್ಧ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶವನ್ನ ಕೊಡಿ.

(ಗೊಂದಲ)

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಹಣವನ್ನು ಬಿಡುಗಡೆ ಮಾಡಿ ಮಾರ್ಚಿ 31ರೊಳಗಡೆ ಖರ್ಚು ಮಾಡಬೇಕೆಂದು ಹೇಳಿದರೆ ನಿಮ್ಮ ಅಧಿಕಾರಿಗಳಿಗೆ......

ಅಧ್ಯಕ್ಷರು : ಈ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ ನೋಡೋಣ.

ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಉತ್ತರವನ್ನು ಒದಗಿಸಲಾಗಿದೆ. ಉತ್ತರವನ್ನು ಒದಗಿಸಿದರೂ ಸಹಿತ ಅವರು ಹೇಳುತ್ತಿರುವುದು 31.3.2010 ಒಳಗಡೆ ಹಣವನ್ನು ಖರ್ಚು ಮಾಡಬೇಕೆಂದು ಹೇಳಿದ್ದಾರೆಂದು ಅದನ್ನು ತಾವು ಮರುಪರಿಶೀಲನೆ ಮಾಡಬೇಕೆಂದು ಹೇಳಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ. 31.3.2010 ಒಳಗಾಗಿ ಎಷ್ಟು ಹಣವು ಖರ್ಚಾಗುತ್ತದೆ, ಉಳಿದ ಹಣವನ್ನು ಬಿಡುಗಡೆ ಮಾಡಬೇಕಾದಂತಹ ಕೆಲಸವನ್ನು ಏಪ್ರಿಲ್ ತಿಂಗಳಲ್ಲಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆನ್ನುವಂತಹ ಭರವಸೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಆಯಿತು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸದಸ್ಯರಾದ ಶ್ರೀ ಖಾದರ್ ರವರು ಕೇಳುತ್ತಿರುವಂತಹ ಪ್ರಶ್ನೆ ಬೇರೆ. ಮಾನ್ಯ ಸಚಿವರಾದ ಉದಾಸಿಯವರು ಉತ್ತರವನ್ನು ಹೇಳುತ್ತಿರುವುದು ಬೇರೆ. ಏನೆಂದರೆ, ಶಾಸಕರಿಗೆ 50 ಲಕ್ಷ ರೂಪಾಯಿಗಳನ್ನು ಮೊನ್ನೆ ದಿನ ಅಂದರೆ 8 ದಿವಸದ ಹಿಂದೆ ಬಿಡುಗಡೆ ಮಾಡಿದ್ದಾರೆ. 50 ಲಕ್ಷ ರೂಪಾಯಿಗಳನ್ನು 30ನೇ ತಾರೀಖಿನ ಒಳಗಡೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಇದು ಒಂದು ವರ್ಷಕ್ಕಿಂತ ಮುಂಚೆಯೆ ಬಿಡಬೇಕಾಗಿತ್ತು. ಒಂದು ಕೋಟಿ ರೂಪಾಯಿಗಳಲ್ಲಿ 6–6 ತಿಂಗಳಿಗೆ ಒಂದೊಂದು ಕಂತಿನ ರೂಪದಲ್ಲಿ ಬಿಡುಗಡೆ ಮಾಡಿದ್ದರೆ ಪರವಾಗಿರಲಿಲ್ಲ. ಈಗ ತಿಂಗಳ ಕೊನೆಯಲ್ಲಿ 120 ಕೋಟಿ ರೂಪಾಯಿಗಳನ್ನು ಮೊನ್ನೆ ದಿನ ಬಿಡುಗಡೆ ಮಾಡಿದ್ದೀರಿ. ಆ ಹಣವನ್ನು ಶಾಸಕರು ಖರ್ಚು ಮಾಡಿರುವುದಿಲ್ಲ. ನೀವು ಮೊನ್ನೆ ದಿನ estimate ನ್ನು ಕೊಟ್ಟಿರುವುದು. estimate ಕೊಟ್ಟು ಅದು sanction ಆಗಿ ಬರುವುದಕ್ಕೆ 30ನೇ ತಾರೀಕು ಆಗುತ್ತದೆ. ಮತ್ತೆ 120 ಕೋಟಿ ರೂಪಾಯಿಗಳು ವಾಪಸ್ಸು ಹೋಗುತ್ತದೆ. ಅದಕ್ಕಾಗಿ ನಾವು ಹೇಳುವುದೇನೆಂದರೆ ಜಿಲ್ಲಾಧಿಕಾರಿಯವರ P.D.Accountಗೆ ಹಾಕುವುದಕ್ಕೆ direction ಕೊಡುತ್ತೇವೆಂದು ಸರ್ಕಾರದಿಂದ ಹೇಳಿದರೆ ಸಾಕು.

ಅದನ್ನು ಬಿಟ್ಟು ನಮ್ಮ ಉದಾಸಿಯವರು, ಹಾರಿಕೆಯ ಉತ್ತರವನ್ನು ಹೇಳುವುದು ಬೇಡ.

ಅಧ್ಯಕ್ಷರು : ಅದನ್ನು P.D.Account ಗೆ ಹಾಕುವುದಕ್ಕೆ ಹೇಳಿ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರುಗಳ ಬೇಡಿಕೆ ಅದು P.D.Account ಗೆ ಹೋಗಬೇಕೆಂದು ಇದೆ. ಆದರೆ ಹಣವು ವಿನಿಯೋಗವಾಗದಿದ್ದಲ್ಲಿ ಅದನ್ನು ಮುಂದಿನ ವರ್ಷದ ಆಯವ್ಯಯದಲ್ಲಿ ನಾವು ಕೊಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಅದನ್ನು P.D.Account ಗೆ ಹಾಕಿ.

ಶ್ರೀ ಸಿ.ಎಂ.ಉದಾಸಿ : ಹೀಗೆ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇಲ್ಲ ಎಂದರೆ, ನಾವು ಧರಣಿಯನ್ನು ಮಾಡುತ್ತೇವೆ.

ಶ್ರೀ ಸಿ.ಎಂ.ಉದಾಸಿ : ಆ ರೀತಿ ಮಾಡುವುದಕ್ಕಾಗುವುದಿಲ್ಲ. ಏನು ಹಣವನ್ನು ಬಿಡುಗಡೆ ಮಾಡದಿದ್ದರೆ ಆಗ ನೀವು ಹೇಳಬಹುದಲ್ಲಾ? ಏಪ್ರಿಲ್ ತಿಂಗಳಲ್ಲಿ ಮಾಡಿಸೋಣ.

ಅಧ್ಯಕ್ಷರು : ಮಾನ್ಯ ಸಚಿವರೆ, P.D.Account ಗೆ ಹಾಕುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು : ಇರಿ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಸಿ.ಎಂ.ಉದಾಸಿ : ಪರಿಹಾರವು ಸಿಗುತ್ತಿರಬೇಕಾದರೆ ಏನಪ್ಪಾ ಇದು.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ನಾನೇ P.D. Account ಗೆ ಹಾಕುವ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ : ಇನ್ನು 3 ತಿಂಗಳ ಅವಧಿಯನ್ನು ವಿಸ್ತರಣೆಯನ್ನು ಮಾಡೋಣ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಿ. ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ, ಅವರು ಉತ್ತರವನ್ನು ಹೇಳಲಿ, ಆಮೇಲೆ ನೋಡೋಣ. ಮಾನ್ಯ ಜಯಚಂದ್ರರವರೆ,....

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅಲ್ಲಿ ಏನು ತೊಂದರೆಯಾಗಿದೆ ಎಂದರೆ, ಹಣವನ್ನು ಈಗ ಬಿಡುಗಡೆ ಮಾಡಿದ್ದಾರೆ. Estimateಗಳು sanction ಆಗುವ ಹಂತದಲ್ಲಿದೆ. ಇನ್ನು ಎರಡನೆಯದಾಗಿ procedure ಏನು ಇದೆ ಎಂದರೆ, ಇದಕ್ಕೆ Deputy Commissioner, Assistant Commissioner ಗಳು compulsory ಆಗಿ ಬಂದು inspect ಮಾಡಬೇಕು. 3 ತಿಂಗಳಲ್ಲ, 6 ತಿಂಗಳಾದರೂ ಕೂಡ ಅವರು ಬರುವುದಕ್ಕೆ ಸಾಧ್ಯವಿಲ್ಲ. ಅವರುಗಳು ಬರುವುದಿಲ್ಲ, ಈ ಕಾರಣದಿಂದಾಗಿ ಹಣವು ಖರ್ಚಾಗುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಸರ್ಕಾರದವರು ಒಂದು ಕೆಲಸವನ್ನು ಮಾಡಬಹುದು. ನೀವು 2 ಲಕ್ಷ ರೂಪಾಯಿಗಳವರೆಗೆ ಇದ್ದರೆ ತಹಶೀಲ್ದಾರ್ ರವರು ಬಂದು inspect ಮಾಡಲಿ ಎಂದು ಹೇಳಿ. 3 ರಿಂದ 5 ಲಕ್ಷ ರೂಪಾಯಿಗಳು ಇದ್ದರೆ Assistant Commissioner ಎಂದು ಮಾಡಿ. ತುಮಕೂರು ಜಿಲ್ಲೆಯಲ್ಲಿ ಅನಿವಾರ್ಯವಾಗಿ ಆ ರೀತಿಯಾಗಿ ಮಾಡಬೇಕಾಗಿ ಬಂತು. ಆದರೆ Deputy Commissioner, Assistant Commissioner ಎಂದು ಆ ರೀತಿಯಾಗಿ ಮಾಡಿದ್ದಾರೆ. ಆದರೆ ಸರ್ಕಾರದಿಂದ ಅದನ್ನು ಮಾಡಿದರೆ ಖಂಡಿತವಾಗಿ ಅದು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ. Deputy Commissioner, Assistant Commissioner ಗಳು ಯಾರು ಕೂಡ inspection ಮಾಡುವುದಕ್ಕೆ ಬರುವುದಿಲ್ಲ. ಅಲ್ಲಿ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಇದನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಆಯಿತು, ಎಲ್ಲರೂ ಹೇಳುತ್ತಿದ್ದಾರೆ. ಮಾನ್ಯ ಸಚಿವರು ಉತ್ತರವನ್ನು ಕೊಡಿ. ಎಲ್ಲರೂ ಎದ್ದು ನಿಂತರೆ ಹೇಗೆ? ಮಾನ್ಯ ಸಚಿವರು ಉತ್ತರವನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಸಿ.ಎಂ.ಉದಾಸಿ : ಇದು ಶೂನ್ಯವೇಳೆಯ ಪ್ರಶ್ನೆಯಾಗಿದೆ. ಇದನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ತಮ್ಮ ಬೇಡಿಕೆಗಳ ಬಗ್ಗೆ ನಾನು ಗಮನವನ್ನು ಹರಿಸಿ ಕ್ರಮವನ್ನು ಕೈಗೊಳ್ಳುವುದಕ್ಕೆ ನಾಳೆ ದಿವಸ ಚರ್ಚೆ ಮಾಡಿ ಇದಕ್ಕೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಟಿ.ಬಿ.ಜಯಚಂದ್ರ : ಶೂನ್ಯವೇಳೆಯಲ್ಲಿ ಚರ್ಚೆ ಮಾಡಿದರೆ, ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸಿ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಜಯಚಂದ್ರರವರೆ, ಇದು ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆಂದು ನಮಗೆ ಗೊತ್ತಿದೆ. ಇದಕ್ಕೆ ನಾವೇನು ಉತ್ತರವನ್ನು ಕೊಟ್ಟಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಉತ್ತರವು ಅವರಿಗೆ ಸಮಾಧಾನಕರವಾಗಿಲ್ಲ ಅದಕ್ಕೋಸ್ಕರ ಹಣಕಾಸು ಸಚಿವರಾದ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿ detail ಉತ್ತರವನ್ನು ಕೊಡಿಸೋಣ.

ಶ್ರೀ ಟಿ.ಬಿ.ಜಯಚಂದ್ರ : ನಾವು ಹೇಳಿರುವುದೆಲ್ಲವನ್ನು ಗಮನದಲ್ಲಿಟ್ಟು ಕೊಂಡು ಉತ್ತರವನ್ನು ಕೊಡಿಸಿ.

ಶ್ರೀ ಎಸ್. ಸುರೇಶ್ ಕುಮಾರ್ : ಆಯಿತು.

ಅಧ್ಯಕ್ಷರು : ಈಗ ಡಾ: ಹೆಚ್.ಸಿ.ಮಹದೇವಪ್ಪನವರೆ ತಾವು ಮಾತನಾಡಿ.

ಅಧ್ಯಕ್ಷರು : ನಾನು ಸರ್ಕಾರಕ್ಕೆ ಹೇಳಿದ್ದೇನೆ. ಅವರು ಮಾಡುತ್ತಾರೆ.

ಈಗ ನಾನು ಡಾ: ಹೆಚ್.ಸಿ.ಮಹದೇವಪ್ಪ ಅವರನ್ನು ಕರೆದಿದ್ದೇನೆ. ನೀವು ಪ್ರಸ್ತಾಪ ಮಾಡಿ.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಹಂಪಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಉಪನ್ಯಾಸಕರು, ವಿಜಯನಗರದ ಪುನಃಶ್ಚೇತನದ ಟ್ರಸ್ಟ್ ಗೆ 80 ಎಕರೆ ಜಮೀನನ್ನು ನೀಡುವ ಪ್ರಸ್ತಾವನೆಯನ್ನು ವಿರೋಧಿಸಿ ಹೋರಾಟ ನಡೆಸಿದ ಬಗ್ಗೆ ಈಗಾಗಲೇ ಅಲ್ಲಿ ಒಂದು ರೀತಿಯ ಅರಾಜಕತೆ ಉಂಟಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ನಾನು ತರುತ್ತಿದ್ದೇನೆ. ಆ ಟ್ರಸ್ಟ್‌ಗೆ ಕೊಡಬೇಕೆಂದಿರುವ 80 ಎಕರೆಯ ಜಮೀನನ್ನು ರದ್ದುಪಡಿಸಿ ವಿಶ್ವವಿದ್ಯಾನಿಲಯ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಒಂದು ಮುಕ್ತವಾದ ಅವಕಾಶವನ್ನು ಸರ್ಕಾರ ನಿರ್ಮಾಣ ಮಾಡಬೇಕು ಮತ್ತು ಇವತ್ತೇನು 80 ಎಕರೆ ಜಮೀನನ್ನು ಟ್ರಸ್ಟ್‌ಗೆ ಕೊಡುವ ಪ್ರಸ್ತಾವನೆಯನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪ

ಮಾಡುತ್ತಿರುವ ವಿಚಾರವನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಎರಡನೆಯದು ಆಯವ್ಯಯದ ಮೇಲೆ ಮಾತನಾಡುವಾಗ ಇದರ ಬಗ್ಗೆ ಚರ್ಚೆ ಮಾಡಿದಾಗ ಉತ್ತರ ಕೊಡುತ್ತೇವೆ.

ಡಾ: ಹೆಚ್.ಸಿ.ಮಹದೇವಪ್ಪ : ನಾವು reality ಅನ್ನು sincere ಆಗಿ ಸರ್ಕಾರದ ಗಮನಕ್ಕೆ ತಂದರೆ ನಿಮ್ಮಂಥವರು ಇದನ್ನು ಪರಿಶೀಲನೆ ಮಾಡದೇ ಹೋದರೆ ಹೇಗೆ ಸುರೇಶ್‌ಕುಮಾರ್‌ರವರೆ? It is a clear cut case.

ಶ್ರೀ ಎಸ್.ಸುರೇಶ್‌ಕುಮಾರ್ : ಇದಕ್ಕೆ ಉತ್ತರವನ್ನು ಕೊಡುತ್ತೇವೆ.

ಅಧ್ಯಕ್ಷರು : ಉತ್ತರವನ್ನು ಕೊಡುತ್ತಾರೆ. ಈಗ ನಾನು ಡಾ: ಶರಣ್ ಪ್ರಕಾಶ್‌ರವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ - ಎಸ್.ಸುರೇಶ್‌ಕುಮಾರ್ : ಮಂತ್ರಿಗಳು ಕೂಡ ಶಾಸಕರೇ, ನಮಗೂ ಸಹ ಆ ಕಷ್ಟ ಗೊತ್ತಿದೆ. ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಚರ್ಚೆ ಮಾಡಿ ಉತ್ತರ ಕೊಡುತ್ತೇವೆ. ನಾಳೆ ಮುಖ್ಯಮಂತ್ರಿಗಳು ಬರುತ್ತಾರೆ, ಆ ಬಗ್ಗೆ ಉತ್ತರ ಕೊಡಿಸುತ್ತೇವೆ.

ಅಧ್ಯಕ್ಷರು : ನಾನು ಹೇಳಿದ್ದೇನೆ. P.D.Account ಗೆ ಹಾಕಿ ಎಂದು ಹೇಳಿದ್ದೇನೆ. ಮತ್ತೆ ಮತ್ತೆ ಏಕೆ ಕೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಒಪ್ಪುತ್ತಾರೆ, ಮತ್ತೆ ಮತ್ತೆ ಏಕೆ ಆ ವಿಷಯವನ್ನೇ ಪ್ರಸ್ತಾಪ ಮಾಡುತ್ತೀರಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರು. ಅವರು ಬಂದ ಮೇಲೆ ನಿರ್ಧಾರವನ್ನು ಪ್ರಕಟಣೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ಮತ್ತೆ ಮತ್ತೆ ಎದ್ದರೆ ಚೆನ್ನಾಗಿ ಕಾಣುವುದಿಲ್ಲ. ಡಾ: ಶರಣ ಪ್ರಕಾಶ್ ಪಾಟೀಲ್ ಮಾತನಾಡಿ.

ಡಾ: ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ ಮಾರ್ಚ್ ಅಂತ್ಯದೊಳಗಾಗಿ ಗ್ರಾಮ ಪಂಚಾಯತಿ ಚುನಾವಣೆ ನಡೆಯ ಬೇಕಾಗಿತ್ತು, ಆದರೆ ಇನ್ನೂ ನಡೆದಿಲ್ಲ. ಆದ್ದರಿಂದ ನಾನು ಸರ್ಕಾರದ

ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಸಂವಿಧಾನದಲ್ಲಿ ಅವಧಿ ಮುಗಿದ ಮೇಲೆ ಯಾರಿಗೂ Administrator ಆಗಲಿಕ್ಕೆ ಅವಕಾಶವಿಲ್ಲ. There will be Constitutional crisis. ಅದಕ್ಕೆ ಸರ್ಕಾರ ಕಾಲಮಿತಿಯಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಚುನಾವಣೆ ನಡೆಸಲಿಕ್ಕೆ ರಾಜ್ಯದ ಚುನಾವಣಾ ಆಯೋಗಕ್ಕೆ ನೀವು ಮನವೊಲಿಸಬೇಕು. ಏಕೆಂದರೆ State Election Commission, independent body ಆಗಿದ್ದರೂ ಕೂಡ it is a creation of this House. It is the responsibility of the State Election Commission to hold election on time. ಪ್ರಸ್ತಾಪ ಮಾಡಿದ್ದೇನೆ ಅದಕ್ಕೆ ಸರ್ಕಾರದಿಂದ ಉತ್ತರ ಬಯಸುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಕೂಡ ಆಯವ್ಯಯ ಭಾಷಣದ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಂದ ಶೇಕಡ 50 ಅನ್ನು ನಾವು ನಿಗದಿ ಮಾಡುತ್ತೇವೆ. ಅದನ್ನು ತಂದು ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಹಾಗಾದರೆ ಚುನಾವಣೆ ಆರು ತಿಂಗಳು ಮುಂದಕ್ಕೆ ಹೋಗುತ್ತದೆ. ಸರ್ಕಾರದವರು ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮಾಡಲಿಕ್ಕೆ ಇಚ್ಛೆಯಿಲ್ಲವೆಂದರೆ ಹೇಳಿ. ನೀವು Statement ಏನು ಕೊಡುತ್ತೀರಿ, ನಮ್ಮ ಗ್ರಾಮ ಪಂಚಾಯಿತಿ ಚುನಾವಣೆ ಮಾಡಲಿಕ್ಕೆ ಏನು ಅಭ್ಯಂತರವಿಲ್ಲ ಎನ್ನುತ್ತೀರಿ, ಈಗ ನೋಡಿದರೆ ಅಮೆಂಡ್‌ಮೆಂಟ್ ತರುತ್ತೇವೆಂದು ಹೇಳುತ್ತೀರಿ. ಅಮೆಂಡ್‌ಮೆಂಟ್ ತಂದರೂ ಕೂಡ it will take time.

ಶ್ರೀ ಎಸ್. ಸುರೇಶ್ ಕುಮಾರ್ : ಸರ್ಕಾರ ಆ ಅವಧಿಯೊಳಗೆ ಚುನಾವಣೆಯನ್ನು ಮಾಡುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಅವಧಿ ಎಂದರೆ ಮಾರ್ಚ್ ಒಳಗೆ ಚುನಾವಣೆ ಮಾಡಿ ಮುಗಿಸಬೇಕು. There will be Constitutional crisis. ಮಾರ್ಚ್ ಒಳಗೆ ಮಾಡುತ್ತೇವೆಂದು ಅವರು ಒಂದು circular ಹೊರಡಿಸಲಿ.

ಅಧ್ಯಕ್ಷರು : ಆಯಿತು. ಆ ಅವಧಿಯೊಳಗೆ ಮಾಡುತ್ತೇವೆ ಎಂದು ಹೇಳಿದ್ದಾರಲ್ಲ,. ಆಯಿತು.

ಈಗ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಾವಧಿ ಚರ್ಚೆ, ಶ್ರೀಯುತರಾದ ಹೆಚ್.ಡಿ.ರೇವಣ್ಣನವರು.

5. ನಿಯಮ 69ರ ಮೇರೆಗೆ ಚರ್ಚೆ :

ವಿಷಯ : ಪ್ರಸಿದ್ಧ ಗೋಕರ್ಣ ದೇವಸ್ಥಾನವನ್ನು ಶ್ರೀ ರಾಮಚಂದ್ರಪುರ ಮಠಕ್ಕೆ ಸರ್ಕಾರವು ಹಸ್ತಾಂತರ ಮಾಡಿರುವ ವಿಚಾರದಲ್ಲಿ ನೀಡಿರುವ ಸೂಚನೆ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, ನಿಯಮ 69 ರಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಚರ್ಚೆ ಆರಂಭಿಸಿ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಐತಿಹಾಸಿಕ ಪುರಾಣ ಪ್ರಸಿದ್ಧವಾದ ಗೋಕರ್ಣ ದೇವಸ್ಥಾನವನ್ನು Bombay Public Trust Act 1950 ರ ಮೇರೆಗೆ ದೇವಸ್ಥಾನ ಸಾರ್ವಜನಿಕರ ಟ್ರಸ್ಟ್ ಆಗಿ ನೋಂದಣಿಗೊಂಡು ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಮಿತಿಯನ್ನು ನೇಮಕ ಮಾಡಿದ್ದು ಸದರಿ ಕಾಯ್ದೆಯಡಿಯಲ್ಲಿ ಅಧಿಕಾರ ಹೊಂದಿದ್ದು ಸದರಿ ಸಹಾಯಕ ಕಮಿಷನರ್ ಆಜ್ಞೆ ಮಾಡಿದ್ದಾರೆ. ಹಿಂದಿನ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ 1950 ನಲ್ಲಿ ಆಗುವ ಅವಕಾಶ ಇದೆಯೆಂದು ನಾನು ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, 25.10.2001 ರಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದತ್ತಿ ಅಧೀನ 1997 ಶಾಸನ, ರಾಜ್ಯ ಪತ್ರ ಏನಿದೆ ಅದರಲ್ಲಿ 30.4.2003 ರಲ್ಲಿ ರಾಜ್ಯ ಸರ್ಕಾರ ಒಟ್ಟು 34,245 ದೇವಸ್ಥಾನಗಳನ್ನು ಧರ್ಮದತ್ತಿ ಸಂಸ್ಥೆಯ ಮೇಲ್ಕಂಡ ಕಾಯ್ದೆ 23ನೇ ಅಧಿನಿಯಮದ ಪ್ರಕರಣದ ಮೇರೆಗೆ ಇದು 20.04.2003 ರಲ್ಲಿ ಒಟ್ಟು 34,225 ದೇವಸ್ಥಾನಗಳನ್ನು ಸರ್ಕಾರಿ ದೇವಸ್ಥಾನಗಳೆಂದು ಒಂದು ಆದೇಶ ಹೊರಡಿಸಿದೆ. ಅದರಲ್ಲಿ 1 ರಿಂದ 92 ನೇ ಸ್ಥಾನಗಳ ದೇವಸ್ಥಾನಗಳಿದ್ದು ಈ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಆ ಪಟ್ಟಿಯಲ್ಲಿ 92 ನೇ ಸ್ಥಾನದಲ್ಲಿದೆ. ಒಟ್ಟು 3,424 ದೇವಸ್ಥಾನಗಳಿವೆ, ಇದರ ಬಗ್ಗೆ ಸರ್ಕಾರಿ ಆದೇಶ 2003 ರಲ್ಲಿ ಹೊರಡಿಸಿದ್ದಾರೆಂದು ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ. 1977 ರಲ್ಲಿ ಉಚ್ಚನ್ಯಾಯಾಲಯದಲ್ಲಿ ರಾಮಚಂದ್ರಪುರ

ಮಠದವರು ಪ್ರಶ್ನೆ ಮಾಡಿದರು. ಉಚ್ಚ ನ್ಯಾಯಾಲಯಕ್ಕೆ ಪ್ರಶ್ನೆ ಮಾಡಿದಂಥ ಸಂದರ್ಭದಲ್ಲಿ ಅಲ್ಲಿ ಸಹ ಅದನ್ನು ವ್ಯಕ್ತಿಗಳಿಗಾಗಲಿ, ಸಮಸ್ಯೆಗಳಿಗೆ ಅಧಿಸೂಚನೆ ಹೊರಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು 1977ರಲ್ಲಿ ಉಚ್ಚನ್ಯಾಯಾಲಯದಲ್ಲಿ ಹೇಳಿದ್ದಾರೆ. ಅದನ್ನು ಸಹ ತಮ್ಮ ಗಮನಕ್ಕೆ ತರುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏಕ ಪೀಠ ಸಂವಿಧಾನ ಬದ್ಧವಾಗಿ 9.9.2005 ರಂದು ಎತ್ತಿ ಹಿಡಿದ ಮೇರೆಗೆ ಸದರಿ ಆಜ್ಞೆಯೂ 34,245 ದೇವಸ್ಥಾನಗಳ ಬಗ್ಗೆ ಕೆಲವರು ಹೋಗಿದ್ದರು. ಅದರಲ್ಲಿಯೂ ಸಹ 9.9.2005 ರಲ್ಲಿ ಹೈಕೋರ್ಟ್ ಸಹ ಎತ್ತಿ ಹಿಡಿದಿದೆ. ಅದೇ ರೀತಿ 8.9.2005 ರಂದು ವಿಭಾಗೀಯ ಪೀಠವು ಇದು ಸರಿ, ಏಕಪೀಠದ್ದು ಸರಿಯಲ್ಲ ಎಂದು ಹೇಳಿ ಸರ್ಕಾರಿ ಆದೇಶ 34,225 ದೇವಸ್ಥಾನಗಳು ಕ್ರಮಬದ್ಧವಾಗಿದೆ.,

ಅದರೊಂದಿಗೆ ಕ್ರಮ ಸಂಖ್ಯೆ.92 ರಲ್ಲಿ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ, ಸರ್ಕಾರದ್ದು ಎಂದು clear cut ಆಗಿ Division Bench ನಲ್ಲಿ ಹೇಳಿದ್ದಾರೆ. ಇದರ ಮೇಲೆ ಅವರು Supreme Court ಗೆ ಹೋದರು, ಏನೂ ಆಗಲಿಲ್ಲ. ಅದರಲ್ಲಿ Undertaking ಕೊಟ್ಟಿರುವುದು ಇದೆ. ಅವರು undertaking ಏನು ಕೊಟ್ಟಿದ್ದಾರೆ ಎಂಬುದನ್ನು ಮಾನ್ಯ ಅಧ್ಯಕ್ಷರೇ ತಾವು ಬೇಕಾದರೆ ಪರಿಶೀಲನೆ ಮಾಡಬಹುದು. ಹೈಕೋರ್ಟ್, ಸುಪ್ರೀಮ್‌ಕೋರ್ಟ್ ಇರಬಹುದು, ಒಂದು ಹೊಸ ಕಾಯ್ದೆ ಮಾಡಿಬಿಟ್ಟು ನಾವು ಮಾಡುತ್ತೇವೆಂದು. ಇದಾದ ಮೇಲೆ 20.1.2007ರಲ್ಲಿ ಮಾಜಿ ರಾಜ್ಯಪಾಲರಾಗಿದ್ದವರು ಮುಖ್ಯ ನ್ಯಾಯಧೀಶ ರಾಗಿದ್ದ ಇವತ್ತು ನಿವೃತ್ತ ನ್ಯಾಯಮೂರ್ತಿಗಳಾದಂಥ ಶ್ರೀ ರಾಮಾಜೋಯಿಸ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದರು. ಅವತ್ತು ಶ್ರೀ ರಾಮಜೋಯಿಸ್ ರವರು clear cut ಆಗಿ ಆ ಸಮಿತಿಯಲ್ಲಿ ವರದಿಯನ್ನು ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆ. ಆ ಸಮಿತಿಯಲ್ಲಿ ಯಾರ್‍ಯಾರು ಇದ್ದರು ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಶ್ರೀ ವೀರೇಂದ್ರ ಹೆಗಡೆಯವರು ಇದ್ದರು, ಈಗಿನ Advocate General ಇದ್ದರು, ಇನ್ನೊಬ್ಬರು Additional Advocate General ಆದ ಶ್ರೀ ನಟರಾಜ್ ರವರು ಇದ್ದರು. ಶ್ರೀ ಅಶೋಕ್ ಹಾರ್‍ನಳ್ಳಿಯವರು ಎ.ಜಿ.ಯಾಗಿದ್ದವರು, ಅವರು ಸಹ ಆ ಸಮಿತಿಯಲ್ಲಿದ್ದಾರೆ. ಅವರು 13.7.2007 ರಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ clear cut

ಆಗಿ ಈ ದೇವಸ್ಥಾನವೇ ಅಲ್ಲ, ಯಾವುದೇ ದೇವಸ್ಥಾನವನ್ನು ಕೊಡಕೂಡದು ಎಂದು ವರದಿ ಕೊಟ್ಟಿರುವುದನ್ನು ತಾವಿನ್ನು ಕಡತದಲ್ಲಿ ಹಾಗೆ ಇಟ್ಟುಕೊಂಡಿದ್ದೀರಿ. ಅದನ್ನು ಇವತ್ತಿನವರೆಗೆ ಜಾರಿ ತರಲಿಕ್ಕೆ ಆಗಿಲ್ಲ. ಏಕೆಂದರೆ ಒಬ್ಬ ರಾಜ್ಯದ ನಿವೃತ್ತ ನ್ಯಾಯಾಧೀಶರಾದಂಥ ರಾಮಜೋಯಿಸ್ ರವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಮಿತಿಯ ವರದಿಯನ್ನು ತೆಗೆದುಕೊಂಡು ಹೋಗಿ ಸರ್ಕಾರ ಒಂದು ಕಸದ ಬುಟ್ಟಿಗೆ ಹಾಕಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಈಗಿನ Advocate General, ರಾಮಾಜೋಯಿಸ್ ರವರ ಅಧ್ಯಕ್ಷತೆ, ವೀರೇಂದ್ರ ಹೆಗಡೆಯವರು, ಜೊತೆಗೆ Additional Advocate General ನೀವು ಮಾಡಿರುವವರು ಇದ್ದಾರೆ, ಇದನ್ನೆಲ್ಲಾ ಮಾನ್ಯ ಅಧ್ಯಕ್ಷರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದೆರಡು ಮೂರು ಪ್ರಕರಣಗಳು ತಮ್ಮ ಗಮನಕ್ಕೆ ತರಬೇಕಾಗಿದೆ. ಏಕೆಂದರೆ ಜಿಲ್ಲಾಧಿಕಾರಿಗಳು clear cut ಆಗಿ ಸ್ಪಷ್ಟವಾಗಿ ಹೇಳುತ್ತಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ, 1.4.2008, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣದ ಶ್ರೀ ಮಹಬಲೇಶ್ವರ ದೇವಸ್ತಾನ ಆಡಳಿತ, ಗೋಕರ್ಣ ಮಠಾಧೀಶರಾದ ಶ್ರೀ ಶ್ರೀ ರಾಮಚಂದ್ರಪುರ ಮಠಕ್ಕೆ ವಹಿಸುವ ಕೊಡುವ ಕುರಿತು" ಎಂದು ವಿಷಯ ಪ್ರಸ್ತಾಪಿಸಿದ್ದಾರೆ.

ಜಿಲ್ಲಾಧಿಕಾರಿಗಳು ಏನು ಪ್ರಸ್ತಾಪಿಸಿದ್ದಾರೆ ಎನ್ನುವುದನ್ನು ತಮ್ಮ ಮಾಹಿತಿಗೆ ಕೊಡುತ್ತೇನೆ. ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ, 1–4–2008, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣ ಶ್ರೀ ಮಹಬಲೇಶ್ವರ ದೇವಸ್ಥಾನ ಆಡಳಿತ ಮಂಡಳಿಯ ಮಠಾಧೀಶ್ವರರಾದ ಶ್ರೀ ಶ್ರೀ ಶ್ರೀ ರಾಮಚಂದ್ರ ಪುರ ಮಠಕ್ಕೆ ವಹಿಸಿಕೊಡುವ ಕುರಿತು ಎಂದು ವಿಷಯವಿದೆ. ಅದರ ಕೆಳಗಡೆ Clear cut ಆಗಿ ಏನು ಹೇಳಿದ್ದಾರೆ ಎಂದರೆ:

"ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣ ಮಹಬಲೇಶ್ವರ ದೇವಸ್ಥಾನದ ಆಡಳಿತ ವಹಿವಾಟವನ್ನು ರಾಮಚಂದ್ರ ಪುರ ಮಠಕ್ಕೆ ವಹಿಸಿಕೊಡುವ ಶ್ರೀ ಕ್ಷೇತ್ರ ಗೋಕರ್ಣಪುರದ ಅಧ್ಯಕ್ಷರು ಸಲ್ಲಿಸಿರುವ ಮನವಿಯನ್ನು ಉಲ್ಲೇಖ ಪತ್ರದ ಮೂಲಕ ಈ ಕಾರ್ಯಾಲಯಕ್ಕೆ ಕಳುಹಿಸಿ ಸದರಿ ಮನವಿಯಲ್ಲಿ ಎಲ್ಲಾ ಅಂಶಗಳ ಬಗ್ಗೆ ನಿಯಮಾವಳಿಯನ್ನು

ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ತಿಳಿಸಲಾಗಿರುತ್ತದೆ." ಇದು ಆಯುಕ್ತರವರಿಗೆ ಬರೆದಿರುವ ಪತ್ರ, ಏನು ಬರೆದಿದ್ದಾರೆ ಎಂದರೆ:

"ಶ್ರೀ ಗೋಕರ್ಣ ಮಹಾಬಲೇಶ್ವರ ದೇವಸ್ಥಾನವು ಪುರಾತನ ಕಾಯ್ದೆಯ ಪ್ರಕಾರ ನೋಂದಣಿ ಸಾರ್ವಜನಿಕ ದೇವಸ್ಥಾನವಾಗಿದ್ದು, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಯ ಧರ್ಮದ ಶಕ್ತಿಗಳ ಅಧಿನಿಯಮ 1997ರಂದು ಸರ್ಕಾರ ಹೊರಡಿಸಿದ ಅಧಿಸೂಚನೆಯಂತೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಘಟಿತ ಧರ್ಮಶಕ್ತಿಗಳ ಅಧಿನಿಯಮ 1997 ಹಾಗೂ ನಿಯಮ 2002 ಅನ್ನು ಪರಿಶೀಲಿಸಲಾಗಿ ಸದರಿ ಅಧಿನಿಯಮದಲ್ಲಿ ಸರ್ಕಾರದ ಆಡಳಿತಕ್ಕೊಳಪಟ್ಟ ದೇವಸ್ಥಾನಗಳನ್ನು ಖಾಸಗಿ ಸಂಸ್ಥೆಗಳಿಗೆ ಅಥವಾ ಮಠಗಳಿಗೆ ವಹಿಸಿಕೊಡುವ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿರುವುದು ಕಂಡುಬಂದಿರುವುದಿಲ್ಲ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ರಾಮಚಂದ್ರಪುರ ಮಠ ಒಂದು ಸಮಾಜಕ್ಕೆ ಸೇರಿದ ಖಾಸಗಿ ಸಂಸ್ಥೆಯಾಗಿ ರುತ್ತದೆ ಹಾಗೂ ಗೋಕರ್ಣ ಮಹಾಬಲೇಶ್ವರ ದೇವಸ್ಥಾನವು ಸಾರ್ವಜನಿಕರ ದೇವಸ್ಥಾನವಾಗಿರುವುದರಿಂದ ಸದರಿ ದೇವಸ್ಥಾನದ ಆಡಳಿತವನ್ನು ಶ್ರೀ ರಾಮಚಂದ್ರಪುರ ಮಠಕ್ಕೆ, ಸಾಗರ ತಾಲ್ಲೂಕಿನ ಶಿವಮೊಗ್ಗರವರಿಗೆ ವಹಿಸಿಕೊಡುವುದು ಸೂಕ್ತವಲ್ಲವೆಂದು ಅಭಿಪ್ರಾಯವನ್ನು ಮಾಡಲಾಗಿದೆ."

ಇದು ಜಿಲ್ಲಾಧಿಕಾರಿಗಳು ಬರೆದಿರುವಂತಹ ಪತ್ರವಾಗಿದೆ. 01–04–2008ರಲ್ಲಿ clear cut ಆಗಿ ಜಿಲ್ಲಾಧಿಕಾರಿಗಳು ಇದನ್ನು ಬರೆದಿದ್ದಾರೆ. ಮತ್ತೆ ಸರ್ಕಾರ ಇದನ್ನು ಯಾವ ರೀತಿ ಮಾಡುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಅಲ್ಲಿ ಸ್ಥಳೀಯ ತಹಶೀಲ್ದಾರರು ಕೂಡ ಬರೆದಿದ್ದಾರೆ. ಸ್ಥಳೀಯ ತಹಶೀಲ್ದಾರರು ಏನು ಬರೆದಿದ್ದಾರೆ ಎಂಬುದನ್ನು ತಮ್ಮ ಮಾಹಿತಿಗೆ ಕೊಡಬೇಕಾಗುತ್ತದೆ. ಇದೂ ಅಲ್ಲದೇ Revenue Secretary ಒಂದು ಪತ್ರವನ್ನು ಆಯುಕ್ತರಿಗೆ ಕಳುಹಿಸುತ್ತಾರೆ. ಅವರು ಏನು ಬರೆದಿದ್ದಾರೆ ಎಂದರೆ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ ಅಧಿಸೂಚನೆ ಸಂಸ್ಥೆಪಟ್ಟಿ ಹೊರತುಪಡಿಸಿ ರಾಮಚಂದ್ರಪುರ ಮಠಕ್ಕೆ ವಹಿಸಿಕೊಡುವ ಬಗ್ಗೆ 14–05–2000 ರಂದು ಸರ್ಕಾರಿ ಪತ್ರದಲ್ಲಿ ಇದನ್ನು ಕೊಡುವುದಕ್ಕೆ ಬರುವುದಿಲ್ಲ. ತಿರಸ್ಕರಿಸಲಾಗಿದೆ ಎಂದು ಹೇಳುತ್ತಾರೆ. Revenue Secretary ಯವರು ಆಯುಕ್ತರವರಿಗೆ ತಿರಸ್ಕರಿಸಲಾಗಿದೆ ಎಂದು

ಹೇಳುತ್ತಾರೆ. 27-05-2008ರಲ್ಲಿ ರೆವಿನ್ಯೂ ಕಾರ್ಯದರ್ಶಿಯವರು ಧಾರ್ಮಿಕ ಇಲಾಖೆಯ ಆಯುಕ್ತರಿಗೆ ಸ್ಪಷ್ಟವಾಗಿ ಇದು ಕೊಡುವುದಕ್ಕೆ ಬರುವುದಿಲ್ಲ ಎಂದು ಅಭಿಪ್ರಾಯ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದೂ ಅಲ್ಲದೇ, ಹಲವಾರು ಪತ್ರಗಳನ್ನು ಬರೆದಿದ್ದಾರೆ. ಜಿಲ್ಲಾಧಿಕಾರಿಗಳಿರಬಹುದು, ರೆವಿನ್ಯೂ ಕಾರ್ಯದರ್ಶಿಯವರಿರಬಹುದು, ಬೇಕಾದರೆ ನೀವು ಕಡತವನ್ನು ತೆಗೆದು ನೋಡಿ. ಹಲವಾರು ಕಡತಗಳನ್ನು ತೆಗೆದು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ಕಡೆ ಜಿಲ್ಲಾಧಿಕಾರಿಗಳು ಬರೆಯುತ್ತಾರೆ, ಇನ್ನೊಂದು ಕಡೆ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಬರೆಯುತ್ತಾರೆ, ಮತ್ತೊಂದು ಕಡೆ ರೆವಿನ್ಯೂ ಕಾರ್ಯದರ್ಶಿಯವರು ಬರೆಯುತ್ತಾರೆ. ಇದು ಸಾರ್ವಜನಿಕರದು, ಇದನ್ನು ಯಾವುದೇ ಕಾರಣ ವಿಲ್ಲದೇ ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆಯುತ್ತಾರೆ. ಆದರೂ ಕೂಡ ಸರ್ಕಾರ ಇವೆಲ್ಲವನ್ನೂ ಧಿಕ್ಕರಿಸಿ, straight away ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಲಕ್ಷ್ಮೀನಾರಾಯಣರವರು ದೂರವಾಣಿ ಮುಖೇನ ಸೂಚನೆ ಕೊಡುತ್ತಾರೆ. ಸೂಚನೆ ಕೊಟ್ಟು ಅದೆಲ್ಲಾ ನನಗೆ ಗೊತ್ತಿಲ್ಲ. ಆದರೆ, ಈ ಗೋಕರ್ಣ ದೇವಸ್ತಾನವನ್ನು ರಾಮಚಂದ್ರ ಪುರ ಮಠಕ್ಕೆ ವಹಿಸಬೇಕು ಎಂದು ಯಾವುದೇ ಸರ್ಕಾರಿ ಆದೇಶವಿಲ್ಲದಿದ್ದರೂ ಕೂಡ straight away, ಅವರಿಗೆ ಕೊಟ್ಟುಬಿಟ್ಟಿದ್ದಾರೆ. ಏನೆಂದರೆ, ಈ ಸರ್ಕಾರ ಬಂದು ನಾಲ್ಕೇ ದಿನಗಳಲ್ಲಿ ರಾಮಚಂದ್ರ ಪುರದ ಮಠಕ್ಕೆ ಕೊಡುಗೆ ಕೊಟ್ಟಿದ್ದಾರೆ. ಇದರ ಉದ್ದೇಶವೇನು? ಸರ್ಕಾರ ಬರುವುದಕ್ಕೋಸ್ಕರ ರಾಮಚಂದ್ರಪುರ ಮಠಕ್ಕೆ ಏನಾದರೂ ಹೋಮ ಮಾಡಿಸಿದ್ದೀರಾ? ಅದು ಏನಾದರೂ ಇದ್ದರೆ ಹೇಳಿ. ನಾಲ್ಕೇ ದಿನಗಳಲ್ಲಿ ನೀವು ಆದೇಶ ಕಳುಹಿಸಿದ್ದೀರಿ ಎಂದರೆ, ಅಧಿಕಾರಿಗಳು ಬೇಡ, ಇದು ಸಾರ್ವಜನಿಕರ ಸ್ವತ್ತು, 3,425 ದೇವಸ್ಥಾನಗಳಲ್ಲಿ ಇದು 92ನೇ ಪಟ್ಟಿಯಲ್ಲಿ ಇದ್ದುದ್ದರಿಂದ ಕೊಡುವುದಕ್ಕೆ ಬರುವುದಿಲ್ಲವೆಂದು clear cut ಆಗಿ ಜಿಲ್ಲಾಧಿಕಾರಿಗಳು, ಧಾರ್ಮಿಕ ಇಲಾಖೆಯ ಆಯುಕ್ತರು, ರೆವಿನ್ಯೂ ಕಾರ್ಯದರ್ಶಿಗಳು ಎಲ್ಲರೂ ಸೇರಿ clear cut ಆಗಿ ಬರೆದಂತಹ ಆದೇಶವನ್ನು ಗಾಳಿಗೆ ತೂರಿ ಅದರ ಜೊತೆಗೆ Advocate General ಉದಯಹೊಳ್ಳರವರು ಸಹ ಸ್ಪಷ್ಟವಾಗಿ ಅಭಿಪ್ರಾಯ ಕೊಟ್ಟಿದ್ದಾರೆ. ಬೇಕಾದರೆ ಮಾಹಿತಿಯನ್ನು ತೆಗೆದುನೋಡಿ. Advocate General ಅಭಿಪ್ರಾಯ ಏನು ಹೇಳುತ್ತಾರೆ ಎಂದರೆ, ಇದು ಸಾರ್ವಜನಿಕ ಆಸ್ತಿಯಾಗಿರುವುದರಿಂದ ಮಠಕ್ಕೆ

ಕೊಡುವುದಕ್ಕೆ ಬರುವುದಿಲ್ಲ ಎಂದು clear cut ಆಗಿ ಹೇಳುತ್ತಾರೆ. ರಾಮಾಜೋಯಿಸರ ಅಧ್ಯಕ್ಷತೆಯಲ್ಲಿ ಏನು ತೀರ್ಮಾನವಾಗಿದೆ ಎಂಬುದನ್ನು ದಯಮಾಡಿ ಸಭೆಯ ಮುಂದೆ ತನ್ನಿ. ರಾಮಾಜೋಯಿಸರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಲಾಗಿದೆ. 20–01–2007 ರಲ್ಲಿ ಕಮಿಟಿ ಮಾಡಲಾಗಿದೆ. ಅದರಲ್ಲಿ ಏನಿದೆ? ಏನು clear cut ಆಗಿ ಹೇಳಲಾಗಿದೆ? ಶ್ರೀ ವೀರೇಂದ್ರ ಹೆಗ್ಗಡೆಯವರು ಇರಬಹುದು, ಈಗಿನ Advocate General ಇರಬಹುದು, Additional Advocate ನಟರಾಜ್‌ರವರು ಇರಬಹುದು, ಏನು ಹೇಳಿದ್ದಾರೆ ನೋಡಬೇಕು. ರಾಮಾಜೋಯಿಸರ ಸಮಿತಿಯ ವರದಿಯನ್ನು ಕಸದ ಬುಟ್ಟಿಗೆ ಹಾಕಿದ್ದಾರಾ, ಅದು ಏನಾಗಿದೆ, ವರದಿಯಲ್ಲಿ ಏನು ಹೇಳಿದ್ದಾರೆ, ಅದನ್ನು ದಯಮಾಡಿ ತಿಳಿಸಬೇಕು. ಉಡುಪಿಯಲ್ಲಿರುವ ಜನಾರ್ಧನ ದೇವಸ್ಥಾನ ಹಿಂದಿನ ಕಾಲದಿಂದ ಬಂದಿರುವಂತಹದ್ದು. ಉಡುಪಿಯಲ್ಲಿರುವ ದೇವಸ್ಥಾನಕ್ಕೂ ಸಹ ಇವತ್ತೂ ಕೊಡುವುದಕ್ಕೆ ಹೊರಟಿದ್ದಾರೆ. ಅಂಬರ್‌ಪಾಡಿ ದೇವಸ್ಥಾನ ಕೊಡುವುದಕ್ಕೆ ಹೊರಟಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಏನಾಗಿದೆ ಎಂದರೆ, ಯಾರ್ಯಾರಿಗೆ ಏನೇನು ಬೇಕು ಆ ರೀತಿಯಲ್ಲಿ ಒಂದು ಕಡೆ ದೇವಸ್ಥಾನ ಬರೆದುಕೊಡುವುದು, ಒಂದು ಕಡೆ ಮಠ ಬರೆದು ಕೊಡುವುದು, ಇನ್ನೊಂದು ಕಡೆ 10 ಕೋಟಿ ರೂ. ತೆಗೆದುಕೊಳ್ಳಿ, 20 ಕೋಟಿ ರೂ. ತೆಗೆದುಕೊಳ್ಳಿ ಎಂದು ಕೊಡುವುದು. ಇದರಲ್ಲಿ ಏನರ್ಥ ಇದೆ? ಯಾರದೋ ಸಾರ್ವಜನಿಕರ ಸ್ವತ್ತನ್ನು ಅಂದರೆ 10 ಜನರ ಸ್ವತ್ತನ್ನು ತೆಗೆದುಕೊಂಡು ಹೋಗಿ ನೀವು ಕೊಡುತ್ತೀರಿ ಎಂದರೆ, ಅರ್ಥವೇನು? ಇದರ ಜೊತೆಗೆ ಇನ್ನೊಂದು ತಮಗೆ ತಿಳಿಸುವುದೇನೆಂದರೆ, ತಹಶೀಲ್ದಾರರು ಜಮೀನನ್ನು ಒತ್ತುವರಿ ಮಾಡಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೊಸನಗರ ತಾಲ್ಲೂಕಿನ ತಹಶೀಲ್ದಾರರು ಯಾರಿದ್ದಾರೆ, ಆ ತಹಶೀಲ್ದಾರರು ಏನು ಮಾಡಿದ್ದಾರೆ ಎಂದರೆ, ವರದಿ ಕೊಟ್ಟರೆ ಗಲಾಟೆ ಮಾಡಿ ಅವರನ್ನೇ ಎತ್ತಂಗಡಿ ಮಾಡಿದ್ದಾರೆ. ತಹಶೀಲ್ದಾರ್‌ರವರು ವರದಿ ಕೊಟ್ಟಿದ್ದಾರೆ. ತಹಶೀಲ್ದಾರ್‌ರವರ ವರದಿಯನ್ನು ತಮ್ಮ ಗಮನಕ್ಕೆ ತರುತ್ತೇನೆ. ತಹಶೀಲ್ದಾರ್ ರವರ ಕಾರ್ಯಾಲಯ, ಹೊಸ ನಗರ ತಾಲ್ಲೂಕು, 04–07–2007, ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಹೊಸನಗರ ತಾಲ್ಲೂಕು ರಾಮಚಂದ್ರಪುರ ಮಠದ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಗೋಸಮ್ಮೇಳನದ ಬಗ್ಗೆ ದೂರು. ಇದರಲ್ಲಿ

ಎಲ್ಲಾ ಬರೆದು ಎಷ್ಟೆಷ್ಟು ಜಮೀನು ಹಾಗೂ ಯಾವ್ಯಾವ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎನ್ನುವುದನ್ನು ನಾನಲ್ಲ ಹೇಳುವುದು. ಏಕೆಂದರೆ, ಈ ಮಾಹಿತಿಯನ್ನು ಸರ್ಕಾರದ ದಾಖಲೆ ಪ್ರಕಾರ ಕೊಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಕಂದಾಯ ಇಲಾಖೆ ಜಮೀನು, ರಾಮಚಂದ್ರ ಪುರ ಸರ್ವೆ ನಂಬರ್ 7 ರಲ್ಲಿ 21 ಎಕರೆ, ರಾಮಚಂದ್ರಪುರ ಸರ್ವೆ ನಂಬರ್ 32 ರಲ್ಲಿ 35 ಗುಂಟೆ, ರಾಮಚಂದ್ರ ಪುರ ಸರ್ವೆ ನಂಬರ್ 33 ರಲ್ಲಿ 3 ಎಕರೆ 39 ಗುಂಟೆ. ಒಟ್ಟು 25 ಎಕರೆ, 39 ಗುಂಟೆ ಜಮೀನನ್ನು ಕಂದಾಯ ಇಲಾಖೆಯವರು ಒತ್ತುವರಿ ಮಾಡಿದ್ದಾರೆ. ಕಂದಾಯ ಇಲಾಖೆ ಯವರ ಜಮೀನು ಒತ್ತುವರಿಯಾಗಿರುವುದರ ಜೊತೆಗೆ ಕೆ.ಪಿ.ಸಿ.ಎಲ್. ಜಮೀನು ಸಹ ಒತ್ತುವರಿಯಾಗಿದೆ. ಕೆ.ಪಿ.ಸಿ.ಎಲ್. ಜಮೀನು ಅಂದರೆ ಸುಮಾರು 13 ಎಕರೆ 11 ಗುಂಟೆ ಜಮೀನನ್ನು ಒಂದು ಕಡೆ ಕಂದಾಯ ಇಲಾಖೆ ಇನ್ನೊಂದು ಕಡೆ ಕೆ.ಪಿ.ಸಿ.ಎಲ್. ಜಮೀನು. ಕೆ.ಪಿ.ಸಿ.ಎಲ್. ಜಮೀನನ್ನು ತಹಶೀಲ್ದಾರ್‌ರವರು ಸರ್ವೆ ನಂಬರ್ ವೈಸ್ ಕೊಟ್ಟಿದ್ದಾರೆ. ತಹಶೀಲ್ದಾರರು ವರದಿ ಕೊಟ್ಟಿದ್ದು, ಆ ತಹಶೀಲ್ದಾರರ ವರದಿಗೆ ಮಾನ್ಯ ಮುಖ್ಯಮಂತ್ರಿಗಳು ಬಹಿರಂಗವಾಗಿ ಒಂದು ಪತ್ರಿಕೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನು ಪತ್ರಿಕೆ ಹೇಳಿಕೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರಬೇಕಾಗುತ್ತದೆ. ಪತ್ರಿಕೆಯು ಸಹ ಇಲ್ಲಿ ಇದೆ. ವರದಿ ಕೊಡುವುದಕ್ಕೆ ಆ ತಹಶೀಲ್ದಾರರು ಯಾರು ಎಂದು ಮಾನ್ಯ ಮುಖ್ಯಮಂತ್ರಿಗಳೇ ನೇರವಾಗಿ ಪತ್ರಿಕೆಯಲ್ಲಿ ಹೇಳಿರುವ ವರದಿಯನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಸರ್ಕಾರ ಯಾವ ಉದ್ದೇಶಕ್ಕೋಸ್ಕರ ಈ ತರಹ ಮಾಡುತ್ತಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕಾಗುತ್ತದೆ. ಒಂದು ಕಡೆ ಸ್ಥಳೀಯರು ಅರ್ಜಿ ಕೊಡುತ್ತಿದ್ದಾರೆ. ಒಂದು ಕಡೆ ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಮಠಕ್ಕೆ ಇರುವುದು ಕೇವಲ 27 ಎಕರೆ. ಆದರೆ, ಮಠದವರು 200 ಎಕರೆ ಎಂದು ಹೇಳುತ್ತಿದ್ದಾರೆ. ನಕಲಿ ದಾಖಲೆ ಸೃಷ್ಟಿಸಿರುವ ಬಗ್ಗೆ ಗುಮಾನಿ. ಇದರ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಕಳೆದ ಒಂದು ವರ್ಷದಿಂದ ಸುಮಾರು 500 ಎಕರೆ ಹೆಚ್ಚು ಅರಣ್ಯ ಭೂಮಿಯನ್ನು ಆಕ್ರಮಿಸಿಕೊಂಡು ಅಲ್ಲಿದ್ದ ಬೆಲೆಬಾಳುವ ಬಿದಿರು ಮತ್ತು ಇತರೆ ಮರ-ಗಿಡಗಳನ್ನು ನಾಶಮಾಡಿರುವ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು.

(1-00 PM)

ಸಮ್ಮೇಳನ ಸಂದರ್ಭದಲ್ಲಿ ಪಂಕ್ತಿಬೇಧ ಮಾಡಿರುವ ಶ್ರೀ ರಾಮಚಂದ್ರಾಪುರ ಮಠದಲ್ಲಿ ಇವರು ಕ್ರಿಮಿನಲ್ ಕೇಸ್ ಹಾಕಿಕೊಂಡಿದ್ದಾರೆ. ಸಮ್ಮೇಳನಕ್ಕೆ 2 ಕೋಟಿ ರೂ. ಕೊಟ್ಟಿದ್ದೀರಿ. ಅಂದರೆ ಅರಣ್ಯ ಭೂಮಿಯನ್ನು ಅತಿಕ್ರಮಿಸುವವರಿಗೆ 2 ಕೋಟಿ ದುಡ್ಡು ಕೊಡುತ್ತೀರಿ! ಇದರ ಬಗ್ಗೆ ಅವರು ಇಲ್ಲಿ ಹೇಳುತ್ತಿದ್ದಾರೆ, ನಾನಲ್ಲ. RFO, ACF, ಇವರೆಲ್ಲರ ವರದಿಗಳೂ ಇವೆ, ಬೇಕಾದರೆ ನಿಮಗೆ ಕೊಡುತ್ತೇನೆ. ಒಂದು ಕಡೆ ಅರಣ್ಯಾಧಿಕಾರಿಗಳು; ACF ರವರು ಹೇಳಿದರೆ, ಇನ್ನೊಂದು ಕಡೆ Deputy Conservator of Forest ರವರು ಹೇಳುತ್ತಾರೆ, ಮತ್ತೊಂದೆಡೆ ತಹಶೀಲ್ದಾರ್ ರವರು ಹೇಳುತ್ತಾರೆ. ಅರಣ್ಯ ಒತ್ತುವರಿ ಮಾಡುವವರಿಗೂ ನೀವು ಸಮ್ಮೇಳನ ಮಾಡಿ ಎಂದು 2 ಕೋಟಿ ರೂ. ಕೊಡುತ್ತೀರೆಂದರೆ, ಅಧ್ಯಕ್ಷರೆ, ಇದರಲ್ಲಿ ಅರ್ಥ ಇನ್ನೇನಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಇವತ್ತು ಸರ್ಕಾರ ಯಾವ ರೀತಿ ನಡೆಯುತ್ತಿದೆ ಎಂದರೆ, ಕಳೆದ 18 ತಿಂಗಳ ಆಡಳಿತಾವಧಿಯಲ್ಲಿ ಯಾವ ರೀತಿ ಸಾರ್ವಜನಿಕರ ದೇವಸ್ಥಾನ ಗಳಲ್ಲಿದ್ದ ಲಕ್ಷಾಂತರ ಹಣ, ಉದಾಹರಣೆಗೆ ಹೇಳುವುದಾದರೆ, ದಿನಾಂಕ: 12.8.2008 ರಂದು ಹುಂಡಿ ಹೊಡೆಯುತ್ತಾರೆ. ಹುಂಡಿ ಹೊಡೆದ ಅವತ್ತಿನ ದಿವಸ ಹುಂಡಿಯಲ್ಲಿ 35 ಲಕ್ಷ ರೂ. ಇರುತ್ತದೆ. ಇದನ್ನು ಯಾರು ತೆಗೆದುಕೊಂಡರು? ಹುಂಡಿ ಹೊಡೆದು 35 ಲಕ್ಷ ರೂ.ಗಳನ್ನು ತೆಗೆದುಕೊಂಡು ಶ್ರೀ ರಾಮಚಂದ್ರಾಪುರ ಮಠಕ್ಕೆ ಕೊಡುವುದಕ್ಕೆ ಆದೇಶ ಕೊಟ್ಟವರು ಯಾರು? ಆದೇಶದ ಪ್ರತಿ ಎಲ್ಲಿ? ಅದರ ಜೊತೆಗೆ, 50 ಕೋಟಿ ರೂ.ಗಳ ಚಿನ್ನಾಭರಣ, 8 ಕೋಟಿಗೂ ಮಿಗಿಲಾಗಿ ಚಿನ್ನ, ಕನಿಷ್ಠ 8-9 ಕೋಟಿ ದುಡ್ಡು. 50 ಕೋಟಿ ರೂ. ಬೆಲೆ ಬಾಳುವ ಚಿನ್ನಾಭರಣ, 1 ಕೋಟಿ 8 ಲಕ್ಷ ಬೆಲೆ ಬಾಳುವ 400 ಕೆ.ಜಿಗಳಷ್ಟು ಬೆಳ್ಳಿ, ಅದೇ ರೀತಿ ಸುಮಾರು ನೂರಾರು ಎಕರೆಗಳಷ್ಟು ಗೋ ಕರ್ಣದ ಹೆಸರಿನಲ್ಲಿದ್ದ ಜಮೀನು. ಆ ಜಮೀನಿನ ಖಾತೆಯ ವರ್ಗಾವಣೆ. ಇದಕ್ಕೆ ಯಾವುದೇ ಸರ್ಕಾರದ ಆದೇಶವಿಲ್ಲ. ದೂರವಾಣಿ ಮುಖಾಂತರ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಲಕ್ಷ್ಮೀನಾರಾಯಣ ರವರು ಸೂಚನೆ ಕೊಟ್ಟು...ಇಲ್ಲವೆಂದು ಹೇಳಲಿ. ದೂರವಾಣಿ ಮುಖಾಂತರ ಲಕ್ಷ್ಮೀನಾರಾಯಣ ರವರು ಹೇಳಿಲ್ಲವೆಂದು ಹೇಳಲಿ, ಅನಂತರ, ನೀವು ಏನು ಹೇಳುತ್ತೀರೋ, ಅದಕ್ಕೆ ನಾನು ಭಾಗಿಯಾಗುತ್ತೇನೆ. ಹುಂಡಿ ಹೊಡೆಯುವುದಕ್ಕೆ ಸರ್ಕಾರದ

ಆದೇಶ ಇದೆಯೇ? ಜಮೀನನ್ನು hand over ಮಾಡುವುದಕ್ಕೆ ಸರ್ಕಾರದ ಆದೇಶವಿದೆಯೇ?

ಹುಂಡಿ ಹೊಡೆದು 35 ಲಕ್ಷ ರೂ.ಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಿ ಆದೇಶವಿದೆಯೇ? ಅದೇ ರೀತಿ ಸುಮಾರು 50 ಕೆ.ಜಿ. ಚಿನ್ನ ಅದು ಯಾರ ವಶಕ್ಕೆ ಹೋಯಿತು? ಅದಕ್ಕೆ ಸರ್ಕಾರಿ ಆದೇಶವಿದೆಯೇ? 400 ಕೆ.ಜಿ. ಬೆಳ್ಳಿ, ಇದು ಸುಮಾರು 1 ಕೋಟಿ 8 ಲಕ್ಷ ಎಂದು ಹೇಳುತ್ತಾರೆ.. ಇನ್ನು ಆ ಮಠಕ್ಕೆ, ದೇವರಿಗೆ ಸೇರಿದ ಜಮೀನಿಗೆ ಸಂಬಂಧಿಸಿದಂತೆ ರಾತ್ರೋ ರಾತ್ರಿ ಖಾತೆ ಬದಲಾವಣೆ ಆಗುತ್ತದೆಂದರೆ, ಇದೇನು ಸ್ವಾಮಿ? ಹೇಳುವವರು ಕೇಳುವವರು ಯಾರೂ ಇಲ್ಲ. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳ ದೂರವಾಣಿ ಮುಖಾಂತರ ಎಲ್ಲಾ ಆದೇಶವಾಗುತ್ತದೆಂದರೆ ಅರ್ಥವೇನು? ನನಗೆ ಗೊತ್ತಾಗಿಲ್ಲ. ಮುಖ್ಯಮಂತ್ರಿಗಳ ಕಾರ್ಯದರ್ಶಿಯೊಬ್ಬರು ಫೋನಿನಲ್ಲಿ ಇವತ್ತು ಇದನ್ನೆಲ್ಲಾ ಮಾಡಿಸುವ ಸನ್ನಿವೇಶಕ್ಕೆ ಹೋದರೆ, ಈ ಕುರಿತು ತನಿಖೆ ಮಾಡಿಸಿ. ತನಿಖೆಯಲ್ಲಿ ಏನು ಇದೆಯೆಂದು ಹೇಳಿ.

ಇದರ ಜೊತೆಗೆ, ನ್ಯಾಯಾಲಯಗಳಿಗೆ ನೀವೂ ಕೆಲವು ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದೀರಿ. ಒಂದು ಕಡೆ ಸಾರ್ವಜನಿಕರ ಆಸ್ತಿಯಾದ 3,425 ದೇವಸ್ತಾನಗಳನ್ನು, ಸರ್ಕಾರದ ಆದೇಶವಾದ ದೇವಸ್ಥಾನಗಳು 2003 ರಿಂದ ಬಂದ ದೇವಸ್ಥಾನಗಳನ್ನು ಯಾವ ರೀತಿ ನೀವು ಖಾಸಗಿ ಸಂಸ್ಥೆಗೆ ವಹಿಸಿಕೊಡುತ್ತೀರಿ ಎಂಬುದನ್ನು ದಯಮಾಡಿ ತಿಳಿಸಬೇಕು. ಈ ಜಮೀನನ್ನು ಯಾರು ಒತ್ತುವರಿ ಮಾಡಿಕೊಂಡು, ಅರ್ಧ ಎಕರೆ ಒತ್ತುವರಿ ಮಾಡಿಕೊಂಡು ಮನೆ ಕಟ್ಟುವುದಕ್ಕೆ ಯಾರು ಪ್ರಯತ್ನಿಸಿದ್ದಾರೋ, ಅವರ ಮೇಲೆ ಕೇಸ್ ಹಾಕಿದ್ದೀರಾ? ಯಾರಾದರೂ ಸಣ್ಣಪುಟ್ಟ ಅರ್ಧ ಎಕರೆ ಜಮೀನಿನಲ್ಲಿ 10 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡರೆ ಅವರ ಮೇಲೆ ಕೇಸ್ ಹಾಕುತ್ತೀರಿ. 400 ಎಕರೆ ಜಮೀನಿನಲ್ಲಿ ಜನತಾ ಮನೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಏಕೆಂದರೆ, ತಹಶೀಲ್ದಾರ್ ಬರೆದರೆ ಅವರ ಮೇಲೆ ಕ್ರಮ, ಅಲ್ಲದೆ, ಉದಾಹರಣೆಗೆ, ಕೆಲವು ಕಡೆ ಎಲ್ಲೆಲ್ಲಿ ಜಮೀನು ಒತ್ತುವರಿಯಾಗಿದೆ ಎಂಬುದನ್ನು ಸರ್ಕಾರ ಹೇಳಬೇಕು. ಉದಾಹರಣೆಗೆ, ಕೆಲವು ಹೊಸನಗರ ತಾಲ್ಲೂಕಿನಲ್ಲಿರಬಹುದು. ಇದರ ಜೊತೆಗೆ, ಇದರ ಬಗ್ಗೆ ನಾವೊಬ್ಬರೇ ಹೇಳುತ್ತಿಲ್ಲ. ಅಲ್ಲಿನ ಸಂಬಂಧಪಟ್ಟ ರೆವಿನ್ಯೂ ಇನ್ಸ್‌ಪೆಕ್ಟರ್ ಹೇಳಿದ್ದಾರೆ, ಸಂಬಂಧಪಟ್ಟ ಸರ್ವೇಯರ್ ಕೊಟ್ಟ ವರದಿ ಇದೆ, ಸ್ಥಳ ಮಹಜರು ಮಾಡಿರುವ ತನಿಖಾ ವರದಿ ಇದೆ. ಇವೆಲ್ಲವನ್ನೂ ತರಿಸಿ, ಸಭೆ ಮುಂದೆ

ಕಡತ ಇಡಿ. ಇದನ್ನು ಯಾವ ಉದ್ದೇಶಕ್ಕೋಸ್ಕರ ಮಾಡಿದಿರಿ? ಜಿಲ್ಲಾಧಿಕಾರಿಗಳು, ಧಾರ್ಮಿಕ ಇಲಾಖೆ ಆಯುಕ್ತರು ಮತ್ತು ಕಾರ್ಯದರ್ಶಿಯವರು ಬೇಡವೆಂದು ಬರೆದರೂ, ಮೂರೇ ದಿನಗಳಲ್ಲಿ ಸರ್ಕಾರ ಅದನ್ನು ಕೊಡುತ್ತದೆಂದರೆ ಅರ್ಥವೇನು?

ಇದರ ಜೊತೆಗೆ, ಹಲವಾರು ಕಡೆಗಳಲ್ಲಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವ ಪ್ರಕರಣಗಳೂ ಇವೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕಾಗುತ್ತದೆ. ಇವತ್ತು ಸುಪ್ರೀಂಕೋರ್ಟ್‌ನಲ್ಲಿ undertaking ಕೊಟ್ಟಿದ್ದಾರೆ. ಸರ್ಕಾರ ಹೈಕೋರ್ಟ್‌ನಲ್ಲಿ undertaking ಕೊಟ್ಟಿದೆ. ಅದನ್ನೆಲ್ಲಾ ಗಾಳಿಗೆ ತೂರಿ ನಾವು ಕಾಯ್ದೆ ತರುತ್ತೇವೆ, ಧಾರ್ಮಿಕ ಮತ್ತು ದತ್ತಿ ಇಲಾಖೆಯ ದೇವಾಲಯಗಳನ್ನು ಖಾಸಗಿಯವರಿಗೆ ಕೊಡುವುದಿಲ್ಲ, ಇದಕ್ಕೊಂದು ಪ್ರತ್ಯೇಕ ಕಾಯ್ದೆ ತರುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ undertaking ಕೊಟ್ಟು 4–5 ವರ್ಷಗಳಾಗಿವೆ. ಇವತ್ತಿನವರೆಗೂ ಏಕೆ ಕಾಯ್ದೆ ತಂದಿಲ್ಲ? ಇದರ ಹಿಂದೆ ಯಾವ ಉದ್ದೇಶ ಇದೆ ಎಂಬುದನ್ನು ಹೇಳಬೇಕು. ಯಾರನ್ನು ಉಳಿಸುವುದಕ್ಕೋಸ್ಕರ, ಶ್ರೀ ರಾಮಚಂದ್ರಾಪುರ ಮಠದ ದೇವಸ್ಥಾನವನ್ನು ಗೋಕರ್ಣಕ್ಕೆ ಕೊಡುವ ಒಂದೇ ಉದ್ದೇಶದಿಂದ ನೀವು ಈ ಕೆಲಸ ಮಾಡಿದ್ದೀರಾ?

ಒಂದು ಕಡೆ ಸುಪ್ರೀಂಕೋರ್ಟ್‌ಗೆ ಸುಳ್ಳು ಹೇಳುತ್ತೀರಿ, ಇನ್ನೊಂದು ಕಡೆ ಹೈಕೋರ್ಟ್‌ಗೂ ಸುಳ್ಳು ಹೇಳುತ್ತೀರಿ. ಅಲ್ಲದೆ, ನ್ಯಾಯಾಲಯಗಳಿಗೂ ಸರ್ಕಾರ ಸುಳ್ಳು ಹೇಳುವ ಪರಿಸ್ಥಿತಿ. ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ 18 ತಿಂಗಳಿನಿಂದ ಸುಳ್ಳು ಹೇಳುತ್ತಿದ್ದಾರೆ. ಬರೀ ಸಾರ್ವಜನಿಕರಿಗಷ್ಟೇ ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಕೊಂಡಿದ್ದೆವು, ಆದರೆ, ಇವರು ಹೇಳಿದ ಪ್ರಕಾರ ಸುಪ್ರೀಂ ಕೋರ್ಟ್‌ಗೂ ಸುಳ್ಳು ಹೇಳುವ ಪರಿಸ್ಥಿತಿ ಬಂದಿದೆಯಲ್ಲ. ಇದರ ಸಂಪೂರ್ಣ ಕಡತವನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಅಧ್ಯಕ್ಷರೆ, ಅವರು ಸುಪ್ರೀಂಕೋರ್ಟ್ ಮುಂದೆ undertaking ಕೊಟ್ಟಿದ್ದಾರೋ, ಇಲ್ಲವೋ ಕೇಳಿ. ಕಾನೂನು ಸಚಿವರು ಇವನ್ನೆಲ್ಲ ನೋಡುವುದಿಲ್ಲ. ಹೇಳಿದರೆ, ಸರ್, ನನಗೆ ಗೊತ್ತಿಲ್ಲ, ನಾವು ಸುಮ್ಮನೆ ಗೊತ್ತಿಲ್ಲದೇ ಮಾಡಿದೆವು, ತಪ್ಪಾಯಿತು ಎಂದು ಹೇಳುವುದು. ಆದುದರಿಂದ, ಸುಪ್ರೀಂಕೋರ್ಟ್‌ಗೆ undertaking ಕೊಟ್ಟಿದ್ದೀರೋ ಇಲ್ಲವೋ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಸಿವಿಲ್ ನ್ಯಾಯಾಲಯ ಇರಬಹುದು,

ಹೈಕೋರ್ಟ್ ಇರಬಹುದು, ಎಲ್ಲಾ ಕಡೆಗಳಲ್ಲೂ ಇದು ನಡೆದಿದೆ. ಮಾನ್ಯ ಅಧ್ಯಕ್ಷರೆ, ಇದಲ್ಲದೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಕಡೆ ಜಮೀನನ್ನು ಒತ್ತುವರು ಮಾಡಿರುವುದನ್ನೂ ಗಮನಕ್ಕೆ ತರಬೇಕಾಗುತ್ತದೆ. ಸುಪ್ರೀಂಕೋರ್ಟ್ ಮುಂದೆ ಏನು Special Leave Petition ಕೊಟ್ಟಿದ್ದಾರೆ....

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ತಾವು ಕೂಡ ವಕೀಲರಿದ್ದೀರಿ. ಸನ್ಮಾನ್ಯ ರೇವಣ್ಣನವರು ನಿಯಮ 60 ರಡಿ ತಂದಿರುವ ಪ್ರಸ್ತಾವವನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿದ್ದೀರಿ, ಅವರು ಮಾತನಾಡುತ್ತಿದ್ದಾರೆ. The whole matter is before the Court. ಕೋರ್ಟ್ ಮುಂದಿದೆ. ಸೆಕ್ಷನ್ 62 (vii) ರ ಪ್ರಕಾರ "the motion shall not deal with any matter which is under adjudication by Court of Law having jurisdiction in any part of India." ನಮ್ಮ ಕರ್ನಾಟಕದ ಕೋರ್ಟ್ ಮುಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಇದರ ಬಗ್ಗೆ ಚರ್ಚಿಸುವುದು ತಮಗೆ ಬಿಟ್ಟದ್ದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಕಾನೂನು ಸಚಿವರೆ, ಕೋರ್ಟ್‌ನಲ್ಲಿ ಯಾವ್ಯಾವ issues ಮೇಲೆ ಇದೆ ಎಂಬುದನ್ನು ಹೇಳಬೇಕು. ಇದನ್ನು ಅವರು ಜನರಲೈಸ್ ಮಾಡಿ ಹೇಳುತ್ತಿದ್ದಾರೆ. ಆದುದರಿಂದ, ಕೋರ್ಟ್‌ನಲ್ಲಿ ಯಾವ್ಯಾವ issues ಮೇಲೆ ಇದೆ ಎಂಬುದನ್ನು ಹೇಳಬೇಕು.

Sri M.T.KRISHNAPPA : It was struck down by the Supreme Court.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಹೈಕೋರ್ಟ್‌ನಲ್ಲಿ ಯಾವ particular issue ಮೇಲೆ ಇದೆ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ರೇವಣ್ಣನವರು raise ಮಾಡುತ್ತಿರುವ issue.. ..

ಶ್ರೀ ಟಿ.ಬಿ.ಜಯಚಂದ್ರ : ಶ್ರೀ ರಾಮಚಂದ್ರಾಪುರ ಮಠವು ಗೋಕರ್ಣ ದೇವಸ್ಥಾನದ ವಿಚಾರಕ್ಕೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿ ಅವತ್ತಿನಿಂದಲೂ ಪ್ರಕರಣ ಇದೆ. 2008ರಲ್ಲಿ ಏಕಾ ಏಕಿ ನೀವು ಖಾಸಗಿಯವರಿಗೆ ವಹಿಸುತ್ತೀರಿ. ಆಗ ನಿಮಗೆ ಕೋರ್ಟ್ ಅಡ್ಡ ಬರಲಿಲ್ಲವೇ? ಈಗ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅಡ್ಡ ಬರುತ್ತದೆಂದು ಹೇಳುವುದಾದರೆ, ನೀವು ಏಕಾಏಕಿ ಎಲ್ಲಾ ಕಾನೂನುಗಳನ್ನು ಮುರಿದು ಕೊಡುವುದಕ್ಕೆ ನಿಮ್ಮಗೆ ಅಧಿಕಾರ ಇದೆಯೆಂದರೆ,

ಮತ್ತು ಆ ಕುರಿತು ಇಲ್ಲಿ ನಿಯಮ 69ರಡಿ ಚರ್ಚಿಸುವುದಕ್ಕೆ ಅವಕಾಶ ವಿಲ್ಲವೆಂದರೆ ಹೇಗೆ? ಈ ರೀತಿಯಾಗಿ ಆಕ್ಷೇಪಗಳನ್ನು ಎತ್ತುವುದು ಸರಿಯಲ್ಲವೆಂದು ನನಗನಿಸುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವುದು ನನ್ನ ಕರ್ತವ್ಯವಾದ್ದರಿಂದ, ಅದನ್ನು ನಾನು ಮಾಡಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ಅವರು ಯಾವುದೋ ಒಂದು ವಿಚಾರ ತಂದಿದ್ದಾರೆ. ಅವರು ಮಾತನಾಡಿದ ನಂತರ ನಾನೂ ಎರಡು ನಿಮಿಷಗಳ ಕಾಲ, ಮಾತನಾಡ ಬಯಸುತ್ತೇನೆ. ನಾನು ಅದಕ್ಕೆ signatory ಇಲ್ಲದಿದ್ದರೂ...

ಅಧ್ಯಕ್ಷರು : ಕೋರ್ಟ್‌ನಲ್ಲಿ ಆ ವಿಷಯ ಇದ್ದರೆ, ಅದನ್ನು ಟಚ್ ಮಾಡದೇ ಸೂಕ್ಷ್ಮವಾಗಿ ಮಾತನಾಡಬೇಕಾಗುತ್ತದೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಅಧ್ಯಕ್ಷರೆ, it is quite different thing. ಅಸಿಸ್ಟೆಂಟ್ ಕಮೀಷನರ್‌ರವರು ಹಿಂದೆ ಒಂದು ಆದೇಶ ಮಾಡುತ್ತಾರೆ. ಈ ಸಮಿತಿಯನ್ನು ರಚಿಸುವುದಕ್ಕೆ ಎ.ಸಿ.ಯವರಿಗೆ ಅಧಿಕಾರ ಇರುತ್ತದೆ. ಆದರೆ, ಅದನ್ನು ಪ್ರಶ್ನಿಸಿದ್ದಾರೆ. ಅದನ್ನು single bench ನಲ್ಲಿ uphold ಮಾಡಿದ್ದಾರೆ. ಮತ್ತೆ double bench ನಲ್ಲಿ ಅದನ್ನು turn down ಮಾಡಿದ್ದಾರೆ. Again, Supreme Court uphold ಮಾಡಿದೆ. ಅದರಲ್ಲಿ ಏನು ಹೇಳುತ್ತಾರೆಂದರೆ, it is submitted that concerning the grievances urged by the respondent, petitioner the State is proposed to make necessary amendments to the Act including under the perview of the Act...The temple attached to the....demolishing temple and includes religious charitable institutions Jain, Buddists, Sikhs under the purview of the Act hence, on the ground, Hon'ble judgment of the division, Karnataka High Court required to be reverse by the recording.

ಅಧ್ಯಕ್ಷರು : ಆಯಿತು, ಮೆರಿಟ್ ಎಲ್ಲಾ ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ಸುಪ್ರೀಂ ಕೋರ್ಟ್‌ಗೆ ಏನೆಂದು undertaking ಕೊಟ್ಟಿದ್ದಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು : ಕೋರ್ಟ್‌ನಲ್ಲಿರುವ ವಿಚಾರದ ಬಗ್ಗೆ ಚರ್ಚೆ ಬೇಡ. ನೀವು ಇದರ ಬಗ್ಗೆ ಹೇಗೆ ಚರ್ಚೆ ಮಾಡುತ್ತೀರಿ?

ಶ್ರೀ ಎಂ.ಟಿ.ಕೃಷ್ಣಪ್ಪ : Directions given by the Supreme Court ಎಂದು ಇದೆ.

ಅಧ್ಯಕ್ಷರು : ಅದು finally dispose ಆಗಿಲ್ಲ ಅಲ್ಲವೇ?

ಶ್ರೀ ಎಂ.ಟಿ.ಕೃಷ್ಣಪ್ಪ : ಆಗಿದೆ. ಸುಪ್ರೀಂ ಕೋರ್ಟ್‌ನವರು ಕೊಟ್ಟಿದ್ದಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ನಾವಲ್ಲಾ. ಸರ್ಕಾರವೇ ಅದನ್ನು undertake ಮಾಡಿಕೊಂಡಿರುವುದು. ಅವರು ಓದಿ ಹೇಳಿದ್ದು ಅದನ್ನೇ. ಅದರಂತೆ ನಾವು ಕೇಳಿದ್ದೇವೆ.

ಅಧ್ಯಕ್ಷರು : ಈ ಮ್ಯಾಟರ್ ಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದರೆ..

SRI. M.T. KRISHNAPPA : Not pending. ಡಿಸ್‌ಪೋಸ್ ಆಗಿದೆ.

ಅಧ್ಯಕ್ಷರು : ಮುಜರಾಯಿ ಸಚಿವರೇ matter is pending with the Court ಎಂದು ಹೇಳುತ್ತಿದ್ದಾರೆ.

SRI M.T. KRISHNAPPA : When the matter is before the court, how they handed over? That is important ಅಲ್ಲವೇ?

ಶ್ರೀ ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದೇವಸ್ಥಾನಕ್ಕೆ ಸಂಬಂಧಪಟ್ಟಿರುವ ಪ್ರಕರಣ ಹೈಕೋರ್ಟ್‌ನ ಧಾರವಾಡ ಬೆಂಚ್‌ನಲ್ಲಿ ಪೆಂಡಿಂಗ್ ಇದೆ. ನಿನ್ನೆ ಇದರ ಒಂದು ಭಾಗ ಡಿಸ್‌ಪೋಸ್ ಮಾಡಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಅದು ಹಳೆ ಕೇಸು.

ಅಧ್ಯಕ್ಷರು : ಸಚಿವರು ಏನು ಮ್ಯಾಟರ್ ಪೆಂಡಿಂಗ್ ಇದೆಯೆಂದು ಹೇಳಲಿ.

ಶ್ರೀ ಹೆಚ್.ಡಿ.ರೇವಣ್ಣ : ಧಾರವಾಡ ಹೈಕೋರ್ಟ್‌ನಲ್ಲಿ 25 ಸಾವಿರ ರೂಪಾಯಿ ದಂಡವನ್ನೂ ಹಾಕಿದ್ದಾರೆ.

ಶ್ರೀ ವಿ.ಎಸ್.ಆಚಾರ್ಯ : ನಿನ್ನೆ ಒಂದು ಕೇಸು-ವಜಾ ಆಗಿದೆ. ಇನ್ನೊಂದು ಮುಖ್ಯವಾದ ಕೇಸು ಬಾಕಿ ಇದೆ. ಇಂಥ ಸಂದರ್ಭದಲ್ಲಿ ಕಾನೂನಿನ ಅಂಶಗಳನ್ನು ಇಲ್ಲಿ ಚರ್ಚೆಮಾಡುವುದು ಅಷ್ಟೊಂದು ಸೂಕ್ತವಲ್ಲ ಎಂಬುದನ್ನು ತಮ್ಮ ಗಮನಕ್ಕೆ ಈಗಾಗಲೇ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ಉಳಿದಂತೆ ಬಿ.ಪಿ.ಟಿ. Act, ಕರ್ನಾಟಕದ Act ಮತ್ತು ಅಲ್ಲಿ ಏನಾದರು ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿದಂಥ ವಿಷಯದ

ಬಗ್ಗೆ ಕೆಲವು ಮಾಹಿತಿಯನ್ನು ನಾವು ಕೊಡಬಹುದು. ಆದರೆ, ಈ ಸಂದರ್ಭದಲ್ಲಿ ವಿಚಾರ ಕೋರ್ಟ್‌ನಲ್ಲಿ ಬಾಕಿ ಇರುವಾಗ ಬಿ.ಪಿ.ಟಿ. Act ಈಗ ಇಲ್ಲ, ಅದು ಹೋಗಿದೆ. ಆದರೆ, ಕರ್ನಾಟಕ act ನಂತೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಅದನ್ನು ನಾವು ಡಿಫೆಂಡ್ ಮಾಡಿಕೊಳ್ಳಬಹುದು. ಅತಿಕ್ರಮಣವಂತೂ ಏನು ಆಗಿಲ್ಲ ಎಂದು ಇತ್ತೀಚಿನ ವರದಿಯಲ್ಲಿದೆ. ಈಗ ಅಲ್ಲಿ ಒಂದು ಗೋ ಸಮ್ಮೇಳನ ಮಾಡಿದಂಥದ್ದು ನಿಜ. ಆಮೇಲೆ ಆ ಜಾಗವನ್ನು ಬಿಟ್ಟುಕೊಟ್ಟಿದ್ದೇವೆ, . ಅದನ್ನು ಕೇವಲ ಉಪಯೋಗ ಮಾಡಿಕೊಂಡಿದ್ದೇವೆಂದು ಮಾತ್ರ ಬರೆದಿದ್ದಾರೆ. ಆ ಭಾಗದಲ್ಲಿ ಒಂದಷ್ಟು ಭಾಗ 11 ಎಕರೆ ಏನಿತ್ತು ಕೆ.ಪಿ.ಸಿ.ಎಲ್. ನವರಲ್ಲಿ ಇದ್ದದ್ದು ನಿಜ. ಆದರೆ, ಆ ಎಲ್ಲಾ ಜಾಗವನ್ನು ಈಗ ಬಿಟ್ಟಿರುವುದರಿಂದ ಅಲ್ಲಿ ಯಾವ ಅತಿಕ್ರಮಣವೂ ಇಲ್ಲ. ಅವರು ಅಲ್ಲಿ ಒಂದು ಗೋ ಶಾಲೆಯನ್ನು ಕಟ್ಟಿದ್ದಾರೆ. ಅದನ್ನು ಅವರ ಮಾಲೀಕತ್ವದಲ್ಲಿನ ಜಾಗದಲ್ಲಿ ಎಂದು ಸ್ಪಷ್ಟಪಡಿಸಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಇನ್ನೂ ಪೂರ್ಣ ಮಾಡಿಲ್ಲ. ನಾನು ಪೂರ್ಣವಾಗಿ ಮಾತನಾಡಿದ ಮೇಲೆ ತಾವು ಉತ್ತರ ಕೊಡಬೇಕಾದರೆ ಕೊಡಿ. ಅವರೇ ಒತ್ತುವರಿಯಾಗಿದೆಯೆಂದು ಹೇಳಿದ್ದಾರೆ. ಅವರೇ ಬಿಟ್ಟುಕೊಟ್ಟಿದ್ದಾರೆಂದು ಹೇಳಿದ್ದಾರೆ. ಇದರ ಅರ್ಥವೇನು? ಕೆ.ಪಿ.ಸಿ.ಎಲ್. ಜಾಗದಲ್ಲಿ ಯಾರೋ ಹೋಗಿದ್ದಾರೆ, ಈಗ ಬಿಟ್ಟಿದ್ದಾರೆಂದರೆ ಏನರ್ಥ? ಆದ್ದರಿಂದ, ನಾನು ಮಾತನಾಡಿದ ಮೇಲೆ ಅವರು ಉತ್ತರವನ್ನು ಕೊಡಲಿ.

ಶ್ರೀ ವಿ.ಎಸ್.ಆಚಾರ್ಯ : ನಮಗೆ ಉತ್ತರ ಕೊಡಲು ಯಾವುದೇ ಮುಜುಗರವಿಲ್ಲ. ಆದರೆ, ಕೋರ್ಟ್ ಮುಂದೆ ವಿಚಾರ ಇರುವುದರಿಂದ ನಿಯಮಾವಳಿಯಂತೆ ಬರುವಂಥ ಸಂದಿಗ್ಧತೆಯನ್ನು ತಮ್ಮ ಗಮನಕ್ಕೆ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ಅದಕ್ಕಿಂತಲೂ ಅವರು ಬೇಕು ಎಂದರೆ ತಾವು ಅಪ್ಪಣೆ ಕೊಟ್ಟರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ನಿಲುವಳಿ ಸೂಚನೆ ಮೂಲಕ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ತಾವೇ ಅದನ್ನು ಅವರು ಸಬ್‌ಮಿಷನ್ ಮಾಡಿದ ಮೇಲೆ ನೀವು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳಬಹುದೆಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಆಗಲೂ ಈ ಆಕ್ಷೇಪ ಮಾಡಿದಾಗಲೂ ಅವಕಾಶ ಕೊಟ್ಟಿದ್ದೀರಿ. ಆದರೆ, ಮುಖ್ಯವಾಗಿರುವ ವಿಚಾರ, ಕೋರ್ಟ್‌ನಲ್ಲಿ ಇರುವ ಕಾರಣ ಇದು ಸಬ್‌ಜ್ಯುಡೀಸ್ ಆಗುತ್ತದೆ ಎನ್ನತಕ್ಕ ಭಾವನೆ ಬೇಡ.

ಆದರೆ, ಇಲ್ಲಿ ಇರತಕ್ಕ ವಿಚಾರವೇನೆಂದರೆ ನೀವು ಸಬ್‌ಜ್ಯುಡೀಸ್ ಎಂಬ ಒಂದನ್ನೇ ಆಧಾರವಾಗಿ ಇಟ್ಟುಕೊಂಡು ಮಾಡುವುದಾದರೆ ಸಾರ್ವಜನಿಕವಾಗಿ ಯಾವ ರೀತಿಯಾದ ಆತಂಕವಾಗಿದೆ ಎನ್ನತಕ್ಕ ಅರಿವು ಇದೆಯೇ? ಗೋಕರ್ಣ ಎಂದರೆ ಆತ್ಮ ಲಿಂಗ ಇರುತಕ್ಕದ್ದು. ಅಂದರೆ ಶಿವ ನೆಲೆಸಿರುವುದೇ ಅಲ್ಲಿ ಎಂಬ ರೀತಿಯಲ್ಲಿ. ಅಲ್ಲಿ ಜಾತಿ ಮತ್ತು ಇನ್ನೊಂದು ಪ್ರಶ್ನೆ ಇಲ್ಲ. ಅವರು ಇವರು ಎನ್ನುವ ಪ್ರಶ್ನೆ ಇಲ್ಲ. ಯಾರು ಬೇಕಾದರು ಹೋಗಿ ಆತ್ಮ ಲಿಂಗವನ್ನು ಸ್ಪರ್ಶ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತಿನ ಸಂದರ್ಭದಲ್ಲಿ ಅಲ್ಲಿ ವಿವಾದವಿದೆ. ಅದರ ಆಡಳಿತವನ್ನು ಯಾರಿಗೆ ಕೊಡಬೇಕು, ಏನು ಎಂಬ ಬಗ್ಗೆ ಬಹಳ ವರ್ಷದಿಂದ ಇದು ನಡೆಯುತ್ತಿದೆ. ರಾಮಾಯಣದ ಕಾಲದಿಂದಲೂ ಇದು ಒಂದು ಮಹತ್ವವಾದ ಜಾಗ, ವಿಶೇಷವಾಗಿ ಹಿಂದೂಗಳಿಗೆ, ಎಲ್ಲ ಜಾತಿವರ್ಗಕ್ಕೆ ಸೇರಿರತಕ್ಕವರು ಸಹ ಬಹಳ ಗೌರವದಿಂದ ನಡೆದುಕೊಳ್ಳತಕ್ಕ ಜಾಗ ಇದಾಗಿದೆ. ಇಲ್ಲಿಗೆ ದೇಶ ವಿದೇಶಗಳಿಂದಲೂ ಜನರು ಬರುತ್ತಿರುತ್ತಾರೆ. ಈ ರೀತಿಯ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನವನ್ನು ಏಕಾಏಕಿ ನೀವು ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಒಂದು ಖಾಸಗಿ ಮಠಕ್ಕೆ ಕೊಡಲು ಬರುತ್ತದೆಯೇ ಎಂಬ ವಿಚಾರ ಬಂದಾಗ, ಬಹುಶಃ ಅದು ಸರ್ಕಾರಕ್ಕೆ ಗೊತ್ತಿಲ್ಲವೆಂದಲ್ಲ, ಅದು ಸರ್ಕಾರಕ್ಕೆ ಗೊತ್ತಿದೆ. ಬಹುಶಃ ಆ ದೇವಸ್ಥಾನಗಳ ಅಧಿನಿಯಮದ ಪ್ರಕಾರ ಅದನ್ನು ಯಾರಿಗೂ ಕೊಡಲು ಬರುವುದಿಲ್ಲ. ಇಲ್ಲಿಯವರೆಗೆ ಹೋಗುತ್ತಾರೆಂದರೆ ಈ ರಾಜ್ಯದಲ್ಲಿರತಕ್ಕ 33 ಸಾವಿರ ದೇವಸ್ತಾನಗಳಲ್ಲಿ ಅಧಿಸೂಚನೆ ಇದ್ದರೂ ಇದೊಂದನ್ನು ಡಿಲೀಟ್ ಮಾಡುತ್ತೀರಿ. ಆ ರೀತಿ ಒಂದೊಂದನ್ನು ಡಿಲೀಟ್ ಮಾಡಿ ರಾಮಚಂದ್ರಾಪುರ ಮಠಕ್ಕೆ ಕೊಡುತ್ತೀರಿ ಎಂದರೆ ಯಾವ ಉದ್ದೇಶ? ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದೀರಿ? ರಾಮಚಂದ್ರಾಪುರ ಮಠಕ್ಕೆ ಕೊಟ್ಟಿರುವುದು, ರಾಮಚಂದ್ರಾಪುರ ಮಠವು ಒಂದು ಋಷಿ ಸಂಸ್ಕೃತಿಗೆ ಬಂದಿರತಕ್ಕದ್ದು. Hindu Religious Institutions ಎಂದು ರಿಜಿಸ್ಟರ್ ಆಗಿರತಕ್ಕದ್ದು. ಆ ಸಂಸ್ಕೃತಿಯಲ್ಲಿ, ನಡವಳಿಕೆಯಲ್ಲಿ ಬಂದಿರತಕ್ಕದ್ದು. ಎಲ್ಲೋ ಒಂದು ಕಡೆ ಖಾಸಗಿಯಾಗಿರುವ ಸ್ವಾಮಿಯವರ ಕಡೆಗೆ ಹೋದಂಥ ಸಂದರ್ಭದಲ್ಲಿ ಬಹುಶಃ ಎಲ್ಲಾ ಜಾತಿವರ್ಗದವರಿಗೆ ನಂಬಿಕೆ ಇರತಕ್ಕ ಜನರು ಅಲ್ಲಿಗೆ ಹೋಗುವಾಗ ಅದು ಪ್ರತಿಬಿಂಬ ಆಗುವುದಿಲ್ಲವೇ? ಮುಂದೆ ತೊಂದರೆ ಆಗುವುದಿಲ್ಲವೇ?

ಈಗೇನೋ ತಾತ್ಕಾಲಿಕವಾಗಿ ಏನೂ ತೊಂದರೆ ಇಲ್ಲ. ಆದರೆ, ಮುಂದೆ ಒಂದು ದಿವಸ ಎಲ್ಲೋ ಒಂದು ರೀತಿಯಲ್ಲಿ ಇದು ತೊಂದರೆಯಾಗುತ್ತದೆ. ನಾನು ಒಂದು ಕೇಳುತ್ತೇನೆ, 33 ಸಾವಿರ ದೇವಸ್ಥಾನಗಳು ಇರುವಂಥ ಸಂದರ್ಭದಲ್ಲಿ ಇದೊಂದು ದೇವಸ್ಥಾನವನ್ನು ಮಾತ್ರ, ಎಲ್ಲಿ ದೇಶ ವಿದೇಶದಿಂದ ಜನರು ಬರುತ್ತಾರೋ, ಆತ್ಮಲಿಂಗ ಎಂದರೆ ಬಹುಶಃ ಯಾವುದೇ ದೇವಸ್ಥಾನಕ್ಕೆ ಹೋದರೂ, ನಮ್ಮ ನಂಬಿಕೆಯ ಪ್ರಕಾರ, ದೇವರು ಬಂದು ಅಲ್ಲಿ ನೆಲೆಸಿದ ಎಂಬುದು ಎಲ್ಲೂ ಕೂಡ ಇಲ್ಲ. ಆದರೆ ಅದು ಗೋಕರ್ಣದಲ್ಲಿದೆ. ಯಾರೇ ಹೋದರು, ಯಾವುದೇ ಜಾತಿ ವರ್ಗದವರು ಸಹ ಆತ್ಮಲಿಂಗವನ್ನು ಮುಟ್ಟತಕ್ಕ ಅವಕಾಶ ಇದೆ. ಇದನ್ನು ಖಾಸಗಿ ಮಠಕ್ಕೆ ಕೊಟ್ಟಂಥ ಸಂದರ್ಭದಲ್ಲಿ ಜನರ ಭಾವನೆ ಏನಾಗುತ್ತದೆ? ಅದು ಏನಾದರು ಚರ್ಚೆಯಾಗಿದೆಯೇ? ಅದು ಕೋರ್ಟಿನಲ್ಲಿ ಇಲ್ಲವೇ? ಅದು ಕೋರ್ಟ್‌ನಲ್ಲಿ ಇದ್ದೇ ಇದೆ. ಆ ರೀತಿ ಅದು ಕೋರ್ಟ್‌ನಲ್ಲಿ ಇದ್ದಾಗಿಯೂ ನೀವು ಸರ್ಕಾರದ ಪರಮಾಧಿಕಾರವನ್ನು ಉಪಯೋಗಿಸಿ ಅದನ್ನು ಡಿಲೀಟ್ ಮಾಡುವ ಉದ್ದೇಶ ಏನಿತ್ತು ಎಂಬುದು ಬಹಳ ಮುಖ್ಯ. ಇಲ್ಲಿ ಅನುಮಾನ ಬರತಕ್ಕದ್ದು ನಿಮ್ಮ ಉದ್ದೇಶದ ಬಗ್ಗೆ. ನೀವು ಏನು ಮಾಡಬೇಕೆಂದು ಮಾಡಿದ್ದೀರಿ? ನಾಳೆ ಎಲ್ಲಾ ದೇವಸ್ಥಾನಗಳನ್ನು ಮಠಗಳಿಗೆ ಕೊಟ್ಟುಬಿಡ ಬೇಕೆಂದು ಮಾಡಿದ್ದೀರೋ? ಏನು ಮಾಡಬೇಕೆಂದು ಮಾಡಿದ್ದೀರಿ? ದಯಮಾಡಿ ನಿಮ್ಮ hidden agenda ಹೇಳಬೇಕಾಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ : ಆದಾಯ ಇರತಕ್ಕ ದೇವಸ್ಥಾನಗಳನ್ನು ಮಾತ್ರ ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ : ಬೇರೆ ಜಾತಿಗೆ ಸೇರಿರತಕ್ಕವರು ನಿಮ್ಮ ಮೇಲೆ ಅನುಮಾನ ಮಾಡತಕ್ಕ ನಿಟ್ಟಿನಲ್ಲಿ ಆಗುತ್ತದೆ. ಒಂದು ಮಠದ ವ್ಯಾಪ್ತಿಗೆ ಹೋದಂಥ ಸಂದರ್ಭದಲ್ಲಿ, ಆಡಳಿತ ಅವರ ವಶಕ್ಕೆ ಹೋದಂಥ ಸಂದರ್ಭದಲ್ಲಿ ನಾಳೆ ನಿರ್ಬಂಧ ಆಗಬಹುದು. ಶತ ಶತಮಾನಗಳಿಂದ, ಯುಗಯುಗ ನಡೆದುಕೊಂಡು ಬಂದಿರುವಂಥ ನಡವಳಿಕೆ, ಸಂಪ್ರದಾಯ, ಪರಂಪರೆ ಎಲ್ಲವನ್ನು ಹಾಳು ಮಾಡುವ ನಿಟ್ಟಿನಲ್ಲಿ ಆಗುವುದಾದರೆ ನೀವು ಏನು ಮಾಡುತ್ತೀರಿ? ಹಿಂದೂಗಳ ಉದ್ಧಾರಕ್ಕೋಸ್ಕರವೇ? ನೀವು ಅವತಾರ ಮಾಡಿದ್ದೀರಿ ಎಂಬ ಭಾವನೆ ಬರತಕ್ಕ ರೀತಿಯಲ್ಲಿ ನೀವಿದ್ದಾಗ, ಈ ಹಿಂದೂ ಧರ್ಮದಲ್ಲಿ ಜಾತಿ, ವರ್ಗದ ವ್ಯವಸ್ಥೆ ಕೂಡ ಇದೆ. ಆ ಜಾತಿ ವ್ಯವಸ್ಥೆ ಇವತ್ತು

ಹೋಗಿಲ್ಲ. ಇವತ್ತು ನಾವು ಹೇಳಬಹುದು untouchable is removed ಆದರೆ, ಅದು ಹೋಗಿದೆಯೇ? ಇವತ್ತು ಆ ನಡವಳಿಕೆ ಇದ್ದೇ ಇದೆ. ಅಂಥ ಸಂದರ್ಭದಲ್ಲಿ ಎಷ್ಟು ಭಕ್ತರಿಗೆ ಆಘಾತ ಆಗುತ್ತದೆ ಎಂಬುದನ್ನು ಯೋಚನೆ ಮಾಡದೆಯೇ ಮಠಕ್ಕೆ ಕೊಡುವ ಕೆಲಸವನ್ನು ಮಾಡುತ್ತೀರಿ. ಆದರೆ, ಯಾವ ಉದ್ದೇಶಕ್ಕಾಗಿ ಮಠಕ್ಕೆ ಕೊಡುತ್ತೀರಿ ಎಂಬುದು ಜನರಿಗೆ ಗೊತ್ತಾಗಬೇಕಾಗುತ್ತದೆ. ಅಲ್ಲಿ ಏನು ಅವ್ಯವಹಾರವಾಗಿತ್ತು? ಅಲ್ಲಿ ನೋಡತಕ್ಕವರು ಇರಲಿಲ್ಲವೇ? ಏನೂ ಇಲ್ಲದೆಯೇ ಏಕಾಏಕಿ ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಇದನ್ನು ಹಸ್ತಾಂತರ ಮಾಡುತ್ತೇವೆಂದು ಹೇಳುವುದಾದರೆ ಹೇಗೆ? ಅದರಲ್ಲಿ ಇನ್ನೊಂದು ವಿಶೇಷವೆಂದರೆ, ರಾಮಚಂದ್ರಪುರ ಮಠಕ್ಕೆ ಹಸ್ತಾಂತರ ಮಾಡುತ್ತಿರುವುದೇನಿದೆ ಗೋಕರ್ಣಕ್ಕೂ ಈ ಮಠಕ್ಕೂ ಏನು ಸಂಬಂಧವಿದೆ ಎಂಬುದು ನನಗಂತು ಅರ್ಥವಾಗಲಿಲ್ಲ. ರಾಮಚಂದ್ರಪುರ ಮಠದವರು ಗೋವುಗಳಿಗೆ ಸಂಬಂಧಿಸಿದಂತೆ ಏನು ಮಾಡುತ್ತಿದ್ದಾರೆ ಅದರ ಮೇಲೆ ಅವರು ದೊಡ್ಡ ವಿವಾದಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಅರಣ್ಯಕ್ಕೆ, ಕೆ.ಪಿ.ಸಿ.ಗೆ ಸೇರಿರತಕ್ಕ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ ಎಂಬ ವಾದ ಇರುವ ಸಂದರ್ಭದಲ್ಲಿ, ವಿವಾದವಿರುವ ಸಂದರ್ಭದಲ್ಲಿ ಇವತ್ತು ಖಾಸಗಿ ಮಠಕ್ಕೆ ಹಸ್ತಾಂತರ ಮಾಡತಕ್ಕದ್ದು ಸರಿಯೇ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಎಲ್ಲೋ ಒಂದು ಕಡೆ, ನಿಜವಾಗಿಯೂ ಹಿಂದೂಗಳ ಬಗ್ಗೆ ಅಭಿಮಾನವಿದ್ದು, ಗೌರವವಿದ್ದರೆ ಅದನ್ನು ಸ್ವತಂತ್ರವಾಗಿ ಇರುವುದಕ್ಕೆ ಬಿಡುವ ಕೆಲಸವನ್ನು ಮಾಡಿ.

ಖಾಸಗಿ ಸಂಸ್ಥೆಗೆ ಕೊಟ್ಟಿರುವುದನ್ನು ಸಾರ್ವಜನಿಕವಾಗಿ ಯಾರೂ ಒಪ್ಪುವುದಿಲ್ಲ. ಇದು ಜನ ಸಾಮಾನ್ಯರ ಅಭಿಪ್ರಾಯವಾಗಿದೆ. ಆದರೆ ಇದರಲ್ಲಿ ಎಲ್ಲೋ ಒಂದು ಕಡೆ ನಿಮ್ಮ ಸ್ವಾರ್ಥ ಅಡಗಿದೆ. ಇದರಲ್ಲಿ ನಿಮ್ಮ hidden agenda ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಹಿಂದೂಗಳ ನಂಬಿಕೆಗೆ ಅಪಚಾರ ಮಾಡುತ್ತೀದ್ದೀರಿ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆ ದೇವಸ್ಥಾನವನ್ನು ತನ್ನಷ್ಟಕ್ಕೆ ತಾನು ಎಲ್ಲರೂ ಕೂಡ ಹೋಗಿ ಆರಾಧಿಸತಕ್ಕಂಥ ರೀತಿಯಲ್ಲಿ, ಏನು ಪರಂಪರಾನುಗತವಾಗಿ ನಡೆದುಕೊಂಡು ಬಂದಿದೆ, ಆ ರೀತಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮಾನ್ಯ ರೇವಣ್ಣನವರು ಪ್ರಸ್ತಾಪಿಸಿರತಕ್ಕ ವಿಚಾರ ಬಹಳ ಪ್ರಾಮುಖ್ಯವಾದುದು. ಭಕ್ತರ ಮನಸ್ಸಿನಲ್ಲಿ ಇರತಕ್ಕ, ಜನರ

O.14 F-14

ಮನಸ್ಸಿನಲ್ಲಿ ಇರತಕ್ಕ ವಿಚಾರ ಇದಾಗಿದೆ. ಇದು ಕೋರ್ಟ್‌ನಲ್ಲಿ ಪೆಂಡಿಂಗ್ ನಲ್ಲಿದೆ ಎಂದು ಹೇಳುತ್ತೀರಿ. ಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದಾಗಲೇ, Advocate General ರವರಿಂದ opinion ತರಿಸಿಕೊಳ್ಳುತ್ತೀರಿ. ಇವತ್ತು ಸುಪ್ರೀಂಕೋರ್ಟ್‌ನಲ್ಲಿ matter pending ಇದೆ, Supreme Court ನಲ್ಲಿ Still it is pending. ಆದರೂ ಕೂಡ ಒಂದು ವಿಶೇಷ ಪರಮಾಧಿಕಾರವನ್ನು ಬಳಸಿ delete ಮಾಡುತ್ತೀರಿ. ಇದನ್ನು ಹೇಗೆ ಮಾಡುತ್ತೀರಿ? When it is pending for judgment, how can you rely on the Advocate General's opinion? When the matter is pending before the Supreme Court, ನೀವು ಅದನ್ನು ವಿಶೇಷವಾಗಿ ಡಿಲೀಟ್ ಮಾಡಿ, ರಾಮಚಂದ್ರಾಪುರ ಮಠಕ್ಕೆ ಕೊಟ್ಟಿದ್ದೀರಿ. ಬೇರೆ ಬೇರೆ ಕೇಸ್‌ಗಳನ್ನು ಹಾಕಿದ್ದಾರೆ, ಅದರಲ್ಲಿ ನಾವು ಗೆದ್ದಿದ್ದೇವೆ ಎಂದು ಹೇಳುವುದಾದರೆ, ದಯಮಾಡಿ ಅದು ಸರಿಯಾದಂತಹ ವಾದ ಆಗುವುದಿಲ್ಲ. ಬಹುಶಃ ಯಾರಾದರೂ ಈ ರಾಜ್ಯದ ಮಂತ್ರಿ, ಈ ರಾಜ್ಯದಲ್ಲಿ ನಿಷ್ಪಕ್ಷಪಾತವಾಗಿ, ಯಾವುದೇ ರೀತಿ problem ಇಲ್ಲದೇ ಕೆಲಸ ಮಾಡುತ್ತಿದ್ದಾರೆ ಎಂದರೆ ನೀವೊಬ್ಬರೇ. ನಿಮ್ಮ ಕೈಯಲ್ಲಿ ತೆಗೆದುಕೊಂಡು ಹೋಗಿ ಇಂತಹ ಕೆಲಸಗಳನ್ನು ಮಾಡಿಸುತ್ತಾರಲ್ಲಾ? ದಯಮಾಡಿ ನಾನು ಹೇಳುತ್ತೇನೆ. ನೀವೊಂದು ತೀರ್ಮಾನಕ್ಕೆ ಬನ್ನಿ. ಹಿಂದೂಗಳ ದೃಷ್ಟಿಯಿಂದ, ಎಲ್ಲಾ ಜಾತಿ ವರ್ಗಗಳ ದೃಷ್ಟಿಯಿಂದ, ಅವರ ನಂಬಿಕೆಗೆ ದೃಷ್ಟಿಯಿಂದ, ಅದನ್ನು ಸ್ವತಂತ್ರವಾಗಿ ಇರಲಿಕ್ಕೆ ಬಿಡತಕ್ಕಂಥ ಕೆಲಸವನ್ನು ಮಾಡಿದರೆ, ನೀವು ಹಿಂದೂಗಳಿಗೆ ಮಾಡತಕ್ಕಂಥ ದೊಡ್ಡ ಉಪಕಾರವಾಗುತ್ತದೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, 10 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ....

ಅಧ್ಯಕ್ಷರು : ಇದು ನಿಯಮ 69ರ ಅಡಿಯಲ್ಲಿ ನಡೆಯುತ್ತಿರುವ ಚರ್ಚೆಯಾಗಿದೆ. ನೀವು ಇದಕ್ಕೆ signature ಮಾಡಿಲ್ಲ. ನಿಮಗೆ ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು : ನೀವು ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ. ಮಾನ್ಯ ರೇವಣ್ಣನವರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಮ್ಮ ಗೃಹ ಮಂತ್ರಿಗಳು ಮುಜರಾಯಿ ಖಾತೆಯನ್ನೂ ಸಹ ನಿರ್ವಹಿಸುತ್ತಿದ್ದಾರೆ. ಆ ಖಾತೆ ತೆಗೆದುಕೊಳ್ಳುವುದಕ್ಕೆ ಎಲ್ಲಾ ಮಂತ್ರಿಗಳೂ ಹೆದರುತ್ತಿದ್ದಾರೆ. ಯಾರು ಮುಜರಾಯಿ ಖಾತೆ ವಹಿಸಿಕೊಳ್ಳುತ್ತಾರೋ, ಅವರು ಮಂತ್ರಿಗಳಾಗಿ ಇರುವುದಿಲ್ಲ ಎನ್ನುವ ನಂಬಿಕೆ ಬಂದುಬಿಟ್ಟಿದೆ. ಆ ಉದ್ದೇಶದಿಂದ ಅದನ್ನು ನಮ್ಮ ವಿ.ಎಸ್.ಆಚಾರ್ಯ ಸಾಹೇಬರಿಗೆ ಕೊಟ್ಟಿದ್ದಾರೆ. ಅವರು ಬಹಳ ಪ್ರಾಮಾಣಿಕರು. ಅದರ ಬಗ್ಗೆ ಎರಡು ಮಾತಿಲ್ಲ. ಅವರಿಗೆ ಸುಳ್ಳು ಹೇಳಿ ಅಭ್ಯಾಸವಿಲ್ಲ. ನಾನು ಅವರಿಗೆ ಮನವಿ ಮಾಡುವುದೊಂದೇ. ಸರ್ಕಾರ ಇವತ್ತು Supreme Court ನಲ್ಲಿ undertaking ಕೊಟ್ಟು, supreme Court ನಲ್ಲಿ ಕೇಸ್ ಇದ್ದರೂ, High Court ನಲ್ಲಿ ಕೇಸ್ ಇದ್ದರೂ, Advocate General ರವರಿಂದ opinion ವೊಂದನ್ನು ತೆಗೆದುಕೊಂಡಂತೆ ಮಾಡಿ, ಇದೊಂದನ್ನೇ ಡಿಲೀಟ್ ಮಾಡುವುದು ಸರಿಯೇ? 3425 ಸರ್ಕಾರಿ ದೇವಸ್ಥಾನಗಳನ್ನು ಇದೊಂದನ್ನೇ ಡಿಲೀಟ್ ಮಾಡುತ್ತಾರೆಂದರೆ ಅರ್ಥವೇನು? ಇದು ಎಲ್ಲಾ ಸಮಾಜಕ್ಕೆ ಸೇರಿದ್ದು, ಒಂದು ಸಮಾಜಕ್ಕಲ್ಲ. ಇದು ಕೇವಲ ರಾಮಚಂದ್ರಾಪುರ ಮಠಕ್ಕೆ ಸೇರಿದ್ದಲ್ಲ. ದಯಮಾಡಿ ಕೂಡಲೇ ಇದನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ರೇವಣ್ಣನವರೆ, ಒಂದು ನಿಮಿಷ.......

ಶ್ರೀ ಹೆಚ್.ಡಿ.ರೇವಣ್ಣ : ಹೇಳಿ.

ಅಧ್ಯಕ್ಷರು : ಮಾನ್ಯ ಪಾಟೀಲರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ನೀವು ಮಾತನಾಡದಿದ್ದರೆ, ನಾನು ಈ ವಿಷಯವನ್ನು Close ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನನ್ನ ಭಾಷಣದ ಮಧ್ಯೆ intervention ಆಗುತ್ತಿದೆ. ನಾನೇನು ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನೀವು ಮಾತನಾಡಿ. Please, ನೀವು ಯೀಲ್ಡ್ ಆಗಬೇಡಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಏಕೆ ಇದನ್ನು ಡಿಲೀಟ್ ಮಾಡಿದಿರಿ ಎಂದು ಮಾನ್ಯ ರೇವಣ್ಣನವರು ಮತ್ತು ಮಾನ್ಯ ಜಯಚಂದ್ರರವರು ಕೇಳಿದರು. ಬಹುಶಃ ಯಾರೋ ಭವಿಷ್ಯ ನುಡಿದಿರಬೇಕು. ರಾಮಚಂದ್ರಾಪುರ ಮಠಕ್ಕೆ ಗೋಕರ್ಣವನ್ನು ಬಿಟ್ಟು ಕೊಟ್ಟರೆ, ಮಾನ್ಯ ಯಡಿಯೂರಪ್ಪನವರ ಕುರ್ಚಿ ಭದ್ರವಾಗಿರುತ್ತದೆ ಎಂದು ಯಾರೋ ಭವಿಷ್ಯ ಹೇಳಿದ್ದಾರೆ. ಅದಕ್ಕಾಗಿ ಅವರು ಗೋಕರ್ಣವನ್ನು ಮಠಕ್ಕೆ ಬಿಟ್ಟುಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದು ಕೋರ್ಟ್‌ನಲ್ಲಿ ಇರುವಂತಹ ಪ್ರಕರಣವೆಂದು ನಮ್ಮ Law Minister ರವರು ಹೇಳುತ್ತಾರೆ. ಕೋರ್ಟ್‌ನಲ್ಲಿ ಇರುವಂತಹ ಕೇಸ್‌ನ್ನೇ ಡಿಲೀಟ್ ಮಾಡುತ್ತಾರೆಂದರೆ, ಅದರ ಅರ್ಥವೇನು? ಸರ್ಕಾರದವರು ಸುಪ್ರೀಂಕೋರ್ಟ್‌ಗೆ undertaking ಕೊಟ್ಟಿದ್ದಾರೆ, High Court ಗೆ undertaking ಕೊಟ್ಟಿದ್ದಾರೆ. ನಾವು ಹೊಸ ಕಾಯ್ದೆ ಮಾಡುತ್ತೇವೆಂದು ಹೇಳಿದ್ದಾರೆ. ಮುಖ್ಯ ನ್ಯಾಯಾಧೀಶರಾಗಿದ್ದ ಮಾನ್ಯ ರಾಮಾ ಜೋಯಿಸ್ ರವರ ಅಧ್ಯಕ್ಷತೆಯ ಸಮಿತಿ ವರದಿ ಕೊಟ್ಟಿದೆ. ಮಾನ್ಯ ವೀರೇಂದ್ರ ಹೆಗ್ಗಡೆಯವರು ಆ ಸಮಿತಿಯಲ್ಲಿದ್ದರು. ಅವರ ಜೊತೆಗೆ ಈಗಿನ Advocate General ರವರಾದ ಮಾನ್ಯ ಅಶೋಕ್ ಹಾರ್ನಳ್ಳಿಯವರು, Additional Advocate General ರವರಾದ ನಟರಾಜ್‌ರವರು.......

ಅಧ್ಯಕ್ಷರು : ಅದನ್ನೆಲ್ಲಾ ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ....Retired IGP ಮಾನ್ಯ ಮಡಿವಾಳ್ ರವರು ಸಮಿತಿಯಲ್ಲಿದ್ದರು. ಆ ಸಮಿತಿ ತನ್ನ ವರದಿ ಕೊಟ್ಟಿದೆ. ಮಾನ್ಯ ರಾಮಾಜೋಯಿಸ್‌ರವರಿಗೆ ಈ ಸರ್ಕಾರ ಎಷ್ಟು ಗೌರವ ಕೊಟ್ಟಿದೆ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಮುಖ್ಯ ನ್ಯಾಯಾಧೀಶರಾಗಿದ್ದವರು ಮತ್ತು ಮಾನ್ಯ ರಾಜ್ಯಪಾಲರಾಗಿದ್ದವರು, ಅವರ ವರದಿಯನ್ನು ಈ ಸರ್ಕಾರ ತೆಗೆದುಕೊಂಡು ಹೋಗಿ ಡಬ್ಬಕ್ಕೆ ಎಸೆಯುತ್ತದೆ ಎನ್ನುವುದಾದರೆ ಹೇಗೆ ಬಿ.ಜೆ.ಪಿ. ಸರ್ಕಾರದಿಂದ ಈ ರೀತಿ ಆಗಬಾರದು. ಮಾನ್ಯ ಮುಜರಾಯಿ ಸಚಿವರು ಆ ವರದಿಯಲ್ಲಿ ಏನಿದೆ ಎಂಬುದನ್ನು ಬಹಿರಂಗಪಡಿಸಿ. ನೀವು ಸುಪ್ರೀಂಕೋರ್ಟ್ ಮುಂದೆ undertaking ಕೊಟ್ಟು, ಯಾವುದೋ ಒತ್ತಡಕ್ಕೆ

ಸಿಲುಕಿ ಮಠಕ್ಕೆ ವಹಿಸಿ ಕೊಡುತ್ತೀರಿ ಎನ್ನುವುದಾದರೆ, ಅಲ್ಲಿ ನ್ಯಾಯಾಂಗ ಉಲ್ಲಂಘನೆಯಾಗುವುದಿಲ್ಲವೇ? ನೀವು ನ್ಯಾಯಾಲಯಕ್ಕೆ ಸುಳ್ಳು ಹೇಳಿದಂತಾಗಲಿಲ್ಲವೇ? ದಯಮಾಡಿ ಅದನ್ನು ಹೇಳಿ. ನೀವೇ ಒಂದು ಕಡೆ KPCL ಜಾಗವನ್ನು ಒತ್ತುವರಿ ಮಾಡಿದ್ದು ನಿಜವೆಂದು ಹೇಳುತ್ತೀರಿ. ಇನ್ನೊಂದು ಕಡೆ ಕಂದಾಯ ಇಲಾಖೆಯ 25 ಎಕರೆ ಜಮೀನು ಒತ್ತುವರಿ ಮಾಡಿದ್ದು ನಿಜವೆಂದು ಹೇಳುತ್ತೀರಿ. ಹಲವಾರು ಪ್ರಕರಣಗಳಲ್ಲಿ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಅದಲ್ಲದೆ ಎಲ್ಲೆಲ್ಲಿ ಇನ್ನೂ ಒತ್ತುವರಿಯಾಗಿದೆ ಎಂಬುದನ್ನು ನಾನು ಸದನದ ಗಮನಕ್ಕೆ ತರಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ತನ್ನ ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ, ಕಾನೂನನ್ನೆಲ್ಲಾ ಒಂದು ಕಡೆಗೆ ತಳ್ಳಿ ಹಾಕುತ್ತಿದ್ದಾರೆ. ಯಾವ ಕಾನೂನಿಗೂ ಬೆಲೆ ಇಲ್ಲ, ಕೋರ್ಟಿಗೂ ಬೆಲೆ ಇಲ್ಲ. ಕೋರ್ಟ್‌ಗೂ ಸುಳ್ಳು ಮಾಹಿತಿ ಕೊಡುವಂತಹ ಕೆಲಸವಾಗಿದೆ. ಅದನ್ನು ನಾನು ಸದನದ ಗಮನಕ್ಕೆ ತರಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿ ಮಡತೆಸೆಯಲ್ಲಿ 4 ಎಕರೆ 3 ಗುಂಟೆ ಇದೆ. ಅಲ್ಲಿ ಎಷ್ಟು ಒತ್ತುವರಿಯಾಗಿದೆ ಎಂಬುದನ್ನು ಮಾನ್ಯ ಮುಜರಾಯಿ ಮಂತ್ರಿಗಳು ದಯಮಾಡಿ ಹೇಳಬೇಕು. ಅಲ್ಲಿ ಅಮೃತಧಾರೆ ಗೋಶಾಲೆ, ಹೊಸಾಡ ಎಂಬ ಸಂಸ್ಥೆಯೊಂದನ್ನು ಮಾಡಿದ್ದಾರೆ. ಸರ್ವೆ ನಂಬರ್ 262 ರಲ್ಲಿ ಈ 4 ಎಕರೆ 3 ಗುಂಟೆ ಇದೆ. ಇಲ್ಲಿ ಸುಮಾರು 200-300 ಎಕರೆಗಳಷ್ಟು ಒತ್ತುವರಿ ಯಾಗಿದೆ. ಕೆಲವರು 400 ಎಕರೆ ಒತ್ತುವರಿಯಾಗಿದೆ ಎಂದು ಹೇಳುತ್ತಾರೆ. ಮಾನ್ಯ ಮುಜರಾಯಿ ಸಚಿವರು ಹೊನ್ನಾವರ ತಾಲ್ಲೂಕಿನ ಹೊಸಾಡ ಗ್ರಾಮದ ಸರ್ವೆ ನಂಬರ್ 262 ರಲ್ಲಿ ಎಷ್ಟು ಒತ್ತುವರಿಯಾಗಿದೆ ಎಂಬುದನ್ನು ಹೇಳಬೇಕು. ಮಡತೆಸೆಯಲ್ಲಿ ಕೇವಲ 4 ಎಕರೆ 3 ಗುಂಟೆ ಇದೆ. ಅದರಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ? ಅದು Forest ಲ್ಯಾಂಡೋ, Revenue ಲ್ಯಾಂಡೋ ಎಂಬುದನ್ನು ಹೇಳಿ. ಯಾರಾದರೂ ಬಡವರು ಅರ್ಧ ಎಕರೆ ಒತ್ತುವರಿ ಮಾಡಿದ್ದರೆ, ನೀವು ಅಂತಹವರ ಮೇಲೆ ಕೇಸ್ ಹಾಕುತ್ತೀರಿ. ಅಂತಹ ಎಷ್ಟೊಂದು ಪ್ರಕರಣಗಳಿವೆ. ಚಿಕ್ಕಮಗಳೂರಿನಲ್ಲಿ ಫಾರೆಸ್ಟ್ ಇಲಾಖೆಯವರು ಅರ್ಧ ಎಕರೆ ಮತ್ತು ಒಂದು ಎಕರೆ ಒತ್ತುವರಿ ಮಾಡಿದ್ದವರನ್ನೆಲ್ಲಾ ಒಂದೇ ರಾತ್ರಿಗೆ ತೆರವುಗೊಳಿಸಿ ಓಡಿಸಿದರು. ಆದರೆ ಇಲ್ಲಿ Supreme Court ಆದೇಶ violate ಮಾಡಿದಂತಾಗಿದೆ. ಯಾವುದೇ ಫಾರೆಸ್ಟ್ ಲ್ಯಾಂಟ್ ಅನ್ನು violate ಮಾಡಿದರೆ, ಅವರ ಮೇಲೆ criminal case

ಹಾಕಬೇಕೆಂದು ಇವತ್ತು Supreme Court ನ clear directions ಇದೆ. ನೀವು ಯಾರ ಮೇಲಾದರೂ ಕೇಸ್ ಹಾಕಿದ್ದೀರಾ? ಯಾವ ಉದ್ದೇಶದಿಂದ ನೀವು ಇದನ್ನು ಮಾಡಿದ್ದೀರಿ? ಜನ ಸಾಮಾನ್ಯರಿಗೆ ಒಂದು ರೀತಿ ಮಾಡುತ್ತೀರಿ, ಇವರಿಗೆ ಒಂದು ರೀತಿ ಮಾಡುತ್ತೀರಿ. ಶಿವಮೊಗ್ಗದ ಶರಾವತಿ ನದಿ ದಡದಲ್ಲಿ ಎಷ್ಟು ಒತ್ತುವರಿ ಮಾಡಿದ್ದಾರೆ? ಯಾರು ಒತ್ತುವರಿ ಮಾಡಿದ್ದಾರೆ? ಎಂಬುದನ್ನು ಸರ್ಕಾರದವರು ದಯಮಾಡಿ ಹೇಳಲಿ. ಒಂದು ಕಡೆ ಹಿಂದಿನ ಜಿಲ್ಲಾಧಿಕಾರಿಗಳು ಒತ್ತುವರಿಯಾಗಿದೆ ಎಂದು ವರದಿ ಕೊಡುತ್ತಾರೆ. ಮತ್ತೊಂದು ಕಡೆ ಈಗಿನ ಜಿಲ್ಲಾಧಿಕಾರಿ ಒತ್ತುವರಿ ಆಗಿಯೇ ಇಲ್ಲವೆನ್ನುತ್ತಾರೆ. ಅಲ್ಲಿನ ಸಾರ್ವಜನಿಕರೊಬ್ಬರು ಒತ್ತುವರಿ ಆಗಿರುವ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೊಡಿ ಎಂದು ಕೇಳಿದರೆ, ಇದಕ್ಕೆ ಸಂಬಂಧಪಟ್ಟ ಕಡತ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದೇವೆ ಎಂದು ಉತ್ತರ ಕೊಡುತ್ತಾರೆ. ಒಬ್ಬ ಜಿಲ್ಲಾಧಿಕಾರಿ ಒತ್ತುವರಿಯಾಗಿದೆ ಎಂದು ವರದಿ ಕೊಟ್ಟರೆ, ಈಗಿನ ಶಿವಮೊಗ್ಗದ ಜಿಲ್ಲಾಧಿಕಾರಿ ರಾಜಕೀಯ ಒತ್ತಡಕ್ಕೆ ಸಿಲುಕಿ, ಒತ್ತುವರಿಯಾಗಿಲ್ಲವೆಂದು ವರದಿ ಕೊಟ್ಟಿದ್ದಾರೆ. ಎರಡರ ಬಗ್ಗೆಯೂ ಮಾಹಿತಿ ಕೊಡುವುದಕ್ಕೆ ಸರ್ಕಾರದವರು directions ಕೊಡಬೇಕು. ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಹಿಂದಿನ ಜಿಲ್ಲಾಧಿಕಾರಿ ತಪ್ಪು ವರದಿ ಕೊಟ್ಟಿದ್ದರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ, ಈಗಿನ ಜಿಲ್ಲಾಧಿಕಾರಿಗಳು ತಪ್ಪು ವರದಿ ಕೊಟ್ಟಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಬಡವರಿಗೊಂದು ಕಾನೂನು, ದೊಡ್ಡವರಿ ಗೊಂದು ಕಾನೂನು ಎನ್ನುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಗೌರವವಿದೆ. ನಾನು ಮಾನ್ಯ ವಿ.ಎಸ್.ಆಚಾರ್ಯ ಸಾಹೇಬರನ್ನು ಸಣ್ಣ ಹುಡುಗ ಆಗಿದ್ದಾಗಿನಿಂದಲೂ ನೋಡುತ್ತಿದ್ದೇನೆ. ಅವರು ಗೃಹ ಮತ್ತು ಮುಜರಾಯಿ ಖಾತೆ ಸಚಿವರಾಗಿಯೇ ಇರಬೇಕೆಂಬುದು ನಮ್ಮ ಆಸೆಯಾಗಿದೆ. ಮುಜರಾಯಿ ಸಚಿವರಾದರೆ, ಅವರ ಖಾತೆ ಹೋಗುತ್ತದೆ ಎಂಬ ಪ್ರತೀತಿ ಇದೆ. ಮಾನ್ಯ ಆಚಾರ್ಯರಿಗೆ ಆ ರೀತಿ ಆಗಬಾರದು. ಆ ಉದ್ದೇಶದಿಂದ ರಾಮಚಂದ್ರಾಪುರ ಮಠಕ್ಕೆ ಗೋಕರ್ಣ ದೇವಸ್ಥಾನ ವಹಿಸಿ ಕೊಟ್ಟಿದ್ದೀರಿ, ಇದನ್ನು ರದ್ದುಪಡಿಸಬೇಕು. 3424 ದೇವಸ್ಥಾನಗಳನ್ನು ಇದೊಂದನ್ನು ಡಿಲೀಟ್ ಮಾಡಿ ವಹಿಸಿಕೊಟ್ಟಿದ್ದೀರಿ. Supreme Court ಗೆ undertaking ಕೊಟ್ಟಿದ್ದರೂ, High Court ಗೆ undertaking ಕೊಟ್ಟಿದ್ದರೂ, ಮಾನ್ಯ ರಾಮಾಜೋಯಿಸ್ ರವರು ಮತ್ತು

ಈಗಿನ Advocate General ರವರು ಹೇಳಿದರೂ ಕೂಡ, ಕೇವಲ legal opinion ವೊಂದರ ಮೇಲೆ ಇದನ್ನು ಕೊಟ್ಟಿದ್ದೀರಿ. ಇದನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಹಿಂದೆ ಏನು 347 ರಲ್ಲಿ ಸರ್ಕಾರದ ಹಿಡಿತದಲ್ಲಿತ್ತೋ, ಅದನ್ನು continue ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಹೊನ್ನಾವರ ತಾಲ್ಲೂಕಿನಲ್ಲಿ ಜಮೀನು ಒತ್ತುವರಿಯಾಗಿರುವುದು ಇರಬಹುದು, ಬೇರೆ ಕಡೆ ಇರಬಹುದು, ಸರ್ಕಾರ ಕೂಡಲೇ ಅದನ್ನೆಲ್ಲಾ ತೆರವುಗೊಳಿಸಿ ಮುಟ್ಟುಗೋಲು ಹಾಕಿಕೊಳ್ಳಬೇಕು.

(1-30 PM)

ಏಕೆಂದರೆ, ಇವತ್ತೇನು 400 ಎಕರೆ ಜಮೀನು ಒತ್ತುವರಿಯಾಗಿದೆ ಎಂದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಕೋರ್ಟಿಗೆ ಕೆಲವು ಅಧಿಕಾರಿಗಳು, ಸರ್ಕಾರ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ, ಅದು ಆಗಬಾರದು. ಜಿಲ್ಲಾಧಿಕಾರಿ, ಧಾರ್ಮಿ ಆಯುಕ್ತರೆಲ್ಲಾ ಸೇರಿ ಕೋರ್ಟಿಗೆ ಕೊಡುವ ಕೆಲವು ರೆಕಾರ್ಡ್ಸ್ ಅನ್ನು ಮುಚ್ಚಿಡುತ್ತಿದ್ದಾರೆ. ಆದುದರಿಂದ ಕೂಡಲೇ ಎಲ್ಲಾ ದಾಖಲಾತಿಯನ್ನು ಕೋರ್ಟ್ ಮುಂದಿಟ್ಟು, ಗೋಕರ್ಣದ ದೇವಸ್ಥಾನವನ್ನು ಉಳಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ, ಈ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, 1950 ರಲ್ಲಿ ಗೋಕರ್ಣ ಮಾಲೇಶ್ವರ ದೇವಸ್ಥಾನ ಟ್ರಸ್ಟ್ ರಿಜಿಸ್ಟ್ರೇಷನ್ ಆಗಿದೆ, ಮುಂದೆ ಸಹಾಯಕರ ಆಯುಕ್ತರ ಆಜ್ಞೆಯ ಅನುಸಾರವಾಗಿ ಈ ಒಂದು ಟ್ರಸ್ಟ್ ರಿಜಿಸ್ಟ್ರೇಷನ್ ಆಗಿದೆ. ಇದರ ಬಗ್ಗೆ ಹೈಕೋರ್ಟ್ ಡಬಲ್ ಬೆಂಚ್, ಸುಪ್ರೀಂಕೋರ್ಟ್ turn down ಮಾಡಿದ್ದಾರೆ. ಬಹಳ ಮುಖ್ಯವಾಗಿ- ಇಲ್ಲಿ ನನ್ನ ಚಿಂತನೆ ಏನೆಂದರೆ, ಸುಮಾರು ನೂರಾರು ಎಕರೆ ಭೂಮಿಯ ಒತ್ತುವರಿಯಾಗಿದೆ. ಇವತ್ತು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ, ಈಗಾಗಲೆ ತಮಗೆ ಗೊತ್ತಿರುವಂತೆ, ಚಿಕ್ಕಮಗಳೂರಿನಲ್ಲಿ ಕುದುರೆ ಮುಖ ಐರನ್ ಎನ್ನುವ ಒಂದು ಪ್ರತಿಷ್ಠೆಯಾದ ಕೈಗಾರಿಕೆ ಮುಚ್ಚುಹೋಗಿದೆ. ಹಾಗಾಗಿ ಅಲ್ಲಿಂದ ನೂರಾರು, ಸಾವಿರಾರು ಕುಟುಂಬಗಳು ಕೆಲಸ ಕಳೆದುಕೊಂಡು ಆ ಮಕ್ಕಳಿಗೆ ಶಿಕ್ಷಣವಿಲ್ಲದೆ, ಇರುವುದಕ್ಕೆ ಮನೆ ಇಲ್ಲದೆ ಇವತ್ತು ಬೀದಿನಲ್ಲಿದ್ದು ಕಷ್ಟಪಡುವಂಥ ಈ ಕಾಲದಲ್ಲಿ ಈ ಮಠಕ್ಕೆ ಅರಣ್ಯ ಪ್ರದೇಶವನ್ನು

ಕೊಟ್ಟುಬಿಟ್ಟು ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅಲ್ಲ ಸ್ವಾಮಿ ಅಲ್ಲಿ ಹೇಳುತ್ತಾರೆ, ಒಬ್ಬ ಎಸ್‌ಸಿ 6 ಎಕರೆ ಲ್ಯಾಂಡ್‌ನಲ್ಲಿ ತೆಂಗು-ಅಡಿಕೆ ಬೆಳೆದಿದ್ದಾರೆ, ಅದನ್ನು encroach ಮಾಡಿದ್ದಾರೆ, ಅವನು ಸತ್ತರೆ ಹೂಳುವುದಕ್ಕೆ ಇವತ್ತು ಜಾಗವಿಲ್ಲ. ಒಂದು ಸಣ್ಣ ವಿಚಾರ ಹೇಳುವುದಾದರೆ ನಮ್ಮ land grant ಗೋಮಾಳವನ್ನು ಹಾಗಾಗ್ಗೆ ಮಂಜೂರು ಮಾಡುವುದಕ್ಕಾಗುವುದಿಲ್ಲ. ಒಬ್ಬ ರೈತ, ಹಿಂದುಳಿದ SC/ST ಜನ, ಅವನಿಗೆ 5 ಗುಂಟೆಯೊ, 10 ಗುಂಟೆಯೊ ಅರ್ಧ ಎಕರೆ ಜಮೀನಿರುತ್ತದೆ, ಅದನ್ನು ಮಂಜೂರು ಮಾಡುವುದು ಬೇಡವೆಂದು ಸುಪ್ರೀಂಕೋರ್ಟ್ ಆದೇಶ ಮಾಡಿದರೆ, ಅವನು ಸತ್ತರೆ ಶವ ಹೂಳುವುದಕ್ಕೂ ಜಾಗವಿರುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಸರ್ಕಾರ ಆದೇಶ ಮಾಡಿದ್ದರೂ ಕೂಡ ಸುಮಾರು ನೂರಾರು ಎಕರೆ ಜಮೀನನ್ನು ಆ ಮಠಕ್ಕೆ ಕೊಡುವುದರಲ್ಲಿ ಏನು ಔಚಿತ್ಯ ಅಡಗಿದೆ ಸ್ವಾಮಿ? ಅದು ಎಂಥ ಮಠವೆಂದರೆ, ನಿಮಗೆ ಒಂದು ಪತ್ರಿಕೆಯ ಸ್ಟೇಟ್‌ಮೆಂಟ್ ಅನ್ನು ಓದಿ ಹೇಳುತ್ತೇನೆ, ಅನೇಕ ಪತ್ರಿಕೆಯವರು ಡಿಸಿ ಕಚೇರಿ ಮುಂದೆ ಮುಷ್ಕರ ಮಾಡಿದ್ದಾರೆ, ಶ್ರೀಮತಿ ವೀಣಾ ಎಂದು ಒಬ್ಬ ಹೆಣ್ಣು ಮಗಳು ಅಲ್ಲಿ ಗುರುಕುಲದಲ್ಲಿ ಹಿಂದಿ ಶಿಕ್ಷಣ ಪಡೆಯುವುದಕ್ಕೆ ಹೋಗುತ್ತಾರೆ. ಅಲ್ಲಿ ಆ ಟ್ರಸ್ಟ್‌ನ ಜಗದೀಶ್ ಶರ್ಮಾ ಎಂಬುವವನು ಅನೇಕ ಸಾರಿ ಲೈಗಿಂಕ ಕಿರುಕುಳವನ್ನು ಕೊಡುತ್ತಾನೆ, ಆ ಸ್ವಾಮಿಜಿಯದನ್ನು ಟಿವಿಯಲ್ಲಿ ನೋಡಿದೆವಲ್ಲಾ, ಇಲ್ಲೂ ಚರ್ಚೆಯಾಯಿತಲ್ಲಾ, ಅದೇ ರೀತಿ ಅನೇಕ ಕಿರುಕುಳವನ್ನು ಕೊಟ್ಟಿದ್ದಾರೆ. ಅದರ ವಿರುದ್ಧ ಸಾವಿರಾರು ಜನ ಮುಷ್ಕರ ಮಾಡಿದ್ದಾರೆ, ಡಿಸಿ ಕಚೇರಿ ಮುಂದೆ ಮುಷ್ಕರ ಮಾಡಿದ್ದಾರೆ, ಅಂಥ ಮಠಕ್ಕೆ, ಏನಾದರು ಸಚ್ಚಾರಿತ್ರ್ಯವಿದ್ದು, ಒಳ್ಳೆಯತನವಿದ್ದರೆ ಕೊಡಲಿ. ಇಂಥ ಕೆಟ್ಟ ಮಠಕ್ಕೆಲ್ಲಾ ಸರ್ಕಾರಿ ಭೂಮಿಯನ್ನು ಕೊಡುವುದರಲ್ಲಿ ಏನು ಔಚಿತ್ಯವಿದೆ, ಅರ್ಥವಿದೆ ಎಂಬುದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಕೇವಲ ರಾಜಕಾರಣಕ್ಕೋಸ್ಕರ ಈ ಮಠಮಾನ್ಯಗಳನ್ನು ಬಳಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ನಾವು ಬಜೆಟ್‌ನಲ್ಲೂ ನೋಡುತ್ತಿದ್ದೇವೆ, ಇದು ಬರೀ ಮಠಮಾನ್ಯಗಳ ಬಜೆಟ್ ಆಗಿದೆ, ಶ್ರೀ ಸಾಮಾನ್ಯನ ಬಜೆಟ್ ಆಗಿಲ್ಲ, ರೈತರ ಪರ ಬಜೆಟ್ ಆಗಿಲ್ಲ, ಮಠಮಾನ್ಯರ ಬಜೆಟ್. ಹಾಗಾಗಿ ಇವತ್ತು Kudaremukha Iron Ore Company ಗೆ ತೊಂದರೆ ಉಂಟಾಗಿರುವ ಈ ಸಂದರ್ಭದಲ್ಲಿ ಈ ಮಠಕ್ಕೆ 400 ಎಕರೆ ಕೊಟ್ಟಿರುವುದು, ಜಮೀನನ್ನು

encroach ಮಾಡಿರುವುದು ಬಹಳ ಅನ್ಯಾಯ. ಈ ದೇವಾಲಯ ಬಹಳ ಹಿಂದೆ ತ್ರೇತಾಯುಗದ್ದು, ಇವತ್ತಿನದಲ್ಲ. ತ್ರೇತಾಯುಗ, ದ್ವಾಪರಯುಗ ಮುಗಿದು ಈಗ ಕಲಿಯುಗದಲ್ಲಿದ್ದೇವೆ. ಅಂದಿನಿಂದ ನೋಡಿದಂಥ ಈ ದೇವಸ್ಥಾನಕ್ಕೆ ಎಲ್ಲಾ ವಿಧದ ಎಲ್ಲಾ ವರ್ಗದ ಜನರು ಭಕ್ತರಾಗಿದ್ದಾರೆ. ಅಂಥದ್ದರಲ್ಲಿ ಇದನ್ನು ಏತಕ್ಕೆ ಒಂದು ಮತಕ್ಕೆ ಕೊಡುತ್ತೀರಿ? ಇದರ ಅರ್ಥವೇನೆಂದು ನನಗೆ ಗೊತ್ತಾಗುತ್ತಿಲ್ಲ. ಹೀಗಾಗಿ ನಮ್ಮ ಸುಪ್ರೀಂ ಕೋರ್ಟ್ ಏನೊಂದು ಡೈರೆಕ್ಷನ್ ಅನ್ನು ಕೊಟ್ಟಿದೆ, ಅದರ ಅನುಗುಣವಾಗಿ deletion ಮಾಡಿರುವುದನ್ನು ರಿವ್ಯು ಮಾಡಿ ಎಂದು ಹೇಳಿದ್ದಾರೆ, ದಯಮಾಡಿ ರಿವ್ಯೂ ಮಾಡಿ ಅದನ್ನು withdraw ಮಾಡುವುದು ಬಹಳ ಉತ್ತಮವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಬ್ಬ ಶ್ರೇಷ್ಠ ರಾಜ್ಯಪಾಲರು, ಒಬ್ಬ ಶ್ರೇಷ್ಠ ರಿಟೈರ್ಡ್ ಚೀಫ್ ಜಸ್ಟಿಸ್, ಇವತ್ತು ಭಾರತೀಯ ಜನತಾ ಪಾರ್ಟಿಯ ಒಬ್ಬ ಎಂಪಿಯಾಗಿಯೂ ಕೂಡ ಕೆಲಸ ನಿರ್ವಹಿಸುತ್ತಿರುವ ಶ್ರೀಮಾನ್ ರಾಮಾಜೋಯಿಸ್‌ರಂಥವರ ಅಧ್ಯಕ್ಷತೆಯಲ್ಲಿ ಮಾಡಿದಂಥ ಸುಮಾರು 49 ಪುಟಗಳ ಸುಧೀರ್ಘವಾದ ಒಂದು ರಿಪೋರ್ಟ್ ಅನ್ನು ದಯಮಾಡಿ ಈ ಸಭೆಯ ಮುಂದೆ ಮಂಡಿಸಿದರೆ, ಅದರಲ್ಲಿರುವುದು ನಮಗೂ ಅರ್ಥವಾ ಗುತ್ತದೆ. ಪರವಾಗಿ ಕೊಡಿ ಎಂದು ಕೊಟ್ಟಿದ್ದಾರಾ, ಬೇಡವೆಂದು ಕೊಟ್ಟಿದ್ದಾರಾ ಏನೆಂದು ನಮಗೆ ಅರ್ಥವಾಗಬೇಕಾದರೆ ದಯಮಾಡಿ ಮುಜರಾಯಿ ಮಾನ್ಯ ಸಚಿವರು, ಅದನ್ನು ಸದನದ ಮುಂದೆ ಮಂಡಿಸುವುದರ ಮುಖಾಂತರ ಆ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದರ ಶಿಫಾರಸ್ಸು ಏನಿದೆ ಎಂಬುದನ್ನು ಸುಮಾರು ವರ್ಷಗಳು ಕಳೆದರೂ ಇದುವರೆವಿಗೂ ಜಾರಿ ಮಾಡಿಲ್ಲ. ಹಿಂದಿನ ಅನೇಕ ಆದೇಶಗಳನ್ನು ಬದಿಗೊತ್ತಿ, ಕೋರ್ಟ್ ಆದೇಶ ವಿರಬಹುದು, ಸುಪ್ರೀಂಕೋರ್ಟ್ ಆದೇಶವಿರಬಹುದು, ರಾಮಾಜೋಯಿಸರ ವರದಿ ಇರಬಹುದು, ಒಂದು ವಿಶೇಷವೆಂದರೆ, ಡಿಸಿಯವರು ಏನು ಹೇಳುತ್ತಾರೆಂದರೆ, ಯಾವುದೇ ಕಾರಣಕ್ಕೂ ಈ ಜಮೀನನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ, ಇದು ಡಿಸಿ ಆದೇಶ, ಇದು ಸೂಕ್ತವಲ್ಲವೆಂದು ಹೇಳುತ್ತಾರೆ. ಸಚಿವಾಲಯದಿಂದಲೂ ಆ ಆಯುಕ್ತರಿಗೆ, ನಿಮ್ಮ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ, ಜಮೀನು ಕೊಡುವುದಕ್ಕೆ ಬರುವುದಿಲ್ಲವೆಂದು ಕರ್ನಾಟಕ ಸರ್ಕಾರದಿಂದ ಒಂದು ಪತ್ರವನ್ನು ಬರೆಯುತ್ತಾರೆ. ಅಷ್ಟಾದರೂ ಸಹ ಇವರು ಅದನ್ನು ವರ್ಗಾವಣೆ

O.14 F-15

ಮಾಡುತ್ತಾರೆಂದರೆ, ನನಗಂತೂ ಅರ್ಥವಾಗುತ್ತಿಲ್ಲ. ಮಠದ ಹತ್ತಿರ ವಾಸವಾಗಿರುವ ಸುಮಾರು 18 ಹರಿಜನ ಕುಟುಂಬಗಳನ್ನು ಎತ್ತಂಗಡಿ ಮಾಡಲು ಈಗಾಗಲೇ ನಾನಾ ರೀತಿಯ ಒತ್ತಡ ಸೃಷ್ಟಿಸಿ ಮಾನಸಿಕ ಹಿಂಸೆ ನೀಡುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿ ಬರೆದಿದ್ದಾರೆ. ಅಲ್ಲ ಸ್ವಾಮಿ, ಈಗಲೇ 400–500 ಎಕರೆ ಫಾರೆಸ್ಟ್ ಲ್ಯಾಂಡ್ ಅನ್ನು ಅಕ್ವೈರ್ ಮಾಡಿ, ಅವರ್ಯಾರೂ SC/ST ಗಳು ಎರಡು ಹೊತ್ತು ಊಟಕ್ಕೆ ಅದನ್ನೆ ನಂಬಿಕೊಂಡು ಜೀವನ ಮಾಡುವವರನ್ನು ಅಲ್ಲಿಂದ ಎತ್ತಿಸುತ್ತಾರೆಂದರೆ, ಇದು ಯಾವ ರೀತಿಯ ಮಠ, ಇದು ಮಠನಾ ಅಥವಾ ರಾಕ್ಷಸ ವಂಶದವರೋ ಎಂದು ನನಗೆ ಅರ್ಥವಾಗುವುದಿಲ್ಲ. ಹೀಗಾಗಿ ದಬ್ಬಾಳಿಕೆ ಮಾಡುವ ಮಠಗಳಿಗೆ ತಾವು ಕಾನೂನು ಚೌಕಟ್ಟಿನಲ್ಲಿ ಕ್ರಮತೆಗೆದುಕೊಳ್ಳಬೇಕು. ಅವರಿಗೆ ಯಾವ ಕಾರಣಕ್ಕಾಗಿ ಜಮೀನನ್ನು ಕೊಟ್ಟಿದ್ದೀರೋ ಆ ಜಮೀನನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಇಂಥ ಮಠಕ್ಕೆ ಸರ್ಕಾರ 2 ಕೋಟಿ ದುಡ್ಡನ್ನು ಕೊಟ್ಟಿದ್ದಾರೆ. ಇವತ್ತು ಉತ್ತರ ಕರ್ನಾಟಕದಲ್ಲಿ ಮನೆಮಠ ಇಲ್ಲದೇ, ಹೊಟ್ಟೆಗೆ ಹಿಟ್ಟಿಲ್ಲದೇ, ಹೊದ್ದುಕೊಳ್ಳುವುದಕ್ಕೆ ಇಲ್ಲದೇ ಸಾಯುತ್ತಿದ್ದಾರೆ, ಅದರ ಬಗ್ಗೆ ಚಿಂತನೆ ಮಾಡಿಲ್ಲ. ಹಾಗಾಗಿ ಇವತ್ತು ಈ ಬಜೆಟ್‌ನಲ್ಲಿ ಹೇಳಿದ್ದಾರೆ, ಅದು ಇನ್ನು ಕಾರ್ಯಗತವಾಗುವುದಕ್ಕೆ ತಡವಾಗುತ್ತದೆ, ಹಾಗಾಗಿ ಈ ಮಠಕ್ಕೆ ಕೊಡುವಂಥ ಔಚಿತ್ಯವೇನಿದೆ? ಇವತ್ತು ಈ ಮಠಕ್ಕೆ ಕೊಡುವಂಥ ಏನು ಕೊಡಲಾಗಿದೆ ಎಂದು ಯೋಚಿಸುವುದು ಕಾನೂನುಬದ್ಧವಾದ ಚಿಂತನೆ ಯಾಗಿದೆ. ಜೊತೆಗೆ ಇವರ ಮೇಲೆ ಶಿವಮೊಗ್ಗ DYSP ಕಚೇರಿಯಲ್ಲಿ ನೊಂದ ಅಪ್ರಾಪ್ತ ಬಾಲಕಿ ದೂರು ನೀಡಿರುವ ಹಿನ್ನೆಲೆಯಲ್ಲಿ ಹೊಸನಗರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ಫೈಲಾಗಿದೆ, ಇದರ ಬಗ್ಗೆ enquiry ಮಾಡಬೇಕು. ಇವತ್ತು ಮಠಾಧೀಶರ ಬಗ್ಗೆ ಗೌರವ ಕಳೆದು ಹೋಗಿದೆ, ನಾವು ಯಾವ ಮಠಾಧೀಶರೆಂದು ಹೇಳಬಯಸುವುದಿಲ್ಲ. ಅದೇನೊ ಒಂದು ಕಾಲದಲ್ಲಿದ್ದಂಥ ಗೌರವ ಇವತ್ತು ಜಾರುಗುಪ್ಪೆಯಿಂದ ಜಾರಿ ಎಲ್ಲೆಲ್ಲಿಗೆ ಹೋಗುತ್ತದೆಯೊ ಗೊತ್ತಿಲ್ಲ. ಹಾಗಾಗಿ ಇದನ್ನು ತಾವು enquiry ಮಾಡಬೇಕಾಗುತ್ತದೆ, because ಇಲ್ಲೇ Home Minister ಕುಳಿತಿರುವುದರಿಂದ ಈ ವೀಣಾ ಎಂಬುವವರ ಅರ್ಜಿಯಲ್ಲಿ ಯಾರ್ಯಾರು ಇನ್ವಾಲ್ವ್ ಆಗಿದ್ದಾರೆಂಬುದು ಇಲ್ಲಿದೆ. ಬೇಕಾದರೆ ನಾನು ಅವರ ಹೆಸರನ್ನು ಸಹ ಹೇಳುವುದಕ್ಕೆ ಬಯಸುತ್ತೇನೆ, ಇದು ಟಿವಿಯಲ್ಲೂ ಸಹ ಬಂದಿದೆ.

ಹೆಚ್.ರಾಮಪ್ಪ, ಭಾಗವತ್ ಮಂಜಪ್ಪ, ಆರ್.ಎಸ್. ಹೆಗ್ಡೆ, ರವೀಂದ್ರಕಾಂತ್ ಇನ್ನು ಅನೇಕ ಜನರಿದ್ದಾರೆ. ಇವರೆಲ್ಲರ ಮೇಲೆ ಪೊಲೀಸಿನವರು ಕೇಸು ದಾಖಲು ಮಾಡಿಕೊಂಡಿದ್ದಾರೆ, ಅವರು ಮಠದ ಕಾರ್ಯಕರ್ತರೋ, ಅಫಿಶಿಯಲ್ಲೋ ಗೊತ್ತಿಲ್ಲ. ಹಾಗಾಗಿ ಇದರ ಬಗ್ಗೆ ತಾವು ಒಂದು enquiry ಗೆ order ಮಾಡಬೇಕು, enquiry ಗೆ order ಮಾಡದಿದ್ದರೆ ನ್ಯಾಯ ಸಿಗುವುದಿಲ್ಲ. ವರ್ಷಾನುಗಟ್ಟಲೆ ತುಂಬಿದ ಆ ಉಂಡಿಯನ್ನು overnight 12 ಗಂಟೆಯಲ್ಲಿ ಹೊಡೆದು ಹಾಕುತ್ತಾರೆ, ಇವರಿಗೆ ಅಧಿಕಾರ ಕೊಟ್ಟವರು ಯಾರು ಸ್ವಾಮಿ? ಇದು public amount ಅದು, ಇದೇನು ಸರ್ಕಾರದ ದುಡ್ಡಲ್ಲ, ಬೇರೆಯವರದಲ್ಲ. ಯಾರೋ ಭಕ್ತಾದಿಗಳು ಹಾಕಿದ 35 ಲಕ್ಷ ದುಡ್ಡನ್ನು ತೆಗೆದುಕೊಂಡಿದ್ದಾರೆ, ಮಠದಿಂದ ಕಳ್ಳತನವನ್ನು ಮಾಡಿದ್ದಾರೆ. ಜೊತೆಗೆ 40 ಕೆ.ಜಿ. ಬೆಳ್ಳಿ, ಆದರೂ ಸಹ ಇವರು ಜಮೀನನ್ನು ತೆಗೆದುಕೊಂಡಿದ್ದಾರೆ. ಎಲ್ಲವನ್ನು ಹೇಳುತ್ತಾರೆ ಕಾರ್ಯಗತವಾಗುವುದಿಲ್ಲ, ಒಂದು ಕಡೆ ಸುಪ್ರೀಂ ಕೋರ್ಟ್ ಕಾನೂನು ಬಾಹಿರವೆಂದು ಹೇಳುತ್ತದೆ, ನ್ಯಾಯಾಲಯದಲ್ಲಿದ್ದಾಗ ಜಮೀನನ್ನು handover ಮಾಡಲು ಇವರಿಗೆ ಕಾನೂನು permit ಮಾಡುತ್ತದೆ, ಚರ್ಚೆ ಮಾಡುವುದಕ್ಕೆ ಕಾನೂನು permit ಮಾಡುವುದಿಲ್ಲ, ಇದು ಎಂಥಾ ನ್ಯಾಯ?

ಆದುದರಿಂದ ನಾನು ಹೇಳುವುದೇನೆಂದರೆ ಆ ದುಡ್ಡು ಮತ್ತು ಬೆಳ್ಳಿಯನ್ನು ವಾಪಸ್ ಪಡೆಯಬೇಕು. ಇದರ ಹಿನ್ನೆಲೆ ಏನಿದೆ ಎಂಬ ಬಗ್ಗೆ ಹೊರಗೆಡವಲು ಇದರ ಬಗ್ಗೆ ಸುಧೀರ್ಘವಾಗಿ ಎನ್‌ಕ್ವೈರಿಯನ್ನು ಮಾಡಿಸಬೇಕು. ಏಕೆಂದರೆ ಸತ್ಯ ಈಚೆಗೆ ಬರಬೇಕು. ಇದರ ಬಗ್ಗೆ ಸತ್ಯ ಈಚೆಗೆ ಬರದಿದ್ದರೆ ಇದು ಹಾಗೆಯೇ ಮುಚ್ಚಿಹೋಗುತ್ತದೆ. ಆದುದರಿಂದ ಇದರ ಬಗ್ಗೆ ಎನ್ ಕ್ವೈರಿಯನ್ನು ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಈಗ ಮಾನ್ಯ ಮಂತ್ರಿಗಳಿಂದ ಉತ್ತರವೆಂದು ಹೇಳಿದ್ದೇನೆ. ದಯವಿಟ್ಟು ಸಹಕರಿಸಿ. ಎಲ್ಲರಿಗೂ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಸಹಕರಿಸಿ.

(ಗೊಂದಲ)

ಅಧ್ಯಕ್ಷರು : ನಾನು ಬೇರೆಯವರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಆದುದರಿಂದ ಯಾರು ಮಾತನಾಡಿದರು ಅದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಕುಮಾರಸ್ವಾಮಿಯವರು ಒಂದೆರಡು ನಿಮಿಷ ಮಾತನಾಡುತ್ತಾರೆ. ದಯವಿಟ್ಟು ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : ಒಂದು ಗಂಟೆಯ ಕಾಲ ತಾವೇ ಮಾತನಾಡಿದಿರಿ. ರೂಲ್ 69 ಅಡಿಯಲ್ಲಿ ನೀವೇ ಒಂದು ಗಂಟೆ ಮಾತನಾಡಿದಿರಿ.

ಶ್ರೀ ಹೆಚ್.ಡಿ.ರೇವಣ್ಣ : ಏನು ಅನ್ಯಾಯವಾಗಿದೆ ಎನ್ನುವುದನ್ನು ಅವರು ಹೇಳಬೇಡವೆ ಮಾನ್ಯ ಅಧ್ಯಕ್ಷರೆ? ದಯವಿಟ್ಟು ಅವರಿಗೆ ಎರಡು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು. ಕೇವಲ ಎರಡು ನಿಮಿಷ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಇವತ್ತು ಸುಮಾರು 34245. . .

ಅಧ್ಯಕ್ಷರು : ಅವರು ಹೇಳಿದ್ದನ್ನೇ ನೀವು ಮತ್ತೆ ಪ್ರಸ್ತಾಪ ಮಾಡುತ್ತಿದ್ದೀರಿ. ಹೊಸ ವಿಚಾರವೇನಾದರು ಇದರಲ್ಲಿ ಇದ್ದರೆ ಅದನ್ನು ಮಾತ್ರ ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇದೊಂದು ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಇವತ್ತಿನ ದಿವಸ ಊರು ಊರುಗಳಲ್ಲೆಲ್ಲಾ ಮಠಗಳಾಗಿವೆ. ದಯಮಾಡಿ ಒಂದು ಕೆಲಸ ಮಾಡಿ ಸಾರ್. ತಮಗೂ ಗೊತ್ತಿರಬಹುದು, ಪ್ರತಿ ಹಳ್ಳಿಯಲ್ಲಿಯೂ ದೇವಾಲಯಗಳಿವೆ. ದಯಮಾಡಿ ನೀವು ಎಲ್ಲಾ ದೇವರುಗಳ ಮಠಗಳಿಗೂ ಅನುದಾನವನ್ನು ಕೊಟ್ಟುಬಿಡಿ. ಸದ್ಯ ಆ ರೀತಿಯಾದರೂ ಎಲ್ಲ ದೇವಸ್ಥಾನಗಳು ಜೀರ್ಣೋದ್ಧಾರವಾಗಲಿ. ದೇವಸ್ಥಾನಗಳನ್ನು ಪುನರುತ್ಥಾನ ಮಾಡತಕ್ಕಂಥ ಕೆಲಸವನ್ನು ಮಾಡೋಣ. ಆದರೆ ಇಲ್ಲಿ ಈ ಒಂದು ಸರ್ಕಾರ ತನ್ನ ರಾಜ್ಯದಲ್ಲಿ ಸ್ವಾರ್ಥವನ್ನು ಎಷ್ಟರಮಟ್ಟಿಗೆ ತೋರಿಸಿದೆ ಎನ್ನುವುದಕ್ಕೆ ಇವತ್ತು ನ್ಯಾಯಾಲಯಗಳ ಆದೇಶಗಳಿವೆ, ಮಾನ್ಯ ರಾಜ್ಯಪಾಲರ ಆದೇಶವಿದೆ, ಮಾನ್ಯ ಮುಖ್ಯ ನ್ಯಾಯಾಧೀಶರಾದಂಥ ರಾಮಾಜೋಯಿಸರ

ವರದಿ ಇದರ ಬಗ್ಗೆ ಇದೆ. ಇವೆಲ್ಲವನ್ನೂ ಉಲ್ಲಂಘಿಸಿ ಇವರು ಈ ರೀತಿ ಮಾಡುತ್ತಾರೆಂದರೆ ಇನ್ನೇನು ಹೇಳಬೇಕು ಹೇಳಿ.

ಅಧ್ಯಕ್ಷರು : ನೋಡಿ, ಈಗಾಗಲೇ ಅವೆಲ್ಲವೂ ಪ್ರಸ್ತಾಪವಾಗಿದೆ. ಹೀಗಿರುವಾಗ ನೀವು ಮತ್ತೆ ಅದನ್ನೇ ಪ್ರಸ್ತಾಪ ಮಾಡಿದರೆ ಏನರ್ಥ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಸರ್ಕಾರವೇ ಏನು undertaking ಮಾಡಿಕೊಂಡಿದೆ ಅದನ್ನು ಸರ್ಕಾರವೇ ಪಾಲಿಸದೆ ಇದ್ದರೆ, ಅದಕ್ಕೆ ವಿರುದ್ಧವಾಗಿ ಆದೇಶವನ್ನು ಮಾಡುತ್ತಾರೆಂದರೆ ತಾವು ದಯಮಾಡಿ ಇದರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಜನ ವಿರೋಧಿ ಮತ್ತು ಭಾವನೆಗಳನ್ನು ಉಲ್ಲಂಘಿಸತಕ್ಕಂಥ ತೀರ್ಮಾನಗಳನ್ನು ಏನು ಮಾಡಿದೆಯೋ ಅದನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಇದರ ಜೊತೆಗೆ ನ್ಯಾಯಾಲಯ ಕೂಡ ದಂಡ ಹಾಕಿದೆ. ಇಲ್ಲಿ contempt of court ಆಗಿದೆ. ಸರ್ಕಾರ ಈ ನಿಂದನೆಯನ್ನು ಮಾಡುತ್ತಿದೆ. ರೆವಿನ್ಯು ಇಲಾಖೆಯ ಅಧಿಕಾರಿಗಳು ಮತ್ತು ಮುಜರಾಯಿ ಇಲಾಖೆಯ ಅಧಿಕಾರಿಗಳು ಇದರಲ್ಲಿ ಷಾಮೀಲಾಗಿದ್ದಾರೆ. ದಯಮಾಡಿ ಈ ವಿಷಯದಲ್ಲಿ ಸರ್ಕಾರ ಇವತ್ತು ಸ್ವಾರ್ಥವನ್ನು ತೋರಿಸದೆ ಬಿ.ಜೆ.ಪಿ. ಪಕ್ಷದ್ದು hidden agenda ಏನಿದೆ ಅದನ್ನು ತೆಗೆದು ಕೆಲಸ ಮಾಡಿ ಇದನ್ನು ವಾಪಸ್ ಪಡೆಯಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) : ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು ಶ್ರೀ ಕ್ಷೇತ್ರ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಹಾಗೂ ಇತರ ಪರಿವಾರ ದೇವಸ್ಥಾನಗಳನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಟ್ಟು ಆ ದೇವಸ್ಥಾನದ ಆಡಳಿತದ ನಿರ್ವಹಣೆ ಹತೋಟಿ ಗಳನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ಸಂಪೂರ್ಣವಾಗಿ ವಹಿಸಿಕೊಟ್ಟು ತನ್ಮೂಲಕ ಶ್ರೀ ಕ್ಷೇತ್ರ ಗೋಕರ್ಣದ ಸರ್ವತೋಮುಖ ಅಭಿವೃದ್ಧಿಗೆ ಶ್ರೀ ಮಠವು ಶ್ರಮಿಸಲು ಅನುವು ಮಾಡಿಕೊಡಬೇಕೆಂದು ಶ್ರೀ ರಾಮಚಂದ್ರಾ ಪುರ ಮಠದ ಆಡಳಿತಾಧಿಕಾರಿರವರು ಕೋರಿದ್ದರು.

ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯದ ಪ್ರಕಾಶನದಲ್ಲಿ ಶ್ರೀ ಕೆಳದಿ ಗುಂಡಾಜೋಯಿಸ್‌ರವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಶ್ರೀ ರಾಮಚಂದ್ರಾಪುರ ಮಠದ ರಾಜಮಾನ್ಯ ಇತಿಹಾಸ ವೈಭವದ ಸಂಪುಟ– 1 ರ ಶಾಸನವನ್ನು ಲಗತ್ತಿಸಿ ಸಲ್ಲಿಸಿದ್ದರು ಮತ್ತು ದಿನಾಂಕ:

08–05–2008 ರ ಮನವಿಯೊಂದಿಗೆ ಕೆಲವು ಪೂರಕ ದಾಖಲೆಗಳನ್ನು ಒದಗಿಸಿರುತ್ತಾರೆ.

1. ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯಿದೆಯು ಜಾರಿಗೆ ಬಂದ ಹಿನ್ನಲೆಯಲ್ಲಿ ಸದರಿ ಕಾಯ್ದೆಯನ್ವಯ ಶ್ರೀ ಮಹಾಬಲೇಶ್ವರ ದೇವಾಲಯವನ್ನು ನೊಂದಣಿ ಮಾಡಲು ಶ್ರೀ ಮಹಾಬಲೇಶ್ವರ ಗಣಪತಿ ಭಟ್ ಹೀರೇ, ಶ್ರೀ ಅನಂತ ಉಪಾಧ್ಯಾಯ ಮತ್ತು ಶ್ರೀ ದಾಮೋದರ ದತ್ತಾತ್ರೇಯ ದೀಕ್ಷಿತ್ ಎಂಬುವವರಿಗೆ ಅಂದಿನ ಮಠಾಧಿಪತಿಗಳು ಅನುಮತಿ ನೀಡಿರುವ ಪತ್ರದ ಪ್ರತಿ ಇರುತ್ತದೆ.
2. ಶ್ರೀ ರಾಮಚಂದ್ರಾಪುರ ಮಠದ ಭಾರತಿ ಪತ್ರಧಾಮದಲ್ಲಿ ಲಭ್ಯವಿರುವ 1867 ರಿಂದ 1996 ರವರೆಗೆ ದಾಖಲಾತಿಗಳನ್ನು ಪರಿಶೀಲಿಸಿ ಗೋಕರ್ಣ ಕ್ಷೇತ್ರದ ಶ್ರೀ ಮಹಾಬಲೇಶ್ವರ ದೇವಾಲಯ ಮತ್ತು ಪರಿವಾರ ದೇವಾಲಯಗಳು ಶ್ರೀ ರಾಮಚಂದ್ರಾಪುರ ಮಠದ ಆಡಳಿತ ವ್ಯಾಪ್ತಿಯಲ್ಲಿ ಇದ್ದ ಬಗ್ಗೆ ದಾಖಲೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ ಎಂಬುದಾಗಿ ದೃಢೀಕರಿಸಿರುತ್ತಾರೆ.

ತಹಶೀಲ್ದಾರ್, ಕುಮಟಾ ತಾಲ್ಲೂಕುರವರು ದಿನಾಂಕ:26–02–2008 ರಂದು ಸಹಾಯಕ ಆಯುಕ್ತರಿಗೆ ಸಲ್ಲಿಸಿರುವ ವರದಿಯಲ್ಲಿ ಶ್ರೀ ಮಹಾಬಲೇಶ್ವರ ದೇವಾಲಯ, ಗೋಕರ್ಣ ಇದರ ಆಡಳಿತ ಈ ಹಿಂದೆ ಶ್ರೀ ಸಂಸ್ಥಾನ ಗೋಕರ್ಣ, ಶ್ರೀ ರಾಮಚಂದ್ರಾಪುರ ಮಠದ ಅಧೀನದಲ್ಲಿ ಇದ್ದುದು ಕಂಡು ಬರುತ್ತದೆ. ಸದರಿ ದೇವಸ್ಥಾನದ ಆಡಳಿತವನ್ನು ಶ್ರೀ ಸಂಸ್ಥಾನ ಗೋಕರ್ಣ, ಶ್ರೀ ರಾಮಚಂದ್ರಾಪುರ ಮಠದ ಮಠಾಧಿಪತಿಗಳಿಗೆ ವಹಿಸಿಕೊಡುವುದು ಸೂಕ್ತವಿದೆಯಾಗಿ ತಿಳಿಸುತ್ತಾ, ಊರಿನ ನಾಗರೀಕರು, ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರು ಶ್ರೀ ಕ್ಷೇತ್ರ ಗೋಕರ್ಣ ಬ್ರಾಹ್ಮಣ ಪರಿಷತ್ ಅಧ್ಯಕ್ಷರು ಸಹಾ ಇದೇ ರೀತಿ ಅಭಿಪ್ರಾಯ ಪಟ್ಟಿರುತ್ತಾರೆಂದು ತಿಳಿಸಿದ್ದಾರೆ. ಪ್ರಸ್ತುತ ದೇವಸ್ಥಾನದ ಸ್ವಚ್ಚತೆ ಧಾರ್ಮಿಕ ಆಚರಣೆ ಉತ್ಸವಗಳನ್ನು ಸರಿಯಾಗಿ ನಿರ್ವಹಿಸುವ ವ್ಯವಸ್ಥೆ ಇಲ್ಲದಿದ್ದದ್ದು ಪಂಚನಾಮೆಯಿಂದ ಕಂಡು ಬಂದಿದೆ. ಇದರಿಂದಾಗಿ ದೇವಸ್ಥಾನ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಭಕ್ತಾದಿಗಳ ಹಿತದೃಷ್ಟಿಯಿಂದ ಶ್ರೀ ಮಹಾಬಲೇಶ್ವರ ದೇವರ ಹಾಗೂ ಪರಿವಾರ ದೇವಸ್ಥಾನದ ಆಡಳಿತವನ್ನು ಶ್ರೀ ರಾಮಚಂದ್ರಾ

ಪುರದ ಮಠಕ್ಕೆ ವಹಿಸಿಕೊಡುವುದು ಸ್ವಾಗತಾರ್ಹವಾಗಿರುತ್ತದೆಂದು ವರದಿ ಮಾಡಿರುತ್ತಾರೆ.

ಈ ಬಗ್ಗೆ ಸಹಾಯಕ ಆಯುಕ್ತರು ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ದಿನಾಂಕ: 26.02.2008 ರಂದು ವರದಿ ಸಲ್ಲಿಸಿ, ಶ್ರೀ ಕ್ಷೇತ್ರದ ಆಡಳಿತವನ್ನು ಟ್ರಸ್ಟಿಯವರಾದ ಶ್ರೀ ವಿ.ಡಿ. ದೀಕ್ಷಿತ್ ಇವರು ನಡೆಸಿಕೊಂಡು ಬಂದಿದ್ದು ಅವರು ಮೃತರಾದ ನಂತರ ಸರ್ಕಾರದ ಆದೇಶ ಸಂಖ್ಯೆ: ಕಂಇ 103 ಮುಸೇವಿ 2006 ದಿನಾಂಕ: 17–11–2006 ರನ್ವಯ ಶ್ರೀ ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ಸಹಾಯಕ ಕಮಿಷನರ್ ಅವರಿಗೆ ಆದೇಶಿಸಲಾಗಿದ್ದು ಶ್ರೀಮಹಾಬಲೇಶ್ವರ ದೇವಸ್ಥಾನಕ್ಕೆ ದೇಶದ ನಾನಾ ಭಾಗಗಳಿಂದ ಭಕ್ತಾದಿಗಳು ಬರುವುದರಿಂದ ಶ್ರೀ ಕ್ಷೇತ್ರದಲ್ಲಿ ಅಭಿವೃದ್ಧಿ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ದೇವಸ್ಥಾನವನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ವಹಿಸಿಕೊಡುವ ಕುರಿತಂತೆ ದೇವಸ್ಥಾನದ ಆಡಳಿತ ಮೊಕ್ತೇಸರರ ನೇಮಕಾತಿ ವಿಷಯದಲ್ಲಿ ಸರ್ಕಾರವು ಸಹಾಯಕ ಕಮಿಷನರ್, ಕುಮಟಾರವರನ್ನು ನೇಮಕ ಮಾಡಿದ್ದರ ವಿರುದ್ಧ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆಯುವುದು ಸೂಕ್ತವೆಂದು ವರದಿ ಮಾಡಿರುತ್ತಾರೆ.

ಶ್ರೀ ಕ್ಷೇತ್ರ ಗೋಕರ್ಣದ ಉಪಾಧಿವಂತರ ಮಂಡಲವು ಶ್ರೀ ಮಹಾಬಲೇಶ್ವರ ದೇವಸ್ಥಾನದ ಸೇವಾ ಕೈಂಕರ್ಯಗಳನ್ನು ನಿರ್ವಹಿಸುತ್ತಿದ್ದು, ಸದರಿ ಉಪಾದಿವಂತ ಮಂಡಲವೇ ಶ್ರೀ ರಾಮಚಂದ್ರಾಪುರ ಮಠಕ್ಕೆ ದೇವಸ್ಥಾನವನ್ನು ವಹಿಸಿಕೊಡುವಂತೆ ಕೋರಿರುತ್ತದೆ.

ಕಾಯ್ದೆಯ ಸೆಕ್ಷನ್ 1 (4)(i) ಪ್ರಕಾರ ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಈ ಕಾಯ್ದೆಯು ಅನ್ವಯಿಸತಕ್ಕದ್ದಲ್ಲವೆಂದಿರುವುದರಿಂದ, ಗೋಕರ್ಣ ಶ್ರೀ ಮಹಾಬಲೇಶ್ವರ ದೇವಸ್ಥಾನವು ಈ ಹಿಂದೆ ಶ್ರೀ ರಾಮಚಂದ್ರಾಪುರ ಮಠದ ಆಡಳಿತ ವ್ಯಾಪ್ತಿಗೆ ಒಳಪಟ್ಟ ಸಂಸ್ಥೆ ಎಂಬ ಮನವಿಯ ಹಿನ್ನಲೆಯಲ್ಲಿ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡಬಹುದೆ ಎಂಬ ಬಗ್ಗೆ ರಾಜ್ಯದ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಪಡೆಯಲಾಗಿ, ಈ ದೇವಸ್ಥಾನವನ್ನು ಅಧಿಸೂಚಿತ ಪಟ್ಟಿಯಿಂದ ಹೊರತು ಪಡಿಸಬಹುದೆಂದು ಅಭಿಪ್ರಾಯ ನೀಡಿದ

ಹಿನ್ನಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ: ಕಂಇ 56 ಮುಆಬಿ 2008, ದಿನಾಂಕ: 12-08-2008 ರನ್ವಯ ಗೋಕರ್ಣ ಶ್ರೀ ಮಹಾಬಲೇಶ್ವರ ದೇವಸ್ಥಾನ ಮತ್ತು ಅದರ ಪರಿವಾರ ದೇವಾಲಯಗಳನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲಾಗಿರುತ್ತದೆ.

ದೇವಸ್ಥಾನದ ಆಡಳಿತವನ್ನು ಮಠಕ್ಕೆ ದಿನಾಂಕ: 14-08-2008 ರಂದು ಹಸ್ತಾಂತರಿಸಿದ ಸಂದರ್ಭದಲ್ಲಿ ದೇವಾಲಯಕ್ಕೆ ಸೇರಿದ ಕೆಳಕಂಡ ಸ್ವತ್ತುಗಳನ್ನು ಹಸ್ತಾಂತರಿಸಲಾಗಿದೆ.

1) ಶ್ರೀ ಮಹಾಬಲೇಶ್ವರ ದೇವಸ್ಥಾನದ ಕಟ್ಟಡ.
2) ಗರ್ಭ ಗೃಹದಲ್ಲಿರುವ ಶ್ರೀ ಮಹಾಬಲೇಶ್ವರ ಲಿಂಗ ಮತ್ತು ಪಾಣಿಪೀಠ.
3) ದೇವಸ್ಥಾನದ ಗರ್ಭಗುಡಿ ಹಾಗೂ ಸಂಬಂಧಿಸಿದ ದೇವಲಯದ ಆವರಣದಲ್ಲಿರುವ ದೊಡ್ಡ ಹಾಗೂ ಸಣ್ಣ ಹುಂಡಿಗಳು ಸೇರಿ ಒಟ್ಟು 14.
4) ಬೆಳ್ಳಿಕವಚವಿರುವ ಪಲ್ಲಕ್ಕಿ – 1
5) ಕವಚವಿರುವ ಪಾಲಕಿ – 1
6) ಕಟ್ಟಣೆಯ ಪಾಲಕಿ – 2
7) ಕಟ್ಟಣೆಯ ಪಾಲಕಿ – 1
8) ಹಳೆಯ ಕಟ್ಟಣೆಯ ಮಣೆ
9) ಹಿತ್ತಾಳೆಯ ಈಶ್ವರ ಮುಖವಾಡ, ಪ್ರಭಾವಳಿ ಸಹಿತ – 1
10) ಕಬ್ಬಿಣದ ಮುಚ್ಚಿದ ಕಪಾಟು – 1
11) ಕಟ್ಟಿಣದ ಮುಚ್ಚಿ ಕಪಾಟು – 3
12) ಕಟ್ಟಣೆಯ ಮುಚ್ಚಿದ ಕಪಾಟು (ಚಿಕ್ಕದು) – 1
13) ಕಟ್ಟಣೆಯ ಮುಚ್ಚಿದ ಪಟಾರ – 1
14) ಕಟ್ಟಣೆಯ ದೊಡ್ಡ ರಥ – 1
15) ಕಟ್ಟಣೆಯ ಸಣ್ಣ ರಥ– 1
16) ಸುತ್ತ ಪವಳಿಯಲ್ಲಿರುವ ರಥ ಕಟ್ಟಡ ಸಾಮಗ್ರಿಗಳು ಮತ್ತು ಕಟ್ಟಡ ರಿಪೇರಿ ಸಾಮಗ್ರಿಗಳು.

17) ಸುತ್ತ ಪವಳಿಯಲ್ಲಿರುವ ಅಸ್ತಿತ್ವದಲ್ಲಿರುವ ಆದಿ ಗೋಕರ್ಣ ಮತ್ತು ಪಾಕ್ಷೇಶ್ವರ ಮತ್ತು ವೀರಭದ್ರ ದೇವಸ್ಥಾನಗಳು.

ದಿನಾಂಕ: 14–08–2008 ರಂದು ದೇವಸ್ಥಾನದ ಆಡಳಿತವನ್ನು ಮಠಕ್ಕೆ ಹಸ್ತಾಂತರಿಸಲಾಗಿದ್ದು ಸದರಿ ದಿವಸ ಹುಂಡಿ ಹಣವನ್ನು ಎಣಿಕೆ ಮಾಡಿರುವುದಿಲ್ಲ. ಈ ಹುಂಡಿಗಳನ್ನು ದಿನಾಂಕ: 18–08–2008 ರಂದು ಸ್ಥಳೀಯ ಶಾಸಕರು ಹಾಗೂ ಊರಿನ ಗಣ್ಯರ ಸಮಕ್ಷಮ ತೆರೆದು ಲೆಕ್ಕ ಮಾಡಲಾಗಿ ಸದರಿ ಹುಂಡಿಯಲ್ಲಿ ರೂ.30,13,392–00 (ರೂ. ಮೂವತ್ತು ಲಕ್ಷದ ಹದಿಮೂರು ಸಾವಿರದ ಮುನ್ನೂರ ತೊಂಭತ್ತೆರಡು ಮಾತ್ರ) ದೊರಕಿರುವುದಾಗಿಯೂ ಹಾಗೂ ಇತರ ಚಾಲ್ತಿಯಲ್ಲಿ ಬರಬಹುದಾದ ರೂ.3,75,646–00 (ರೂ. ಮೂರು ಲಕ್ಷದ ಎಪ್ಪತ್ತೈದು ಸಾವಿರದ ಆರುನೂರ ನಲವತ್ತಾರು ಮಾತ್ರ) ಬಂದಿದ್ದು ಅದನ್ನು ದೇವಸ್ಥಾನದ ಖಾತೆಯಲ್ಲಿ ಇಡಲಾಗಿದೆ, ಈ ಹಣವನ್ನು ಮಠದ ಯಾವುದೇ ಚಟುವಟಿಕೆಗೆ ಬಳಸಲಾಗುತ್ತಿಲ್ಲ ಎಂದು ದೇವಸ್ಥಾನದ ನಿರ್ವಾಹಕರು ದಿನಾಂಕ: 11–06–2009 ರಂದು ಸಹಾಯಕ ಆಯುಕ್ತರು, ಕುಮಟಾ, ಉತ್ತರ ಕನ್ನಡ ಇವರಿಗೆ ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ.

ಸರ್ಕಾರವು ಸದರಿ ದೇವಾಲಯವನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಿದ ನಂತರ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರು ಜನರು ರಿಟ್ ಅರ್ಜಿಗಳನ್ನು ದಾಖಲಿಸಿ ರುತ್ತಾರೆ. ಇವುಗಳಲ್ಲಿ ಒಂದು ರಿಟ್ ಅರ್ಜಿಯು ವಜಾಗೊಂಡಿದ್ದು, ಈ ವಜಾಗೊಂಡಿರುವ ಆದೇಶದ ವಿರುದ್ಧ ಸಲ್ಲಿಸಿದ ರಿಟ್ ಅಪೀಲು ಕೂಡಾ ವಜಾಗೊಂಡಿರುತ್ತದೆ. ಉಳಿದಂತೆ ಈ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸಡಾ ಗ್ರಾಮವು ಬರುತ್ತದೆ. ಸದರಿ ಗ್ರಾಮದ ಮಾಲ್ಕಿ ಜಮೀನು ಸರ್ವೆ ನಂ.32ರಲ್ಲಿ 3 ಎಕರೆ 34 ಗುಂಟೆ ಜಾಗದಲ್ಲಿ ಗೋಶಾಲೆಯನ್ನು ಶ್ರೀರಾಮಚಂದ್ರಪುರ ಮಠದವರು ಸ್ಥಾಪಿಸಿರುತ್ತಾರೆ. ಆದರೆ, ಸದರಿ ಮಠದವರು ಯಾವುದೇ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವುದಿಲ್ಲ ಹಾಗೂ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕಿನ ಹನಿಯ ಗ್ರಾಮದಲ್ಲಿಯೂ ಸಹಾ ಯಾವುದೇ

ಅರಣ್ಯ ಪ್ರದೇಶವನ್ನು ಸದರಿ ಮಠದವರು ಒತ್ತುವರಿ ಮಾಡಿರುವುದಿಲ್ಲವೆಂದು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ತಿಳಿಸಿದೆ.

ಮುಜರಾಯಿ ಇಲಾಖೆಯಿಂದ ಸದರಿ ಮಠಕ್ಕೆ ಯಾವುದೇ ರೀತಿಯ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ಶ್ರೀ ರಾಮಚಂದ್ರಾಪುರ ಮಠದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಹೊಸನಗರ (ತಾ) ಹನಿಯ ಗ್ರಾಮದಲ್ಲಿ ಯಾವುದೇ ಸರ್ಕಾರಿ ಜಮೀನು ಒತ್ತುವರಿಯಾಗಿರುವುದಿಲ್ಲ. ಆದರೆ ವಿಶ್ವ ಗೋ ಸಮ್ಮೇಳನ ನಡೆದ ಸಂದರ್ಭದಲ್ಲಿ ರಾಮಚಂದ್ರಪುರ ಗ್ರಾಮದ 25.34 ಎಕರೆ ಸರ್ಕಾರಿ ಜಮೀನಿನಲ್ಲಿ ಮತ್ತು ಕೆ.ಪಿ.ಸಿ.ಎಲ್ ಗೆ ಸೇರಿದ 13.11 ಎಕರೆ ಒಟ್ಟು 39.05 ಎಕರೆ ಜಾಗವನ್ನು ಸಮತಟ್ಟುಗೊಳಿಸಿ ಸಮ್ಮೇಳನ ನಡೆಸಿ ಮುಗಿಸಿದ್ದು, ಈ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀಮಠದ ಸಂಸ್ಥೆಯ ವತಿಯಿಂದ ಶ್ರೀರಾಮಚಂದ್ರಪುರ ಗ್ರಾಮದ ಸ.ನಂ. 7ರಲ್ಲಿನ 25 ಎಕರೆ ಜಮೀನನ್ನು ಮಂಜೂರಾತಿಗಾಗಿ ಕೋರಿದ್ದು, ಸದರಿ ಜಮೀನು ಗೋಮಾಳ ಜಮೀನಾಗಿರುವುದರಿಂದ ಮಂಜೂರಾತಿಗೆ ಅವಕಾಶವಿಲ್ಲವೆಂದು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ತಮ್ಮ ಪತ್ರ ದಿನಾಂಕ: 24-09-2009 ರಲ್ಲಿ ಕೋರಿಕೆಯನ್ನು ತಿರಸ್ಕರಿಸಿರುತ್ತಾರೆ.

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು, ವಿರೋಧ ಪಕ್ಷದ ಉಪ ನಾಯಕರಾದ ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಎಂ.ಟಿ. ಕೃಷ್ಣಪ್ಪನವರು ಗೋಕರ್ಣದ ಶ್ರೀ ಮಹಾಗಣಪತಿ ದೇವಸ್ಥಾನದ ಬಗ್ಗೆ ಹಲವಾರು ವಿಷಯಗಳನ್ನು ತಿಳಿಸಿದ್ದಾರೆ. ಗೋಕರ್ಣ ಕ್ಷೇತ್ರ ಬಹಳ ಪ್ರಶಿದ್ಧವಾದಂಥ ಕ್ಷೇತ್ರವಾಗಿದೆ. ದಕ್ಷಿಣದ ಕಾಶಿ ಎಂದು ಇದಕ್ಕೆ ಹೆಸರಿದೆ. ಎಲ್ಲ ಸಮಸ್ತ ಜನರಿಗೂ ಇದು ಶ್ರದ್ಧಾ ಕ್ಷೇತ್ರವಾಗಿದೆ. ಅಲ್ಲಿ ಒಳ್ಳೆಯ ರೀತಿಯಿಂದ, ಇನ್ನೂ ಉತ್ತಮವಾದಂಥ ರೀತಿಯಿಂದ ಪೂಜೆ ಪುನಸ್ಕಾರ ಸಲ್ಲಿಸಲು ಭಕ್ತರಿಗೆ ಅವಕಾಶಗಳು, ವ್ಯವಸ್ಥೆಗಳು ಆಗಬೇಕು ಎಂಬುದೇ ಸರ್ಕಾರದ ಇಚ್ಛೆಯಾಗಿದೆ. ವಸ್ತುಸ್ಥಿತಿ ಏನು ಎಂದು ಸ್ವಲ್ಪ ತಿಳಿದುಕೊಳ್ಳಬೇಕು. ಕರ್ನಾಟಕ ಆಗುವ ಮುಂಚೆ ಇದ್ದಂಥ ಐದು constituents ನಲ್ಲಿ ಆರೇಳು ಕಾನೂನುಗಳು ಇದ್ದವು. ಹಳೆ ಮೈಸೂರಿನಲ್ಲಿ ಮಹಾರಾಜರ ಕಾಲದಲ್ಲಿ ಒಂದು ಕಾನೂನು, ಮದ್ರಾಸ್ ಪ್ರಾಂತ್ಯದಿಂದ ಬಂದಿರತಕ್ಕಂಥ ಪ್ರದೇಶದಲ್ಲಿ ಒಂದು ಕಾನೂನು, ಮುಂಬೈ ಪ್ರಾಂತ್ಯದಿಂದ ಬಂದಿರತಕ್ಕಂಥ ಕರ್ನಾಟಕದ ಪ್ರದೇಶದಲ್ಲಿ ಬಾಂಬೆ

ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಇತ್ತು. ಅದೇ ರೀತಿ ಹೈದ್ರಾಬಾದ್ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಕಾನೂನು, ಕೊಡಗಿಗೆ ಒಂದು ಕಾನೂನು ಮತ್ತು ಎಲ್ಲಮ್ಮ ದೇವಸ್ಥಾನದ ಬಗ್ಗೆ ಒಂದು ಬೇರೆಯೇ ಕಾನೂನು ಇತ್ತು. ತಮಗೂ ಗೊತ್ತಿದೆ. 1981 ರಲ್ಲಿಯೇ ಸುಪ್ರೀಂಕೋರ್ಟ್ ಒಂದೇ ಕಾನೂನನ್ನು ಮಾಡಬೇಕೆಂದು ಹೇಳಿದ ನಂತರ ಬಹಳ ವರ್ಷಗಳ ನಂತರ ಕುಂಟುತ್ತಾ ಕುಂಟುತ್ತಾ ಈಗ 1992 ರಲ್ಲಿ ಅದರ ಬಗ್ಗೆ ಎರಡು ಸದನದ ಸದಸ್ಯರು ಇರತಕ್ಕಂಥ Joint Select Committee ಸುಮಾರು ಒಂದೂವರೆ ವರ್ಷಗಳ ಕಾಲ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿ ಅಧ್ಯಯನ ಮಾಡಿ ಒಂದು ಸಮಾನ ಕಾನೂನನ್ನು ತಂದು ಆ ಕಾನೂನು 2003ರ ಮೇ ಒಂದನೇ ತಾರೀಖಿನಿಂದ ಜಾರಿಯಾಗಿದೆ. ಬಾಂಬೆ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಬಗ್ಗೆ ರೇವಣ್ಣನವರು ಹೇಳಿದ ಹಾಗೆ 1950ರ ಬಾಂಬೆ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಪ್ರಕಾರ Religious ಮತ್ತು ಇತರ Secular Charities, ಇವೆರಡು BPT ಗೆ ಬಂದಿತ್ತು. ಆ ಕಾನೂನು ಜಾರಿಗೆ ಬಂದಾಗ ಈ ದೇವಸ್ಥಾನದ ಬಗ್ಗೆ ರಾಮಚಂದ್ರಪುರದ ಮಠದವರು ಒಂದು ಅಫಿಡೆವಿಟ್ ಅನ್ನು ಹಾಕಿದರು. ಆ ಒಂದು ಆಫಿಡೆವಿಟ್‌ನಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯದ ಪ್ರಕಾಶನದಲ್ಲಿ ಶ್ರೀ ಕೆಳದಿ ಗುಂಡಾ ಜೋಯಿಸ್‌ರವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಶ್ರೀ ರಾಮಚಂದ್ರಾಪುರದ ಮಠದ ರಾಜಮಾನ್ಯ ಇತಿಹಾಸ ವೈಭವದ ಸಂಪುಟ–1ರ ಶಾಸನವನ್ನು ಲಗತ್ತಿಸಿ ಬಿ.ಪಿ.ಟಿ. ಯದ್ದಕ್ಕೆ ಚಾರಿಟಿ ಕಮಿಶನರ್ ರವರಿಗೆ ಅರ್ಜಿಯನ್ನು ಸಲ್ಲಿಸಿದರು. ಅದು ಬಾಂಬೆ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಜಾರಿಗೆ ಬಂದ ಹಿನ್ನಲೆಯಲ್ಲಿ ಸದರಿ ಕಾಯಿದೆಯನ್ವಯ ಶ್ರೀ ಮಹಾಬಲೇಶ್ವರ ದೇವಸ್ಥಾನವನ್ನು ನೋಂದಣಿ ಮಾಡಲು, ಆ ಟ್ರಸ್ಟ್ ಅಡಿಯಲ್ಲಿ ನೋಂದಣಿ ಮಾಡುವುದಕ್ಕೆ ಶ್ರೀ ಮಹಾಬಲೇಶ್ವರ ಗಣಪತಿ ಭಟ್ ಹೀರೇ, ಶ್ರೀ ಅನಂತ ಉಪಾಧ್ಯಾಯ ಮತ್ತು ದಾಮೋದರ ದತ್ತಾತ್ರೇಯ ದೀಕ್ಷಿತ್ ಎಂಬುವರಿಗೆ ಅಂದಿನ ಗೋಕರ್ಣ ಮಠದ, ಈ ರಾಘವೇಶ್ವರ ಮಠದ ಸ್ವಾಮೀಜಿಯವರು ಅನುಮತಿ ನೀಡಿರುವ ಪತ್ರದ ಪ್ರತಿಯನ್ನು ಕಳುಹಿಸಿದೆ. ರಾಮಚಂದ್ರಾಪುರದ ಮಠದ ಭಾರತಿ ಪತ್ರಧಾಮದಲ್ಲಿ ಲಭ್ಯವಿರುವ 1867 ರಿಂದ 1996 ರವರೆಗಿನ ದಾಖಲಾತಿಯನ್ನು ಪರಿಶೀಲಿಸಿ, ಅಂದರೆ ಸುಮಾರು 143 ವರ್ಷಗಳ ಹಿಂದಿನ ದಾಖಲಾತಿಗಳನ್ನು ಪರಿಶೀಲಿಸಿ ಗೋಕರ್ಣ ಕ್ಷೇತ್ರದ ಶ್ರೀ ಮಹಾಬಲೇಶ್ವರ ದೇವಾಲಯ ಹಾಗೂ ಇತರ ಪರಿವಾರ

ದೇವಾಲಯಗಳು ಶ್ರೀ ರಾಮಚಂದ್ರಾ ಪುರದ ಮಠದ ಆಡಳಿತ ವ್ಯಾಪ್ತಿಯಲ್ಲಿ ಇದ್ದ ಬಗ್ಗೆ ದಾಖಲೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ ಎಂಬುದಾಗಿ ದೃಢೀಕರಿಸಿದ್ದಾರೆ. ಇದರಂತೆ ಬಾಂಬೆ ಟ್ರಸ್ಟ್ ಆ್ಯಕ್ಟ್ ಇದ್ದಷ್ಟು ದಿವಸ ಅದು ಈ ಮೂರು ಜನರಲ್ಲಿ ಯಾರು ಕೊನೆಯಲ್ಲಿ ಉಳಿದುಕೊಂಡಿದ್ದಾರೋ ಅವರ ನೇತೃತ್ವದಲ್ಲಿ ಅದು ಇತ್ತು. ಆದರೆ ಪರಿಸ್ಥಿತಿ ಹೇಗಿತ್ತು ಎಂಬ ಬಗ್ಗೆ ತಮಗೂ ಗೊತ್ತಿದೆ. ನಮಗೂ ಗೊತ್ತು. 1997ರ ಹೊಸ ಕಾನೂನು ಕರ್ನಾಟಕ ಧಾರ್ಮಿಕ ದತ್ತಿ ಕಾನೂನು ಬಂದ ನಂತರ ಅದರಡಿಯಲ್ಲಿ ಇವೆಲ್ಲವೂ ಬರಬೇಕಾಗಿತ್ತು. ಇವೆಲ್ಲಾ ಬರುವಾಗ ಆ ಕಾಯಿದೆಯಲ್ಲಿ ನಮ್ಮ ಪೈಕಿ ಅಭಯಚಂದ್ರರವರು ಕೂಡ ನಮ್ಮ ಜಂಟಿ ಸದನ ಸಮಿತಿಯ ಸದಸ್ಯರಾಗಿದ್ದರು. ನಾನು ಕೂಡ ಆ ಸಮಿತಿಯ ಸದಸ್ಯನಾಗಿದ್ದೆ. ಈ ಕರ್ನಾಟಕದ ಕಾಯಿದೆ ತಯಾರು ಮಾಡುವಂಥ ಇಪ್ಪತ್ತು ಜನ ಶಾಸಕರಲ್ಲಿ ನಾನು ಕೂಡ ಒಬ್ಬನಾಗಿದ್ದೆ. ಅಭಯ ಚಂದ್ರರವರೆ, ತಾವು ಜಂಟಿ ಸದನ ಸಮಿತಿಯ ಸದಸ್ಯರಾಗಿದ್ದೀರಿ ಎಂದು ಕಾಣಿಸುತ್ತದೆ. ಈ ಸಮಿತಿಯಲ್ಲಿ ಮಾನ್ಯ ಭೀಮಣ್ಣ ಖಂಡ್ರೆಯವರು, ಅಮರನಾಥ ಶೆಟ್ಟಿಯವರು ಕೂಡ ಸದಸ್ಯರಾಗಿದ್ದರು. ಇವರೆಲ್ಲರೂ ಸುಮಾರು ಒಂದೂವರೆ ವರ್ಷಗಳ ಕಾಲ ಬೇರೆ ಬೇರೆ ಸರ್ಕಾರದ ಕಾಯಿದೆಗಳಲ್ಲಿರುವಂಥ ಅತ್ಯುತ್ತಮವಾದಂಥ ಅಂಶ. ಸುಪ್ರೀಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಎತ್ತಿ ಹಿಡಿದಿರುವಂಥ point ಗಳನ್ನು ಮಾತ್ರ ಕೂಡಿಸಿ ನಮ್ಮ ಇಡೀ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಒಂದು ಕಾನೂನನ್ನು ಜಾರಿಗೆ ತಂದರು. ನಾನು ಈಗಾಗಲೇ ಹೇಳಿದಂತೆ ಈ ಕಾನೂನನ್ನು 01–05–2003 ರಿಂದ ಜಾರಿಗೆ ತಂದರು. ಈಗ ಈ ಸಂದರ್ಭದಲ್ಲಿ ಕರ್ನಾಟಕದ ಕಾಯಿದೆಯಲ್ಲಿ ಕೆಲವು ವಿನಾಯಿತಿಗಳು ಇದ್ದವು. ಈ ಕಾಯಿದೆಯೊಳಗೆ ಎಲ್ಲವೂ ಬರಬೇಕು ಅಥವಾ ಕಾಯಿದೆಯಲ್ಲಿ ಎಲ್ಲ ದೇವಸ್ಥಾನಗಳ ಹತೋಟಿ ಸರ್ಕಾರಕ್ಕೆ ಇರಬೇಕು ಎನ್ನುವಂಥ ಇಚ್ಛೆ ಆಗ ಇದ್ದ ಸರ್ಕಾರಕ್ಕೆ ಇರಲಿಲ್ಲ. ಅವರು ಅದರಲ್ಲಿ ಎಲ್ಲ ರೀತಿಯ ಮಠಗಳನ್ನು ಕಾಯಿದೆಯಿಂದ ಹೊರಗಿಟ್ಟರು. ಏಕೆಂದರೆ ಮಠ ಸಾರ್ವಜನಿಕ ಸಂಸ್ಥೆ. ಮಠಾಧಿಪತಿಗಳಿದ್ದಾರೆ. ಆ ಮಠಾಧಿಪತಿಗಳು ಅಲ್ಲಿಯ ಸಂಪ್ರದಾಯ ಪ್ರಕಾರ ಆಡಳಿತವನ್ನು ಮಾಡಿಕೊಂಡು ಮಾರ್ಗದರ್ಶನ ಮಾಡುವುದಕ್ಕೆ ಇದ್ದಾರೆ. ಅವರನ್ನು ಈ ಕಾಯಿದೆಯೊಳಗೆ ತರುವುದು ಬೇಡವೆನ್ನುವ ತೀರ್ಮಾನವಿತ್ತು.

ಎರಡನೆಯದಾಗಿ ಯಾವುದೇ ಒಂದು ಮಠಕ್ಕೆ ಹೊಂದಿಕೊಂಡಿರುವಂಥ, ಸೇರಿಕೊಂಡಿರುವಂಥ, ಅಧೀನದಲ್ಲಿರುವಂಥ ದೇವಸ್ಥಾನವನ್ನು ಇದರಿಂದ exemption ಮಾಡಲಾಗಿದೆ. ಇನ್ನು ಮೂರನೆಯದಾಗಿ ಹಿಂದು ಸಮಾಜದಲ್ಲಿರತಕ್ಕಂಥ ವಿವಿಧ ಪಂಗಡಗಳ, ಅದು ವಿಶ್ವಕರ್ಮದವರಿರಬಹುದು, ಬ್ರಾಹ್ಮಣರಿರಬಹುದು, ಮೊಗವೀರ ಇರಬಹುದು, ಗೌಡ ಸಾರಸ್ವತ ಬ್ರಾಹ್ಮಣರು ಇರಬಹುದು, ಒಂದೊಂದು ಪಂಗಡಗಳ ರೀತಿ ರಿವಾಜಿನ ಪ್ರಕಾರ ಅವರುಗಳು ಅವರವರ ದೇವಸ್ಥಾನಕ್ಕೆ ಬೇಕಾದಂತಹ ಆಡಳಿತ ಕಮಿಟಿಯನ್ನು ಮಾಡಿಕೊಂಡು ನಡೆಸಿಕೊಂಡು ಬರಲಿ, ಅದು ಅವರಿಗೆ ವಹಿಸಿಕೊಟ್ಟಿದ್ದು. ಆದರೆ ಇವರೆಲ್ಲರೂ ಕೂಡ ಅಲ್ಲಿಯ ಲೆಕ್ಕಪತ್ರಗಳನ್ನು ಇಡಬೇಕು, ಅಲ್ಲಿ ಆಡಿಟ್, ಬಜೆಟ್ ಆಗಬೇಕು, permanent property register ಮಾಡಿರುವುದನ್ನೆಲ್ಲ ಇಡಬೇಕು ಎಂದು ಹೇಳುವಂತಹ ಒಂದು ಅಭಿಪ್ರಾಯ ಸಹ ಆ ಕಾಯಿದೆಯಲ್ಲಿ ಇತ್ತು ಮತ್ತು ಇನ್ನು ಮುಂದೆ ನಮ್ಮ Joint select committee recommendations ನಲ್ಲಿ ಎಲ್ಲೆಲ್ಲಿ ಅನುವಂಶಿಕವಾಗಿರುವಂತಹ ಆಡಳಿತ ಇದೆ ಅವರಿಗೂ ಬೇಕಾದಂತಹ ಕೆಲವು ವಿನಾಯಿತಿಯನ್ನು ಕೊಡಬಹುದು. ಅಷ್ಟಲ್ಲದೆ ಟ್ರಸ್ಟ್ ಮಾಡುತ್ತಾರೆ. ಒಂದು ರಾಘವೇಂದ್ರ ಸ್ವಾಮಿ ಟ್ರಸ್ಟ್ ಎಂದು ಮಾಡುತ್ತಾರೆ ಅಥವಾ ಗಣಪತಿ ದೇವಸ್ಥಾನದ ಒಂದು ಟ್ರಸ್ಟ್ ಇರಬಹುದು, ಆ ಟ್ರಸ್ಟ್‌ನ ಆರ್ಟಿಕಲ್ ಪ್ರಕಾರ ಹೇಗೆ ಆಡಳಿತ ನಡೆಯಬೇಕೆಂದು ಇದೆಯೋ ಹಾಗೆ ನಡೆಯಬಹುದು ಎಂದು ವಿನಾಯಿತಿ ಮಾಡಬಹುದು. ಸಣ್ಣಪುಟ್ಟ ದೇವಸ್ಥಾನಗಳಲ್ಲಿ ಅಮವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಪೂಜೆ ಆಗಬೇಕಾಗಿರುವುದು, ನಿತ್ಯ ಪೂಜೆ ಇಲ್ಲದಿರುವಂತಹ ದೇವಸ್ಥಾನ, ಅದು ನಮ್ಮ ಕಕ್ಷೆಗೆ ಬಂದು ಪ್ರಯೋಜನವಿಲ್ಲ. ಹಾಗಾಗಿ ಆ ಸಣ್ಣ ದೇವಸ್ಥಾನಗಳನ್ನು ಸ್ಥಳೀಯರು ಯಾರಿದ್ದಾರೆ, ಅವರೇ ನೋಡಿಕೊಂಡಿರಬಹುದೆಂದು ವಿನಾಯಿತಿ ಇದೆ. ಆದರೆ ಕೊನೆಯ ಮೂರು ವಿಚಾರ ಯಾವುದೆಂದರೆ ಒಂದು ಅನುವಂಶಿಕ, ಟ್ರಸ್ಟ್ ಮತ್ತು ಸಣ್ಣ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಕಾಯಿದೆ ಮಾಡುವಾಗ ಅವತ್ತಿನ ಸರ್ಕಾರದ ವಿವೇಚನೆಗೆ ಬಿಟ್ಟಾಗ ಅದನ್ನು ವಿರಹಿತ ಮಾಡಿದರು. ಆದರೆ ಮೊದಲಿನ ಮೂರು ಮಠ, ಮಠಕ್ಕೆ ಹೊಂದಿಕೊಂಡಿರುವ ದೇವಸ್ತಾನ ಮತ್ತು ಪಂಗಡಗಳ ದೇವಸ್ಥಾನ, Hindu Denomination Temples ಅದನ್ನು exempt ಮಾಡಿತ್ತು. ಇವತ್ತು ಆ ಕಾನೂನು ಜಾರಿಯಲ್ಲಿದೆ. ಅದಕ್ಕೆ Supreme Court

ಬೇಕಾದಂತಹ ಅನುಮತಿಯನ್ನು ಕೊಟ್ಟಿದೆ. ಹಾಗಾಗಿ ಭಿನ್ನವಾದಂತಹ ನಿಲುವನ್ನು ನಾವು ತಳೆಯುವುದಕ್ಕೆ ಆಗುವುದಿಲ್ಲ. ಈಗ ನಮ್ಮ ಸರ್ಕಾರ Supreme Court ನಲ್ಲಿ ಒಂದು affidavit ಹಾಕಿದ್ದೇವೆ, ನಾನು ಸಚಿವನಾಗಿ ಬಂದಮೇಲೆ ಅಲ್ಲ, ಸರ್ಕಾರ ಹಾಕಿರುವಂತಾದ್ದು ನಮಗೆಲ್ಲರಿಗೂ binding ಇದೆ. ಅದರಲ್ಲಿ ಈ ಕಾನೂನನ್ನು ಸೂಕ್ತ ರೀತಿಯಿಂದ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹೇಳಿದಂತಹ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟು ಕೊಂಡು ಸೂಕ್ತ ತಿದ್ದುಪಡಿ ಮಾಡಿ, ಈ ಸಮಗ್ರ ಕಾಯಿದೆಯನ್ನು ಮತ್ತೊಮ್ಮೆ ಪುನರಾವಲೋಚನೆ ಮಾಡಿ ತರುತ್ತೇವೆಂದು ಹೇಳುವಂತಹ ಮಾತನ್ನು ಹೇಳಿದೆವು. ಅದೇ ಸಂದರ್ಭದಲ್ಲಿ Justice ರಾಮಜೋಯಿಸ್ ರವರ ನೇತೃತ್ವದಲ್ಲಿ ಒಂದು committee ಆಗಿದ್ದು ನಿಜ, ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದು ನಿಜ. ಈಗಾಗಲೇ ಅದರ ಬಗ್ಗೆ ನಮ್ಮ ಇಲಾಖೆಯಿಂದ ಎರಡೆರಡು ಮೀಟಿಂಗ್ ಆಗಿದೆ, ಇನ್ನೊಂದೆರಡು ಮೀಟಿಂಗ್ ಮಾಡಿ, ನಾವು ಹೊಸದಾಗಿ ನಮ್ಮ ರಾಜ್ಯಕ್ಕೆ ಈ ಎಲ್ಲಾ ಹಿನ್ನೆಲೆಯಲ್ಲಿ ಒಂದು ಸಮಗ್ರ ಕಾನೂನನ್ನು ತಂದು ಆದಷ್ಟು ಶೀಘ್ರ ಮಂಜೂರು ಮಾಡುವಂತಹ ಇರಾದೆಯಲ್ಲಿ ಇದ್ದೇವೆ. ಇಂತಹ ಸಂದರ್ಭದಲ್ಲಿ ಕುಮಟಾ ತಾಲ್ಲೂಕಿನ ತಹಶೀಲ್ದಾರ್ ರವರು ದಿನಾಂಕ: 26.02.2008 ರಂದು ಸಹಾಯಕ ಆಯುಕ್ತರವರಿಗೆ ಸಲ್ಲಿಸಿರುವ ವರದಿಯಲ್ಲಿ ಶ್ರೀ ಮಹಾಬಲೇಶ್ವರ ದೇವಾಲಯ, ಗೋಕರ್ಣ ಇದರ ಆಡಳಿತವನ್ನು ಈ ಹಿಂದೆ ಶ್ರೀ ಸಂಸ್ಥಾನ ಗೋಕರ್ಣ ರಾಮಚಂದ್ರಪುರ ಮಠದ ಅಧೀನದಲ್ಲಿ ಇರುವುದು ಕಂಡು ಬರುತ್ತದೆ ಎಂದು ಅವರು ಕೊಟ್ಟ affidavit ದಾಖಲೆ ಎಲ್ಲವನ್ನೂ ಪರಿಶೀಲನೆ ಮಾಡಿ, ಸದರಿ ದೇವಸ್ಥಾನದ ಆಡಳಿತವನ್ನು ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಪುರದ ಮಠಾಧಿಪತಿಗಳಿಗೆ ವಹಿಸಿಕೊಡುವುದು ಸೂಕ್ತವಿದೆಯೆಂದು ತಿಳಿಸುತ್ತಾ, ಊರಿನ ನಾಗರೀಕರು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಶ್ರೀ ಕ್ಷೇತ್ರ ಗೋಕರ್ಣ ಬ್ರಾಹ್ಮಣ ಪರಿಷತ್ ಅಧ್ಯಕ್ಷರು ಸಹಾ ಇದೇ ರೀತಿಯಾಗಿ ಅಭಿಪ್ರಾಯ ಪಟ್ಟಿರುತ್ತಾರೆಂದು ತಿಳಿಸಿದ್ದಾರೆ. ಪ್ರಸ್ತುತ ದೇವಸ್ಥಾನದ ಸ್ವಚ್ಛತೆ, ಧಾರ್ಮಿಕ ಆಚರಣೆ, ಉತ್ಸವಗಳನ್ನು ಸರಿಯಾಗಿ ನಿರ್ವಹಿಸುವ ವ್ಯವಸ್ಥೆ ಇಲ್ಲದಿದ್ದದ್ದು ಪಂಚನಾಮೆಯಿಂದ ಕಂಡುಬಂದಿದೆ. ಇದರಿಂದಾಗಿ ದೇವಸ್ಥಾನದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಭಕ್ತಾಧಿಗಳ ಹಿತದೃಷ್ಟಿಯಿಂದ ಶ್ರೀ ಮಹಾಬಲೇಶ್ವರ

ದೇವರ ಹಾಗೂ ಪರಿವಾರ ದೇವಸ್ಥಾನದ ಆಡಳಿತವನ್ನು ಶ್ರೀ ರಾಮಚಂದ್ರ ಪುರ ಮಠಕ್ಕೆ ವಹಿಸಿಕೊಡುವುದು ಸೂಕ್ತವಾದುದು ಎಂದು ವರದಿ ಮಾಡಿರುತ್ತಾರೆ. ಈ ಬಗ್ಗೆ ಸಹಾಯಕ ಆಯುಕ್ತರು ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ದಿನಾಂಕ : 26.02.2008ರಂದು ಎಂದರೆ ಆಗ ಇನ್ನೂ ನಮ್ಮ ಸರ್ಕಾರ ಬಂದಿರಲಿಲ್ಲ, ನಮ್ಮ ಅಧಿಕಾರ ದಿನಾಂಕ: 02.10.2007 ಕ್ಕೆ ಮುಗಿಯಿತು. ನಮ್ಮ ಸರ್ಕಾರ ಬರುವುದಕ್ಕೆ ಮೊದಲು ರಾಜ್ಯಪಾಲರ ಆಡಳಿತದಲ್ಲಿ ವರದಿ ಸಲ್ಲಿಸಿ ಶ್ರೀ ಕ್ಷೇತ್ರದ ಆಡಳಿತವನ್ನು ಟ್ರಸ್ಟಿಯವರಾದ ವಿ.ಡಿ. ದೀಕ್ಷಿತ್ ಇವರು ನಡೆಸಿಕೊಂಡು ಬಂದಿದ್ದು ಅವರು ಮೃತರಾದ ನಂತರ ಸರ್ಕಾರದ ಆದೇಶ ದಿ: 17.11.2006 ಅನ್ವಯ ಶ್ರೀ ಗೋಕರ್ಣ ಮಹಾಬಲೇಶ್ವರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ಸಹಾಯಕ ಆಯುಕ್ತರವರಿಗೆ ಆದೇಶಿಸಲಾಗಿದ್ದು, ಶ್ರೀ ಮಹಾಬಲೇಶ್ವರ ದೇವಾಸ್ಥಾನಕ್ಕೆ ದೇಶದ ನಾನಾ ಭಾಗಗಳಿಂದ ಭಕ್ತಾಧಿಗಳು ಬರುವುದರಿಂದ ಶ್ರೀ ಕ್ಷೇತ್ರದಲ್ಲಿ ಅಭಿವೃದ್ಧಿ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ದೇವಸ್ಥಾನವನ್ನು ಶ್ರೀ ರಾಮಚಂದ್ರಪುರ ಮಠಕ್ಕೆ ವಹಿಸಿಕೊಡುವ ಕುರಿತಂತೆ ದೇವಸ್ಥಾನದ ಆಡಳಿತ ಮೊಕ್ತೇಸರರ ನೇಮಕಾತಿ ವಿಷಯದಲ್ಲಿ ಸರ್ಕಾರವು ಸಹಾಯಕ ಕಮಿಷನರ್ ಕುಮಟಾರನ್ನು ನೇಮಕ ಮಾಡಿದ್ದರ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆಯುವುದು ಸೂಕ್ತವೆಂದು ವರದಿ ಮಾಡಿರುತ್ತಾರೆ. ಶ್ರೀ ಕ್ಷೇತ್ರ ಗೋಕರ್ಣದ ಉಪಾಧಿವಂತ ಮಂಡಲವು ಶ್ರೀ ಮಹಾಬಲೇಶ್ವರ ದೇವಸ್ಥಾನದ ಸೇವಾ ಕೈಂಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಸದರಿ ಉಪಾಧಿವಂತ ಮಂಡಲವೇ ಶ್ರೀರಾಮಚಂದ್ರಾಪುರ ಮಠಕ್ಕೆ ದೇವಸ್ಥಾನವನ್ನು ವಹಿಸಿಕೊಡುವಂತೆ ಕೋರಿರುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಸೆಕ್ಷನ್ (1) (4) ಉಪಸೆಕ್ಷನ್ (i) ರ ಪ್ರಕಾರ ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಈ ಕಾಯಿದೆ ಅನ್ವಯಿಸತಕ್ಕದ್ದಲ್ಲವೆಂದು ಇರುವುದರಿಂಧ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನವನ್ನು ಈ ಹಿಂದೆ ಶ್ರೀ ರಾಮಚಂದ್ರಪುರದ ಆಡಳಿತ ವ್ಯಾಪ್ತಿಯಲ್ಲಿ ಒಳಪಟ್ಟ ಸಂಸ್ಥೆಯೆಂಬ ಮನವಿಯ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡಬಹುದೇ ಎಂಬ ಬಗ್ಗೆ ರಾಜ್ಯದ

Advocate General ರವರ ಅಭಿಪ್ರಾಯ ಪಡೆಯಲಾಗಿ ಈ ದೇವಸ್ಥಾನವನ್ನು ಅಧಿಸೂಚಿತ ಪಟ್ಟಿಯಿಂದ ಹೊರತುಪಡಿಸಬಹುದೆಂದು ಅಭಿಪ್ರಾಯ ನೀಡಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ದಿನಾಂಕ: 12.08.2008 ರನ್ವಯ ಗೋಕರ್ಣ ಶ್ರೀ ಮಹಾಬಲ್ಲೇಶ್ವರ ದೇವಸ್ಥಾನ ಮತ್ತು ಅದರ ಪರಿವಾರ ದೇವಾಲಯಗಳನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾಗಿರುತ್ತದೆ. ಆ ಸಂದರ್ಭದಲ್ಲಿ ದಿನಾಂಕ: 14.08.2008 ಕ್ಕೆ ಅದನ್ನು ಪ್ರತ್ಯಕ್ಷವಾಗಿ 17 ಸ್ವತ್ತುಗಳು ಅಲ್ಲಿ ಏನೇನಿದೆ ಎಂದು ಹೇಳಿರುವುದನ್ನು ಕೊಡುವಾಗ ಮಹಜರು ಮಾಡಿಕೊಂಡು ಕೊಟ್ಟಿದ್ದಾರೆ. ಆಮೇಲೆ ದಿನಾಂಕ: 14.08.2008ರ ನಂತರ ದಿನಾಂಕ: 18.08.2008ರಲ್ಲಿ ಮಾನ್ಯ ರೇವಣ್ಣನವರು ಹೇಳಿದ ಹಾಗೆ ಅಲ್ಲಿನ ಹುಂಡಿ ಪೆಟ್ಟಿಗೆಯನ್ನು ಎಷ್ಟೋ ಸಮಯದ ನಂತರ ಅಲ್ಲಿನ ಸ್ಥಳೀಯ ಶಾಸಕರು ಮತ್ತು ಊರಿನ ಗಣ್ಯರ ಸಮಕ್ಷಮದಲ್ಲಿ ಒಡೆಯುವಾಗ ಸುಮಾರು 30,13,392 ರೂಪಾಯಿ ಲೆಕ್ಕ ಸಿಕ್ಕಿತು. ಆ ಹಣವನ್ನು ದೇವಸ್ಥಾನದ ಹೆಸರಿನಲ್ಲಿ ದುಡ್ಡನ್ನು ಜಮಾ ಮಾಡಿದ್ದೇವೆ. ಬೇರೆ 3,75,000 ಸಾವಿರ ರೂಪಾಯಿಯನ್ನು ಅಲ್ಲಿಯೇ ಜಮಾ ಮಾಡಿದ್ದೇವೆ. ಅದನ್ನು ದೇವಸ್ಥಾನದ ಖಾತೆಯಲ್ಲಿ ಇಡಲಾಗಿದೆ. ಮಾನ್ಯ ಸದಸ್ಯರ ಮಾಹಿತಿಗಾಗಿ ಹೇಳುವುದೇನೆಂದರೆ ಈಗಲೂ ಯಾವುದೇ ದೇವಸ್ಥಾನ ಕಾಯಿದೆಯಿಂದ ಹೊರಗಿದ್ದರೂ ಅಥವಾ ಕಾಯಿದೆ ಒಳಗಿದ್ದರೂ ಕೂಡ, ಆಯಾ ದೇವಸ್ಥಾನದ ದುಡ್ಡು, ಹುಂಡಿ ಹಣ ಇರಬಹುದು, ಸೇವೆಯಿಂದ ಬಂದಿದ್ದಿರಬಹುದು, ಖರ್ಚು ಆದದ್ದನ್ನು ಹೊರತುಪಡಸಿ ಉಳಿದಂತಹ ದುಡ್ಡು, ಆಯಾಯ ದೇವಸ್ಥಾನದ ಖಾತೆಯಲ್ಲಿಯೇ ಇರುತ್ತದೆ ವಿನಃ ಸರ್ಕಾರಕ್ಕೆ ಒಂದು ನಯಾಪೈಸೆ ಕೂಡ ಬರುವುದಿಲ್ಲ. ಹಾಗಾಗಿ ಸರ್ಕಾರಕ್ಕೆ ಸೇರಿದಂತಹ ದೇವಸ್ಥಾನವಿರಲಿ, ಖಾಸಗಿ ದೇವಸ್ಥಾನವಿರಲಿ, ಅದರ ಅಕೌಂಟ್‌ನಲ್ಲಿಯೇ ಅದರ ದುಡ್ಡು ಇರುತ್ತದೆ. ಅಲ್ಲಿಯ ಅಭಿವೃದ್ಧಿಗೆ, ಅಲ್ಲಿಯ ಭಕ್ತರ ಸೌಕರ್ಯಕ್ಕೆ ಅದು ವಿನಿಯೋಗವಾಗಬೇಕು. ಹಾಗಾಗಿ ದೇವಸ್ಥಾನದ ಖಾತೆಯಲ್ಲಿ ಅದರ ದುಡ್ಡಿದೆ. ಸರ್ಕಾರವು ಸದರಿ ದೇವಾಲಯದಲ್ಲಿ ಶ್ರೀ ರಾಮಚಂದ್ರಪುರ ಮಠಕ್ಕೆ ಹಸ್ತಾಂತರಿಸಿದ ನಂತರ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ಆರು ಜನರು ರಿಟ್ ಅರ್ಜಿಗಳನ್ನು ದಾಖಲಿಸಿರುತ್ತಾರೆ. ಅದರ ಪೈಕಿ ಒಂದು ರಿಟ್ ಅರ್ಜಿ ವಜಾಗೊಂಡಿದೆ, ನಿನ್ನೆ ಕೂಡ ಒಂದು ಅರ್ಜಿ ಧಾರವಾಡ ಬೆಂಚ್‌ನಲ್ಲಿ ವಜಾ ಆಗಿದೆ ಮತ್ತು ಈವರೆಗೆ ಆ ವಿಚಾರದಲ್ಲಿ ಸ್ಟೇಟಸ್ಕೋ ನಡೆಯಬಹುದು

ಎನ್ನುವ ಅಭಿಪ್ರಾಯ ಇದೆ. ಇನ್ನು ಒಂದು ಅರ್ಜಿ ಪೆಂಡಿಂಗ್ ಇದೆ. ಹಾಗಾಗಿ ಅದರ ಬಗ್ಗೆ ವಿಶೇಷವಾಗಿ ಮಾತನಾಡುವಂತಾದ್ದಲ್ಲ. ಅಂತಿಮವಾಗಿ ಆರ್ಡರ್ ಕೋರ್ಟ್‌ನಿಂದ ಏನು ಬರುತ್ತದೆ ಅದರ ಬಗ್ಗೆ ನೋಡಬೇಕು. ಈ ಮಧ್ಯೆ ನಾನು ಆಗಲೇ ಹೇಳಿದ ಹಾಗೆ ಸರ್ಕಾರ ಈ ಧಾಮಿಕ ದತ್ತಿ ಕಾಯಿದೆಯನ್ನು ನಮ್ಮ ರಾಜ್ಯಕ್ಕೆ ಸೂಕ್ತವಾದಂತಹ ರೀತಿಯಲ್ಲಿ, ಎಲ್ಲಾ ದೇವಸ್ಥಾನಗಳನ್ನು ಹತೋಟಿಗೆ ತಂದು ನೋಡುತ್ತೇವೆಂದು ಹೇಳುವಂತಹ ವಿಚಾರ ನಮ್ಮ ಸರ್ಕಾರಕ್ಕೆ ಇಲ್ಲ. ಈ ದೇವಸ್ಥಾನಗಳು ಒಳ್ಳೆಯ ರೀತಿಯಿಂದ ನಡೆಯಬೇಕು, ಅದು ಒಂದು ಶ್ರದ್ಧಾ ಕೇಂದ್ರವಾಗಿ ಮುಂದುವರೆಯಬೇಕು. ಭಕ್ತರಿಗೆ ಅಭಯ ಪ್ರಧಾನ ಮಾಡುವಂತಹ ಒಂದು ಕ್ಷೇತ್ರವಾಗಬೇಕು.

(2 – 00 PM)

ಮತ್ತು ಊರಿನ ಸಾಂಸ್ಕೃತಿಕ, ಧಾರ್ಮಿಕ ಕೇಂದ್ರಗಳಾಗಿ ಮುಂದೆ ಬರಬೇಕೆಂಬ ಸದಿಚ್ಛೆಯಿಂದ ಏನೇನು ಮಾಡಬೇಕು. ಆ ಎಲ್ಲಾ ಕಲಂಗಳನ್ನು ಹೊಸ Act ನಲ್ಲಿ ಮಾಡುತ್ತೇವೆ. ಇನ್ನು ಮೂರನೆಯ ವಿಷಯ ಏನೆಂದರೆ ಮಾನ್ಯ ರೇವಣ್ಣನವರು ಹಾಗೂ ಮಿತ್ರರು ಹೇಳಿದ ಪ್ರಕಾರ ಅಲ್ಲಿ ಬಹಳ ಜಾಗ ಅತಿಕ್ರಮಣವಾಗಿದೆ. ಅದನ್ನು ಹೇಳುವವರು, ಕೇಳುವವರು ಇಲ್ಲವೆಂದು ಹೇಳಿದರು. ಈಗ ನಮ್ಮ ರಾಜ್ಯದಲ್ಲಿ ರೆವಿನ್ಯೂ ಇಲಾಖೆ ಇದೆ, ಅರಣ್ಯ ಭೂಮಿಯಾದರೆ ಅದನ್ನು ನೋಡಲು ಅರಣ್ಯ ಇಲಾಖೆ ಇದೆ. ಇವತ್ತು ನೀವು refer ಮಾಡಿದ ಎರಡು ವಿಷಯಗಳ ಮಾತ್ರ ಹೇಳಬೇಕೆಂದರೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸಡಾ ಗ್ರಾಮವು ಬರುತ್ತದೆ. ಸದರಿ ಗ್ರಾಮದ ಮಾಲ್ಕಿ ಜಮೀನು ಸರ್ವೆ ನಂ. 32 ರಲ್ಲಿ 3 ಎಕರೆ 34 ಗುಂಟೆ ಜಾಗದಲ್ಲಿ ಗೋಶಾಲೆಯನ್ನು ಶ್ರೀ ರಾಮಚಂದ್ರಪುರ ಮಠದವರು ಸ್ಥಾಪಿಸಿರುತ್ತಾರೆ. ಆದರೆ, ಸದರಿ ಮಠದವರು ಯಾವುದೇ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವುದಿಲ್ಲ ಹಾಗೂ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕಿನ ಹನಿಯ ಗ್ರಾಮದಲ್ಲಿಯೂ ಸಹಾ ಯಾವುದೇ ಅರಣ್ಯ ಪ್ರದೇಶವನ್ನು ಸದರಿ ಮಠದವರು ಒತ್ತುವರಿ ಮಾಡಿರುವುದಿಲ್ಲವೆಂದು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ತಿಳಿಸಿದ್ದಾರೆ. ಮುಜರಾಯಿ ಇಲಾಖೆಯಿಂದ ಸದರಿ ಮಠಕ್ಕೆ ಯಾವುದೇ ರೀತಿಯ ಅನುದಾನವನ್ನು ಈಗ ಬಿಡುಗಡೆ ಮಾಡಿರುವುದಿಲ್ಲ. ಶ್ರೀ ರಾಮಚಂದ್ರಪುರ ಮಠದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಹನಿಯ ಗ್ರಾಮದಲ್ಲಿ ಯಾವುದೇ ಸರ್ಕಾರಿ ಜಮೀನು ಒತ್ತುವರಿಯಾಗಿರುವುದಿಲ್ಲ. ಆದರೆ ಒಂದು

O.14 F – 17

ವಿಷಯ ವಿಶ್ವ ಗೋ ಸಮ್ಮೇಳನ ನಡೆದ ಸಂದರ್ಭದಲ್ಲಿ ರಾಮಚಂದ್ರಪುರ ಗ್ರಾಮದ 25.34 ಎಕರೆ ಸರ್ಕಾರಿ ಜಮೀನಿನಲ್ಲಿ ಮತ್ತು ಕೆ.ಪಿ.ಸಿ.ಎಲ್.ಗೆ ಸೇರಿದ 13 ಎಕರೆ 11 ಸೆಂಟ್ಸ್ ಪ್ರದೇಶದಲ್ಲಿ ಅಂದರೆ ಒಟ್ಟು 39 ಎಕರೆ 5 ಸೆಂಟ್ಸ್ ಜಾಗದಲ್ಲಿ ಅದನ್ನು ಸಮತಟ್ಟುಗೊಳಿಸಿ ಸಮ್ಮೇಳನ ನಡೆಸಿ ಮುಗಿಸಿದ್ದು, ಈ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ವಸ್ತು ಸ್ಥಿತಿಯೆಂದರೆ ನಾವು ಕೊಟ್ಟಿದ್ದೇವೆಂದು ಅವರು ಬರೆದಿದ್ದಾರೆ, ನಮ್ಮ ಸರ್ವೆಯವರು ಕೆ.ಪಿ.ಸಿ.ಎಲ್ ಜಾಗ ಯಾವುದು, ನಮ್ಮ ಜಾಗ ಯಾವುದೆಂದು ಗುರುತು ಮಾಡಿಲ್ಲ, ಸರ್ಕಾರದ ವಶದಲ್ಲೇ ಇದೆ. ಹಾಗಾಗಿ ಶ್ರೀ ರಾಮಚಂದ್ರ ಪುರ ಮಠದ ಸಂಸ್ಥೆಯ ವತಿಯಿಂದ ರಾಮಚಂದ್ರಪುರ ಗ್ರಾಮದ ಸರ್ವೆ ನಂಬರ್ 7 ರಲ್ಲಿನ 25 ಎಕರೆ ಜಮೀನನ್ನು ಮಂಜೂರಾತಿಗಾಗಿ ಕೋರಿದ್ದು, ಸದರಿ ಜಮೀನು ಗೋಮಾಳ ಜಮೀನಾಗಿರುವುದರಿಂದ ಮಂಜೂರಾತಿಗೆ ಅವಕಾಶವಿಲ್ಲವೆಂದು ಬೆಂಗಳೂರು ಪ್ರಾದೇಶಿಕ ಆಯುಕ್ತರು ತಮ್ಮ ಪತ್ರ ದಿನಾಂಕ: 24.09.2009 ರಲ್ಲಿ ಆ ಕೋರಿಕೆಯನ್ನು ತಿರಸ್ಕರಿಸಿರುತ್ತಾರೆ. ಹಾಗಾಗಿ 3 issues, Bombay Public Trust Act ನಲ್ಲಿ ಕರ್ನಾಟಕದ್ದು ಏನೇನು ಎಂಬುದನ್ನು ತಿಳಿಸಿದ್ದೇನೆ. ಈಗ ವಿಷಯ ಕೋರ್ಟ್‌ನಲ್ಲಿ ಅಂತಿಮ ನಿರ್ಣಯಕ್ಕೆ ಇದೆ. ಇದು ಕೋರ್ಟ್‌ನಲ್ಲಿ pending ಇದೆ. ಹಾಗಾಗಿ ಇವತ್ತು ಯಾರೋ ಒಬ್ಬ ಖಾಸಗಿ ವ್ಯಕ್ತಿ ನಮ್ಮ ಹತ್ತಿರ ನೇರವಾಗಿ ಹೇಳುತ್ತಿದ್ದಾರೆ. ಖಾಸಗಿ ವ್ಯಕ್ತಿ ಅವರಿಗೆ ಮನಸ್ಸಿಗೆ ಬಂದಹಾಗೆ ನಡೆಸಿಕೊಂಡಿದ್ದಂಥ ಒಂದು ಸಂಸ್ಥೆ. ಅವರು ತೀರಿಕೊಳ್ಳುವವರೆಗೂ ಹಾಗೆ ಇತ್ತು. ಈಗ ಅವರು ತೀರಿಕೊಂಡ ನಂತರ ಏನೂ ಮುಂದೆ ನಡೆಯಲಿಲ್ಲ. ಖಾಸಗಿ ವ್ಯಕ್ತಿಯ ಅಡಿಯಲ್ಲಿ ಇಂಥ ಒಂದು ದೊಡ್ಡ ಕ್ಷೇತ್ರ, ಬಹಳ ಕಾಲದಿಂದಲೂ Gokarna was a place of learning also. ಅದಕ್ಕಿಂತ ಒಂದು ಮಠ ಸಂಸ್ಥಾನ, ಸಾರ್ವಜನಿಕ ಸಂಸ್ಥೆ, ಶಿಷ್ಯರು ಇದ್ದಾರೆ, ನಾವೆಲ್ಲಾ ಇದ್ದೇವೆ. ನೀವು ನಾವು ಎಲ್ಲರೂ ಗೋ ಯಾತ್ರೆ, ಇನ್ನೊಂದು, ಮತ್ತೊಂದು ಒಳ್ಳೆಯ ಕೆಲಸಗಳಲ್ಲಿ ನಾವೆಲ್ಲರೂ ಅವರೊಟ್ಟಿಗೆ ಇದ್ದೇವೆ. ಅಂಥದ್ದರಲ್ಲಿ ಒಬ್ಬ ವ್ಯಕ್ತಿಗಿಂತ, ಒಂದು ಮಠದೊಟ್ಟಿಗೆ ಇದ್ದರೆ ಇಳ್ಳೆಯದೆಂದು ಈ ಕಾಯಿದೆಯ ವ್ಯಾಪ್ತಿಯಲ್ಲಿ ಒಂದು ಮಠಕ್ಕೆ ಸೇರಿದ ದೇವಸ್ಥಾನವನ್ನು ಏಕೆ ಮಠಕ್ಕೆ ಬಿಟ್ಟುಕೊಡುತ್ತೀರೆಂದು ಕೇಳಿದರೆ, ಇದೇ ಅಭಿಪ್ರಾಯ. ಯಾರೇ individuals ನೋಡುವುದಕ್ಕಿಂತ ಒಂದು ಮಠವಿದ್ದರೆ ಒಳ್ಳೆಯದು. ಅದಕ್ಕೆ ಹೇಳುವವರು, ಕೇಳುವವರು

ಇದ್ದಾರೆನ್ನುವ ದೃಷ್ಟಿ ಇದೆ. ಈ ಎಲ್ಲಾ ಸದಿಚ್ಛೆಯಿಂದ ಈ ತೀರ್ಮಾನವನ್ನು ಮಾಡಿದ್ದೇವೆ. ಈಗ ಪ್ರಶ್ನೆ ಕೋರ್ಟ್‌ನಲ್ಲಿದೆ. ಮೂರನೆಯ ವಿಷಯ ಏನೆಂದರೆ ಯಾವುದೇ ಭೂಮಿಯು ಅವರಿಂದ ಅತಿಕ್ರಮಣವಾಗಿಲ್ಲವೆನ್ನುವಂಥದ್ದು, ನಾವು ಕೊಟ್ಟಿಲ್ಲವೆನ್ನುವಂಥದನ್ನು ಈ ಮೂಲಕ ನಾನು ಸ್ಪಷ್ಟಪಡಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇಷ್ಟು ವಿಷಯಗಳನ್ನು ಬಿಟ್ಟರೆ ಇನ್ನು ಯಾವುದು ಮುಚ್ಚಿಡುವಂಥ ವಿಷಯಗಳಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು. ..

ಅಧ್ಯಕ್ಷರು : ತಾವು ಈ ವಿಷಯಕ್ಕೆ ಸಹಿ ಮಾಡಿಲ್ಲ. ಮಾನ್ಯ ರೇವಣ್ಣನವರು ಪ್ರಶ್ನೆ ಕೇಳುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ : ಇರಲಿ, Rule 69 ನಲ್ಲಿ ತಮ್ಮ ಒಪ್ಪಿಗೆಯನ್ನು ಕೊಟ್ಟು...

ಅಧ್ಯಕ್ಷರು : ಮಾನ್ಯ ಸಚಿವರು, ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತೇನೆ. ಒಂದು ಹೊಸ ವಿಚಾರ ಏನು ಸದನದ ಮುಖೇನಾ ಅವರ ಹೇಳಿಕೆಯಿಂದ ಬರುತ್ತಿದೆಯೆಂದರೆ, most non-controversial Minister is Mr.Acharya. ಅವರು ಒಂದು ವಿಚಾರವನ್ನು ಹೇಳಿದರು. ನೀವೇ ಜಂಟಿ ಸದನ ಸಮಿತಿಯ ಸದಸ್ಯರಾಗಿ, ಒಂದೂವರೆ ವರ್ಷಗಳ ಕಾಲ ನೀವೆಲ್ಲಾ ವ್ಯಾಸಂಗ ಮಾಡಿ, ನೀವೇ ಸಮಗ್ರವಾದಂಥ ಧರ್ಮದತ್ತಿ ಕಾಯಿದೆಯನ್ನು ತಂದಿದ್ದೀರಿ. ಈಗ ನೀವು ಏನು ಹೇಳುತ್ತಿದ್ದೀರಿ. ನಾವು ಸುಪ್ರೀಂ ಕೋರ್ಟ್ ಮುಂದೆ ಅರ್ಜಿಯನ್ನು ಹಾಕಿದ್ದೇವೆ. ಅದಕ್ಕೆ ಹೊಸ ಸ್ವರೂಪವನ್ನು ಕೊಡುತಕ್ಕಂಥ ರೀತಿಯಲ್ಲಿ ಹೊಸ ಕಾಯಿದೆಯನ್ನು ತರುತ್ತೇವೆಂಬ ಮಾತನ್ನು ಹೇಳುತ್ತಿದ್ದೀರಿ. ನಾನು ಈ ವಿಷಯವನ್ನು ಕೇಳಿ ಗಾಬರಿಯಾಗುತ್ತಿದೆ. ನೀವು ಇನ್ನು ಏನೇನು ಮಾಡುತ್ತಿರೋ, ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನನಗೆ ಏನು ಅನಿಸುತ್ತಿದೆಯೆಂದರೆ ರಾಮಚಂದ್ರಪುರ ಮಠಕ್ಕೆ ದೇವಸ್ಥಾನವನ್ನು ಹಸ್ತಾಂತರ ಮಾಡುತ್ತಿರುವ ಆಧಾರದ ಮೇಲೆ, ನೀವು Act ಅನ್ನೆ ನೀವು repeal ಮಾಡುತ್ತಿರೋ, ಏನು ಮಾಡುತ್ತಿರೋ, ತಾವು ಈಗಾಗಲೇ ಹೇಳಿದ್ದೀರಿ. ನೀವು ಸುಪ್ರೀಂ ಕೋರ್ಟ್ ಮುಂದೆ ಅರ್ಜಿಯನ್ನು ಹಾಕಿದ್ದೇವೆ. ಹೊಸ ಒಂದು ಸಮಗ್ರವಾದಂಥ ಕಾಯಿದೆಯೆಂದರೆ, ಎಲ್ಲಾ ಮಠಗಳಿಗೆ

handover ಮಾಡುವ ರೀತಿಯಲ್ಲಿ ಎಲ್ಲೋ ಒಂದು, ಅದಕ್ಕೆ ನಾನು hidden agenda ಹೇಳಿದೆ.

ಡಾ: ವಿ.ಎಸ್.ಆಚಾರ್ಯ : ನಾನು ಮಾತನಾಡಬೇಕಾದರೆ ಇದು statement. ತಾವು ಒಂದು ವಿಷಯವನ್ನು ಗಮನಿಸಲಿಲ್ಲ. ಕೆಳದಿ ಗುಂಡಾಜೋಯಿಸ್ ರವರ ಸಂಪಾದಕತ್ವದಲ್ಲಿ ಅಂದರೆ, it is an authority on these Temple and Mathas. ಅದರಲ್ಲಿ 143 ವರ್ಷಗಳ ಹಿಂದೆ 1867 ರಿಂದ face ಮಾಡಿದ್ದಾರೆ. ಆ ದೇವಸ್ಥಾನ ಆ ಮಠಕ್ಕೆ ಹೊಂದಿಕೊಂಡಿದ್ದು ಎಂದು.

ಶ್ರೀ ಟಿ.ಬಿ.ಜಯಚಂದ್ರ : ನಾನು ಇನ್ನು ಆ ವಿಷಯಕ್ಕೆ ಬಂದೇ ಇಲ್ಲ. ನಾನು ಹೇಳುತ್ತಿರುವಂಥದ್ದು, ನಿಮ್ಮ ಸರ್ಕಾರದ ಉದ್ದೇಶ ಏನು ಇದೆಯೆಂದು ಕೇಳುತ್ತಿದ್ದೇನೆ. ನೀವು ಸುಪ್ರೀಂಕೋರ್ಟ್ ಮುಂದೆ ಅರ್ಜಿಯನ್ನು ಹಾಕಿದ್ದೇವೆಂದು, ನಾವು ಅದನ್ನು ಪರಿಶೀಲನೆ ಮಾಡುತ್ತೇವೆ, ಬದಲಾವಣೆ ಮಾಡುತ್ತೇವೆಂಬ ಅರ್ಥದಲ್ಲಿ ಹೇಳಿದ್ದಿರಲ್ಲಾ. ಅದಕ್ಕೋಸ್ಕರ ನಾನು ಆತಂಕವನ್ನು ವ್ಯಕ್ತಪಡಿಸುತ್ತಿದ್ದೇನೆ. ದಯಮಾಡಿ ಅಂಥ ವಿಚಾರಗಳು ಏನಾದರೂ ಇದ್ದರೆ, ಸದನದ ಗಮನಕ್ಕೆ ತರದಿದ್ದರೆ ದೊಡ್ಡ ಪ್ರಮಾದವಾಗುತ್ತದೆಂದು ಹೇಳುತ್ತೇನೆ. ಇನ್ನೊಂದು ವಿಚಾರವೆನೆಂದರೆ, ಬಹಳ ಮುಖ್ಯವಾಗಿ ನಿಮ್ಮ ಉದ್ದೇಶ.. ..

ಅಧ್ಯಕ್ಷರು : ಇದು ನಿಯಮ 69ರಲ್ಲಿದ್ದು, ಇದು clarification ಆಗುವುದಿಲ್ಲ. ನೀವು ಹೊಸ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ಅವಕಾಶವಿಲ್ಲ. you are raising a new issue. You cannot raise a new issue.

SRI T.B. JAYACHANDRA : No, I am asking clarification. 1ನೇ ಫೆಬ್ರವರಿಯಂದು ಮನವಿ ಕೊಡುತ್ತಾರೆ. ಅದಕ್ಕೆ ಇನ್ನೊಂದು ಮನವಿಯನ್ನು 12ನೇ ಆಗಸ್ಟ್‌ನಲ್ಲಿ ಕೊಡುತ್ತಾರೆ. ಈ ಎಂಟು ತಿಂಗಳೊಳಗಾಗಿ ಇಷ್ಟೊಂದು ದೊಡ್ಡ property ಯನ್ನು hand over ಮಾಡುತ್ತೀರಿ.

ಡಾ: ವಿ.ಎಸ್. ಆಚಾರ್ಯ : ಕಾನೂನು ಪ್ರಕಾರವೇ ... ..

ಶ್ರೀ ಟಿ.ಬಿ.ಜಯಚಂದ್ರ : ಕಾನೂನು ಪ್ರಕಾರವೇ .. ..

Dr. V.S. ACHARYA : Endowment Act, Section (1), ಉಪ ಸೆಕ್ಷನ್ 1 ಮತ್ತು 2ರ ಪ್ರಕಾರ ಇರುವಂಥ ವಿನಾಯಿತಿಯ ಪ್ರಕಾರ ಅರ್ಜಿ ಬಂದಾಗ ಪರಿಗಣಿಸಬೇಕೋ, ಬೇಡವೋ?

ಅಧ್ಯಕ್ಷರು : ಹೊಸ ಹೊಸ ವಿಚಾರಗಳನ್ನು Clarification ನಲ್ಲಿ ಪ್ರಸ್ತಾಪ ಮಾಡಬೇಡಿ.

ಡಾ: ವಿ.ಎಸ್.ಆಚಾರ್ಯ : ಕಾನೂನು Provision ನಲ್ಲಿ ಇದೆಯೆಂಬುದನ್ನು ಅದು ಯಾವ 3 exemption ಇದೆಯೆಂಬುದನ್ನು ವಿವರಿಸಿ ಹೇಳಿದ್ದೇನೆ. ಅದರ ಪ್ರಕಾರ ಪ್ರದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಎಲ್ಲಾ ಸದುದ್ದೇಶದಿಂದ ಇದನ್ನು ಮಾಡಿದ್ದೇವೆ. ಇದು ಕೋರ್ಟ್ ಮುಂದೆ ಇದೆ. ಅಲ್ಲಿ ಏನು ಆಗುತ್ತದೆಂಬುದನ್ನು ನೋಡೋಣ. ಅಷ್ಟು ಆತುರ ಏಕೆ ಮಾಡುತ್ತೀರಾ? ಇವತ್ತು ಹಳೆ ಕಾನೂನಿನಲ್ಲಿ ಬಾಕಿ ಇರುವಂಥದ್ದು, ಸುಪ್ರೀಂಕೋರ್ಟ್ ತಡೆ ಹಿಡಿಯುವಂಥದ್ದು ಒಂದೇ ವಿಷಯ ಏನೆಂದರೆ ಇದರ ದೇವಸ್ಥಾನಗಳ management ಗೆ, ಈ ದೇವಸ್ಥಾನದ್ದು ಅಲ್ಲ. ನಮ್ಮ ರಾಜ್ಯದ ಸಾರ್ವಜನಿಕ ದೇವಸ್ಥಾನಗಳ management ಗೆ ನೇಮಕ ಮಾಡುವಂಥ ಸೆಕ್ಷನ್ (25)ಕ್ಕೆ ತಾತ್ಕಾಲಿಕ ತಡೆ ಇದೆ. ಆ ತಡೆಯಿಂದಾಗಿ management ನಲ್ಲಿ ಎಲ್ಲಾ ಕಡೆಗಳಲ್ಲಿ ಆಡಳಿತಗಾರರನ್ನು ಮಾಡುವುದಕ್ಕೆ ಸ್ವಲ್ಪ ತೊಂದರೆ ಇದೆ. ಅದಕ್ಕೋಸ್ಕರ ಹೊಸ ಕಾಯಿದೆಯನ್ನು ಮಾಡುವಾಗ, ನಾವು ಇದರಲ್ಲಿ ಕೆಲವು observations ಬಂದದ್ದನ್ನು ಪರಿಗಣಿಸಿ ಮಾಡುತ್ತಿದ್ದೇವೆ. ಅದು ಸದನದ ಮುಂದೆ ಬರಬೇಕು, ನಾವು ಮಾಡಿದ್ದನ್ನು ನಮ್ಮಷ್ಟಕ್ಕೆ ನಾವೇ ಮಾಡುವುದಕ್ಕೆ ಬರುವುದಿಲ್ಲ. ಆ ವಿಚಾರ ತಮಗೂ ಗೊತ್ತಿದೆ. ಅದು ಎರಡೂ ಸದನದ ಮುಂದೆ ಬಂದು, ನಿಮ್ಮೆಲ್ಲರ ಗಮನಕ್ಕೆ ಬಂದು, ಚರ್ಚೆಯಾಗಿ ಪಾಸ್ ಆಗುತ್ತದೆ. ಹಾಗಾಗಿ ಇದರ ಬಗ್ಗೆ ಗಂಭೀರವಾದ ಹೆದರಿಕೆ ಈಗಲೇ ಬರುವಂಥ ಅಗತ್ಯವಿಲ್ಲ. ನಾವು ನೀವು ಕೂಡಿ ಅದನ್ನು ಸರಿಪಡಿಸಿಕೊಂಡು ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ : ನಾನು ಹೇಳುವಂಥದ್ದು, ಕಾನೂನಿನ ಪ್ರಕಾರ ಮಾಡಿ, ಇಲ್ಲವೆಂದು ಅಲ್ಲ. ಇಲ್ಲಿ ನಾನು ಹೇಳುವಂಥದ್ದು ಕಾನೂನನ್ನು ಬದಲು ಮಾಡುವ ಅಧಿಕಾರ ನಿಮಗೆ ಇದೆಯಲ್ಲಾ, ಅದನ್ನು ದುರಪಯೋಗ ಮಾಡಿಕೊಳ್ಳುತ್ತಿದ್ದೀರೆನ್ನುವಂಥ ಮಾತನ್ನು ಹೇಳುತ್ತಿದ್ದೇನೆ.

Mr. SPEAKER : You are raising a new issue.

ಶ್ರೀ ಟಿ.ಬಿ.ಜಯಚಂದ್ರ : ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆಂಬ ಮಾತನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸಚಿವರು ಯಾವ ರೀತಿ transfer ಆಗಿದೆಯೆಂಬುದನ್ನು ಹೇಳಿದ್ದಾರೆ. How can you raise a new issue?

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, within two minutes I am going to complete it.

Mr. SPEAKER : No, you cannot raise a new issue.

ಶ್ರೀ ಟಿ.ಬಿ.ಜಯಚಂದ್ರ : ನೀವು Deputy Commissioner ರವರ ವರದಿಯನ್ನು ತರಿಸಿಕೊಂಡಿದ್ದೀರೆಂದು ಆದೇಶದಲ್ಲಿ ಹೇಳುತ್ತೀರಿ.

Deputy Commissioner ರವರು ಹೇಳುತ್ತಾರೆ, "ದೇವಸ್ಥಾನವು ಸಾರ್ವಜನಿಕ ದೇವಸ್ಥಾನವಾಗಿರುವುದರಿಂದ ಸದರಿ ದೇವಸ್ಥಾನದ ಆಡಳಿತ ವನ್ನು ಶ್ರೀ ರಾಮಚಂದ್ರಾಪುರದ ಮಠ, ಶಿವಮೊಗ್ಗ ತಾಲ್ಲೂಕು ಇಲ್ಲಿಗೆ ವಹಿಸಿಕೊಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಡುತ್ತದೆ" ಎಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಅಲ್ಲಿನ ತಹಶೀಲ್ದಾರ್‌ರವರು ಒತ್ತುವರಿ ಯಾಗಿದೆ ಎನ್ನುವ ಬಗ್ಗೆ ಹೀಗೆ ಹೇಳುತ್ತಾರೆ, "ಮೇಲ್ಕಂಡ ವಿಚಾರದಲ್ಲಿ ನಕ್ಷೆ ತಯಾರಿಸಿದ್ದು, ಅದರ ಪ್ರತಿಯನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ. ಅದರಲ್ಲಿ ಕಂದಾಯ ಇಲಾಖೆಗೆ ಸೇರಿದ ಸರ್ಕಾರಿ ಸರ್ವೆ ನಂಬರ್‌ಗಳನ್ನು ಇವತ್ತು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿದ್ದು ಅದರ ಮೂಲ ಸ್ವರೂಪವನ್ನು ಬದಲಾಯಿಸುವ ವಿಚಾರದಲ್ಲಿ, ಕರ್ನಾಟಕ ಗೋ ಕಂದಾಯ ಕಾಯಿದೆ, 1964 ರ ಕಲಂ 39ರ ಅಡಿ ಪರಿಶೀಲಿಸಿ, ನಿಯಮಾನುಸಾರ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾ ಗುವುದು. ಹಾಗು, ಗಿಡಮರಗಳು ನಾಶವಾಗಿರುವುದರಿಂದ ಸಂಬಂಧಪಟ್ಟ ಇಲಾಖೆಯವರೊಂದಿಗೆ ಪತ್ರ ವ್ಯವಹಾರ ನಡೆಸಿ ವರದಿ ಸಲ್ಲಿಸಲಾಗುವುದು" ಎಂದು ಹೇಳಿದ್ದಾರೆ. Thia is signed by the Tahsildar. ಬೇಕಾದರೆ ನಿಮಗೆ ಕಾಗದ ಕಳುಹಿಸಿಕೊಡೋಣ. ದಯಮಾಡಿ ನೋಡಿ. ಒತ್ತುವರಿ ಯಾಗಿಲ್ಲ, ಏನೂ ಆಗಿಲ್ಲ ಎನ್ನುವ ಮಾತು ಬೇಡ. I am putting the facts before you. The matter is still pending before the court. Please, think over.

Dr. V.S. ACHARYA : Regarding the last subject which you have raised, ನಾನು ಈ ಸದನದ ಮುದೆ ಹೇಳುತ್ತೇನೆ, ಈ ಕ್ಷಣದಲ್ಲಿ ಅಲ್ಲಿ ಯಾವುದೇ ರೆವಿನ್ಯೂ ಅಥವಾ ಫಾರೆಸ್ಟ್‌ನ ಅತಿಕ್ರಮಣ ಇಲ್ಲ. ಗೋಜಾತ್ರೆ ಮಾಡುವಂಥ ಸಂದರ್ಭದಲ್ಲಿ ಅಲ್ಲಿ ಒಂದಷ್ಟು ಸಮತಟ್ಟು ಮಾಡಿ, ಕೆಲವು ರಚನೆಗಳನ್ನು ಮಾಡಿದ್ದುದು ನಿಜ. ಈಗ ಅವರು ಅದೆಲ್ಲವನ್ನೂ ತೆಗೆದಿದ್ದಾರೆ. ಆ ಜಾತ್ರೆಗೆ ನೀವೂ ಹೋಗಿರಬಹುದು. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಅವರೂ ಅಲ್ಲಿಗೆ ಹೋಗಿದ್ದರು. ನಾವೆಲ್ಲ ಅಲ್ಲಿಗೆ ಹೋಗಿದ್ದು ಉಂಟು. ಈಗ ಅಲ್ಲಿ ಅದ್ಯಾವುದೂ ಇಲ್ಲ, ಅವರು ಬಿಟ್ಟು ಕೊಟ್ಟಿದ್ದಾರೆ. ಪತ್ರ ಬರೆದು ತಿಳಿಸಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ನಾನು ಈ ಕಾಗದವನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದಯಮಾಡಿ ನೋಡಿ. It is not a forged one.

SRI. S. SURESH KUMAR : You please see the date.

ಶ್ರೀ ಟಿ.ಬಿ.ಜಯಚಂದ್ರ : 6–7–2007.

Mr. SPEAKER : on this day, there is no encroachment ಎಂದು specific ಆಗಿ ಹೇಳುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಒತ್ತುವರಿ ಇಲ್ಲ ಎಂದು ಹೇಳಿದಿರಲ್ಲ. ಒತ್ತುವರಿ ಇದೆ.

(ಗೊಂದಲ)

Mr. SPEAKER : ಕುಳಿತುಕೊಳ್ಳಿ, on this day, there is no encroachment ಎಂದು ಹೇಳುತ್ತಿದ್ದಾರೆ.

ಡಾ: ವಿ.ಎಸ್.ಆಚಾರ್ಯ : Temporary ಯಾಗಿ ಉಪಯೋಗ ಮಾಡಿಕೊಂಡಿದ್ದರು ಅಷ್ಟೇ.

ಶ್ರೀ ಎಸ್.ಸುರೇಶ್‌ಕುಮಾರ್ : ಒಂದು ನಿಮಿಷ ಜಯಚಂದ್ರರವರೇ, ನಾನೂ ಕೂಡ ಕೇಳಿಸಿಕೊಂಡಿದ್ದೇನೆ. ಗೋಜಾತ್ರೆಗೋಸ್ಕರ ಉಪಯೋಗ ಮಾಡಿಕೊಂಡಿರುವುದನ್ನು ಅತಿಕ್ರಮಣ ಎಂದು ಕರೆಯಬಾರದು. ಅವರು ಅದನ್ನು ಆ ಜಾತ್ರೆಗೋಸ್ಕರ ತಾತ್ಕಾಲಿಕವಾಗಿ ಉಪಯೋಗಿಸಿ ಕೊಂಡಿದ್ದರು.

ಡಾ: ವಿ.ಎಸ್.ಆಚಾರ್ಯ : ಹುಬ್ಬಳ್ಳಿ ಧಾರವಾಡ ಕಡೆಗಳಲ್ಲಿ ಮನೆ ಮದುವೆಗೇ ರಸ್ತೆಯನ್ನು ನಾಲ್ಕು ನಾಲ್ಕು ದಿವಸ ಶಾಮಿಯಾನ ಹಾಕಿ

ಉಪಯೋಗ ಮಾಡುತ್ತಾರೆ. ಅಂಥಾದ್ದರಲ್ಲಿ ಇಲ್ಲಿ ಒಂದು ಕಾರ್ಯಕ್ರಮಕ್ಕೆ ಉಪಯೋಗಿಸಿಕೊಂಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಈಗ ನೀವು ಇನ್ನೊಂದು ಸಾರಿ ಪುನರ್ ವಿಮರ್ಶೆ ಮಾಡುವುದು ಬಹಳ ಸೂಕ್ತ ಎನ್ನುವುದು ನನ್ನ ಒಂದು ಸಲಹೆ.

ಶ್ರೀ ಸಿದ್ದು ಸವದಿ : ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ, ಅವರೇ ಬೇಕಾದಷ್ಟು ಮಾತನಾಡುತ್ತಾರೆ.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ : ನಮಗೆ ಅವಕಾಶ ಕೊಡದಿದ್ದರೆ ನಾವು ನಮ್ಮ ಸಮಸ್ಯೆಯನ್ನು ಯಾವಾಗ ಹೇಳಿಕೊಳ್ಳುವುದು?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಜರಾಯಿ ಸಚಿವರು. . . . .

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮಿಂದ ನಾವೇನು ಕಲಿಯಬೇಕಾಗಿಲ್ಲ, ಕುಳಿತುಕೊಳ್ಳಿ, ಎಲ್ಲವನ್ನೂ ಮಠಗಳಿಗೆ ಮಾರಿಕೊಂಡಿದ್ದೀರಿ.

ಶ್ರೀ ಸಿದ್ದು ಸವದಿ : ಇವರಿಗೆ ಮಠ ಮಂದಿರಗಳು ಬೆಳೆಯಬಾರದು. ಬೇರೆ ಬೇರೆಯವುಗಳು ಬೆಳೆಯಲು ಸಾಕಷ್ಟು ಅವಕಾಶ ಕೊಡುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಅವರನ್ನು ಸ್ವಲ್ಪ ಹೊತ್ತು ಸರಿಯಾಗಿ ಕುಳಿತುಕೊಳ್ಳಲು ಹೇಳಿ.

ಶ್ರೀ ಸಿದ್ದು ಸವದಿ : ನೂರಾರು ಎಕರೆಯನ್ನು ಲೂಟಿ ಹೊಡೆದಂಥ ಸಂಸ್ಥೆಗಳಿವೆ. ಅವುಗಳ ಬಗ್ಗೆ ಮಾತನಾಡಲು ಹೇಳಿ. ಮಠ ಮಂದಿರಗಳು ಬೆಳೆದರೆ ಅವರಿಗೆ ಅಲರ್ಜಿ. ಕಾಂಗ್ರೆಸ್ಸಿನವರಿಗೆ ಮಠಗಳು ಬೆಳೆಯಬಾರದು, ಹಿಂದೂ ದೇವಸ್ಥಾನಗಳು ಬೆಳೆಯಬಾರದು. ಬೇರೆ ಬೇರೆ ಜನಗಳ ಸಂಸ್ಥೆಗಳು ಬೆಳೆದರೆ ಅವರಿಗೆ ಏನೂ ಅಡ್ಡಿಬರುವುದಿಲ್ಲ. ನೂರಾರು ಎಕರೆ ಲೂಟಿ ಹೊಡೆದಿರುವಂಥ ಸಂಸ್ಥೆಗಳು ಈ ರಾಜ್ಯದಲ್ಲಿವೆ. ಈಗಲೂ ರಾಜಾರೋಷವಾಗಿ ಬೆಳೆಯುತ್ತಿವೆ. ಅವುಗಳ ಬಗ್ಗೆ ಮಾತನಾಡಿ. ಮಠ ಮಂದಿರಗಳ ಬಗ್ಗೆ ಮಾತನಾಡುತ್ತೀರಿ, ನಿಮಗೆ ಧೈರ್ಯ ಇದ್ದರೆ ಅವುಗಳ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮೊದಲನೆಯದಾಗಿ ಮಾನ್ಯ ಮುಜರಾಯಿ ಸಚಿವರು ಸದನಕ್ಕೆ ತಪ್ಪು ಹೇಳಿಕೆ ಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ. ದಾಖಲೆ ಸಮೇತ ನಾನು ನಿಮಗೆ ಕೊಡುತ್ತೇನೆ. ಇದು ನಾನು ಕೊಡುತ್ತಿರುವ ವರದಿಯಲ್ಲ, ಅಲ್ಲಿನ ತಹಶೀಲ್ದಾರರು ದಿನಾಂಕ: 4-7-2007 ರಲ್ಲಿ clear cut ಆಗಿ ಇಂಥಿಂಥ land ಒತ್ತುವರಿಯಾಗಿದೆ

ಎಂದು ಹೇಳಿರುವ ಮೊದಲನೇ ದಾಖಲಾತಿಯನ್ನು ಕೊಡುತ್ತೇನೆ. ಎರಡನೆಯದಾಗಿ, ಜಿಲ್ಲಾಧಿಕಾರಿಗಳು ದಿನಾಂಕ: 1–4–2008ರಲ್ಲಿ, ಈ ದೇವಸ್ಥಾನ ಸರ್ಕಾರಕ್ಕೆ ಸೇರಿದ್ದು, ಇದು ಸಾರ್ವಜನಿಕವಾದ ದೇವಸ್ಥಾನ, ಕಾನೂನುಬಾಹಿರವಾಗಿ ಇದನ್ನು ಯಾವುದೇ ರೀತಿ ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆದಿದ್ದಾರೆ. ಇವರು ಸದನದವನ್ನು ತಪ್ಪುದಾರಿಗೆ ತರುತ್ತಿದ್ದಾರೆ. ತಹಶೀಲ್ದಾರ್‌ರವರು ಹೇಳಿರುವ ಆದೇಶದ ಕಾಪಿಯನ್ನು ನಿಮಗೆ ಕೊಡುತ್ತಿದ್ದೇನೆ. ಅದಾದ ಮೇಲೆ ಸರ್ಕಾರದ ಕಾರ್ಯದರ್ಶಿಗಳು ಆಯುಕ್ತರಿಗೆ ಬರೆಯುತ್ತಾರೆ, ಆಯುಕ್ತರು ಬರೆದಂಥ ಕಾಗದಕ್ಕೆ ಸರ್ಕಾರದ ಕಾರ್ಯದರ್ಶಿಗಳು, ಈ ದೇವಸ್ಥಾನವನ್ನು ಕೊಡುವುದಕ್ಕೆ ಬರುವುದಿಲ್ಲ, 2003 ರ ಮುಜರಾಯಿ ಕಾಯಿದೆ ಪ್ರಕಾರ ಈ ದೇವಸ್ಥಾನ ಸರ್ಕಾರಕ್ಕೆ ಸೇರಿದ್ದು ಎಂದು ಬರೆಯುತ್ತಾರೆ. ಅಲ್ಲಿ land ಒತ್ತುವರಿಯಾಗಿರುವುದಕ್ಕೆ ಸರ್ವೇಯರ್‌ರವರ ಮಹಜರು, ತಹಶೀಲ್ದಾರ್‌ರವರ ಮಹಜರು ಎಲ್ಲವೂ ಇದೆ. ಬೇಕಾದರೆ ಆ ದಾಖಲಾತಿಗಳನ್ನು ಕೊಡುತ್ತೇನೆ, ತೆಗೆದುಕೊಳ್ಳಿ. 14–08–2007 ರಲ್ಲಿ ನೀವು ಮಾಡಿದಿರಲ್ಲ, ಸರ್ಕಾರ ಬಂದ ನಾಲ್ಕೇ ದಿನಕ್ಕೆ ನೀವು ಇದನ್ನು ಮಾಡಿದ್ದೀರಿ.

ಡಾ: ವಿ.ಎಸ್.ಆಚಾರ್ಯ : 14–8–2007 ಎಂದರೆ 14ನೇ ಆಗಸ್ಟ್, ನಾವು ಅಧಿಕಾರಕ್ಕೆ ಬಂದಿರುವುದು ಮೇ 30 ರಂದು. ಅಲ್ಲಿಗೆ 4 ದಿವಸಗಳೇ ಆಗಿರುವುದು?

ಶ್ರೀ ಹೆಚ್.ಡಿ.ರೇವಣ್ಣ : 3–4 ತಿಂಗಳೇ ಆಯಿತು. ಆವತ್ತಿನಿಂದ ಪ್ರಾರಂಭವಾಗಿದೆ.

ಡಾ: ವಿ.ಎಸ್.ಆಚಾರ್ಯ : ಫೆಬ್ರವರಿಯಲ್ಲಿ ಬಂದ ಕಾಗದವದು. ಫೆಬ್ರವರಿಯಲ್ಲಿ ಬಂದ ಕಾಗದವನ್ನು ನಮ್ಮ ಸರ್ಕಾರದವರು, ಸರ್ಕಾರ ಬಂದ ಮೂರು ತಿಂಗಳಲ್ಲೇ ನೋಡಿದ್ದಾರೆ. ಅದು ಬಿಟ್ಟು ನಿಮ್ಮ ಹಾಗೆ 3–3 ವರ್ಷ ಬಾಕಿ ಇಡಬೇಕೇ?

ಶ್ರೀ ಹೆಚ್.ಡಿ.ರೇವಣ್ಣ : ನಾವು 3–3 ವರ್ಷ ಇಟ್ಟಿಲ್ಲ. ಇದು ಕೋರ್ಟ್‌ನಲ್ಲಿದೆ ಎಂದು ಹೇಳಿದ ದಾಖಲೆಯನ್ನು ಕೊಡುತ್ತೇನೆ. ಇದನ್ನು ಕೊಡುವುದಕ್ಕೆ ಬರುವುದಿಲ್ಲ ಜಿಲ್ಲಾಧಿಕಾರಿಗಳು ಬರೆದಿರುವ ಪತ್ರವನ್ನು ಕೊಡುತ್ತಿದ್ದೇನೆ. ನಾಲ್ಕು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳು ಕೊಟ್ಟಂಥ ಪತ್ರವನ್ನು ತಮಗೆ ಕೊಡುತ್ತಿದ್ದೇನೆ. ಕಾರವಾರದ ಜಿಲ್ಲಾಧಿಕಾರಿಯವರು ಬರೆದಿರುವ ಪತ್ರವಿದು. ಇದನ್ನು ಕೊಡಿ. ದಿನಾಂಕ: 27–5– .. ರಲ್ಲಿ

ಇಲಾಖೆಯ ಕಾರ್ಯದರ್ಶಿಗಳು ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆದಿರುವುದನ್ನೂ ತೆಗೆದುಕೊಳ್ಳಿ. ಜಿಲ್ಲಾಧಿಕಾರಿಗಳು ಬರೆದಿರುವುದನ್ನೂ ತೆಗೆದುಕೊಳ್ಳಿ, ತಹಶೀಲ್ದಾರ್‌ರವರು ಬರೆದಿರುವುದನ್ನೂ ತೆಗೆದುಕೊಳ್ಳಿ. ಒತ್ತುವರಿ ಮಾಡಿರುವುದಕ್ಕೆ ಸರ್ವೇಯರ್ ಮಹಜರು ಇದೆ, ಅದನ್ನೂ ಬೇಕಾದರೂ ಕೊಡುತ್ತೇವೆ. ಸರ್ವೇಯರ್, ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಹೀಗೆ ಎಲ್ಲರೂ ಹೇಳಿದ್ದಾರೆ. ಒಂದು ಕಡೆ K.P.C.L. ಜಮೀನು ಒತ್ತುವರಿಯಾಗಿದೆ, ಇನ್ನೊಂದು ಕಡೆ ಫಾರೆಸ್ಟ್ ಲ್ಯಾಂಡ್ ಒತ್ತುವರಿಯಾಗಿದೆ. ಅಲ್ಲಿ ಗಿಡಮರಗಳನ್ನೆಲ್ಲಾ ತೆಗೆದು ಹಾಕಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಇಲ್ಲಿ ಹೇಳುತ್ತಾರೆ ನೋಡಿ, "ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆಯುವುದು ಸೂಕ್ತವೆಂದು Advocate General ರವರು ಹೇಳಿದರು ಎಂದು ಹೇಳುತ್ತಾರೆ. ಹೈಕೋರ್ಟ್‌ನಲ್ಲಿ ಕೇಸ್ ಇದ್ದುದನ್ನು ನೀವು ತೆಗೆದುಕೊಂಡು ಅದಕ್ಕೆ ಮಂಜೂರಾತಿ ಕೊಡುತ್ತೀರಿ ಎಂದರೆ ಅದಕ್ಕೆ ಅರ್ಥವೇನು ಸ್ವಾಮಿ?

ಡಾ: ವಿ.ಎಸ್.ಆಚಾರ್ಯ : ಕೇಸು ಕೋರ್ಟಿಗೆ ಬಂದಿರುವುದು ಈಗ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಹೇಳಿಕೆಯಲ್ಲಿ ಏನಿದೆ ಎಂದು ದಯಮಾಡಿ ಓದಿ. ಆವತ್ತು ನೀವು ಮಂಜೂರಾತಿ ಮಾಡಿ ದೇವಸ್ಥಾನವನ್ನು ಕೊಟ್ಟಿರಲ್ಲ, ಆವತ್ತು ಕೋರ್ಟಿನಲ್ಲಿ ಕೇಸ್ ಇತ್ತು ಎಂದು ನೀವೇ ಹೇಳಿಕೆ ಕೊಟ್ಟಿದ್ದೀರಿ. ನಿಮಗೆ ಸರಿಯಾಗಿ information ಕೊಡುತ್ತಿಲ್ಲ. ನಿಮಗೆ ಕಡತ ಬೇಕಾದರೂ ಕೂಡಲೇ ಕಳುಹಿಸಿಕೊಡುತ್ತೇನೆ. ನೀವು ಗೌರವವಾಗಿ ಆ ದೇವಸ್ಥಾನವನ್ನು ಸರ್ಕಾರಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು. 3,425 ಸರ್ಕಾರಿ ದೇವಸ್ಥಾನಗಳಿವೆ. ಅದರಲ್ಲಿ ಇದನ್ನೂ ವಾಪಸ್ಸು ತೆಗೆದುಕೊಳ್ಳಬೇಕು. ಆ ದೇವಸ್ಥಾನ 1 ರಿಂದ 92 ರಲ್ಲಿತ್ತು. ಮುಜರಾಯಿ ಸಚಿವರಾದ ನೀವು ಪ್ರಾಮಾಣಿಕರು. ನಿಮಗೆ ದೇವರು ಒಳ್ಳೆಯದು ಮಾಡಲಿ. ನಿಮಗೆ ಮುಜರಾಯಿ ಖಾತೆ ಖಾಯಂ ಆಗಿರಬೇಕು. ಅದಕ್ಕೋಸ್ಕರ ಕೂಡಲೇ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಯಾರ್‍ಯಾರು ಒತ್ತುವರಿ ಮಾಡಿದ್ದಾರೋ ಅದನ್ನೆಲ್ಲ ತೆರವು ಮಾಡಬೇಕು. ಅವರ ಉತ್ತರ ಸರಿಯಿಲ್ಲ. ಆದ್ದರಿಂದ ನಾವೆಲ್ಲದ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಸುರೇಶ್‌ಕುಮಾರ್ : ಊಟಕ್ಕೆ ಟೈಂ ಆದಾಗ ನೀವು ವಾಕೌಟ್ ಮಾಡುತ್ತೀರಿ ಎಂದು ನಮಗೆ ಗೊತ್ತಿತ್ತು.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2.20 ಕ್ಕೆ ಮುಕ್ತಾಯಗೊಂಡು ಪುನಃ ಅದೇ ಮಧ್ಯಾಹ್ನ 3.15 ಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

* * * * * *

(ಸದನವು ಮಧ್ಯಾಹ್ನ 3 ಗಂಟೆ 42 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠ ಅಲಂಕರಿಸಿದರು)

(3-30 PM)

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ

II ಕಾರಂಜ ನೀರಾವರಿ ಯೋಜನೆಯ ಹೆಸರಿನಲ್ಲಿ ಬೀದರ್ ತಾಲ್ಲೂಕಿನ ಕೆಲವು ಗ್ರಾಮಗಳ ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಫಲವತ್ತಾದ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವ ವಿಚಾರ :

ಶ್ರೀ ಬಂಡೆಪ್ಪ ಕಾಶಂಪೂರ್ (ಬೀದರ್ ದಕ್ಷಿಣ) : ಸನ್ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಬೀದರ್‌ನಲ್ಲಿ ಕಾರಂಜ ನೀರಾವರಿ ಯೋಜನೆ 1969ರಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೂ ಕೂಡ ಸದರಿ ಯೋಜನೆ ಮುಗಿದಿಲ್ಲ. ನನಗೆ ತಿಳಿದ ಮಟ್ಟಿಗೆ ಭಾರತ ದೇಶದಲ್ಲಿ ಇದೊಂದೆ ಪ್ರಾಜೆಕ್ಟ್ ಈ ರೀತಿಯಾಗಿದೆ ಎಂದು ಕಾಣುತ್ತದೆ. ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಈ ಒಂದು ಯೋಜನೆಗೆ ಅಡಿಗಲ್ಲು ಹಾಕಿದ್ದಾರೆ. ಸದರಿ ಯೋಜನೆ 9 ಕೋಟಿ ರೂಪಾಯಿಯಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ಸುಮಾರು 450 ರಿಂದ 500 ಕೋಟಿ ರೂಪಾಯಿ ದಾಟಿದೆ. ಇಷ್ಟಾದರು ಇದು ಮುಗಿಯುವ ಹಂತದಲ್ಲಿ ಇಲ್ಲ.

ಶ್ರೀ ಸಿ.ಟಿ.ರವಿ : ಇದರಿಂದ ಸುಮಾರು ಜನರು ಉದ್ಧಾರವಾಗಿರಬೇಕಲ್ಲವೆ?

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ರವಿಯವರು ಹೇಳುವುದು ಸತ್ಯ. ಇದರಿಂದ ಬಹಳ ಜನ ಉದ್ಧಾರವಾಗಿದ್ದಾರೆ. ಕಾರಂಜ ಯೋಜನೆ 1969 ರಲ್ಲಿ ಪ್ರಾರಂಭವಾಗಿ 1972ರಲ್ಲಿ ಮೊದಲನೇ ಹಂತದಲ್ಲಿ 900 ಎಕರೆ ಭೂಸ್ವಾಧೀನ ಮಾಡಿಕೊಂಡು ಕೆಲಸ ಪ್ರಾರಂಭ ಮಾಡಿದರು. 1982 ರಲ್ಲಿ ಸದರಿ ಯೋಜನೆಯನ್ನು ಮತ್ತೆ ವಿಸ್ತರಣೆ ಮಾಡಿ 14,503 ಎಕರೆ ಜಮೀನನ್ನು ತೆಗೆದುಕೊಂಡು 8 ಮೀಟರ್ ಎತ್ತರದವರೆಗೆ ಎಫ್‌ಆರ್‌ಎಲ್ ನಿಗದಿ ಮಾಡಿ ಇದಕ್ಕಿಂತ ಮುಂದೆ ಹೋಗುವುದಿಲ್ಲವೆಂದು ಅದಕ್ಕೆ ಕಲ್ಲು ಹಾಕಿದ್ದಾರೆ. ಸುಮಾರು 40 ವರ್ಷಗಳಿಂದಲೂ ಕೂಡ ಈ ಒಂದು ಯೋಜನೆ ಇನ್ನೂ ಪೂರ್ಣಗೊಳ್ಳುತ್ತಲೇ ಇದೆ. ಸದರಿ ಯೋಜನೆಯಿಂದ ಬಾಲ್ಕಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತಿದೆ. ಆದರೆ, ಇವತ್ತಿನದಿವಸ ಸುಮಾರು 2 ರಿಂದ 3 ಸಾವಿರ ಎಕರೆ ಪ್ರದೇಶಗಳಿಗೆ ನೀರು ಪೂರೈಸುವುದಕ್ಕೆ ಅಲ್ಲಿ ಒಳ್ಳೆಯ ರೀತಿಯಿಂದ ನೀರು ಸಂಗ್ರಹಣೆ ಆಗುತ್ತಿಲ್ಲ. 5.67 ಟಿ.ಎಂ.ಸಿ. ಕೆಪಾಸಿಟಿಗೆಂದು ಈ ಯೋಜನೆಯನ್ನು ಮೊದಲು ಮಾಡಿ ಅಷ್ಟಕ್ಕೆ ಮಾತ್ರ ಎಫ್‌ಆರ್‌ಎಲ್ ನಿಗದಿ ಮಾಡಿ ಕಲ್ಲನ್ನು ಹಾಕಿ ಸುಮಾರು 14 ಸಾವಿರ ಎಕರೆ ರೈತರ ಜಮೀನನ್ನು ಸ್ವಾಧೀನ ಪಡಿಸಿಕೊಂಡರು. ಆ ಸಂದರ್ಭದಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಾಗ ಒಂದು ಎಕರೆಗೆ 3 ಸಾವಿರ ರೂಪಾಯಿಯಂತೆ ಪರಿಹಾರವನ್ನು ಕೊಟ್ಟರು. ಆದರೆ, ಇದಕ್ಕೆ ಸಂಬಂಧ ಪಟ್ಟಂತೆ ಕೆಲವರು ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ. ಮಾನ್ಯ ಸಚಿವರು ಈಗ ಬಂದ ನಂತರ ಹೈ ಪವರ್ ಕಮಿಟಿಯನ್ನು ರಚನೆ ಮಾಡಲಾಗಿದೆ. ನಾವು ಆಡಳಿತದಲ್ಲಿದ್ದಂಥ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪ ನವರ ನೇತೃತ್ವದಲ್ಲಿ ಒಂದು ಹೈ ಪವರ್ ಕಮಿಟಿ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸುಮಾರು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ಅಂದರೆ 2-3 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿಯೇ ಮಳೆ ಜಾಸ್ತಿಯಾಗಿದೆ. ಮಳೆ ಜಾಸ್ತಿಯಾಗಿರುವುದರಿಂದ ಎಫ್‌ಆರ್‌ಎಲ್ ಕಲ್ಲುಗಿಂತ ಜಾಸ್ತಿ ನೀರು ನಿಂತುಕೊಂಡಿರುವ ಪ್ರಸಂಗವನ್ನು ನಾವು ನೋಡಿದ್ದೇವೆ. ಈಗ ಹೊಸದಾಗಿ ಮತ್ತೆ ಸುಮಾರು 1 ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಳ್ಳ ಬೇಕೆಂದು ತೀರ್ಮಾನ ಮಾಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರದವರು ಪ್ರಾರಂಭ ಮಾಡಿದ್ದಾರೆ. ಆದರೆ, ಅಲ್ಲಿನ ರೈತರು ಇವತ್ತಿನದಿವಸ ಬಹಳಷ್ಟು

ಸಂಕಷ್ಟದಲ್ಲಿದ್ದಾರೆ. ಏಕೆಂದರೆ, ಆ ಕಾಲದಲ್ಲಿ ಒಂದು ಎಕರೆಗೆ 3 ಸಾವಿರ ಕೊಟ್ಟಿರತಕ್ಕಂಥದ್ದರ ಬಗ್ಗೆ ಇರುವಂಥ ಎಷ್ಟೋ ಕೇಸ್‌ಗಳು ಇದುವರೆಗೂ ಇತ್ಯರ್ಥವಾಗಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾವು ಕೇಳಿಕೊಳ್ಳುವುದೇನೆಂದರೆ, ಯಾವುದೇ ಒಂದು ನೀರಾವರಿ ಯೋಜನೆ ಪೂರ್ಣವಾಗಿ ಉಪಯೋಗವಾಗಿಲ್ಲ. ಬೀದರ್ ಮತ್ತು ಹುಮ್ನಾಬಾದ್ ನಗರಗಳಿಗೆ ಕುಡಿಯುವ ನೀರಿಗೋಸ್ಕರ ಸದರಿ ಯೋಜನೆಯಿಂದ ನೀರನ್ನು ಉಪಯೋಗ ಮಾಡಲಾಗುತ್ತಿದೆ. 8 ಮೀಟರ್ ಎತ್ತರ ಮತ್ತು 5.67 ಟಿ.ಎಂ.ಸಿ. ಕೆಪಾಸಿಟಿಗೆ ನಿರ್ಧಾರ ಮಾಡಿ. ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರು ಬೀದರ್‌ಗೆ ಮೊದಲ ಸಾರಿ ಭೇಟಿ ನೀಡಿದಂಥ ಸಂದರ್ಭದಲ್ಲಿ ನಾವೆಲ್ಲ ಡೆಲಿಗೇಷನ್ ಹೋಗಿ ವಿಲೇಜ್ ಶಿಫ್ಟ್‌ಗೆ ಸಂಬಂಧಪಟ್ಟಂತೆ ಅವರ ಗಮನಕ್ಕೆ ತಂದಿದ್ದೇವೆ. ಎಷ್ಟೋ ಹಳ್ಳಿಗಳಿಗೆ ಸಂಪೂರ್ಣವಾಗಿ ಪುನರ್ವಸತಿ ಸೌಲಭ್ಯಗಳು ಇಲ್ಲಿಯವರೆಗೆ ಸಿಕ್ಕಿಲ್ಲ. ಈಗಾಗಲೇ ಜಿಲ್ಲಾಪಂಚಾಯತ್‌ಗೆ ಹ್ಯಾಂಡ್ ಓವರ್ ಮಾಡಿದ್ದೇವೆಂದು ನೀರಾವರಿ ಇಲಾಖೆಯವರು ಹೇಳುತ್ತಿದ್ದಾರೆ. ಆದರೆ, ಇದನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಇವತ್ತಿನದಿವಸ ಜಿಲ್ಲಾಪಂಚಾಯತ್‌ನವರು ತಯಾರಿಲ್ಲ. ಇನ್ನೊಂದು ಆಶ್ಚರ್ಯಕರವಾದ ವಿಷಯ ಏನೆಂದರೆ, ರಂಜಲ್‌ಕೆಳಿ ಎಂಬ ಊರು ಅಲ್ಲಿದೆ. ಮೊದಲನೆ ಮತ್ತು ಎರಡನೇ ಫೇಸ್‌ನಲ್ಲಿ ಮನೆ ಕಳೆದುಕೊಂಡಂಥ ರೈತರಿಗೆ ಇದುವರೆಗೂ ಕೂಡ ಅಲ್ಲಿ ಅಭಿವೃದ್ಧಿ ಮಾಡಿ ಸಂಬಂಧಪಟ್ಟವರಿಗೆ ಹಕ್ಕು ಪತ್ರವನ್ನು ಕೊಟ್ಟಿಲ್ಲ. ಈಗಾಗಲೇ 40 ವರ್ಷಗಳಾಗಿವೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರು ಟಿಡಿಪಿ ಸಭೆಗೆ ಬಂದಾಗ ಇಲ್ಲಿನ ಜನರಿಗೆ ಹಕ್ಕು ಪತ್ರವನ್ನು ಯಾವ ದಿವಸ ಕೊಡುತ್ತೀರಿ ಎಂಬುದರ ಬಗ್ಗೆ ಒಂದು ನಿಗದಿತ ದಿನಾಂಕವನ್ನು ಹೇಳಿ ಎಂದು ಕೇಳಿದ್ದಕ್ಕೆ 15 ದಿವಸದ ಒಳಗಡೆ ಹಕ್ಕುಪತ್ರವನ್ನು ಕೊಡುತ್ತೇವೆಂದು ಹೇಳಿದರು. ಅಲ್ಲಿನ ರೈತರಿಗೆ ಪರಿಹಾರ ಸಿಕ್ಕಿ ಸಾಕಷ್ಟು ವರ್ಷಗಳಾಗಿವೆ. ಆದರೆ, ಇದುವರೆಗೂ ಅವರಿಗೆ ಹಕ್ಕು ಪತ್ರ ಕೊಟ್ಟಿಲ್ಲ. ಮತ್ತೆ ಸೈಟ್ ತೆಗೆದುಕೊಂಡು ಮನೆ ಕಟ್ಟುವುದಕ್ಕೆ ಅವರ ಹತ್ತಿರ ದುಡ್ಡಿಲ್ಲ. ಇಂಥ ಒಂದು ವ್ಯವಸ್ಥೆಯಲ್ಲಿ ನಮ್ಮ ರೈತರು ಸಿಲುಕಿಕೊಂಡಿದ್ದಾರೆ. ಆದ್ದರಿಂದ, ಇದರ ಬಗ್ಗೆ ನಮ್ಮ ಸಚಿವರು ವಿಶೇಷವಾದಂಥ ಗಮನವನ್ನು ಕೊಡಬೇಕಾಗುತ್ತದೆ. ಇನ್ನೊಂದು ವಿಷಯ ಏನೆಂದರೆ, ಬಹಳಷ್ಟು ರೈತರು ಭೂಮಿಯ ಬಗ್ಗೆ ಕೇಸ್ ಹಾಕಿದ್ದಾರೆ. Re-determination of Compensation under section

28(a) of the Land Acquisition Act 498 ಅಡಿಯಲ್ಲಿ ಹಾಕಿರುವಂಥ ಕೇಸ್‌ಗಳೆಲ್ಲಾ ಇವತ್ತಿನವರೆಗೂ ಕೂಡ ಪೆಂಡಿಂಗ್ ಇವೆ. ಇದನ್ನು ಇತ್ಯಾರ್ಥ ಮಾಡಬೇಕಾದರೆ ಅಂದರೆ ಅವರಿಗೆ ಬಡ್ಡಿ ಸೇರಿಸಿ ಕೊಡುವುದಕ್ಕೆ ಸುಮಾರು 50 ಕೋಟಿ ರೂಪಾಯಿ ಬೇಕಾಗುತ್ತದೆ. ಮತ್ತೆ ಎಸ್ ಕ್ರೇಷಿಯಾ ಹಣ ಸುಮಾರು 52 ಕೋಟಿ ರೂಪಾಯಿಗಳಷ್ಟು ಇದುವರೆಗೂ ಬಾಕಿ ಇದೆ. ಹೈ ಪವರ್ ಕಮಿಟಿಯಲ್ಲಿ ಇದರ ಬಗ್ಗೆ ಗಮನ ಹರಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ಆದರೆ, ಇವತ್ತಿನವರೆಗೆ ಅದರ ಬಗ್ಗೆ ಗಮನ ಹರಿಸಿಲ್ಲ. ಈಗಾಗಲೇ ರೈತರು ಈ ಒಂದು ಯೋಜನೆಗೋಸ್ಕರ ಬಹಳಷ್ಟು ಜಮೀನನ್ನು ಕಳೆದುಕೊಂಡಿದ್ದಾರೆ. ಈಗ ಅವರ ಹತ್ತಿರ ಸುಮರು 1 ಅಥವಾ 2 ಅಥವಾ 3 ಎಕರೆ ಜಮೀನು ಇರಬಹುದಷ್ಟೆ. ಆದರೆ, ಈಗ 1 ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಳ್ಳಬೇಕೆಂದು ಇವತ್ತಿನದಿವಸ ಸರ್ಕಾರ ಆದೇಶ ಮಾಡಿದೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳು ವುದೇನೆಂದರೆ, ತಕ್ಷಣ ಆ ಪ್ರಕ್ರಿಯೆ ನಿಲ್ಲಿಸಬೇಕು ಹಾಗೆಯೇ ಹೊಸದಾಗಿ ಈಗ ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಬೇಕೆಂದು ಹೇಳುತ್ತಿರುವುದನ್ನು ಸಂಪೂರ್ಣವಾಗಿ ಕೈಬಿಡಬೇಕು. ಅಲ್ಲಿ ಜಮೀನನ್ನು ನಾವ್ಯಾರು ಕೊಡುವುದಕ್ಕೆ ತಯಾರಿಲ್ಲವೆಂದು ಅಲ್ಲಿನ ಎಲ್ಲಾ ರೈತರು ಸಹಿ ಮಾಡಿ ಮನವಿ ಪತ್ರವನ್ನು ಕೊಟ್ಟಿದ್ದಾರೆ. ಮತ್ತೆ ಅಲ್ಲಿನ ರೈತರ ಎರಡು–ಮೂರು ಬೇಡಿಕೆಗಳ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಮುಳುಗಡೆ ಯಾದಂಥ ಪ್ರದೇಶದಲ್ಲಿನ ರೈತರ ಮಕ್ಕಳಿಗೆ ಸರ್ಕಾರಿ ನೌಕರಿಯಲ್ಲಿ ಆದ್ಯತೆ ಕೊಡಬೇಕಾಗುತ್ತದೆ.

ಇವತ್ತು ಮಾನ್ಯ ಸಚಿವರು ದೊಡ್ಡ ಮನಸ್ಸು ಮಾಡಿ ಮುಂದಿನ ದಿನಗಳಲ್ಲಿ at least ಒಂದು family ಗೆ, ಜಮೀನು ಕಳೆದುಕೊಂಡವನಿಗೆ ಒಂದು ನೌಕರಿಯನ್ನು percentage ಆಧಾರದಲ್ಲಿ ಕೊಟ್ಟಿರುತ್ತೀರಿ. ಅದರಿಂದ ಇವತ್ತಿನವರೆಗೂ ಅದರಿಂದ ಏನು ಲಾಭವಾಗುತ್ತಿಲ್ಲ. ಒಂದು ನೌಕರಿಯನ್ನು ಕೊಡುವಂಥ ಒಂದು ಕೆಲಸವನ್ನು ಇವತ್ತು ಸರ್ಕಾರ ಮಾಡಬೇಕಾಗುತ್ತದೆ. ಮತ್ತೆ ರೋಡ್, ಇನ್ನಿತರ ಬೇರೆ ಬೇರೆ ಸವಲತ್ತುಗಳನ್ನು ಕೊಡಬೇಕು. ಎಷ್ಟೋ ಸಾರಿ ನಾವು ಜಿಲ್ಲಾಧಿಕಾರಿಗಳ ಮುಖಾಂತರ BPL ಕಾರ್ಡ್ ಕೊಡುವುದರಲ್ಲಿಯೂ ಅಲ್ಲಿ ಬಹಳಷ್ಟು ತೊಂದರೆಯಾಗಿದೆ. ಆದ್ದರಿಂದ ಇವತ್ತು ಈ ಯೋಜನೆ ಅಡಿಯಲ್ಲಿ ಆ ರೈತರಿಗೆ ಒಳ್ಳೆಯ ರೀತಿಯಿಂದ

ಒಂದು ಪ್ಯಾಕೇಜ್‌ನ್ನು ಕೊಟ್ಟು ರೀ ಹ್ಯಾಬಿಲಿಟೇಶನ್ ಮಾಡುವಂಥ ಒಂದು ಕೆಲಸವನ್ನು ಮಾಡಬೇಕು. ಆಮೇಲೆ ಮುಖ್ಯವಾಗಿ ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. 1000 ಎಕರೆ ಜಮೀನನ್ನು ಇವರು ಹೊಸದಾಗಿ ತೆಗೆದುಕೊಳ್ಳುವುದಕ್ಕೆ ಸುಮಾರು 16 ಹಳ್ಳಿಗಳು ಅದರಲ್ಲಿ ಸೇರುತ್ತವೆ. ಒಂದೆರಡು ಹಳ್ಳಿಗಳು ಅಲ್ಲ. 1982 ರಲ್ಲಿ ಮೊದಲು ಭೂಸ್ವಾಧೀನ ಪಡಿಸಿಕೊಂಡಿದ್ದು 26 ಹಳ್ಳಿಗಳ ಜಮೀನು. ಇವತ್ತು 1000 ಎಕರೆ ಜಮೀನು ರೈತರದ್ದು ಹೋಗುತ್ತಿದೆ. ಸುಮಾರು 16 ಹಳ್ಳಿಗಳ ಜಮೀನು ಇದೆ. ಹಾಗಾಗಿ ಇವತ್ತು ಆ ಪ್ರಕ್ರಿಯೆಯನ್ನು ಕೈಬಿಡಬೇಕು. ಇವತ್ತು ರೈತರಿಗೆ ನೆಮ್ಮದಿಯಿಂದ ಒಂದೆರಡು ಸಲ ನೀರು ಬಂದಾಗ ಅವರ ಜಮೀನಿಗಳಿಗೆ ತೊಂದರೆ ಯಾಗುತ್ತಿದೆ. ಆಗ ನಾವು ಕೂಡ ಅವರಿಗೆ compensation ಕೊಡಿ ಎನ್ನುವ ರೀತಿಯಲ್ಲಿ ಮಾತನಾಡಿದ್ದೇವೆ. ಮಾನ್ಯ ಸಚಿವರು ಹೇಳಿದರು ಜಮೀನು ತೆಗೆದುಕೊಳ್ಳುತ್ತೇವೆ. ಇವತ್ತು ಎಲ್ಲಾ ಜಮೀನು ಕಳೆದುಕೊಂಡು 3000 ಸಾವಿರ ರೂ.ಗಳಿಗೆ ಒಂದು ಎಕರೆಯಂತೆ ಜಮೀನು ಕೊಟ್ಟಿದ್ದಾರೆ. ಇವತ್ತಿನವರೆಗೆ ಅದು 24000 ರೂ.ಗಳವರೆಗೂ ಕೂಡ ಬಂದಿಲ್ಲ. ಹಾಗಾಗಿ ಇದು ಬಹಳ ಮುಖ್ಯವಾಗಿದೆ. ಮಾನ್ಯ ಸಚಿವರು ಈ ಒಂದು ಸದನದಲ್ಲಿ ನಮಗೆ ಆಶ್ವಾಸನೆ ಕೊಡಬೇಕು. ಹೊಸದಾಗಿ 1000 ಎಕರೆ ಜಮೀನು ಭೂಸ್ವಾಧೀನಪಡಿಸಿ ಕೊಳ್ಳುವುದಕ್ಕೆ ಹೊರಟಿದ್ದಾರೆ ಆ ಪ್ರಕ್ರಿಯೆಯನ್ನು ಕೈಬಿಡಬೇಕು. ಆ ರೈತರಿಗೆ ನೆಮ್ಮದಿಯಿಂದ ಅವರ ಜಮೀನಿನಲ್ಲಿ ಅವರು ಕೆಲಸ ಮಾಡುವುದಕ್ಕೆ ಬಿಡಬೇಕು. ಗುಲ್ಬರ್ಗಾದಲ್ಲಿರುವ ವಕೀಲರು ನಿಮ್ಮ ಜಮೀನಿಗೆ ಹೆಚ್ಚಿಗೆ ಹಣ ಕೊಡಿಸುತ್ತೇವೆಂದು ಹೇಳಿ ರೈತರಿಗೆ ಸುಮ್ಮಸುಮ್ಮನೆ ಹೇಳುತ್ತಾ ಸರ್ಕಾರಕ್ಕೂ ಕೂಡ ರಾಂಗ್ ಮೆಸೇಜ್ ಕೊಡುತ್ತಿದ್ದಾರೆ. ಅದಕ್ಕಾಗಿ ನಾನು ಮೊನ್ನೆ ಹೇಳಿದಾಗ ಆ ಎಲ್ಲಾ ರೈತರು ಇವತ್ತು ಸಹಿ ಮಾಡಿ ಕೊಟ್ಟಿದ್ದಾರೆ. ನಾವು ಯಾವುದೇ ಕಾರಣಕ್ಕೂ ಜಮೀನು ಕೊಡುವುದಕ್ಕೆ ತಯಾರಿಲ್ಲವೆಂದು ಹೇಳಿದ್ದಾರೆ. ಅದಕ್ಕಾಗಿ ಸನ್ಮಾನ್ಯ ಸಚಿವರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಯಾವುದೇ ಕಾರಣಕ್ಕೂ 5.67 TMC ನೀರು ಸಂಗ್ರಹಣೆ ಮಾಡಿ ಆ ನೀರು ನಿಲ್ಲಿಸುವುದಕ್ಕೆ ಈಗ ಇರುವಷ್ಟು ಜಮೀನು ಸಾಕಾಗುತ್ತದೆ. ಅದಕ್ಕಿಂತ ಮತ್ತೆ ಹೆಚ್ಚಿಗೆ ಅವರೊಂದು Court ಗೆ Public Litigation Case ಹೋದಾಗ ಇವರು already Court ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಯೋಜನೆ ಮುಗಿದು ಹೋಗಿದೆ. ಯಾವ

ಭೂಸ್ವಾಧೀನ' ಪ್ರಕ್ರಿಯೆ ಇಲ್ಲವೆನ್ನುವ ನಿಟ್ಟಿನಲ್ಲಿ ಕೋರ್ಟಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದ ಮೇಲು ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆ ಸ್ಟಾರ್ಟ್ ಮಾಡಿದಾಗ ಪಾಪ ಅಲ್ಲಿರುವ ರೈತರು ಇವತ್ತು ನಿದ್ದೆ ಮಾಡುವಂಥ ಪ್ರಸಂಗದಲ್ಲಿ ಇಲ್ಲ. ಮಾನ್ಯ ಸಚಿವರು ಇವತ್ತು ಸದನಕ್ಕೆ ಆಶ್ವಾಸನೆ ಅಲ್ಲ, 100% ಹೇಳಬೇಕು. ಆ 1000 ಎಕರೆ ಜಮೀನು ಜೊತೆಗೆ ಹಿಂದಿನದು ಬಹಳ ಮುಖ್ಯವಾಗಿದೆ. ಅವರ ಎಲ್ಲಾ ಕೇಸ್‌ಗಳನ್ನು ಇತ್ಯರ್ಥ ಮಾಡಿ 50 ಕೋಟಿ ರೂ.ಗಳನ್ನು ಕೊಡಬೇಕಾಗಿದ್ದು ಅದು ಪೆಂಡಿಂಗ್ ಇದೆ. Ex-gratia ದ್ದು 52 ಕೋಟಿ ರೂ.ಗಳ ಪೆಂಡಿಂಗ್ ಇದೆ. ರೈತರ ವಿಷಯದಲ್ಲಿ ಬಹಳಷ್ಟು ಕಾಳಜಿ ವಹಿಸುತ್ತಾರೆಂದು ಹೇಳುತ್ತಾರೆ. ಹಾಗಾಗಿ ಈ ಒಂದು ವಿಷಯದಲ್ಲಿ ಮಾನ್ಯ ಸಚಿವರು ಬೆಳಕು ಚೆಲ್ಲಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಜ್ ಶೇಖರ್ ಪಾಟೀಲ್ (ಹುಮ್ನಾಬಾದ್) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ವಿಷಯಗಳನ್ನು ಮಾನ್ಯ ಬಂಡೆಪ್ಪ ಕಾಶೆಂಪೂರವರು ಹೇಳಿದ್ದಾರೆ. ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಖಾಕೊಂಡಕಿ ಗ್ರಾಮ 2008 ರಲ್ಲಿ 9 ಮೀಟರ್ ನೀರು ನಿಲ್ಲಿಸಿ ಅಲ್ಲಿ ಬರುವ ಬ್ಯಾಕ್‌ವಾಟರ್‌ದಿಂದ ಏನು ತೊಂದರೆಯಾಗುತ್ತಿದೆ ಇನ್ನು ಆ ತೊಂದರೆ ನಿವಾರಣೆಯಾಗಿಲ್ಲ. 2009ರಲ್ಲಿ ಕೂಡ ಅವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆದಷ್ಟು ಬೇಗನೆ ಅಲ್ಲಿ ಮುಳುಗಡೆಯಾಗಿದೆ. ಅಲ್ಲಿ 9 ಮೀಟರ್ ನೀರು ನಿಲ್ಲಿಸಿದ್ದಾರೆ ಅದು ಸಂತೋಷ. ಮೊದಲನೆಯ ಸಲ ನೀರು ನಿಂತಿದೆ. ಆದರೆ ಅದು ಇನ್ನುವರೆಗೆ ಕಾರ್ಯರೂಪಕ್ಕೆ ಬರಲಿಲ್ಲ. ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ನಾವು ಅಲ್ಲಿಗೆ ವಿಸಿಟ್ ಕೊಟ್ಟಿರುತ್ತೇವೆ. ಇನ್ನುವರೆಗೆ ಆ ಕೆಲಸವಾಗಲಿಲ್ಲ. ಮಾನ್ಯ ಮಂತ್ರಿಗಳಲ್ಲಿ ನಾನು ಇವತ್ತು ವಿನಂತಿ ಮಾಡುತ್ತೇನೆ. ಆ ಡಾಕುಳಗಿ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳು ಇನ್ನುವರೆಗೆ ಆಗಿಲ್ಲ. ತಾವೆಲ್ಲಾ ಬಂದು ಮೀಟಿಂಗ್ ಮಾಡಿದಿರಿ ಇನ್ನು ಯಾವ ಕೆಲಸ ಪ್ರಾರಂಭವಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹೊಸದಾಗಿ 1000 ಎಕರೆ ಜಮೀನು ಭೂಸ್ವಾಧೀನ ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದೀರಿ ಅದರ ಬಗ್ಗೆ ಮಾನ್ಯ ಬಂಡೆಪ್ಪ ಕಾಶೆಂಪೂರವರು ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಸಲುವಾಗಿ ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಡಾಕುಳಗಿ, ಸಿಂಬಳಗಿ ಹಾಗೂ ಕೆಲವು ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳ ಸಲುವಾಗಿ ನಾನು ಕೇಳುತ್ತಾ ಬಂದಿರುತ್ತೇನೆ.

ಅದಕ್ಕೆ ಆದಷ್ಟು ಬೇಗನೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಕಾರಂಜಾ ಯೋಜನೆ 1969 ರಲ್ಲಿ ಪ್ರಾರಂಭವಾಗಿರುವುದು ನಿಜ. ಸುಮಾರು 18–20 ವರ್ಷದಿಂದ ಯಾವುದೇ ಕೆಲಸವಾಗಿರಲಿಲ್ಲ. ಮುಂದೆ ಪರಿಸ್ಕೃತ ಯೋಜನೆಯನ್ನು ಮಾಡಿ ಅದಕ್ಕೆ ಚಾಲನೆ ಕೊಟ್ಟರು ಕೂಡ ಅದು ನಿಜವಾಗಿಯೂ 1992 ರಲ್ಲಿ ಸರ್ಕಾರದ ಆದೇಶವಾದ ಮೇಲೆ 9.90 ಕೋಟಿ ರೂಪಾಯಿಗಳು ಇದ್ದದ್ದು 1997 ರಲ್ಲಿ 98 ಕೋಟಿ ರೂ.ಗಳಾಯಿತು. 7.69 TMC ನೀರಿನ ಸಂಗ್ರಹದ ಸಾಮರ್ಥ್ಯ ಮಾಡಿ ಅದರಲ್ಲಿ 15,226 ಎಕರೆ ಜಮೀನು ಮುಳುಗಡೆ ಆಗುತ್ತದೆಂದು ಒಂದು ಅಂದಾಜು ಮಾಡಿ 35,614 ಹೆಕ್ಟೇರ್ ಜಮೀನಿಗೆ ನೀರಾವರಿ ಮಾಡಬೇಕೆಂದು ಆಯಿತು. ಆ ನೀರಾವರಿ intensity ಸುಮಾರು 137.5 ಎಂದು ಆವತ್ತಿನ ಅಂದಾಜು ಆಯಿತು. ತದನಂತರ ನಿಜವಾಗಲೂ ಕೂಡ ಇದಕ್ಕೆ ಒಂದು ಚಾಲನೆ ಸಿಕ್ಕಿದ್ದು 1996–97 ರಲ್ಲಿ, AIBP ಯೋಜನೆ ಅಡಿಯಲ್ಲಿ ಈ ಕಾರ್ಯಕ್ರಮ ಬಂದ ಮೇಲೆ ನಿಜವಾಗಲೂ ಚಾಲನೆ ಸಿಕ್ಕಿದ್ದು 1997 ರಲ್ಲಿ. ತದನಂತರ ಈ ಯೋಜನೆ ಅಡಿಯಲ್ಲಿ ಸುಮಾರು 14,282 ಎಕರೆ ಜಮೀನು ಮುಳುಗಡೆಯಾಗಿದೆ. 24 ಹಳ್ಳಿಗಳಿಂದ ಈ ಜಮೀನನ್ನು ಪಡೆದುಕೊಂಡಿದೆ. ಈಗ 2009–10 ರಲ್ಲಿ ಮತ್ತು 2008–09 ರಲ್ಲಿ ಏನು ಎರಡು ವರ್ಷ ಮಳೆಯಾಗಿತ್ತು, ಇದರಿಂದ ಪ್ರಥಮಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀರಿನ ಸಂಗ್ರಹ ಮಾಡುವುದಕ್ಕೆ ಸಾಧ್ಯವಾಯಿತು. ಈ ಯೋಜನೆಯಾಗಿ ಇಷ್ಟುವಾದರೂ ಕೂಡ ಒಳ ಹರಿವು ಕಡಿಮೆಯಾಗಿರುವುದರಿಂದ ನೀರು ಸಂಗ್ರಹವಾಗಿರಲಿಲ್ಲ. 1989–90 ರಲ್ಲಿ ಮಾತ್ರ ಒಂದು ಸಲ ನೀರು ಹೆಚ್ಚಿನ ಪ್ರಮಾಣದಲ್ಲಿ ಬಂದು ಒಳಗಡೆ ಹರಿದಿರುವಂಥ ಒಂದು ಉದಾಹರಣೆ ಇದೆ. ಅದನ್ನು ಬಿಟ್ಟರೆ ನೀರು ಸಂಗ್ರಹಣೆಯೆ ಆಗಿರಲಿಲ್ಲ. Irrigation potential create ಆದರೂ ಕೂಡ ನೀರು ಕೊಡುವುದಕ್ಕಾಗಿರಲಿಲ್ಲ. ಒಂದು ಕುಡಿಯುವ ನೀರಿನ ಬ್ಯಾರೇಜ್ ತರಹ ಅದು ಕೆಲಸ ಮಾಡುತ್ತಿತ್ತು. ಸಾಕಷ್ಟು ಈ ರೈಟ್‌ಬ್ಯಾಂಕ್ ಕೆನಾಲ್‌ನಲ್ಲಿ ಅಡಚಣೆಗಳು ಇತ್ತು. ಮೇನ್ ಕ್ಯಾನೆಲ್ ವರ್ಕ್ ಆಗುತ್ತಿರಲಿಲ್ಲ. Aqueduct ಸಮಸ್ಯೆ ಇದೆ. Left Bank canalನಲ್ಲಿ ಲಿಫ್ಟ್ ಆಗಬೇಕಾಗಿತ್ತು. ಎಲ್ಲಾ ಸಮಸ್ಯೆಗಳನ್ನೊಳಗೊಂದು

O. 14 F-19

ಒಂದು ಯೋಜನೆ ಆಗಿತ್ತು. ನಾನು ಬಂದ ಮೇಲೆ ರೈಟ್ ಬ್ಯಾಂಕ್ ಕೆನಾಲ್‌ನ್ನು ಸಂಪೂರ್ಣವಾಗಿ ನೀರು ಬಿಡುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. Aqueduct ಮುಗಿಸುವಂಥ ಒಂದು ಹಂತದಲ್ಲಿದ್ದೇವೆ. ಇದೇ ತಿಂಗಳು aqueduct ಮುಕ್ತಾಯ ಆಗುತ್ತದೆ. ಕೊನೆಯ ಹಂತದವರೆಗೆ ನೀರು ಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ಅದರಿಂದ ರೈಟ್‌ಬ್ಯಾಂಕ್ ಕೆನಾಲ್‌ನಲ್ಲಿ ಸುಮಾರು wet irrigation 17,479 ಹೆಕ್ಟೇರ್ ಪ್ರದೇಶಕ್ಕೆ ನಾವು ಮಾಡಿದ್ದೇವೆ. ಲೆಫ್ಟ್‌ಬ್ಯಾಂಕ್ ಕೆನಾಲ್‌ನಲ್ಲಿ 2,521 ಹೆಕ್ಟೇರ್‌ಗೆ ಮಾಡಿರುವುದು ಇದು ಒಂದು ಕಡೆಯಾಗಿದೆ. ಇನ್ನೊಂದು ಕಡೆ ಈ ಮುಳುಗಡೆ ಪ್ರದೇಶದ ಜನರ ಸಂಕಷ್ಟ ಬಹಳ ದಿವಸಗಳಿಂದ ಇತ್ತು. ಅದಕ್ಕೆ ಒಂದು High Power Committee ಯನ್ನು ಮಾಡಿ Additional Chief Secretary ಯವರ ನೇತ್ರತ್ವದಲ್ಲಿ ಮಾಡಿ ಅಲ್ಲಿಯ ರೈತರ ಮೂಲಭೂತ ಸೌಕರ್ಯಗಳ ಬೇಡಿಕೆ ಒಂದು ಕಡೆ ಇದ್ದರೆ ಭೂಮಿಗೆ ಪರಿಹಾರವನ್ನು ಬಹಳ ಕಡಿಮೆ ದರದಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಒಂದು ಎಕರೆಗೆ 3000, 4000 ದಂತೆ ಅವರು 60ನೇ ದಶಕದಲ್ಲಿ ಕೊಟ್ಟಿದ್ದಾರೆ. ಅಲ್ಲಿಯ ರೈತರ ತ್ಯಾಗದಿಂದ ಈ ಯೋಜನೆ ಆಗಿದೆ ಇದರಲ್ಲಿ ಎರಡು ಮಾತಿಲ್ಲ. ಆ ಸಂದರ್ಭದಲ್ಲಿ ಬಹಳ ಕಡಿಮೆ ಆಗಿದೆ ಕೊಡಿ ಎಂದು ಅವರು ಬಹಳ ಒತ್ತಾಯ ಮಾಡುತ್ತಿದ್ದರು ಮತ್ತು ಚಳುವಳಿ ಕೂಡ ಆಗಿದೆ. Land compensation ಬಗ್ಗೆ land Revenue Act ನಲ್ಲಿ ಒಂದು ಸಲ compensation ಕೊಟ್ಟು takeover ಆದ ಮೇಲೆ ಯಾವ purpose ಆ project ಆದ ಮೇಲೆ ಮತ್ತೆ ಕೊಡುವುದಕ್ಕೆ ಬರುವುದಿಲ್ಲ. ಕೊನೆಗೆ ex-gratia ಆದೂ ಕೊಡಿ ಎಂದು ಚರ್ಚೆಯಾಗಿ ಇವತ್ತು ರೆವೆನ್ಯೂ ಇಲಾಖೆಯಲ್ಲಿ ಅದು ನಮ್ಮ High Power Committee ಮುಂದೆ ಇದೆ. ಮೂಲಭೂತ ಸೌಕರ್ಯಕ್ಕೆ 3 ಕೋಟಿ ರೂ.ಗಳನ್ನು ಅವತ್ತು ಒದಗಿಸಿದರು. 3 ಕೋಟಿ ರೂ.ಗಳನ್ನು ಒದಗಿಸಿ ಆ ಹಣವನ್ನು ಜಿಲ್ಲಾ ಪಂಚಾಯತಿಗೆ ವರ್ಗಾಯಿಸಿದರು. ಕೆಲವು ಕೆಲಸಗಳು ಆಯಿತು, ಆದರೆ ಪೂರ್ಣ ಪ್ರಮಾಣದ ಆ 3 ಕೋಟಿ ರೂ.ಗಳ ಲಾಭ ಆ ಸಂತ್ರಸ್ಥರಿಗೆ ಸಿಕ್ಕಿಲ್ಲ.

(4-00 PM)

ಪೂರ್ಣ ಪ್ರಮಾಣದ ಆ ಮೂರು ಕೋಟಿ ರೂ.ಗಳ ಲಾಭ ಸಂತ್ರಸ್ಥರಿಗೆ ಸಿಕ್ಕಿಲ್ಲ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ನಾನು ನನ್ನ period ನದು ಎಂದು ಹೇಳಲಿಲ್ಲ. ನಾನು ಏನು ನಡೆಯುತ್ತಿದೆ ಅದನ್ನು chronologically ಹೇಳುತ್ತಿದ್ದೇನೆ. ಇದಕ್ಕೆ ತಾವು ನೇರವಾಗಿ ಉತ್ತರವನ್ನು ಕೊಡಿ ಎಂದು ಹೇಳಿದರೆ ಕೊಡುತ್ತೇನೆ. ಅದು ಜಿಲ್ಲಾ ಪಂಚಾಯತಿಗೆ ಬಂತು, ಜಿಲ್ಲಾ ಪಂಚಾಯಿತಿಯವರು ಸರಿಯಾಗಿ ಕಾಮಗಾರಿಯನ್ನು ಮಾಡದೆ ಇರುವುದರಿಂದ ಅಲ್ಲಿಗೆ ನಾನೇ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಏನು ಉಪಯೋಗವಾಗಿರುವುದಿಲ್ಲ. ನಾನು ಬಂದ ಮೇಲೆಯೂ ಕೂಡ ಮತ್ತೆ, ಅದೇ ಗ್ರಾಮಕ್ಕೆ ನಾವು ಹಸ್ತಾಂತರ ಮಾಡಿದ್ದೇವೆ, ಎಲ್ಲವನ್ನು ಮಾಡಿದ್ದೇವೆ ಅದನ್ನು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ, ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಮಾಡುವಂತಹ ಕೆಲಸಕ್ಕೆ ಮತ್ತೆ ಒತ್ತಡ ಬಂತು. ಈಗಾಗಲೇ ನಾವು ಹೈಪವರ್ ಕಮಿಟಿಯಲ್ಲಿ 100 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂಬ ಬಗ್ಗೆ ತೀರ್ಮಾನವನ್ನು ಮಾಡಿದ್ದೇವೆ. ನಾವು ಕೂಡ ನಮ್ಮ ಬಜೆಟ್‌ನಲ್ಲಿ ಇದಕ್ಕೆ Provision ಮಾಡಿಕೊಂಡಿದ್ದೇವೆ. ಆದರೆ proposal RDPR ನಲ್ಲಿದೆ. ಅಲ್ಲಿಂದ ಬಂದ ತಕ್ಷಣವೆ ಇನ್ನು 3 ಕೋಟಿ ರೂಪಾಯಿ ಗಳನ್ನು ತಾತ್ವಿಕವಾಗಿ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಆ development ನ್ನು ನಾವು ಮಾಡಿಸುತ್ತೇವೆ. ಇಲ್ಲಿ ಹೆಚ್ಚಿನ ಮುಳುಗಡೆ ಮಾಡಬಾರದು ಎಂದು ಏನು ಒಂದು ಬೇಡಿಕೆಯನ್ನು ಇಟ್ಟಿದ್ದಾರೆ. ಇದು ನಮ್ಮ ಕೇಂದ್ರ ಜಲ ಆಯೋಗ 2009–10 revised estimation ಗೆ ನಾವು ಅನುಮತಿಯನ್ನು ಪಡೆದುಕೊಂಡಿದ್ದೇವೆ. ಇದರಿಂದ ನಮಗೆ AIBP ಯಿಂದ ಹೆಚ್ಚಿನ ಹಣಕಾಸು ಬರುತ್ತದೆ. ಈ ಯೋಜನೆಯನ್ನು ಈ ವರ್ಷ ಮುಗಿಸಬೇಕೆನ್ನುವಂತಹ ತೀರ್ಮಾನದಿಂದ ಆ ಒಂದು CWC ಯಿಂದ permission ನ್ನು ತೆಗೆದು ಕೊಂಡಿದ್ದೇವೆ. ಅದರಲ್ಲಿ ಏನು ನಮ್ಮ irrigation intensity ಇತ್ತು ಅದು ಹೆಚ್ಚಿಗೆ ಆಗಿದೆ. ಮತ್ತು ಹೆಚ್ಚಿನ 35,614 ಹೆಕ್ಟೇರ್‌ಗೆ ನೀರಾವರಿ ಮಾಡಬೇಕೆಂಬ ಉದ್ದೇಶವಿದೆ. ಮೊದಲು 29,227 ಆಗುತ್ತಿತ್ತು. ಆದ್ದರಿಂದ ಸ್ವಲ್ಪ ಹೆಚ್ಚಿನ ನೀರನ್ನು 2 ವರ್ಷದಿಂದ ಬಂದಿರುವಂತಹ ಹಿನ್ನೆಲೆಯಲ್ಲಿ ಮುಂದೆ ಮಳೆಗಾಲ ಹೆಚ್ಚಾದಾಗ ಅದರ ಪೂರ್ಣ ಲಾಭ ರೈತರಿಗೆ ಕೊಡಬೇಕೆನ್ನುವಂತಹ ದೃಷ್ಟಿಯಿಂದ ಈ ಸಾರಿ ಹೆಚ್ಚು ನೀರು ಬಂದಾಗ

ಯಾವ ಪ್ರದೇಶಗಳು ಮುಳುಗಡೆಯಾಗಿತ್ತು. ಆ ಸಂದರ್ಭದಲ್ಲಿ ನಾನು ಹೋದಾಗ ಅಲ್ಲಿ ಕೆಲವು ರೈತರು ಮುಳುಗಡೆಯಾಗಿದೆ, ನಮ್ಮ ಪೀಕ್ ಹೋಗಿದೆ ಅದಕ್ಕೆ ನಮಗೆ compensation ಕೊಡಿ ಎಂದು ಒಂದು ಕಡೆ ರೈತರು ಹೇಳುತ್ತಾರೆ. ಇನ್ನೊಂದು ಕಡೆ ನಮಗೆ land acquisition ಮಾಡಿ ನಮಗೆ ದುಡ್ಡನ್ನು ಕೊಡಿ, ಇಲ್ಲದೆಹೋದರೆ ನಮ್ಮ ಲ್ಯಾಂಡ್ ಮುಳುಗಡೆ ಯಾಗುತ್ತದೆ ಎನ್ನುವ ಭಯದಿಂದ ಆ ತರಹನು ಕೂಡ ಅವರು ಮಾತನಾಡಿದರು. ಆ ಒಂದು ಹಿನ್ನೆಲೆಯಲ್ಲಿ ಕೇಂದ್ರ ಜಲ ಆಯೋಗದ ನಿರ್ದೇಶನದಂತೆ ನಾವು ಸುಮಾರು ಮೊದಲು ಯೋಜನೆ ಪ್ರಕಾರ 15,726 ಆಗಬೇಕಾಗಿತ್ತು. 2005ರಲ್ಲಿ ನಮ್ಮ Principal Secretary, Irrigation ರವರು ಅಲ್ಲಿಗೆ ಹೋದಾಗ ಇಷ್ಟು ವರ್ಷದಿಂದ ನೀರು ಒಳಗೆ ಬಂದಿಲ್ಲ. ನೀವು ಏತಕ್ಕಾಗಿ ಹೆಚ್ಚಿನ ನೀವು acquisition ಮಾಡುತ್ತೀರಿ. ಅದರಿಂದ ಎಷ್ಟು ನೀರಿನ ಹರಿವು ಇದೆ ಅದನ್ನು ನೋಡಿಕೊಂಡು ಮಾಡಬೇಕೆನ್ನುವ ದೃಷ್ಟಿಯಿಂದ ಅದನ್ನು 14, 728ಕ್ಕೆ ಸೀಮಿತಗೊಳಿಸಿದರು. ಈಗ ಮತ್ತೆ ಅದನ್ನು ಪುನರ್ ಚಾಲನೆ ಕೊಟ್ಟಾಗ ಅದು ಸುಮಾರು 937 ಎಕರೆ ಅದು 14 ಊರುಗಳಿಗೆ ಅಂದಾಜು ಪಡೆದುಕೊಳ್ಳಬೇಕಾಗುತ್ತದೆ. ಇವತ್ತು ಒಂದು ಕಡೆ ನೀರಾವರಿ ಕ್ಷೇತ್ರವನ್ನು ಹೆಚ್ಚಿಗೆ ಮಾಡಬೇಕು ಬಂದಂತಹ ನೀರನ್ನು ಹಿಡಿದುಕೊಳ್ಳಬೇಕಾಗಿದೆ. ಆ ಯೋಜನೆಯನ್ನು ಸಂಪೂರ್ಣವಾಗಿ ಯಶಸ್ವಿ ಮಾಡಬೇಕಾಗಿದೆ. ಇದನ್ನು ಒಂದು ರೀತಿಯಿಂದ ನೋಡಿದಾಗ ರೈತರಿಗೆ ತೊಂದರೆಯಾಗುತ್ತದೆ. ಒಂದು ಸಾವಿರ ಎಕರೆಯನ್ನು ಈ ಸಂದರ್ಭದಲ್ಲಿ ತೆಗೆದುಕೊಂಡರೆ ತೊಂದರೆಯಾಗುತ್ತದೆ, ಅದು ನಿಜ, ಪದೇಪದೇ ಅದು ಮುಳುಗಡೆಯಾದರೆ ಅವರಿಗೆ ಏನು crop compensation ಪದೇಪದೇ ಕೇಳುತ್ತಾರೆ. ಅದನ್ನು ಸರ್ಕಾರವು ಕೊಡುವುದಕ್ಕೆ ಕಷ್ಟವಾಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು ಹೊಸ ದರದಲ್ಲಿ, ಈಗ ಆಧುನಿಕ ದರದಲ್ಲಿ ನಾವು ಅದನ್ನು ತೆಗೆದುಕೊಳ್ಳುತ್ತೇವೆ. ಯಾವಾಗ ನೀರು ಬರುತ್ತದೆ, ಆಗ ಅದು ಮುಳುಗಡೆಯಾಗುತ್ತದೆ, ಮಿಕ್ಕ ಸಂದರ್ಭದಲ್ಲಿ ಅದು ಅವರ ಕೈಯಲ್ಲಿಯೇ ಇರುತ್ತದೆ. ಇದು practical ಆಗಿ. ಆ ಹಿನ್ನೆಲೆಯಲ್ಲಿ ಈ ತರಹ ಬೇಕಾದಷ್ಟು ಉದಾಹರಣೆಗಳು ಬೇರೆ ಬೇರೆ ಯೋಜನೆಗಳು ಇವೆ. ನಾವು compensation ಕೊಟ್ಟು ಲ್ಯಾಂಡ್‌ನ್ನು ತೆಗೆದುಕೊಂಡರೂ ಕೂಡ ಆ ಒಂದು back waters ನಲ್ಲಿ ಮಳೆ ಕಡಿಮೆಯಾದಾಗ ರೈತರು ಬಳಕೆ ಮಾಡುತ್ತಾರೆ.

ನಾವು ಯಾವುದಕ್ಕೂ ಕೂಡ ಅವರಿಗೆ ತೊಂದರೆ ಮಾಡಿರುವುದಿಲ್ಲ. ನಮ್ಮ ಹಕ್ಕು ಇದ್ದರೂ ಕೂಡ ನಾವು ಅವರಿಗೆ ತೊಂದರೆಯನ್ನು ಮಾಡಿರುವುದಿಲ್ಲ. ಅಲ್ಲಿ ground reality ಯಲ್ಲಿ ನಿಜ ಸಂಗತಿಯಲ್ಲಿ ರೈತರಿಗೆ ತೊಂದರೆ ಯಾಗುವುದಿಲ್ಲ. ಯಾವಾಗ ನೀರು ಬರುತ್ತದೆಯೋ ಆಗ ಮುಳುಗಡೆ ಯಾಗುತ್ತದೆ. ಮುಳುಗಡೆಯಾಗದಿರುವಂತಹ ಸಂದರ್ಭದಲ್ಲಿಯೂ ಕೂಡ ಅವರು ಉಪಯೋಗಿಸಿಕೊಳ್ಳಬಹುದು. ಆದರೆ ಯೋಜನೆಯ ರೂಪದಲ್ಲಿ ನಾವು ಕೇಂದ್ರ ಜಲ ಆಯೋಗಕ್ಕೆ ಕೊಟ್ಟಿರುವಂತಹ ಹಿನ್ನೆಲೆಯಲ್ಲಿ ಅದು ನಮ್ಮ ಆಸ್ತಿಯಾದರೆ ನಮ್ಮ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ revised estimate ಮಾಡಿ ಅದನ್ನು ಪಡೆದುಕೊಂಡು ಅದರ ಲಾಭ ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಿಮಗೆ ನೀರನ್ನು ಹಿಡಿದುಕೊಳ್ಳುವುದಕ್ಕೆ ತೊಂದರೆಯಾಗಿದೆ, ಅಷ್ಟು ನೀರನ್ನು ಹಿಡಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಯಾರದರೂ ಪ್ರಶ್ನೆ ಮಾಡಿದರೆ ಕಷ್ಟವಾಗುತ್ತದೆ. ಆ ಹಿನ್ನೆಲೆಯಲ್ಲಿ ನಮ್ಮ ಅಧಿಕಾರಿಗಳು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ರೈತರಿಗೆ ಯಾವುದೇ ರೀತಿಯಿಂದಲೂ ತೊಂದರೆಯಾಗದಂತೆ ನಾವು ಕ್ರಮವನ್ನು ಜರುಗಿಸುತ್ತೇವೆ.

ಶ್ರೀ ಬಂಡೆಪ್ಪ ಕಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದರು, ಹೊಸ ರೀತಿಯಲ್ಲಿ ಚಾಲನೆಯನ್ನು ಕೊಟ್ಟಿದ್ದಾರೆ. ಸಚಿವರಿಗೆ ಗೊತ್ತಿದೆಯೋ ಇಲ್ಲವೋ ಹಿಂದೆ Central Government ನಿಂದ 200 ಕೋಟಿ ರೂಪಾಯಿಗಳ ಫಂಡ್ ಏನು ಬಂದಿತ್ತು, ಅದರಿಂದ ಮತ್ತೆ ಚಾಲನೆಯನ್ನು ಕೊಟ್ಟಿದ್ದಾರೆ. ಅವಾಗ ಇದು ಸಂಪೂರ್ಣವಾಗಿ ಮುಗಿದಿದೆ ಎಂದು ಹೇಳಿ ಸರ್ಕಾರ ಅವರಿಗೆ ಕೊಟ್ಟಿದ ಮೇಲೆ 50 ಕೋಟಿ ರೂಪಾಯಿ ಗಳು ವಾಪಸ್ಸು ಹೋಗಿದೆ. ಅದು ಆದ ಮೇಲೆ ಈಗ main ಏನು ಇದೆ. ಅಲ್ಲಿ ಕೆಲವು technical problem ಇದೆ., ಈ silt ಏನು ತುಂಬಿಕೊಳ್ಳುತ್ತಿದೆ. ಆ silt ಜಾಸ್ತಿ ತುಂಬುತ್ತಿದೆ. ಯಾವುದೇ ಒಂದು ಕ್ಷೇತ್ರದಲ್ಲಿ 13% ಸಿಲ್ಟ್ ತುಂಬಿದರೆ ಆ ಒಂದು ಕ್ಷೇತ್ರಕ್ಕೆ ಯೋಗ್ಯ. ಆದರೆ ಇದರ ಪ್ರಕಾರ 23% ಹೆಚ್ಚಿಗೆ ಸಿಲ್ಟ್ ಅಲ್ಲಿಂದ ಬರುತ್ತಿದೆ. ಅದು ವೈಜ್ಞಾನಿಕವಾಗಿಯೂ ಇಲ್ಲ. ಅದು unscientific ಆಗಿದೆ. ಹಾಗಾಗಿ ಇದರಿಂದ silt ತೆಗೆಯುವಂತಹ ಕೆಲಸವನ್ನು ತಾವು ಮಾಡಿದರೆ ಅಲ್ಲಿ ಹೊಸ ಜಮೀನುಗಳು ಹೋಗುವುದಿಲ್ಲ. ಮೊದಲು ಆ ಕೆಲಸವನ್ನು ನಾವು ಮಾಡಬೇಕು. ಇವತ್ತು ಬೀದರ್‌ನಲ್ಲಿ ಹೇಳುತ್ತಾರೆ.

ಏನೋ ನಮ್ಮ ಸುತ್ತಮುತ್ತಲಿರುವ ಜನರು ನಮ್ಮ ಮಣ್ಣನ್ನು ಹೊಡೆದು ಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಾರೆ. ಅದನ್ನು ಕೂಡ ಇವರು technically ಮಾಡುವುದಕ್ಕೆ ತಯಾರಿಲ್ಲ. ಇವರು ಏನು ಹೇಳಿದರು ಇವತ್ತು ರೈತರಿಗೆ ಹಣವನ್ನು ಕೊಟ್ಟುಬಿಡೋಣ, ಹಿಂದೆ ಇವರು 30000 ರೂ.ಗಳನ್ನು ಕೊಟ್ಟಿರುವುದಕ್ಕೆ ಬಹಳಷ್ಟು ಸಮಸ್ಯೆಯಿಂದ ಅವರು ಓಡಾಡುತ್ತಿದ್ದಾರೆ. ಅವರು ರೈತರಿಗೆ ಒಳ್ಳೆಯದಾಗುತ್ತಿದೆ ಎನ್ನುವಂತಹ ನಿಟ್ಟಿನಲ್ಲಿಯೇ ಕೊಟ್ಟಿದ್ದಾರೆ. ಇವತ್ತು ರೈತರಿಗೆ ಏನು ಸಿಕ್ಕಿದೆ? ಇವತ್ತು ಅವರು ಅಲ್ಲಿಂದ ಕೋರ್ಟಿಗೆ ಹಾಕಿ ಅವರು SLAO ಹತ್ತಿರ ಅಲ್ಲಿ 400 ಕೇಸುಗಳು ಪೆಂಡಿಂಗ್ ಇವೆ. ಇವತ್ತು 50 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿದೆ. ಆದರೆ ಇದುವರೆಗೂ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. Ex-gratia ಎಂದು ಹೇಳಿದರು. ನಾವು ಅದರ ರೂಪದಲ್ಲಿ ಕೊಡುತ್ತೇವೆಂದು ಸಚಿವರು ಹೇಳಿದರು. ಅದು 52 ಕೋಟಿ ರೂಪಾಯಿಗಳು ಪೆಂಡಿಂಗ್ ಇದೆ. ಇದರ ಬಗ್ಗೆ ಇವರು ಚಿಂತನೆಯನ್ನು ಮಾಡಿಲ್ಲ. ಮೂಲಭೂತ ಸೌಕರ್ಯಕ್ಕಾಗಿ 3 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದರು ಬಹಳ ಸಂತೋಷ. ಏಕೆಂದರೆ ಅವರು ಬಂದಾಗ ಅಲ್ಲಿ ಏನೇನು ಬೇಕಾಗುತ್ತದೆಂದು ಮಾನ್ಯ ಸಚಿವರು ಅಲ್ಲಿ ಸರ್ವೆಯನ್ನು ಮಾಡಿಸಿದ್ದರು. ಆದರೆ ಇವತ್ತು ಅವರು ಏನು ಹೇಳುತ್ತಿದ್ದರೆಂದರೆ, ಇವತ್ತು ರೈತರ ಭೂಮಿ ನಾವು ತೆಗೆದುಕೊಳ್ಳುತ್ತೇವೆ, ಜಮೀನಿಗೆ ನೀರು ಬಂದಾಗ ಬಿಡಲಿ, ನೀರು ಬರದೆ ಇದ್ದಾಗ ಅವರೆ ಮಾಡಲಿ, ಇದು ಅವರಿಗೆ ಗೊತ್ತಿದಿಯೋ ಇಲ್ಲವೋ ಇವತ್ತು ಒಂದು ಸಲ ಕರ್ನಾಟಕ ಸರ್ಕಾರವೆಂದು ಬಂದಾಗ ಅವರು ಯಾವುದರಲ್ಲಿ ಇರುತ್ತಾರೆ ಎಂಬುದು ತಮಗೆ ಗೊತ್ತಿದೆ. ಇದು ನಿಮ್ಮ ಕಡೆ ಆಗಬಹುದು ರೊಕ್ಕಕ್ಕೆ ರೊಕ್ಕ ತೆಗೆದುಕೊಂಡು ಇರಬಹುದು. ಆದರೆ ನಮ್ಮ ರೈತರು ನಮಗೆ ಬೇಡವೆ ಬೇಡ, ನಿಮ್ಮ ದುಡ್ಡು ಬೇಡ ನಿಮ್ಮ ಏನು ಬೇಡ ಎಂಬ ನಿಟ್ಟಿನಲ್ಲಿ ಎಂದು ಹೇಳುತ್ತಿದ್ದಾರೆ. ಏಕೆಂದರೆ, ಬೇಕಾದರೆ ತಾವು ಸರ್ವೇ ನಂಬರ್‌ನ್ನು ತರಿಸಿನೋಡಿ. ಅಲ್ಲಿ 2–3 ಎಕರೆಗಿಂತ ಹೆಚ್ಚಿಗೆ ಜಮೀನು ಯಾರದು ಇಲ್ಲ. ಅವರದೆ ಆದಂತಹ ಪಹಣಿಯಲ್ಲಿ ಹೆಸರನ್ನು ನೋಡಿಕೊಂಡು ಅವರುಗಳು ಸ್ವಾಭಿಮಾನದಿಂದ ತಮ್ಮ ಜಮೀನಿನಲ್ಲಿ ತಾವು ಉಳುಮೆ ಮಾಡುವುದಕ್ಕೆ ಆ ಒಂದು ಜಮೀನಿನ ಮೇಲೆ ಲೋನ್ ತೆಗೆದುಕೊಂಡು, ಬೇರೆ ಏನು ತೆಗೆದುಕೊಳ್ಳುವುದಾಗಲಿ ಒಂದು ಅವಕಾಶವನ್ನು

ಕೊಡುವಂತಹ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಬೇಕು. ಏಕೆಂದರೆ ಇದು ಬಹಳ ಗಂಭೀರವಾಗಿದೆ. ಇದನ್ನು ಇಷ್ಟು ಲೈಟ್ ಆಗಿ ಹೇಳುವುದನ್ನು ಸಚಿವರು ಮಾಡಬಾರದು ಎಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ರಾಜಶೇಖರ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ವರ್ಷದಲ್ಲಿ ಕಾಮಗಾರಿಗಳನ್ನು ಮುಗಿಸುತ್ತೇವೆ ಎಂದು ಹೇಳಿದರು, ಅದಕ್ಕೆ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಾಕಷ್ಟು ದಿನಗಳಿಂದ ನನೆಗುದಿಗೆ ಬಿದ್ದಿರುವಂತಹ ಕಾರಂಜ Project ಅನ್ನು ಬರತಕ್ಕ ವರ್ಷದಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ, ನಾನು ಒಂದು ಹೇಳುವುದೇನೆಂದರೆ 2008ರಲ್ಲಿ ಕೂಡ ನಾನು ಈ ಪ್ರಶ್ನೆಯನ್ನು ಇತ್ತಿದಾಗ ಮಾನ್ಯ ಸಚಿವರು ಹೇಳಿದರು, ಏನು back waters ನಿಂದ ನೀರು ನುಗ್ಗಿದೆ, ಆ ಜನರಿಗೆ ಬೇಕಾಗಿರುವ ಸವಲತ್ತುಗಳನ್ನು ನಾನು ಈಗಲೇ ಜಿಲ್ಲಾಧಿಕಾರಿಗಳಿಗೆ ಹೇಳಿ ಅದನ್ನು ಸರಿಪಡಿಸಿಕೊಡುತ್ತೇನೆಂದು ಹೇಳಿದರು. ಆದರೆ ಇನ್ನುವರೆಗೆ, 2008, 2009, 2010 ಬಂದರೂ ಕೂಡ ಆಗಿಲ್ಲ. ನನ್ನ ಕ್ಷೇತ್ರದಲ್ಲಿರುವಂತಹ ಆ ಭಾಗದ ಜನರು ತಾವು ಶಾಸಕರಾಗಿ ಏನು ಮಾಡುತ್ತಿದ್ದೀರಿ, ಅದು ಏಕೆ ಆಗಿಲ್ಲ, ನಾವು ಜನ ಸಾಯುತ್ತಿದ್ದೇವೆ, ಅಲ್ಲಿರುವಂತಹ ದಲಿತರು, ಮೈನಾರಿಟಿಗಳು, ಬ್ಯಾಕವಡ್ಸ್ ಅಲ್ಲಿರುವಂತಹ ಜನರಿಗೆ ತೊಂದರೆಯಾಗುತ್ತಿದೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಆದಷ್ಟು ಬೇಗನೆ ಅವರಿಗೆ ಏನು ಸೌಕರ್ಯಗಳು ಬೇಕು. ಅವರನ್ನು ಬೇರೆ ಕಡೆಗೆ ಶಿಫ್ಟ್ ಮಾಡಬೇಕು ಅಥವಾ backwater ಏನು ಆಗುತ್ತಿದೆ ಅದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಿಗೆ ಮನವಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಏನು ಈ silt ಬಗ್ಗೆ ಹೇಳಿದರು, ಜಲಾಶಯದಲ್ಲಿ ಸಂಗ್ರಹಿಸಬಹುದಾದ ಹೂಳಿನ ಸಂಗ್ರಹ ಕೇಂದ್ರ ಜಲ ಆಯೋಗದವರು sediment rate ಅನ್ನು study ಮಾಡಿದ್ದಾರೆ. 50 ಮತ್ತು 100 ವರ್ಷಗಳಲ್ಲಿ ಸಂಗ್ರಹವಾಗುವ ಹೂಳು 0.6 acre feet per sq.mile per year ಹಾಗೂ 1 acre feet sq.mile per year ಎಂದು ಕ್ರಮವಾಗಿ 1334.282 Cft. ಎಂದು ಲೆಕ್ಕಾಚಾರ ಮಾಡಿ draw down level ಮತ್ತು dead storage RL 575 m.m ಎಂದು ನಿರ್ಧರಿಸಿ, ಸ್ಲೂಸ್ ಮಟ್ಟವನ್ನು 575 ಎತ್ತರಕ್ಕೆ ಅಳವಡಿಸಿರುವುದರಿಂದ ನೀರಿನ ಸಂಗ್ರಹ ಮತ್ತು ಜಲಾಶಯದ

ನೀರಿನ ಮಟ್ಟ ಕಡಿಮೆ ಇರುತ್ತದೆ. ಇದು sediment study. ನಾನು ಇಬ್ಬರು ಸದಸ್ಯರ ಕಳಕಳಿಯನ್ನು ಕೇಳಿದ್ದೇನೆ. ನನ್ನ ಉದ್ದೇಶವಿಷ್ಟೆ ಆ ಯೋಜನೆಯ ಪೂರ್ತಿ ಲಾಭ ಆ ಭಾಗದ ಜನರಿಗೆ ಸಿಗಬೇಕು.

ಇವತ್ತು ನಾನು ಇಬ್ಬರು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ನನ್ನ ಉದ್ದೇಶ ಇಷ್ಟೇ. ಈ ಯೋಜನೆಯಿಂದ ಪೂರ್ಣವಾದ ಲಾಭ ಆ ಭಾಗದ ಅಂದರೆ ಬೀದರ್, ಹುಮ್ನಾಬಾದ್ ಭಾಗದ ರೈತರಿಗೆ ಉಪಯುಕ್ತ ಆಗಬೇಕೆಂಬ ಕಳಕಳಿ ನಮಗೆ ಇದೆ, ನನಗೆ ಹೊಸದಾಗಿ ರೈತರ ಜಮೀನನ್ನು ಅನಾವಶ್ಯಕವಾಗಿ ವಶಪಡಿಸಿಕೊಳ್ಳುವಂಥ ಉದ್ದೇಶ ನನಗೆ ಇಲ್ಲ. ಪೂರ್ಣವಾಗಿ ಬಳಸಿಕೊಳ್ಳಲು ತಾಂತ್ರಿಕ ಸಲಹೆ ಅವಶ್ಯಕವಿದೆಯೆಂದು ನಾನು ಹೇಳುತ್ತಿದ್ದೇನೆ. ಈ ವರ್ಷದ inflow yield ಇರುವಂಥ ಮಾಹಿತಿ ಈಗ ಮಳೆಗಾಲದಲ್ಲಿ 658.15 ಮೀಟರ್‌ವರೆಗೆ ನೀರು ಸಂಗ್ರಹವಾಗಿತ್ತು. ಆ ಎಲ್ಲಾ ಮಾಹಿತಿಯನ್ನು ತಮ್ಮ ಮುಂದೆ ಇಡಲಿಕ್ಕೆ ನಾನು ತಯಾರಿದ್ದೇನೆ. ಆ ಭಾಗದ ಎಲ್ಲಾ ಸದಸ್ಯರ ಹಾಗೂ ಅಧಿಕಾರಿಗಳನ್ನು ಕರೆಸಿ ಸಭೆಯನ್ನು ಮಾಡಿ ಎಲ್ಲಾ ದಾಖಲೆಗಳ ಮೇಲೆ ತೀರ್ಮಾನವನ್ನು ಮಾಡಬೇಕಾಗುತ್ತದೆ. ಅಲ್ಲಿಯವರೆಗೆ ಯಾವುದೇ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ಈ ಭೂಸ್ವಾಧೀನ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ಅದನ್ನು ನಿಲ್ಲಿಸಿ ಮುಖ್ಯವಾಗಿ ಎಲ್ಲರೂ ಶಾಸಕರನ್ನು, ರೈತರನ್ನು ಕರೆಸಿ ಸಭೆ ನಡೆಸಿ ಆ ನಂತರ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ತಾತ್ಕಾಲಿಕವಾಗಿ ಸ್ಥಗಿತ ಮಾಡುತ್ತೇವೆಂದು ಹೇಳಿದ್ದೇನೆ. ಚರ್ಚೆ ಮಾಡಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ವಿತ್ತೀಯ ಕಾರ್ಯಕಲಾಪದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮುಂದುವರೆಸಿ.

6. ವಿತ್ತೀಯ ಕಾರ್ಯಕಲಾಪ :

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ :

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನು ನಿನ್ನೆ 2010–11ರ ಮುಂಗಡ ಪತ್ರದ ಮೇಲೆ ಚರ್ಚೆ ಪ್ರಾರಂಭ ಮಾಡಿ ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ನಿನ್ನೆ ಬೆಳಿಗ್ಗೆ Performance Report ಕೊಡಬೇಕೆಂದು ಹೇಳಿ ಒತ್ತಾಯ ಮಾಡುತ್ತಿದ್ದೇನೆ. ಮೊದಲಿನಿಂದಲೂ ಸರ್ಕಾರ ಅದನ್ನು ಮಾಡಬೇಕು. Performance Report ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಆ ಅಭ್ಯಾಸ ತಪ್ಪಿಹೋಗಿದೆ. Demands ಮೇಲೆ ಚರ್ಚೆ ಮಾಡುವಾಗ ಕೊಡುತ್ತೇವೆಂದು ಹೇಳುವುದು, Administrative Report. ಹಿಂದೆ ಎಲ್ಲಾ ಇಲಾಖೆಗಳ ಬಗ್ಗೆ, ಬೇಡಿಕೆಗಳ ಮೇಲೆ, ಅನುದಾನಗಳ ಮೇಲೆ ಚರ್ಚೆ ಮಾಡುವಾಗ Administrative Report ಎಂದು ಕೊಡುತ್ತಾರೆ. ಆದರೆ ಬಜೆಟ್ ಮಂಡಿಸುವಾಗ consolidated, comprehensive, performance Budget ಇರಬೇಕಾಗುತ್ತದೆ. ಎಷ್ಟು ಟಾರ್ಗೆಟ್ ಇತ್ತು? ಅದರಲ್ಲಿ ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಅಲೋಕೇಷನ್ ಮಾಡಿಕೊಂಡಿದ್ದಾರೆ? ಎಷ್ಟು ಹಣ ಬಿಡುಗಡೆ ಆಯಿತು? ಎಷ್ಟು ಖರ್ಚು ಆಯಿತು? ಗುರಿಗಳೇನು? ಈ ಗುರಿಗಳ ಸಾಧನೆ ಎಷ್ಟಾಗಿದೆ? ಅದರಲ್ಲಿ Quality Expenditure ಯಾವ ರೀತಿ ಆಗಿದೆ? Quality Expenditure Commission ಮಾಡಿದ್ದಾರೆ. ಅದು ಯಾವ ರೀತಿ Quality expenditure ಆಗಿದೆ? ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಆಯವ್ಯಯ ನಿರ್ವಹಣಾ ಬಜೆಟ್ ಎಂದು ಇಲ್ಲಿ ಮಂಡಿಸಬೇಕು. ಅದನ್ನು ಇವರು ಮರೆತೇ ಬಿಟ್ಟಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಸಚಿವರು) : Performance Report ಇಡಬೇಕೆಂದು ಹೇಳಿದ್ದು ನಾನು ಕೇಳಿಸಿ ಕೊಂಡಿದ್ದೇನೆ. ಯಾವುದೇ ಹಣವನ್ನು ಬಜೆಟ್ ಮಾಡುವಾಗ ಬಜೆಟ್ ಮಂಡಿಸುತ್ತಾರೆ. Demand wise ಆಯ್ಯಾಯ demand wise, subject wise ಮಾಡುವಾಗ performance Budget ನೀಡುವುದು ಪದ್ಧತಿ. ಹಾಗಾಗಿ demand-wise ಮಾಡುವಾಗ ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, Administrative Report ಬಜೆಟ್ ಮೇಲೆ ಮಾಡುತ್ತೇವೆಂದು ಸುರೇಶ್‌ಕುಮಾರ್‌ರವರು ಹೇಳಿದರು. ನಿರ್ವಹಣಾ ಮುಂಗಡ ಪತ್ರ 2009–10 ಎಂದು ಮಾಡಿದ್ದಾರೆ. ಇದು ಪ್ರತಿ ಇಲಾಖೆಯ ಮೇಲೆ ಮಾಡುವಂತಹದ್ದು. Entire budget ಮೇಲೆ ನಮಗೆ ಮುಂದಿನ ವರ್ಷದ ಬಜೆಟ್ ಮೇಲೆ ಮಾತನಾಡುವಾಗ ಈ current fiscal yearನಲ್ಲಿ ಏನಿದೆ ಎಂದು ಗೊತ್ತಾಗಬೇಕು. ಈ ಚಿತ್ರ ಇಲ್ಲದೇ ಮುಂದಿನ ವರ್ಷದ ಮೇಲೆ ಮಾತನಾಡುವುದು ಕಷ್ಟದ ಕೆಲಸ. ಈ ಕಾರಣಕ್ಕೋಸ್ಕರ ಈ ವರ್ಷದ Performance budget ಇಟ್ಟರೆ ಮುಂದಿನ ವರ್ಷದ ಮುಂಗಡ ಪತ್ರದ ಮೇಲೆ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಇದು ಅರ್ಥಪೂರ್ಣ ಹಾಗು ಪರಿಣಾಮಕಾರಿಯಗುತ್ತದೆ. ಈ ಕಾರಣದಿಂದ Performance Budget ಇರಬೇಕು. ಹಿಂದೆ Performance Budget ಮಂಡಿಸಿರುವ ಉದಾಹರಣೆಗಳು ಇವೆ. ನಾನು date ಮರೆತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ನನಗೆ ತಿಳಿದಿರುವ ಮಟ್ಟಿಗೆ Demand wise ಚರ್ಚೆ ಮಾಡುವಾಗ Performance Report ಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಈಗಲೂ ಬೇಡಿಕೆಗಳ ಬಗ್ಗೆ ಚರ್ಚೆ ಆಗುತ್ತದೆ. ಈಗ ನಾನು ಎಲ್ಲಾ ನೋಡಿದೆ, ಒಂದು Action taken report ಎಂದು ಕೊಟ್ಟಿದ್ದಾರೆ. Instead of that Performance budget ಮೇಲೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. Action taken report ನೋಡಿದೆ. ಯಾವ ಇಲಾಖೆಗಳಿಗೂ ಕೂಡ ಶೇಕಡ 40 ಕ್ಕಿಂತ ಹೆಚ್ಚು ಹಣ ಬಿಡುಗಡೆ ಆಗಿದೆಯಾ? ಹಣ ಬಿಡುಗಡೆ ಆಗಿದ್ದರೂ ಖರ್ಚು ಆಗಿಲ್ಲ. ನಾನು ನೋಡಿದ್ದೇನೆ, ಇಲ್ಲಿ Action taken report ಕೊಟ್ಟಿದ್ದಾರೆ. ಇದರಲ್ಲಿ ಏನೂ ಇಲ್ಲ. ಈಗ for instance ಈ ವರ್ಷ Financial year ನಲ್ಲಿ ನೀರಾವರಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ? ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದರು? ಪೆಂಡಿಂಗ್ ಬಿಲ್ಸ್ ಎಷ್ಟು ಇದೆ?

ಶ್ರೀ ಎಸ್. ಸುರೇಶ್‌ಕುಮಾರ್ : ನನಗೆ ತಿಳಿದಿರುವ ಮಟ್ಟಿಗೆ Action Taken Reportನಲ್ಲಿ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಏನು ಘೋಷಣೆ ಮಾಡಿದ್ದಾರೆ. ಈ ಘೋಷಣೆಗಳನ್ನು ಎಷ್ಟರ ಮಟ್ಟಿಗೆ implement ಮಾಡಿದ್ದಾರೆ ಎನ್ನುವುದು Action Taken Report. There is

a difference between Action Taken Report and the Performance Budget.

ಶ್ರೀ ಸಿದ್ಧರಾಮಯ್ಯ : ನಾನು ನಿಮಗೆ details ಹೇಳಿ ಎಂದು ಹೇಳಲಿಲ್ಲ. ಹಿಂದಿನ ವರ್ಷ Plan ನಲ್ಲಿ ನೀರಾವರಿಗೆ 3,900 ಕೋಟಿ ರೂಪಾಯಿಗಳು ಇಟ್ಟಿದ್ದಾರೆಂದು ಹೇಳಿದ್ದಾರೆ. ಈ 3900 ಕೋಟಿ ರೂಪಾಯಿಗಳಲ್ಲಿ ಎಷ್ಟು ಬಿಡುಗಡೆ ಮಾಡಿದ್ದಾರೆ? ಮಾರ್ಚ್ ತಿಂಗಳಿನವರೆಗೆ ಎಷ್ಟು ಖರ್ಚು ಆಗುತ್ತದೆ? ಉಳಿಕೆ ಹಣ ಖರ್ಚು ಆಗಿಲ್ಲವೆಂದರೆ ಏಕೆ ಖರ್ಚು ಮಾಡಿಲ್ಲವೆಂದು ಹೇಳಬೇಕು. ಮುಂದಿನ ವರ್ಷಕ್ಕೆ 4,400 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡಲಾಗಿದೆಯೆಂದು ಹೇಳಿದ್ದಾರೆ. ಈ ವರ್ಷ ನನಗೆ ಗೊತ್ತಿರುವ ಹಾಗೆ ಡಿಸೆಂಬರ್‌ವರೆಗೆ 1000 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದರಲ್ಲಿ Governor's Address ನಲ್ಲಿ ನೋಡಿದಾಗ 1000 ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ. 3900 ಕೋಟಿ ರೂಪಾಯಿಗಳ ಮೂರು ತಿಂಗಳಲ್ಲಿ 2900 ಕೋಟಿ ರೂಪಾಯಿಗಳಾಗಬೇಕು ಅಲ್ಲವೇ? ಅಷ್ಟು ಆಗುತ್ತದೋ ಇಲ್ಲವೋ ಮಾರ್ಚ್ ಒಳಗೆ ಎಷ್ಟಾಗುತ್ತದೆಂದು ನಮಗೆ ಗೊತ್ತಾಗಬೇಕು ಅಲ್ಲವೇ? ಈಗ ನೀವು ಒಂದು ಅಂದಾಜಿನ ಮೇಲೆ ಹೇಳಿದ್ದೀರಿ, ಇಪ್ಪತ್ತೊಂಬತ್ತುವರೆ ಸಾವಿರ ಕೋಟಿ ರೂಪಾಯಿಗಳು Plan ನಲ್ಲಿದೆ. 24000 ಕೋಟಿ ರೂಪಾಯಿಗಳವರೆಗೆ ಖರ್ಚಾಗಬಹುದೆಂದು ಹೇಳಿದ್ದಾರೆ.

What is the basis for that? ನಂತರ ಬಜೆಟ್‌ನಲ್ಲಿ ಹೇಳಿರತಕ್ಕಂಥ budget estimates, revised estimates ಎಂದು ಮಾಡಿಕೊಂಡಿದ್ದೀರಿ. Budget ಆದ ಮೇಲೆ revised estimates ಎಂದು ಮಾಡಿಕೊಂಡಿದ್ದೀರಿ. ಆ budgeted estimates ಗೂ revised estimates ಗೂ ಸುಮಾರು 3,500 ಸಾವಿರ ಕೋಟಿ ರೂಪಾಯಿ Tax ಕಡಿಮೆಯಾಗುತ್ತದೆ. ನೀವು budget estimatesನಲ್ಲಿ ಎಷ್ಟು ತೆರಿಗೆ ಬರುತ್ತದೆಂದು ಲೆಕ್ಕ ಹಾಕಿದ್ದೀರಿ, ಅದಕ್ಕೂ ಮತ್ತೆ ನೀವು revised estimates ಮಾಡಿಕೊಂಡಿದ್ದಕ್ಕೂ 3,500 ಸಾವಿರ ಕೋಟಿ ಕಡಿಮೆಯಾಗುತ್ತದೆಂದು ಹೇಳುತ್ತೀರಿ. ಆಮೇಲೆ actual receipts ಎಷ್ಟು ಇದೆ ಎಂಬುದು ನಿಮಗೂ ಗೊತ್ತಿರುವುದಿಲ್ಲ. ಲೆಕ್ಕ ಹಾಕಿದ ಮೇಲೆ account ಆದ ಮೇಲೆ ಗೊತ್ತಾಗುವುದು. ಈ 3,500 ಸಾವಿರ ಕೋಟಿ

ರೂಪಾಯಿ tax ಬರಲೇ ಇಲ್ಲ. ನೀವು ಎಷ್ಟು impractical ಆಗಿ tax receipts ಲೆಕ್ಕ ಹಾಕಿಕೊಳ್ಳುತ್ತೀರೆಂದರೆ, estimated receipts, ಭೂಮಿ ಮಾರಾಟ ಮಾಡುವುದರಿಂದ 2008-09 ರಲ್ಲಿ 3,000 ಸಾವಿರ ಕೋಟಿ ಬರುತ್ತದೆಂದು ಲೆಕ್ಕ ಹಾಕಿದಿರಿ. ಅಲ್ಲಿ ಬಂದಿದ್ದು 150 ಕೋಟಿನೋ 180 ಕೋಟಿನೋ ಬಂತು. ನಂತರ ಈ ವರ್ಷದ financial years ನಲ್ಲಿ 1900 ಕೋಟಿ ಭೂಮಿಯಿಂದ ಬರುತ್ತದೆಂದು ಲೆಕ್ಕ ಹಾಕಿದಿರಿ. ಆದರೆ, ಇದರಲ್ಲಿ 40 ಕೋಟಿನೂ ಬರುವುದಿಲ್ಲ, 40 ಕೋಟಿ ಎಂದು revised estimated ನಲ್ಲಿ ತೋರಿಸಿಕೊಂಡಿದ್ದೀರಿ. ಮುಂದಿನ ವರ್ಷಕ್ಕೆ 2900 ಕೋಟಿ ಎಂದು ಲೆಕ್ಕ ಹಾಕಿದಿರಿ. ಇದರಲ್ಲಿ ಏನಾದರೂ ಅರ್ಥವಿದೆಯೇ? ಪ್ರತಿ ವರ್ಷ ಏಕೆ ಈ ರೀತಿ ಇಲ್ಲಿ budget book ನಲ್ಲಿ ಈ ತರಹ figures ಕೊಡುವುದಕ್ಕೆ ಶುರು ಮಾಡಿದಿರಿ? ಏನಾದರೂ ಸತ್ಯಕ್ಕಾದರೂ ಹತ್ತಿರ ಇರಬೇಕು ಅಲ್ಲವೆ? At list ನಮ್ಮ ಅನುಭವಕ್ಕೆ ಬಂದ ಹಾಗೆ ಕಳೆದ ವರ್ಷ ಈ ತರಹ ಅನುಭವವಾಗಿದೆ. ಮುಂದಿನ ವರ್ಷ ಈ ತರಹ ಆಗಬಹುದು. ಅದರ ಮುಂದಿನ ವರ್ಷ ಈ ತರಹ ಆಗಬಹುದು ಎನ್ನುವ ಲೆಕ್ಕಚಾರ ಇರಬೇಕಲ್ಲವೆ? ಇದೇನು ಕುರುಡರ ಪಾಠವೆ? ಅದಕ್ಕೆ ನಾನೇನು ಹೇಳುತ್ತೇನೆಂದರೆ, budget sanctity ಯನ್ನೇ ಹಾಳು ಮಾಡಿದಿರಿ. ನೀವು ಬಂದ ಮೇಲೆ budget sanctity ಹಾಳಾಗಿ ಹೋಯಿತು. ಆ ಆಯವ್ಯಯದ ಪಾವಿತ್ರ್ಯತೆ ಏನು ಇತ್ತು ಅದನ್ನು ಮಾನ್ಯ ಯಡಿಯೂರಪ್ಪನವರು ಹಾಳು ಮಾಡಿದರು. ನಿಮಗೆ estimated figure ಗಳಿಗೂ ವಾಸ್ತವಿಕವಾದಂಥ figure ಗಳಿಗೂ ಅಜಗಜಾಂತರ ವ್ಯತ್ಯಾಸ ಇದೆ. Finance Department ನವರು ಏನು ಲೆಕ್ಕ ಹಾಕುತ್ತಾರೆ? ಕಳೆದ ವರ್ಷ ಮತ್ತು ಈ ವರ್ಷ ಎಲ್ಲದಕ್ಕೂ economic slow down ಎನ್ನುವ ಒಂದೇ ಒಂದು ರಾಗ. ಹಾಗಾದರೆ ಕೇಂದ್ರ ಸರ್ಕಾರದಿಂದ ಬರುವ ತೆರಿಗೆಯ ಪಾಲು ಬಹಳ ಕಡಿಮೆಯಾಗಬೇಕಲ್ಲವೆ? ಬಹಳ Drastic ಆಗಿ ಕಡಿಮೆಯಾಗ ಬೇಕಲ್ಲವೆ? ದೇಶದಲ್ಲಿ ಜಾಸ್ತಿ slow down ಆಗಬೇಕು, ಮತ್ತೆ ನಮ್ಮ grants ಕೇಂದ್ರ ಸರ್ಕಾರದಿಂದ ಬರುವ ನಮ್ಮ ತೆರಿಗೆ ಪಾಲು ಜಾಸ್ತಿಯೇ ಬಂದಿದೆ. ಅದು ಹೇಗೆ ಬಂತು?

ಶ್ರೀ ಸುರೇಶ್‌ಕುಮಾರ್ : ತಮಗೆ ಗೊತ್ತಿರುವ ಹಾಗೆ economic slow down ಆಗಿದೆ, recession ಆಗಿದೆ ಎನ್ನುವ ವಿಚಾರದಲ್ಲಿ ಯಾರು ಕೂಡ deny ಮಾಡುವುದಕ್ಕಾಗುವುದಿಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ : ಹಾಗಾದರೆ ತೆರಿಗೆಯ ಪಾಲು ಕಡಿಮೆ ಯಾಗಬೇಕು ಅಲ್ಲವೆ?

ಶ್ರೀ ಸುರೇಶ್ ಕುಮಾರ್ : ಅದು ಬೇರೆ ಪ್ರಶ್ನೆ deny ಮಾಡುವುದಕ್ಕೆ ಆಗುವುದಿಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ : deny ಮಾಡುವುದಕ್ಕೆ ಆಗುವುದಿಲ್ಲ. ರಾಜ್ಯದ ಮೇಲೆ ಏನು ಪರಿಣಾಮವಾಗಿದೆ ಎಂಬುದು ಮುಖ್ಯ.

ಶ್ರೀ ಸುರೇಶ್‌ಕುಮಾರ್ : ರಾಜ್ಯದ ಮೇಲೆ. ನಮಗೆ ಸಂಗ್ರಹವಾಗಿ ರುವುದನ್ನು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ನೋಡಿ ಸಲ ಜಾಸ್ತಿ ತೆಗೆದುಕೊಳ್ಳುತ್ತಿದೀರಿ, economic slow down ಆಗಿದೆ ಎಂದು ಕಡಿಮೆ ಸಾಲ ತೆಗೆದು ಕೊಂಡಿದ್ದೀರಾ? ಅದಕ್ಕೆ ನಿಮಗೆ 3% fiscal deficit ಇರುವುದನ್ನು ಹೋದ ವರ್ಷ 3.5% ಗೆ ಮಾಡಿಕೊಳ್ಳಿ, 3.5 % ರಿಂದ ಈ ವರ್ಷ 4% ಗೆ ಮಾಡಿಕೊಳ್ಳಿ, ನಾನು ನಿನ್ನೆ ಓದಿದೆ. ನೀವು ಕೇಳಿಸಿಕೊಂಡಿರೋ ಇಲ್ಲವೋ ಗೊತ್ತಿಲ್ಲ. ಇನ್ನೊಂದು ಸಾರಿ ಓದಬೇಕೆ? ನಿಮಗೆ ಗೊತ್ತಾಗಬೇಕು, ಏಕೆಂದರೆ ನೀವು defend ಮಾಡುತ್ತಿದ್ದೀರಲ್ಲಾ ಅದಕ್ಕೆ ಬೇಕಾದರೆ ಓದು ಎಂದರೆ ಓದುತ್ತೇನೆ.

ಶ್ರೀ ಸುರೇಶ್ ಕುಮಾರ್ : ಬೇಡ ಬಿಡಿ. ನಿನ್ನೆ ಹೇಳಿರುವ ಕೆಲವು points ಗಳನ್ನು ಇವತ್ತು ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಯಾವುದು ಹೇಳಿದೆ. sanctity ಹಾಳಾಗಿ ಹೋಯಿತು ಎಂದು ಪದೇ ಪದೇ ಹೇಳದಿದ್ದರೆ ನಿಮ್ಮ ತಲೆಗೆ ಹೋಗಬೇಕಲ್ಲವೆ? Sanctity ಹಾಳಾಗಿ ಹೋಯಿತು, sanctity ಹಾಳಾಗಿ ಹೋಯಿತು ಎಂದು ಹೇಳಬೇಕು ಅಲ್ಲವೆ? ಈಗ sales tax revenue, ಅದರಿಂದ ಹಾಳಾಗಿ ಹೋಯಿತು, ಇದರಿಂದ ಹಾಳಾಗಿ ಹೋಯಿತು ಎಂದು ಹೇಳುವುದು ಬೇಡ. ನಿಮಗೆ 10% growth, natural growth ಇರುತ್ತದೆ. ಮಾನ್ಯ ಸುರೇಶ್‌ಕುಮಾರ್‌ರವರೆ ತಾವು ಸ್ವಲ್ಪ ಈ ಕಡೆಗೆ ಗಮನ ಕೊಡಿ.

2003-04 ರಲ್ಲಿ growth rate 22.49%, 2004-05 ರಲ್ಲಿ 30.05% ಇತ್ತು ಆಗ ನಾನು ಹಣಕಾಸಿನ ಮಂತ್ರಿಯಾಗಿದ್ದೆ. 2005-06 ರಲ್ಲಿ 14.19% ಕಡಿಮೆಯಾಯಿತು, ಆಗ ಯಾರು ಇದ್ದರು? ಆಗ ನಾನು ಇರಲಿಲ್ಲ. ಮಾನ್ಯ ಸಿಂಧ್ಯಾರವರು ಸ್ವಲ್ಪ ದಿವಸ ಇದ್ದರು, ನಾನು ಏಪ್ರಿಲ್-ಮೇ ಎರಡು ತಿಂಗಳು ಇದ್ದೆ. ಆ ಮೇಲೆ 2006-07 ರಲ್ಲಿ 19.42% ಇತ್ತು ಆಗ ಸ್ವಲ್ಪ ಹೆಚ್ಚಾಯಿತು. 2007-08 ರಲ್ಲಿ 13.4% ಇತ್ತು. 2008-09 ರಲ್ಲಿ 7% ಇತ್ತು. 2009-10 ರಲ್ಲಿ 5% ಇತ್ತು. ಎಲ್ಲದಕ್ಕೂ slow down ಎನ್ನುವ ಒಂದೇ ರಾಗವೆ?

SRI. SURESH KUMAR : That is one of the region.

ಶ್ರೀ ಸಿದ್ಧರಾಮಯ್ಯ : ಮತ್ತೆ ಈ ರೀತಿಯಾಗಿ ಏಕೆ drastic decline? That means to say, ನೀವು ತೆರಿಗೆ ವಸೂಲು ಮಾಡುವುದನ್ನು ಕಟ್ಟುನಿಟ್ಟಾಗಿ ವಸೂಲು ಮಾಡಿಲ್ಲ. That is the region. ಅದು ಒಂದು ಕಾರಣ ಎಂದು ಒಪ್ಪಿಕೊಳ್ಳಬೇಕಲ್ಲವೆ? ಬರಿ economic sl;ow down ಒಂದೇ ಕಾರಣ ಅಲ್ಲ. ತೆರಿಗೆ ವಸೂಲು ಮಾಡುವುದರಲ್ಲೂ ಕೂಡ ಸರಿಯಾಗಿ ಮಾಡಿಲ್ಲ. ನಾನು ಇರುವಾಗ 2001-02 ನೇ ಇಸವಿಯಲ್ಲಿ 5820 ಕೋಟಿ Fiscal deficit. Percent wise to the GDP 5.2% How it has been reduced to 1.9%? ನಮ್ಮ ರಾಜ್ಯದ ಸ್ವಂತ ತೆರಿಗೆಗಳನ್ನು ಹೆಚ್ಚು ಮಾಡಿದೆವು, ಕೇಂದ್ರ ಸರ್ಕಾರದಿಂದ incentive ಬಂತು, ನಮ್ಮ ತೆರಿಗೆ 30% growth ಆಯಿತು, 2005-06 ರಲ್ಲಿ ನಾವೇನು Fiscal Responsibility Act ಪ್ರಕಾರ target reach ಆಗಬೇಕಾಗಿತ್ತು, ಅದಕ್ಕೆ ಒಂದು ವರ್ಷ ಮುಂಚಿತವಾಗಿಯೇ reach ಆಯಿತು. ನೀವು ಎಲ್ಲದಕ್ಕೂ ಅದನ್ನೇ ಹೇಳುವುದಕ್ಕೆ ಆಗುವುದಿಲ್ಲ. ಏಕೆ expenditure ಆಯಿತು, fiscal deficit ಎಲ್ಲಾ ಜಾಸ್ತಿ ಆಯಿತು ಎಂದು ಕೇಳಿದರೆ, ಇಲ್ಲಾ ದುಡ್ಡೆನ್ನಲ್ಲಾ ಪ್ರವಾಹಕ್ಕೆ ಖರ್ಚು ಮಾಡಿದೆವು ಎಂದು ಇನ್ನೊಂದು ಕಡೆ ತಾವು ಹೇಳುತ್ತೀರಿ. ಪ್ರವಾಹಕ್ಕೆ ನಿಮ್ಮ ಕೈಯಿಂದ ಏನಾದರೂ ಒಂದು ರೂಪಾಯಿ ಖರ್ಚು ಮಾಡಿದ್ದೀರಾ? ಏನು ಮಾಡಿದಿರಿ? ನಿಮ್ಮ ಹತ್ತಿರ ಕೇಂದ್ರ ಸರ್ಕಾರ ಕೊಟ್ಟಿರುವ ದುಡ್ಡೆ ಇನ್ನು ಉಳಿದುಕೊಂಡಿದೆ. ಅದರಲ್ಲಿ ಏಕೆ ಹಾಗೆ ಬರೆದಿದ್ದೀರಿ? Medium cum Fiscal Plan ನಲ್ಲಿ ಎರಡು ಮೂರು ಕಾರಣಗಳಿವೆ. During the year a significant amount of additional

expenditure over the amount budgeted was incurred for socal security pensions and enhanced subsidy for the Public Distribution System. In addition, during the current year the expenditure was incurred for the relief and rehabilitation efforts for the victims of the floods that hit the Northern districts of the State. Is it a fact? Is there any truth in that? Where is the money you have spent from your treasury?

(4-30 PM)

ಎಲ್ಲಿದೆ ಎಂಬುದನ್ನು ತೋರಿಸಿ. ಎಷ್ಟು ಖರ್ಚು ಮಾಡಿದ್ದಾರೆಂಬುದಕ್ಕೆ ಇವೆಲ್ಲಾ ಕಾರಣಗಳು. 1,733 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಂದಿದೆ. ಮತ್ತು ನೀವೇ ಹೇಳಿರುವ ಪ್ರಕಾರ Public contribution ನಿಂದ 341 ಕೋಟಿ ರೂ. ಬಂದಿದೆ. ಅಲ್ಲದೆ, ನೌಕರರೂ ಸಹ ಕೊಟ್ಟಿದ್ದಾರೆ. ಆದರೆ, ಇವತ್ತಿನವರೆಗೂ ಒಂದು ಮನೆಯನ್ನೂ ಕಟ್ಟಿಲ್ಲ. ಮಾತಾ ಅಮೃತಾನಂದಮಯಿ (ಅಮ್ಮ) ಯವರು 100 ಮನೆಗಳನ್ನು ಕಟ್ಟಿದ್ದಾರೆಂದು ಸಚಿವರಾದ ಕರುಣಾಕರರೆಡ್ಡಿಯವರು ಉತ್ತರ ಕೊಟ್ಟಿದ್ದಾರೆ. ಆ ನೂರು ಮನೆಗಳು ಕಟ್ಟಿರುವುದನ್ನು ಬಿಟ್ಟರೆ, ಇವರು ಒಂದು ರೂ. ಸಹ ಖರ್ಚು ಮಾಡಿಲ್ಲ. ಇವರು ಬೆಳೆ ನಷ್ಟಕ್ಕೇನಾದರೂ ಕೊಟ್ಟಿದ್ದಾರೆಯೇ? ಬಿದ್ದು ಹೋಗಿರುವ ಮನೆಗಳಿಗೆ ಹಣ ಕೊಟ್ಟಿದ್ದಾರೆಯೇ? ಇನ್ಯಾವುದಕ್ಕೆ ಕೊಟ್ಟಿದ್ದೀರಿ? 305 ಹಳ್ಳಿಗಳಿಗೆ site formationಗೆ ಕೊಟ್ಟಿದ್ದೀರಾ? ಇಲ್ಲ. ನೀವು NREGSನ ಹಣ ಖರ್ಚು ಮಾಡಿದ್ದೀರಿ. Site formationಗೆ, ರಸ್ತೆಗಳನ್ನು ನಿರ್ಮಿಸುವುದಕ್ಕೆ ಮತ್ತು relief worksಗೆ ಕೊಟ್ಟಿದ್ದೀರಾ? ಮತ್ತೇಕೆ ಇಲ್ಲಿ ಬರೆದಿದ್ದೀರಿ? ಇದನ್ನು ನಾವು ಏನೆಂದು ತಿಳಿದುಕೊಳ್ಳಬೇಕು? Medium Fiscal Plan ನಲ್ಲಿ ಏಕೆ ಈ ರೀತಿ ಬರೆದಿದ್ದೀರಿ? ಅದರರ್ಥ, ನೀವು ಇವತ್ತಿನವರೆಗೆ ಮಾನ್ಯ ಯಡಿಯೂರಪ್ಪನವರು ಹಣಕಾಸು ಮಂತ್ರಿಯಾದ ನಂತರ ನಾನು ಗಂಭೀರವಾಗಿ ಹೇಳುತ್ತಿದ್ದೇನೆ: ತೆರಿಗೆಯನ್ನು ಬಿಗಿಯಾಗಿ ವಸೂಲು ಮಾಡುವುದು ನಿಂತು ಹೋಯಿತು. I am seriously saying that Tax base ಹೆಚ್ಚು ಮಾಡುವುದು ಆಗಲಿಲ್ಲ. ಸೋರಿ ಹೋಗುವುದನ್ನು ತಪ್ಪಿಸಲಿಲ್ಲ.

ಒಂದು ಕಡೆ, expenditure ಅನ್ನು cut down ಮಾಡುವುದಕ್ಕೆ austerity measure ಮಾಡಿಕೊಂಡಿದ್ದೇವೆಂದು ಹೇಳುತ್ತೀರಿ. ಕೃಷ್ಣದೇವ ರಾಯನ 500ನೇ ವರ್ಷಧ ಪಟ್ಟಾಭಿಷೇಕ ಮಹೋತ್ಸವದ ಸಮಾರಂಭಕ್ಕೆ 28 ಕೋಟಿ ಖರ್ಚು ಮಾಡಿದ್ದೇವೆಂದು ನೀವೇ ಉತ್ತರ ಕೊಟ್ಟಿದ್ದೀರಿ. ಆದರೆ, ಪತ್ರಿಕೆಯಲ್ಲಿ 70 ಕೋಟಿ ರೂ.ಗಳೆಂದು ವರದಿಯಾಗಿತ್ತು.

ಒಬ್ಬ ಮಾನ್ಯ ಸದಸ್ಯರು : ಇನ್ನೂ ಜಾಸ್ತಿ ಖರ್ಚಾಗಿದೆ.

ಶ್ರೀ ಸಿದ್ದರಾಮಯ್ಯ : ಈ ಕುರಿತಂತೆ ಒಬ್ಬರು MLC ಯವರು ಕೇಳಿದ್ದಕ್ಕೆ ಉತ್ತರ ಕೊಟ್ಟಿರುವುದನ್ನು ನಾನು ಹೇಳುತ್ತಿದ್ದೇನೆ. ಎಷ್ಟು ಖರ್ಚು ಮಾಡಿದ್ದಾರೆಂದರೆ, 28 ಕೋಟಿ 9 ಲಕ್ಷ 92,400 ರೂ.ಗಳು ಇದನ್ನು austerity measure ಎಂದು ಕರೆಯಬೇಕೇ? I want to know. ಇದಕ್ಕೆಲ್ಲಾ ನಾವು ಅಪ್ರೂವಲ್ ಕೊಡಬೇಕಲ್ಲ! ಆದರೆ, ಇದು austerity measure ನಲ್ಲಿ ಬರುವುದಿಲ್ಲ. ಒಂದು ಕಡೆ ದುಂದು ವೆಚ್ಚ ಮಾಡುತ್ತೀರಿ. ಇನ್ನೊಂದು ಕಡೆ austerity measure ಎಂದು ಹೇಳುತ್ತೀರಿ. I do not think, it is any austerity measure. ಮತ್ತೊಂದು ಕಡೆ ಕುಡಿಯುವ ನೀರು ಒದಗಿಸುವ ದುಡ್ಡಿಲ್ಲ. ಇವತ್ತು ಕುಡಿಯುವ ನೀರು ಒದಗಿಸಿಕೊಡಲು ನಿಮ್ಮ ಬಳಿ ಯಾವುದಾದರೂ ದುಡ್ಡು ಇದೆಯೇ? ನೀರು ಕೊಡುವುದಕ್ಕೆ ದುಡ್ಡಿಲ್ಲ. ಆ ದುಡ್ಡನ್ನಾದರೂ ಕೊಡಬಹುದಿತ್ತಲ್ಲ. ಎಲ್ಲಾ ಜಿಲ್ಲೆಗಳಿಗೂ 1-1 ಕೋಟಿ ರೂ. ಕೊಟ್ಟು ತಕ್ಷಣವೇ ಬೋರ್‌ವೆಲ್‌ಗಳನ್ನು ಕೊರೆಸಿ ಎಂದು ಹೇಳಬಹುದಿತ್ತಲ್ಲವೇ? ನೀವು ಯಾವ austerity measure ಮಾಡುವುದು? ಕಾರುಗಳನ್ನು ಕೊಳ್ಳುವುದು, ಫ್ಲೈಟ್‌ನಲ್ಲಿ ತಿರುಗಾಡುವುದು. ನಾನು ಹಿಂದಿನ ಎಲ್ಲಾ ಮುಖ್ಯಮಂತ್ರಿಗಳನ್ನೂ ನೋಡಿದ್ದೇನೆ. ಇಷ್ಟು ಪ್ರಮಾಣದಲ್ಲಿ ಹೆಲಿಕಾಪ್ಟರ್‌ನಲ್ಲಿ ಓಡಾಡಿದಂತಹ ಮುಖ್ಯಮಂತ್ರಿಯನ್ನು ನಾನು ನೋಡಲಿಲ್ಲ. ಹೆಲಿಕಾಪ್ಟರ್‌ನಲ್ಲಿ ಓಡಾಡುವುದಕ್ಕೆ ಎಷ್ಟು ಹಣ ಖರ್ಚು ಮಾಡಿರಬೇಕು? ಎಷ್ಟು ಖರ್ಚು ಮಾಡಿದ್ದಾರೆಂಬ ಬಗ್ಗೆ ಲೆಕ್ಕ ಕೊಡಬೇಕು.

(ಈ ಹಂತದಲ್ಲಿ ಛೇರ್ಮನ್‌ರಾದ ಶ್ರೀ ಅಪ್ಪಾಜಿ ಎಸ್. ನಾಡಗೌಡರವರು ಪೀಠವನ್ನು ಅಲಂಕರಿಸಿದರು)

ಇದು necessary ಎಂತಾದರೂ ಅಂದು ಕೊಳ್ಳಬೇಕಲ್ಲ. ಇದು austerity measure ಅಲ್ಲ. ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಹೋಗುತ್ತಾರಲ್ಲ, ಅದು austerity measure ಆಗುತ್ತದೆಯೇ? ಕೃಷ್ಣದೇವರಾಯನ 500ನೇ ವರ್ಷದ ಪಟ್ಟಾಭಿಷೇಕದ ಮಹೋತ್ಸವಕ್ಕೆ 28 ಕೋಟಿ ಖರ್ಚು ಮಾಡುತ್ತಾರಲ್ಲ, ಇದು austerity measure ಆಗುತ್ತದೆಯೇ? ದೆಹಲಿಯಲ್ಲಿ ಕರ್ನಾಟಕ ಭವನಕ್ಕೆ ಬಹಳ ಕಾರುಗಳನ್ನು ಕೊಳ್ಳುತ್ತಾರೆ, ಅದು austerity measure ಆಗುತ್ತದೆಯೇ? ನೀವು ಯಾವುದನ್ನು austerity measure ಎಂದು ಮಾಡಿಕೊಂಡಿದ್ದೀರಿ? Wasteful expenditure ಅನ್ನು cut down ಮಾಡುವುದಕ್ಕೆ ಏನೇನು ಮಾಡಿದ್ದೀರಿ ಎಂಬುದರ ಪಟ್ಟಿಯನ್ನು ಕೊಡಲಿ. ಮತ್ತೆ ಸಾಲ ಬೇರೆ ಇದೆ. ಒಂದು ಕಡೆ ತೆರಿಗೆ ವಸೂಲು ಮಾಡುವಂತಿಲ್ಲ. ಇನ್ನೊಂದು ಕಡೆ, wasteful expenditure cut down ಮಾಡುವುದಿಲ್ಲ. ಹಾಗಾದರೆ, ನೀವು ಸಾಲ ಮಾಡದೇ ಇನ್ನೇನು ಮಾಡುತ್ತೀರಿ? Revenue surplus ಎಲ್ಲಿ ಬರುತ್ತದೆ? If you don't have much revenue surplus, there will be no money for the capital asset creation, ನಾನು ಹೇಳಿದೆನಲ್ಲ, ಮುಂದಿನ ವರ್ಷಕ್ಕೆ 10,128 ಕೋಟಿ ಅಸಲು ಮತ್ತು ಬಡ್ಡಿ ಹಣ ಪಾವತಿಸಬೇಕಾಗಿರುತ್ತದೆ. 6,316 ಕೋಟಿ ಬಡ್ಡಿ ಹಣ ಮತ್ತು 3,000 ಕೋಟಿ ಚಿಲ್ಲರೆ ಅಸಲು ಪಾವತಿಸುವುದು. ಒಟ್ಟು 10,028 ಕೋಟಿ ರೂ. 2005-06ರಲ್ಲಿ 56,000 ಕೋಟಿ ರೂ. ಸಾಲ ಇತ್ತು. ಆಗ debt stock ಇತ್ತು. Today, it is 82,510 Crores. It is estimated and it was more than that. The total GDP estimated for this fiscal year is 2,98,000. What about the percentage of it? ಇವರ ಪ್ರಕಾರ GDP percentage more than 28% ಆಗುತ್ತದೆ. ಇದನ್ನು fiscal prudent measure ಎಂದು ಕರೆಯುತ್ತೀರಾ? Fiscal term ನಲ್ಲಿ fiscal prudent measure ಎನ್ನುತ್ತಾರೆ. ಹಣಕಾಸಿನ ಮ್ಯಾನೇಜ್ ಮೆಂಟ್‌ನಲ್ಲಿ ಬಹಳ indiscipline ಇದೆಯೆಂದರೆ, 'ಅವರ ನಾಲಿಗೆಯನ್ನು ಸೀಳಿರಿ' ಎಂದು ಹೇಳುತ್ತಾರೆ! Does this not amount to financial indiscipline? ಹೇಳಿ ನೋಡೋಣ.

ಅಧ್ಯಕ್ಷರೆ, ನಿಮಗೆ ಸುಮ್ಮನೆ ಕೆಲವೊಂದನ್ನು ಮಾತ್ರ ಹೇಳುತ್ತೇನೆ, ಇಲ್ಲಿ ಬಹಳಷ್ಟು ಇದೆ. 2001-02 ರಲ್ಲಿ 5,200 ಕೋಟಿ ರೂ.ಗಳಷ್ಟು revenue deficit ಇತ್ತು. ನಂತರ, 2004-05ಕ್ಕೆ 1,600 ಕೋಟಿ ರೂ. fiscal revenue surplus ಆಯಿತು. 2005-06ಕ್ಕೆ revenue surplus 2,311 ಕೋಟಿ ರೂ., 2006-07ಕ್ಕೆ 4,152 ಕೋಟಿ ರೂ.. ಅಂದರೆ, revenue expenditure ಅನ್ನು meet ಮಾಡಿ ಅಭಿವೃದ್ಧಿ ಕೆಲಸಗಳಿಗೆ 4,152 ಕೋಟಿ ರೂ.ಗಳು. The revenue surplus in the year 2006-07, Rs.4,552 crores. ಇದರಲ್ಲಿ revenue expenditure ಕಳೆದ asset creation ಗೋಸ್ಕರ capital side ನಲ್ಲಿ expenditure ಮಾಡುವುದಕ್ಕೆ, Social sector, economic sector ನಲ್ಲಿ ಹಣ ಖರ್ಚು ಮಾಡುವುದಕ್ಕೆ ಇಷ್ಟು ಹಣ ಉಳಿಯುತ್ತಿತ್ತು. ಆದರೆ, ಈ ವರ್ಷ 538 ಕೋಟಿ ರೂ. ಉಳಿದುಕೊಂಡಿದೆ ಎಂದು ಹೇಳುತ್ತಾರೆ. 4,152 ಕೋಟಿ ರೂ.ಗಳಲ್ಲಿ it is slowly coming down to 538 crore for the year 2009-10ಕ್ಕೆ 538 ಕೋಟಿ. Unless, ಈ ಕುರಿತ ಅಕೌಂಟ್ಸ್ ಆಗುವವರೆಗೆ ಇದ್ಯಾವುದೂ correct figures ಅಲ್ಲ. Tax buoyancy ಹೇಗಾಗುತ್ತದೆ ಎಂದರೆ 2% ಗಿಂತ ಜಾಸ್ತಿ ಇತ್ತು, ಅದು ಕ್ರಮೇಣ 0.4% ಗೆ ಬಂದು ನಿಂತಿದೆ. All these factors clearly show that there is a clear case mismanagement of finance. What more evidence is required? ಒಂದು ಕಡೆ ಸಾಲ ಜಾಸ್ತಿಯಾಯಿತು, ಮುಂದಿನ ವರ್ಷಕ್ಕೆ 94 ಸಾವಿರ ಕೋಟಿ ರೂಪಾಯಿ ಸಾಲವಾಗುತ್ತದೆಂದು ಹೇಳಿಕೊಂಡಿದ್ದಾರೆ. GDP 3 ಲಕ್ಷದ 28 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಅಮೇಲೆ 94 ಸಾವಿರ ಕೋಟಿ ರೂಪಾಯಿ ಸಾಲ ಆಗುತ್ತದೆ. ಅಂದರೆ ಎಷ್ಟು percent ಆಗುತ್ತದೆ? Out of 3 lakh 28 thousand crore. It will be about 29%. What is the recommendation made by the 13th Finance Commission? Fiscal Deficit ಈ ವರ್ಷಕ್ಕೆ 3.77% ಆಗಬಹುದು. ಮುಂದಿನ ವರ್ಷಕ್ಕೆ We will bring it down to 2.96% ಎಂದು ಹೇಳುತ್ತಾರೆ. I don't know whether we should believe it or not about the Fiscal performance of this year? Fiscal performance ನೋಡಿದರೆ next year ಇದನ್ನೆಲ್ಲ ಮಾಡುತ್ತಾರೆಂದು

ಅನ್ನಿಸುವುದಿಲ್ಲ. Again ಅದೇ ಕಥೆ. ಈ ವರ್ಷ ಏನು ಕಥೆ ಇದೆ ಮುಂದಿನ ವರ್ಷವೂ ಅದೇ ಕಥೆ ಇರುತ್ತದೆ. ಏಕೆಂದರೆ, ಮುಂದಿನ ವರ್ಷಕ್ಕೆ Internal borrowings and NCDC ಯಿಂದ Government of India ದಿಂದ ಬೇರೆ ಬೇರೆ public accounts ನಿಂದ ಈ ವರ್ಷಕ್ಕಿಂತ 12 ಸಾವಿರ ಕೋಟಿ ರೂ. ಗಳಿಗಿಂತ ಜಾಸ್ತಿ ಸಾಲ ತೆಗೆದುಕೊಳ್ಳುತ್ತಾರೆ. Securities ಅಡ ಇಟ್ಟು ತೆಗೆದುಕೊಂಡ 7 ಸಾವಿರ ಕೋಟಿ ರೂಪಾಯಿ ಹಣ ಏನಾಯಿತು? ಅದನ್ನು ಖರ್ಚು ಮಾಡಿದ್ದಾರೆಯೇ? ಅದನ್ನೂ expenditure side ಗೆ ತೋರಿಸಿ ಬಿಟ್ಟಿದ್ದಾರೆ. ನನಗೆ ಇರುವ information ಪ್ರಕಾರ that 7 thousand crores of Rupees kept in the Reserve Bank of India. ಬಡ್ಡಿ ಜಾಸ್ತಿ ಕೊಟ್ಟು ತೆಗೆದುಕೊಂಡು ಕಡಿಮೆ ಹಣ ಬರುವ ಕಡೆ ಇಟ್ಟಿದ್ದಾರೆ. Beautiful ಆಗಿ manage ಮಾಡಿದ್ದಾರೆ. ಈ ತರಹ ನನಗೆ information ಇದೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಏನು ಮಾಡಿದ್ದಾರೆಂಬ ಬಗ್ಗೆ ಹೇಳಬೇಕು. ಆಮೇಲೆ ಕೇಂದ್ರ ಸರ್ಕಾರದವರು stimulus package ನಲ್ಲಿ ಕೊಟ್ಟು ಹಣವನ್ನು ಏನು ಮಾಡಿದರು ಎಂದು ಹೇಳಬೇಕು. ಇದನ್ನೆಲ್ಲ ನಾನು ಏಕೆ ಹೇಳುತ್ತಿದ್ದೇನೆಂದರೆ ಯಾವುದೋ ಒಂದು discipline ಅನ್ನು maintain ಮಾಡಬೇಕಾಗಿತ್ತು. ಆ discipline ಎಲ್ಲ ಹೋಗಿ indiscipline ಕಡೆ ಹೊರಟಿದ್ದಾರೆ. 1998–99, 1999–2000, 2001–2002 ರಲ್ಲಿ ಏನು ಪರಿಸ್ಥಿತಿ ಇತ್ತು ಆ ಪರಿಸ್ಥಿತಿ ಕಡೆಗೆ ಮತ್ತೆ ಹೊರಟ್ಟಿದ್ದಾರೆ. ಮತ್ತೆ we will reach a point at year. ಮತ್ತೆ ಸಾಲ ತೆಗೆದುಕೊಂಡು Revenue Expenditure ಕೊಡಬೇಕಾದ ಪರಿಸ್ಥಿತಿಗೆ ಬರುತ್ತದೆ. If the same trend is continued same type of fiscal situation is continued. ಆ ಮೇಲೆ ತೆರಿಗೆ ಕಡಿಮೆಯಾಯಿತು ಎಂದು ಹೇಳುತ್ತಾರೆ. ಇವರು ಕಳೆದ ವರ್ಷ 4.5% GDP ಇತ್ತು ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದ GDP 6.7% ಇದ್ದಾಗ ಇವರ GDP 4.5% ಇತ್ತು. ಈಗ ಕೇಂದ್ರ ಸರ್ಕಾರದ GDP 7.2%, 7.5% ಇರುವಾಗ ಈ fiscal year ನಲ್ಲಿ ಅಂದರೆ current year ನಲ್ಲಿ 5.5% ಗೆ ಹೋಗಿದ್ದೇವೆಂದು ಹೇಳಿದ್ದಾರೆ. ಆದಾಯ ಜಾಸ್ತಿಯಾದ ಮೇಲೆ tax ಜಾಸ್ತಿಯಾಗಬೇಕಲ್ಲವೇ? GDP zero percent ಗೆ ಹೋಗಿದೆ, Economy

slow down ಗೆ ಹೋಗಿದೆ, Tax ಎಲ್ಲ ಬಿದ್ದು ಹೋಯಿತು ಎಂದು ಹೇಳುತ್ತಾರೆ. ಆದರೆ, ನಮಗೆ Sales Tax ನಿಂದಲೇ ನಮಗೆ ಹೆಚ್ಚು ಆದಾಯ ಬರುವುದು. ಆಮೇಲೆ Diesel and petrol ಬೆಲೆಯಲ್ಲಿ ಹೆಚ್ಚಳವಾಗಿದೆ. ಅದರ ಮೇಲೆ tax ಇರುವುದು. ಇವರು ಎಲ್ಲದಕ್ಕೂ ಕಾರಣ ಹೇಳುತ್ತಾ economic slow down ಆಗಿದೆ ಎನ್ನುವ ಕಾರಣ ಹೇಳುತ್ತಾರೆ. Totally not correct. May be it is one of the contributing factor, ಆದರೆ ಇದು ಒಂದೇ ಅಲ್ಲ, There are other factors also. The other factors that try to mention in this medium term fiscal plan. ಇದರಲ್ಲಿ ಕೆಲವೆಲ್ಲ ಸತ್ಯಕ್ಕೆ ದೂರವಾದದ್ದು ಇದೆ. ಇದನ್ನು ಇವರು ನೇರವಾಗಿ ಒಪ್ಪಿಕೊಳ್ಳಬೇಕು. ಏನೆಂದರೆ, ನಾವು ತೆರಿಗೆ ವಸೂಲಿ ಮಾಡಿಲ್ಲ, ಸೋರಿ ಹೋಗುವುದನ್ನು ತಪ್ಪಿಸುವುದಕ್ಕೆ ಹೋಗಿಲ್ಲ. ಅನೇಕ ಕಡೆಗಳಲ್ಲಿ ದೂರುಗಳಿವೆ, ನನಗೂ ಬಂದು ಹೇಳುತ್ತಾರೆ. Input claim ಜಾಸ್ತಿ ಮಾಡಿಕೊಂಡಿದ್ದಾರೆ, verification ಜಾಸ್ತಿ ಮಾಡಿಲ್ಲ, vigilance ಕಡಿಮೆಯಾಗಿದೆ, Transfer ಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ, ಅಧಿಕಾರಿಗಳು ಯಾರೂ ಇವರ ಮಾತು ಕೇಳುತ್ತಿಲ್ಲ, ತೆರಿಗೆ ವಸೂಲಿ ಮಾಡುವುದಿಲ್ಲ, transfer ನಲ್ಲಿ ಜಾತಿ ಜಾಸ್ತಿಯಾಗಿದೆ, ಅಂಥವರನ್ನೆಲ್ಲ ಆಯಕಟ್ಟಿನ ಜಾಗದಲ್ಲಿ ನೇಮಿಸುತ್ತಾರೆ. Inefficient officers ಅನ್ನು ನೇಮಿಸುತ್ತಾರೆ. ಹಣ ಹೊಡೆಯುವವರನ್ನು ನೇಮಿಸುವುದು, ಏಕೆಂದರೆ, ಹಣ ಕೊಟ್ಟು transfer ಮಾಡಿಸಿಕೊಂಡು ಬಂದಿರುತ್ತಾರೆ, ಮತ್ತೆ ಹೇಗೆ ಅವರು ತೆರಿಗೆ ವಸೂಲಿ ಮಾಡಿಕೊಡುತ್ತಾರೆ? ಈ ಸರ್ಕಾರದವರು ಈಗೇನೋ transfer policy ಮಾಡುತ್ತೇವೆಂದು ಹೇಳುತ್ತಿದ್ದಾರೆ, ನೋಡೋಣ. 2–3–6 ತಿಂಗಳುಗಳಿಗೆ transfer ಆಗುತ್ತಾರೆ. ಒಬ್ಬ ನೌಕರ ಒಂದು ಜಾಗದಲ್ಲಿ ಎಷ್ಟು ದಿನ ಇರುತ್ತೇನೆಂದು ಅವನಿಗೇ gurantee ಇರುವುದಿಲ್ಲ, ಅದಕ್ಕೋಸ್ಕರ ಎಷ್ಟು ಬೇಗ ಜಾಸ್ತಿ ಹಣ ಹೊಡೆಯಬೇಕೋ ಅಷ್ಟು ಬೇಗ ಹೊಡೆಯುತ್ತಾನೆ. Commercial Tax ನಲ್ಲಿ honest ಆಗಿರುವವರಿಗೆ, efficient ಆಗಿರುವವರನ್ನು ಆಯಕಟ್ಟಿನ ಜಾಗಗಳಿಗೆ ನೇಮಿಸದಿದ್ದರೆ ತೆರಿಗೆ ವಸೂಲಿ ಆಗುತ್ತದೆ? ನಿಮ್ಮ traget ಪ್ರಕಾರ ಅಷ್ಟು ತೆರಿಗೆ ಹೇಗೆ ವಸೂಲಿ ಆಗುತ್ತದೆ? Inefficient, corrupt, ನಮ್ಮ

ಜಾತಿಯವನು, ಅವನು ಇವನು ಎಂದು ನೇಮಿಸಿದರೆ ತೆರಿಗೆ ಎಲ್ಲಿಂದ ಬರುತ್ತದೆ? There are good and honest officers ಅಂಥವರನ್ನು Vigilance ನಲ್ಲಿ Intelligence ನಲ್ಲಿ tax collect ಮಾಡುವುದಕ್ಕೆ ಇವರು ನೇಮಿಸುವುದಿಲ್ಲ. ಮತ್ತೆ ಹೇಗೆ tax ವಸೂಲಿ ಆಗುತ್ತದೆ? Compliance ಹೇಗೆ ಇರುತ್ತದೆ? ಹಾಗಾಗಿ. ಎಷ್ಟು ವಸೂಲಿ ಆಗಬೇಕಾಗಿತ್ತೋ ಅಷ್ಟು ತೆರಿಗೆ ವಸೂಲಿ ಆಗುತ್ತಿಲ್ಲ. ಏಕೆಂದರೆ, ನಾನು ನಿಮಗೆ ನಿನ್ನೆಯೂ ಹೇಳಿದ್ದೆ, ಇವತ್ತೂ ಹೇಳುತ್ತೇನೆ, inflation ಇರುತ್ತದೆ, What is the current inflation rate? ಅಷ್ಟು ಹೆಚ್ಚಾಗಬೇಕಲ್ಲವೇ? ಅದು minus ಆಗುತ್ತದೆಯೇ? Commercial tax has own tax minus growth ಇದೆ. ಆಮೇಲೆ ಮುಖ್ಯಮಂತ್ರಿಯವರು ಕಳೆದ ವರ್ಷಕ್ಕೆ ಹೋಲಿಕೆ ಮಾಡಿ I am very very happy that financial position is very sound ಎಂದು ಹೇಳಿದರು. What is your target for this year? What is the achievement? What is the realization? Why there is a shortfall? ಇದನ್ನು ಹೇಳುವ ಹಾಗೆಯೇ ಇಲ್ಲ. ನಾವು ಇದನ್ನು ಹೇಳಿದರೆ Siddaramaiah is misleading the public ಎಂದು ಹೇಳುತ್ತಾರೆ. Who is misleading?

State Taxes 2007–08ರಲ್ಲಿ, ಇದು account ಆಗಿರುವುದು, 31875 ಕೋಟಿ ರೂ.ಗಳಾಗಿದ್ದರೆ, 2008–09ಕ್ಕೆ 28764 ಕೋಟಿ ರೂ.ಗಳಾಗಿದೆ. 2009–10ಕ್ಕೆ 32000 ಕೋಟಿ ರೂ.ಗಳು, Revised Estimate ನಲ್ಲಿ ಅದು 29000 ಕೋಟಿ ರೂ.ಗಳಾಗಿದೆ. Excise ವೊಂದನ್ನು ಬಿಟ್ಟರೆ, Commercial taxes ನಲ್ಲಿ minus growth ಇದೆ, Stamps and Registration ನಲ್ಲಿ ಕೂಡ minus growth ಇದೆ. Stamps and Registration ನಲ್ಲಿ ಏಕೆ ಕಡಿಮೆಯಾಗಿದೆ ಎನ್ನುವುದಕ್ಕೆ ಏನು ಹೇಳುತ್ತಾರೆಂದರೆ, 'ನಾವು ಏಳೂವರೆ ಪರ್ಸೆಂಟ್ ಇರುವುದನ್ನು ಆರೂವರೆ ಪರ್ಸೆಂಟ್ ಮಾಡಿಬಿಟ್ಟೆವು' ಅದಕ್ಕೆ ಕಡಿಮೆಯಾಯಿತು ಎಂದು ಹೇಳುತ್ತಾರೆ. The general opinion is, ನಾವು tax rate ಸ್ವಲ್ಪ ಕಡಿಮೆ ಮಾಡಿದರೆ, compliance ಜಾಸ್ತಿ ಇರುತ್ತದೆ. ತೆರಿಗೆ ಕೊಡುವವರು ಹೆಚ್ಚು ಕೊಡುತ್ತಾರೆ, ಸ್ವಲ್ಪ ಸೋರಿ ಹೋಗುವುದು ಕಡಿಮೆಯಾಗುತ್ತದೆ, ಕದಿಯುವವರು

ಕಡಿಮೆಯಾಗುತ್ತಾರೆ. ತೆರಿಗೆ ಕಡಿಮೆಯಾಗುತ್ತದೆ ಎನ್ನುವುದಾದರೆ, ಏಕೆ ಕಡಿಮೆ ಮಾಡಿದಿರಿ? So, that is not a ground. ಅದು ನಿಜವಾದಂತಹ ಕಾರಣ ಅಲ್ಲವೇ ಅಲ್ಲ. ನಮ್ಮ ಅನುಭವದಲ್ಲಿ ತೆರಿಗೆ ರೇಟ್ ಕಡಿಮೆಯಾದರೆ compliance ಚೆನ್ನಾಗಿರುತ್ತದೆ. ಅದು ಇವರಿಗೆ ನಾಳೆ ಗೊತ್ತಾಗುತ್ತದೆ. I am not going to demand. ಈಗ ಸಿಗರೇಟ್‌ಗೆ ಹನ್ನೆರಡೂವರೆ ಪರ್ಸೆಂಟ್ ನಿಂದ VAT rate ಅನ್ನು ಹದಿನೈದಕ್ಕೆ ಮಾಡಿದ್ದೀರಿ. ಈಗ ಬರುತ್ತಿರುವುದಕ್ಕಿಂತ ಜಾಸ್ತಿ ಬರುತ್ತದೋ, ಕಡಿಮೆ ಬರುತ್ತದೋ, ನಂತರ ನೋಡೋಣ ಹೇಳಿ. What is the rate in the neighbouring states? ಅದಕ್ಕಿಂತ ಜಾಸ್ತಿ ಮಾಡಿದ್ದಾರಾ? ಅದು ಪಲಾಯನ ಆಗುವುದಿಲ್ಲವೇ? ಕಡಿಮೆ ಇರುವ ಕಡೆಯಿಂದ ತೆಗೆದುಕೊಂಡು ಬಂದು ಮಾರುತ್ತಾರೆ. ನಿಮ್ಮ ಹತ್ತಿರ ಏಕೆ ಅವರು ತೆಗೆದುಕೊಳ್ಳುತ್ತಾರೆ? ಸಿಗರೇಟ್ ಸೇದುವವರಿಗೆ ಕಡಿಮೆ ಮಾಡಿ ಎಂದು ನಾನು ಹೇಳುತ್ತಿಲ್ಲ. My point is, ಹನ್ನೆರಡೂವರೆಯಿಂದ ಹದಿನೈದು ಪರ್ಸೆಂಟ್‌ಗೆ ಮಾಡಿದರೆ ಹೇಗೆ? ಇದರ ಜೊತೆಗೆ entry tax ಬೇರೆ ಇದೆ. ಆ Entry Tax ನಾಲ್ಕು ಪರ್ಸೆಂಟೋ, ಎಷ್ಟೋ ಇರಬೇಕು. ಹಾಗಾದರೆ ಒಟ್ಟು ತೆರಿಗೆ ಎಷ್ಟಾಯಿತು? ಜನ ತೆರಿಗೆ ಸರಿಯಾಗಿ ಕೊಡುತ್ತಾರೆಯೇ? ಜನ ತೆರಿಗೆ ಕದಿಯುತ್ತಾರೆ. ಇದು ನೀವು ಹೇಳುವುದಕ್ಕೆ ಚೆನ್ನಾಗಿರಬಹುದು. ಸಿಗರೇಟ್ ಸೇದುವುದನ್ನು ಕಡಿಮೆ ಮಾಡುವುದಕ್ಕೋಸ್ಕರ ಇದನ್ನು ಮಾಡಿದ್ದೇವೆಂದು ಹೇಳುವುದಕ್ಕೆ ಚೆನ್ನಾಗಿರಬಹುದು. But, what about realization of taxes? No, you can't get. ತಮಿಳುನಾಡಿನಲ್ಲಿ ಕಡಿಮೆ, ಮಹಾರಾಷ್ಟ್ರದಲ್ಲಿ ಕಡಿಮೆ, ಆಂಧ್ರದಲ್ಲಿ ಕಡಿಮೆ, ಕೇರಳದಲ್ಲಿ ಕಡಿಮೆ ಇರುವಾಗ ನಿಮಗ್ಯಾಕೆ ಇಲ್ಲಿ ಹೆಚ್ಚು ಕೊಡುತ್ತಾರೆ? ಅದು ಒಂದೇ ಸಲಕ್ಕೆ ಅಷ್ಟೊಂದು ಹೆಚ್ಚು ಮಾಡಿದ್ದಾರೆ. ಏನೋ ಒಂದು ಪರ್ಸೆಂಟ್ ಹೆಚ್ಚಾಗಿದ್ದರೆ, I can understand. 12½% ನಿಂದ 15% ಗೆ ಏರಿಸಿದ್ದೀರಿ. Plus Entry Tax ಕೂಡ ಇದೆ. ಹೇಗೆ ಅವೈಜ್ಞಾನಿಕವಾಗಿ ಮಾಡುತ್ತಾರೆ ಎನ್ನುವುದಕ್ಕೆ ಇದನ್ನು ಉದಾಹರಣೆಯಾಗಿ ಕೊಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಮುಂದಿನ ವರ್ಷಕ್ಕೆ ನಾವು GSTಗೆ ಹೋಗುತ್ತೇವೆಂದು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. 1.4.2011 ರಿಂದ Goods and Service Tax introduce ಮಾಡುತ್ತೇವೆ, implement ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಕೇಂದ್ರದ ಬಜೆಟ್‌ನಲ್ಲೂ ಕೂಡ ಈ

ಬಗ್ಗೆ ಹೇಳಿದ್ದಾರೆ. ಅದಕ್ಕೆ empowered committee ಯಲ್ಲಿ Finance Minister ಗಳೆಲ್ಲಾ ಚರ್ಚೆಯನ್ನೂ ಸಹ ಮಾಡಿದ್ದಾರೆ. ನೀವು ಅದಕ್ಕೆ ತಯಾರಾಗಿರಬೇಕು. ಆದರೆ ಈ ರೀತಿ ಇದ್ದಕ್ಕಿದ್ದ ಹಾಗೆ, 4% ನಿಂದ 5% ಗೆ, $12^{1/2}$% ನಿಂದ $13^{1/2}$%ಗೆ ಏಕೆ ಹೆಚ್ಚು ಮಾಡಿದಿರಿ? What will be the effect of it? ತೆರಿಗೆಯನ್ನೂ ಸರಿಯಾಗಿ ವಸೂಲು ಮಾಡುವುದಿಲ್ಲ. ಸಾಮಾನ್ಯ ಜನರು ಬಳಕೆ ಮಾಡತಕ್ಕಂಥ ಪದಾರ್ಥಗಳಿಗೆಲ್ಲಾ ನೀವು 4 ರಿಂದ 5, $12^{1/2}$ ಯಿಂದ $13^{1/2}$ ಮಾಡಿ, ಅದರಿಂದ ನಮಗೆ 1800 ಕೋಟಿ ರೂ.ಗಳ ಆದಾಯ ಬರುತ್ತದೆಂದು ಕುಳಿತಿದ್ದೀರಿ. ಅದರ ಪರಿಣಾಮ ಏನಾಗುತ್ತದೆ ಎಂದರೆ, common man ಮೇಲೆ, ಶ್ರೀಸಾಮಾನ್ಯನ ಮೇಲೆ ಭಾರ ಬೀಳುತ್ತದೆ. ಈಗಗಲೇ price rise ಆಗಿದೆ. Food inflation is more than 18% in Karnataka. ಹೀಗೆ ಇರುವಾಗ, ನೀವು ತೆಗೆದುಕೊಂಡು ಬಂದು ಇದು ಬೇರೆ ಮಾಡಿದರೆ, What will be the total impact? ಮತ್ತೆ ಸಾಮಾನ್ಯ ಜನರಿಗೆ ಹೊರೆಯಾಗುತ್ತದೆ. ಗೋಧಿ, ಅಕ್ಕಿಗೆ exemption ಇದೆ, ಅದನ್ನು ಮುಂದುವರೆಸಿದ್ದಾರೆ. ಉಳಿದಂತೆ ಸಾಮಾನ್ಯ ಜನರು ಬಳಸುವುದಕ್ಕೆಲ್ಲಾ ಹೆಚ್ಚು ಮಾಡಿದ್ದೀರಿ. ಈಗ ಪೆಟ್ರೋಲಿಯಂ ಪ್ರಾಡಕ್ಟ್ಸ್ ಬೆಲೆ ಹೆಚ್ಚಾಗಿವೆ. ಕೇಂದ್ರ ಸರ್ಕಾರದವರು ಸ್ವಲ್ಪ ಹೆಚ್ಚು ಮಾಡಿದ ಮೇಲೆ, ಡೀಸೆಲ್ ಮತ್ತು ಪೆಟ್ರೋಲ್ ಬೆಲೆ nearly 3 Rupees. ಹೆಚ್ಚಾಗಿದೆ. ಅಲ್ಲಿ ನಿಮಗೆ ತೆರಿಗೆ ಹೆಚ್ಚಾಗಿ ಬರುತ್ತದೆ. ಅವುಗಳಿಗೆ VAT rate ಇಲ್ಲ. Separate special rates ಅವುಗಳಿಗೆ ಇದೆ. Special rate ಇರುವುದರಿಂದ ನಿಮಗೆ normal course ನಲ್ಲಿ ತೆರಿಗೆ ಹೆಚ್ಚಾಗುತ್ತದೆ. ನೀವು wasteful expenditure ಅನ್ನು cut down ಮಾಡಿ, tax compliance ಅನ್ನು ಚೆನ್ನಾಗಿ ಮಾಡಿ, ತೆರಿಗೆ ಕೊಡತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಿ, ಸೋರಿ ಹೋಗುವುದನ್ನು ತಪ್ಪಿಸಿ, ಒಳ್ಳೆಯ ಅಧಿಕಾರಿಗಳನ್ನು ಹಾಕಿ, ಅಲ್ಲಿ transfer ಗಳಲ್ಲಿ ಆಗುವಂತಹ ಭ್ರಷ್ಟಾಚಾರವನ್ನು ತಪ್ಪಿಸಿದರೆ, ನೀವು ಬೇರೆ ಯಾವುದನ್ನೂ ಸಹ ಮಾಡಬೇಕಾದಂತಹ ಅಗತ್ಯವಿಲ್ಲ. ಇವೆಲ್ಲಾ ಹೇಗೆ ಎಂದರೆ, 'ಕುಣಿಯಲಾರದವಳು ನೆಲ ಡೊಂಕು' ಅಂದಳಂತೆ. ಪಾಪ!, ಒಂದು ಕಡೆ ಸಾಮಾನ್ಯ ಜನರ ಬಗ್ಗೆ ಮತ್ತು ಬಡವರ ಬಗ್ಗೆ ಮಾತನಾಡುವುದು, ಇನ್ನೊಂದು ಕಡೆ ಬಡವರ ಮೇಲೆ ಹೊರೆ ಹಾಕುವುದು.

ದ್ವಂದ್ವ ನೀತಿ ಇದೆಯಲ್ಲಾ, ಇದು ಸರಿಯಲ್ಲ. ಈ ತರಹ 12.5% to 13.5% 4 to 5% ಈ ರೀತಿ ಹೆಚ್ಚಳ ಮಾಡುವುದನ್ನು ಬಿಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಸಾಮಾನ್ಯ ಜನರ ಮೇಲೆ ಹೊರೆಯಾಗುತ್ತದೆ. ಸಿಗರೇಟ್ ಮೇಲೆ ಕೇವಲ 1% ಹೆಚ್ಚಳ ಮಾಡಿದ್ದರೆ, I can understand. ಇನ್ನೊಂದು ಕಡೆ ಪ್ರವಾಸೋದ್ಯಮ ಜಾಸ್ತಿಯಾಗಬೇಕು ಎನ್ನುತ್ತೀರಿ. ಆದರೆ ಹೋಟೆಲ್‌ಗಳಿಗೆ ವಿಧಿಸುವ Luxury Tax ಇದ್ದಕ್ಕಿದ್ದ ಹಾಗೆ 2–3% ಜಾಸ್ತಿ ಮಾಡಿದ್ದೀರಿ. ಯಾರು ಬರುತ್ತಾರೆ? ಈಗಲೇ ಹೋಟೆಲ್‌ಗಳೆಲ್ಲಾ ಖಾಲಿ ಹೊಡೆಯುತ್ತಿವೆ. ಒಂದು ಕಡೆ economic slow down, ಜನರೇ ಬರುವುದಿಲ್ಲ. ಇನ್ನೊಂದು ಕಡೆ luxury tax ಹೆಚ್ಚು ಮಾಡುತ್ತಿದ್ದೀರಿ. ಯಾರೂ ಕೂಡ ನಿಮ್ಮ ಹತ್ತಿರ ಬರುವುದಿಲ್ಲ. ಇದು ಹೇಗೆ? ಒಂದು ರಾಜ್ಯದ economy ಬೆಳೆಯಬೇಕಾದರೆ, ಅದಕ್ಕೆ ಪೂರಕವಾಗಿ ಏನು ಮಾಡಬೇಕೆಂಬ ಚಿಂತನೆ ಸರಿಯಾಗಿ ನಡೆದಿಲ್ಲ. ಇವರು ಸರಿಯಾಗಿ ಚರ್ಚೆ ಮಾಡಿಲ್ಲ. ನಾನು ಮಾನ್ಯ ಯಡಿಯೂರಪ್ಪನವರು ಇರುವಾಗಲೇ ಈ ಮಾತನ್ನು ಹೇಳಿದ್ದೆ. ಇವರು review meeting ಮಾಡುವುದನ್ನೇ ಬಿಟ್ಟುಬಿಟ್ಟರು. Tax ಯಾರು ಕೊಡುತ್ತಿದ್ದಾರೆ? ಎಲ್ಲಿ ಸೋರಿ ಹೋಗುತ್ತಿದೆ? ಏನಾಗುತ್ತಿದೆ? ಏನೂ ಇಲ್ಲ. ಆ ಚೆಕ್ ಪೋಸ್ಟ್‌ಗಳಲ್ಲಿ ಯಾರ್‍ಯಾರು ಇರುತ್ತಾರೆಂದು ಗೊತ್ತಿರುವುದಿಲ್ಲ. ಚೆಕ್ ಪೋಸ್ಟ್‌ಗಳಲ್ಲಿ ಇರುವವರು ದುಡ್ಡು ಕೊಟ್ಟು ಅಲ್ಲಿಗೆ ಹೋಗುತ್ತಾರೆ. ಅವರ್‍ಯಾಕೆ tax evasion ಆಗುವುದನ್ನು ತಡೆಯಲಿಕ್ಕೆ ಹೋಗುತ್ತಾರೆ? So, ಈ ತರಹ ಒಂದು ಅವ್ಯವಸ್ಥೆಯ ಆಗರವಾಗಿದೆ. ಹಾಗಾಗ ಮಾನ್ಯ ಅಧ್ಯಕ್ಷರೆ, ಇಲ್ಲಿ ತೆರಿಗೆ ವಸೂಲಿ ಇವರು ಸರಿಯಾಗಿ ಮಾಡದೆ, tax mobilisation ಅನ್ನು ಸರಿಯಾಗಿ ಮಾಡದೆ, ಇವರು plan ನಲ್ಲಿ ಅದಕ್ಕೋಸ್ಕರವೇ ಈ financial year ನಲ್ಲಿ ಸುಮಾರು 7–8 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಅಂದರೆ, 25%–30% of the plan size. Total Plan size is 29500 crores, out of which, they may reach some 20000 to 22000 crores. They can't go beyond it. ಹೀಗಾದರೆ ಅಭಿವೃದ್ಧಿ ಎಲ್ಲಿ ಆಗುತ್ತದೆ? ಹಾಗಾಗಿ ಈ ವರ್ಷವೆಲ್ಲಾ ಅಭಿವೃದ್ಧಿ ಕೆಲಸಗಳಿಗೆ ದುಡ್ಡಿಲ್ಲ. Social Welfare Department ಗೆ 900 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದರೆ, ಕೇವಲ 450 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ

ಮಾಡಿದ್ದೀರಿ. ನೀರಾವರಿಗೆ, ಅಗ್ರಿಕಲ್ಚರ್‌ಗೆ, ಕುಡಿಯುವ ನೀರಿಗೆ ಸಹ ಕಡಿಮೆ ಬಿಡುಗಡೆ ಮಾಡಿದ್ದೀರಿ. ಮಾನ್ಯ ಉದಾಸಿಯವರು PWD ಇಲಾಖೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟಿದ್ದಾರೆ.

(5-00 PM)

3054, 5054 ನಲ್ಲಿ ಜನವರಿ ಅಂತ್ಯಕ್ಕೆ 1096 ಕೋಟಿ ರೂಪಾಯಿಗಳು ಪೆಂಡಿಂಗ್ ಇದೆ. ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗೆ ಸರ್ಕಾರದವರೆ ಕೊಟ್ಟಿರುವ ಮಾಹಿತಿಯ ಪ್ರಕಾರ 5054 ನಲ್ಲಿ 674 ಕೋಟಿ 99 ಲಕ್ಷ, 3054 ನಲ್ಲಿ 421 ಕೋಟಿ 62 ಲಕ್ಷ. It is only in PWD ನಲ್ಲಿ. ಇನ್ನೂ ಆ ನಬಾರ್ಡ್‌ನಲ್ಲಿ, Rural Development ನಲ್ಲಿ. ಬೇರೆ ಬೇರೆ ಇಲಾಖೆಗಳೆಲ್ಲಾ ಇದ್ದಾವೆ. 12th Finance Commission fund ಬಿಡುಗಡೆ ಆಗಲಿಲ್ಲ, ಈಗ ಬಿಡುಗಡೆ ಆಗಿರಬಹುದು. ಜಗದೀಶ್ ಶೆಟ್ಟರ್‌ರವರೆ, ಈಗ ಏನಾದರೂ ಅದನ್ನು Supplemetary Estimates ನಲ್ಲಿ ತಂದಿದ್ದೀರಾ? ಈಗ ಬಿಡುಗಡೆ ಮಾಡಿದರೆ ಹೇಗೆ ಖರ್ಚು ಮಾಡುತ್ತೀರಿ? ಈಗ ದುಡ್ಡು ಪಾಸ್ ಆಗುವುದಕ್ಕೆ ಎಷ್ಟೊ ದಿವಸಗಳಾಗುತ್ತವೆ, Supplementary Estimates ಎಲ್ಲಾ ಪಾಸ್ ಆಗಬೇಕಲ್ಲಾ? ಯಾವಾಗ ಖರ್ಚು ಮಾಡುತ್ತೀರಿ? ಈ ವರ್ಷ ಎಲ್ಲಿಂದ ಖರ್ಚು ಮಾಡುತ್ತೀರಿ? ಎಲ್ಲಾ ಡ್ರಾ ಮಾಡಿಕೊಂಡು ಬೇರೆ ಬೇರೆ ಕಡೆ ಪಿ.ಡಿ. ಅಕೌಂಟ್‌ನಲ್ಲಿ ಇಟ್ಟುಕೊಂಡು ಅವರ ಮನಸ್ಸೋ ಇಚ್ಛೆ ಮಜಾ ಮಾಡುತ್ತಾರೆ. ಏನು ಯಡಿಯೂರಪ್ಪನವರು ಇಲ್ಲ, ನಾನು ಪ್ರತಿ ತಿಂಗಳು review ಮಾಡುತ್ತೇನೆ, quality expenditure ಮಾಡಿಸುತ್ತೇನೆ, ಇದೇನಾ Quality expenditure ಎಂದರೆ? ಮಾರ್ಚ್ ಕೊನೆಯಲ್ಲಿ ಹಣ ಬಿಡುಗಡೆ ಮಾಡುವುದನ್ನು Can you call this as a quality expenditure? ಈ ದುಡ್ಡು ಎಲ್ಲಿ ಹೋಗುತ್ತದೆ, ಇವು ಯಾರ್ಯಾರ ಜೇಬಿಗೆ ಹೋಗುತ್ತವೆ? ಈಗ ನಾನು Supplementary Estimates ನಲ್ಲಿ ನೋಡಿದೆ, the outgo from the Treasuries, Rs.5000 ಚಿಲ್ಲರೆ ಕೋಟಿ. ಈ ದುಡ್ಡನ್ನು ತೆಗೆದುಕೊಂಡು ಏನು ಮಾಡುತ್ತೀರಿ? Supplementary Estimates ಒಟ್ಟು 10,000 ಕೋಟಿ ಇದೆ. ಅದರಲ್ಲಿ 5000 ಕೋಟಿ ಸರ್ಕಾರದಿಂದ outgo.

O.14 F-22

(ಈ ಸಂದರ್ಭದಲ್ಲಿ ಅಧ್ಯಕ್ಷರ ಪೀಠವನ್ನು ಶ್ರೀ ಚಂದ್ರಕಾಂತ್ ಬೆಲ್ಲದ್ ರವರು ಅಲಂಕರಿಸಿದರು.)

ಅಧ್ಯಕ್ಷರಿಗೆ ಸ್ವಾಗತ, ಇವರು ನಮ್ಮ ಹಳೆಯ ಸ್ನೇಹಿತರು, ಮಂತ್ರಿ ಮಾಡಲಿಲ್ಲವೆಂದು ಪಾಪ ನೋವಿದೆ, ಆದುದರಿಂದ ಹೀಗಾದರು ಮಾಡೋಣವೆಂದು, ಬೆಲ್ಲದ್ ನಾವೆಲ್ಲಾ ಹೋರಾಟ ಮಾಡಿಕೊಂಡು ಬಂದವರು, ಹಳೆದಾಯಿತಲ್ಲವೇ?

ಚೇರ್ಮನ್ : ಹೌದು, ನಾವೆಲ್ಲಾ ಹಳಬರು, ಕನ್ನಡಪರ ಹೋರಾಟವೆಲ್ಲಾ ಮಾಡುತ್ತಿದ್ದೊ.

ಶ್ರೀ ಸಿದ್ದರಾಮಯ್ಯ : ಕನ್ನಡದ ಹೋರಾಟವೆಲ್ಲಾ ಅವರ ಜೊತೆಯಲ್ಲಿ ಮಾಡುತ್ತಿದ್ದೊ, ಗೋಕಾಕ್ ಚಳುವಳಿಯಲ್ಲಿ ಅವರ ಜೊತೆಯಲ್ಲಿದ್ದೊ ಆಗ ಸ್ನೇಹಿತರು, ಗೋಗಾಕ್ ಚಳುವಳಿ ಜ್ಞಾಪಕವಿದೆಯಾ?

ಚೇರ್ಮನ್ : ಆಗ ಮುಂಚೂಣಿಯಲ್ಲಿದ್ದೆವು.

ಶ್ರೀ ಸಿದ್ದರಾಮಯ್ಯ : ನೋಡಿ ಈ ಕಡೆ ಇರುವ ಕಳಕಳಿ, ಆ ಕಡೆ ಇಲ್ಲ ನೋಡಿ, ಆ ಕಡೆ comradeship ಇಲ್ಲ ನೋಡಿ, ಈ ಕಡೆ ಇರುವ comradeship ಆ ಕಡೆ ಇಲ್ಲ. ಅದಕ್ಕಾಗಿ ಕೆಲವರೆಲ್ಲಾ ಅಲ್ಲಿ ಹೋಗಿ ತಪ್ಪು ಮಾಡಿಬಿಟ್ಟೊ ಎನ್ನುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಚಂದ್ರಕಾಂತ ಬೆಲ್ಲದ್ ಬಗ್ಗೆ ಹೇಳಿದಿರಲ್ಲಾ, ಇದು ರಿವೈಸ್ಡ್ ಎಸ್ಟಿಮೇಟಾ?

ಶ್ರೀ ಸಿದ್ದರಾಮಯ್ಯ : ಹಾಗೆ ತಿಳಿದುಕೊಳ್ಳಿ, ನಿಮಗೆಲ್ಲಾ ರಿವೈಸ್ಡ್ ಎಸ್ಟಿಮೇಟ್ ಮಾಡುವುದೇ ಗೊತ್ತಿರುವುದು, ಬಿಜೆಪಿ ಅಂದರೆ ಕೋಟಿಗಟ್ಟಲೆ ರಿವೈಸ್ಡ್ ಎಸ್ಟಿಮೇಟ್ ಮಾಡುವುದು, ನೀವು ಪರಿಷ್ಕೃತನೇ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವರು ಹೇಳುವುದಕ್ಕು ಕೊಡುವುದಕ್ಕು ತಾಳಮೇಳ ಒಂದೂ ಇಲ್ಲ. 5000 ಚಿಲ್ಲರೆ ಕೋಟಿಯನ್ನು How do you mobilise it? How do you meet it? ಇಲ್ಲಿ ತೆರಿಗೆ ಇಲ್ಲವೆಂದು ಸಾಲ ತೆಗೆದು ಕೊಳ್ಳುವುದಕ್ಕೆ ಹೋಗಿದ್ದೀರಿ, 5000 ಚಿಲ್ಲರೆ ಕೋಟಿಯನ್ನು ಅದು ಹೇಗೆ ಮೀಟ್ ಮಾಡುತ್ತೀರಿ? ಮೀಟ್ ಮಾಡಲು ರಿಸೋರ್ಸ್ ಆಗಬೇಕಲ್ಲ? ಅಷ್ಟು ದುಡ್ಡು ತೆರಿಗೆ ಅಡಿಷನಲ್ ಆಗಿ ಬರಬೇಕಲ್ಲಾ? Either you have to cut down other development expenditure or you have to monilise the additional resource. But, according to their own admission,

there is no additional resources. The only course open to them is, to cut down other expenditures or go for the more borrowing. ಇನ್ನೊಂದು ಅಷ್ಟು ಸಾಲ ತೆಗೆದುಕೊಳ್ಳುವುದಕ್ಕೆ ಹೋಗಬೇಕು. ಅದು ಬಿಟ್ಟು ಹೇಗೆ ಮಾಡುತ್ತೀರಿ ಹೇಳಿ ನೋಡೋಣ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವರು ಹೇಗೆ ರಾಜ್ಯ ಆರ್ಥಿಕ ಅಶಿಸ್ತನ್ನು ನಿರ್ಮಾಣ ಮಾಡಿ, ಹಣಕಾಸು ನಿರ್ವಹಣೆ ಇವರ ಕಾಲದಲ್ಲಿ ಎಷ್ಟು ಕೆಟ್ಟದಾಗಿ ಆಗಿದೆ ಎಂಬುದಕ್ಕೆ ಇವೆಲ್ಲಾ ನಿದರ್ಶನಗಳು. ಆಮೇಲೆ ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ನಾವೇ ಖರ್ಚು ಮಾಡಿದ್ದೇವೆಂದು ಲೆಕ್ಕಕ್ಕೆ ಹಾಕಿಕೊಳ್ಳುವುದು. ನಾನು ಈಗಾಗಲೆ ಹೇಳಿದೆ, ಆರೋಗ್ಯ ರಕ್ಷಾ ಕವಚಕ್ಕೆ ದುಡ್ಡು ಯಾರದ್ದು? 12th Finance ಮತ್ತು ಗ್ರಾಮೀಣ ಆರೋಗ್ಯದ್ದು 221 ಕೋಟಿ, ಇವರು ಕೊಟ್ಟಿದ್ದು ಬರೀ 10 ಕೋಟಿ. 221 ಕೋಟಿನಲ್ಲಿ 517 ಎಷ್ಟೊ ಅಂಬುಲೆನ್ಸ್ ಮಾಡಿ, ಫೋಟೋಗಳನ್ನು ಬೇರೆ ಹಾಕಿಕೊಂಡಿದ್ದಾರೆ. ಅದನ್ನು ಹೇಳಿದರೆ, ಹಣ ಏನು ನಿಮ್ಮದೊ, ನಾವೆಲ್ಲಾ ತೆರಿಗೆ ಕೊಡುವುದಿಲ್ಲವೊ ಎಂದು ಹೇಳುತ್ತಾರೆ. ಎಲ್ಲರಿಗೂ ಕೊಡುತ್ತಾರೆ, ನಿಮಗೂ ಕೊಡುತ್ತಾರೆ, ಮುಂದಿನ ವರ್ಷಕ್ಕೆ 70,000 ಕೋಟಿ ಇಟ್ಟುಕೊಂಡಿದ್ದೀರಲ್ಲಾ, ಈ ವರ್ಷ 60,000 ಕೋಟಿ ಇಟ್ಟುಕೊಂಡಿದ್ದೀರಲ್ಲಾ, ಅದು ತೆರಿಗೆಯದೇ ತಾನೆ, ಏನು ಅದನ್ನು ನೀವು ತೆಗೆದುಕೊಂಡು ಬಂದಿದ್ದೀರಾ?

ಶ್ರೀ ಕೆ.ಜೆ.ಜಾರ್ಜ್ : 4 ವರ್ಷಗಳ ಹಿಂದೆ Bangalore water Supply 3000 ಕೋಟಿ ಯೋಜನೆಗೆ ಅಡಿಗಲ್ಲು ಹಾಕಿದರು. ಮೊನ್ನೆ ನಡೆದ ಕಾರ್ಯಕ್ರಮಕ್ಕೆ ನಮ್ಮ ವಿರೋಧ ಪಕ್ಷದ ನಾಯಕರನ್ನು ಕರೆಯುವಷ್ಟು courtesy ನಿಮಗೆ ಇಲ್ಲ, ಅದು ನಮ್ಮ ಕಾಲದಲ್ಲಿ ಮಂಜೂರಾಗಿರುವುದು. ನಾವು ಇರುವುದನ್ನು ಇದ್ದ ಹಾಗೆ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಇವರು ಹೇಗೆಂದರೆ, ಇವರೇ ಟ್ಯಾಕ್ಸ್ ವಸೂಲ್ಮಾಡಿ ಖರ್ಚು ಮಾಡಿದವರ ತರಹ. ಸುರೇಶ್‌ಕುಮಾರ್‌ರವರೆ, ಆ ನಗರಕ್ಕೂ ಕೂಡ ಅಷ್ಟೆ, ಎಲ್ಲಾ ಬ್ಯಾಂಕ್‌ಗಳಿಂದ 1400 ಚಿಲ್ಲರೆ ಕೋಟಿ ಸಾಲ ತೆಗೆದುಕೊಂಡಿದ್ದೀರಿ, ಕರ್ನಾಟಕ ಸರ್ಕಾರ surety ಕೊಟ್ಟಿದೆ, ಅವರು ನಿಮಗೆ ಜಾಮೀನು ಕೊಟ್ಟಿದ್ದಾರೆ. State Finance Commission (SFC) ಇಂದ 325 ಕೋಟಿ tied and untied+1400 ಕೋಟಿ, ಒಟ್ಟು 1700 ಕೋಟಿ, ಮತ್ತೆ ನಮ್ಮ್ದೆ ದುಡ್ಡು. ಮತ್ತೆ ರಾಜ್ಯ ಸರ್ಕಾರ 1400 ಕೋಟಿ ನಾವೆ ಖರ್ಚು

ಮಾಡಿದ್ದೇವೆಂದು ಹೇಳುತ್ತಾರೆ ಎಲ್ಲಿಂದ ಬಂತು? ಈಗ ಬೆಂಗಳೂರು ನಗರದವರಿಗೆ ಚುನಾವಣೆಗೆ ಹೇಳಬೇಕಲ್ಲಾ, ಆಮೇಲೆ, ಯಡಿಯೂರಪ್ಪ ನವರು, ಒಂದು ಸ್ವಲ್ಪ ಬೆಂಗಳೂರನ್ನು ಹೋಗಿ ನೋಡಿಕೊಂಡು ಬನ್ನಿ ಎಂದು ನಮಗೆ ಹೇಳುತ್ತಾರೆ, ಏನು ಇವರೇ ಬಂದು ಮಾಡಿರುವವರ ತರಹ. ನರೇಂದ್ರ ಬಾಬು ಅವರಿಗೆ, ನಿಮ್ಮ ಕ್ಷೇತ್ರದಲ್ಲಿ ಆಗಿಲ್ಲವೊ ಎನ್ನುತ್ತಾರೆ, ಈ ದುಡ್ಡಿನಲ್ಲಿ ಆಗಿದ್ದಾವೆ, ಬೆಂಗಳೂರಿನಲ್ಲಿ ಅವರ ಕ್ಷೇತ್ರದಲ್ಲಿ ಎಲ್ಲಾ ಕ್ಷೇತ್ರದಲ್ಲಿ ಆಗಿದ್ದಾವೆ. ಅವಗ್ಗು ಇವಗ್ಗು ವ್ಯತ್ಯಾಸವಿದ್ದೆ ಇರುತ್ತದೆ, ಆಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು ಈಗ ಕೆಟ್ಟು ಹೋಗಿದೆ ಅಷ್ಟೆ ವ್ಯತ್ಯಾಸ. ವ್ಯತ್ಯಾಸ ಇದ್ದೇ ಇರಬೇಕಲ್ಲ, 4152 ಕೋಟಿ revenue surplus ಇತ್ತು, ಈಗ 500 ಕೋಟಿ ಅಷ್ಟೆ.

ಶ್ರೀ ನೆಹರು ಚೆನ್ನಬಸಪ್ಪ ಓಲೆಕಾರ್ : ಅಭಿವೃದ್ಧಿಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಹೌದೆ.

ಶ್ರೀ ಸಿದ್ದು ಸವದಿ : ನಿಮ್ಮ ಕಾಲದಲ್ಲಿ ಎಷ್ಟು ಬಜೆಟ್ ಇತ್ತು. ಯಡಿಯೂರಪ್ಪನವರ ನಾಲ್ಕು ವರ್ಷದಲ್ಲಿ ಎಷ್ಟು ಬಜೆಟ್ ಇತ್ತು ಹೇಳಿ.

ಶ್ರೀ ಸಿದ್ಧರಾಮಯ್ಯ : ಇಷ್ಟು ಹೊತ್ತು ನಾನು ಓದಿದ್ದು ನಿಮಗೆ ಗೊತ್ತಾಗಲಿಲ್ಲವೆ?

ಶ್ರೀ ಸಿದ್ದು ಸವದಿ : 70 ಸಾವಿರ ಕೋಟಿ ಬಜೆಟ್ ಕೊಟ್ಟಿದ್ದಾರೆ. ಮೆಚ್ಚಬೇಕು ಯಡಿಯೂರಪ್ಪನವರನ್ನು. ನಾಲ್ಕು ವರ್ಷದಲ್ಲಿ 70 ಸಾವಿರ ಕೋಟಿ ಬಜೆಟ್ ಕೊಟ್ಟಿದ್ದಾರೆ. ನಿಮ್ಮ ಕಾಲದಲ್ಲಿ ಕೇವಲ 25 ರಿಂದ 30 ಸಾವಿರ ಕೋಟಿ ಬಜೆಟ್ ಕೊಟ್ಟಿದ್ದೀರಿ. 50 ವರ್ಷದಲ್ಲಿ 20 ರಿಂದ 30 ಸಾವಿರ ಕೋಟಿ ಕೊಟ್ಟಿದ್ದೀರಿ. ಯಡಿಯೂರಪ್ಪನವರ ದಕ್ಷ ಆಡಳಿತ ಈಗಿನದ್ದಕ್ಕೆ ಉದಾಹರಣೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ನಿಮಗೆ ಗೊತ್ತಾಗುವುದಿಲ್ಲ. ನೀವು ಸುಮ್ಮನಿರಿ.

ಶ್ರೀ ಸಿದ್ದು ಸವದಿ : ಹೌದು ಬಿಡಿ. ನೀವು ಹೇಳುವ ಹಾಗೆ ನಮಗೆ ಗೊತ್ತಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : 2007–08 ರಲ್ಲಿ 2300 ಕೋಟಿ ಸಾಲ ತೆಗೆದುಕೊಳ್ಳುತ್ತಿದ್ದದ್ದು ಈಗ 2010–11ಕ್ಕೆ 12 ಸಾವಿರ ಚಿಲ್ಲರೆ ಕೋಟಿ ಸಾಲವನ್ನು ತೆಗೆದುಕೊಂಡಿದ್ದೀರಿ. ನಿಮಗೆ ಇದು ಅರ್ಥವಾಯಿತೆ? ನಮ್ಮ

ಕಾಲದಲ್ಲಿ Revenue Surplus 4 ಸಾವಿರ ಚಿಲ್ಲರೆ ಕೋಟಿ ಇತ್ತು. ಈಗ ಕೇವಲ 500 ಚಿಲ್ಲರೆ ಕೋಟಿ. ಅದು ಲೆಕ್ಕ ಸರಿ ಇದೆಯೋ ಇಲಲ್ವೋ ನೋಡಬೇಕು ಮುಂದಿನ ವರ್ಷದ ಅಕೌಂಟ್ ಬಂದಮೇಲೆ. ಗೊತ್ತಾಯಿತೆ ಸಿದ್ದು ಸವದಿಯವರೆ?

ಒಬ್ಬ ಮಾನ್ಯ ಸದಸ್ಯರು : ಸಿ.ಡಿ.ರವಿಯವರು ಇದರ ಬಗ್ಗೆ ತಿಳಿದುಕೊಂಡು ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಪಾಪ ಅವರು ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವ ಹಾಗೆ ಅವರನ್ನು ಒಪ್ಪಿಕೊಂಡು ಬಿಟ್ಟಿದ್ದಾರೆ. ಪಾಪ ಅವರನ್ನೂ ಕೂಡ ಮಂತ್ರಿಯನ್ನಾಗಿ ಮಾಡಬೇಕಾಗಿತ್ತು. ನಾನು ಪತ್ರಿಕೆಯಲ್ಲಿ ಓದಿದೆ. ಕೇವಲ ಶಿವಮೊಗ್ಗ, ಬಳ್ಳಾರಿ ಮತ್ತು ಬೆಂಗಳೂರಿಗೆ ಮಾತ್ರ ಹೆಚ್ಚು ದುಡ್ಡನ್ನು ಕೊಟ್ಟುಬಿಟ್ಟಿದ್ದಾರೆ ಎಂದು ಹೇಳಿ ನಾನು ರಾಜೀನಾಮೆಯನ್ನು ಕೊಟ್ಟು ಬಿಡುತ್ತೇನೆ ಎಂದು ಹೊರಟಿದ್ದರು. .ಆಗ ನಾನು ಬೇಡವಪ್ಪಾ, ಆ ರೀತಿ ರಾಜೀನಾಮೆ ಕೊಡುವುದಕ್ಕೆ ಹೋಗಬೇಡ. ನೀನು ನನಗೆ ಒಳ್ಳೆಯ ಸ್ನೇಹಿತ. ರಾಜೀನಾಮೆ ಏಕೆ ಕೊಡುವುದಕ್ಕೆ ಹೋಗುತ್ತಿಯಾ. ನೀನು ನಮ್ಮ ಜೊತೆ ಸೇರಿಕೋ. ಇದರ ಬಗ್ಗೆ ಫೈಟ್ ಮಾಡೋಣವೆಂದು ಹೇಳಿದ್ದೇನೆ.

ಶ್ರೀ ಕರುಣಾಕರ ರೆಡ್ಡಿ : ಮಂತ್ರಿಯನ್ನಾಗಿ ಅವರನ್ನು ಮಾಡಿ ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : ನಾವು ಏಕೆ ಹೇಳೋಣ? ನಾವೇನೋ ಪಾಪ ಅವರು ಮಂತ್ರಿಯಾಗಲಿ ಎಂದು ಹೇಳುತ್ತೇವೆ. ಹಿಂದೆ ನೀವು ಕೂಡ ಮಂತ್ರಿಯಾಗಬೇಕೆಂದು ನಾವು ಹೇಳಿರಲಿಲ್ಲವೋ? ಅದೇ ರೀತಿ ಇವರು ಮಂತ್ರಿಯಾಗಲಿ ಎಂದು ಹೇಳಿರುತ್ತೇವೆ. ಆದರೆ ಕರುಣಾಕರರೆಡ್ಡಿಯವರೆ, ನಿಮಗೆ ನಮ್ಮ ರೆಕಮೆಂಡೇಶನ್ ಏನೂ ಬೇಕಾಗಿಲ್ಲ ಬಿಡಿ. You, yourself are a powerful man, ಯಡಿಯೂರಪ್ಪನವರನ್ನೇ ಅಲ್ಲಾಡಿಸಿದ್ದೀರಿ, ಇನ್ನು ನಮ್ಮ ರೆಕಮೆಂಡೇಶನ್ ಕಟ್ಟಿಕೊಂಡು ಏನು ಮಾಡುತ್ತೀರಿ. ಆದುದರಿಂದ ನಮ್ಮ ರೆಕಮೆಂಡೇಶನ್ ನಿಮಗೆ ಬೇಕಾಗಿಲ್ಲ. ಆದುದರಿಂದ ಈಗ ಮಾನ್ಯ ಅಧ್ಯಕ್ಷರೆ, ಪ್ಲಾನ್‌ನಲ್ಲಿ 40 % ಹಣ ಕೂಡ ಬಿಡುಗಡೆ ಆಗಿಲ್ಲ. ಮುಂದಿನ ವರ್ಷಕ್ಕೆ 30 ಸಾವಿರ ಕೋಟಿ plan size ಹಾಕಿಕೊಂಡಿದ್ದಾರೆ. ಯಾವ ಬೇಸಿಸ್ ಮೇಲೆ ಹಾಕಿಕೊಂಡಿರಿ? 31 ಸಾವಿರ ಕೋಟಿ. ಈಗ ಲೆಕ್ಕಾಚಾರ ನೋಡಿದರೆ 22 ಸಾವಿರ ಕೋಟಿಯಾದರೆ ಹೆಚ್ಚು, ಇನ್ನೂ 9 ಸಾವಿರ ಕೋಟಿ

ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. ಕಳೆದ ಮೂರು ವರ್ಷದಿಂದ ಒಂದು ಪರಿಪಾಠವಾಗಿಬಿಟ್ಟಿದೆ. ದೊಡ್ಡ plan size ಮಾಡಿಕೊಂಡು ಬಿಡುವುದು. ಆಮೇಲೆ ಅದನ್ನು ಮುಂದೆ 25, 30% ಕಟ್ ಮಾಡುವುದು. ಆಮೇಲೆ Finance Department ನಿಂದ ಎಲ್ಲಾ ಇಲಾಖೆಗಳಿಗೆ ಪತ್ರ ಬರೆಯುವುದು. ಪ್ಲಾನ್‌ಕಟ್. ಮಾಡಿದ್ದೇವೆ, ಪ್ಲಾನ್‌ಕಟ್ ಮಾಡಿದ್ದೇವೆಯಾದ ಕಾರಣ ನೀವಿಷ್ಟೇ ಖರ್ಚು ಮಾಡಿ ಎಂದು ಪತ್ರ ಬರೆಯುವುದು. ಮಾನ್ಯ ಯಡಿಯೂರಪ್ಪ ನವರು ಇವಕ್ಕೆಲ್ಲ ಉತ್ತರಗಳನ್ನು ಹೇಳಬೇಕಾಗುತ್ತದೆ. ರೀಸೋರ್ಸ್ ಹೇಗೆ ಮೊಬಿಲೈಸ್ ಮಾಡುತ್ತಾರೆ ಎಂದು ಹೇಳಬೇಕು. ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟದಾಗಿ ಹೀನಾಯವಾಗಿದೆ. ನೀವು ಯಾವುದೇ ಇಲಾಖೆ ತೆಗೆದುಕೊಳ್ಳಿ. ಆಮೇಲೆ ಅಧ್ಯತಾ ವಲಯಗಳಿಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆಯೆ ಎಂದು ನೋಡಿದರೆ ಅದೂ ಇಲ್ಲ. ಕೃಷಿಗೆ ಕೊಟ್ಟಿದ್ದಾರೆಯೆ, ಇಲ್ಲ, ರೈತನ ಮಗ ಎಂದು ಹೇಳುತ್ತಾರೆ. ಕೃಷಿಗೂ ಹೆಚ್ಚು ಕೊಟ್ಟಿಲ್ಲ. ರೂರಲ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದಾರೆಯೆ ಎಂದು ನೋಡಿದರೆ ಅದಕ್ಕೂ ಇಲ್ಲ. ಕುಡಿಯುವ ನೀರಿಗೆ ಕೊಟ್ಟಿದ್ದಾರೆಯೆ ಎಂದರೆ ಅದಕ್ಕೂ ಇಲ್ಲ. ನಿಮಗೆ ಒಂದು ಉದಾಹರಣೆ ಹೇಳಬೇಕೆಂದರೆ ಈಗ ಕುಡಿಯುವ ನೀರಿಲ್ಲ. , Annual Financial Statement ನಲ್ಲಿ Water supply ಗೆ Revenue Account ನಲ್ಲಿ 213 ಕೋಟಿ 2008-09 ರಲ್ಲಿ, 243 ಕೋಟಿ 2009-10 ರಲ್ಲಿ, ಇದು Revised Estimate ನಲ್ಲಿ 192 ಕೋಟಿ ಎಂದು ತೋರಿಸಲಾಗಿದೆ. ಇನ್ನೂ ಇಷ್ಟು ಬಿಡುಗಡೆ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಇದು ಕುಡಿಯುವ ನೀರಿಗೆ. ಮುಂದಿನ ವರ್ಷಕ್ಕೆ 183 ಕೋಟಿ. Plan size ಮಾತ್ರ 31 ಸಾವಿರ ಕೋಟಿ. ಕುಡಿಯುವ ನೀರಿಗೆ ಮುಂದಿನ ವರ್ಷಕ್ಕೆ ಈ ವರ್ಷಕ್ಕೆ ಖರ್ಚು ಮಾಡಿರುವುದಕ್ಕಿಂತ ಕಡಿಮೆ ತೋರಿಸಿದ್ದಾರೆ. ಅಂದರೆ 183 ಕೋಟಿ ಬಜೆಟ್ ನಲ್ಲಿ ತೋರಿಸಿದ್ದಾರೆ. ಆಮೇಲೆ Roads & Bridges ಗೆ 2008-09 ರಲ್ಲಿ Revenue Account ನಲ್ಲಿ 1262 ಕೋಟಿ. 2009-10 ರಲ್ಲಿ 1022 ಕೋಟಿ ಇದ್ದರೆ ಅದು Revised ಆಗಿ 942 ಕೋಟಿ ಆಗಿದೆ. ಆಮೇಲೆ ಮುಂದಿನ ವರ್ಷಕ್ಕೆ 2010-11 867 ಕೋಟಿ. ಹೀಗಿದ್ದರು ಇವರು ಹೇಳುತ್ತಾರೆ ಎಷ್ಟೋ ಕಿ.ಮೀ. ರಸ್ತೆ ಮಾಡಿಬಿಟ್ಟಿದ್ದೇವೆಂದು. 1 ಸಾವಿರ ಚಿಲ್ಲರೆ ಕೋಟಿ 5054 ರಲ್ಲಿ 700 ಚಿಲ್ಲರೆ ಕೋಟಿ pending bills ಇವೆ. ಇಲ್ಲಿ ಬಜೆಟ್‌ನಲ್ಲಿ ಇವರು

ಇಟ್ಟುಕೊಂಡಿರುವುದು 867 ಕೋಟಿ. 2008-09 ರಲ್ಲಿ 1262 ಕೋಟಿ ಖರ್ಚಾಗಿರುವ ಲೆಕ್ಕ. 1262 ಕೋಟಿ 2008-09 ರಲ್ಲಿ ಇದ್ದರೆ 2010-2011ಕ್ಕೆ 867 ಕೋಟಿ. ಎಲ್ಲಿ ನಿಮ್ಮ ಅಭಿವೃದ್ಧಿ? ಅಭಿವೃದ್ಧಿಯೇ ನಮ್ಮ ಮಂತ್ರ. ಹೋಗಲಿ ಇವರು ಕ್ಯಾಪಿಟಲ್ ಅಕೌಂಟ್‌ನಲ್ಲಾದರು ಇವರು ಖರ್ಚು ಮಾಡುತ್ತಾರೆಯೆ ಎಂದು ನೋಡಿದರೆ, ನೀರಾವರಿಗೆ 2008-09 ರಲ್ಲಿ 2004.83 ಕೋಟಿ, 2009-10 ಕ್ಕೆ 3029 ಕೋಟಿ, ಮುಂದಿನ ವರ್ಷಕ್ಕೆ 3994 ಕೋಟಿ. ಆಮೇಲೆ ನೀರಾವರಿಗೆ ಎಷ್ಟು ಹೆಚ್ಚು ಮಾಡಿದ್ದಾರೆಂದರೆ ಅದೆಷ್ಟೋ ಲಕ್ಷ ಹೆಕ್ಟೆರ್ ಎಂದು ಇವರು ಹೇಳಿಬಿಡುತ್ತಾರೆ. ಅಂದರೆ ಪ್ರತಿ ವರ್ಷ ಅಷ್ಟು ಲಕ್ಷ ಹೆಕ್ಟೇರ್‌ಗೆ ನೀರಾವರಿಯಾದ ಮೇಲೆ ಆಹಾರ ಪದಾರ್ಥ ಎಷ್ಟು ಹೆಚ್ಚಾಗಿದೆಯೆಂದರೆ 118 ಲಕ್ಷ ಟನ್ ಎಸ್ಟಿಮೆಟೆಡ್ ಪ್ರೊಡಕ್ಷನ್ ಇದ್ದರೆ ನಿಜವಾಗಿ ಪ್ರೊಡಕ್ಷನ್ ಆಗಿರುವುದು ಕೇವಲ 100 ಲಕ್ಷ ಟನ್ ಮಾತ್ರ, ಹೌದಲ್ಲವೆ ರವೀಂದ್ರನಾಥ್‌ರವರೆ?

ಶ್ರೀ ಎಸ್.ಎ. ರವೀಂದ್ರನಾಥ್ : 106 ಲಕ್ಷ ಟನ್.

ಶ್ರೀ ಸಿದ್ಧರಾಮಯ್ಯ : 106 ಲಕ್ಷ ಟನ್ನೋ. ಅದು ಎಸ್ಟಿಮೇಟೆಡ್. ಇನ್ನು ಸರಿಯಾದ ಲೆಕ್ಕ ಬಂದಿಲ್ಲವಲ್ಲ. ಏಕೆಂದರೆ ಇನ್ನೂ ನಿಮಗೆ ಬೇಸಿಗೆ ಬೆಳೆಯ ಲೆಕ್ಕ ಬರಬೇಕಲ್ಲ. ನೀವು 106 ಲಕ್ಷ ಟನ್ ಎಂದು ಹೇಳುತ್ತೀರಿ. ಮತ್ತೆ ಪ್ರತಿ ವರ್ಷ 60 ಸಾವಿರ, 70 ಸಾವಿರ, ಒಂದು ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶ ಹೆಚ್ಚು ಆದಮೇಲೆ ಆಹಾರ ಉತ್ಪಾದನೆ ಏಕೆ ಕಡಿಮೆಯಾಗುತ್ತಿದೆ? ಆಮೇಲೆ ಇನ್ನೂ ಎಷ್ಟು ಕೋಟಿ ರೂಪಾಯಿ ನೀರಾವರಿಗೆ ಖರ್ಚು ಮಾಡಬೇಕೆಂದರೆ ಇನ್ನೂ 30 ಸಾವಿರ ಕೋಟಿ ಖರ್ಚು ಮಾಡಬೇಕು ಎಂದು ಹೇಳುತ್ತಾರೆ. ಅದು ಅಲ್ಲಿಯೇ ಇದೆ. 30 ಸಾವಿರ ಕೋಟಿಯಿಂದ ಮುಂದಕ್ಕೆ ಹೋಗುವುದೇ ಇಲ್ಲ. ಪ್ರತಿವರ್ಷ ಎರಡ್ಮೂರು ಸಾವಿರ ಕೋಟಿ ಖರ್ಚು ಮಾಡಿದರೂ ಕೂಡ 30 ಸಾವಿರ ಕೋಟಿಯ ಲೆಕ್ಕ ಅದು ಹಾಗೆಯೇ ಉಳಿದುಕೊಂಡಿದೆ. ಅದಕ್ಕಾಗಿಯೇ ನಾನು ಕಳೆದ ಬಾರಿ ಸಜೆಸ್ಟ್ ಮಾಡಿದೆ. ಈಗಲೂ ಕೂಡ ನಾನು ನಿಮಗೆ ಸಜೆಸ್ಟ್ ಮಾಡುತ್ತಿದ್ದೇನೆ. ಆಂಧ್ರಪ್ರದೇಶದವರು ಜಲ ಯಜ್ಞ ಎಂದು ಮಾಡಿದ್ದಾರೆ. 1 ಕೋಟಿ ಹೆಕ್ಟೇರ್ ಪ್ರದೇಶವನ್ನು ಜಲ ಯಜ್ಞ ಯೋಜನೆಯಡಿಯಲ್ಲಿ ನೀರಾವರಿಗೊಳಪಡಿಸಲಾಗುವುದು ಎಂದು ಹೇಳಿದ್ದಾರೆ. ನಾವು ಪ್ರತಿ ವರ್ಷ 30 ಸಾವಿರ ಕೋಟಿಯಲ್ಲಿ ಈ ವರ್ಷ ಹತ್ತು ಸಾವಿರ ಕೋಟಿ ಖರ್ಚು

ಮಾಡುತ್ತೇವೆ, ಮುಂದಿನ ವರ್ಷ 8 ಸಾವಿರ ಕೋಟಿ ಖರ್ಚು ಮಾಡುತ್ತೇವೆ, ಅದರ next year 6 ಸಾವಿರ ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿ You show your political will.

ಅವರು ಈಗಾಗಲೇ ಅಕ್ರಮವಾಗಿ ಕೃಷ್ಣ ಒಂದು ಮತ್ತು ಎರಡರಲ್ಲಿ 15 Lift Irrigation ಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅಲ್ಲಿ ಎಂಎಲ್‌ಎ ಗಳ ಟೀಮ್ ಬಂದು ನೋಡಿಕೊಂಡು ಹೋಗುತ್ತಾರೆ. ಆದರೆ ನಮ್ಮ ನೀರಾವರಿ ಮಂತ್ರಿಗಳು ಆರಾಮವಾಗಿ ಮಲಗಿದ್ದಾರೆ. ಅವರು ಐದು ವರ್ಷಗಳಲ್ಲಿ 50,000 ಕೋಟಿ ರೂಪಾಯಿ ಖರ್ಚು ಮಾಡಿದರು. ನಮ್ಮ ಬಜೆಟ್ 70,000 ಕೋಟಿ ರೂಪಾಯಿ ಇದೆಯಲ್ಲ, ನಾವು ಐದು ವರ್ಷಗಳಲ್ಲಿ on first priority area ಎಂದು ಮಾಡಿ ಮುಗಿಸೋಣ. ನೀವು ಖರ್ಚು ಮಾಡುತ್ತಿದ್ದೀರಿ, ಅದು escalation ಆಗುತ್ತಿರುತ್ತದೆ. ನಮ್ಮ estimation ನಲ್ಲಿ ಯದ್ವಾತದ್ವಾ 10%, 20%, 30%, 40% ಆಗುತ್ತಿರುತ್ತದೆ. ಅದಕ್ಕೆ ನಾನು suggest ಮಾಡುತ್ತೇವೆ, ಈ ಬಾರಿ ಕೊಟ್ಟಿರುವುದೂ ಕೂಡ compare to this fiscal year ಮುಂದಿನ ವರ್ಷಕ್ಕೆ ಕೊಟ್ಟಿರುವುದು ಏನೇನು ಸಾಲದು. ಈಗಲೂ ನಾನು ಹೇಳುತ್ತೇನೆ, 30,000 ಕೋಟಿ ರೂಪಾಯಿಯನ್ನು ಐದು ವರ್ಷದಲ್ಲಿ, ಮೊದಲನೆ ವರ್ಷ, ಎರಡನೇ ವರ್ಷ, ಮೂರನೇ ವರ್ಷ ಇಷ್ಟು ಖರ್ಚು ಮಾಡುತ್ತೇವೆಂದು ಒಂದು Action Plan ಮಾಡಿ. ಒಂದು Vision Document ಎಂದು ಏನೋ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಬರೀ Vision Document ಮಾಡಿದರೆ ಸಾಲುವುದಿಲ್ಲ. You should be backed up with the allocation. ಆಗ ಮಾತ್ರ ನಮ್ಮ ನೀರಾವರಿ ಪ್ರಾಜೆಕ್ಟ್‌ಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಬಗ್ಗೆ ನೀವು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗಿಲ್ಲ, ಯೋಚನೆ ಮಾಡುವುದಕ್ಕೆ ಹೋಗಿಲ್ಲ. ಮಾನ್ಯ ಯಡಿಯೂರಪ್ಪ ನವರು ಇಲ್ಲಿ ಕುಳಿತಿದ್ದಾಗ ನೀರಾವರಿ ಬಗ್ಗೆ ಮಾತನಾಡಿರುವಂತಹ ಅವರ ಭಾಷಣಗಳನ್ನು ತೆಗೆದು ನೋಡಬೇಕು, ಬಹಳ ಮಾತನಾಡಿದ್ದಾರೆ. ಮಾತನಾಡಲಿ, ನಮಗೆ ಏನೂ ತಕರಾರು ಇಲ್ಲ. ಆದರೆ ಅಧಿಕಾರಕ್ಕೆ ಬಂದಾಗ ಅವರೇ ಹಣಕಾಸಿನ ಮಂತ್ರಿಯಾಗಿ percentage of the plan ನಲ್ಲಿ 30% ಇರುವುದನ್ನು 13% ಗೆ ಇಳಿಸಿದ್ದೀರಿ. ಕನಿಷ್ಟ 25% of the paln ಖರ್ಚು ಮಾಡುತ್ತೇವೆಂದು ಹೇಳಬೇಕಾಗಿತ್ತು. ಆ ತರಹದ ಒಂದು political will

ಇರಬೇಕಾಗುತ್ತದೆ. ಆಂಧ್ರದವರು ಮಾಡಿಕೊಂಡು ಹೋಗಿದ್ದಾರೆ, ನಮ್ಮ ಕೃಷ್ಣ Tribunal ನಾಳೆ verdict ಕೊಡಬಹುದು. ಆಗ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಕಾವೇರಿ ವಿಚಾರದಲ್ಲಿ ಯಾವ ಪರಿಸ್ಥಿತಿ ಇದೆ, ಆ ರೀತಿಯಾಗುತ್ತದೆ. ನಾನೂ ಈಗಲೂ ಕೂಡ, I strongly recommend and it is my sincere suggestion.. you also think over it seriously. ನೀವು power ಗೆ ದುಡ್ಡು ಕೊಟ್ಟಿದ್ದೀರಾ ಎಂದರೆ ಅದೂ ಇಲ್ಲ. ಇಲ್ಲಿ ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. 2,500 ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳುತ್ತಾರೆ. 500 ಕೋಟಿ ರೂಪಾಯಿ equity ಕೊಡುತ್ತೇವೆ, ಖಾಸಗಿಯವರ ಜೊತೆ ಸಹಭಾಗಿತ್ವದಲ್ಲಿ ಮಾಡುತ್ತೇವೆಂದು ಹೇಳುತ್ತೀರಿ. ನೀವು power ನಲ್ಲಿ expert ಇರುವವರನ್ನು ಕೇಳಿ. That amount is very very meager. power ಉತ್ಪಾದನೆ ಮಾಡಬೇಕಲ್ಲ. ಇರುವಂತಹ on going Project ಗಳನ್ನು complete ಮಾಡುವುದಕ್ಕೆ ನೀವು economic sector ನಲ್ಲಿ ಜಾಸ್ತಿ ಹಣ ಖರ್ಚು ಮಾಡದೆ ಹೋದರೆ, how can you generate the required power ಎಂದು ನೀವು ಇಲ್ಲಿ ತೋರಿಸಬೇಕಾಗಿರುವಂತಾದ್ದು. plan ದೊಡ್ಡ size ಮಾಡುತ್ತೀರಿ, ಅದನ್ನು cut down ಮಾಡುತ್ತೀರಿ. ಎಷ್ಟು ದುಡ್ಡು ಕೊಡುತ್ತೀರಿ ಎಂದು ಹೇಳಿರುತ್ತೀರಿ, ಅಷ್ಟು ದುಡ್ಡು ಕೊಡುವುದಿಲ್ಲ. ಹೀಗಿದ್ದಾಗ achievement ಹೇಗಾಗುತ್ತದೆ? That is the lacuna, ಈ ಬಜೆಟ್‌ನಲ್ಲಿ ಇರತಕ್ಕಂಥ defect. ಇಡೀ ಬಜೆಟ್‌ನ್ನು ನೀವು ಸಮಗ್ರವಾಗಿ ನೋಡಿ. ಅದಕ್ಕೆ ನಾನು ಹೇಳಿದ್ದು, Performance Budget ಇದ್ದಿದ್ದರೆ comparative ಆಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಅದರ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ನಾವು ಕೊಡತಕ್ಕಂಥ ಸಲಹೆಗಳು, ಹೇಳತಕ್ಕಂಥ ವಿಚಾರಗಳು ಅನುಕೂಲವಾಗುತ್ತದೆ. ಇದರಲ್ಲಿ politics ಏನೂ ಇಲ್ಲ. ಮಾನ್ಯ ಅಧ್ಯಕ್ಷರೇ, ಇವರು ಒಂದು ಕಡೆ ಹಣವನ್ನು mobilize ಮಾಡುವುದಿಲ್ಲ. ಇನ್ನೊಂದು ಕಡೆ ಖರ್ಚು ಮಾಡುವುದಿಲ್ಲ. ಆಮೇಲೆ ಬಹಳ ಹೇಳಿದರು ನಾನು ಹೇಳುತ್ತೇನೆಂದು, I don't know, ಅವರು report ಕೊಡಬೇಕು. ಸಾಲ ಜಾಸ್ತಿ ಮಾಡಿದರು, ಸಾಲ ಮಾಡಿ ಆಯಿತಲ್ಲ, ನಾನು ಹೇಳಿದ್ದೆನಲ್ಲ. 2006–07 ನೇ ಸಾಲಿನಲ್ಲಿ 56 ಕೋಟಿ ರೂಪಾಯಿ ಇದ್ದಿದ್ದು, 2010–11 ಕ್ಕೆ

94 ಸಾವಿರ ಕೋಟಿ ರೂಪಾಯಿಯಾಗಿದೆ. 4,152 ಕೋಟಿ ರೂಪಾಯಿ surplus ಇದ್ದದ್ದು, 500 ಕೋಟಿ ರೂಪಾಯಿಗೆ ಬಂದಿದೆ. ಮುಂದಿನ ವರ್ಷಕ್ಕೆ ಸಾಲ ಮತ್ತು ಬಡ್ಡಿ ಕಟ್ಟಬೇಕಾಗಿರುವುದು 10,000 ಕೋಟಿ ರೂಪಾಯಿಗೆ ಬಂದುಬಿಟ್ಟಿದೆ. ಸಾಲ ತಂದು ಹೋಳಿಗೆ ತಿಂದ ಎಂದ ಹಾಗೆ ಆಗಿಬಿಟ್ಟಿದೆ. ನಮ್ಮ ಇನ್ನು ಬೇರೆ ರೀತಿ ಹೇಳುತ್ತಾರೆ. ಈ ರೀತಿ ಇದೆ ಪರಿಸ್ಥಿತಿ. ಮಾನ್ಯ ಯಡಿಯೂರಪ್ಪನವರು, as a Finance Minister fiscal discipline ಮಾಡುವುರದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಇವತ್ತು 2010–11ರ ಆಯವ್ಯಯ ಮುಂಗಡ ಪತ್ರ ಮಂಡಿಸಿದ್ದಾರೆ. ಅದರಲ್ಲಿ ವಾಸ್ತವಾಂಶಗಳಿಗಿಂತ ಹೆಚ್ಚಾಗಿ ಸತ್ಯಕ್ಕೆ ದೂರವಾದಂತಹ ಅಂಕಿ ಅಂಶಗಳಿವೆ. Transparent ಆಗಿರುವುದಕ್ಕಿಂತ hidden ಆಗಿರುವುದೇ ಹೆಚ್ಚಾಗಿದೆ. ಅಭಿವೃದ್ಧಿಗೆ ಈ ರಾಜ್ಯದ ವೇಗವನ್ನು sustain ಮಾಡಿಕೊಳ್ಳಬೇಕಾಗಿತ್ತಲ್ಲ, the sustainability of the growth is not there in this budget. ಈಗಾಗಲೇ ರಾಜ್ಯದ ಬೆಳವಣಿಗೆ ಕುಂಠಿತವಾಗಿಬಿಟ್ಟಿದೆ. ನಾವು ಕಳೆದ ಏಳೆಂಟು ವರ್ಷಗಳಿಂದ ನೋಡುತ್ತಿದ್ದೇವೆ. ಆಮೇಲೆ ಬಜೆಟ್ ಮಂಡಿಸುವಾಗ ಒಂದು ಕಡೆ ನಾವು district-wise Human Development Index ತಂದಿದ್ದೇವೆ ಎಂದು ಎಲ್ಲಿಯಾದರೂ ಒಂದು ಕಡೆ ನೀವು ಬಜೆಟ್ ಪುಸ್ತಕದಲ್ಲಿ mention ಮಾಡಿದ್ದೀರಾ? ಮತ್ತೆ ಏಕೆ ಅದನ್ನು ಮಾಡಿರುವುದು? ನಾನು Planning Minister ಇರುವಾಗ ಎರಡು Human Development Index ತೆಗೆದುಕೊಂಡು ಬಂದೆನು. ಆದಾದಮೇಲೆ ಈಗ ಜಿಲ್ಲಾವಾರು Human Development Index ತೆಗೆದುಕೊಂಡು ಬರುತ್ತಿದ್ದೇನೆ. ಬಜೆಟ್ ಮಾಡುವಾಗ Human Development Index ಮಾಡುವಾಗ ಏನು indicators ಇವೆ, ಯಾವ್ಯಾವ ಜಿಲ್ಲೆ backward ಇದೆ, ಯಾವ್ಯಾವ ಜಿಲ್ಲೆ forward ಇದೆ, ಯಾವ್ಯಾವುದು literacy ನಲ್ಲಿ, human life expectancy ನಲ್ಲಿ, infant mortality ನಲ್ಲಿ ಇವೆಲ್ಲ ಇತ್ತು. ಈಗ ರಾಯಚೂರು consistent ಆಗಿ 27ನೇ ಸ್ಥಾನದಲ್ಲಿದೆ. ಅದಕ್ಕೆ ಏನೂ ವಿಶೇಷವಾದಂತಹ ಗಮನ ಕೊಟ್ಟಿದ್ದೀರಿ? ಡಾ: ನಂಜುಂಡಪ್ಪನವರ ವರದಿಯನ್ನು ಬೇರೆಯವರು ಜಾರಿ ಮಾಡಿಲ್ಲ, ನಾವು ಮಾಡುತ್ತೇವೆಂದು ಹೇಳುತ್ತೀರಿ, ಓಕೆ, ಮಾಡಿ. ಈ ವರ್ಷ ಜನವರಿಯವರೆಗೆ ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ? ನಿನ್ನೆ ಇಲ್ಲಿ

ಅಸೆಂಬ್ಲಿಯಲ್ಲಿ ಉತ್ತರ ಕೊಟ್ಟಿದ್ದೀರಿ. 2,577 ಕೋಟಿ ರೂಪಾಯಿಯಲ್ಲಿ ಜನವರಿಗೆ ಕೇವಲ ಒಂದು ಸಾವಿರ ಚಿಲ್ಲರೆ ಕೋಟಿ ಬಿಡುಗಡೆ ಮಾಡಿದ್ದೀರಿ. ಪಾಪ ನಮೋಶಿಯವರು ಎಲ್ಲೋ ಒಂದು ಕಡೆ ಅತ್ತಿದ್ದಾರೆ. ನಿನ್ನೆ ಅಮರೇಗೌಡ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದು, 1,200 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ.

(5-30 PM)

ಮೂರು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ನೀವು ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ? ಮನೆಗಳನ್ನು ಕಟ್ಟಿಸಿದ್ದೀರಾ? ಕೇಂದ್ರ ಸರ್ಕಾರದಿಂದ ಇಂದಿರಾ ಅವಾಜ್ ಯೋಜನೆಗೆ ದುಡ್ಡು ಬರುತ್ತದೆ. ಅವುಗಳನ್ನೇ ಕಟ್ಟಿಸಿಲ್ಲ. Governor Adress ನಲ್ಲಿ 80 ಸಾವಿರ ಸೈಟ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ದಯಮಾಡಿ ಯಾವ ಯಾವ ಜಿಲ್ಲೆಗಳಲ್ಲಿ, ಯಾವ್ಯಾವ ತಾಲ್ಲೂಕುಗಳಲ್ಲಿ ಎಲ್ಲಿ ಕೊಟ್ಟಿದ್ದೀರೆಂಬ ಬಗ್ಗೆ ಮಾಹಿತಿಯನ್ನು ಕೊಡಿ, 2009–10 ರಲ್ಲಿ 80,000 ಸೈಟ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಎಷ್ಟು ಇಟ್ಟಿದ್ದೀರಿ? ಈ ವರ್ಷ ಮನೆಗಳನ್ನು ಕಟ್ಟುವುದಕ್ಕೆ 1,200 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು 200–300 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಮನೆಗಳನ್ನು ಎಲ್ಲಿ ಕಟ್ಟುತ್ತೀರಿ? ನೀವು ಯಾವುದನ್ನು ಮಾಡಿದ್ದೀರಿ? ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೂ ದುಡ್ಡು ಕೊಡುವುದಿಲ್ಲ, ನೀರಾವರಿಗೂ ದುಡ್ಡು ಕೊಡುವುದಿಲ್ಲ, power generation ಗೂ ದುಡ್ಡು ಕೊಡುವುದಿಲ್ಲ. Social sector ನಲ್ಲೂ ದುಡ್ಡು ಇಲ್ಲ, Economic sector ನಲ್ಲೂ ದುಡ್ಡು ಇಲ್ಲ. ಒಂದಂತೂ ನಿಜ, economic services ಮಾತ್ರ ನಿರಂತರವಾಗಿ ಹೆಚ್ಚು ಆಗುತ್ತಾ ಹೋಗುತ್ತಿದೆ, but not in the social sector, not in the economic sector. ಇನ್ನೊಂದು ಯಾವುದು ಹೆಚ್ಚಿಗೆ ಹೋಗುತ್ತಿದೆಯೆಂದರೆ ಬಡ್ಡಿ. ಈ ವರ್ಷ 5,250 ಕೋಟಿ interest payment ಇರುವಂಥದ್ದು, ಅದು Revised Estimate ನಲ್ಲಿರುವಂಥದ್ದು, ಮುಂದಿನ ವರ್ಷಕ್ಕೆ interest payment 6,316 ಕೋಟಿ ರೂಪಾಯಿಗಳು ಇದು ಮಾತ್ರ ಹೆಚ್ಚು ಆಗುತ್ತಿದೆ. ಈ ವಷ 5,200 ಚಿಲ್ಲರೆ ಕೋಟಿ ರೂಪಾಯಿಗಳು ಇದು ಹೆಚ್ಚು ಆಗುತ್ತಿದೆ. But development ನ ವೇಗ ಎಷ್ಟು ಇದೆ? ಅದಕ್ಕೆ ಎಷ್ಟು investment ಮಾಡುತ್ತಿದ್ದೀರೆಂಬುದು

ಇಲ್ಲ. ನೀವು ಬಂದಮೇಲೆ ಇಡೀ ರಾಜ್ಯದ ಅಭಿವೃದ್ಧಿಯನ್ನು ಕುಂಠಿತ ಗೊಳಿಸಿದ್ದೀರಿ. ರಾಜ್ಯದ ಅಭಿವೃದ್ಧಿ ಮಂತ್ರವನ್ನು ಹೇಳಿಕೊಂಡು ಬಂದು, ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ. ನೀವು ಅದಕ್ಕೆ ಕಾರಣವನ್ನು ಏನೇ ಹೇಳಿಕೊಳ್ಳಬಹುದು. Economic slow down ಆಗಿದೆ, ಪ್ರವಾಹ ಬಂತು, ಇವೆಲ್ಲಾ ಕಾರಣಗಳನ್ನು ಹೇಳಬಹುದು. ನೀವು ಪ್ರವಾಹಕ್ಕೂ ಹಣವನ್ನು ಖರ್ಚು ಮಾಡಿಲ್ಲ. ಇದು ಜನಪರವಾಗಿರುವಮಥ ಆಯವ್ಯಯವೆಂದು ಹೇಳುವುದಕ್ಕೆ ಬರುವುದಿಲ್ಲ. ಇದು ಬಡವರ ಪರವಾಗಿದೆ, ರೈತರ ಪರವಾಗಿದೆ, ಸಾಮಾನ್ಯ ಜನರ ಪರವಾಗಿದೆ, ನಾವು ಕೃಷಿಕರ ಸ್ನೇಹಿಗಳು, ಕೃಷಿಕರ ಪರವಾಗಿದ್ದೇವೆ, ಬಡವರ ಪರವಾಗಿದ್ದೇವೆಂದು ನೀವು ಹೇಳಿದ್ದೀರಿ, ಎಲ್ಲಿ ಇದ್ದೀರಿ? ಒಂದು ದೂರದೃಷ್ಟಿಯೂ ಇಲ್ಲ. Short term ನಲ್ಲಿ ಏನು ಮಾಡಬೇಕು, long term ನಲ್ಲಿ ಏನು ಮಾಡಬೇಕೆಂಬ ಬಗ್ಗೆ ಒಂದು vision ಇಲ್ಲ. ಮುಂದಿನ ವರ್ಷಕ್ಕೆ 3% ಒಳಗಡೆ fiscal deficit ತರುತ್ತೇವೆಂದು ಹೇಳುತ್ತೀರಿ. What is your action plan? ಮಾಡುವುದಕ್ಕೆ ಎಲ್ಲಿ ಇದೆ? 2.96 ಬರುತ್ತೇವೆಂದು ಹೇಳುತ್ತೀರಿ, ಎಲ್ಲಿದೆ? ಏನು ಮಾಡುತ್ತೀರಿ? ಸತ್ಯಕ್ಕೆ ಹತ್ತಿರವಾದರೂ ಇರಬೇಕಲ್ಲಾ? I tell you, the fiscal deficit, ನೀವು ಈ ವರ್ಷ 3.77 ಎಂದು ಏನು ಹೇಳಿಕೊಂಡಿ ದ್ದೀರಲ್ಲಾ, it will be more than that. ನೀವು ಒಪ್ಪಲಿ, ಬಿಡಲಿ, my information is, it will be more than that. So entire fiscal discipline ಹಾಳು ಮಾಡಿದ್ದೀರಿ. ನಾವು 2004–05ರಿಂದ ಆ fiscal discipline ಅನ್ನು ತೆಗೆದುಕೊಂಡು ಬಂದಿತ್ತು, Fiscal Responsibility Act, 2002 ಆದಮೇಲೆ ಅಲ್ಲಿಂದ 2007 ರಿಂದ 2008ರವರೆಗೆ ಏನು ಆಗಿತ್ತು, ಅದೆಲ್ಲವನ್ನು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಹಾಳು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಅಲಂಬಿಸುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ. ಇದು general discussion ಆಗಿರುವುದರಿಂದ details ಗೆ ಹೋಗದೆ, ನನಗೆ ವಿಚಾರಗಳನ್ನು ಪ್ರಸ್ತಾಪ ಮಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ತಮಗೆ ವಂದಿಸಿ, ಈ ಬಜೆಟ್ ಅನ್ನು ವಿರೋಧ ಮಾಡುತ್ತಿದ್ದೇನೆ. ಇದು ಜನ ವಿರೋಧಿ ಬಜೆಟ್, ರೈತರ ವಿರೋಧಿ ಬಜೆಟ್, ಬಡವರ ವಿರೋಧಿ ಬಜೆಟ್ ಇವತ್ತು ಆಹಾರ

ಪದಾರ್ಥಗಳ ಬೆಲೆಯನ್ನು ಇನ್ನು ಹೆಚ್ಚು ಮಾಡುವಂಥ, inflation ಅನ್ನು ಹೆಚ್ಚುಮಾಡುವಂಥ ಬಜೆಟ್. ಮತ್ತೆ ಈ ರಾಜ್ಯವನ್ನು ಸಾಲದ ಸುಳಿಗೆ ತೆಗೆದುಕೊಂಡು ಹೋಗುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. These are my general reactions to this budget. ಆಮೇಲೆ demands ಮೇಲೆ detail ಆಗಿ ಚರ್ಚೆ ಮಾಡಬೇಕಾಗುತ್ತದೆ. ನಾನು ಇಷ್ಟು ಮಾತನ್ನು ಹೇಳಿ, ತಮಗೆ ವಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಶಾಸನ ರಚನೆ .. .. .

ಶ್ರೀ ಸಿದ್ಧರಾಮಯ್ಯ : ಶಾಸನ ಯಾವುದು ಮಾಡುತ್ತೀರಿ?

ಅಧ್ಯಕ್ಷರು : ಎರಡು ಬಿಲ್ ಇದೆ, introduction ಅಷ್ಟೆ.

ಶ್ರೀ ಸಿದ್ಧರಾಮಯ್ಯ : ಯಾವುದೆಂದು ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : Stamp duty ದು ಒಂದು.

ಶ್ರೀ ಸಿದ್ಧರಾಮಯ್ಯ : Stamp duty ದು ಒಂದು introduction ಮಾಡಲಿ. Slaughter ದು ಬೇಡ, ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರಿ, ಮತ್ತೆ ತರುತ್ತೀರಿ. ಯಾವ ರೀತಿ ಇದು?

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಬಿಲ್ ಬಗ್ಗೆ ಚರ್ಚೆ ಆಗಿರಲಿಲ್ಲ. ಈಗ ಬಿಲ್ ಬಗ್ಗೆ ಚರ್ಚೆಯಾಗುವಾಗ ಹೇಳುತ್ತೇವೆ. ನಾವು ಏಕೆ ಹಿಂದಕ್ಕೆ ತೆಗೆದುಕೊಂಡಿದ್ದೇವೆಂದು ಹೇಳುತ್ತೇವೆ. ಈಗ bill introduce ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಇಲ್ಲ. ..

ಶ್ರೀ ಎಸ್. ಸುರೇಶ್ ಕುಮಾರ್ : ಏಕೆ, introduce ಮಾಡುವುದಕ್ಕೆ ಏನು ತೊಂದರೆ ಇದೆ? It is the duty of the Government and it is the right of the Government to introduce. ನಿಮಗೆ ಚರ್ಚೆ time ನಲ್ಲಿ ಹೇಳುತ್ತೇವೆ.

SRI SIDDARAMAIAH : It is our right to oppose the introduction. ನಾವು introduction ಅನ್ನೇ oppose ಮಾಡಿದ್ದೇವೆ. It is our right to oppose.

SRI S.SURESH KUMAR : I am sorry. Introduction ಆದಮೇಲೆ ಚರ್ಚೆ time ನಲ್ಲಿ ಏಕೆ oppose ಮಾಡುತ್ತೀರೆಂದು ಹೇಳಿ.

ಶ್ರೀ ಸಿದ್ಧರಾಮಯ್ಯ : Introduction ಮಾಡುವುದಕ್ಕೆ ನಮ್ಮ opposition ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Introduction ಆಗಲಿ, ಆಮೇಲೆ ಚರ್ಚೆ ಮಾಡಿ. ಅದರ ಬಗ್ಗೆ ನಿಮಗೆ ಏನು ಹೇಳಬೇಕೆಂದು ಇದೆಯೋ ಅದನ್ನು ಹೇಳಿ.

ಅಧ್ಯಕ್ಷರು : ಇನ್ನು ಅದನ್ನು ತೆಗೆದುಕೊಂಡೇ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಈ ಸದನ ಇರುವುದೇ legislation ಸಲುವಾಗಿ, ಅದಕ್ಕಾಗಿ ಸರ್ಕಾರದ ಕಾರ್ಯಕ್ರಮಗಳು ಇವೆ. ಯಾವ ರೀತಿ opposition ನವರು notice ಕೊಡುತ್ತಾರೋ, ಆ ರೀತಿ ಸರ್ಕಾರಿ ಕಾರ್ಯ ಕಲಾಪಗಳು ನಡೆಯಬೇಕಾಗುತ್ತದೆ. ಅದಕ್ಕಾಗಿ ನಾವು ಸಾಕಷ್ಟು Bill ಗಳನ್ನು introduce ಮಾಡುತ್ತೇವೆ. ಅದು ಆದಮೇಲೆ ಒಪ್ಪುವುದು, ಒಪ್ಪದೇ ಇರುವುದು ಬೇರೆ ಪ್ರಶ್ನೆ. ಆದರೆ bill introduction stage ನಲ್ಲೆ oppose ಮಾಡುತ್ತಾರೆಂದರೆ entire legislative activity ಗೆ oppose ಮಾಡಿದ ಹಾಗೆ ಆಗುತ್ತದೆ.

ಶ್ರೀ ರೋಷನ್ ಬೇಗ್ : ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಆಗಲ್ಲ. 1964 ನಲ್ಲೇ ಈ Act ಇದೆ.

ಶ್ರೀ ಬಸವರಾಜ ಬೊಮ್ಮಾಯಿ : ನಿಮಗೆ discussion time ನಲ್ಲಿ ನಾವು ಏಕೆ ಮಾಡುತ್ತೇವೆಂಬುದನ್ನು ಹೇಳುತ್ತೇವೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು introdution ಗೆ ಏಕೆ ವಿರೋಧ ಮಾಡುತ್ತೇವೆಂದರೆ, ಇದು ಜನ ವಿರೋಧಿ ಕಾಯಿದೆ. ಇದು ಬಹು ಸಂಖ್ಯಾತ ಜನರಿಗೆ ವಿರುದ್ಧವಾಗಿರುವಂಥ ಕಾಯಿದೆ. ನಾವು ಅಂಥ ಕಾಯಿದೆಯನ್ನು ಕಾನೂನು ಮಾಡಬಾರದು. ಈಗಾಗಲೇ 1964 ರಲ್ಲಿ ಒಂದು Cow Slaughter Act ಇದೆ. It is under implementation. Why another Act?

ಶ್ರೀ ಜಗದೀಶ್ ಶೆಟ್ಟರ್ : ತಾವು ಏಕೆ ಈ ರೀತಿ ವಾದ ಮಾಡುತ್ತೀರಿ? ನಾವು ಕಾನೂನು, Bill ಏನು ಪಾಸ್ ಮಾಡುತ್ತೇವೆ. ನಾವು

ಆದರ ವಿಷಯವನ್ನು ಹೇಳುತ್ತೇವೆ. ಚರ್ಚೆ ಮಾಡೋಣ. ಈ Assembly ಚರ್ಚೆ ಮಾಡುವುದಕ್ಕೆ ಇರುವುದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರೆ, 1964ನೇ ಇಸವಿಯಲ್ಲಿ ಒಂದು ಕಾಯಿದೆ ಜಾರಿಗೆ ಬಂದಿದೆ. ಆ Act ಇಲ್ಲಿದೆ.

ಅಧ್ಯಕ್ಷರು : ಈಗ ಅದನ್ನು ತೆಗೆದುಕೊಂಡಿಲ್ಲ. ಈಗ first, Stamp Act ಒಂದು introduce ಮಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, Bill introduction ಮಾಡುತ್ತೇವೆ. ಚರ್ಚೆ ಮಾಡಲಿ, ಇವತ್ತೆ discussion ಆಗಲಿ, ಇವತ್ತೆ vote ಗೆ ಹಾಕಲಿ. We are ready.

SRI SIDDARAMAIAH : The Karnataka Prevention of Cow Slaughter and Cattle Preservation Act, 1964...

ಶ್ರೀ ಬಸವರಾಜ ಬೊಮ್ಮಾಯಿ : ಬೇಕಾದಷ್ಟು Act ಗೆ amendment ಬಂದಿದೆ. ಬೇಕಾದಷ್ಟು Act ನ್ನು ಮತ್ತೆ ಮರಳಿ ತಂದಿದ್ದಾರೆ. ಆ ರೀತಿ ಬೇಕಾದಷ್ಟು ಬಂದಿದೆ. ತಮಗೆ ಇದೆಲ್ಲಾ ಗೊತ್ತಿರುವ ವಿಚಾರವಾಗಿದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮದು political agenda. You have got a political agenda.

(ಗೊಂದಲ)

ಅಧ್ಯಕ್ಷರು : ಈಗ ಈಶ್ವರಪ್ಪನವರು ಮಾತನಾಡುತ್ತಾರೆ.

(ಗೊಂದಲ)

SRI BASAVARAJA BOMMAI : You have got a political agenda.

SRI SIDDARAMAIAH : What is wrong in that?

(ಗೊಂದಲ)

ಅಧ್ಯಕ್ಷರು : ಮೊದಲು Stamp Act introduce ಆಗಲಿ, ಆಮೇಲೆ ಅದನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ. ದಯಮಾಡಿ ಬಜೆಟ್ ಸೆಷನ್‌ನಲ್ಲಿ ಬಿಲ್‌ಗಳನ್ನು ಕಡಿಮೆ ಮಾಡಿ.

ಬಜೆಟ್ ಮೇಲೆ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ. ಇನ್ನೂ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರಷ್ಟೇ. ಇನ್ನೂ ನಮ್ಮ ಪಕ್ಷದ ಒಬ್ಬರಿಗೂ ಮಾತನಾಡಲು ಅವಕಾಶ ಕೊಟ್ಟಿಲ್ಲ. ಬಜೆಟ್ ಮೇಲೆ ಮಾತನಾಡಿ ನಾವು ಸರ್ಕಾರಕ್ಕೆ ಕೆಲವು ಸಲಹೆ, ಸೂಚನೆಗಳನ್ನು ಕೊಡಬೇಕಾಗಿದೆ. ಇದರಲ್ಲಿ ಒಂದು ವರ್ಷದ ಭವಿಷ್ಯ ಅಡಗಿದೆ. Bill ಗಳನ್ನೂ ತರೋಣ. ಅದರ ಮೇಲೆ ನಮ್ಮ ಅಭಿಪ್ರಾಯ ಏನಿದೆ ಎನ್ನುವುದನ್ನು ನಾವು ಹೇಳೋಣ, ಅವರ ಅಭಿಪ್ರಾಯ ಏನಿದೆ ಅದನ್ನು ಅವರು ಹೇಳುತ್ತಾರೆ. ಅಂತಿಮವಾಗಿ ಅದು ಏನಾಗುತ್ತದೆ ಎನ್ನುವುದು ಈಗ ಮುಖ್ಯವಲ್ಲ. ದಯಮಾಡಿ ಬಜೆಟ್ ಮೇಲೆ ಮಾತನಾಡುವುದಕ್ಕೆ ನಮ್ಮ ಪಕ್ಷದವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : B.A.C. ಯಲ್ಲಿ ತೀರ್ಮಾನವಾದ ಹಾಗೆ ದಿವಸ ಎರಡೆರಡು Bills introduce ಮಾಡಲು ಅವಕಾಶ ಕೊಡಲಾಗುತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾಡಿ. ಆದರೆ Bill ಗಳನ್ನು ಇನ್ನೊಂದು ಅಧಿವೇಶನದಲ್ಲಿ ತೆಗೆದುಕೊಂಡು ಬನ್ನಿ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇಷ್ಟು ಹೊತ್ತಿನವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ತುಂಬ ಚೆನ್ನಾಗಿ ಮಾತನಾಡಿದರು. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ. . . . .

ಶ್ರೀ ಟಿ.ಬಿ.ಜಯಚಂದ್ರ : ಅವರ ಭಾಷಣಕ್ಕೆ reply ಕೊಡುತ್ತಿದ್ದೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಲ್ಪ ಕೇಳಿ. ಉಪನಾಯಕರಾಗಿ ನೀವು ಈ ರೀತಿ ಮಾತನಾಡಿದರೆ ನಾವು ಏನು ಉತ್ತರ ಕೊಡಬೇಕು. ನಾವು ಏನು ಹೇಳುತ್ತೇವೆ ಅದನ್ನು ಕೇಳುವುದನ್ನಾದರೂ ಅಭ್ಯಾಸ ಮಾಡಿಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಧಾಟಿ ಹಾಗಿತ್ತು.

ಶ್ರೀ ಕೆ.ಎಸ್.ಈಶ್ವರಪ್ಪ : ನನ್ನ ಧಾಟಿ ಹಾಗಿದೆಯೇ? ದೇವರೂ ಬಂದರೂ ನನ್ನ ಧಾಟಿಯನ್ನು ಬದಲಾಯಿಸಲು ಆಗುವುದಿಲ್ಲ. ಯಾವಾಗಲೂ ನನ್ನ ಧಾಟಿ, ನನ್ನ ಧಾಟಿಯೇ. ಬರೀ ಹೇಳಿದರೆ ಧಾಟಿಯಾಗುವುದಿಲ್ಲ, ನನ್ನದು ಗಂಡು ಧಾಟಿಯೇ. ಆಡಳಿತ ಪಕ್ಷ ಯಾವ Bill ತರಬೇಕು, ಯಾವ Bill ತರಬಾರದು ಎನ್ನುವುದ್ನು ವಿರೋಧ ಪಕ್ಷವನ್ನು ಕೇಳಿ ಮಾಡಬೇಕು ಎನ್ನುವುದೇನೂ ಇಲ್ಲ. ಗೋಹತ್ಯೆ ನಿಷೇಧದ ಬಗ್ಗೆ Bill ಅನ್ನು ತರುವುದಕ್ಕೆ ನಾವು ಬಿಡುವುದಿಲ್ಲ ಎಂದು ಹೇಳುವಂಥ ಅಧಿಕಾರವೂ ಇವರಿಗಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಈಗ stamp Act ತೆಗೆದುಕೊಂಡಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ : ಸ್ವಲ್ಪ ತಡೆಯಿರಿ ಸ್ವಾಮಿ. ಅವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಆ ವಿಚಾರ ಚರ್ಚೆಗೆ ಬರಲಿ, ಆಗ ಆ ವಿಚಾರವನ್ನು ಮಾತನಾಡೋಣ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಮೊದಲು ಹೇಳುವುದನ್ನು ಕೇಳುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : Bill ಅನ್ನು ನಾವು ತರುತ್ತೇವೆ, introduce ಮಾಡುತ್ತೇವೆ ಎಂದ ತಕ್ಷಣವೇ ವಿರೋಧ ಪಕ್ಷದ ನಾಯಕರು, ನಾವು ಗೋ ಹತ್ಯೆ ನಿಷೇಧದ ಬಿಲ್ ಅನ್ನು ವಿರೋಧ ಮಾಡುತ್ತೇವೆ, ತರುವುದಕ್ಕೇ ಬಿಡುವುದಕ್ಕೆ ಎಂದರಲ್ಲ, ಅದಕ್ಕೇ ನಾನು ಹೇಳುವುದಕ್ಕೆ ಹೊರಟಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಕಂದಾಯ ಸಚಿವರು.

ಶ್ರೀ ಕೆ.ಎಸ್.ಈಶ್ವರಪ್ಪ : ಅದಕ್ಕೋಸ್ಕರ ಸರ್ಕಾರ Bill ತಂದಂಥ ಸಂದರ್ಭದಲ್ಲಿ ಚರ್ಚೆಯಲ್ಲಿ ಭಾಗವಹಿಸಿ. ಆದರೆ ತರುವುದಕ್ಕೆ ಬಿಡುವುದಿಲ್ಲ ಎಂದು ಹೇಳುವ ಅಧಿಕಾರ ನಿಮಗಿಲ್ಲ.

ಶ್ರೀ ಸಿದ್ಧರಾಮಯ್ಯ : ಬಿಡುವುದಿಲ್ಲ ಎಂದು ನಾನು ಹೇಳಲಿಲ್ಲ, ವಿರೋಧ ಮಾಡುತ್ತೇನೆ ಎಂದು ಹೇಳಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ತರುವುದಾದರೆ ಅದನ್ನು ಬಿಡುವುದಿಲ್ಲ ಎಂದು ನೀವು ಹೇಳಿದಿರಿ.

ಶ್ರೀ ಸಿದ್ಧರಾಮಯ್ಯ : ವಿರೋಧ ಮಾಡುತ್ತೇನೆ ಎಂದು ನಾನು ಹೇಳಿದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಎಷ್ಟು ಬೇಕಾದರೂ ವಿರೋಧ ಮಾಡಿ.

ಶ್ರೀ ಸಿದ್ದರಾಮಯ್ಯ : Move ಮಾಡುವುದಕ್ಕೇ ವಿರೋಧ ಮಾಡುತ್ತೇನೆ.

O.14 F-24

ಶ್ರೀ ಕೆ.ಎಸ್.ಈಶ್ವರಪ್ಪ : ನಿಮ್ಮನ್ನು ಕೇಳಿ Move ಮಾಡಬೇಕು ಎಂದು ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Move ಮಾಡುವುದಕ್ಕೇ ವಿರೋಧ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಮಗೆ ಅಧಿಕಾರ ಇದೆ, ನಾವು move ಮಾಡಿಯೇ ಮಾಡುತ್ತೇವೆ. Bill ಪಾಸೂ ಮಾಡುತ್ತೇವೆ.

(ಗೊಂದಲ)

ಶ್ರೀ ಆರ್.ರೋಷನ ಬೇಗ್ : ನಾವು ವಿರೋಧ ಮಾಡಿಯೇ ಮಾಡುತ್ತೇವೆ, it is our right.

(ಗೊಂದಲ)

SRI SIDDARAMAIAH : It is my right. ವಿರೋಧ ಮಾಡುವುದು ನಮ್ಮ ಹಕ್ಕು. I oppose this.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಈಗ ಕರುಣಾಕರರೆಡ್ಡಿಯವರು.

7. ಶಾಸನ ರಚನೆ :

(ಅ) ವಿಧೇಯಕಗಳನ್ನು ಮಂಡಿಸುವುದು

ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2010

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010 ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಿ.ಕರುಣಾಕರರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಟಾಂಪು ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ – III

ಅಧ್ಯಕ್ಷರು : ಈಗ, 2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ. ರೇವುನಾಯಕ್ ಬೆಳಮಗಿ ಯವರು ವಿಧೇಯಕವನ್ನು ಮಂಡಿಸಬೇಕು.

(ಗೊಂದಲ)

ಶ್ರೀ ತನ್ವೀರ್ ಸೇಠ್ : Your Government is a matured Government. ಅದನ್ನು ಏಕೆ introduce ಮಾಡುತ್ತೀರಿ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಮಂಡನೆಗೆ ಅವಕಾಶ ಕೊಡಿ. Introduce ಆಗುತ್ತದೆ, ಚರ್ಚೆಯಾಗಲಿ.

(ಗೊಂದಲ)

SRI SIDDARAMAIAH : No, no.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಚರ್ಚೆಗೆ ಏಕೆ ಹಿಂದೇಟು ಹಾಕುತ್ತಿದ್ದೀರಿ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಮೊದಲು ಮಂಡನೆ ಮಾಡಲಿ. ಮಂಡನೆಗೆ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : Introduction ಗೇ ನಮ್ಮ ವಿರೋಧವಿದೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಮಂಡನೆ ಮಾಡಲಿ, ಅಮೇಲೆ ನೀವು ಚರ್ಚೆ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ಈ ಕಾನೂನಿನ ಅಗತ್ಯ ಇಲ್ಲ. ಇದು ಬಡವರ, ಹಿಂದುಳಿದವರ, ದಲಿತರ ಹಿತರಕ್ಷಣೆಗೆ ವಿರುದ್ಧವಾಗಿವೆ.

(ಗೊಂದಲ)

(ಮಾನ್ಯ ಸದಸ್ಯರಾದ ಆರ್.ರೋಷನ್ ಬೇಗ್ ಮತ್ತು ಎನ್.ಎ. ಹ್ಯಾರೀಸ್ ರವರು ವಿಧೇಯಕ ಮಂಡನೆಯನ್ನು ವಿರೋಧಿಸಿ ಧರಣಿಗಾಗಿ ಸದನದ ಬಾವಿಗೆ ಬಂದರು)

ಶ್ರೀ ಕೆ.ಎಸ್.ಈಶ್ವರಪ್ಪ : . . . . . . ರಾಜಕೀಯ ಭಾಷಣವನ್ನು ಇಲ್ಲಿ ಮಾಡುವುದು ಬೇಕಾಗಿಲ್ಲ. ನಮಗೆ ಅಧಿಕಾರ ಇದೆ, ನಾವು move ಮಾಡುತ್ತೇವೆ, ಪಾಸೂ ಮಾಡಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಏಕೆ ವಿರೋಧ ಎನ್ನುವುದನ್ನು ಹೇಳಿ.

(ಗೊಂದಲ)

A HON'BLE MEMBER : This is waste of time. This is not a matured Bill.

(ಗೊಂದಲ)

ಶ್ರೀ ಸಿದ್ದರಾಮಯ್ಯ : Hidden agenda ಮಾಡಿದ್ದೀರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮೊನ್ನೆ ಇದನ್ನು ವಾಪಸ್ಸು ತೆಗೆದು ಕೊಂಡಿರಲ್ಲ. ಮೊನ್ನೆ ಏಕೆ ವಾಪಸ್ಸು ತೆಗೆದುಕೊಂಡಿರಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ವಿರೋಧ ಏಕೆ ಎಂದು ಹೇಳಿ.

SRI SIDDARAMAIAH " We are opposing, because it is a draconian Bill. It is anti people. It is against the right of the majority prople. It is against the culture of the majority people.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ವಿಧೇಯಕ ಮಂಡನೆಯನ್ನು ವಿರೋಧಿಸಿ ಸದನದ ಬಾವಿಗೆ ಧರಣಿಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್ : ಅಸೆಂಬ್ಲಿ ಇರುವುದೇ ಕಾನೂನು ಮಾಡಲಿಕ್ಕೆ. ಅವರು ಚರ್ಚೆ ಮಾಡಲಿ. ಅದು ಬಿಟ್ಟು ನೀವು Bill ಮಂಡನೆ ಮಾಡುವುದಕ್ಕೇ ಅವಕಾಶ ಕೊಡುವುದಿಲ್ಲವೆಂದರೆ ಇದು ಏನೆಂದು ನಮಗೆ ಅರ್ಥವಾಗುತ್ತಿಲ್ಲ.

(ಗೊಂದಲ)

(ಗೊಂದಲದ ನಡುವೆಯೇ ಪಶುಸಂಗೋಪನಾ ಸಚಿವರು ವಿಧೇಯಕದ ಮಂಡನೆಗೆ ಅನುಮತಿ ಕೋರಿದರು ಮತ್ತು ವಿಧೇಯಕವನ್ನು ಮಂಡಿಸಿದರು)

II ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕರ ಮತ್ತು ಸಂರಕ್ಷಣಾ ವಿಧೇಯಕ, 2010 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ರೇವುನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ – IV

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ಇದನ್ನು move ಮಾಡಿರುವುದು ಅಷ್ಟೇ ಅಲ್ಲವೇ?

ಅಧ್ಯಕ್ಷರು : Move ಮಾಡಿದ್ದಾರೆ ಅಷ್ಟೇ. ಚರ್ಚೆಯಾಗಲೇ ಬೇಕು.

ಶ್ರೀ ಸಿದ್ಧರಾಮಯ್ಯ : ಚರ್ಚೆ ಮಾಡುವುದು ಬೇರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಹೇಳಿದ್ದೇನೆಂದರೆ, ಇದನ್ನು move ಮಾಡುವುದಕ್ಕೇ ನಮ್ಮ ವಿರೋಧ ಇದೆ. ಇವತ್ತು ಅಜೆಂಡಾದಲ್ಲಿ ಇದ್ದದ್ದು move ಮಾಡುವುದಕ್ಕೆ ಮಾತ್ರ, not for consideration. It cannot be taken up for consideration.

ಅಧ್ಯಕ್ಷರು : No, ಇವತ್ತು ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇದರಲ್ಲಿ ನಿಮ್ಮದು political agenda ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆ ಮಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣೆಗಾಗಿ ನೀವು ವಿರೋಧ ಮಾಡುತ್ತಿದ್ದೀರಿ. Vote bank ರಾಜಕೀಯ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆ ಮಾಡಿ.

ಅಧ್ಯಕ್ಷರು : ಚರ್ಚೆ ಇವತ್ತು ಬೇಡ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮ political agenda ಹೊರಗೆ ಬಂತು ನೋಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಾವು ಮಾತನಾಡುವುದಕ್ಕೂ ಅವಕಾಶ ಕೊಡುವುದಿಲ್ಲವೇ? Introduction ಗೂ ನೀವು ಧ್ವನಿಮತದ ಮೂಲಕ ಮಾಡುವಂತೆ ಮಾಡಿದರೆ ಹೇಗೆ? ನಾನೂ ಕೂಡ ಬಹಳ ದಿವಸಗಳಿಂದ ಸದನದಲ್ಲಿದ್ದೇನೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಾವು ಹೇಳುವವರೆಗಾದರೂ ಅದನ್ನು ಕೇಳುವುದನ್ನು ಕಲಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ.

(ಗೊಂದಲ)

ಶ್ರೀ ಸಿದ್ದು ಸವದಿ : Vote bank ರಾಜಕೀಯ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ : Vote bank ರಾಜಕೀಯ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು : ತಾವು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಜಯಚಂದ್ರರವರೆ, ನೀವು well ಗೆ ಬಂದಮೇಲೆ ಏನು ಚರ್ಚೆ ಮಾಡುತ್ತೀರಿ? ಎಲ್ಲರೂ ಅವರವರ ಜಾಗಕ್ಕೆ ಹೋಗಲಿ. ಆಮೇಲೆ ಚರ್ಚೆ ಮಾಡಲಿ.

(ಗೊಂದಲ)

ಅಧ್ಯಕ್ಷರು : Well ನಲ್ಲಿ ನಿಂತುಕೊಂಡು ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Let him speak.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಹೇಗಾದರೂ ಕೂಡ introduction stage ನಲ್ಲಿ oppose ಮಾಡಬೇಕೆನ್ನುವುದಾದರೆ they should have given notice. Notice ಕೊಟ್ಟಿದ್ದಾರೆಯೇ? I am on a point of order.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಜಯಚಂದ್ರರವರು ತಮ್ಮ ಸ್ಥಾನದಲ್ಲಿ ನಿಂತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : Sorry, ಇವರೆಲ್ಲ ಬಾವಿಯಲ್ಲಿ ನಿಂತಿರುವಾಗ ಜಯಚಂದ್ರರವರೆ, ನೀವೂ ಸಹ ಬಾವಿಯಲ್ಲಿ ನಿಂತಿದ್ದೀರಿ ಎಂದು ತಿಳಿದುಕೊಂಡೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಜಯಚಂದ್ರರವರೆ, You are not with these people. Thank you.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಒಂದು submission ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : Please ಎಲ್ಲರೂ ಕುಳಿತುಕೊಳ್ಳಿ. ಜಯಚಂದ್ರರವರು well ನಲ್ಲಿ ಇಲ್ಲ, He is not in the well. Please ಕುಳಿತುಕೊಳ್ಳಿ,

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಅವರ ಸದಸ್ಯರು well ನಲ್ಲಿರುವಾಗ ಅವರು ಹೇಗೆ ಮಾತನಾಡುತ್ತಾರೆ? ಅವರಿಗೆ ಹೇಗೆ ಅವಕಾಶ ಕೊಡುತ್ತೀರಿ? ಮೊದಲು ಸದನವನ್ನು order ಗೆ ತನ್ನಿ. ಸದನವನ್ನು ಮೊದಲು order ಗೆ ತರಬೇಕು. ನಂತರ ಅವರು ಮಾತನಾಡಲಿ.

(ಗೊಂದಲ)

(ಆಡಳಿತ ಪಕ್ಷದ ಸದಸ್ಯರು well ಗೆ ಬರುವ ಸಂದರ್ಭದಲ್ಲಿ)

ಅಧ್ಯಕ್ಷರು : Please, ನೀವೂ ಸಹ ಇಲ್ಲಿಗೆ, ಬಾವಿಗೆ ಬರಬೇಡಿ, Please, ವಾಪಸ್ಸು ಹೋಗಿ.

(ಗೊಂದಲ)

ಅಧ್ಯಕ್ಷರು : Please ತಮ್ಮ ತಮ್ಮ ಸ್ಥಳಕ್ಕೆ ಹೋಗಿ.

(ಆಡಳಿತ ಪಕ್ಷದ ಸದಸ್ಯರು ಮಧ್ಯದಿಂದಲೇ ತಮ್ಮ ತಮ್ಮ ಆಸನಗಳಿಗೆ ಹಿಂತಿರುಗಿದರು)

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಗೋಹತ್ಯೆ ನಿಷೇದ ಬಿಲ್ ಅನ್ನು ತಂದರೆ ಇಲ್ಲಿ ಸದನವನ್ನೇ ಹತ್ಯೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಗೋಹತ್ಯೆ ಜೊತೆಗೆ ನೀವು ಸದನ ಹತ್ಯೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ ; ನೀವು ಸದನ ಹತ್ಯೆ ಮಾಡುತ್ತಿದ್ದೀರಿ, ಪ್ರಜಾಪ್ರಭುತ್ವ ಹತ್ಯೆ ಮಾಡುತ್ತಿದ್ದೀರಿ. ನೀವು ಚರ್ಚೆ ಮಾಡಿ. ನೀವು ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ ಚರ್ಚೆ ಮಾಡಿ.

(ಗೊಂದಲ)

ಅಧ್ಯಕ್ಷರು : Bill introduce ಆಗಿದೆ. ಎಲ್ಲರೂ ತಮ್ಮ ತಮ್ಮ seat ಗೆ ಹೋಗಿ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ. ಇದು ಸರಿಯಲ್ಲ. ನಾನು ಹೆಸರು ಹೇಳಬೇಕಾಗುತ್ತದೆ. ಸಿದ್ದು ಸವದಿಯವರೆ, ರಘುಪತಿಭಟ್‌ರವರೆ, Please ಕುಳಿತುಕೊಳ್ಳಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಯಾವುದೇ bill ಗಳನ್ನು introduce ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕಿದೆ. Government business ಮಾಡಬೇಕಾದಂಥ ಸಂದರ್ಭದಲ್ಲಿ introduction stage ನಲ್ಲಿ ಯಾರೂ ಕೂಡ normal ಆಗಿ ಯಾರೂ ಕೂಡ oppose ಮಾಡುವುದಿಲ್ಲ. ಆದರೆ, ನೀವು ಸಭೆಯ ಮತಕ್ಕೆ ಹಾಕುತ್ತೀರಿ. ಸಭೆಯ ಮತಕ್ಕೆ ಹಾಕಿದಂಥ

O. 14 F – 25

ಸಂದರ್ಭದಲ್ಲಿ ನಾವು 'ಇಲ್ಲ' ಎಂದು ಹೇಳಿದ್ದೇವೆ. 'ಇಲ್ಲ' ಎಂದು ಹೇಳುವ ಬದಲು well ನೊಳಗೆ ಬಂದಿದ್ದಾರೆಂದು ಇಟ್ಟುಕೊಳ್ಳಿ. ನಾವು ಏತಕ್ಕೋಸ್ಕರ ವಿರೋಧ ಮಾಡುತ್ತಿದ್ದೇವೆ ಎನ್ನುವುದನ್ನೂ ಸಹ ಅರ್ಥ ಮಾಡಿಕೊಳ್ಳಬೇಕು. ಬಹುಶಃ normal ಆಗಿ ನಾವು ಯಾವ bill ಗೂ oppose ಮಾಡಿಲ್ಲವಲ್ಲ. ಕಾರಣ ಏಕೆಂದರೆ, ಕೇವಲ ಒಂದು ವರ್ಷದ ಹಿಂದೆ bill ಅನ್ನು introduce ಮಾಡಿ ಕಳೆದ ವಾರ bill ಅನ್ನು ವಾಪಸ್ಸು ತೆಗೆದುಕೊಂಡು ತದನಂತರ bill ಅನ್ನು ಈಗ ತಂದಿದ್ದೀರಿ. ನಾವು ಏನು ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆಂದರೆ, ತಾವು ಕೊಟ್ಟಿರತಕ್ಕಂಥ bill copy ನಮ್ಮ ಹತ್ತಿರ ಇದೆ. ಆ bill copy ನಲ್ಲಿ ನೀವು ಏನಾದರೂ confuse ಮಾಡಿಕೊಂಡಿದ್ದೀರಾ ಹೇಗೆ? ಈ bill copy ಯಲ್ಲಿ ಏನು contents ಇದೆಯೋ ಅದೇ ರೀತಿಯಾಗಿ ಒಂದು Act ಕೂಡ ರಾಜ್ಯದಲ್ಲಿದೆ. ಆ Act ಯಾವಾಗ ಆಯಿತು ಎಂದರೆ, Karnataka Prevention of Cow slaughter and Cattle Preservation, Act, 1964. Received the assent of the President of India on 14th day of August 1964. 1964ನೇ ಇಸವಿಯಲ್ಲಿ ರಾಷ್ಟ್ರಪತಿಯವರ ಅನುಮೋದನೆ ಪಡೆದು ಇವತ್ತು ಇಲ್ಲಿರುವ Act ಅನ್ನು, ಈ Act ಗೂ ಇಲ್ಲಿ ಹೇಳಿರುವುದಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎಂದು ನೋಡಿದರೆ ಏನೂ ವ್ಯತ್ಯಾಸವಿಲ್ಲ. ಶಬ್ದಗಳ ಬಂಡಾರ ಬದಲಾವಣೆಯಾಗಿರ ಬಹುದೇ ವಿನಃ ಬೇರೆ ಏನೂ ಇಲ್ಲ. ಆದರೆ, ಈ Act ನಲ್ಲಿ ಯಾವ ಅಧಿಕಾರಿ execute ಮಾಡಬೇಕು, ಏನು ಮಾಡಬೇಕು ಎನ್ನುವುದಕ್ಕೆ by a notification it has to be done. ನಾನು ಹೇಳುತ್ತಿರುವುದೇನೆಂದರೆ, introduction stage ನಲ್ಲಿದೆ, ಈಗ Sub Inspector ಗೆ ಅಧಿಕಾರ ಕೊಡುತ್ತೀರಿ, ಇವತ್ತು Sub Inspector ಇರಬಹುದು, ನಾಳೆ ಇನ್ನೊಬ್ಬ ಆಗಬಹುದು, bill ಕೊಟ್ಟಿದ್ದೀರಿ ನಮ್ಮ ಹತ್ತಿರ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈಗಲೇ debate ಮಾಡುವುದಾದರೆ ಮಾಡಿಬಿಡಿ. ಬೇಡ ಎಂದು ಯಾರು ಹೇಳುತ್ತಾರೆ. Bill introduce ಮಾಡಿರುವುದಕ್ಕೆ ಹೀಗೆ oppose ಮಾಡುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಕೇಳಿ ಸ್ವಾಮಿ. I am opposing. ತಾವು Speaker ಆಗಿದ್ದವರು ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : Consideration ಗೆ ಬಂದಾಗ ನಾವು ಏನು ಹೇಳಬೇಕೋ ಹೇಳುತ್ತೇವೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಾನು ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು : ಒಂದ್ನಿಮಿಷ, ಅವರು ಮಾತನಾಡಿ ಮುಗಿಸಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜಯಚಂದ್ರರವರು ಮಾತನಾಡುವಾಗ ನೀವು (ಜಲಸಂಪನ್ಮೂಲ ಸಚಿವರನ್ನುದ್ದೇಶಿಸಿ) ಏಕೆ objection ಮಾಡುತ್ತಿದ್ದೀರಿ? ಅವರು ಏನು ಹೇಳುತ್ತಿದ್ದಾರೆಂದು ಕೇಳಿ. ನೀವು ಮಂತ್ರಿಗಳಾಗಿ ಈ ತರಹ ಮಾತನಾಡಿದರೆ ಹೇಗೆ? ನೀವು ಮಂತ್ರಿ ಎಂದರೆ ಸರ್ಕಾರ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾತನಾಡಬೇಕಾದರೆ ಯಾವುದಾದರೊಂದು rule ಇರಬೇಕಲ್ಲವೇ? ಯಾರು ಬೇಕಾದರೂ ಯಾವುದರ ಮೇಲೆಯಾದರೂ ಮಾತನಾಡುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜಯಚಂದ್ರರವರು ಮಾತನಾಡುವಾಗ ನೀವು ಮಂತ್ರಿಯಾಗಿದ್ದು ಈ ತರಹ ಮಧ್ಯ ಮಧ್ಯೆ ಎದ್ದು obstruct ಮಾಡುವುದು ಸರಿ ಕಾಣುವುದಿಲ್ಲ. ಅವರು ಹೇಳಿದ ಮೇಲೆ ನೀವು ಏನು ಹೇಳಬೇಕೋ ಹೇಳಿ. You have got every right. ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಅವರು ಏನು ಹೇಳುತ್ತಾರೆನ್ನುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು : ತಾವು ಎರಡು ನಿಮಿಷ ಕುಳಿತುಕೊಳ್ಳಿ, ಅವರು ಮುಗಿಸಲಿ.

(6-00 PM)

ಶ್ರೀ ಟಿ.ಬಿ. ಜಯಚಂದ್ರ : 1964 ರ Act ಗೆ ಇಲ್ಲಿಗೆ ಯಾವುದೇ ರೀತಿಯ ವ್ಯತ್ಯಾಸ ಇಲ್ಲ. ಹಾಗಿರಬೇಕಾದರೆ, ಒಂದು Act ಇದ್ದಾಗ ಮತ್ತೆ ಇನ್ನೊಂದು Act ಅನ್ನು ತರತಕ್ಕಂಥ ಅವಶ್ಯಕತೆ ಏನಿದೆ ಎನ್ನುವ ವಿಚಾರವನ್ನು ನಿಮ್ಮ ಗಮನಕ್ಕೆ ನಾನು ತರಬೇಕಾಗಿತ್ತು. ಅದಕ್ಕೋಸ್ಕರ ಆ ಕಾರಣಕ್ಕಾಗಿ ಈ bill introduction ಗೆ oppose ಮಾಡಿದೆ. ಈಗ ತಂದಿರುವ bill ಅನ್ನು repeal ಮಾಡುವುದಕ್ಕೋಸ್ಕರ ತಂದಿದ್ದೀರಿ. ಸದನದಲ್ಲಿ ಅನೇಕ bill ಗಳನ್ನು ತಂದಂಥ ಸಂದರ್ಭದಲ್ಲಿ Act ಗಳನ್ನು repeal ಮಾಡಿರತಕ್ಕಂಥ ಸಂದರ್ಭ ಇದೆ. ಸಾಕಷ್ಟು Act ಗಳನ್ನು repeal ಮಾಡಿದ್ದೇವೆ. ಆದರೆ, Act ಯಾವಾಗ redundant ಆಗುತ್ತದೆ ಅಂಥ ಸಂದರ್ಭದಲ್ಲಿ ಅದನ್ನು repeal ಮಾಡತಕ್ಕಂಥ ವಾಡಿಕೆ ಇರುವಂಥದ್ದು. ಆದರೆ, ಅದೇ Act ಅನ್ನು "Old wine in a new bottle" ಎನ್ನುವ ರೀತಿಯಲ್ಲಿ ತರುವುದಾದರೆ ಅದಕ್ಕೆ ಏನಾದರೂ ಅರ್ಥವಿದೆಯೇ? ಈ ಸಭೆ ಎಲ್ಲರಿಗೂ ಸೇರಿರುವ ಸಭೆಯಾಗಿದೆ. ಈ ಸಭೆಯಲ್ಲಿ ಯಾವುದಾದರೂ ಮಹತ್ವವಾದ ವಿಚಾರವನ್ನು ತರಬೇಕಾದಾಗ ನಾವು ಒಂದು bad precedent ಅನ್ನು ಯಾವತ್ತೂ ಕೂಡ ತರಬಾರದು. ಆ bad precedent ಆಗಬಾರದೆನ್ನುವ ಕಾರಣಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದರಲ್ಲಿ contents ಎಲ್ಲ ಒಂದೇ ಇರುವಂಥ ಸಂದರ್ಭದಲ್ಲಿ ನೀವು Act ಅನ್ನು repeal ಮಾಡಿ ಇವತ್ತು ಅಂದರೆ 2010ರಲ್ಲಿ Act ಅನ್ನು ಮಾಡಬೇಕೆಂದರೆ ಅದರ ಉದ್ದೇಶವೇನು? ನಾವು ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡಬೇಕೋ, ಬೇಡವೋ? ಕಾರಣವೇನೆಂದರೆ, ಎಲ್ಲೋ ಒಂದು ಕಡೆಗೆ ನೀವು ಅದೇ Act ಅನ್ನು ತೆಗೆದು ನಮ್ಮ ಕಾಲದಲ್ಲಿ ಇದು ಬಂತು, ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಇಂಥ ಒಂದು ಮಹತ್ತರವಾದ ಕಾನೂನು ತಂದೆವು, ಎಂದು ಭಾಷಣ ಮಾಡುವುದಕ್ಕೆ ತಂದಿದ್ದೀರಾ? ಅದರ ಬಗ್ಗೆ ಹೊರಗಡೆ ಏನು ಬೇಕಾದರೂ ಮಾತನಾಡೋಣ, ಅದು ಬೇರೆ ಪ್ರಶ್ನೆ. ಆದರೆ, ಇಲ್ಲಿ ಅಂಥದ್ದೇ ಒಂದು Act ಇರಬೇಕಾದರೆ, ರಾಷ್ಟ್ರಪತಿಗಳಿಂದ ಅನುಮೋದನೆ ಪಡೆದಿರತಕ್ಕಂಥ Act ಇರಬೇಕಾದಾಗ ಮತ್ತೊಮ್ಮೆ ಇಂಥ ಕಾನೂನು ತರಬೇಕಾದ ಅವಶ್ಯಕತೆ ಇದೆಯೇ? ಅದನ್ನು repeal ಮಾಡತಕ್ಕಂಥ ಅವಶ್ಯಕತೆ ಇದೆಯೇ?

ಅಧ್ಯಕ್ಷರು : ಈಗ ಏನೆಂದರೆ ಹೇಗಿದ್ದರೂ ಇದು discussion ಆಗಬೇಕಾಗಿದೆ. I think you can raise . ..

ಶ್ರೀ ಟಿ.ಬಿ.ಜಯಚಂದ್ರ : Discussionಗೆ ಬಂದಾಗ ಮಾತನಾಡೋಣ, ಅದು ಬೇರೆಯ ವಿಚಾರವೇ ಇದೆ. ನಾವು ಯಾವತ್ತೂ ಸಹ bill introduction ಮಾಡಿದಾಗ ಇಲ್ಲಿ ಕುಳಿತು oppose ಮಾಡಿಲ್ಲ. ಆದರೆ, ಈಗ oppose ಏಕೆ ಮಾಡಿದ್ದೇವೆಂದರೆ, ಯಾವುದೋ ಒಂದು ಕಾರಣ ಇರುವುದರಿಂದ ಅದಕ್ಕೋಸ್ಕರ oppose ಮಾಡಿದ್ದೇವೆ.

MR. SPEAKER : Whatever point ತಾವೀಗ raise ಮಾಡಿದ್ದೀರಿ that can be elaborated at the time of discussion.

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರಕ್ಕೆ bill introduce ಮಾಡುವ ಅಧಿಕಾರವಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಏನು ಹೇಳುತ್ತಿದ್ದೇನೆ ಎನ್ನುವುದನ್ನು ಸ್ವಲ್ಪ ಕೇಳಿ ಸ್ವಾಮಿ. ಸರ್ಕಾರ bill introduce ಎಂದು ಮಾಡಿಕೊಂಡಿದ್ದೀರಿ. ಸಭೆಯ ಮತಕ್ಕೆ ಹಾಕಿದಾಗ ನಾವು ಇಲ್ಲ ಎಂದು ಹೇಳಿದ್ದೇವೆ. ನಾವು ಆ ರೀತಿ ಹೇಳುವಂಥ ಅಧಿಕಾರದಲ್ಲಿದ್ದೇವೆ. 'ಇಲ್ಲ' ಎನ್ನುವುದನ್ನು ಏಕೆ ಹೇಳಿದ್ದೇವೆಂದರೆ . . .

ಶ್ರೀ ಬಸವರಾಜ ಬೊಮ್ಮಾಯಿ : ಈ ರೀತಿ ಅವರು ಮಾತನಾಡುವುದಾದರೆ ಮಾನ್ಯ ಅಧ್ಯಕ್ಷರೆ, ತಾವು discussion ಗೆ allow ಮಾಡಿ, ನಾವು ಉತ್ತರ ಕೊಡುತ್ತೇವೆ. Bill discussion ಗೆ ಬರುವುದಕ್ಕೆ ಮೊದಲೇ ಆರೋಪ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : I am speaking to the Chair. ಇಲ್ಲಿ ನಿಮ್ಮ ಹಕ್ಕನ್ನು ನೀವು ಚಲಾಯಿಸಿದ್ದೀರಿ. ನಾವು ಯಾವ ಕಾರಣಕ್ಕೋಸ್ಕರ 'ಇಲ್ಲ' ಎಂದು ಹೇಳುವಂಥದ್ದನ್ನು ನಾನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ತಾವೇನು ಈಗ points raise ಮಾಡಿದ್ದೀರಿ, everything can be raised at the time of discussion.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ತಾವು ಇಲ್ಲಿ ನ್ಯಾಯಸ್ಥಾನದಲ್ಲಿ ಕುಳಿತಿರಬೇಕಾದಾಗ . . .

(ಗೊಂದಲ)

ಅಧ್ಯಕ್ಷರು : ಸರಿ, ಇಲ್ಲಿ ನ್ಯಾಯ ಬಿಟ್ಟು ಯಾರೂ ಕುಳಿತಿಲ್ಲ. Why you are using such words? No, No. ಇಲ್ಲಿ ನ್ಯಾಯ ಬಿಟ್ಟು ಯಾರೂ ಕುಳಿತಿಲ್ಲ. You cannot use such words.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಇಲ್ಲಿ ಎರಡು ವಿಚಾರವನ್ನು ಪ್ರಸ್ತಾಪ ಮಾಡಿದರು. ಒಂದನೆಯದು, 1964 Act ಅನ್ನು ಈಗ ತರುವ ಅಗತ್ಯ ಏನಿತ್ತು? ಎರಡನೆಯದು, ಶಬ್ಧ ಆಡಂಬರದಿಂದ ಕೂಡಿರುವುದು, ಶಬ್ಧ ಭಂಡಾರದಿಂದ ಕೂಡಿರುವುದು ಏನೂ ವ್ಯತ್ಯಾಸವಿಲ್ಲವೆಂದು ಹೇಳಿದರು. ಏನು ವ್ಯತ್ಯಾಸವಿದೆ, 1964 Act ಬದಲು ಇದನ್ನು ಏಕೆ ತಂದಿದ್ದೇವೆಂದು ಇಲ್ಲಿ ಹೇಳುತ್ತೇವೆ. ಅದನ್ನು ಚರ್ಚೆ ಸಮಯದಲ್ಲಿ ಹೇಳುತ್ತೇವೆ. Let there be a healthy discussion. ಈಗ cow slaughter ಬೇಕು ಎನ್ನುವವರೂ ಕೂಡ discussion ಮಾಡಿ, cow slaughter ಬೇಡ ಎನ್ನುವವರೂ ಕೂಡ discussion ಮಾಡುತ್ತೇವೆ. Let there be a debate.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ನಿಮಗೆ ಹೇಗೆ ಪವಿತ್ರವೋ ನಮಗೂ ಅಷ್ಟೇ ಪವಿತ್ರ ಇದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಗೋಹತ್ಯೆ ನಿಷೇಧವನ್ನು ನೀವೇ lead ಮಾಡಿ ರೋಷನ್‌ಬೇಗ್‌ರವರೇ. ನಾವು ನಿಮ್ಮ ಹಿಂದೆ ಬರುತ್ತೇವೆ, ನೀವು ಪವಿತ್ರ ಎಂದು ಒಪ್ಪಿಕೊಂಡ ಮೇಲೆ lead ಮಾಡಿ.

(ಗೊಂದಲ)

ಅಧ್ಯಕ್ಷರು : Let us come to the conclusion.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ಬಸವರಾಜ ಬೊಮ್ಮಾಯಿಯವರೆ, ತಾವು Minister ಆಗಿದ್ದುಕೊಂಡು ಏನು ಮಾತನಾಡುತ್ತಿದ್ದೀರಿ? ಯಾವ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಯೋಚನೆ ಮಾಡಿ ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : Debate ಆಗಲಿ ಎಂದು ಹೇಳುತ್ತಿರುವುದು.

(ಗೊಂದಲ)

ಶ್ರೀ ವಿ. ಶ್ರೀನಿವಾಸಪ್ರಸಾದ್ : ನಿಮ್ಮ ತಂದೆಯವರು rationalist ಆಗಿದ್ದರು. ಏನು ಮಾತನಾಡುತ್ತಿದ್ದೀರಿ ನೀವು? ನೀವು ಯಾವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ ಎಂದು ಯೋಚನೆ ಮಾಡಿ ಮಾತನಾಡಿ. ಮಾನ್ಯ ಜಯಚಂದ್ರರವರು ಏನು ಹೇಳಿದ್ದಾರೆಂದರೆ, introduction ಮಾಡಿದ್ದನ್ನು ನಾವು oppose ಮಾಡುತ್ತೇವೆ ಎಂದು. Introduction stage ನಲ್ಲಿ ಏಕೆ ವಿರೋಧ ಮಾಡುತ್ತಿದ್ದೇವೆಂದರೆ, under extraordinary circumstances ಗೆ ಮಾತ್ರ ನಾವು ವಿರೋಧ ಮಾಡಿರತಕ್ಕಂಥದ್ದು. You must be knowing that. Parliament ನಲ್ಲಿ 1977ರಲ್ಲಿ ಮಧುಲಿಮಯೆಯವರು Anti Defection Law bill introduction stage ನಲ್ಲಿ ಇಡೀ ಸದನ ವಿರೋಧ ಮಾಡಿದಾಗ ಆ ಬಿಲ್ ಅನ್ನು withdraw ಮಾಡಿದರು. ತಮಗೆ ಗೊತ್ತೇನು? It is a very very sensitive issue. ತಾವು ಇದನ್ನು ಯೋಚನೆ ಮಾಡಬೇಕು. ನಿಮ್ಮ hidden agenda, ರಾಘವೇಂದ್ರಮಠದ್ದು, ಮತಾಂತರದ್ದು, 'ಗೋ ಹತ್ಯೆ ನಿಷೇಧ, ಮಸೂದೆ ಇಂಥ ಬಿಲ್‌ಗಳನ್ನೇ ತರುತ್ತಿದ್ದೀರಲ್ಲ. ಏನಿದು? ಎಲ್ಲಿಗೆ ಇದು ನಿಲ್ಲುತ್ತದೆ? ನಾನು ಬೇಡವೆಂದು ಹೇಳುತ್ತಿಲ್ಲ. ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ತಾವು ವಿಷಯ ಬಿಟ್ಟು ಬೇರೇನೋ ಮಾತನಾಡುತ್ತಿದ್ದೀರಿ. ನೀವು ಹಿರಿಯರಿದ್ದೀರಿ. ನೀವು ರಾಘವೇಂದ್ರ ಮಠದ ವಿಚಾರ ಏಕೆ ಹೇಳುತ್ತೀರಿ? ಇದರ ಬಗ್ಗೆ ಮಾತ್ರ discuss ಮಾಡಿ.

(ಗೊಂದಲ)

ಶ್ರೀ ಎ. ಶ್ರೀನಿವಾಸ ಪ್ರಸಾದ್ : ಪರಿಸ್ಥಿತಿ ನಾಳೆ ಏನಾಗುತ್ತದೆಂದು ಗೊತ್ತಾಗುವುದಿಲ್ಲ. We are warning you.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನಮ್ಮ hidden agenda ಆದರೆ ನಿಮ್ಮದು ಇದು Political agenda ಇದೆ. Vote bank agenda ಇದೆ.

ಶ್ರೀ ಎ. ಶ್ರೀನಿವಾಸ ಪ್ರಸಾದ್ : ಇದಕ್ಕೆ ಅವಕಾಶ ಕೊಡಬೇಡಿ, ಈ ಬಿಲ್ ಅನ್ನು introduce ಮಾಡಬೇಕಾದರೆ ಹತ್ತು ಸಾರಿ ಯೋಚನೆ ಮಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನೀವು ಹೇಳಿದ ಪ್ರತಿಯೊಂದು ಸಲಹೆಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ಚರ್ಚೆ ಪರಿಪೂರ್ಣವಾಗಿ ಆಗಲಿ.

ಶ್ರೀ ಎ. ಶ್ರೀನಿವಾಸ ಪ್ರಸಾದ್ : ನಾವೇಕೆ ಈ ಬಿಲ್ introduction stage ನಲ್ಲಿ ವಿರೋಧ ಮಾಡುತ್ತಿದ್ದೇವೆನ್ನುವುದನ್ನು we must be knowing that. ಬೇರೆ ಬಿಲ್‌ಗಳಿಗೆ ಏಕೆ oppose ಮಾಡುವುದಿಲ್ಲ. ಈ ಬಿಲ್‌ಗೇಕೆ oppose ಮಾಡುತ್ತಿದ್ದೇವೆನ್ನುವುದನ್ನು ಯೋಚನೆ ಮಾಡಬೇಕು.

MR. SPEAKER : Whatever points raised by you can be discussed at the time of discussion on the Bill.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : Parliament ನಲ್ಲಿ ಏನಾಯಿತು?

(ಗೊಂದಲ)

ಅಧ್ಯಕ್ಷರು : Parliament ನಲ್ಲಿ ಇವತ್ತೇನಾಯಿತೆನ್ನುವುದನ್ನು ತಿಳಿದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : Bill introduce ಮಾಡಲು ಪ್ರಯತ್ನ ಪಟ್ಟಾಗ ವಿರೋಧ ಬರಲಿಲ್ಲವೋ?

ಅಧ್ಯಕ್ಷರು : Parliament ನಲ್ಲಿ ಇವತ್ತೇನಾಯಿತೆನ್ನುವುದನ್ನೂ ತಿಳಿದುಕೊಳ್ಳಿ.

ಶ್ರೀ ಎಸ್. ಸುರೇಶ್‌ಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು : ವಿರೋಧಕ್ಕೂ obstruction ಗೂ ಬಹಳ ವ್ಯತ್ಯಾಸವಿದೆ. Yesterday what happened was an obstruction.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಅದಕ್ಕೋಸ್ಕರ 7 ಜನರ ಕತೆ ಇವತ್ತೇನಾಗಿದೆ? ಅದನ್ನೂ ನೋಡಿ.

(ಗೊಂದಲ)

MR. SPEAKER : You mean to say you defend the Parliament Members' action?

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಹಿಂದೆ ಕೇಂದ್ರದಲ್ಲಿ Anti Defection Law Bill ತಂದಾಗ oppose ಮಾಡಿದವರು ಯಾರೆಂದರೆ ಜನತಾ ಪಾರ್ಟಿಯಲ್ಲಿದ್ದ ಬಿ.ಜೆ.ಪಿ.ಯ ಸದಸ್ಯರೆಂಬುದು ತಮಗೆ ಗೊತ್ತಾಗಿದೆಯೇ? Do you remember it?

(ಗೊಂದಲ)

ಅಧ್ಯಕ್ಷರು : ನಿನ್ನೆ Parliament ನಲ್ಲಿ ನಡೆದಿರುವುದನ್ನು are you defending?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಅಲ್ಲ, ಜನತಾಪಾರ್ಟಿಯಲ್ಲಿದ್ದ ಶ್ರೀನಿವಾಸ ಪ್ರಸಾದ್‌ರವರು ಕಾಂಗ್ರೆಸ್ ಸೇರಬಾರದೆಂದು oppose ಮಾಡಿರುವಂಥದ್ದು.

(ಗೊಂದಲ)

ಅಧ್ಯಕ್ಷರು : Parliament ನಲ್ಲಿ ಆಗಿರುವುದನ್ನು ತಾವು defend ಮಾಡಿಕೊಳ್ಳುತ್ತೀರಾ ಸರಿ ಎಂದು ಹೇಳುತ್ತೀರಾ? ನಡೆದಿದ್ದು ಸರಿ ಎನ್ನುತ್ತೀರಾ?

(ಗೊಂದಲ)

ಶ್ರೀ ಬಸವರಾಜು ಬೊಮ್ಮಾಯಿ : ತಮ್ಮ ಅನುಕೂಲಕ್ಕೆ ಬೇಕಾಗಿರುವಂಥ ಘಟನೆಗಳನ್ನು ಹೇಳಿದರೆ ಹೇಗೆ? ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಘಟನೆಗಳು ನಡೆದಿರುವುದು ಇದೆ. ಈ House

O.14 F-26

ನಲ್ಲಿಯೂ ನಡೆದಿದೆ, Parliament ನಲ್ಲಿಯೂ ನಡೆದಿದೆ. ತಮ್ಮ ಅನುಕೂಲಕ್ಕೆ ತಕ್ಕಂತೆ ವಾದ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಈಗ ನಿಯಮಾನುಸಾರ ಬಿಲ್ introduce ಆಗಿದೆ. ನಾವು ಅನುಮತಿ ಕೊಟ್ಟ ತಕ್ಷಣ ವಿಧೇಯಕವನ್ನು, Rule 81 sub clause. .

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನೀವು ತಪ್ಪು ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ನಾನು ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. Whatever the Rules ಅದರಂತೆ ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ವಿರೋಧ ಪಕ್ಷದವರಿಗೆ ನೀವು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಅದರಲ್ಲಿ ಏನು ತಪ್ಪು ಇದೆ ಸರಿ ಇದೆ ಎಂಬುದನ್ನು ನಾವು ಚರ್ಚೆ ಮಾಡುವಾಗ ಹೇಳುತ್ತೇವೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ಜಯಚಂದ್ರರವರೆ ನೀವು ಒಳ್ಳೆಯ ಲಾಯರ್ ಏಕ್ರೀ ಬ್ಯಾಡ್ ಕೇಸ್ ಮೇಲೆ ವಾದ ಮಾಡುತ್ತೀರಿ? You are a good lawyer but you are handling a very bad case. It is a very bad case.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಿನ್ನೆ Parliament ನಲ್ಲಿ ಏನಾಗಿದೆ?

ಅಧ್ಯಕ್ಷರು Parliament ನಿನ್ನೆ ನಡೆದಿದ್ದು ಸರಿ ಎನ್ನುತ್ತೀರಾ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ಅವರು ಚರ್ಚೆ ಮಾಡಲಿ. Bill introduce ಮಾಡುವುದಕ್ಕೆ ಅವಕಾಶ ಕೊಡದೇ ಈಗಲೇ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : 1964 Act ಇದೆ. ಇದು ಯಡಿಯೂರಪ್ಪ ನವರ Act ಆಗಬೇಕಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೀವು oppose ಮಾಡುವುದಾದರೆ ಮಾಡಿ. ಅದರಲ್ಲಿ ಏನು loopholes ಇದೆ, ಇದು ಏಕೆ ಆಗಿಲ್ಲ ಎಲ್ಲವನ್ನೂ compare ಮಾಡೋಣ. Debate ಮಾಡಿ, ಏಕೆ ಹೆದರುತ್ತೀರಿ? Debate ಮಾಡುವುದಕ್ಕೆ ಏಕೆ ಹಿಂದೇಟು ಹಾಕುತ್ತೀರಿ? Debate ಮಾಡಿ convince ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ : ಜಯಚಂದ್ರರವರೆ ಇಲ್ಲಿ ನೋಡಿ, 64 Act ಗೂ ಇದಕ್ಕೂ ನನ್ನ ಪ್ರಕಾರ ಬಹಳಷ್ಟು ವ್ಯತ್ಯಾಸವಿದೆ. 64 Act is not implementable. This is implementable. This is the major difference. That is why we bringng this Act. ಇಷ್ಟು ವರ್ಷವಾದರೂ implement ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ನಮ್ಮ ಕಾಲದಲ್ಲಿ implement ಆಗಬೇಕೆನ್ನುವ ಅಂಶಗಳನ್ನು ತೆಗೆದುಕೊಂಡು ನಾವು ತರುತ್ತಿದ್ದೇವೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನೀವು bill copy circulate ಮಾಡಿದ್ದೀರಿ. ಇದಕ್ಕೂ ಇದಕ್ಕೂ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಆದರೆ ಎಲ್ಲೋ ಒಂದು ಕಡೆಗೆ ಅನುಮಾನ ಬರುತ್ತದೆ. ಯಾರನ್ನೋ ದೃಷ್ಟಿಯಿಟ್ಟುಕೊಂಡು ಮಾಡಲೇಬೇಕೆನ್ನುವ ಅಭಿಪ್ರಾಯ ಬರುವ bill ಆಗಿದೆ. ಒಂದು ಸಾರಿ repeal ಆಯಿತು ಎಂದರೆ ಮತ್ತೆ ರಾಷ್ಟ್ರಪತಿಗಳ ಬಳಿಗೆ ಅನುಮತಿಗಾಗಿ ಹೋಗಬೇಕಾಗುತ್ತದೆ. ರಾಷ್ಟ್ರಪತಿಗಳು ಒಪ್ಪದೇ ಇರುವ ಸಂದರ್ಭ ಬರುತ್ತದೆ. ಆ ಕಾರಣಕ್ಕಾಗಿ ದಯಮಾಡಿ ನಿಮ್ಮ ಪೀಠದಿಂದ ತಪ್ಪಾಗಬಾರದು ಎನ್ನುವ ಕಾರಣಕ್ಕೆ, as a Speaker you are bound to be advised by the BAC, by the Government and also the Opposition. ಈ ಸರ್ಕಾರ ದಿಕ್ಕನ್ನು ತಪ್ಪಿಸುತ್ತದೆ ಎಂದು ಹೇಳುತ್ತೇನೆ. ಕುರ್ಚಿಗೆ ಅಪಚಾರ ಬರುವ ರೀತಿಯಲ್ಲಿ ಮಾಡುತ್ತಿದ್ದಾರೆ. ದಯಮಾಡಿ ಅವರ ಕಡೆ ನೋಡಬೇಡಿ. ನೀವು ನ್ಯಾಯ ತಕ್ಕಡಿಯ ಕೆಳಗಡೆ ಕುಳಿತ್ತಿದ್ದೀರಿ ದಯಮಾಡಿ ಈ ಕಡೆ ನೋಡಿ. ಎರಡು Act ನ್ನು ತರಿಸಿ ನೋಡಿ, ಅವರು introduction ಮಾಡತಕ್ಕಂಥದ್ದು ಸಾಧ್ಯವೇ ಎಂಬುದನ್ನು ಯೋಚಿಸಿ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ. ಇದಕ್ಕೆ ಸಂಪೂರ್ಣ ವಿರೋಧವಿದೆ. ನಾವು ಚರ್ಚೆಗೆ ಬಂದಂಥ

ಸಂದರ್ಭದಲ್ಲಿ ಆ ಬಗ್ಗೆ ನಾವು ಹೇಳುವುದಕ್ಕೆ ರೆಡಿ ಇದ್ದೇವೆ. ಆದರೆ ಪ್ರಾಥಮಿಕವಾಗಿ introduction ಗೆ ಅರ್ಹತೆ ಇಲ್ಲದೆ ಇರುವ ಬಿಲ್ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಜಾತಿ ಜಾತಿಗಳ ಮಧ್ಯೆದಲ್ಲಿ ವಿಷವನ್ನು ತುಂಬತಕ್ಕಂಥದ್ದು ಆಗುವುದಾದರೆ ಇದಕ್ಕೆ ನಮ್ಮ ವಿರೋಧವಿದೆ. ಬಡವರ ಹೊಟ್ಟೆಯ ಮೇಲೆ ಹೊಡೆಯತಕ್ಕಂಥ ಬಿಲ್ ಇದಾಗಿದೆ.

(ಗೊಂದಲ)

ಶ್ರೀ ಸುರೇಶ್ ಕುಮಾರ್ : ಅವರು ಏನೂ ವ್ಯತ್ಯಾಸವಿಲ್ಲವೆಂದು ಹೇಳಿದರು. Definition ನಿಂದ ಹಿಡಿದು ಎಲ್ಲಾದರಲ್ಲೂ ವ್ಯತ್ಯಾಸ ಇದೆ ಎಂದು ಹೇಳುತ್ತೇವೆ. ಏಕೆ 1964 Act inadequate ಆಗಿದೆ ಏಕೆ ತರುತ್ತಿದ್ದೇವೆಂದು ಹೇಳುತ್ತೇವೆ. ಅದೆಲ್ಲಾ debate stage ನಲ್ಲಿ ಇದೆ. It has been introduced. You fix the time for debate.

SRI T.B. JAYACHANDRA : We are strongly opposing the introduction of Bill itself. This bill cannot sustain and it cannot be implemented also. ಬಡವರ ಹೊಟ್ಟೆಯ ಮೇಲೆ ಹೊಡೆದು ಇಂಥ ಮಸೂದೆ ಮಂಡನೆ ಮಾಡುತ್ತಿದ್ದಾರೆ, ಅದನ್ನು ನಾವು ಖಂಡಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : ಒಂದೇ ಒಂದು clarification.

ಅಧ್ಯಕ್ಷರು : ಈಗ bill introduced ಆದಮೇಲೆ ಮತ್ತೆ ಯಾವುದರ ಮೇಲೆ clarification ಕೇಳುತ್ತೀರಿ.

ಶ್ರೀ ಆರ್.ರೋಷನ್ ಬೇಗ್ : ನಾನಾಗಲಿ, ತನ್ವೀರ್ ಶೇಠ್ ಆಗಲಿ, ಹ್ಯಾರಿಸ್ ಆಗಲಿ, ನಾವು ಗೋ ಹತ್ಯೆಯ ಬಗ್ಗೆ, ಅವರಿಗೆ ಗೋವು ಪವಿತ್ರವೆಂದ ಮೇಲೆ ನಮಗೆ ಪವಿತ್ರವಿದೆ. ಅವರು ಎಷ್ಟು respect ಕೊಡುತ್ತಾರೆ ನಾವು ಅಷ್ಟೆ respect ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಈವೆಲ್ಲವನ್ನೂ ಬಿಲ್ ಮೇಲೆ ಚರ್ಚೆ ಮಾಡುವಾಗ ಹೇಳಿ.

ಶ್ರೀ ಆರ್.ರೋಷನ್ ಬೇಗ್ : ನಾನು ಹೇಳುವುದೇನೆಂದರೆ, ಸುಮ್ಮನೆ in the name of ಗೋಮಾತೆ, ಇದು ಬಡವರ, ದಲಿತರ, ಹಿಂದುಳಿದವರ, ಹೊಟ್ಟೆಯ ಮೇಲೆ ಹೊಡೆಯುವುದು ಬೇಡ.

(ಗೊಂದಲ)

ಶ್ರೀ ಸುರೇಶ್‌ಕುಮಾರ್ : ತಾವು ದಯವಿಟ್ಟು ಇದಕ್ಕೆ ಟೈಂ ಫಿಕ್ಸ್ ಮಾಡಬೇಕು. ಅವರು ಭಾಷಣ ಮಾಡುವುದಾದರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಡಾ: ಹೆಚ್.ಸಿ.ಮಹಾದೇವಪ್ಪ : ಸೌಹಾರ್ದತೆಯನ್ನು ಹಾಳು ಮಾಡತಕ್ಕಂಥದ್ದು ಬೇಡ.

(ಗೊಂದಲ)

ಅಧ್ಯಕ್ಷರು : ಚರ್ಚೆ ಮಾಡುವ ಟೈಂನಲ್ಲಿ ಹೇಳಿ. ಈ ಟೈಂನಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ. Please. ತಾವೇನು ಹೇಳಿದಿರಿ ಅವೆಲ್ಲವನ್ನು ನೋಡಿ ಇದಕ್ಕೆ ಒಂಟು ಟೈಂ ನಿಗದಿ ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದೊಂದು ವಿಶೇಷವಾದ ಸನ್ನಿವೇಶವೆಂದು ಬಹುತೇಕ ಜನರ ಸಂಸ್ಕೃತಿಗೆ ಆಹಾರ ಪದ್ಧತಿಗೆ ಅವರ ಬದುಕಿಗೆ, ಜನ ಜೀವನಕ್ಕೆ ಮತ್ತು ಸಮಾಜದಲ್ಲಿ ಒಂದು ಶಾಂತಿ ಸುವ್ಯವಸ್ಥೆಗೆ...

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಇನ್ನೂ ಚರ್ಚೆಗೆ ಟೈಂ ಫಿಕ್ಸ್ ಮಾಡಿಲ್ಲ. ಅವರು ಬಾಯಿಗೆ ಬಂದ ಹಾಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ. ಚರ್ಚೆಗೆ ಅವಕಾಶ ಕೊಟ್ಟಾಗ ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : ನೀವು ಇದಕ್ಕೆ ಟೈಂ ನಿಗದಿ ಮಾಡಿ, ಆಗ ನಾವು ಏನು ಹೇಳಬೇಕೋ ಹೇಳುತ್ತೇವೆ. ಇದೊಂದು draconian law ಎಂದು ಹೇಳಿ, we are going to convince you and we are going to convince the Government also.

(ಗೊಂದಲ)

ಅಧ್ಯಕ್ಷರು : ಚರ್ಚೆಗೆ ಟೈಂ ನಿಗದಿ ಮಾಡಿ ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಸಮಯ ಫಿಕ್ಸ್ ಮಾಡುತ್ತೇನೆ. ಆಮೇಲೆ ಹೇಳಿ. ಇದು ಮುಕ್ತಾಯಗೊಂಡಿದೆ. ನಾನು ಈ ಬಿಲ್‌ನ ಮೇಲೆ ಚರ್ಚೆಗೆ ಸಮಯಾವಕಾಶ ಮಾಡಿ ಕೊಡುತ್ತೇನೆ. ಈಗಾಗಲೇ ಎಲ್ಲರೂ ಹೇಳಿದರೆ ನೀವು ಪುನಃ ಇದರ ಬಗ್ಗೆ ರೈಸ್ ಮಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸರ್ಕಾರ ಈ ರೀತಿ ನಡೆದುಕೊಂಡರೆ ಜನರೆಲ್ಲಾ ನೋಡುತ್ತಿದ್ದಾರೆ.

ಶ್ರೀ ಬಸವರಾಜ್ ಬೊಮ್ಮಾಯಿ : ಜನ ಎಲ್ಲರನ್ನು ನೋಡುತ್ತಾರೆ. ಗೋಹತ್ಯೆ ನಿಷೇಧಕ್ಕೆ ಯಾರು ವಿರೋಧಿಸಿದರು, ಎಲ್ಲವನ್ನು ನೋಡುತ್ತಾರೆ. Vote bank politicsಗೆ ನೀವು ಈ ಸದನ ಉಪಯೋಗಿಸಿ ಕೊಳ್ಳಬಾರದು.

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ. ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ಇಂಥ ಬಿಲ್‌ಗಳನ್ನು ತಂದಾಗ ನೀತಿ ಸಂಹಿತೆ ಉಲ್ಲಂಘನೆಯಾಗುವುದಿಲ್ಲವೆ?

ಅಧ್ಯಕ್ಷರು : ಈಗ ಆ ವಿಷಯ ಮುಕ್ತಾಯಗೊಂಡಿದೆ. ಮತ್ತೆ ಮತ್ತೆ ಅದನ್ನು ರೈಸ್ ಮಾಡಬೇಡಿ. ಈಗ ಗಮನ ಸೆಳೆಯುವ ಸೂಚನೆಗಳು. ಎನ್.ಸಂಪಂಗಿಯವರು ಕೇಳಿ.

8. ಗಮನ ಸೆಳೆಯುವ ಸೂಚನೆಗಳು :

ವಿಷಯ: (1) ಕರ್ನಾಟಕ ರಾಜ್ಯದ ಮೊದಲನೇ ಮುಖ್ಯ ಮಂತ್ರಿಯಾದ ಶ್ರೀ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನಸೌಧದ ಪರಿಸರದಲ್ಲಿ ಸ್ಥಾಪಿಸುವ ಬಗ್ಗೆ.

* * * * *

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮೊದಲನೇ ಮುಖ್ಯ ಮಂತ್ರಿಯಾದ ಶ್ರೀ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನಸೌಧದ ಪರಿಸರದಲ್ಲಿ ಸ್ಥಾಪಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಇಲಾಖೆ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

ವಿಧಾನಸೌಧದ ಅನುಪಾಸಿನಲ್ಲಿ ಸ್ಮಾರಕಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಪಿಟಿಷನ್ ಸಂಖ್ಯೆ 32232/1998 (ಶ್ರೀ ಜಿ.ಕೆ. ಗೋವಿಂದರಾವ್ ವಿರುದ್ಧ ರಾಜ್ಯ ಸರ್ಕಾರ) ರಲ್ಲಿ ವಿಧಾನಸೌಧದ ಸುತ್ತಮುತ್ತ ಪ್ರತಿಮೆ, ಪುತ್ಥಳಿ ಇತ್ಯಾದಿಗಳನ್ನು ಸ್ಥಾಪಿಸದಂತೆ ನಿರ್ಬಂಧಗಳನ್ನು ವಿಧಿಸಿ ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ: 15.12.1999ನೇ ಸಾಲಿನಲ್ಲಿ ತೀರ್ಪು ನೀಡಿರುತ್ತದೆ.

ಬಸವ ಸಮಿತಿಯಿಂದ ಅಂದಿನ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಡಾ: ಬಿ.ಡಿ. ಜತ್ತಿಯವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸಲು ಕೋರಿಕೆ ಬಂದಿದ್ದು, ನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಶ್ರೀಮತಿ ಯಶೋಧರಮ್ಮ ದಾಸಪ್ಪ ಇವರ ಪ್ರತಿಮೆಯನ್ನು ನಿರ್ಮಿಸಲು ಸಹ ಕೋರಿಕೆ ಬಂದಿದ್ದನ್ನು ಮೇಲ್ಕಂಡ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ಕೈಬಿಡಲಾಗಿದೆ.

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಸಂಪಂಗಿ ಎನ್ ರವರು ದಿನಾಂಕ: 13.02.2009 ರಂದು, ಹಿಂದಿನ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿರವರ ಪಂತ್ಥಳಿಯನ್ನು ಸ್ಥಾಪಿಸುವ ಬಗ್ಗೆ ಪ್ರಶ್ನೆ (ಸಂಖ್ಯೆ 240 ರಲ್ಲಿ) ಕೇಳಿದ್ದರು.

ಈ ಹಿನ್ನೆಲೆಯಲ್ಲಿ ವಿಧಾನಸೌಧದ ಸುತ್ತಮುತ್ತ ಯಾವುದೇ ಸ್ಮಾರಕಗಳನ್ನು ಪ್ರತಿಮೆಗಳನ್ನು ಸ್ಥಾಪಿಸಲು ನಿರ್ಬಂಧವಿರುವುದರಿಂದ ಸದನವು ಒಪ್ಪಿದರ ಕರ್ನಾಟಕ ಉಚ್ಚ ನ್ಯಾಯಾಲಯದ ಅನುಮತಿ ಪಡೆಯಲು ಅರ್ಜಿಯನ್ನು ಸಲ್ಲಿಸಲಾಗುವುದು. ಅನುಮತಿ ದೊರೆತ ನಂತರ ಈ ಬಗ್ಗೆ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುವುದು.

ಶ್ರೀ ಎನ್.ಸಂಪಂಗಿ : ಮಾನ್ಯ ಅಧ್ಯಕ್ಷರೆ, ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ: 15.12.1999 ರಲ್ಲಿ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ವಿಧಾನಸೌಧದ ಸುತ್ತಾಮುತ್ತಾ ಯಾವುದೇ ಪುತ್ಥಳಿಗಳು ಬರಬಾರದೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. 1999ರಲ್ಲಿ ಕೋರ್ಟ್‌ನ ಆದೇಶ ಬಂದಿದ್ದರೂ ಕೂಡ ಮಾನ್ಯ ನಿಜಲಿಂಗಪ್ಪನವರ ಪುತ್ಥಳಿಯನ್ನು

ಜನವರಿ 2003 ರಂದು ವಿಧಾನಸೌಧದ ಆವರಣದಲ್ಲಿ ಸ್ಥಾಪನೆ ಮಾಡಿದ್ದಾರೆ. ಇವತ್ತಿನ ದಿವಸ ಮಾನ್ಯ ಕೆ.ಸಿ.ರೆಡ್ಡಿಯವರನ್ನು ಎಲ್ಲರು ಮರೆತು ಹೋಗುತ್ತಿದ್ದಾರೆ. ಈ ರಾಜ್ಯದ ಪ್ರಪ್ರಥಮ ಮುಖ್ಯ ಮಂತ್ರಿಯಾಗಿದ್ದಂಥವರು, ಕೋಲಾರ ಜಿಲ್ಲೆಯ ಒಬ್ಬ ಧೀಮಂತ ನಾಯಕರಾದಂಥವರ ಪ್ರತಿಮೆ ಇವತ್ತಿನ ದಿವಸ ಎಲ್ಲಿಯೂ ಕೂಡ ಇಲ್ಲ. ಮತ್ತೆ ಅವರ ಪೋಟೋಗಳನ್ನು ಎಲ್ಲಿಯೂ ಕೂಡ ಹಾಕಿಲ್ಲ. ಹಾಗೆಯೇ ಅವರ ಜನ್ಮ ದಿನಾಚಾರಣೆ, ಜಯಂತೋತ್ಸವ ಎಲ್ಲಿಯೂ ಕೂಡ ಮಾಡುತ್ತಿಲ್ಲ. ಇವತ್ತಿನದಿವಸ ನಾವೆಲ್ಲರೂ ವಿಧಾನಸೌಧದಲ್ಲಿ ಕುಳಿತುಕೊಂಡಿದ್ದೇವೆ. ಅವರು ಹಾಕಿಕೊಟ್ಟಂಥ ಈ ವಿಧಾನಸೌಧ ಕಟ್ಟಡವನ್ನು ಪ್ರಾರಂಭ ಮಾಡುವುದಕ್ಕೆ 30 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರು ಮಾಡಿ 1951ನೇ ಇಸವಿಯಲ್ಲಿ ಪಂಡಿತ್ ಜವಹಾರ್‌ಲಾಲ್ ನೆಹರು ಅವರನ್ನು ಕರೆದುಕೊಂಡು ಬಂದು ಈ ವಿಧಾನ ಸೌಧದ ಕಟ್ಟಡಕ್ಕೆ ಅಡಿಗಲ್ಲನ್ನು ಹಾಕಿದ್ದಾರೆ. ಈ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಕೇವಲ 30 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಇಟ್ಟಾಗ ಆಗ ಆರ್ಥಿಕ ಸಚಿವರಾಗಿದ್ದಂಥ ಮಾನ್ಯ ದಾಸಪ್ಪನವರು ಅದಕ್ಕೆ ವಿರೋಧ ಮಾಡುತ್ತಾರೆ. ಈ ವಿಧಾನಸೌಧ ಕಟ್ಟಡಕ್ಕೆ 30 ಲಕ್ಷ ರೂಪಾಯಿ ಗಳನ್ನು ಏನಾದರು ಕೊಟ್ಟರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಏನಾಗುತ್ತದೆಂದು ಮಾನ್ಯ ದಾಸಪ್ಪನವರು ಕೇಳುತ್ತಾರೆ. ಅವತ್ತಿನ ದಿವಸ ಈ ಕಟ್ಟಡಕ್ಕೆ ಅಡಿಗಲ್ಲನ್ನು ಹಾಕದೆ ಇದ್ದರೆ ನಾವೆಲ್ಲರೂ ವಿಧಾನಸೌಧದಲ್ಲಿ ಕುಳಿತುಕೊಳ್ಳು ವುದಕ್ಕೆ ಆಗುತ್ತಿರಲಿಲ್ಲ ಮತ್ತೆ ಇದನ್ನು ನೋಡುವುದಕ್ಕೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಇಂಥ ಒಬ್ಬ ಧೀಮಂತ ನಾಯಕನಾಗಿದ್ದಂಥ ಮಾನ್ಯ ಕೆ.ಸಿ.ರೆಡ್ಡಿಯವರ ಒಂದು ಫೋಟೋ ಕೂಡ ಈ ಕಟ್ಟಡದಲ್ಲಿ ಹಾಕಿಲ್ಲ. ಈ ಒಂದು ಸದನದಲ್ಲಿ ಬೇರೆಯವರದೆಲ್ಲಾ ಫೋಟೋಗಳಿವೆ.

ಅಧ್ಯಕ್ಷರು : ಮಾನ್ಯ ಸಂಪಂಗಿಯವರೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯ ಏಕೆ, ಹೇಳುತ್ತಿದ್ದೇನೆಂದರೆ, ಕಳೆದ ಸಾರಿ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈ ವಿಷಯ ತಂದಾಗ ಮಾನ್ಯ ಕೆ.ಡಿ.ರೆಡ್ಡಿಯವರ ಪುತ್ಥಳಿಯನ್ನು ಹಾಕುವುದಕ್ಕೆ ಸಾಧ್ಯವಾಗದಿದ್ದರೆ ಬ್ಯಾಂಕ್‌ವೆಟ್ ಹಾಲ್‌ನಲ್ಲಿ ಅವರ ಫೋಟೋವನ್ನು ಹಾಕುತ್ತೇವೆಂದು ಆ ಸಂದರ್ಭದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಭರವಸೆಯನ್ನು ಕೊಟ್ಟಿದ್ದರು. ಆದರೆ, ಇವತ್ತಿನವರೆಗೆ ಅವರ ಫೋಟೋವನ್ನು ಸಹ ಹಾಕಿಲ್ಲ. ಮತ್ತೆ

ಇವತ್ತಿನವರೆಗೆ ಅವರನ್ನು ನೆನಸಿಕೊಳ್ಳುವಂಥ ಕೆಲಸ ಕೂಡ ಆಗಿಲ್ಲ. ವಿಧಾನ ಸೌಧ ಕಟ್ಟಡಕ್ಕೆ ಅಡಿಗಲ್ಲು ಹಾಕಿದಂಥ ಮಾನ್ಯ ಕೆ.ಸಿ.ರೆಡ್ಡಿಯವರನ್ನು ನೆನಸಿಕೊಳ್ಳುವಂಥ ಕೆಲಸ ಆಗಿಲ್ಲವೆಂದು ನನಗೆ ನೋವಾಗುತ್ತಿದೆ. ನಾನೂ ಕೂಡ ಕೋಲಾರ ಜಿಲ್ಲೆಯಿಂದ ಬಂದಿದ್ದೇನೆ.

ಅಧ್ಯಕ್ಷರು : ನೀವು ಕ್ಲಾರಿಫಿಕೇಷನ್ ಕೇಳಿ. ಗಮನ ಸೆಳೆಯುವ ಸೂಚನೆಯಲ್ಲಿ ಈ ರೀತಿಯ ಹೇಳುತ್ತಾ ಹೋದರೆ ಹೇಗೆ?

ಶ್ರೀ ಎನ್.ಸಂಪಂಗಿ : ಭರವಸೆಯನ್ನು ಕೊಟ್ಟಿದ್ದರೂ ಕೂಡ ಅವರ ಪುತ್ಥಳಿಯನ್ನು ಸ್ಥಾಪನೆ ಮಾಡಿಲ್ಲ. ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ನಾವು ಬೇರೆ ರೀತಿ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಮಾನ್ಯ ಜಯಚಂದ್ರರವರೆ, ತಾವು ಪ್ರತಿಯೊಂದು ಗಮನ ಸೆಳೆಯುವ ಸೂಚನೆಗೆ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವುದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಅಂದರೆ, ಅವರು ಬಾಲ್ ಅನ್ನು ಯಾವ ರೀತಿಯಾಗಿ ಈ ಕಡೆ ಹಾಕಿದ್ದಾರೆಂಬ ಬಗ್ಗೆ ಹೇಳುತ್ತಿದ್ದೇನೆ. ಸದನವು ಒಪ್ಪಿದರೆ ನ್ಯಾಯಾಲಯಕ್ಕೆ ಅನುಮತಿ ಪಡೆಯಲು ಅರ್ಜಿಯನ್ನು ಸಲ್ಲಿಸಲಾಗುವುದೆಂದು ಹೇಳಿದ್ದಾರೆ. ಇದು ನಿಮ್ಮ ಕಡೆಯೇ ಇರುವುದರಿಂದ ನೀವು ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿ ಈ ಸಭೆಯ ಮುಂದೆ ನಿರ್ಣಯವನ್ನು ತೆಗೆದುಕೊಂಡು ಬಂದರೆ we will agree.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಇಲಾಖೆ ಸಚಿವರು) : ಮಾನ್ಯ ಜಯಚಂದ್ರರವರೆ, ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುವುದರ ಬಗ್ಗೆ ತಾವು ಸಲಹೆ ಕೊಟ್ಟಿದೀರಿ. ಆದರೆ, ಈ ಸದನದಲ್ಲಿ ನಾವು ಗಂಭೀರವಾಗಿ ಒಂದು ವಿಷಯದ ಬಗ್ಗೆ ಯೋಚನೆ ಮಾಡಬೇಕು. ಏನೆಂದರೆ, ಈ ಪ್ರತಿಮೆಗಳ ಸಂಸ್ಕೃತಿಗಳನ್ನು ನಾವು ಎಲ್ಲಿಯವರೆಗೆ ಮುಂದುವರಿಸಬೇಕು? ಪ್ರತಿಮೆಗಳ ಮೇಲೆ ಅಲ್ಲಲ್ಲಿ ಆಗುತ್ತಿರುವ ಅನಾಹುತಗಳಿಂದ ಪ್ರಕ್ಷುಬ್ಧ ವಾತಾವರಣ ಉಂಟಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾನು ಬಹಳಷ್ಟು ಸಲ ಒಂದು ಮಾತನ್ನು ಹೇಳಿದ್ದೇನೆ. ಅದೇನೆಂದರೆ, ಲಂಡನ್‌ನಲ್ಲಿ Hall of Fame ಎಂದು ಇದೆ. ಅಂದರೆ, ಇದೊಂದು ಬ್ಯಾಂಕ್ವೆಟ್ ಹಾಲ್ ರೀತಿ

ಇದೆ. Why not we create one Hall of Fame in Karnataka? ಅಲ್ಲಿ ಅಗ್ರಗಣ್ಯ, ಮಹಾನಾಯಕರ ಪ್ರತಿಮೆಗಳನ್ನು ಹಾಕಿದ್ದಾರೆ. ಆದರೆ, ಇಲ್ಲಿ ಪ್ರತಿಮೆಗಳನ್ನು ಹಾಕಿ ಪ್ರತಿಮೆ ಕೆಳಗಡೆ ಅವರು ಯಾರು ಎಂಬುದನ್ನು ಸಹ ಹಾಕಿರುವುದಿಲ್ಲ. ಆದ್ದರಿಂದ, ಪ್ರತಿಮೆಗಳಿಗೆ ಅವರ ಜನ್ಮ ದಿನದಂದು ಮತ್ತು ಅವರ ವರ್ಧಂತಿ ದಿವಸ ಹೋಗಿ ಪ್ರತಿಮೆಗಳಿಗೆ ಹಾರ ಹಾಕುವುದನ್ನು ಬಿಟ್ಟರೆ ಉಳಿದ 364 ದಿವಸ ಕಾಗೆ, ಗುಬ್ಬಚಿ ಅಲ್ಲಿಗೆ ಹೋಗುತ್ತವಷ್ಟೆ. ನಾವ್ಯಾರು ಆ ಕಡೆ ನೋಡುವುದಿಲ್ಲ ಮತ್ತೆ ಕ್ಲೀನ್ ಕೂಡ ಮಾಡಿಸುವುದಿಲ್ಲ. ಇದು ನಮ್ಮ ದೌರ್ಭಾಗ್ಯ ಏಕೆಂದರೆ ನಮ್ಮ ನಾಯಕರುಗಳ ಬಗ್ಗೆ ನಾವು ತೋರಿಸುತ್ತಿರುವ ಅನಾದರ. ಈಗ ಮಾನ್ಯ ಸಂಪಂಗಿಯವರು ಮತ್ತು ಮಾನ್ಯ ಜಯಚಂದ್ರ ರವರು ಕೊಟ್ಟಿರುವ ಸಲಹೆಗಳನ್ನು ಪರಿಶೀಲಿಸುವುದರ ಜೊತೆಗೆ ಇಡೀ ಸದನ ಮತ್ತು ಇಡೀ ಸಮಾಜ ಈ ಪ್ರತಿಮೆ ಸಂಸ್ಕೃತಿ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ ಎಂಬುದು ನನ್ನ ವೈಯಕ್ತಿಕ ಅನಿಸಿಕೆ. ತಾವು ಹೇಳಿರುವುದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಡಾ: ಎಂ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಅವರು ನಮ್ಮ ಜಿಲ್ಲೆಯವರಾಗಿರುವುದರಿಂದ ನಮಗೂ ಕೂಡ ಅವಕಾಶ ಕೊಡಿ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ. ತಾವು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

ಡಾ: ಎಂ.ಸುಧಾಕರ್ : ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ. ಅವರು ಮಾತನಾಡಿದ ನಂತರ ನನಗೆ ಅವಕಾಶ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ : ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರು ಆ ಪೀಠದಲ್ಲಿ ಕುಳಿತಂಥ ಸಂದರ್ಭದಲ್ಲಿ ನೀವು ಈಗ ಹೇಳಿದಂಥ ಮಾತುಗಳನ್ನೆ ಅವರು ಆ ದಿವಸ ಹೇಳಿದ್ದರು. ಕೌನ್ಸಿಲ್ ಮತ್ತು ಅಸೆಂಬ್ಲಿ ಮಧ್ಯೆ ಒಂದು ಸೆಂಟ್ರಲ್ ಹಾಲ್ ಕಟ್ಟಬೇಕೆಂಬ ತೀರ್ಮಾನ ಮಾಡಿ ಅದಕ್ಕೆ ಒಂದು ಅಂದಾಜನ್ನು ಸಹ ತಯಾರು ಮಾಡಲಾಗಿತ್ತು. ಆದರೆ, ಅದನ್ನು ಡ್ರಾಪ್ ಮಾಡಿದ ನಂತರ ವಿಕಾಸಸೌಧ ಕಟ್ಟಬೇಕೆಂಬ ಬಗ್ಗೆ ತೀರ್ಮಾನ ತೆಗೆದು ಕೊಳ್ಳಲಾಯಿತು. ಸೆಂಟ್ರಲ್ ಹಾಲ್ ಮಾಡಬೇಕೆಂಬ ಹಳೆಯ ಚಿಂತನೆ ಹಾಗೆಯೇ ಇದೆ. ಆದ್ದರಿಂದ, ಸೆಂಟ್ರಲ್ ಹಾಲ್ ಮಾಡುವುದರ ಬಗ್ಗೆ ಸಾಧ್ಯತೆ ಇದೆಯೇ ಎಂಬುಧರ ಬಗ್ಗೆ ತಾವು ಯೋಚನೆ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಇಲಾಖೆ ಸಚಿವರು) : ಖಂಡಿತ ಯೋಚನೆ ಮಾಡುತ್ತೇವೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೀಡಿರುವಂಥದ್ದು ಸರಿಯಾದ ಉತ್ತರ ಅಲ್ಲ. ಮಾನ್ಯ ಕೆ.ಸಿ.ರೆಡ್ಡಿಯವರ ಪುತ್ಥಳಿ ಮಾಡುವುದಕ್ಕೆ ಆಗುತ್ತದೆಯೇ ಅಥವಾ ಇಲ್ಲವೇ ಎಂದು ಸ್ಪಷ್ಟವಾಗಿ ಹೇಳಬೇಕು. ರಾಜ್ಯದ ಪ್ರಪ್ರಥಮ ಮುಖ್ಯ ಮಂತ್ರಿಯವರಿಗೆ ಇದು ಅವಮಾನ ಮಾಡಿದಂತಾಗುತ್ತದೆ. ಮಾಡುತ್ತೇವೆ ಅಥವಾ ಮಾಡುವುದಿಲ್ಲ ಎಂಬುದರ ಬಗ್ಗೆ ಹೇಳುತ್ತಿಲ್ಲ. ಸುಮ್ಮನೆ ಸದನ ಮುಂದೆ ತರುತ್ತೇವೆ ಮತ್ತು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುತ್ತೇವೆಂದು ಹೇಳುತ್ತಿದ್ದಾರಷ್ಟೆ, ಎಲ್ಲಿ, ಯಾವತ್ತು ಮಾಡುತ್ತಾರೆಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ಇದೇ ತರಹದ ಉತ್ತರ ಕೊಡಬೇಕೆಂದು ನೀವು ಒತ್ತಾಯ ಮಾಡುವಂತಿಲ್ಲ.

ಶ್ರೀ ಎನ್. ಸಂಪಂಗಿ : ನಾನು ಒತ್ತಾಯ ಮಾಡುತ್ತೇನೆ. ಅನೇಕರ ಪುತ್ಥಳಿಯನ್ನು ಇಲ್ಲಿ ಹಾಕಿರುವಾಗ ರಾಜ್ಯದ ಪ್ರಪ್ರಥಮ ಮುಖ್ಯ ಮಂತ್ರಿಯವರಾದ ಶ್ರೀ ಕೆ.ಸಿ.ರೆಡ್ಡಿಯವರ ಪುತ್ಥಳಿ ಏಕೆ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲವೆ?

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಹೈಕೋರ್ಟ್ ವಿಧಿಸಿರುವ ನಿರ್ಬಂಧವನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಈ ನಿರ್ಬಂಧವನ್ನು ಮೀರಿ ನಾವು ಪ್ರತಿಮೆಯನ್ನು ಹಾಕುವುದಕ್ಕೆ ಆಗುವುದಿಲ್ಲ. ಈ ವಿಧಾನಸೌಧದ ಬಗ್ಗೆ ಕಲ್ಪನೆ ಇಟ್ಟುಕೊಂಡಿದ್ದಂಥ ಮಹಾನ್ ನಾಯಕರು ಮತ್ತು ಈ ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿದ್ದಂಥ ಶ್ರೀ ಕೆ.ಸಿ.ರೆಡ್ಡಿಯವರ ಬಗ್ಗೆ ಕೋಲಾರ ಜಿಲ್ಲೆಯವರಷ್ಟೆ ಅಲ್ಲದೆ ಬೆಂಗಳೂರು ಮತ್ತು ಇಡೀ ಕರ್ನಾಟಕದ ಜನತೆಗೆ ಅವರ ಮೇಲೆ ಅಪಾರ ಗೌರವ ಮತ್ತು ಶ್ರದ್ಧೆ ಇದೆ. ಆದರೂ ಕೂಡ ಈ ರೀತಿಯಾದ ಶ್ರದ್ಧೆ ಇರುವ ವ್ಯಕ್ತಿಗೆ ಹೈಕೋರ್ಟ್‌ನ ಆದೇಶ ಮೀರಿ ಪ್ರತಿಮೆಯನ್ನು ನಿರ್ಮಾಣ ಮಾಡುವಂಥ ಹಂತದಲ್ಲಿ ಬೇರೆ ಯಾರಾದರು ಕೋರ್ಟ್‌ನಿಂದ ಸ್ಟೇ ತರುವಂಥ ಪರಿಸ್ಥಿತಿ ಬರಬಾರದು. ಆದ್ದರಿಂದ, ಹೈಕೋರ್ಟ್‌ನ ಆದೇಶದ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು : ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ. ಮತ್ತೆ ಮತ್ತೆ ಅದರ ಬಗ್ಗೆ ಕೇಳುತ್ತಾ ಹೋದರೆ ಹೇಗೆ? ನೀವು ಈ ರೀತಿಯಾಗಿ ಮಾತನಾಡುತ್ತಿದ್ದರೆ ದಾಖಲೆಗೆ ಹೋಗಬಾರದೆಂದು ಹೇಳಬೇಕಾಗುತ್ತದೆಯಷ್ಟೆ. ಇದು ಗಮನ ಸೆಳೆಯುವ ಸೂಚನೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಪ್ರತಿಮೆಗಳನ್ನು ಹಾಕುವುದ ಕ್ಕೋಸ್ಕರ ಈ ರೀತಿಯಾದ ಸುಳ್ಳು ಮಾಹಿತಿಗಳನ್ನು ನಮಗೆ ಕೊಡಬೇಕೆ? ಈ ಸರ್ಕಾರಕ್ಕೆ ಅವರ ಮೇಲೆ ಗೌರವ ಇಲ್ಲದಿದ್ದರೆ ನಮಗೆ ಬೇಡ.

ಡಾ: ಎಂ ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉಚ್ಚ ನ್ಯಾಯಾಲಯ ಅದಕ್ಕೆ ನಿರ್ಬಂಧ ಹಾಕಿದೆ ಎಂದು ಹಾಗೂ Hall of Fame ಬಗ್ಗೆ ಹೇಳಿದರು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಹೈದಾರಾಬಾದ್‌ನಲ್ಲಿ ಟ್ಯಾಂಕ್ ಬಂಡ್ ಏರಿಯಾದಲ್ಲಿ ಬಹಳಷ್ಟು ಜನರ ಪುತ್ಥಳಿಗಳನ್ನು ಹಾಕಿದ್ದಾರೆ. ಬೆಂಗಳೂರಿನಲ್ಲಿರುವ ಹಳೆಯ ಸೆಂಟ್ರಲ್ ಜೈಲ್ ಜಾಗದಲ್ಲಿ ಈಗ Freedom Park ಮಾಡಿದ್ದಾರೆ. ಆದ್ದರಿಂದ ಅಲ್ಲಿಯಾದರು ಪುತ್ಥಳಿಯನ್ನು ಸ್ಥಾಪನೆ ಮಾಡಿ ಅವರಗೆ ಗೌರವ ಕೊಡುವಂಥ ಕೆಲಸ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ. ಏಕೆಂದರೆ, ವಿಧಾನಸೌಧದ ಸುತ್ತಲು ಬಹುಶಃ ಜಾಗ ಇಲ್ಲದೆ ಇರಬಹುದು. ಮತ್ತೆ ಇಲ್ಲಿರತಕ್ಕಂಥ ಎಲ್ಲಾ ಪುತ್ಥಳಿಯನ್ನು ಅಲ್ಲಿಗೆ ಸ್ಥಳಾಂತರ ಮಾಡಿದರೆ ನಮ್ಮದೇನು ಅಭ್ಯಂತರ ಇಲ್ಲ. ಆದ್ದರಿಂದ, ಇದರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀ ಕೆ.ಸಿ.ರೆಡ್ಡಿಯವರು ನಮ್ಮ ಜಿಲ್ಲೆಯಿಂದ ಬಂದಿದ್ದಾರೆ. ಅವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾವ್ಯಾರು ಹುಟ್ಟಿರಲಿಲ್ಲ. ಈಗಿನ ಅವಕಾಶವೆಲ್ಲವನ್ನು ನೋಡಿದಾಗ ಮುಖ್ಯ ಮಂತ್ರಿಯಾಗುವ ಅವಕಾಶ ಮತ್ತೆ ನಮ್ಮ ಜಿಲ್ಲೆಯವರಿಗೆ ಸಿಗುತ್ತದೆಯೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ, ಶ್ರೀ ಕೆ.ಸಿ.ರೆಡ್ಡಿಯವರ ನೆನಪುಗಳನ್ನು ನಾವೆಲ್ಲರು ಮಾಡಿಕೊಳ್ಳ ಬೇಕಾದರೆ ಖಂಡಿತವಾಗಿ ಅವರಿಗೆ ಗೌರವ ಕೊಡತಕ್ಕಂಥದು ಬಹಳ ಮುಖ್ಯ. ಆದ್ದರಿಂದ, ಸರ್ಕಾರ ಅದರ ಬಗ್ಗೆ ಸೂಕ್ತವಾಗಿ ಗಮನಿಸಿ ಅದನ್ನು ಮಾಡಲೇಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಸಂಪಂಗಿ : ಶ್ರೀ ಕೆ.ಸಿ.ರೆಡ್ಡಿಯವರ ಪ್ರತಿಮೆಯನ್ನು ಜೈಲ್ ಜಾಗದಲ್ಲಿ ಮಾಡುವುದು ಬೇಡ. ವಿಧಾನ ಸೌಧದ ಸುತ್ತಮುತ್ತಲೇ ಮಾಡಬೇಕು.

ಅಧ್ಯಕ್ಷರು : ಆಯಿತು. ಹೇಳಿದ್ದನ್ನೆ ಹೇಳುವುದಕ್ಕೆ ಮತ್ತೆ ಹೋಗಬೇಡಿ. ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ಅಭಯಚಂದ್ರ ಜೈನ್‌ರವರನ್ನು ನಾನು ಕರೆದಿದ್ದೇನೆ.

(6-30 PM)

(2) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಜನ ಸಾಮಾನ್ಯರು ತೊಂದರೆ ಅನುಭವಿಸುತ್ತಿರುವ ಬಗ್ಗೆ :

ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದರೆ) : ಮಾನ್ಯ ಅಧ್ಯಕ್ಷರೆ, ಅಲ್ಲಿ ಕುಡಿಯುವ ನೀರಿಗೆ ಬಹಳ ದೊಡ್ಡ ತೊಂದರೆ ಇದೆ. Task Force ಗೆ ಹಣ ಬಿಡುಗಡೆಯಾಗಿಲ್ಲ, ಹಣ ಬಿಡುಗಡೆ ಮಾಡಿ. ಈಗ ಇರುವಂಥ ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡುವಂಥ ಕೆಲಸ ಆಗಬೇಕು. ಯಾವ ಬೋರ್‌ವೆಲ್‌ಗಳಲ್ಲಿ ನೀರು ಖಾಲಿಯಾಗಿದೆ, ಅಲ್ಲಿ ಹೊಸ ಬೋರ್‌ವೆಲ್‌ಗಳನ್ನು ಹಾಕಿಸುವಂಥ ಕೆಲಸ ಆಗಬೇಕಾಗಿದೆ. Task Forceಗೆ ಹಣ ಬಿಡುಗಡೆಯಾಗದಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ನೀರಿನ ಹಾಹಾಕಾರದಿಂದ ಬಹಳ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ Task Force ಹಣ ಬಿಡುಗಡೆ ಮಾಡಬೇಕು.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಗಮನವನ್ನು ಸೆಳೆದಿರುತ್ತೇವೆ. ಈ ಉತ್ತರದಿಂದ ಯಾವುದೇ ಪರಿಹಾರ ನಮಗೆ ಸಿಗುವುದಿಲ್ಲ. ಇದರ ಬಗ್ಗೆ ನಮಗೆ ಸ್ಪಷ್ಟವಾಗಿ ಹೇಳಬೇಕು. ಅಲ್ಲಿ ನೀರಿನ ಸಮಸ್ಯೆ ಉಂಟು ಅಥವಾ ಇಲ್ಲವೆ ಎಂದು. ಆ ನೀರಿನ ಸಮಸ್ಯೆಯನ್ನು ಬಗೆಹರಿಸಲು ಜಿಲ್ಲಾ ಪಂಚಾಯತಿ CEO ಮತ್ತು ಜಿಲ್ಲಾಧಿಕಾರಿಯವರ ಹತ್ತಿರ ಈ ವರ್ಷ ಎಷ್ಟು ಅನುದಾನವನ್ನು ನೀಡಿರುತ್ತೀರಿ. ಒಂದು ನಯಾಪೈಸೆ ಕೂಡ ಹಣ ಇಲ್ಲ. ಒಂದು ಬೋರ್ ವೆಲ್ ತೆಗೆಯಬೇಕಾದರೆ ಕನಿಷ್ಟ ಒಂದು ಕಡೆ ಒಂದರಿಂದ ಒಂದೂವರೇ ಲಕ್ಷ ರೂ.ಗಳ ಹಣ ಬೇಕಾಗುತ್ತದೆ.

ಅಧ್ಯಕ್ಷರು : ನೀವು ಹಣ ಇಲ್ಲವೆಂದು ಹೇಳಿರುತ್ತೀರಿ. ಒಂದು ಅಥವಾ ಎರಡು ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಯು.ಟಿ. ಖಾದರ್ : ಹಣ ಇರದಿದ್ದರೂ ಚಿಂತೆ ಇಲ್ಲ. ನೀವು ಒಂದು ಪತ್ರವನ್ನು CEO ರವರಿಗೆ ಕಳುಹಿಸಿ. ಬೋರ್‌ವೆಲ್‌ಗೆ ನಾವು ಹಣ ಕಳುಹಿಸುತ್ತೇವೆ ಎನ್ನುವ ಆದೇಶವನ್ನಾದರೂ ಕೊಡಿ. ಶಾಸಕರ Task Force ಎಂದು ಇದೆ, ಅದಕ್ಕೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿರುವುದರಿಂದ ಜನಸಾಮಾನ್ಯರು ನಮ್ಮ ಹತ್ತಿರ ಬಂದು ಕೇಳುತ್ತಿರುತ್ತಾರೆ. ಆ Task Force ಗೆ ಯಾವಾಗ ಹಣ ಕಳುಹಿಸುತ್ತೀರೆನ್ನುವುದರ ಬಗ್ಗೆ ನಮಗೆ ನಿರ್ಧಿಷ್ಟವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3598– ಗ್ರಾಮೀಣ ಜನವಸತಿಗಳಿವೆ. ಜಿಲ್ಲೆಯಲ್ಲಿ 1,115–ಕೊಳವೆ ನೀರು ಸರಬರಾಜು ಯೋಜನೆಗಳು, 717– ಕಿರು ಸರಬರಾಜು ಯೋಜನೆಗಳು ಮತ್ತು 3937– ಕೈಪಂಪು ಕೊಳವೆ ಬಾವಿಗಳು ಹಾಗೂ ಸುಮಾರು 1250– ತೆರೆದ ಬಾವಿಗಳನ್ನು ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸ್ಥಾಪಿಸಲಾಗಿದೆ. ಇವುಗಳಲ್ಲಿ 2480– ಜನವಸತಿಗಳಲ್ಲಿ, 40 LPCD ಪ್ರಮಾಣದಲ್ಲಿ, ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 1118– ಜನವಸತಿಗಳಲ್ಲಿ 20 ರಿಂದ 30 LPCD ಪ್ರಮಾಣದಲ್ಲಿ ನೀರು ಸರಬರಾಜಾಗುತ್ತಿದೆ.

2009–10ರ ಸಾಲಿಗೆ, ಮಂಗಳೂರು ಜಿಲ್ಲಾ ಪಂಚಾಯತಿಗೆ, ಒಟ್ಟು ರೂ.12.03 ಕೋಟಿಗಳನ್ನು ಕುಡಿಯುವ ನೀರಿನ ಬಾಬ್ತಿಗಾಗಿ ಬಿಡುಗಡೆ ಮಾಡಿದ್ದು, ಜನವರಿ–10ರ ಅಂತ್ಯಕ್ಕೆ ರೂ.7.26 ಕೋಟಿ ವೆಚ್ಚವಾಗಿದೆ. ಪ್ರಸಕ್ತ ಸಾಲಿನಲ್ಲಿ, ಕಾರ್ಯಪಡೆ ಯೋಜನೆಯಡಿಯಲ್ಲಿ, ಜಿಲ್ಲೆಗೆ ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಡಿಯಲ್ಲಿ 78 ಕೊಳವೆ ಬಾವಿ/ತೆರೆದ ಬಾವಿಗಳನ್ನು ರೂ. 65.02 ಲಕ್ಷ ವೆಚ್ಚದಲ್ಲಿ ಹಾಗೂ ರೂ.34.80 ಲಕ್ಷ ವೆಚ್ಚದಲ್ಲಿ 21 ಪೈಪ್‌ಲೈನ್ ವಿಸ್ತರಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಂದ ರೂ.35.54 ಲಕ್ಷಗಳ ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ ರೂ.23.30 ಲಕ್ಷಗಳ ಅನುದಾನದಲ್ಲಿ 96 ಕೊಳವೆ ಬಾವಿ ಸ್ವಚ್ಛ/ಆಳಗೊಳಿಸಲಾಗಿದೆ. ಹಾಗೂ ಮಂಗಳೂರು ಹಾಗೂ ಬಂಟ್ವಾಳ ತಾಲ್ಲೂಕಿನ 26 ಜನವಸತಿಗಳಿಗೆ, ರೂ.12.24 ಲಕ್ಷ ಅನುದಾನದಲ್ಲಿ, ಬೇಸಿಗೆಯಲ್ಲಿ, ಟ್ಯಾಂಕರ್ ಮೂಲಕ ನೀರು ಒದಗಿಸಲಾಗಿದೆ. ಒಟ್ಟು 145 ಸಮಸ್ಯಾತ್ಮಕ ಜನವಸತಿಗಳನ್ನು

2009–10ನೇ ಸಾಲಿನಲ್ಲಿ ಆವರಿಸಲು ಉದ್ದೇಶಿಸಿದ್ದು, ಇಲ್ಲಿಯವರೆಗೆ 81 ಜನವಸತಿಗಳನ್ನು ಆವರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, 2–3 ಕಿ.ಮೀ. ದೂರದ ಪ್ರದೇಶದಿಂದ ನೀರು ತರಬೇಕಾಗಿರುವುದು ಹಾಗೂ ವಾರಕ್ಕೊಮ್ಮೆ ನೀರು ಒದಗಿಸಲು ಸಾಧ್ಯವಾಗಿಲ್ಲದಿರುವುದು ಕಂಡು ಬಂದಿರುವುದಿಲ್ಲ. ಬೇಸಿಗೆಯಲ್ಲಿ, ಜಿಲ್ಲೆಯ ಮಂಗಳೂರು ತಾಲ್ಲೂಕಿನ 15 ಗ್ರಾಮ ಪಂಚಾಯತಿಯ ಹಾಗೂ ಬಂಟ್ವಾಳ ತಾಲ್ಲೂಕಿನ 11 ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲೆಯ ಕೆಲವೊಂದು ಕಡೆ ನೀರಿನ ಸಮಸ್ಯೆ ಉಂಟಾಗುವುದು. ಉಪ್ಪು ನೀರಿನ ಪ್ರದೇಶಗಳಿರುವ ಸ್ಥಳಗಳಲ್ಲಿ ಸಮಸ್ಯೆಗಳಾಗುತ್ತಿವೆ. ಹಾಗೂ ಬೇಸಿಗೆಯಲ್ಲಿ ಅಂತರ್ಜಲ ನೀರಿನ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆಯುಂಟಾಗುತ್ತಿದೆ. ಇಂತಹ ಸ್ಥಳಗಳಲ್ಲಿ, ಕುಡಿಯುವ ನೀರಿನ ಜಲಮೂಲಗಳನ್ನು ಮರುಪೂರಣ ಮಾಡಿ ಅಂತರ್ಜಲವನ್ನು ಹೆಚ್ಚಿಸುವ ಬಗ್ಗೆ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಈಗಾಗಲೇ ಪ್ರಾಯೋಗಿಕವಾಗಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗುವ, ಮಂಗಳೂರು ತಾಲ್ಲೂಕಿನ, ಮುನ್ನೂರು ಹಾಗೂ ಬಂಟ್ವಾಳ ತಾಲ್ಲೂಕಿನ ಕೋಲ್ನಾಡು ಗ್ರಾಮಗಳಲ್ಲಿನ ಜಲಮೂಲಗಳನ್ನು ಪ್ರಾಯೋಗಿಕವಾಗಿ ಜಲಮರುಪೂರಣಗೊಳಿಸಿ, ಕುಡಿಯುವ ನೀರಿನ ಯೋಜನೆಗಳ ಜಲಮೂಲ ಗಳನ್ನು ಪುನಃಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಇದಲ್ಲದೆ, ಮಂಗಳೂರು ತಾಲ್ಲೂಕಿನ, ಮಳವೂರು ಮತ್ತು ಇತರೆ 10 ಗ್ರಾಮಗಳಿಗೆ ಮತ್ತು ಕಿನ್ನಿಗೋಳಿ ಮತ್ತು ಇತರೆ 17 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಗಾಗಿ, ಕ್ರಮವಾಗಿ ರೂ.18.19 ಕೋಟಿ ಹಾಗೂ ರೂ. 16.80 ಕೋಟಿಗಳಲ್ಲಿ, ನದಿ ನೀರಿನ ಮೂಲಗಳಿಂದ, ವೆಂಟೆಡ್ ಡ್ಯಾಂಗಳನ್ನು ನಿರ್ಮಿಸಿ, ನೀರು ಸರಬರಾಜು ಮಾಡಲು ಮತ್ತು ಸಮುದ್ರದ ಉಪ್ಪು ನೀರನ್ನು ತಡೆಯಲು, ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದಲ್ಲದೆ, ಅಧಿಕ ಕಬ್ಬಿಣಾಂಶವಿರುವ 296 ಜನವಸತಿಗಳಲ್ಲಿ 716 ಟೆರ್‍ರಾಫಿಲ್ ಫಿಲ್ಟರ್‌ಗಳನ್ನು ರೂ.394.00 ಲಕ್ಷ ವೆಚ್ಚದಲ್ಲಿ ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ನಾವು ಡಿಟೇಲ್ ಆದ ಉತ್ತರವನ್ನು ಕೊಟ್ಟಿರುತ್ತೇನೆ. ಖಾಯಂ ಆಗಿ ಕುಡಿಯುವ

ನೀರಿನ ಯೋಜನೆಗಳನ್ನು ಮಂಜೂರು ಮಾಡಿದ್ದು ಮತ್ತು ಪ್ರಗತಿಯಲ್ಲಿ ಇರುವಂಥವುಗಳನ್ನು ನಾನು ಹೇಳಿದ್ದೇನೆ. ಮಾನ್ಯ ಶಾಸಕರು ಇಲ್ಲಿ ವ್ಯಕ್ತಪಡಿಸುತ್ತಿರುವಂಥದ್ದು ತಾತ್ಕಾಲಿಕವಾಗಿ ಈ ಬೇಸಿಗೆಯ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ. ಇದಕ್ಕೆ ತಾತ್ಕಾಲಿಕವಾಗಿ ಪರಿಹಾರವನ್ನು ಹುಡುಕಲಿಕ್ಕೆ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ ಆದಷ್ಟು ಬೇಗನೆ ಹಣವನ್ನು ಬಿಡುಗಡೆ ಮಾಡಬೇಕೆನ್ನುವುದರ ಬಗ್ಗೆ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಖಾಯಂ ಆದ ಯೋಜನೆಗಳನ್ನು execute ಮಾಡುವಂಥದ್ದು Process start ಆಗಿದೆ. ಇದರ ಜೊತೆಗೆ ತಕ್ಷಣಕ್ಕೆ ಏನು ಹಣ ಬಿಡುಗಡೆ ಮಾಡಬೇಕು. ಶಾಸಕರ ಅಧ್ಯಕ್ಷತೆಯಲ್ಲಿ ಇರುವಂಥ ಆ Task Force Committee ಏನಿದೆ ಅದಕ್ಕೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕು ಎನ್ನುವಂಥದ್ದು ಅದಕ್ಕೆ ಸರ್ಕಾರ ಸಿದ್ಧವಿದೆ. ಆದಷ್ಟು ಬೇಗನೆ ಇದೇ ವಾರದಲ್ಲಿ ಹಣ ಬಿಡುಗಡೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಎಲ್ಲೆಲ್ಲಿ ತೊಂದರೆ ಇದೆ ಅಲ್ಲಿಗೆ ಹಣ ಬಿಡುಗಡೆ ಮಾಡುತ್ತೇವೆ.

(ಗೊಂದಲ)

ಡಾ: ಎಂ.ಸಿ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ತೊಂದರೆ ಬಹಳ ಇದೆ. ಇದಕ್ಕೆ ನಾವು ಸುಮಾರು 8 ತಿಂಗಳುಗಳಿಂದ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು ಮಾಡುತ್ತೇವೆ.

ಅಧ್ಯಕ್ಷರು : ಆಯಿತು.

(3) ಹಾಸನ ಜಿಲ್ಲೆ ಅರಕಲಗೂಡು ಕ್ಷೇತ್ರದ ರಸ್ತೆಗಳು ತೀರಾ ಹದಗೆಟ್ಟಿರುವುದರಿಂದ ಸಂಚಾರ ವ್ಯವಸ್ಥೆಯು ಅಸ್ತವ್ಯಸ್ತವಾಗಿರುತ್ತದೆ. ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ಪ್ರಸಕ್ತ ವರ್ಷ ಯಾವುದೇ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಕ್ಷೇತ್ರದ ಕಾಮಗಾರಿಗಳ ಪ್ರಗತಿಯು ಕುಂಠಿತ ಗೊಂಡಿರುವುದರ ಬಗ್ಗೆ :

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) ಅರಕಲಗೂಡು ವಿಧಾನಸಭಾ ಕ್ಷೇತ್ರಕ್ಕೆ ಅರಕಲಗೂಡು ತಾಲ್ಲೂಕು ಹಾಗೂ ಹೊಳೇನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯು ಒಳಪಟ್ಟಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054(ಯೋಜನೆ) ಇತರೆ ರಸ್ತೆ

ನಿರ್ಮಾಣದಡಿ ಹೇಳೇಬೀಡು–ಅನೆಚೌಕೂರು ರಾಜ್ಯ ಹೆದ್ದಾರಿ–21ರ ಅರಕಲಗೂಡು ಪಟ್ಟಣ ಪರಿಮಿತಿಯಲ್ಲಿ ಆಯ್ದ ಭಾಗಗಳಲ್ಲಿನ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.25.38 ಲಕ್ಷಗಳ ಅನುದಾನವನ್ನು ಒದಗಿಸಿ ಅಪೆಂಡಿಕ್ಸ್–ಇನಲ್ಲಿ ಸೇರ್ಪಡೆಗೊಳಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಅರಕಲಗೂಡು ತಾಲ್ಲೂಕಿನಲ್ಲಿ 243.88 ಕಿಮೀ ಹಾಗೂ ಹೊಳೇನರಸೀಪುರ ತಾಲ್ಲೂಕಿನಲ್ಲಿ 137.25 ಕಿಮೀ ಜಿಲ್ಲಾ ಮುಖ್ಯ ರಸ್ತೆ ಹಾಗೂ ಅರಕಲಗೂಡು ತಾಲ್ಲೂಕಿನಲ್ಲಿ 113.69 ಕಿಮೀ ಮತ್ತು ಹೊಳೇನರಸೀಪುರ ತಾಲ್ಲೂಕಿನ ಹಳ್ಳಿ ಮೈಸೂರು ಹೋಬಳಿಗೆ ಸೇರಿದಂತೆ 49.61 ಕಿಮೀ ಉದ್ಧ ರಾಜ್ಯ ಹೆದ್ದಾರಿ ಇದ್ದು, ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಈ ವಿಧಾನಸಭಾ ಕ್ಷೇತ್ರಕ್ಕೆ ಪ್ರಸಕ್ತ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054–ಡಾ. ನಂಜುಂಡಪ್ಪ ವರದಿ ಅಡಿಯಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ 11 ಕಾಮಗಾರಿಗಳಿಗೆ ರೂ.200.01 ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ 19.14 ಕಿಮೀ ಉದ್ದ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡು, 10.03 ಕಿಮೀ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ 3 ಕಾಮಗಾರಿಗಳಿಗೆ ರೂ.9.52 ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ 0.715ಕಿಮೀ ರಸ್ತೆ ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದು 0.715ಕಿಮೀ ಪೂರ್ಣಗೊಂಡಿರುತ್ತದೆ. ಅಲ್ಲದೆ ಕ್ಷೇತ್ರದ ಅರಕಲಗೂಡು ತಾಲ್ಲೂಕು ವ್ಯಾಪ್ತಿಯಲ್ಲಿ 5054–ಸುವರ್ಣ ರಸ್ತೆ ಯೋಜನೆ ಅಡಿಯಲ್ಲಿ 1 ಕಾಮಗಾರಿಗೆ ರೂ.104.16 ಲಕ್ಷ ಬಿಡುಗಡೆಯಾಗಿದ್ದು, ಇದರಲ್ಲಿ 9.60 ಕಿಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು 9.60 ಕಿಮೀ ಪೂರ್ಣಗೊಂಡಿರುತ್ತದೆ. ಲೆಕ್ಕ ಶೀರ್ಷಿಕೆ ಎಸ್.ಸಿ.ಪಿ.ಯೋಜನೆ ಅಡಿಯಲ್ಲಿ 2 ಕಾಮಗಾರಿಗಳಿಗೆ ರೂ.62.61 ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ 3.30 ಕಿಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. 5054 ನಬಾರ್ಡ್ ಆರ್‌ಐಡಿಎಫ್–15ರ ಅಡಿಯಲ್ಲಿ ಒಂದು ಕಾಮಗಾರಿಗೆ ರೂ.37.50 ಲಕ್ಷ ಬಿಡುಗಡೆಯಾಗಿದ್ದು 2.60 ಕಿಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು ಟೆಂಡರ್ ಪ್ರಕ್ರಿಯೇ ಪ್ರಗತಿಯಲ್ಲಿದೆ. (ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ)

ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ

ಅನುಬಂಧ

ಪ್ರಸಕ್ತ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅರಕಲಗೂಡು ಕ್ಷೇತ್ರ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ/ ಯೋಜನೆಯ ಹೆಸರು	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		ಷರಾ
1	2	3	4	5	6	7	8	9	10
1	5054-ನಬಾರ್ಡ್-15	ಅರಕಲಗೂಡು	ಅರಕಲಗೂಡು	ಬೆಂಗಳೂರು [illegible], ರಸ್ತೆಯಿಂದ ಕಡುವಿನಹೊಸಹಳ್ಳಿಗೆ ಸೇರುವ ರಸ್ತೆ ಕಾಮಗಾರಿ.	37.50	2.60	0.00	0.00	ಟೆಂಡರ್ ಪ್ರಕ್ರಿಯೆಯಲ್ಲಿದೆ
	ಒಟ್ಟು				37.50	2.60	0.00	1.00	
1	ಸುವರ್ಣ ರಸ್ತೆ ಯೋಜನೆ	ಅರಕಲಗೂಡು	ಅರಕಲಗೂಡು	ಅರಕಲಗೂಡು - [illegible] ಮಾರ್ಗ [illegible] ಸಂಪರ್ಕ ಮಾರ್ಗ ರಸ್ತೆ ಅಭಿವೃದ್ಧಿ. ಸರಪಳಿ 15.00 ರಿಂದ 15.70 ಕಿ.ಮೀ ವರೆಗೆ= 0.70 ಸರಪಳಿ 20.00 ರಿಂದ 28.20 ಕಿ.ಮೀ ವರೆಗೆ= 8.20 ಸಂಪರ್ಕ [illegible] ರಸ್ತೆ ಸರಪಳಿ = 0.70	104.16	9.60	9.60		ಕಾಮಗಾರಿ ಪೂರ್ಣಗೊಂಡಿದೆ
	ಒಟ್ಟು				104.16	9.60	9.60	0.00	

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ/ ಯೋಜನೆಯ ಹೆಸರು	ತಾಲ್ಲೂಕು	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	ಷರಾ
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		
1	2	3	4	5	6	7	8	9	10
1				ಅರಕಲಗೂಡು-[illegible] ರಸ್ತೆ ಮಾರ್ಗ ಕತ್ತಿಮಲ್ಲೇನಹಳ್ಳಿ ರಸ್ತೆ ಅಭಿವೃದ್ಧಿ (ಕಿ.ಮೀ 1.00 ರಿಂದ 1.50 ಕಿ.ಮೀ ವರೆಗೆ)	14.50	1.90	1.90		ಕಾಮಗಾರಿ ಪೂರ್ಣಗೊಂಡಿದೆ
2	5054 - ಜಿಲ್ಲಾ [illegible] - [illegible] ರಸ್ತೆ [illegible]	ಅರಕಲಗೂಡು	ಅರಕಲಗೂಡು	[illegible] ರಸ್ತೆಯಿಂದ [illegible] ರಸ್ತೆ ಮಾರ್ಗ [illegible] (ಕಿ.ಮೀ 0.00 ರಿಂದ 1.30 ಕಿ.ಮೀ ವರೆಗೆ ಹಾಗು ಕಿ.ಮೀ 10.00 ರಿಂದ 13.50 ಕಿ.ಮೀ ವರೆಗೆ)	14.50	1.30			[illegible]
3				[illegible] ರಸ್ತೆ (ಕಿ.ಮೀ 9.00 ರಿಂದ 9.35 ಕಿ.ಮೀ ವರೆಗೆ ರಸ್ತೆ [illegible] ಮತ್ತು ಅಭಿವೃದ್ಧಿ [illegible]	14.[illegible]	[illegible].35			ಗ್ರೇಡ್-3 ರವರೆಗೆ [illegible] ಪ್ರಗತಿಯಲ್ಲಿದೆ

ಕ್ರಮ ಸಂಖ್ಯೆ	ರಸ್ತೆಯ/ ಯೋಜನೆಯ ಹೆಸರು	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		ಷರಾ
1	2	3	4	5	6	7	8	9	10
1	5054 - [illegible] ಸಂಪರ್ಕದಲ್ಲಿ ಕರಡು - ಕೆಆರ್‌ಡಿಸಿಎಲ್	ಅರಕಲಗೂಡು	ಅರಕಲಗೂಡು	ಎ.ಎಚ್.ಎಸ್. ರಸ್ತೆಯಿಂದ [illegible] ರಸ್ತೆ ಮಾರ್ಗ [illegible]-[illegible]-[illegible]ಹಳ್ಳಿ ರಸ್ತೆ ಅಭಿವೃದ್ಧಿ ಸರಪಳಿ 4.50 ರಿಂದ 6.30 ರವರೆಗೆ	14.50	0.23			[illegible]
2				ಎಸ್.ಎಚ್. ರಸ್ತೆಯಿಂದ ಹೆಚ್.ಕೆ.ಎಸ್.ಸಿ. ರಸ್ತೆ ಮಾರ್ಗ [illegible]ಹಳ್ಳಿ, [illegible]ಹಳ್ಳಿ, [illegible]ಹಳ್ಳಿ, [illegible]ಹಳ್ಳಿ ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 1.00 ರವರೆಗೆ	13.00	0.93	0.93		ಕಾಮಗಾರಿ ಪೂರ್ಣಗೊಂಡಿದೆ
3				ಬೆಂಗಳೂರು-ಜಾಲ್ಸೂರು ರಸ್ತೆಯಿಂದ [illegible] ವರೆಗೆ ಮಾರ್ಗ [illegible], [illegible], [illegible]ಹಳ್ಳಿ ರಸ್ತೆ ಅಭಿವೃದ್ಧಿ ಸರಪಳಿ 4.25 ರಿಂದ 4.30 ರವರೆಗೆ	14.50	1.07			ಗ್ರೇಡ್-1 ರವರೆಗೆ ಮುಗಿದಿದೆ ಪ್ರಗತಿಯಲ್ಲಿದೆ
4				ಬೆಂಗಳೂರು-ಜಾಲ್ಸೂರು ರಾಜ್ಯ ಹೆದ್ದಾರಿ ಸರಪಳಿ 189.00 ರಿಂದ 189.50 ರವರೆಗೆ ರಸ್ತೆ ಅಭಿವೃದ್ಧಿ	12.00	0.39			ಗ್ರೇಡ್-1 ರವರೆಗೆ ಮುಗಿದಿದೆ ಪ್ರಗತಿಯಲ್ಲಿದೆ
5				[illegible]-[illegible]ಹಳ್ಳಿ ರಸ್ತೆ ಮಾರ್ಗ [illegible]-[illegible] ರಸ್ತೆ ಅಭಿವೃದ್ಧಿ ಸರಪಳಿ 4.00 ರಿಂದ 6.00 ರವರೆಗೆ	15.00	2.00	2.00		ಕಾಮಗಾರಿ ಪೂರ್ಣಗೊಂಡಿದೆ
6				[illegible]-[illegible] ರಸ್ತೆ ಮಾರ್ಗ [illegible]-[illegible]-[illegible], [illegible]-[illegible]-[illegible]ಹಳ್ಳಿ ರಸ್ತೆ ಅಭಿವೃದ್ಧಿ ಸರಪಳಿ 3.00 ರಿಂದ 4.30 ರವರೆಗೆ	18.96	1.30	1.30		ಕಾಮಗಾರಿ ಪೂರ್ಣಗೊಂಡಿದೆ

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ/ ಯೋಜನೆಯ ಹೆಸರು	ತಾಲ್ಲೂಕು	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	ಷರಾ
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		
1	2	3	4	5	6	7	8	9	10
1	5054 - [illegible] ರಸ್ತೆ [illegible]	ಅರಕಲಗೂಡು	ಅರಕಲಗೂಡು	ಅರಕಲಗೂಡು - [illegible] ರಸ್ತೆ [illegible] ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 3.70 ಕಿ.ಮೀ ವರೆಗೆ 3.70 ಸರಪಳಿ 4.70 ರಿಂದ 6.70 ಕಿ.ಮೀ ವರೆಗೆ 2.00 ಸರಪಳಿ 16.70ರಿಂದ 15.70 ಕಿ.ಮೀ ವರೆಗೆ 3.00 [illegible] ಗ್ರಾಮದೊಳಗಿನ [illegible] ರಸ್ತೆ [illegible]	35.00	3.90	3.90		ಕಾಮಗಾರಿ ಪೂರ್ಣಗೊಂಡಿದೆ
2				[illegible] ರಸ್ತೆ [illegible] ರಸ್ತೆ ಅಭಿವೃದ್ಧಿ ಸರಪಳಿ [illegible] ರಿಂದ 4.80	34.57	3.43			[illegible]
		ಒಟ್ಟು			200.03	[illegible]	10.93	0.00	

ಕ್ರಮ ಸಂಖ್ಯೆ	ರಸ್ತೆ/ಯೋಜನೆಯ ಹೆಸರು	ತಾಲ್ಲೂಕು	ವಿಧಾನ ಸಭಾ ಕ್ಷೇತ್ರ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		ಷರಾ
1	2	3	4	5	6	7	8	9	10
	[illegible]								
1	[illegible]	[illegible]	[illegible]	[illegible] ರಸ್ತೆ ಕಿಮೀ 3.00 ರಿಂದ 5.00 ರವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ	3.40	0.31	0.31		ಕಾಮಗಾರಿ ಪೂರ್ಣಗೊಂಡಿದೆ
2				[illegible] ರಸ್ತೆ ಕಿಮೀ 1.00 ರಿಂದ 4.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ	2.34	0.24	0.24		ಕಾಮಗಾರಿ ಪೂರ್ಣಗೊಂಡಿದೆ
3				[illegible] ರಸ್ತೆ ಕಿಮೀ 0.00 ರಿಂದ 4.10 ರಲ್ಲಿ ರಸ್ತೆ ಅಭಿವೃದ್ಧಿ	4.03	0.37	0.37		ಕಾಮಗಾರಿ ಪೂರ್ಣಗೊಂಡಿದೆ
	ಒಟ್ಟು				9.83	0.92	0.92		

ಕ್ರಮ ಸಂಖ್ಯೆ	ಪ್ಯಾಕೇಜ್/ ಯೋಜನೆಯ ಹೆಸರು	ಜಿಲ್ಲೆ	[illegible]	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷ)	ರಸ್ತೆಯ ಉದ್ದ ಕಿ.ಮೀ ಗಳಲ್ಲಿ		ಒಟ್ಟು ವೆಚ್ಚ ರೂ.ಲಕ್ಷಗಳಲ್ಲಿ	ಷರಾ
						ಉದ್ದೇಶಿತ ರಸ್ತೆಯ ಉದ್ದ	ಪ್ರಗತಿ ಸಾಧಿಸಿದ ರಸ್ತೆಯ ಉದ್ದ		
1	2	3	4	5	6	7	8	9	10
1	ರಸ್ತೆ [illegible] ([illegible]) [illegible] ಎಸ್.ಪಿ.	ಅರಕಲಗೂಡು	ಅರಕಲಗೂಡು	[illegible] ರಸ್ತೆ [illegible] ರಸ್ತೆ ಅಭಿವೃದ್ಧಿ (ಕಿ.ಮೀ 1.50 ರಿಂದ [illegible] ಕಿ.ಮೀ ವರೆಗೆ)	33.37	1.30		9.71	[illegible]
1	ರಸ್ತೆ [illegible] ([illegible]) [illegible] ಗ್ರಾಮೀಣ ರಸ್ತೆ [illegible] ಎಸ್.ಪಿ.	ಅರಕಲಗೂಡು	ಅರಕಲಗೂಡು	[illegible] ರಸ್ತೆ [illegible] ರಸ್ತೆ ಅಭಿವೃದ್ಧಿ. (ಕಿ.ಮೀ [illegible] ರಿಂದ 3.00 ಕಿ.ಮೀ ವರೆಗೆ)	29.34	2.20		3.31	[illegible]
	ಒಟ್ಟು				62.61	3.50	0.00	12.49	

ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಪ್ರಸಕ್ತ ವರ್ಷದ್ದು ಅಲ್ಲ, ಹಿಂದೆ ಆಗಿರುವುದನ್ನು 2009–10ಕ್ಕೆ ಏನು ಮಾರ್ಗ ಮಾಡಿರುತ್ತೀರಿ. ಶಾಸಕರಾದ ನಮಗೆ ಏನು ಹೇಳಬೇಕು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. 5054 ನಲ್ಲಿ ಡಾ: ನಂಜುಂಡಪ್ಪ ವರದಿ ಹೇಗೆ ಬರುತ್ತದೆ. ಡಾ: ನಂಜುಂಡಪ್ಪ ವರದಿ ಮಾಡಿರತಕ್ಕಂಥದ್ದು ಬ್ಯಾಕ್‌ವರ್ಡ್ ತಾಲ್ಲೂಕುಗಳಿಗೆ ಇಟ್ಟಿರತಕ್ಕಂಥದ್ದು ಅದು ಸೆಪರೇಟ್ ಹಣ. ಇವರು ಹೇಳತಕ್ಕಂಥದ್ದು ನೀವು ಕೊಟ್ಟಿರತಕ್ಕಂಥ ದಾಖಲೆಗಳು ನಿಜ. ಆದರೆ 5054 ರ ಹೆಡ್‌ನಿಂದ ಈ ವರ್ಷದಲ್ಲಿ ಒಂದು ರೂಪಾಯಿ ಹಣವನ್ನು ನೀವು ನನ್ನ ಕ್ಷೇತ್ರಕ್ಕೆ ಕೊಟ್ಟಿಲ್ಲ. ನೀವು ಏನಾದರೂ ಈ ವರ್ಷದಲ್ಲಿ ಕೊಟ್ಟಿದ್ದರೆ ನಾನು ಇಲ್ಲಿಯೆ ರಾಜೀನಾಮೆ ಕೊಟ್ಟು ಹೋಗುತ್ತೇನೆ ಸ್ವಾಮಿ. ಇಲ್ಲದಿದ್ದರೆ ನಾನು ಹೇಳಿರುವುದು ಕರೆಕ್ಟ್ ಎಂದು ಹೇಳಿ ಬಿಡಿ. ಅರ್ಥ ಇಲ್ಲದೆ, ಮಾನ್ಯ ಮಂತ್ರಿಗಳು ನಮಗೆ ಈ ರೀತಿ ಉತ್ತರವನ್ನು ಕೊಟ್ಟರೆ they are fooling us. ಹಾಗಾದರೆ ಅಭಿವೃದ್ಧಿ ಹೇಗಾಗುತ್ತದೆ.?

ಶ್ರೀ ಎಸ್. ಸುರೇಶ್‌ಕುಮಾರ್ : ನಿಮ್ಮ ಸ್ನೇಹಿತರು ಏನು ಹೇಳುತ್ತಾರೆ ಗೊತ್ತಾ? Next electionಗೆ ನಿಮ್ಮ ಕ್ಷೇತ್ರ ಮಹಿಳಾ ಮೀಸಲಾತಿ ಆಗಿರುವುದರಿಂದ ಅವರು ರಾಜೀನಾಮೆ ಕೊಟ್ಟು ಹೋಗುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎ.ಮಂಜು : ಮಹಿಳಾ ಮೀಸಲಾತಿ ಆಗಲಿ ಏನಾದರೂ ಆಗಲಿ ಸಂತೋಷ. ನೀವೇ ಈ ಸಂದರ್ಭದಲ್ಲಿ welcome ಮಾಡಬೇಕಾಗಿತ್ತು. ನೀವು ಇನ್ನುವರೆಗೆ ಏನು ಮಾಡಲಿಲ್ಲ. ಅದರಿಂದ ನಿಮಗೆ ಹೆದರಿಕೆ ನಮಗಲ್ಲ. We are happy. ಸ್ವಾಮಿ ದಯವಿಟ್ಟು ಕ್ಷಮಿಸಬೇಕು, ಈ ವಿಷಯವನ್ನು divert ಮಾಡಬೇಡಿ. ಮಾನ್ಯ ಮಂತ್ರಿಗಳು ತಾವು ಇಲ್ಲಿ ಏನು ಉತ್ತರವನ್ನು ಕೊಟ್ಟಿದ್ದೀರಿ. ನಿಜವಾಗಲೂ ಕೂಡ ನೀವು ಕಳೆದ ಭಾರಿ ಮಾಡಿರುವ ಕೆಲಸದ ಬಗ್ಗೆ ಉತ್ತರವನ್ನು ಕೊಟ್ಟಿದ್ದೀರಿ. ಬಹಳ ಹುಷಾರಾಗಿ ಮಾಡಿದ್ದೇನೆನ್ನುವ ಹಾಗೆ ಹೇಳಿದ್ದೀರಿ, ಅದು ನಿಜ. ಆದರೆ ಈ ವರ್ಷ ಏನು ಮಾಡಿದ್ದೇನೆಂದು ಹೇಳಿ ಸ್ವಾಮಿ. ಈ ವರ್ಷ ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿ ನೀವು ಕೊಟ್ಟಿಲ್ಲ. ಬೇರೆ ಕ್ಷೇತ್ರಗಳಿಗೆ ಎಲ್ಲದಕ್ಕೂ ಕೊಟ್ಟಿದೀರಿ. ನಬಾರ್ಡ್‌ದ್ದು ನೀವು 5054 ಎಂದು ಹೇಳುತ್ತೀರಾ? ಡಾ: ನಂಜುಂಡಪ್ಪ ವರದಿಯದ್ದು 5054 ಎಂದು ಹೇಳುತ್ತೀರಾ? ಇದು ಯಾವ ಅರ್ಥ?

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳಿ.

ಶ್ರೀ ಸಿ.ಎಂ.ಉದಾಸಿ(ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ: ORF ಆಗಲಿ, ಡಾ: ನಂಜುಂಡಪ್ಪ ವರದಿ ಆಗಲಿ, SCP/STP ಆಗಲಿ ಅದಕ್ಕೆಲ್ಲಾ 5054 ಹೆಡ್‌ನಲ್ಲಿಯೆ ಹಣ ಬಿಡುಗಡೆ ಮಾಡುವುದು ಎನ್ನುವುದನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದೆ ವರ್ಷದ ಯೋಜನೆಯಲ್ಲಿ ಈ ಕಾಮಗಾರಿಗಳನ್ನು ಮಾಡಿದ್ದೇವೆ ಹೊರತು ಇದು ಹಿಂದಿನ ವರ್ಷದ್ದು ಅಲ್ಲ. ದಯವಿಟ್ಟು ಮಾನ್ಯ ಸದಸ್ಯರು ಗಮನಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ತಮಗೆ ಮಾಡಬೇಕಾದ ಕೆಲವು ಕಾಮಗಾರಿ ಗಳಿಗೆ ಲಭ್ಯವಾಗಬೇಕಾದ ಅನುದಾನ ಅಂದರೆ ತಾವು ಹೇಳುತ್ತಿರುವುದು ಹಳ್ಳಿ ಮೈಸೂರು ಭಾಗದಲ್ಲಿ ಅಭಿವೃದ್ಧಿ ಆಗಲಿಲ್ಲವೆನ್ನುವುದು ತಮ್ಮ ಮಾತಿನಲ್ಲಿದೆ ಅದು ನನಗೆ ಗೊತ್ತು. ತಮ್ಮ ಗಮನಕ್ಕೆ ತರುವಂಥ ಕೆಲಸವನ್ನು ಮಾಡಿದ್ದೇನೆ ಮತ್ತು ಅವುಗಳನ್ನು ಸರಿಪಡಿಸುವಂಥ ಕೆಲಸವನ್ನು ಮಾಡೋಣವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಮಂಜು : ಮಾನ್ಯ ಅಧ್ಯಕ್ಷರೆ, ಸ್ವಾಮಿ State Highway No. 8 ರದ್ದು ಕೊಟ್ಟಿರುತ್ತೇನೆ. MDR ರಸ್ತೆಯ ಮೂರುವರೇ ಕಿ.ಮೀ.50 ಲಕ್ಷ ರೂ.ಗಳಿಗೆ ಒಂದು ರಸ್ತೆಯನ್ನು ಕೊಟ್ಟಿದ್ದೇನೆ. ಹಳ್ಳಿ ಮೈಸೂರಿನಲ್ಲಿ State Highway 102 ರಲ್ಲಿ ಕೋಟನೂರು, ಬಿದರಕಾ, ಹಳ್ಳಿ ಮೈಸೂರು, ತಾತನಹಳ್ಳಿ, ಲಗ್ಗೂರು ಮತ್ತು ಹೊಳೆನರಸೀಪುರ ಅದು ಜಾಯಿನ್ ಆಗುವಂಥದ್ದು ಅದರ ಬಗ್ಗೆ ಕೊಟ್ಟಿರುತ್ತೇನೆ. ಸುಮಾರು ಉದ್ದ 25 ಕಿ.ಮೀ. ಇದರಲ್ಲಿ ಏನಾಗಿದೆ ಎಂದರೆ, ಸರ್ಕಾರದವರು ಒಂದನ್ನು ನಿಮ್ಮ ತಲೆಯಲ್ಲಿ ಇರುವುದನ್ನು ತೆಗೆದು ಹಾಕಬೇಕು. ಕಳೆದ ಬಾರಿ ಇರುವಂಥ ಸರ್ಕಾರ ಎಲ್ಲವನ್ನು ಮಾಡಿ ಬಿಟ್ಟಿದ್ದಾರೆ, ಅವರಿಗೆ ಏನು ಮಾಡುವುದೇ ಬೇಡ ಎನ್ನುವುದನ್ನು ನೀವು ತಿಳಿದುಕೊಂಡಿದ್ದರೆ ಅದು ನಿಜವಾಗಲೂ ತಪ್ಪು. ಮಾಡಿರತಕ್ಕಂಥದ್ದು ದಯವಿಟ್ಟು ಈ ರಸ್ತೆಯ ಬಗ್ಗೆ ನಾನು ಏನು ಹೇಳಿದ್ದೇನೆ ಅದನ್ನು ಬೇಕಾದರೆ ವಿಸಿಟ್ ಮಾಡಿಸಿ ನೀವು ನೋಡಿ ನಿಮಗಾದರೂ ಅರ್ಥವಾಗುತ್ತದೆ. ಆಗ ನಿಮಗೆ ಮನಸ್ಸು ಬಂದಾದರೂ ಮಾಡಿ. ಹಿಂದೆ ಯಾರೋ ಮಾಡಿ ಬಿಟ್ಟಿದ್ದಾರೆಂದು ನೀವು ತಮ್ಮ ತಾಲ್ಲೂಕನ್ನು ಅಭಿವೃದ್ಧಿಯನ್ನು ಪಡಿಸಬಾರದು. ನಿಮಗೆ ನಾನು ಬೆಳಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ, ನೀವು ನನಗೆ ಸರಿಯಾಗಿ ಮಾತನಾಡುವುದಕ್ಕೆ ಬಿಡಲಿಲ್ಲ. ಒಂದು ಕೆಲಸ ಮಾಡಿ, ನೀವು

ಹಾಸನ ಜಿಲ್ಲೆಯನ್ನು ಸೆಪರೇಟಾಗಿ ಮಾಡಿ ನಾವು ಅದನ್ನು ಒಂದು ರಾಜ್ಯವನ್ನಾಗಿ ಮಾಡಿಕೊಳ್ಳುತ್ತೇವೆ. ಏತಕ್ಕೆ ಬೇಕು ಸ್ವಾಮಿ ಇದು, ಆ ಪರಿಸ್ಥಿತಿ ಆಗಿದೆ. ಮಾತೆತ್ತಿದರೆ ಅಪ್ಪ-ಮಕ್ಕಳು development ಮಾಡಿ ಬಿಟ್ಟಿದ್ದಾರೆ, ಎಲ್ಲವನ್ನು ಮುಗಿಸಿದ್ದಾರೆನ್ನುವುದರ ಬಗ್ಗೆ ನಿಮ್ಮ ತಲೆಯಲ್ಲಿರುವುದನ್ನು ತೆಗೆದು ಈ ಕ್ಷೇತ್ರಕ್ಕೆ ಆಗಿರುವಂಥ ಅನ್ಯಾಯವನ್ನು ನೀವಾದರೂ ಸರಿಪಡಿಸಿ ಕೊಡಬೇಕು ಸ್ವಾಮಿ. ನಾನು ಇಲ್ಲಿ ಏನು ಕೇಳಿಕೊಂಡಿದ್ದೇನೆ ಅದನ್ನು 5054 ಹೆಡ್‌ನಲ್ಲಿ ಈ ವರ್ಷದಲ್ಲಿ ಮಾಡಿಸಿಕೊಡುತ್ತೇನೆಂದು ನೀವು ದಯವಿಟ್ಟು ನನಗೆ ಆಶ್ವಾಸನೆ ಕೊಡಬೇಕು.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಸದಸ್ಯರು ಹೇಳಿದಂಥ ಬೇಡಿಕೆಗಳನ್ನು ಅನುದಾನದ ಲಭ್ಯತೆಯ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವರು ಬೆಳಗ್ಗೆ ಕೇಳಿರುವಂಥ ಪ್ರಶ್ನೆಗೆ ನಾನು ಅವರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಮತ್ತೆ ಅದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ನಾನು ಭಾವಿಸಿಕೊಂಡಿದ್ದೇನೆ.

ಅಧ್ಯಕ್ಷರು : ಆಯಿತು.

(4) ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಆದಾಯ ಪರಿಗಣನೆ ಇಲ್ಲದೆ (ಎ.ಪಿ.ಎಲ್. ಮತ್ತು ಬಿ.ಪಿ.ಎಲ್) ಫಲಾನುಭವಿಗಳಿಗೆ ಹೊಸ ಅಡಿಕೆ ತೋಟ, ಅರಣ್ಯ ಬೆಳೆಸುವುದು, ಅಡಿಕೆ ಬೇಸಾಯ, ನೀರು ಶೇಖರಣೆಯ ಹೊಂಡ ಮತ್ತು ಗಮ್ಮಿ ಮಾಡಲು ಅವಕಾಶವಿದೆಯೆಂದು ಸರ್ಕಾರವು ಸೂಚಿಸಿದ್ದರೂ ಸಹ ಶಿವಮೊಗ್ಗ ಜಿಲ್ಲಾ ಪಂಚಾಯತಿಯವರು ಸದರಿ ಆದೇಶವನ್ನು ಹಿಂದಕ್ಕೆ ಪಡೆದು ರೈತರು, ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳನ್ನು ಇಕ್ಕಟ್ಟಿಗೆ ಸಿಕ್ಕಿಸಿರುವ ಬಗ್ಗೆ :

ಶ್ರೀ ಜಗದೀಶ್ ಶೆಟ್ಟರ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ನೊಂದಾಯಿತ ಕೆಲಸಗಾರರ ಬೇಡಿಕೆ ಅನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ನೀಡುವುದು ಮತ್ತು

ದೀರ್ಘಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಹಾಗೂ ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಬಲಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಯೋಜನೆಯ ಮಾರ್ಗಸೂಚಿಗಳಡಿ ಆಧ್ಯತೆಯ ಮೇಲೆ ತೆಗೆದುಕೊಳ್ಳ ಬೇಕಾದ 9 ವಿಧದ ಪ್ರವರ್ಗ ಕಾಮಗಾರಿಗಳನ್ನು ತಿಳಿಸಲಾಗಿರುತ್ತದೆ. 9 ವಿಧದ ಕಾಮಗಾರಿಗಳ ಪೈಕಿ, ಕ್ರಮಾಂಕ 4 ರಲ್ಲಿ ಸೂಚಿಸಿದಂತೆ ಭೂ ಅಭಿವೃದ್ಧಿ ಮತ್ತು ನೀರಾವರಿ ಸೌಲಭ್ಯಗಳ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಿಪಿಎಲ್, ಸಣ್ಣ ಮತ್ತು ಅತಿ ಸಣ್ಣ ರೈತರು, ಐಎವೈ ಫಲಾನುಭವಿಗಳ ಮತ್ತು ಭೂ ಸುಧಾರಣಾ ಕಾಯಿದೆಯನ್ವಯ ಜಮೀನು ಹೊಂದಿರುವ ಫಲಾನುಭವಿಗಳ ಜಮೀನಿನಲ್ಲಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿರುತ್ತದೆ. ಸದರಿ ಸೌಲಭ್ಯವನ್ನು ಇತರೆ ರೈತರಿಗೂ ವಿಸ್ತರಿಸುವ ಕುರಿತು ರಾಜ್ಯ ಉದ್ಯೋಗ ಖಾತರಿ ಪರಿಷತ್ತಿನ ಸಭೆಯಲ್ಲಿ ಅನುಮೋದನೆ ಗೊಂಡಿರುತ್ತದೆ. ಇದರನ್ವಯ ಸರ್ಕಾರವು ದಿನಾಂಕ: 06.05.2009 ರಂದು ವೈಯಕ್ತಿಕ ಭೂ ಅಭಿವೃದ್ಧಿಗಾಗಿ ಎಸ್‌ಸಿ/ಎಸ್‌ಟಿ, ಸಣ್ಣ ಮತ್ತು ಅತಿ ಸಣ್ಣ ರೈತರು, ಐಎವೈ ಫಲಾನುಭವಿಗಳು, ಭೂ ಸುಧಾರಣಾ ಫಲಾನುಭವಿಗಳು ಮತ್ತು ಬಿಪಿಎಲ್ ಫಲಾನುಭವಿಗಳಲ್ಲದೇ ಇತರೆ ಜಮೀನುಗಳಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಅಭಿವೃದ್ಧಿ ಪಡಿಸಲು ಆದೇಶವನ್ನು ಹೊರಡಿಸಿರುತ್ತದೆ.

ಏತನ್ಮಧ್ಯೆ ರೈತರ ಜಮೀನಿನಲ್ಲಿ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಕೇಂದ್ರ ಸರ್ಕಾರವು ತನ್ನ ಆದೇಶ ಸಂಖ್ಯೆ: 11060/3/2009–NREGA, ದಿನಾಂಕ: 01.09.2009 ರಲ್ಲಿ ಮಾರ್ಗಸೂಚಿ ಗಳನ್ನು ಹೊರಡಿಸಿರುವುದನ್ನು ರಾಜ್ಯದ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಗಳ ಪ್ರಕಾರ ಮೊಟ್ಟ ಮೊದಲು ಭೂ ಅಭಿವೃದ್ಧಿ ಕಾಮಗಾರಿಗಳ ಸೌಲಭ್ಯಗಳನ್ನು ಎಸ್‌ಸಿ/ಎಸ್‌ಟಿ ವರ್ಗದ ಫಲಾನುಭವಿಗಳಿಗೆ ನೀಡಲು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಸದರಿ ವರ್ಗದ ಎಲ್ಲಾ ಫಲಾನುಭವಿಗಳ ಜಮೀನಿನಲ್ಲಿ ಭೂ ಅಭಿವೃದ್ಧಿ ಕಾರ್ಯಕ್ರಮ ಪೂರ್ಣಗೊಂಡ ನಂತರ ಸಣ್ಣಮತ್ತು ಅತಿ ಸಣ್ಣ ರೈತರು, ಐಎವೈ ಫಲಾನುಭವಿಗಳು, ಭೂ ಸುಧಾರಣಾ ಫಲಾನುಭವಿಗಳು ಮತ್ತು ಬಿಪಿಎಲ್ ಫಲಾನುಭವಿಗಳಿಗೆ ನೀಡಲು ತಿಳಿಸಿದೆ. ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳತಕ್ಕಂಥದ್ದು ಶಿವಮೊಗ್ಗ ಜಿಲ್ಲಾ ಪಂಚಾಯತಿಯಿಂದ ಒಂದು ಸರ್ಕ್ಯೂಲರನ್ನು ಹೊರಡಿಸಿ ಬಿಟ್ಟು ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯವರು ಅನುಮೋದನೆಗೆ ಕಳುಹಿಸಿ ಕೊಟ್ಟಾಗಿದೆ. ಅದನ್ನು ಕಳುಹಿಸಿಕೊಟ್ಟ ನಂತರ ಇವುಗಳಿಗೆ ನಾವು ಅನುಮೋದನೆಯನ್ನು ಕೊಡುವುದಿಲ್ಲವೆನ್ನತಕ್ಕಂಥ ನಿರ್ದೇಶನವನ್ನು ಆ ಭಾಗಕ್ಕೆ ಕೊಟ್ಟಿದ್ದಾರೆ. ತಾಲ್ಲೂಕು ಪಂಚಾಯತಿಯ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲರೂ ಸರ್ವಾನುಮತದಿಂದ ತೀರ್ಮಾನ ಮಾಡಿ ಈಗಾಗಲೇ ಕ್ರಿಯಾ ಯೋಜನೆಯನ್ನು ಕಳುಹಿಸಿರುವುದಕ್ಕೆ ಅನುಮೋದನೆ ಕೊಡಬೇಕೆಂದು ತಾವು ಒಂದು ನಿರ್ದೇಶನವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಕ್ರಿಯಾ ಯೋಜನೆ ಆಗಿ ಹೋಗಿದೆ, ಕೆಲವೊಬ್ಬರು ತೋಟ, ಗದ್ದೆಗಳಿಗೆ ಬಾವಿಗಳನ್ನು ತೋಡಿಕೊಂಡಿದ್ದಾರೆ. ಈಗ ಅವಕಾಶವಿಲ್ಲವೆನ್ನತಕ್ಕಂಥದ್ದರ ಬಗ್ಗೆ ಜಿಲ್ಲಾ ಪಂಚಾಯತಿಯ CEO ರವರು ನಿರ್ದೇಶನವನ್ನು ಕೊಟ್ಟಿದ್ದಾರೆ. ಅದಕ್ಕೆ ತಾವೊಂದು ಅವರಿಗೆ ನಿರ್ದೇಶನವನ್ನು ಕೊಟ್ಟರೆ, ಈಗಾಗಲೇ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮೂಲಕ ಕ್ರಿಯಾ ಯೋಜನೆ Unanimous resolution ಏನಿದೆ, ಆ ತೆಗೆದುಕೊಂಡಿರುವ ಕಾರ್ಯಕ್ರಮಕ್ಕೆ ಪೂರ್ಣಗೊಳಿಸಲು ಅವಕಾಶವನ್ನು ಕೊಡಬೇಕು. ಬೇಕಾದರೆ ಮುಂದಿನ ಅವಧಿಯಲ್ಲಿ ಇದನ್ನು ಮಾಡಬಹುದೆಂದು ತಮ್ಮಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಬಗ್ಗೆ ಹೇಳಿದೆ. ಅದನ್ನು ಕ್ಲೀಯರ್ ಮಾಡಿ ಬಿಡುತ್ತೇನೆ. ಏಕೆಂದರೆ 1ನೇ ಸೆಪ್ಟೆಂಬರ್ 2009 ರಂದು ಆ ಆದೇಶ ಬಂದಿದೆ. Works on the land of Scheduled Caste and Scheduled Tribes households will be taken on priority. Once works on the lands of Scheduled Caste and Scheduled Tribes are shattered in a Grama Panchayat, works on lands of small and marginal farmers may be considered. ಆ ಮೇಲೆ works on lands of small and marginal farmers will be of water conservation and water harvesting like

construction of dug wells and recharge structures on existing well line convince system.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಏನು Circulars ಇವೆ. small and marginal farmers ರವರಿಗೆ ಮಾಡಬಹು ದೆಂದು ನಿಮ್ಮ ಇಲಾಖೆಯಿಂದಲೇ ಸರ್ಕ್ಯೂಲರ್ ಇದೆ. ಅದರ ಪ್ರಕಾರ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಗೈಡ್‌ಲೈನ್ಸ್ ಪ್ರಕಾರ ಮೊದಲು SC/ST ವರ್ಗದ ಫಲಾನುಭವಿಗಳಿಗೆ first priority. ಅದು ಆದ ಮೇಲೆ ಬೇರೆ ವರ್ಗದ ಜನರಾದ ಸಣ್ಣ ಮತ್ತು ಅತೀ ಸಣ್ಣ ರೈತರು, ಐಎವೈ ಫಲಾನುಭವಿಗಳು, ಭೂ ಸುಧಾರಣಾ ಫಲಾನುಭವಿಗಳು ಇವುಗಳು next priority ಯಲ್ಲಿ ಬರುತ್ತಾರೆ. First SC/ST, ಅದು ಆದ ಮೇಲೆ ಉಳಿದವರು ಬರುತ್ತವೆ. ಈ ಗೈಡ್‌ಲೈನ್ಸ್ ಪ್ರಕಾರ ನಾವು ಹೋಗಬೇಕಾಗುತ್ತದೆ. Up to two hectares ವರೆಗೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಾನು ಆ circular ಅನ್ನು ನೋಡಿದೆ. ಇಲ್ಲಿ ಸಮಸ್ಯೆ ಏನೆಂದರೆ, ಜಿಲ್ಲಾ ಪಂಚಾಯತಿ ಶಿವಮೊಗ್ಗ. ಇವರು 36 ರಲ್ಲಿ ಒಂದು ಕೈಪಿಡಿಯನ್ನು ಕಳುಹಿಸಿದ್ದಾರೆ. ಅದರ ಪುಟ ಸಂಖ್ಯೆ 38 ರಲ್ಲಿ ವೈಯಕ್ತಿಕ ಭೂ ಅಭಿವೃದ್ಧಿಗಾಗಿ SC/ST, ಸಣ್ಣ ಮತ್ತು ಅತೀ ಸಣ್ಣ ರೈತರು, ಐಎವೈ ಫಲಾನುಭವಿಗಳು, ಭೂ ಸುಧಾರಣಾ ಫಲಾನುಭವಿಗಳು ಅಲ್ಲದೆ ಇದರ ಜೊತೆಗೆ ಇತರ ರೈತರ ಜಮೀನನ್ನು ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಅಭಿವೃದ್ಧಿಪಡಿಸಲು ಕಲ್ಪಿಸಿದೆ.

ಜಿಲ್ಲಾ ಪಂಚಾಯತಿಗೆ ಕೊಟ್ಟಿರುವಂಥ ಆಧಾರದ ಮೇಲೆ ಅವರು ಕ್ರಿಯಾ ಯೋಜನೆ ಮಾಡಿ approval ಗೆ ಕಳುಹಿಸಿದರು. ರೈತರು ಆ ಕೆಲವನ್ನು ನಿರ್ವಹಿಸಿದರು. ಈಗ ಈ ಕಾನೂನು ಹೇಳಿದರೆ ಎಲ್ಲೋ ಒಂದು ಕಡೆ ಈಗಾಗಲೇ ತಾಲ್ಲೂಕು ಪಂಚಾಯತಿಯಲ್ಲಿ ಒಮ್ಮತದ ನಿರ್ಣಯವಾಗಿದೆ. ಎಲ್ಲಾ ಕಡೆ ಆಗಿದೆಯೆಂದು ನಾನು ಹೇಳುವುದಿಲ್ಲ. It has been implemented in Thirthahalli Taluk. ಗ್ರಾಮ ಪಂಚಾಯತಿಯವರು ಮತ್ತು ತಾಲ್ಲೂಕು ಪಂಚಾಯತಿಯವರು ಎಲ್ಲಾ resolution ಮಾಡಿದ್ದಾರೆ. ಮೊನ್ನೆ 5ನೇ ತಾರೀಖು ಒಂದು circular ಮಾಡಿಬಿಟ್ಟು ಇದಕ್ಕೆ ನಾವು

approval ಕೊಡಲಿಕ್ಕಾಗುವುದಿಲ್ಲವೆನ್ನತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಅಧ್ಯಕ್ಷರ ಮೂಲಕ ವಿನಂತಿಸುವುದೇನೆಂದರೆ, ಈಗಾಗಲೇ ಕ್ರಿಯಾ ಯೋಜನೆ ಮಾಡಿರುವಂಥದ್ದನ್ನು, approval ಮಾಡಿರುವುದನ್ನು ಈಗ ಆ ಕೆಲಸ ಮಾಡಿಬಿಟ್ಟಿದ್ದಾರೆ ಅದಕ್ಕೆ ಮುಂದಿನ ಅವಧಿಯಲ್ಲಿ ಈಗ ಆಗಿರುವ circular ಪ್ರಕಾರ ಮಾಡಿಕೊಂಡು ಹೋಗಲಿ, ಈಗಾಗಲೇ ಗ್ರಾಮ ಮತ್ತು ತಾಲ್ಲೂಕು ಪಂಚಾಯತಿಯವರು ತೆಗೆದುಕೊಂಡಿರುವ ನಿರ್ಣಯಕ್ಕೆ ಅನುಸಾರವಾಗಿ ಈಗಾಗಲೇ ರೈತರು ತೋಟ ಮಾಡಿದ್ದಾರೆ. ಅವರೇನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಅನುಮೋದನೆ ಮಾಡುವುದಕ್ಕೆ ತಾವು ಒಂದು ನಿರ್ದೇಶನ ಕೊಟ್ಟರೆ ಒಳ್ಳೆಯದು, ಈಗಾಗಲೇ ಒಪ್ಪಿಕೊಂಡಿರುವ ಕಾರ್ಯಕ್ರಮ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೇರೆ ಜಿಲ್ಲೆಗಳಲ್ಲಿ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ. ಇವರಿಗ್ಗೆ ಏಕೆ ಬೇಡವೆನ್ನುತ್ತಿದ್ದಾರೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮೇ ತಿಂಗಳಿನಲ್ಲಿ 6.5.2009 ರಲ್ಲಿ ನಾವು ಆ ರೀತಿ ಅವಕಾಶ ಕೊಟ್ಟಿದ್ದೆವು. ನಮ್ಮ ರಾಜ್ಯದಲ್ಲಿ ನಿರ್ಣಯ ತೆಗೆದುಕೊಂಡು "ಇತರೆ ರೈತರ ಜಮೀನನ್ನು ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಅಭಿವೃದ್ಧಿ ಪಡಿಸಲು ಅವಕಾಶ ಕಲ್ಪಿಸಲಾಗಿದೆ." 2009 ರ ಮೇ ತಿಂಗಳಿನಲ್ಲಿ ಇದಕ್ಕೆ ನಾವೇ resolution ಮಾಡಿ ಅವಕಾಶವನ್ನು ಕೊಟ್ಟಿದ್ದೆವು. ಮುಂದೆ ಸೆಪ್ಟೆಂಬರ್ 2009 ರಲ್ಲಿ ಕೇಂದ್ರ ಸರ್ಕಾರದವರು ಇತರೆ ಈಗ ಸಧ್ಯಕ್ಕೆ ತೆಗೆದು ಕೊಳ್ಳುವುದಿಲ್ಲ, ಮೊದಲು ಇವೆಲ್ಲಾ Priority ಮುಗಿದ ಮೇಲೆ ಆಗ ಬರುತ್ತದೆಂದು ಹೇಳಿದರು. ಹೀಗಾಗಿ ಕೇಂದ್ರಸರ್ಕಾರದ ಈ guidelines ಪ್ರಕಾರ ನಮಗೆ ಸಾಕಷ್ಟು restrictions ಇದೆ. ಹಾಗಾಗಿ ಇದನ್ನು ಮಾಡಲಿಕ್ಕಾ ಗುತ್ತಿಲ್ಲ. ಈಗ ಕ್ರಿಯಾ ಯೋಜನೆ ಎಲ್ಲಾ ಆಗಿದೆಯೆಂದರೆ ಕೆಲಸ ಮಾಡಲಿಕ್ಕೆ ಅವಕಾಶ ಇಲ್ಲ. ಈ guidelines ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ಬಡ ರೈತರ ಹಿತರಕ್ಷಣೆ ಮಾಡಲಿಕ್ಕೆ ಕೇಳುತ್ತಿದ್ದೇವೆ ಅಷ್ಟೇ, ಮತ್ತೇನಿಲ್ಲ. ಈಗ ಯಾರಾದರೂ SC/ST ಫಲಾನುಭವಿಗಳ ಅರ್ಜಿ ಇದ್ದು ಅವರಿಗೆ ಮಾಡದೇ ಇವರಿಗೆ ಮಾಡಿದರೆ ಆಗ ಈ ಸಮಸ್ಯೆ ಉದ್ಭವಿಸುತ್ತದೆ. ಆದರೆ ಇಲ್ಲಿ

ಯಾರೂ ಮುಂದೆ ಬಂದಿಲ್ಲ. ಈಗ ಯಾರೂ ಮುಂದೆ ಬಂದಿದ್ದಾರೆ ಅವರಿಗಾದರೂ ಮಾಡಿಸಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಅದನ್ನು ನೋಡಿಕೊಂಡೆ ಅಲ್ಲಿನ ಸ್ಥಳೀಯರು, ಸಿ.ಇ.ಓ. ಇರಬಹುದು ಅಥವಾ Chief Executive Officer ಇರಬಹುದು, ಅವರು ಈ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಈ SC/ST, ಸಣ್ಣ ರೈತರು, ಇವೆಲ್ಲಾ ಮುಗಿದಿದೆ. ಹಾಗಾಗಿ ಅದನ್ನು next ತೆಗೆದುಕೊಳ್ಳಬಹುದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂಬ ಒಂದು ಆಶ್ವಾಸನೆಯನ್ನಾದರು ಕೊಡಿ.

ಅಧ್ಯಕ್ಷರು : ಆಯಿತು. ಇದನ್ನು ಮುಗಿಸೋಣ. ನರೇಂದ್ರಬಾಬುರವರೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ. ಮಾನ್ಯ ಸಚಿವರು ಸರ್ಕಾರದ ಕಡೆಯಿಂದ ನಾಳೆ ಉತ್ತರ ಕೊಡಬೇಕು. ಗಮನ ಸೆಳೆಯುವುದಕ್ಕೆ ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ಅವರಿಗೆ ಈ ಬಗ್ಗೆ ಸೂಚನೆ ಕೊಡಿ.

ಶ್ರೀ ಡಿ.ಎನ್. ಜೀವರಾಜ್ : ಅವರಿಗೆ ಅಲ್ಲಿ Compulsory sitting ಇದೆ. ವಿಧಾನ ಪರಿಷತ್‌ನಲ್ಲಿ ಉತ್ತರ ಕೊಡುತ್ತಿದ್ದಾರೆ. ಅವರು ತಮ್ಮಲ್ಲಿ ಅನುಮತಿಯನ್ನು ಕೇಳಿದ್ದಾರೆ. ನಾಳೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ಈಗ ಸಚಿವರು ಇಲ್ಲವಲ್ಲ, ನಾಳೆ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ನೆ.ಲ.ನರೇಂದ್ರಬಾಬು : ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಇದು ನಾಲ್ಕು ಸಾರಿ ಬಂದು ಹಾಗೆ ಹೊರಟು ಹೋಗಿದೆ. ನನ್ನ ಆತಂಕ ಏನೆಂದರೆ ಬೆಳಗಾವಿ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಮತ್ತು ಸಹಕಾರ ಸಚಿವರು ಭರವಸೆ ಕೊಟ್ಟರು, ಆವತ್ತೂ ಏನೂ ಆಗಿರಲಿಲ್ಲ. ಈಗ ಇದನ್ನು ನಿಮಗೆ ಕಳುಹಿಸಿಕೊಡುತ್ತೇನೆ, ಈ ರೀತಿ multi storied buildings ಬರುತ್ತಿವೆ. ನಾಳೆಯಾದರೂ ಇದಕ್ಕೆ ಉತ್ತರ ಕೊಡದೇ ಹೋದರೆ ಹೇಗೆ?

ಅಧ್ಯಕ್ಷರು : ನಾಳೆ ಉತ್ತರ ಕೊಡಿಸುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 6.53 ಗಂಟೆಗೆ ಮುಕ್ತಾಯಗೊಂಡು ಪುನಃ ಮರುದಿನ ಬೆಳಿಗ್ಗೆ 11.00 ಗಂಟೆಗೆ ಸೇರುವುದಾಗಿ ನಿರ್ಣಯಿಸಿತು)

9. ಅನುಬಂಧ – II

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಐದನೇ ಅಧಿವೇಶನ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 10)

(ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ ಮತ್ತು ಭಾರತ ಸಂವಿಧಾನದ 200ನೇ ಅನುಚ್ಛೇದದನ್ವಯ) ಸಂದೇಶದೊಂದಿಗೆ ಪುನರ್ ಪರಿಗಣನೆಗೆ ಹಿಂತಿರುಗಿಸಿರುವಂತೆ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ಅಭಿವೃದ್ಧಿಗೆ ಉಪಬಂಧಕಲ್ಪಿಸುವುದಕ್ಕಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಢೀಕರಿಸಲು ಮತ್ತು ತಿದ್ದುಪಡಿ ಮಾಡಲು ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ – I
ಆರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ವಿದ್ಯಾವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)" ಎಂದರೆ, ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತು.

(2) "ಸಂಯೋಜಿತ ಕಾಲೇಜು" ಎಂದರೆ,[1] ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರದಲ್ಲಿ ಬರುವ ಮತ್ತು ನಿಯಮಿಸಲಾದ ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಗೊಂಡ ಹಾಗೂ ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾ ಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಡೆಸುವ ಪರೀಕ್ಷೆಗಳಿಗೆ ಪ್ರವೇಶ ಪಡೆಯಲು ಅವಶ್ಯವಾದ ವ್ಯಾಸಂಗ ಕ್ರಮವನ್ನು ಒದಗಿಸುವ ಒಂದು ಕಾಲೇಜು ಅಥವಾ ಒಂದು ಸಂಸ್ಥೆ.

(3) "ಕೃಷಿ" ಎಂಬುದು,

(ಎ) ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆ.

(ಬಿ) ಭೂಸಾರ ಮತ್ತು ಜಲನಿಧಿ ನಿರ್ವಹಣೆ.

(ಸಿ) ಬೆಳೆ ಉತ್ಪಾದನೆ ಮತ್ತು ಸಂರಕ್ಷಣೆಯು ಸೇರಿದಂತೆ ಬೆಳೆ ಸುಧಾರಣೆ.

(ಡಿ) ತೋಟಗಾರಿಕೆ ಹಣ್ಣುಗಳು, ತರಕಾರಿಗಳು, ಪುಷ್ಪಕೃಷಿ, ಸಾಂಬಾರ ಪದಾರ್ಥಗಳು, ಔಷಧೀಯ ಸಸ್ಯಗಳು, ಸುಗಂಧ ಸಸ್ಯಗಳು ಮತ್ತು ನೆಡುತೋಪು ಬೆಳೆಗಳನ್ನು ಬೆಳೆಯುವುದು.

(ಇ) ಕೋಳಿ ಸಾಕಾಣಿಕೆ ಸೇರಿದಂತೆ ಪಶುವೈದ್ಯ ಮತ್ತು ಪ್ರಾಣಿ ವಿಜ್ಞಾನಗಳು.

O.14 F–30

(ಎಫ್) ಹೈನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ.
(ಜಿ) ಮೀನು ಕೃಷಿ ಮತ್ತು ಮೀನುಗಾರಿಕೆ ನಿರ್ವಹಣೆ.
(ಎಚ್) ವನ ವಿಜ್ಞಾನ, ಫಾರಂ ವನ ವಿಜ್ಞಾನ, ಅರಣ್ಯ ಮತ್ತು ವನ್ಯಜೀವಿ ನಿರ್ವಹಣೆ ಹಾಗೂ ವೃಕ್ಷ ಕೃಷಿ.
(ಐ) ಕೃಷಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ.
(ಜೆ) ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ.
(ಕೆ) ವ್ಯವಸಾಯೋತ್ಪನ್ನ ಮಾರಾಟ ಹಾಗೂ ಸಹಕಾರ ಮತ್ತು ಕೃಷಿ ವ್ಯವಹಾರ ನಿರ್ವಹಣೆ.
(ಎಲ್) ಕೃಷಿಗೆ ಸಂಬಂಧಿಸಿದ ಮೂಲಭೂತ ವಿಜ್ಞಾನಗಳು ಮತ್ತು ಮಾನವಿಕ ಶಾಸ್ತ್ರಗಳು.
(ಎಂ) ಕೃಷಿ ಜೈವಿಕ ತಂತ್ರಜ್ಞಾನ.
(ಎನ್) ವ್ಯವಸಾಯೋತ್ಪನ್ನದ ಸಂಸ್ಕರಣೆಯು ಸೇರಿದಂತೆ ಸುಗ್ಗಿ ತರುವಾಯದ ತಂತ್ರಜ್ಞಾನಗಳು.
(ಒ) ಭೂಬಳಕೆ ಯೋಜನೆ ಮತ್ತು ನಿರ್ವಹಣೆ.
(ಪಿ) ಉಪ್ಪುನೀರಳೆ ಕೃಷಿಯೂ ಸೇರಿದಂತೆ ರೇಷ್ಮೆ ವ್ಯವಸಾಯ.
(ಕ್ಯೂ) ಜೇನು ಸಾಕಾಣಿಕೆ.
(ಆರ್) ಗೃಹ ವಿಜ್ಞಾನ.
(ಎಸ್) ಕೃಷಿ ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ.
(ಟಿ) ಕೃಷಿ ಅರ್ಥಶಾಸ್ತ್ರ; ಹಾಗೂ
(ಯು) ಬೇಸಾಯ ಜಮೀನುಗಳ ಬಳಕೆ ಯೋಜನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

– ಇವುಗಳ ಮೂಲಭೂತ ಹಾಗೂ ಆನ್ವಯಿಕ ವಿಜ್ಞಾನಗಳನ್ನು ಒಳಗೊಳ್ಳುತ್ತದೆ.

(4) "ಕೃಷಿ ಸಂಶೋಧನಾ ಕೇಂದ್ರ" ಎಂದರೆ, ವಲಯ ಕೃಷಿ ಸಂಶೋಧನಾ ಕೇಂದ್ರ, ಪ್ರಮುಖ ಕೃಷಿ ಸಂಶೋಧನಾ ಕೇಂದ್ರ, ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಶ್ವವಿದ್ಯಾಲಯದ ಕೃಷಿ ಸಂಶೋಧನಾ ಕೇಂದ್ರ ಅಥವಾ ಇನ್ಯಾವುದೇ ಸಂಶೋಧನಾ ಕೇಂದ್ರ.

(5) "ಪ್ರಾಧಿಕಾರ" ಎಂದರೆ, 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ.

(6) "ಮಂಡಳಿ" ಎಂದರೆ, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ.

(7) "ಅಧ್ಯಯನ ಮಂಡಳಿ" ಎಂದರೆ, ಫ್ಯಾಕಲ್ಟಿ ಹಂತದಲ್ಲಿ ವಿದ್ಯಾ ವ್ಯವಹಾರಗಳ ಸಮಿತಿ.

(8) "ಕಾಲೇಜು" ಎಂದರೆ, ವಿಶ್ವವಿದ್ಯಾಲಯದ ನೇರ ನಿಯಂತ್ರಣ ದಲ್ಲಿರುವ ಮತ್ತು ವ್ಯವಸ್ಥಾಪನೆಯ ಅಡಿಯಲ್ಲಿ ಬರುವ ಕೇಂದ್ರ ಕಾರ್ಯಸ್ಥಾನದಲ್ಲಿರುವ, ಕ್ಯಾಂಪಸ್‌ನಲ್ಲಿರುವ ಅಥವಾ ಇತರೆಡೆ ಇರುವ ಘಟಕ ಕಾಲೇಜು;

(9) "ಕುಲಾಧಿಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಾಧಿಪತಿ;

(10) "ಲೆಕ್ಕ ನಿಯಂತ್ರಕ" ಎಂದರೆ, ವಿಶ್ವವಿದ್ಯಾಲಯದ ಲೆಕ್ಕ ನಿಯಂತ್ರಕರು;

(11) "ಡೀನ್" ಎಂದರೆ, ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಅಥವಾ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥರು;

(12) "ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್" ಎಂದರೆ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಸಲಹೆ ನೀಡಿಕೆ ಮತ್ತು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆಯ ಡೀನ್;

(13) "ನಿರ್ದೇಶಕ" ಎಂದರೆ, ವಿದ್ಯಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರು;

(14) "ವಿಸ್ತರಣಾ ಪರಿಷತ್ತು" ಎಂದರೆ, ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಪರಿಷತ್ತು;

(15) "ಫ್ಯಾಕಲ್ಟಿ" ಎಂದರೆ, ಈ ಅಧಿನಿಯಮದಲ್ಲಿ ಮತ್ತು ಶಾಸನಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಫ್ಯಾಕಲ್ಟಿ.

(16) "ವಿಭಾಗದ ಮುಖ್ಯಸ್ಥರು" ಎಂದರೆ, ವಿಶ್ವವಿದ್ಯಾಲಯದ ಮತ್ತು ಘಟಕ ಕಾಲೇಜುಗಳ ವಿಭಾಗ ಮುಖ್ಯಸ್ಥರು'

(17) "ವಿದ್ಯಾರ್ಥಿನಿಲಯ" ಎಂದರೆ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ವಿಶ್ವವಿದ್ಯಾಲಯದ ಒಂದು ಭಾಗವಾಗಿ ಅಥವಾ ಪ್ರತ್ಯೇಕವಾಗಿ ನಿರ್ವಹಿಸಿಕೊಂಡು ಬಂದ ಮತ್ತು ವಿಶ್ವವಿದ್ಯಾಲಯವು ಮನ್ನಣೆ ನೀಡಿದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಇರುವ ವಾಸಸ್ಥಳ;

(18) "ಅಧಿಕಾರಿ" ಎಂದರೆ, ಪರಿನಿಯಮಗಳಲ್ಲಿ ಅಥವಾ ಶಾಸನಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವ ವಿಶ್ವವಿದ್ಯಾಲಯದ ಅಧಿಕಾರಿ;

(19) "ನಿಯಮಿಸಲಾದುದು" ಎಂದರೆ, ವಿಶ್ವವಿದ್ಯಾಲಯದ ಶಾಸನಗಳಿಂದ ನಿಯಮಿಸಲಾದುದು;

(20) "ಕುಲಸಚಿವ" ಎಂದರೆ, ವಿಶ್ವವಿದ್ಯಾಲಯದ ಕುಲಸಚಿವ;

(21) "ವಿನಿಯಮಗಳು" ಎಂದರೆ, 54ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿನಿಯಮಗಳು;

(22) "ಸಂಶೋಧನಾ ಪರಿಷತ್ತು" ಎಂದರೆ, ವಿಶ್ವವಿದ್ಯಾನಿಲಯದ ಸಂಶೋಧನಾ ಪರಿಷತ್ತು;

(23) "ಶಾಸನಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನೀತಿಗಳು, ಕಾರ್ಯವಿಧಾನಗಳು ಮುಂತಾದ ಅಂಶಗಳನ್ನು ಕುರಿತು ರಚಿಸಲಾದ ವಿಶ್ವವಿದ್ಯಾಲಯದ ಶಾಸನಗಳು;

(24) "ವಿದ್ಯಾರ್ಥಿ" ಎಂದರೆ, ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧವಾಗಿ ಸ್ಥಾಪಿಸಲಾದ ಪದವಿ, ಡಿಪ್ಲೋಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪಡೆಯಲು ವ್ಯಾಸಂಗ ಕ್ರಮದಲ್ಲಿ ಅಧ್ಯಯನ ಮಾಡುವುದಕ್ಕಾಗಿ ವಿಶ್ವವಿದ್ಯಾಲಯದ ಘಟಕ ಕಾಲೇಜು ಮತ್ತು ಒಂದು ಸಂಯೋಜಿತ ಕಾಲೇಜಿನಲ್ಲಿ ಪ್ರವೇಶ ನೀಡಲಾಗಿರುವ ವಿದ್ಯಾರ್ಥಿಪಟ್ಟಿಯಲ್ಲಿ ಹೆಸರು ಸೇರಿಸಲಾಗಿರುವಂಥ ಒಬ್ಬ ವ್ಯಕ್ತಿ.

(25) "ಅಧ್ಯಾಪಕರು" ಎಂದರೆ, ಸಹಾಯಕ ಪ್ರಾಧ್ಯಾಪಕರ ದರ್ಜೆಗೆ ಕಡಿಮೆಯಿಲ್ಲದ ಬೋಧನೆ ನೀಡುವ ಅಥವಾ ಸಂಶೋಧನೆ ಮತ್ತು /ಅಥವಾ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಅಥವಾ ಮಾನ್ಯತೆ ಪಡೆದ ಒಬ್ಬ ವ್ಯಕ್ತಿ ಮತ್ತು ಇದು ಅಧ್ಯಾಪಕನೆಂದು ಶಾಸನಗಳ ಮೂಲಕ ಘೋಷಿಸಲ್ಪಡಬಹುದಾದ ಇತರೆ ಯಾವುದೇ ವ್ಯಕ್ತಿಯನ್ನು ಒಳಗೊಳ್ಳಬಹುದು.

(26) "ತಂತ್ರಜ್ಞಾನ ವರ್ಗಾವಣೆ ಘಟಕಗಳು" (ಟಿಓಟಿ) ಎಂದರೆ, ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ವಿಸ್ತರಣಾ ಶಿಕ್ಷಣ ಘಟಕಗಳು (ಇಇಯು), ಸಿಬ್ಬಂದಿ ತರಬೇತಿ ಘಟಕಗಳು (ಎಸ್‌ಟಿಯು), ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ (ಎಚ್‌ಟಿಐಸಿ). ಬೇಕರಿ ತರಬೇತಿ ಘಟಕ (ಬಿಟಿಯು) ಮತ್ತು ವಿಶ್ವವಿದ್ಯಾಲಯವು ಸ್ಥಾಪಿಸಿದಂಥ ಇತರ ಕೇಂದ್ರಗಳು.

(27) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(28) "ಕುಲಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಪತಿ.

ಅಧ್ಯಾಯ - II
ವಿಶ್ವವಿದ್ಯಾಲಯಗಳು

3. ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ನಿಗಮನ.– (1) ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 22) 3ನೇ ಪ್ರಕರಣದಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಈ ಮುಂದಿನಂತೆ ಉಪಬಂಧ ಕಲ್ಪಿಸಿರುವಂತೆ ತಮ್ಮ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಡನೆ ಈ ಅಧಿನಿಯಮದಡಿಯಲ್ಲಿ ಸ್ಥಾಪನೆಯಾಗಿವೆ ಎಂದು ಭಾವಿಸತಕ್ಕದ್ದು ಎಂದರೆ:–

(ಎ) ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ರಾಮನಗರಂ, ಮಂಡ್ಯ, ತುಮಕೂರು, ಮೈಸೂರು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿರುವ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(ಬಿ) ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(2) ಈ ಅಧಿನಿಯಮವು ಪ್ರಾರಂಭವಾದ ದಿನದಂದು, (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಗೆ ವಿಸ್ತರಿಸಲಾದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ರಾಯಚೂರಿನಲ್ಲಿ ಕೇಂದ್ರ ಕಾರ್ಯಸ್ಥಾನದೊಂದಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಸ್ಥಾಪನೆಯಾಗತಕ್ಕದ್ದು ಮತ್ತು (1)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯವು

ಹೊಂದಿದ್ದ ಆ ಪ್ರದೇಶದ ಮೇಲಿನ ಅಧಿಕಾರ ಕ್ಷೇತ್ರ ವ್ಯಾಪ್ತಿಯು ರದ್ದಾಗತಕ್ಕದ್ದು.

(3) ಕುಲಾಧಿಪತಿ, ಸಹ ಕುಲಾಧಿಪತಿ, ಪ್ರತಿಯೊಂದು ವಿಶ್ವವಿದ್ಯಾಲಯದ ಕುಲಪತಿ, ವ್ಯವಸ್ಥಾಪನಾ ಮಂಡಳಿ, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳು ಹಾಗೂ ಅಧಿಕಾರಿಗಳು ಸೇರಿ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ, ವಿಶ್ವವಿದ್ಯಾಲಯದ ಹೆಸರಿನ ಒಂದು ನಿಗಮಿತ ನಿಕಾಯವು ರಚನೆಯಾಗತಕ್ಕದ್ದು.

(4) ಅಂಥ ಪ್ರತಿಯೊಂದು ವಿಶ್ವವಿದ್ಯಾಲಯವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಹಾಗೂ ತನ್ನ ಹೆಸರಿನಿಂದ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(5) ವಿಶ್ವವಿದ್ಯಾಲಯವು ಚರ ಮತ್ತು ಸ್ಥಿರ ಸ್ವತ್ತುಗಳೆರಡೂ ಆರ್ಜಿಸಲು ಮತ್ತು ಧಾರಣ ಮಾಡಲು ಮತ್ತು ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಇತರ ಅಂಗೀಕೃತ ಮೂಲಗಳಿಂದ ಸಾಲ ಪಡೆಯಲು ಮತ್ತು ಯಾವುದೇ ಕರಾರನ್ನು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲಾ ಇತರ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

(6) ವಿಶ್ವವಿದ್ಯಾಲಯವು, ತನ್ನಲ್ಲಿ ನಿಹಿತವಾಗಿದ್ದಿರಬಹುದಾದ ಅಥವಾ ತಾವು ಆರ್ಜಿಸಿರಬಹುದಾದ ಯಾವುದೇ ಸ್ಥಿರ ಸ್ವತ್ತನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೇ ಗುತ್ತಿಗೆ ನೀಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ.

(7) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳು ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ವಿಶ್ವವಿದ್ಯಾಲಯದ ಕುಲಸಚಿವರು ಹೊರಡಿಸತಕ್ಕದ್ದು ಮತ್ತು ಅವರ ಮೇಲೆ ಜಾರಿ ಮಾಡತಕ್ಕದ್ದು.

4. ಅಧಿಕಾರ ವ್ಯಾಪ್ತಿ.– (1) ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ವ್ಯವಸಾಯ ಮತ್ತು ಅರಣ್ಯ ವಿಜ್ಞಾನ ತರಬೇತಿ ಅಥವಾ ಶಿಕ್ಷಣ ಕೇಂದ್ರಗಳು ಮತ್ತು ಸಂಶೋಧನಾ ಹಾಗೂ ಪ್ರಯೋಗ ಕೇಂದ್ರಗಳ

ನಿರ್ವಹಣೆಗೆ ಮತ್ತು ಕ್ಷೇತ್ರ ವಿಸ್ತರಣಾ ಕೆಲಸಗಾರರ ತರಬೇತಿ ಕಾರ್ಯ ಕ್ರಮಗಳಿಗೆ ಮತ್ತು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ವಿವಿಧ ಭಾಗಗಳಲ್ಲಿ ಅಗತ್ಯವಾಗಬಹುದಾದಂಥ ಇತರ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಪ್ರತಿಯೊಂದು ವಿಶ್ವವಿದ್ಯಾಲಯದ ಮೇಲಿರತಕ್ಕದ್ದು.

(2) ವಿಶ್ವವಿದ್ಯಾಲಯದ ಆಡಳಿತದ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು, ಸಂಶೋಧನೆ ಮತ್ತು ಪ್ರಯೋಗ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ವಿಸ್ತರಣಾ ಶಿಕ್ಷಣ ಮತ್ತು ಇತರ ತರಬೇತಿ ಕೇಂದ್ರಗಳು ಅಥವಾ ಪ್ರತಿಯೊಂದು ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಮತ್ತು ಪ್ರಾಧಿಕಾರದ ಅಡಿಯಲ್ಲಿ ಬರುವ ಇತರ ಸಂಸ್ಥೆಗಳು ಆ ವಿಶ್ವವಿದ್ಯಾಲಯದ ಘಟಕ ಭಾಗವಾಗಿರತಕ್ಕದ್ದು ಮತ್ತು ಆ ವಿಶ್ವವಿದ್ಯಾಲಯದ ಆಡಳಿತ ಮತ್ತು ನಿಯಂತ್ರಣದಡಿಯಲ್ಲಿ ಕೆಲಸ ಮಾಡತಕ್ಕದ್ದು. ವಿಶ್ವವಿದ್ಯಾಲಯದಿಂದ ಸಂಯೋಜಿತ ಕಾಲೇಜು ಎಂದು ಅನ್ಯಥಾ ಮನ್ನಣೆ ಪಡೆದ ಹೊರತು ಯಾವ ಘಟಕವನ್ನು ಒಂದು ಸಂಯೋಜಿತ ಘಟಕ ಎಂದು ಮಾನ್ಯ ಮಾಡತಕ್ಕದ್ದಲ್ಲ.

(3) ಪ್ರತಿಯೊಂದು ವಿಶ್ವವಿದ್ಯಾಲಯವು ಅನೇಕ ವಿಭಿನ್ನ ಶಾಸ್ತ್ರಗಳ ದೃಷ್ಟಿಯಿಂದ ಅಧ್ಯಯನ ಮಾಡುವ ವಿದ್ಯಾವಿಷಯಕ ಕಾರ್ಯಕ್ರಮಗಳ ಮತ್ತು ಸಂಶೋಧನಾ ಯೋಜನೆಗಳ ಸಂಬಂಧದಲ್ಲಿ ಇತರ ವಿಶ್ವವಿದ್ಯಾಲಯಗಳು ಅಥವಾ ಭಾರತದ ಮತ್ತು ವಿದೇಶದ ಖ್ಯಾತ ಸಂಸ್ಥೆಗಳೊಂದಿಗೆ ವಿದ್ಯಾವಿಷಯಕ ಕಾರ್ಯಕ್ರಮಗಳ ಸಹಯೋಗ ಮಾಡಿಕೊಳ್ಳಬಹುದು.

(4) ವಿಶ್ವವಿದ್ಯಾಲಯವು ಅಗತ್ಯಕ್ಕೆ ತಕ್ಕಂತೆ ತನ್ನ ಅಧಿಕಾರ ಕ್ಷೇತ್ರವ್ಯಾಪ್ತಿ ಯೊಳಗೆ ಮತ್ತು ವಿದೇಶದಲ್ಲಿ ತನ್ನ ಘಟಕ ಸಂಸ್ಥೆಗಳನ್ನು ಸ್ಥಾಪಿಸುವ, ಅಭಿವೃದ್ಧಿ ಪಡಿಸುವ ಮತ್ತು ಕಾರ್ಯಾಚರಣೆ ಮಾಡುವ ಹೊಣೆಗಾ ರಿಕೆಯನ್ನು ವಹಿಸಿಕೊಳ್ಳಬಹುದು.

5. **ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.**– ಪ್ರತಿಯೊಂದು ವಿಶ್ವವಿದ್ಯಾ ಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

(ಎ) 2ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನದ ವಿವಿಧ ಶಾಖೆಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಶಿಕ್ಷಣ ನೀಡುವುದಕ್ಕೆ ಏರ್ಪಾಡು ಮಾಡುವುದು;

(ಬಿ) ಕಲಿಕೆ ಮತ್ತು ಸಂಶೋಧನೆಗೆ ಅದರಲ್ಲೂ ಕೃಷಿ ಮತ್ತು ಇತರೆ ಸಂಬಂಧಿತ ವಿಜ್ಞಾನದಲ್ಲಿ ಕಲಿಕೆ ಮತ್ತು ಸಂಶೋಧನೆಯ ಮುನ್ನಡೆಗೆ ಉತ್ತೇಜನ ನೀಡುವುದು;

(ಸಿ) ಜನತೆಗೆ ವಿಶೇಷವಾಗಿ ರಾಜ್ಯದ ಗ್ರಾಮಾಂತರ ಜನರಿಗೆ, ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಸ್ತರಣಾ ಶಿಕ್ಷಣವನ್ನು ಕೈಕೊಳ್ಳುವುದು;

(ಡಿ) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಉದ್ದೇಶಗಳು; ಮತ್ತು

(ಇ) ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕಾ, ಸಂಶೋಧನೆ ಮತ್ತು ಇತರ ಸಂಸ್ಥೆಗಳೊಂದಿಗೆ ಪಾಲುಗಾರಿಕೆ ಮತ್ತು ಜೋಡಣೆಗಳನ್ನು ಉತ್ತೇಜಿಸುವುದು.

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.– (1) ವಿಶ್ವವಿದ್ಯಾಲಯವು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಪ್ರವೇಶಕ್ಕಾಗಿ ಅಥವಾ ವಿಶ್ವವಿದ್ಯಾಲಯದ ಪಟ್ಟಿಗಳಲ್ಲಿ ಉಳಿದುಕೊಳ್ಳುವುದಕ್ಕಾಗಿ ನಿಯಮಿಸಲಾದ ಶೈಕ್ಷಣಿಕ ಗುಣಮಟ್ಟಗಳನ್ನು ಪೂರೈಸದಿರುವ ಯಾವೊಬ್ಬ ವ್ಯಕ್ತಿಗೆ ಅಥವಾ ಯಾವ ವ್ಯಕ್ತಿಗಳ ಶೈಕ್ಷಣಿಕ ದಾಖಲೆಗಳು, ಪದವಿಯನ್ನು ನೀಡುವುದಕ್ಕಾಗಿ ಅಗತ್ಯಪಡಿಸಲಾದ ಕನಿಷ್ಠ ಗುಣಮಟ್ಟಕ್ಕಿಂತ ಕಡಿಮೆ ಇವೆಯೋ ಆ ವ್ಯಕ್ತಿಗಳಿಗೆ ಅಥವಾ ಯಾರ ವೈಯಕ್ತಿಕ ನಡತೆಯು ವಿಶ್ವವಿದ್ಯಾನಿಲಯದ ಹಿತದೃಷ್ಟಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯ ಸೂಕ್ತ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಾನಿಕಾರಕವಾಗಿರುವಂಥದ್ದಾಗಿದೆಯೋ ಆ ವ್ಯಕ್ತಿಗಳಿಗೆ ಅಧ್ಯಯನದ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ, ವಿದ್ಯಾ ವಿಷಯಕ ಪರಿಷತ್ತು ನಿರ್ಧರಿಸಿದಂತೆ ವಿಶ್ವವಿದ್ಯಾಲಯದ ಅಥವಾ ಯಾವುದೇ ನಿರ್ದಿಷ್ಟ ಕಾಲೇಜಿನ ಅಥವಾ ವಿಭಾಗದ ಲಭ್ಯವಿರುವ ಫ್ಯಾಕಲ್ಟಿಗಳಲ್ಲಿ ಸ್ಥಳಾವಕಾಶ ನೀಡಬಹುದಾದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡಲು ವಿಶ್ವವಿದ್ಯಾಲಯವನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿದ ಮಹಿಳೆಯರಿಗೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಕೃಷಿಕರ ಮಕ್ಕಳಿಗೆ ಮತ್ತು ಇತರ ರಾಜ್ಯಗಳ ವಿದ್ಯಾರ್ಥಿ ಗಳಿಗೆ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕೃಷಿ ಕುರಿತ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸ್ವಾತಂತ್ರ ಹೋರಾಟಗಾರರ, ಸೈನಿಕರ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಹಾಗೂ ಪ್ರತಿಪಾಲಿತರಿಗೆ ಮತ್ತು ಸರ್ಕಾರವು ಈ ಸಂಬಂಧದಲ್ಲಿ ಘೋಷಿಸಬಹುದಾದಂಥ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ನಾಗರಿಕರಿಗೆ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ನೀಡಿದಲ್ಲಿ ವಿಶ್ವವಿದ್ಯಾಲಯವು ಅದರಂತೆ ಮೀಸಲಾತಿಗಳನ್ನು ಮಾಡತಕ್ಕದ್ದು.

ವಿವರಣೆ:- ಈ ಉಪಪ್ರಕರಣದ ಉದ್ದೇಶಕ್ಕಾಗಿ.-

(1) "ಕೃಷಿಕ" ಎಂದರೆ, ಮಾಲೀಕನಾಗಿ ಭೂಮಿಯನ್ನು ಹೊಂದಿರುವ ಹಾಗೂ ಯಾರ ಮುಖ್ಯ ಆದಾಯವು ಸ್ವಂತ ಸಾಗುವಳಿ ಮಾಡುವುದರಿಂದ ಬರುತ್ತದೋ ಆ ವ್ಯಕ್ತಿ ಮತ್ತು ಇದು ಮುಖ್ಯವಾಗಿ ಕೃಷಿ ಭೂಮಿಗಳಲ್ಲಿ ದೈಹಿಕ ದುಡಿಮೆಯಿಂದ ತನ್ನ ಜೀವನ ನಿರ್ವಹಣೆ ಮಾಡುತ್ತಿರುವ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(2) "ಸ್ವಾತಂತ್ರ ಹೋರಾಟಗಾರ" ಎಂದರೆ, ಸರ್ಕಾರವು ಕಾಲ ಕಾಲಕ್ಕೆ ಹಾಗೆಂದು ಘೋಷಿಸುವ ಪ್ರವರ್ಗದ ವ್ಯಕ್ತಿ.

7. ವಿಶ್ವವಿದ್ಯಾಲಯದ ಅಧಿಕಾರ ಮತ್ತು ಪ್ರಕಾರ್ಯಗಳು.- ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(1) ಕೃಷಿ ಮತ್ತು ಸಂಬಂಧಿತ ಇತರ ಕಲಿಕೆಯ ವಿಭಾಗಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸೂಕ್ತ ಎಂದು ಭಾವಿಸಬಹುದಾದ ಶಿಕ್ಷಣವನ್ನು ಒದಗಿಸುವುದು;

(2) ಕೃಷಿ ಮತ್ತು ಸಂಬಂಧಿತ ಕಲಿಕೆಯ ವಿಭಾಗಗಳಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಅವಕಾಶವನ್ನು ನೀಡುವುದು.

(3) ಸಂಶೋಧನೆಯಿಂದ ತಿಳಿದುಬಂದ ವಿಷಯಗಳನ್ನು ಮತ್ತು ತಾಂತ್ರಿಕ ಮಾಹಿತಿಗಳನ್ನು ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಲು ಅವಕಾಶ ಕಲ್ಪಿಸುವುದು;

(4) ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಈ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅರೆಕಾಲಿಕ ವ್ಯಾಸಂಗ ಕ್ರಮ ಮತ್ತು / ಅಥವಾ ಸಂಶೋಧನೆಯು ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ನಿಯಮಿಸಿದ ವ್ಯಾಸಂಗ ಕ್ರಮ ಅಥವಾ ಸಂಶೋಧನೆ ಅಥವಾ ಅವರೆಡನ್ನೂ ಮಾಡಿರುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿ, ಡಿಪ್ಲೋಮಾ ಮತ್ತಿತರ ಶೈಕ್ಷಣಿಕ ಪ್ರಶಸ್ತಿ ನೀಡುವುದು;

(5) ನಿಯಮಿಸಬಹುದಾದಂಥ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ರೈತರಿಗೆ, ಕ್ಷೇತ್ರ ಕೆಲಸಗಾರರಿಗೆ, ಗ್ರಾಮೀಣ ಯುವಕರಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧ ವಿದ್ಯಾರ್ಥಿಗಳಾಗಿ ಭರ್ತಿಯಾಗಿರದ ಇತರ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು;

(7) 4ನೇ ಪ್ರಕರಣದಲ್ಲಿ ನಮೂದಿಸಿರುವ ಮಿತಿಗಳಿಗೊಳಪಟ್ಟು, ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುವುದು;

(8) ಕೃಷಿ, ಗೃಹವಿಜ್ಞಾನ, ಕೃಷಿ ಇಂಜಿನಿಯರಿಂಗ್, ಅರಣ್ಯ ವಿಜ್ಞಾನ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಸಂಬಂಧಿಸಿದ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(9) ಬೋಧನೆ, ಸಂಶೋಧನೆ ನಡೆಸಲು ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗಾಲಯಗಳು, ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(10) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(11) ಆಡಳಿತಾತ್ಮಕವಾದ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ಶಾಸನಗಳನ್ವಯ ಫೆಲೋಶಿಪ್, ವಿದ್ಯಾರ್ಥಿವೇತನಗಳು, ಸ್ಟೈಪೆಂಡುಗಳು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಿವಾಸ ಗೃಹಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(14) ನಿಯಮಿಸಲಾದಂಥ ಫೀಜು ಮತ್ತು ಇತರೆ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ ನಡತೆ ಮತ್ತು ಶಿಸ್ತನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ವರ್ಧಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡುವುದು;

(16) ವಿದೇಶಗಳಿಂದ ಮತ್ತು ದೇಶದ ಒಳಗಿನಿಂದ ವಂತಿಗೆಗಳನ್ನು ಸ್ವೀಕರಿಸುವುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(17) ಭಾರತದ ಹೊರಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ತನ್ನ ವಿಶೇಷಾಧಿಕಾರಕ್ಕೆ ಪ್ರವೇಶಾವಕಾಶವನ್ನು ನೀಡಲು ವಿಶ್ವವಿದ್ಯಾಲಯಕ್ಕೆ ಅನುಮತಿಸುವುದು;

(18) ವಿವಿಧ ಶಾಸನಗಳಡಿಯಲ್ಲಿ ನಿರ್ಧರಿಸಿದಂತೆ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆಯನ್ನು ನಡೆಸಲು ಖಾಸಗಿ ಕೃಷಿ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.

(19) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಪುರೋಭಿವೃದ್ಧಿಗೆ ಅಗತ್ಯವಾಗಬಹುದಾದ ಎಲ್ಲಾ ಚಟುವಟಿಕೆಗಳ ಮತ್ತು ಕಾರ್ಯಗಳನ್ನು ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಮಾಡುವುದು:

8. ತಪಾಸಣೆ ಮತ್ತು ನಿಯಂತ್ರಣ.– (1) ಕುಲಾಧಿಪತಿಯವರು, ಸರ್ಕಾರವು ತಪಾಸಣೆ ಕೋರಿದ್ದರೆ ಅಥವಾ ಸ್ವಪ್ರೇರಣೆಯಿಂದ ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ವಿಶ್ವವಿದ್ಯಾಲಯದ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ವಿದ್ಯಾರ್ಥಿನಿಲಯಗಳ, ಕಾರ್ಯಾಗಾರಗಳ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ, ಆಡಳಿತ ನಡೆಸುತ್ತಿರುವ ಮಾನ್ಯತೆ ನೀಡಿದ ಅಥವಾ ಅನುಮೋದಿಸಿದ ಸಂಸ್ಥೆಯ ಸಲಕರಣೆಗಳ ಮತ್ತು ವಿಶ್ವವಿದ್ಯಾಲಯವು ನಡೆಸಿದ ಮತ್ತು ಕೈಗೊಂಡ ಪರೀಕ್ಷೆಗಳ, ಅಧ್ಯಾಪನದ ಮತ್ತು ಇತರ ಕಾರ್ಯದ ಬಗ್ಗೆ ತಪಾಸಣೆ ಮಾಡುವಂತೆ ಮಾಡತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ಅದೇ ರೀತಿಯಲ್ಲಿ ತಪಾಸಣೆ ಮಾಡುವಂತೆ ಅಥವಾ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ತಪಾಸಣೆ ಅಥವಾ ವಿಚಾರಣೆ ನಡೆಸುವುದಕ್ಕಾಗಿ, ನಿರ್ದೇಶಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳು, ಆ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅವಶ್ಯಕವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶವಿರತಕ್ಕದ್ದು.

(3) ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳು, ತಪಾಸಣೆ ಅಥವಾ ವಿಚಾರಣೆಯ ಒಂದು ವರದಿಯನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ಮೇಲೆ ಕುಲಾಧಿಪತಿಯವರು ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಅವಶ್ಯಕವಾಗಬಹುದಾದ ಅಥವಾ ತಾನು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ವರದಿಯಲ್ಲಿಯ ತೀರ್ಮಾನ ಗಳಿಗೆ ಸಂಬಂಧಿಸಿದಂತೆ ಕುಲಾಧಿಪತಿಯವರು ಮತ್ತು ಸರ್ಕಾರವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ಕ್ರಮಕೈಗೊಳ್ಳಲು ಕುಲಪತಿ ಯವರಿಗೆ ನಿರ್ದೇಶನವನ್ನು ನೀಡತಕ್ಕದ್ದು ಮತ್ತು ಅಂಥ ಕ್ರಮ ತೆಗೆದುಕೊಳ್ಳು ವುದಕ್ಕೆ ಒಂದು ಕಾಲಮಿತಿಯನ್ನು ನಿಗದಿಗೊಳಿಸತಕ್ಕದ್ದು.

(6) ಕುಲಪತಿಯು, ಹಾಗೆ ನಿಗದಿಗೊಳಿಸಿದ ಕಾಲಮಿತಿಯಯೊಳಗೆ, ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

(7) ಸರ್ಕಾರವು, ನಿಗದಿಪಡಿಸಲಾದ ಕಾಲಮಿತಿಯೊಳಗೆ ತನಗೆ ತೃಪ್ತಿಕರವಾಗುವಂತೆ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳದಿದ್ದಲ್ಲಿ ಮತ್ತು ವಿಶ್ವವಿದ್ಯಾಲಯವು ನೀಡಿದ ಯಾವುದೇ ವಿವರಣೆ ಅಥವಾ ಸಲ್ಲಿಸಿದ ಮನವಿ ಯನ್ನು ಪರಿಶೀಲಿಸಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹು ದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(8) ಹಿಂದೆ ಹೇಳಿದ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ವ್ಯವಹಾರಗಳನ್ನು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಈಡೇರಿಕೆಗೆ ಅಥವಾ ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ವಿನಿಯಮಗಳ ಉಪಬಂಧಗಳಿಗೆ ಅಥವಾ ಬೋಧನೆ, ಪರೀಕ್ಷೆಗಳು, ಸಂಶೋಧನೆ ಅಥವಾ ವಿಸ್ತರಣಾ ಶಿಕ್ಷಣದ ಗುಣಮಟ್ಟಗಳನ್ನು ಕಾಯ್ದು ಕೊಂಡು ಬರುವಲ್ಲಿ ಅಪೇಕ್ಷಣೀಯವಾದ ವಿಶೇಷ ಕ್ರಮಗಳಿಗೆ ಅನುಸಾರವಾಗಿ ನಿರ್ವಹಿಸುತ್ತಿಲ್ಲವೆಂದು ಯಾವುದೇ ಸಮಯದಲ್ಲಿ ಕುಲಾಧಿಪತಿಯವರು

ಅಭಿಪ್ರಾಯಪಟ್ಟರೆ, ತಾವು ಯಾವ ವಿಷಯದ ಬಗ್ಗೆ ವಿವರಣೆಯನ್ನು ಅಪೇಕ್ಷಿಸುವರೋ, ಆ ವಿಷಯವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತರತಕ್ಕದ್ದು ಮತ್ತು ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಕಾಲಮಿತಿಯ ಒಳಗೆ ಅಂಥ ವಿವರಣೆಯನ್ನು ಕೊಡುವಂತೆ ವಿಶ್ವವಿದ್ಯಾಲಯವನ್ನು ಕೇಳಬಹುದು. ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಯಾವುದೇ ವಿವರಣೆಯನ್ನು ನೀಡಲು ತಪ್ಪಿದರೆ ಅಥವಾ ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕುಲಾಧಿಪತಿಯವರು ಅಭಿಪ್ರಾಯಪಟ್ಟರೆ, ಕುಲಾಧಿಪತಿಯವರು ತಾವು ಅವಶ್ಯಕವೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಅಪೇಕ್ಷಣೀಯವೆಂದು ಅಭಿಪ್ರಾಯ ಪಡುವಂಥ ಸೂಚನೆಗಳನ್ನು ನೀಡಬಹುದು ಮತ್ತು ಆ ಸೂಚನೆಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯಕವಾದಂಥ ಅಧಿಕಾರಗಳನ್ನು ಚಲಾಯಿಸಬಹುದು.

(9) ಕುಲಾಧಿಪತಿಯವರು ಅಗತ್ಯವೆಂದು ನಿರ್ದೇಶಿಸಬಹುದಾದಂಥ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಪಡುವ ಮಾಹಿತಿಯನ್ನು ವಿಶ್ವವಿದ್ಯಾಲಯವು ಒದಗಿಸತಕ್ಕದ್ದು.

(10) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ನಡವಳಿಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ ಅಸಂಗತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಮಾಡುವ ಮೊದಲು ರಾಜ್ಯ ಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಕೂಡದೆಂಬ ಬಗ್ಗೆ ಕಾರಣ ತೋರಿಸುವಂತೆ ವಿಶ್ವವಿದ್ಯಾಲಯವನ್ನು ಕೇಳತಕ್ಕದ್ದು ಮತ್ತು ಸಮಂಜಸ ಕಾಲವಧಿಯೊಳಗೆ ಕಾರಣವನ್ನು ತೋರಿಸಿದರೆ ಅದನ್ನು ಪರಿಶೀಲಿಸತಕ್ಕದ್ದು.

9. ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳ ವರ್ಗಾವಣೆ.– ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಪ್ರಾರಂಭಿಸಿ,–

(ಎ) ಈ ಅಧಿನಿಯಮವು ಪ್ರಾರಂಭವಾಗುವ ಪೂರ್ವದಲ್ಲಿ ಹಾಗೂ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವಿಶ್ವವಿದ್ಯಾಲಯದ ಒಡೆತನದಲ್ಲಿರುವ ಮತ್ತು ನಿರ್ವಹಣೆಯಲ್ಲಿರುವ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗೆ ಇರುವ, ಎಲ್ಲಾ ಕಾಲೇಜುಗಳು, ಲಗತ್ತಾದ ಹಾಸ್ಟೆಲುಗಳು, ಪೀಠೋಪಕರಣಗಳ ವಸ್ತುಗಳೊಡನೆ ಇತರ ಕಟ್ಟಡಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಸಾಮಗ್ರಿ ಹಾಗೂ ಎಲ್ಲಾ ಇತರ ಚರ ಮತ್ತು ಸ್ಥಿರ ಎರಡೂ ಸ್ವತ್ತುಗಳು, ಸಂಶೋಧನೆಯ ಮತ್ತು ಇತರ ಸಂಸ್ಥೆಗಳು, ಎಲ್ಲಾ ಸ್ವತ್ತು ಹಕ್ಕುಗಳು, ಆಸ್ತಿ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳೊಂದಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ರಾಯಚೂರಿನಲ್ಲಿ ಕ್ಯಾಂಪಸನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತಾನು ಸರಿಯೆಂದು ಭಾವಿಸಬಹುದಾದಂಥ ಹೆಚ್ಚುವರಿ ಅಭಿವೃದ್ಧಿ ಅನುದಾನವನ್ನು ನೀಡಬಹುದು.

(ಬಿ) (i) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡ ಕಾಲೇಜುಗಳಲ್ಲಿ 3ನೇ ಪ್ರಕರಣದ (1) ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದಲ್ಲಿ ಯಾವುದೇ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ತನ್ನ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಆ ವಿಶ್ವವಿದ್ಯಾಲಯದ ಪಠ್ಯಕ್ರಮಗಳ ಅನುಸಾರವಾಗಿ ನಿಯಮಿಸಬಹುದಾದಂಥ ಅವಧಿಯವರೆಗೆ ಅಂಥ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ಏರ್ಪಾಡುಗಳನ್ನು ಮಾಡತಕ್ಕದ್ದು.

(ii) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ , (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯವು, ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಕೋರ್ಸಿನ ಅಗತ್ಯತೆಗಳನ್ನು ಪೂರೈಸಿದ್ದು ಅಂಥ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಆಗ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಫಲಿತಾಂಶವನ್ನು ಘೋಷಿಸಬಹುದು ಮತ್ತು ಪದವಿಯನ್ನು ಪ್ರದಾನ ಮಾಡಬಹುದು.

(ಸಿ) ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕಿಂತ ಮುಂಚೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಇರುವ 3ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯದ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಥವಾ ಅದಕ್ಕೆ ಲಗತ್ತಾದ ಯಾವೊಬ್ಬ ಅಧ್ಯಾಪಕ ಮತ್ತು ಇತರ ಸಿಬ್ಬಂದಿಯು ಆ ದಿನಾಂಕದಿಂದಲೇ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ಸಮುಚಿತ ಕೇಡರ್ ಅಥವಾ ಹುದ್ದೆಗಳ ಶ್ರೇಣಿಗಳಿಗೆ ವರ್ಗಾವಣೆಗೊಳ್ಳತಕ್ಕದ್ದು:

ಪರಂತು, ಹಾಗೆ ವರ್ಗಾವಣೆಗೊಂಡ ಯಾವೊಬ್ಬ ಅಧ್ಯಾಪಕರು ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳಿಗೆ ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿ ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಡಿ) ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಬಯಸಿದ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಯಾವೊಬ್ಬ ಅಧ್ಯಾಪಕ ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳು ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿಯನ್ನು

ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಇ) ರಾಜ್ಯ ಸರ್ಕಾರವು ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯವರೊಡನೆ ಸಮಾಲೋಚಿಸಿ, ಈ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುವರಿಯಾಗಿ ಇರುವ ಬೋಧಿಸುವ ಮತ್ತು ಇತರ ಸಿಬ್ಬಂದಿಯು ಯಾರಾದರೂ ಇದ್ದರೆ, ಅದನ್ನು ನಿರ್ಧರಿಸಿ, ಹಾಗೆ ಹೆಚ್ಚುವರಿಯಾಗಿ ಇರುವ ಸಿಬ್ಬಂದಿಯನ್ನು ಸಂದರ್ಭಾನುಸಾರ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅಥವಾ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ತಾನು ಯುಕ್ತವೆಂದು ಪರಿಗಣಿಸಬಹುದಾದರಿಂದ ತತ್ವಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ ವರ್ಗಾಯಿಸಬಹುದು.

10. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ, ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾ ವಿಷಯಕ ಕಾರ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಅದರಲ್ಲೂ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡು ಬರುವ ದೃಷ್ಟಿಯಿಂದ ಮತ್ತು ಸ್ವತ್ತು ಹಾಗೂ ಹಣಕಾಸುಗಳನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

ಅಧ್ಯಾಯ – III
ವಿಶ್ವವಿದ್ಯಾಲಯದ ಪ್ರಾಧಿಕಾರಗಳು

11. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಈ ಮುಂದಿನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು ಎಂದರೆ:–

(1) ವ್ಯವಸ್ಥಾಪನಾ ಮಂಡಳಿ
(2) ವಿದ್ಯಾವಿಷಯಕ ಪರಿಷತ್ತು
(3) ಸಂಶೋಧನಾ ಪರಿಷತ್ತು
(4) ವಿಸ್ತರಣಾ ಶಿಕ್ಷಣ ಪರಿಷತ್ತು
(5) ಸ್ನಾತಕೋತ್ತರ ವ್ಯಾಸಂಗಗಳು ಮತ್ತು ಅವುಗಳ ವ್ಯಾಸಂಗ ಮಂಡಳಿಗಳೂ ಸೇರಿದಂತೆ ಫ್ಯಾಕಲ್ಟಿ

O.14 F – 32

(6) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಎಂಬುದಾಗಿ ಘೋಷಿಸಿರಬಹುದಾದಂಥ ವಿಶ್ವವಿದ್ಯಾಲಯದ ಇತರ ನಿಕಾಯಗಳು.

12. ವ್ಯವಸ್ಥಾಪನಾ ಮಂಡಳಿ ಮತ್ತು ಅದರ ರಚನೆ.– (1) ಕುಲಾಧಿಪತಿಯವರು ಅದಷ್ಟು ಬೇಗನೆ ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(i) ಕುಲಪತಿ – ಇವರು ಅಧ್ಯಕ್ಷರಾಗಿರತಕ್ಕದ್ದು.

(ii) ಕೃಷಿ ಇಲಾಖೆಯ ಪ್ರಭಾರವುಳ್ಳ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು.

(iii) ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವ ರಲ್ಲದ ಅವರ ನಾಮನಿರ್ದೇಶಿತರು.

(iv) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಪರಿಸರಶಾಸ್ತ್ರ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು.

(v) ತೋಟಗಾರಿಕೆ ಇಲಾಖೆಯ ಪ್ರಭಾರವುಳ್ಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು.

(vi) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಪದವೀಧರರಾಗಿ ಐದು ವರ್ಷಗಳಿಂತ ಕಡಿಮೆ ಅವಧಿ ಆಗಿರದ ಪೈಕಿಯಿಂದ ಸರ್ಕಾರದ ನೌಕರರಲ್ಲದ ಅಥವಾ ವಿಶ್ವವಿದ್ಯಾಲಯದ ನೌಕರರಲ್ಲದ ಒಬ್ಬ ವ್ಯಕ್ತಿ.

(vii) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಐವರು ಪ್ರಗತಿಪರ ರೈತರು ಇವರ ಪೈಕಿ ಇಬ್ಬರು

ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು;

(viii) ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಕರ್ನಾಟಕ ರಾಜ್ಯ ವಿಧಾನಸಭೆಯ ಇಬ್ಬರು ಸದಸ್ಯರು ಹಾಗೂ ಸಭಾಪತಿಯವರು ನಾಮನಿರ್ದೇಶನ ಮಾಡಿದ ಕರ್ನಾಟಕ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರು ;

(ix) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಕ್ಷೇತ್ರದಿಂದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಹೊರಗಿನವರಾದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಒಬ್ಬ ಪ್ರಖ್ಯಾತ ಶಿಕ್ಷಣ ತಜ್ಞರು;

(x) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಒಬ್ಬ ಕೃಷಿ ಉದ್ಯಮಿ;

(xi) ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಗ್ರಾಮೀಣಾಭಿವೃದ್ಧಿ ಕಾರ್ಯಕರ್ತರಾಗಿ ಹಿನ್ನೆಲೆಯುಳ್ಳ ಒಬ್ಬ ಮಹಿಳಾ ಸಮಾಜ ಸೇವಕರು;

(xii) ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಆ ಸಂಸ್ಥೆಯ ಒಬ್ಬ ಪ್ರತಿನಿಧಿ;

(xiii) ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರು;

(xiv) ಕೃಷಿ ಆಯುಕ್ತರು, ಕರ್ನಾಟಕ;

(xv) ಕುಲಪತಿಯವರು–ಸುತ್ತು ಸರದಿಯ ಮೇಲೆ ಎರಡು ವರ್ಷಗಳ ಅವಧಿಯವರೆಗೆ ನಾಮನಿರ್ದೇಶನ ಮಾಡಿದ ಒಬ್ಬ ಡೀನ್;

(xvi) ಕುಲಸಚಿವರು, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿರತಕ್ಕದ್ದು ಮತ್ತು

ಅವರುಗಳು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೂ ಯಾವುದೇ ಪ್ರವರ್ಗದಲ್ಲೂ ಪುನರ್ ನಾಮನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ;

(4) ಪದಾವಧಿ ಮುಕ್ತಾಯವಾದ ಸಂದರ್ಭವನ್ನು ಹೊರತುಪಡಿಸಿ ಮರಣ, ರಾಜೀನಾಮೆ, ತೆಗೆದು ಹಾಕುವಿಕೆ ಅಥವಾ ಯಾವುದೇ ಇತರ ಕಾರಣಗಳಿಂದಾಗಿ ಯಾವೊಬ್ಬ ಸದಸ್ಯರ ಸ್ಥಾನವು ಖಾಲಿಯಾದಾಗ ಆ ಖಾಲಿ ಸ್ಥಾನವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಅಂತಹ ಖಾಲಿ ಸ್ಥಾನವನ್ನು ತುಂಬುವ ವ್ಯಕ್ತಿಯು ಯಾವ ಖಾಲಿ ಸ್ಥಾನಕ್ಕೆ ಆತನು ನಾಮನಿರ್ದೇಶಿತನಾಗಿದ್ದಾನೆಯೋ ಆ ವ್ಯಾಪ್ತಿಯ ಉಳಿದ ಪದಾವಧಿವರೆಗೆ ಆ ಸ್ಥಾನವನ್ನು ಹೊಂದಿರತಕ್ಕದ್ದು.

(5) ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು:

ಪರಂತು ಕೋರಂ ಇಲ್ಲದಿದುದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(6) ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರು ಈ ಅಧಿನಿಯಮದ ಅಡಿಯಲ್ಲಿ ತಾವು ನೆರವೇರಿಸಿದ ಪ್ರಕಾರ್ಯಗಳಿಗೆ, ನಿಯಮಿಸಬಹುದಾದಂಥ ದಿನ ಭತ್ಯೆ, ಪ್ರಯಾಣ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

(7) ಮಂಡಳಿಯು ತನ್ನ ಸಭೆಯಲ್ಲಿ ಪರಿಶೀಲಿಸುತ್ತಿರುವ ಯಾವುದೇ ವಿಷಯಗಳ ಬಗ್ಗೆ ತಜ್ಞ ಸಲಹೆ ಪಡೆಯಲು ಆ ವಿಷಯಗಳಲ್ಲಿ ಪರಿಣತಿ ಅಥವಾ ವಿಶೇಷ ಜ್ಞಾನವನ್ನು ಉಳ್ಳ ಯಾವೊಬ್ಬ ವ್ಯಕ್ತಿಯನ್ನು ತನ್ನ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಯು ಅಂತಹ ಸಭೆಯ ವ್ಯವಹರಣೆಗಳಲ್ಲಿ ಮಾತನಾಡಬಹುದು ಅಥವಾ ಅನ್ಯಥಾ ಭಾಗವಹಿಸ ಬಹುದು. ಆದರೆ, ಆತನು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. ಹಾಗೆ ಆಹ್ವಾನಿತರಾದ ಯಾವೊಬ್ಬ ವ್ಯಕ್ತಿಯು ಸಭೆಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂತಹ ಭತ್ಯೆ ಪಡೆಯಲು ಅರ್ಹನಾಗಿರತಕ್ಕದ್ದು.

(8) ಸಾಮಾನ್ಯವಾಗಿ ಮಂಡಳಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಠ ಒಂದು ಬಾರಿಯಾದರೂ ಕುಲಪತಿಯವರು ನಿಗದಿಪಡಿಸುವಂಥ ದಿನಾಂಕ ಮತ್ತು ಸ್ಥಳದಲ್ಲಿ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ತಾನು

ಸೂಕ್ತವೆಂದು ಭಾವಿಸದಾಗಲೆಲ್ಲ, ಮಂಡಳಿಯ ಅರ್ಧಕ್ಕಿಂತ ಕಡಿಮೆಯಲ್ಲದ ಸದಸ್ಯರು ಬರೆದು ಸಹಿ ಮಾಡಿ ಕೋರಿಕೊಂಡಾಗ ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದು.

13. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–(1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ವಿಶ್ವವಿದ್ಯಾಲಯದ ಮುಖ್ಯ ಕಾರ್ಯಕಾರಿ ನಿಕಾಯ ಆಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು ವಿಶ್ವವಿದ್ಯಾಲಯದ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ನಡೆಸಲು ಜವಾಬ್ದಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳು ಮತ್ತು ಆಯವ್ಯಯವನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು;

(ii) ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ನಿಧಿಗಳನ್ನು ಹೊಂದಿರುವುದು ಮತ್ತು ನಿಯಂತ್ರಿಸುವುದು ಹಾಗೂ ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸುವುದು;

(iii) ಸರ್ಕಾರದ ಪೂರ್ವ ಅನುಮೋದನೆಯೊಡನೆ, ವಿಶ್ವವಿದ್ಯಾಲಯದ ಪರವಾಗಿ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ಸ್ವೀಕರಿಸುವುದು ಅಥವಾ ವರ್ಗಾವಣೆ ಮಾಡುವುದು;

(iv) ವಿಶ್ವವಿದ್ಯಾಲಯದ ವಶದಲ್ಲಿ ಇರುವ ನಿಧಿಗಳನ್ನು ಅವನ್ನು ಇಟ್ಟಿರುವ ಉದ್ದೇಶಕ್ಕಾಗಿ ವಿನಿಯೋಗಿಸುವುದು;

(v) ವಿಶ್ವವಿದ್ಯಾಲಯದ ನಿಧಿಗಳನ್ನು ಹೂಡುವುದಕ್ಕಾಗಿ ಮತ್ತು ಹಿಂಪಡೆಯುವುದಕ್ಕಾಗಿ ವ್ಯವಸ್ಥೆ ಮಾಡುವುದು;

(vi) ಸರ್ಕಾರದ ಪೂರ್ವಾನುಮೋದನೆಯೊಡನೆ ಬಂಡವಾಳವನ್ನು ಹೂಡುವುದಕ್ಕಾಗಿ ಹಣವನ್ನು ತರುವುದು ಮತ್ತು ಅದರ ವಾಪಾಸಾತಿಗೆ ಸೂಕ್ತ ವ್ಯವಸ್ಥೆಯನ್ನು ಮಾಡುವುದು;

(vii) ವಿಶ್ವವಿದ್ಯಾಲಯದ ಪರವಾಗಿ ದತ್ತಿ, ಮರಣ ಶಾಸನದಾನ ಮತ್ತು ವಂತಿಕೆಗಳನ್ನು ಒಪ್ಪಿಕೊಳ್ಳುವುದು;

(viii) ಅಗತ್ಯವಿದ್ದಲ್ಲೆಲ್ಲಾ ವಿದ್ಯಾವಿಷಯಕ ಪರಿಷತ್ತು, ಸಂಶೋಧನಾ ಪರಿಷತ್ತು ಮತ್ತು ವಿಸ್ತಾರಣಾ ಶಿಕ್ಷಣ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು.

(ix) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ನಮೂನೆ ಮತ್ತು ಉಪಯೋಗದ ಬಗ್ಗೆ ನಿರ್ದೇಶಿಸುವುದು;

(x) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಅನುಸಾರವಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ಮತ್ತು ನಿಕಾಯಗಳನ್ನು ನೇಮಿಸುವುದು ಮತ್ತು ಅವುಗಳ ಪರಿಶೀಲನಾಂಶಗಳನ್ನು ನಿರ್ಧರಿಸುವುದು;

(xi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ವಿಭಾಗ, ಕೇಂದ್ರ, ಸಂಶೋಧನಾ ಕೇಂದ್ರ ಅಥವಾ ಉಪ ಕೇಂದ್ರವನ್ನು ಸ್ಥಾಪಿಸುವುದು ಅಥವಾ ಅವುಗಳ ಪೈಕಿ ಯಾವುದಾದರೊಂದನ್ನು ರದ್ದುಗೊಳಿಸುವುದು ಅಥವಾ ವಿಭಾಗ, ಸಂಶೋಧನಾ ಕೇಂದ್ರ, ಉಪ ಕೇಂದ್ರ ಅಥವಾ ಕೇಂದ್ರವನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಹೊಸ ಕಾಲೇಜು ಅಥವಾ ಫ್ಯಾಕಲ್ಟಿಯನ್ನು ಸ್ಥಾಪಿಸುವುದು ಅಥವಾ ಎರಡು ಅಥವಾ ಹೆಚ್ಚು ಕಾಲೇಜುಗಳನ್ನು ಅಥವಾ ಫ್ಯಾಕಲ್ಟಿಗಳನ್ನು ಒಂದೇ ಕಾಲೇಜಿನಲ್ಲಿ ಅಥವಾ ಫ್ಯಾಕಲ್ಟಿಯಲ್ಲಿ ಸೇರಿಸುವುದು ಅಥವಾ ಕಾಲೇಜನ್ನು ಅಥವಾ ಫ್ಯಾಕಲ್ಟಿಯನ್ನು ಮುಚ್ಚುವುದು ಅಥವಾ ಪ್ರಸ್ತುತ

ಇರುವ ಯಾವುದೇ ಫ್ಯಾಕಲ್ಟಿಯನ್ನು ಪುನರ್ ರಚಿಸುವ ಬಗ್ಗೆ ಪರಿಗಣಿಸುವುದು ಮತ್ತು ಅನುಮೋದಿಸುವುದು;

(xiii) ರಾಜ್ಯ ಸರ್ಕಾರದ ಅನುಮೋದನೆಯೊಡನೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವುದು.

(xiv) ವಿಶ್ವವಿದ್ಯಾಲಯದ ಅಧಿಕಾರಿಗಳು. ಅಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ (ಪ್ರೊಫೆಸರ್) ಮತ್ತು ಹೆಚ್ಚಿನ ಶ್ರೇಣಿಯ ನೌಕರರ ನೇಮಕಾತಿಗಾಗಿ ಶಿಫಾರಸ್ಸುಗಳನ್ನು ನಿಯಮಿಸಬಹುದಾದಂತೆ ಅನುಮೋದಿಸಬಹುದು.

14. ವಿದ್ಯಾವಿಷಯಕ ಪರಿಷತ್ತು.– (1) ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ :–

(i) ಕುಲಪತಿಯವರು, ಇದರ ಅಧ್ಯಕ್ಷರಾಗಿರುತ್ತಾರೆ;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು;

(iii) ಘಟಕ ಕಾಲೇಜುಗಳ ಡೀನುಗಳು;

(iv) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಇಬ್ಬರು ವಿಭಾಗ ಮುಖ್ಯಸ್ಥರು ಸುತ್ತು ಸರದಿಯ ಮೇಲೆ;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರತಿಯೊಂದು ಫ್ಯಾಕಲ್ಟಿಯಿಂದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧ್ಯಾಪಕರು ಸುತ್ತು ಸರದಿಯ ಮೇಲೆ;

(vi) ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯದ ಹೊರಗಿನಿಂದ ಒಬ್ಬ ಪ್ರಖ್ಯಾತ ಕೃಷಿ ಶಿಕ್ಷಣ ತಜ್ಞರು;

(vii) ಕುಲಸಚಿವರು;

(viii) ಕೃಷಿ ನಿರ್ದೇಶಕರು ಕರ್ನಾಟಕ ಸರ್ಕಾರ;

(ix) ಕುಲಪತಿಯವರು ನಾಮನಿರ್ದೇಶನ ಮಾಡಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ಸಂಯೋಜಿತ ಕಾಲೇಜಿನ ಒಬ್ಬ ಪ್ರತಿನಿಧಿ;

(x) ಶಿಕ್ಷಣ ನಿರ್ದೇಶಕರು, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ಕೃಷಿ ಮತ್ತು ಸಂಬಂಧಿತ ಕ್ಷೇತ್ರದ ವಿವಿಧ ವಲಯಗಳ ಸಾಕಷ್ಟು ಪ್ರಾತಿನಿಧ್ಯ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ನಿಯಮಿಸಬಹುದಾದಂತಹ ಅವಧಿಗಾಗಿ ಮತ್ತು ಅಂತಹ ರೀತಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಮೀರದಂತೆ ಸದಸ್ಯರನ್ನು ವಿದ್ಯಾವಿಷಯಕ ಪರಿಷತ್ತು ಸಹ-ಆಯ್ಕೆ (ಕೋ-ಆಪ್ಟ್) ಮಾಡಿಕೊಳ್ಳತಕ್ಕದ್ದು.

(3) ಪದನಿಮಿತ್ತ ಸದಸ್ಯರ ಹೊರತಾಗಿ ಇತರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮ ನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

(4) ವಿದ್ಯಾವಿಷಯಕ ಪರಿಷತ್ತಿನ ಮೂರನೇ ಒಂದರಷ್ಟು ಸದಸ್ಯರ ಹಾಜರಾತಿ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಕೋರಂ ಆಗಿರತಕ್ಕದ್ದು :

ಪರಂತು ಕೋರಂ ಇಲ್ಲದಿದ್ದುದರಿಂದಾಗಿ ವಿದ್ಯಾವಿಷಯಕ ಪರಿಷತ್ತಿನ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ.

(5) ಸಾಮಾನ್ಯವಾಗಿ ವಿದ್ಯಾವಿಷಯಕ ಪರಿಷತ್ತು ಕುಲಪತಿಯವರು ನಿಗದಿಪಡಿಸಬಹುದಾದಂತಹ ದಿನಾಂಕದಂದು, ಕೊನೆ ಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಆದಾಗ್ಯೂ ಕುಲಪತಿಯವರು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹುದು.

15. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ವಿದ್ಯಾವಿಷಯಕ ಪರಿಷತ್ತು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಾಸಂಗ ಕ್ರಮಗಳನ್ನು ಮತ್ತು ಪಠ್ಯ ವಿಷಯಗಳನ್ನು ನಿರ್ಧರಿಸುವುದಕ್ಕಾಗಿ ಈ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದೊಳಗೆ ಬೋಧನೆ ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದಕ್ಕೆ ಹೊಣೆಯಾಗಿರತಕ್ಕದ್ದು.

(2) ವಿದ್ಯಾವಿಷಯಕ ಪರಿಷತ್ತು ತನ್ನ ನಿಯಂತ್ರಣಕ್ಕೊಳಪಡುವ ಎಲ್ಲಾ ವಿದ್ಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮಕ್ಕೆ ಮತ್ತು ಪರಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಲು ಮತ್ತು ಅಂತಹ ವಿನಿಯಮಗಳನ್ನು ನಿರಸನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

(3) (1)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಪ್ರತಿಕೂಲವಾಗದಂತೆ ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ಗ್ರಂಥಾಲಯಗಳ ನಿಯಂತ್ರಣ ಮತ್ತು ನಿರ್ವಹಣೆಯೂ ಸೇರಿದಂತೆ, ಎಲ್ಲಾ ವಿದ್ಯಾ ವಿಷಯಗಳ ಬಗ್ಗೆ ಮಂಡಳಿಗೆ ಮತ್ತು ಕುಲಪತಿಯವರಿಗೆ ಸಲಹೆ ನೀಡುವುದು;

(ii) ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿನ ಹುದ್ದೆಗಳೂ ಸೇರಿದಂತೆ ಪ್ರಾಧ್ಯಾಪಕರ (ಪ್ರೊಫೆಸರ್), ಅಸೋಸಿಯೆಟ್ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದು ಮತ್ತು ಅವುಗಳ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳನ್ನು ಮಾಡುವುದು;

(iii) ಫ್ಯಾಕಲ್ಟಿ, ಕಾಲೇಜು, ಬೋಧನ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ವಿಭಾಗಗಳನ್ನು ಸ್ಥಾಪಿಸಲು/ ಸಮ್ಮಿಲನ/ ರದ್ದುಗೊಳಿಸಲು ಶಿಫಾರಸ್ಸುಗಳನ್ನು ಮಾಡುವುದು;

(iv) ವಿಶ್ವವಿದ್ಯಾಲಯಕ್ಕೆ, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ವಿನಿಯಮಗಳನ್ನು ರಚಿಸುವುದು ಮತ್ತು ಪ್ರವೇಶ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವುದು;

(v) ಪದವಿಗಳು, ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಬೇಕಾದ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ರಚಿಸುವುದು;

(vi) ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧಪಡುವ ವಿನಿಯಮಗಳನ್ನು ರಚಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದು ಮತ್ತು ಸುಧಾರಿಸುವುದು;

(vii) ಗೌರವ ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(viii) ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಮತ್ತು ಸೇವಾ ಸಿಬ್ಬಂದಿಗೆ ನಿಯಮಿಸತಕ್ಕ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸು ಮಾಡುವುದು;

(ix) ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳೊಡನೆ ವಾಗ್ದಾನ ಪತ್ರ ಮತ್ತು ಒಪ್ಪಂದ ಪತ್ರಗಳನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು;

(x) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಮಂಡಳಿಯು ಅಥವಾ ಕುಲಪತಿಯವರು ತನಗೆ ವಹಿಸಬಹುದಾದಂತಹ ಅಥವಾ ವಿಧಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

16. ಸಂಶೋಧನಾ ಪರಿಷತ್ತು.– ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಸಂಶೋಧನಾ ಪರಿಷತ್ತು ಇರತಕ್ಕದ್ದು, ಎಂದರೆ:-

(i) ಕುಲಪತಿಯವರು – ಇವರು ಅಧ್ಯಕ್ಷರಾಗಿರತಕ್ಕದ್ದು;

(ii) ಕೃಷಿ ಇಲಾಖೆ ನಿರ್ದೇಶಕರು;

(iii) ವ್ಯವಸಾಯೋತ್ಪನ್ನಗಳ ಮಾರಾಟ ಇಲಾಖೆ ನಿರ್ದೇಶಕರು;

(iv) ತೋಟಗಾರಿಕೆ ಇಲಾಖೆ ನಿರ್ದೇಶಕರು;

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು;

(vi) ರೇಷ್ಮೆ ಇಲಾಖೆ ನಿರ್ದೇಶಕರು;

(vii) ಜಲವಿಭಾಜಕ ಪ್ರದೇಶ ನಿರ್ವಹಣೆ ಇಲಾಖೆ ನಿರ್ದೇಶಕರು;

(viii) ಅರಣ್ಯ, ಸಂಶೋಧನೆ ಮತ್ತು ತರಬೇತಿಯ ಮುಖ್ಯ ಸಂರಕ್ಷಣಾಧಿಕಾರಿ;

(ix) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು;

(x) ಘಟಕ ಕಾಲೇಜುಗಳ ಎಲ್ಲಾ ಡೀನುಗಳು;

(xi) ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಎಲ್ಲಾ ಸಹವರ್ತಿ ನಿರ್ದೇಶಕರುಗಳು;

(xii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xiii) ಕೃಷಿ ಮತ್ತು ಸಂಬಂಧಿಸಿದ ವಿಭಾಗಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ರೈತರ ವಿಶೇಷ ಜ್ಞಾನ ಮತ್ತು ಅನುಭವದ ಪ್ರಯೋಜನವನ್ನು ಪಡೆದು ಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂತಹ ಇಬ್ಬರು ಪ್ರಗತಿಪರ ರೈತರು;

(xiv) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ, ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ವಿಜ್ಞಾನಿ;

(xv) ಯಾವುದೇ ಸಭೆಯ ಸಂಬಂಧದಲ್ಲಿ ಅಂತಹ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಬಗ್ಗೆ ಕೃಷಿ ಕೈಗಾರಿಕೋದ್ಯಮಿಯ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆಯುವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ ಮಾಡಿದ, ಒಬ್ಬ ಕೃಷಿ ಕೈಗಾರಿಕೋದ್ಯಮಿ;

(xvi) ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಮುಖ್ಯ ಇಂಜಿನಿಯರ್;

(xvii) ಕುಲಸಚಿವರು;

(xviii) ಸಂಶೋಧನಾ ನಿರ್ದೇಶಕರು ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಸಂಶೋಧನಾ ಪರಿಷತ್ತಿನ ಎಲ್ಲಾ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮ ನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

17. ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು.– ಸಂಶೋಧನಾ ಪರಿಷತ್ತು ಈ ಮುಂದಿನವುಗಳಿಗೆ ಸಂಬಂಧಿಸಿದವುಗಳನ್ನು ಪರಿಗಣಿಸತಕ್ಕದ್ದು ಮತ್ತು ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(i) ಪರಿಣಾಮಕಾರಿಯಾಗಿ ಸಮನ್ವಯವನ್ನು ಸಾಧಿಸುವ ದೃಷ್ಟಿಯಿಂದ ಕೃಷಿ ಮತ್ತು ಇತರ ಸಂಬಂಧಿತ ವಿಜ್ಞಾನಗಳ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ವಿವಿಧ ಘಟಕಗಳು ಕೈಗೊಂಡ ಅಥವಾ ಕೈಗೊಳ್ಳಬೇಕಾದ ಸಂಶೋಧನಾ ಕಾರ್ಯಕ್ರಮಗಳು ಮತ್ತು ಯೋಜನೆಗಳು;

(ii) ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಭೌತಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸೌಲಭ್ಯಗಳು;

(iii) ರೈತರ ಮತ್ತು ಇತರ ಹಿತಾಸಕ್ತಿದಾರರ ಅಗತ್ಯತೆಗಳನ್ನು ಪೂರೈಸುವ ಕಡೆಗೆ ಸಂಶೋಧನೆಯ ಅಭಿಮುಖವಾಗಿರುವಂತೆ ಮಾಡುವುದು.

(iv) ಸಂಶೋಧನೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯನ್ನು ಪೋಷಿಸುವುದು ಮತ್ತು ಸಮನ್ವಯಗೊಳಿಸುವುದು;

(v) ಕುಲಪತಿಯವರು ಅಥವಾ ಮಂಡಲಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲಿಸಲು ಕಳುಹಿಸಬಹುದಾದ ಸಂಶೋಧನಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಯಾವುದೇ ಇತರೆ ವಿಷಯ.

18. ವಿಸ್ತರಣಾ ಶಿಕ್ಷಣ ಪರಿಷತ್ತು.– (1) ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ವಿಸ್ತರಣಾ ಶಿಕ್ಷಣ ಪರಿಷತ್ತು ಇರತಕ್ಕದ್ದು ಎಂದರೆ.–

(i) ಕುಲಪತಿಯವರು – ಅಧ್ಯಕ್ಷರು

(ii) ಕೃಷಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(iii) ಕರ್ನಾಟಕ ಸರ್ಕಾರದ ವ್ಯವಸಾಯೋತ್ಪನ್ನಗಳ ಮಾರಾಟ ಇಲಾಖೆ ನಿರ್ದೇಶಕರು.

(iv) ತೋಟಗಾರಿಕೆ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(v) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(vi) ರೇಷ್ಮೆ ಇಲಾಖೆಯ ನಿರ್ದೇಶಕರು, ಕರ್ನಾಟಕ ಸರ್ಕಾರ.

(vii) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಮಾಜ ಅರಣ್ಯ ವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ.

(viii) ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ.

(ix) ವಿಶ್ವವಿದ್ಯಾಲಯದ ಎಲ್ಲಾ ನಿರ್ದೇಶಕರು ಮತ್ತು ಡೀನ್‌ಗಳು.

(x) ಕುಲಸಚಿವರು.

(xi) ಸಂಶೋಧನೆಯ ಎಲ್ಲಾ ಸಹವರ್ತಿ ನಿರ್ದೇಶಕರು ಮತ್ತು ವಿಸ್ತರಣೆ ಶಿಕ್ಷಣದ ಸಹವರ್ತಿ ನಿರ್ದೇಶಕರುಗಳು.

(xii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು;

(xii) ಕೃಷಿ ಮತ್ತು ಇತರ ಸಂಬಂಧಿತ ಶಾಖೆಗಳಲ್ಲಿ ವಿಶೇಷ ಪರಿಣಿತಿಯುಳ್ಳ, ಪ್ರಗತಿಪರ ರೈತರ ವಿಶೇಷ ಜ್ಞಾನ ಹಾಗೂ ಅನುಭವದ ಪ್ರಯೋಜನವನ್ನು ಪಡೆದುಕೊಳ್ಳಲು ಕುಲಪತಿಯವರು ನಾಮನಿರ್ದೇಶನ ಮಾಡಿದಂಥ ಇಬ್ಬರು ಪ್ರಗತಿಪರ ರೈತರು;

(xiv) ಯಾವುದೇ ಸಭೆಯ ಸಂಬಂಧದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳು ವುದಕ್ಕಾಗಿ ಕುಲಪತಿಯವರು ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಒಬ್ಬ ಖ್ಯಾತ ವಿಸ್ತರಣಾ ಶಿಕ್ಷಣ ತಜ್ಞರು;

(xv) ಯಾವುದೇ ಸಭೆಯ ಸಂದರ್ಭದಲ್ಲಿ ಅಂಥ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಅವರ ವಿಶೇಷ ಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳು ವುದಕ್ಕಾಗಿ ಕುಲಪತಿಯವರು ನಾಮ ನಿರ್ದೇಶನ

ಮಾಡಿದ ಒಬ್ಬ ವ್ಯವಸಾಯೋದ್ಯಮಿಗಳು;

(xii) ಕುಲಪತಿಯವರ ಕೋರಿಕೆಗನುಸಾರ ಐವರಿಗೆ ಮಿತಿಗೊಳಿಸಿದ ಈ ಮುಂದಿನ ಸಂಸ್ಥೆಗಳ ಒಬ್ಬೊಬ್ಬ ಪ್ರತಿನಿಧಿ,–

(ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

(ಬಿ) ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ.

(ಸಿ) ಕರ್ನಾಟಕ ವ್ಯವಸಾಯೋದ್ಯಮಗಳ ಅಭಿವೃದ್ಧಿ ನಿಗಮ.

(ಡಿ) ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ.

(ಇ) ಭಾರತದ ರಸಗೊಬ್ಬರ ನಿಗಮ.

(ಎಫ್) ರಾಷ್ಟ್ರೀಯ ಬೀಜಗಳ ನಿಗಮ

(ಜಿ) ಯಾವುದೇ ಇತರ ವ್ಯವಸಾಯೋದ್ಯಮ ಅಥವಾ ವ್ಯವಸಾಯ ಸೇವಾಸಂಸ್ಥೆ/ಬೀಜ ಕಂಪೆನಿಗಳು.

(ಎಚ್) ಕರ್ನಾಟಕ ರಾಜ್ಯ ಬೀಜಗಳ ನಿಗಮ.

(ಐ) ಕರ್ನಾಟಕ ರಾಜ್ಯ ಬೀಜ ಪ್ರಮಾಣಪತ್ರ ನೀಡಿಕೆ ಏಜೆನ್ಸಿ.

(ಜೆ) ಸಂಬಂಧಿತ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಸರ್ಕಾರೇತರ ಸಂಸ್ಥೆ.

(ಕೆ) ವಿಸ್ತರಣಾ ನಿರ್ದೇಶಕರು–ಸದಸ್ಯ ಕಾರ್ಯದರ್ಶಿ.

(2) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ವಿಸ್ತರಣಾ ಶಿಕ್ಷಣ ಪರಿಷತ್ತಿನ ಎಲ್ಲಾ ಸದಸ್ಯರುಗಳ ಪದಾವಧಿಯು ಎರಡು ವರ್ಷಗಳಾಗಿ ರತಕ್ಕದ್ದು ಮತ್ತು ಅವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಮರುನಾಮನಿರ್ದೇಶನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

19. ವಿಸ್ತರಣಾ ಶಿಕ್ಷಣ ಪರಿಷತ್ತಿನ ಪ್ರಕಾರ್ಯಗಳು.– ವಿಸ್ತರಣಾ ಶಿಕ್ಷಣ ಪರಿಷತ್ತು ಈ ಮುಂದಿನವುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು ಎಂದರೆ:–

(i) ವಿಶ್ವವಿದ್ಯಾಲಯದ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ಮತ್ತು ಯೋಜನೆಗಳು.

(ii) ಕೃಷಿ ಮತ್ತು ಸಂಬಂಧಿತ ಶಾಖೆಗಳ ಸುಧಾರಣೆಗಾಗಿ ಮತ್ತು ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗಾಗಿ, ವಿಸ್ತರಣಾ ಶಿಕ್ಷಣವನ್ನು ಸಮನ್ವಯಗೊಳಿಸುವುದು.

(iii) ರೈತರ ಶಿಕ್ಷಣ ಮತ್ತು ತರಬೇತಿಯನ್ನು ಮತ್ತು ಸಲಹಾ ಸೇವೆಗಳನ್ನು ಅಭಿವೃದ್ಧಿಗೊಳಿಸುವುದು.

(iv) ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು ಮತ್ತು ಮಾಹಿತಿಯ ಪ್ರಸಾರ ಮಾಡುವುದು.

(v) ವಿಸ್ತರಣಾ ಶಿಕ್ಷಣದ ವಿಧಾನ:

(vi) ಕೃಷಿ ವಿಜ್ಞಾನ ಕೇಂದ್ರದ ಕೆಲಸಕಾರ್ಯಗಳ ಮೌಲ್ಯ ಮಾಪನ ಮಾಡುವುದು;

(vii) ಕುಲಪತಿಯವರು ಮಂಡಳಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರವು ತನಗೆ ಪರಿಶೀಲನೆಗಾಗಿ ಕಳುಹಿಸಿಕೊಟ್ಟ ಯಾವುದೇ ಇತರ ವಿಷಯ.

20. ಅಧ್ಯಯನ ಮಂಡಳಿ.- (1) ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಬೇರೆ ಬೇರೆ ಅಧ್ಯಯನ ಮಂಡಳಿಯಿರತಕ್ಕದ್ದು. ಅಧ್ಯಯನ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

(2) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಶಿಕ್ಷಣ ಇಲಾಖೆ ನಿರ್ದೇಶಕರು – ಅಧ್ಯಕ್ಷರು.

(ii) ಎಲ್ಲಾ ಘಟಕ ಕಾಲೇಜುಗಳ ಡೀನ್‌ಗಳು.

(iii) ಕುಲಪತಿಯವರು ನಾಮನಿರ್ದೇಶಿಸಿದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಸಂಯೋಜಿತ ಕಾಲೇಜಿನ ಒಬ್ಬರು ಪ್ರತಿನಿಧಿ.

(iv) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣ ನಿರ್ದೇಶಕರು.

(v) ಕುಲಸಚಿವರು.

(vi) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vii) ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ, ಅಧ್ಯಕ್ಷರು ನಾಮನಿರ್ದೇಶನದ ಇಲಾಖಾ ಮುಖ್ಯಸ್ಥರಲ್ಲದ ವಿಶ್ವವಿದ್ಯಾಲಯದ ಪ್ರತಿಯೊಂದು ಇಲಾಖೆಯ ಒಬ್ಬ ಪ್ರೊಫೆಸರ್.

(ix) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹವರ್ತಿ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(x) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಸಹಾಯಕ ಪ್ರೊಫೆಸರರ ಕೇಡರ್‌ನಲ್ಲಿನ ಐವರು ಅಧ್ಯಾಪಕರು.

(xi) ಎರಡು ವರ್ಷಗಳ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡಿರುವ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ಪ್ರಖ್ಯಾತ ಪ್ರೊಫೆಸರುಗಳು.

(xii) ವಿಶ್ವವಿದ್ಯಾಲಯ ಕುಲಪತಿಯವರು ನಾಮನಿರ್ದೇಶನ ಮಾಡಿದ ಕಾಲೇಜಿನ ಒಬ್ಬರು ಡೀನ್ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.

(3) ಪದವಿ ಕಾರ್ಯಕ್ರಮಗಳಿಗೆ ಅಧ್ಯಯನ ಮಂಡಳಿಗಳ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(i) ಪದವಿ ಬೋಧನಾ ಕಾರ್ಯಕ್ರಮದ ಅಡಿಯಲ್ಲಿ ಪುನರಾವಲೋಕನ ಮಾಡುವುದು ಮತ್ತು ಅದರ ಸುಧಾರಣೆಗಳಿಗೆ ಸಲಹೆ ನೀಡುವುದು;

(ii) ಅಧ್ಯಯನಗಳ ಮಂಡಳಿಯು ರಚಿಸಿದಂಥ ಕೋರ್ಸುಗಳು, ಪಠ್ಯವಿಷಯಗಳು, ಸಮಿತಿ ಅಥವಾ ಅದೇ ತರಹದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅವನ್ನು ಪರ್ಯಾಲೋಚನೆ ಮತ್ತು

ಅಂಗೀಕಾರಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ಗೊತ್ತುಪಡಿಸಬಹುದಾಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು;

(4) ಸ್ನಾತಕೋತ್ತರ ಕಾರ್ಯಕ್ರಮಗಳಿಗಾಗಿ ಅಧ್ಯಯನಗಳ ಮಂಡಳಿಯ ರಚನೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(i) ಶಿಕ್ಷಣ ಇಲಾಖೆಯ ನಿರ್ದೇಶಕರು – ಅಧ್ಯಕ್ಷರು.

(ii) ಸಂಯೋಜಿತ ಕಾಲೇಜುಗಳ ಡೀನ್‌ಗಳು.

(iii) ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ಶಿಕ್ಷಣದ ನಿರ್ದೇಶಕರು.

(iv) ಕುಲಸಚಿವರು.

(v) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್.

(vi) ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರು.

(vii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹವರ್ತಿ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(viii) ಸುತ್ತು ಸರದಿಯ ಆಧಾರದ ಮೇಲೆ ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ಸಹಾಯಕ ಪ್ರೊಫೆಸರ್ ದರ್ಜೆಯ ಹತ್ತು ಜನ ಸ್ನಾತಕೋತ್ತರ ಅಧ್ಯಾಪಕರು.

(ix) ಎರಡು ವರ್ಷಗಳ ಅವಧಿಗಾಗಿ ಅಧ್ಯಕ್ಷರು ನಾಮನಿರ್ದೇಶಿಸಿದ ವಿಶ್ವವಿದ್ಯಾಲಯಕ್ಕೆ ಹೊರಗಿನವರಾದ ಇಬ್ಬರು ಖ್ಯಾತ ಪ್ರೊಫೆಸರ್‌ಗಳು.

(x) ಸ್ನಾತಕೋತ್ತರ ವ್ಯಾಸಂಗದ ಡೀನ್ ಅವರು ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸತಕ್ಕದ್ದು.

(5) ಸ್ನಾತಕೋತ್ತರ ವ್ಯಾಸಂಗ ಕ್ರಮದ ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ಸ್ನಾತಕೋತ್ತರ ಮತ್ತು ಡಿಪ್ಲೊಮಾ ಬೋಧನ ಕಾರ್ಯಕ್ರಮಗಳ ಪುನರಾವಲೋಕನ ಮಾಡುವುದು ಮತ್ತು ಅವುಗಳ ಸುಧಾರಣೆಗೆ ಸಲಹೆಗಳನ್ನು ನೀಡುವುದು;

(ii) ಅಧ್ಯಯನ ಮಂಡಳಿಯು ರಚಿಸಿದ ವ್ಯಾಸಂಗ ಕ್ರಮಗಳು, ಪಠ್ಯಕ್ರಮಗಳ, ಸಮಿತಿಗಳು ಅಥವಾ ಅಂತಹುದೇ ಸಮಿತಿಗಳ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಅವುಗಳನ್ನು ಪರ್ಯಾಲೋಚನೆ ಮತ್ತು ಅನುಮೋದನೆಗಾಗಿ ಮಂಡಿಸುವುದು;

(iii) ವಿದ್ಯಾವಿಷಯಕ ಪರಿಷತ್ತು ಅಥವಾ ಕುಲಪತಿಯವರು ವಹಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

21. ಸಮಿತಿಗಳ ರಚನೆ.– ಪ್ರತಿಯೊಂದು ಪ್ರಾಧಿಕಾರವು ಸಮಿತಿಗಳನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸಮಿತಿಯು ಈ ಅಧಿನಿಯಮ ಅಥವಾ ಶಾಸನಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಪ್ರಾಧಿಕಾರದ ಸದಸ್ಯರುಗಳ ಅಥವಾ ತಾನು ಸರಿಯೆಂದು ಭಾವಿಸಬಹುದಾದ ಇತರ ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು.

22. ಪ್ರಾಧಿಕಾರಗಳ ಸದಸ್ಯತ್ವದ ಸಂಬಂಧದಲ್ಲಿ ಉಪಬಂಧ.– (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಯಾವುದೇ ಸದಸ್ಯರು ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಅಥವಾ ಅನ್ಯಥಾ ಹಾಜರಾಗಲು ಅಥವಾ ತನ್ನ ಪೂರ್ಣ ಪದಾವಧಿಯನ್ನು ಪೂರ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ, ಹಾಗೆ ಉಂಟಾದ ಖಾಲಿ ಸ್ಥಾನವನ್ನು ಅನುಕೂಲವಾದಷ್ಟು ಬೇಗನೆ, ಸಂದರ್ಭಾನುಸಾರ, ನೇಮಕಾತಿ, ನಾಮ ನಿರ್ದೇಶನ ಅಥವಾ ಸಹ ಸದಸ್ಯನನ್ನಾಗಿ ಸೇರಿಸುವಿಕೆಯಿಂದ ಭರ್ತಿಗೊಳಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ, ನಾಮನಿರ್ದೇಶಿತನಾದ ಅಥವಾ ಸಹ ಸದಸ್ಯನಾಗಿ ಸೇರಿಕೊಂಡ ವ್ಯಕ್ತಿಯು, ಅಂಥ ಖಾಲಿ ಸ್ಥಾನವನ್ನು ತಾನು ಯಾರ ಸ್ಥಾನದಲ್ಲಿ ನೇಮಕಗೊಂಡಿರುವನೋ, ನಾಮ

ನಿರ್ದೇಶಿತನಾಗಿರುವನೋ ಅಥವಾ ಸಹ ಸದಸ್ಯನಾಗಿ ಸೇರಿಕೊಂಡಿರುವನೋ ಆ ವ್ಯಕ್ತಿಯು ಸದಸ್ಯನ ಸ್ಥಾನದಲ್ಲಿ ಮುಂದುವರೆಯುತ್ತಿದ್ದ ಉಳಿದ ಭಾಗದ ಅವಧಿಗೆ ಅಂಥ ಖಾಲಿ ಸ್ಥಾನವನ್ನು ಭರ್ತಿಗೊಳಿಸತಕ್ಕದ್ದು.

(2) ಮಂಡಳಿಯು ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ನಿಕಾಯದ ಸದಸ್ಯನಾದ ಯಾವುದೇ ವ್ಯಕ್ತಿಯನ್ನು ಅಂಥ ವ್ಯಕ್ತಿಯು ನೈತಿಕ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯೆಂದು ಅಥವಾ ಸಂಬಂಧಪಟ್ಟ ಸದಸ್ಯನು ನಿರ್ವಹಿಸುತ್ತಿರುವ ಹುದ್ದೆಯ ಘನತೆಗೆ ಆತನ ನಡತೆಯು ಸರಿಹೊಂದುತ್ತಿಲ್ಲವೆಂಬ ಕಾರಣದ ಮೇಲೆ ಕುಲಾಧಿಪತಿಯವರ ಅನುಮೋದನೆ ಪಡೆದು ಸದಸ್ಯತ್ವದಿಂದ ತೆಗೆದು ಹಾಕಬಹುದು. ಅಂಥ ವ್ಯಕ್ತಿಯು ಸಕ್ಷಮ ನ್ಯಾಯಾಲಯದಿಂದ ಹಾಗೆ ಅಪರಾಧಿಯಾಗಿ ನಿರ್ಣೀತನಾಗಿದ್ದರೆ ಕುಲಾಧಿಪತಿಯವರ ಪೂರ್ವಾನುಮೋದನೆಯು ಅವಶ್ಯಕವಾಗುವುದಿಲ್ಲ.

ಪರಂತು, ಯಾವುದೇ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ಹೊರತು ಅವರ ವಿರುದ್ಧ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಬೇರೊಂದು ನಿಕಾಯದ ಸದಸ್ಯನಾದ ಯಾವನೇ ವ್ಯಕ್ತಿಯು ಆ ಸಂಸ್ಥೆಯು ವಿಶ್ವವಿದ್ಯಾಲಯದ ಒಂದು ನಿಕಾಯವಾಗಿರಲಿ ಇಲ್ಲದಿರಲಿ, ಅದರ ಪ್ರತಿನಿಧಿಯಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ಸಂದರ್ಭದಲ್ಲಿ, ಆತನು ತನ್ನ ಸದಸ್ಯತ್ವದ ಅವಧಿ ಮುಕ್ತಾಯವಾಗುವುದಕ್ಕಿಂತ ಮುಂಚೆ, ತನ್ನನ್ನು ನೇಮಿಸಿದ ಅಥವಾ ನಾಮನಿರ್ದೇಶನ ಮಾಡಿದ ನಿಕಾಯದ ಸದಸ್ಯನಾಗಿರುವುದು ಮುಕ್ತಾಯವಾಗಿದ್ದರೆ, ವಿಶ್ವವಿದ್ಯಾಲಯದ ಆ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು.

(4) ಯಾವುದೇ ವ್ಯಕ್ತಿಯು ತಾನು ಹೊಂದಿರುವ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿರುವಲ್ಲೆಲ್ಲಾ, ತನ್ನ ಸದಸ್ಯತ್ವದ ಅವಧಿಯು ಮುಕ್ತಾಯವಾಗುವ ಮುನ್ನವೆ ಆತ ಆ ಹುದ್ದೆಯಲ್ಲಿರುವುದು ನಿಂತುಹೋದರೆ,

ಆತ/ಆಕೆಯು ಹೊಂದಿರುವ ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯತ್ವವೂ ನಿಂತುಹೋಗತಕ್ಕದ್ದು:

ಪರಂತು, ನಾಲ್ಕು ತಿಂಗಳಿಗೆ ಮೀರದ ಅವಧಿಗೆ ಆತನು ರಜೆಯ ಮೇಲೆ ಹೋಗಿದ್ದರೆ ಅದನ್ನು ಆತನು ಹುದ್ದೆಯಲ್ಲಿರುವುದು ನಿಂತು ಹೋಗಿದೆಯೆಂದು ಭಾವಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಪದನಿಮಿತ್ತ ಸದಸ್ಯನಲ್ಲದ ಇತರ ಯಾವುದೇ ಸದಸ್ಯನು ಕುಲಪತಿಯವರ ವಿಳಾಸಕ್ಕೆ ಒಂದು ಪತ್ರವನ್ನು ಬರೆದು ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆಬರತಕ್ಕದ್ದು.

23. ಕ್ರಮಗಳ ಸಿಂಧುತ್ವ ಮತ್ತು ಅದಕ್ಕೆ ರಕ್ಷಣೆ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಅದರ ಸದಸ್ಯರುಗಳ ಸ್ಥಾನಗಳಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣದಿಂದಾಗಿ ಅಥವಾ ಯಾವೊಬ್ಬ ವ್ಯಕ್ತಿಯು ಮೊದಲು ವ್ಯವಹರಣೆಗಳಲ್ಲಿ ಭಾಗವಹಿಸಿದ್ದು ನಂತರ ಹಾಗೆ ಮಾಡಲು ಹಕ್ಕುಳ್ಳವನಲ್ಲ ವೆಂದು ಕಂಡುಬಂದ ಕಾರಣದಿಂದಾಗಿ ಅಸಿಂಧುವಾಗತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾಲಯದಿಂದ ಅಥವಾ ಅದರ ಪ್ರಾಧಿಕಾರಗಳಿಂದ ಸದ್ಭಾವನೆಯಿಂದ ಕೈಗೊಂಡ ಎಲ್ಲಾ ಕ್ರಮಗಳು ಅಥವಾ ಹೊರಡಿಸಿದ ಎಲ್ಲಾ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳನ್ನು ಅನುಸರಿಸಿ ಮಾಡಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಅಥವಾ ಅದರ ಪ್ರಾಧಿಕಾರದ ವಿರುದ್ಧವಾಗಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಅಥವಾ ಹಾನಿ ಪರಿಹಾರವನ್ನು ಕ್ಲೈಮು ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿರುವ ಯಾವುದೇ ಶಾಸನಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯ ಯಾವೊಬ್ಬ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

ಅಧ್ಯಾಯ - IV
ವಿಶ್ವವಿದ್ಯಾಲಯದ ಅಧಿಕಾರಿಗಳು

24. ವಿಶ್ವವಿದ್ಯಾಲಯದ ಅಧಿಕಾರಿಗಳು.– ಈ ಮುಂದಿನವರುಗಳು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು;
(ii) ಸಹ ಕುಲಾಧಿಪತಿಯವರು;
(iii) ಕುಲಪತಿಯವರು;
(iv) ನಿರ್ದೇಶಕರುಗಳು;
(v) ಡೀನ್‌ಗಳು;
(vi) ಕುಲಸಚಿವರು;
(vii) ವಿಶ್ವವಿದ್ಯಾಲಯ ಗ್ರಂಥಪಾಲಕರು;
(viii) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್;
(ix) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸ ಬಹುದಾದಂತಹ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಇತರ ಅಧಿಕಾರಿಗಳು; ಮತ್ತು
(x) ಲೆಕ್ಕ ನಿಯಂತ್ರಕರು;

25. ಕುಲಾಧಿಪತಿ.– (1) ಕರ್ನಾಟಕ ರಾಜ್ಯದ ರಾಜ್ಯಪಾಲರು ತಮ್ಮ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ ವಿಶ್ವವಿದ್ಯಾಲಯದ ಘಟಿಕೋತ್ಸವಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಗೌರವ ಪದವಿಯನ್ನು ನೀಡುವ ಪ್ರತಿಯೊಂದು ಪ್ರಸ್ತಾವಕ್ಕೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿ ಕುಲಾಧಿಪತಿಯವರು ಸ್ಥಿರೀಕರಿಸಿರತಕ್ಕದ್ದು.

(4) ಈ ಅಧಿನಿಯಮ ಮತ್ತು ಶಾಸನಗಳಿಗೆ ಅನುಸಾರವಾಗಿರದ ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿ ಅಥವಾ ಪ್ರಾಧಿಕಾರದ ಯಾವುದೇ ಆದೇಶ ಅಥವಾ ವ್ಯವಹರಣೆಗಳನ್ನು ಕುಲಾಧಿಪತಿಯವರು ಲಿಖಿತದ ಆದೇಶದ ಮೂಲಕ ಶೂನ್ಯಗೊಳಿಸಬಹುದು :

ಪರಂತು ಅಂತಹ ಆದೇಶವನ್ನು ಹೊರಡಿಸುವ ಮೊದಲು ಅವರು ಅಂತಹ ಆದೇಶವನ್ನು ಏಕೆ ಹೊರಡಿಸಬಾರದು ಎಂದು ಕಾರಣ ಕೇಳುವ ನೋಟೀಸನ್ನು ಸಂಬಂಧಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಅಂತಹ ಆದೇಶದಲ್ಲಿ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಕಾರಣವನ್ನು ನೀಡಿದಲ್ಲಿ ಅದನ್ನು ಅವರು ಪರಿಗಣಿಸತಕ್ಕದ್ದು.

(5) ಕುಲಾಧಿಪತಿಯವರು ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ತಮಗೆ ಪ್ರದತ್ತವಾದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

26. ಸಹಕುಲಾಧಿಪತಿಯವರು.– (1) ಕರ್ನಾಟಕ ರಾಜ್ಯದ ಕೃಷಿ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅದರಡಿಯಲ್ಲಿ ಅಥವಾ ಶಾಸನಗಳ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂತಹ ಕುಲಾಧಿಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಕುಲಾಧಿಪತಿಯವರು ಸಹಕುಲಾಧಿಪತಿಯವರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂತಹ ಕುಲಾಧಿಪತಿಯವರ

ಅಧಿಕಾರಗಳನ್ನು ಸಹ ಅವರು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಹಾಗೂ ಅಂತಹ ಪ್ರತ್ಯಾಯೋಜನೆಯು ಆದೇಶದಲ್ಲಿ ನಿರ್ದಿಷ್ಟಪಡಿಸಿದಂತಹ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು.

(3) ಅವರು ಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

27. ಕುಲಪತಿಯವರು .– (1) ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

(i) ಮಹಾ ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು;

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು;

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ರಾಜ್ಯ ಸರ್ಕಾರವು ಅಂತಹ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡತಕ್ಕದ್ದು. ಕೃಷಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಸರ್ಕಾರದ ಉಪ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

(3) ಶೋಧನಾ ಸಮಿತಿಯು ಖ್ಯಾತ ಕೃಷಿ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ಅಕಾರದಿಯಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು ಕುಲಾಧಿಪತಿಯವರಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಕುಲಾಧಿಪತಿಯವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಸದರಿ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು:

ಪರಂತು, ಕುಲಾಧಿಪತಿಯವರು, ಅವಶ್ಯವಿದ್ದಲ್ಲಿ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೇ ಪಟ್ಟಿಯನ್ನು ಕೇಳಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಕಳುಹಿಸತಕ್ಕದ್ದು ಮತ್ತು ಅದು ಅಂತಿಮವಾಗಿರತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(5) ಕುಲಪತಿಯವರು ನಾಲ್ಕು ವರ್ಷಗಳವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷಗಳಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣೆಯನ್ನು ಮಾಡಿರತಕ್ಕದ್ದು. ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(6) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದಲ್ಲ.

(7) ಕುಲಪತಿಯವರು ಕುಲಾಧಿಪತಿಯವರಿಗೆ ರಾಜಿನಾಮೆ ಪತ್ರವನ್ನು ಬರೆದು ತನ್ನ ಸಹಿ ಹಾಕಿ ತಾನು ಬಿಡುಗಡೆಗೊಳ್ಳಲು ಇಚ್ಛಿಸುವ ದಿನಾಂಕ ದಿಂದ ಅರವತ್ತು ದಿನಗಳಿಗೆ ಮೊದಲು ಅದನ್ನು ಕುಲಾಧಿಪತಿಯವರಿಗೆ ಕಳುಹಿಸುವ ಮೂಲಕ ತನ್ನ ಸ್ಥಾನವನ್ನು ತ್ಯಜಿಸಬಹುದು ಆದರೆ ಕುಲಾಧಿಪತಿಯವರು ಅವರನ್ನು ಅದಕ್ಕೂ ಮೊದಲೇ ಬಿಡುಗಡೆಗೊಳಿ ಸಬಹುದು.

(8) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದರೆ ಅಥವಾ ಅವರ ರಜೆಯ ಕಾರಣದಿಂದಾಗಿ ಗೈರುಹಾಜರಾದಲ್ಲಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಖಾಲಿಯಾದರೆ ಶಿಕ್ಷಣ ನಿರ್ದೇಶಕರು ಮತ್ತು ಶಿಕ್ಷಣ ನಿರ್ದೇಶಕರ ಗೈರು ಹಾಜರಿಯಲ್ಲಿ, ಕುಲಸಚಿವರು ಅಥವಾ ಕೇಂದ್ರ ಕಾರ್ಯಸ್ಥಾನದಲ್ಲಿರುವ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ನಿರ್ದೇಶಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯ ಗಳನ್ನು ನಿರ್ವಹಿಸಬಹುದು. ಆದರೆ ಅವರ ಪದಾವಧಿಯು ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

(9) ಕುಲಪತಿಯವರನ್ನು, ಅವರ ದುರ್ನಡತೆಯ ಕಾರಣದ ಮೇಲೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಥವಾ ಕುಲಪತಿಯವರು ತಮ್ಮ ಪದದಲ್ಲಿ ಮುಂದುವರಿಯುವುದರಿಂದ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ದಕ್ಕೆ ಉಂಟಾಗುತ್ತದೆಂದು ಕುಲಾಧಿಪತಿಯವರು ಮನಗಂಡರೆ ಆಗ ಕುಲಾಧಿಪತಿಯವರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯವರನ್ನು ಅಥವಾ ನ್ಯಾಯಮೂರ್ತಿ ಆಗಿದ್ದವರನ್ನು ನಾಮನಿರ್ದೇಶನ ಮಾಡಿ ಅವರಿಂದ ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಆ ವಿಚಾರಣೆಯಲ್ಲಿ ಕುಲಪತಿಯವರಿಗೆ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿ, ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು ಅನ್ಯಥಾ ಕುಲಪತಿಯವರನ್ನು ಅವರ ಸ್ಥಾನದಿಂದ ತೆಗೆಯತಕ್ಕದ್ದಲ್ಲ.

28. ವಿಶೇಷಾಧಿಕಾರಿ.– (1) ಸರ್ಕಾರವು ಒಬ್ಬ ಅಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ವಿಶೇಷಾಧಿಕಾರಿಯು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದು ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿಶ್ವವಿದ್ಯಾಲಯದ ಕುಲಪತಿಗಳ ಅಧಿಕಾರ ಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ವಿಶೇಷಾಧಿಕಾರಿಯು ಮೊದಲನೇ ಕುಲಪತಿಯವರು ನೇಮಕವಾ ಗುವವರೆಗೆ ಪದಧಾರಣೆಯನ್ನು ಮಾಡಿರುತ್ತಾರೆ.

29. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.– (1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಶೈಕ್ಷಣಿಕ ಅಧಿಕಾರಿ ಮತ್ತು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ ಮತ್ತು ಇತರ ಪ್ರಾಧಿಕಾರಗಳ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಹಾಗೂ ಕುಲಾಧಿಪತಿಯವರ ಮತ್ತು ಸಹಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಪದವಿಗಳನ್ನು ಪಡೆಯಲು ಅರ್ಹರಾದವರಿಗೆ ಪದವಿಗಳನ್ನು ಪ್ರದಾನ ಮಾಡತಕ್ಕದ್ದು.

(2) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಶಿಸ್ತನ್ನು ಕಾಪಾಡುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(3) ಕುಲಪತಿಯವರು ಮಂಡಳಿಯ, ವಿದ್ಯಾವಿಷಯಕ ಪರಿಷತ್ತಿನ, ಸಂಶೋಧನಾ ಪರಿಷತ್ತಿನ ವಿಸ್ತರಣಾ ಶಿಕ್ಷಣ ಪರಿಷತ್ತಿನ ಸಭೆಗಳನ್ನು ಏರ್ಪಡಿಸತಕ್ಕದ್ದು.

(4) ಕುಲಪತಿಯವರು ಈ ಅಧಿನಿಯಮದ, ಶಾಸನಗಳ ಮತ್ತು ವಿನಿಯಮಗಳ ಉಪಬಂಧಗಳು ಸರಿಯಾಗಿ ಪಾಲನೆಯಾಗುವಂತೆ ನೋಡಿಕೊಳ್ಳತಕ್ಕದ್ದು.

(5) ಕುಲಪತಿಯವರು ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಳಿಗೆ ಮಂಡಿಸುವುದಕ್ಕೆ ಹೊಣೆಗಾರ ರಾಗಿರತಕ್ಕದ್ದು.

(6) ಕುಲಪತಿಯವರು ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭ ದಲ್ಲಿ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ ಅವರು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು. ಅಂತಹ ಸಂದರ್ಭದಲ್ಲಿ ಅವರು ತದನಂತರ ತಾನು ಕೈಗೊಂಡ ಕ್ರಮಗಳ ಬಗ್ಗೆ, ಆದಷ್ಟು ಬೇಗನೆ ಒಂದು ವರದಿಯನ್ನು ಸಾಮಾನ್ಯವಾಗಿ ಅಂತಹ ವಿಷಯಗಳನ್ನು ನಿರ್ವಹಿಸುವ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಸಲ್ಲಿಸತಕ್ಕದ್ದು. ಕುಲಪತಿ ಯವರ ಕ್ರಮವನ್ನು ಆ ಪ್ರಾಧಿಕಾರ ಅಥವಾ ನಿಕಾಯವು ಒಪ್ಪಿಕೊಳ್ಳದಿದ್ದಲ್ಲಿ ಅಂತಹ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(7) ಕುಲಪತಿಯವರು ಕೈಗೊಂಡ ಕ್ರಮದಿಂದಾಗಿ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವುದೇ ವ್ಯಕ್ತಿಗೆ ತೊಂದರೆ ಉಂಟಾದಲ್ಲಿ, ಅಂತಹ ವ್ಯಕ್ತಿಯು ಕೈಗೊಂಡ ಕ್ರಮದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮಂಡಳಿಗೆ ಅಪೀಲನ್ನು ಸಲ್ಲಿಸಬಹುದು.

(8) ಮಂಡಳಿಯ ಮೇಲ್ಮನವಿ ಆದೇಶದಿಂದ ಬಂಧಿತನಾದ ಯಾವೊಬ್ಬ ವ್ಯಕ್ತಿಯು ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರಿಗೆ ಎರಡನೇ ಅಪೀಲನ್ನು ಸಲ್ಲಿಸಬಹುದು ಮತ್ತು ಅಂತಹ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(9) ಕುಲಪತಿಯವರು, (8)ನೇ ಉಪಪ್ರಕರಣದಡಿಯಲ್ಲಿಯ ತೀರ್ಮಾ ನವನ್ನು ಹೊರತುಪಡಿಸಿ ಮಂಡಳಿಯ ತೀರ್ಮಾನವು ಅಧಿನಿಯಮಗಳ ಮತ್ತು ಶಾಸನಗಳ ಉಪಬಂಧಗಳಿಗೆ ಸರ್ಕಾರದ ವಿನಿಯಮಗಳಿಗೆ

ಅನುಗುಣವಾಗಿಲ್ಲವೆಂದು, ಹಾಗೂ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪೂರಕವಾಗಿ ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಆತನು ಹದಿನೈದು ದಿನಗಳೊಳಗಾಗಿ ಅದನ್ನು ಕುಲಾಧಿಪತಿಯವರಿಗೆ ಅವರ ತೀರ್ಮಾನವನ್ನು ಕೋರಿ ಕಳುಹಿಸಿ ಕೊಡತಕ್ಕದ್ದು. ಅದರ ಮೇಲೆ ಕುಲಾಧಿಪತಿಯವರು ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು. ಕುಲಾಧಿಪತಿಯವರು ಹಾಗೆ ಕಳುಹಿಸಿಕೊಟ್ಟ ವಿಷಯವನ್ನು ವಿಲೆಮಾಡುವವರೆಗೆ ಮಂಡಳಿಯ ತೀರ್ಮಾನವನ್ನು ಜಾರಿಗೊಳಿಸತಕ್ಕದ್ದಲ್ಲ.

(10) ಮೇಲಿನ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಕುಲಪತಿಯವರು ವಿಶ್ವವಿದ್ಯಾಲಯದ ಅಧಿಕಾರಿಗಳು, ಅಧ್ಯಾಪಕರು ಹಾಗೂ ಇತರ ನೌಕರರ ನೇಮಕಾತಿಗಳು, 'ಮುಂಬಡ್ತಿಗಳು ಮತ್ತು ವಜಾ ವಿಷಯಗಳಿಗೆ ಸಂಬಂಧಿಸಿದ ಮಂಡಳಿಯ ತೀರ್ಮಾನಗಳನ್ನು ಜಾರಿಗೊಳಿಸತಕ್ಕದು.

(11) ಕುಲಪತಿಯವರು ವಿಶ್ವವಿದ್ಯಾಲಯದ ವ್ಯವಹರಣೆಗಳ ಸೂಕ್ತ ಆಡಳಿತಕ್ಕೆ ಮತ್ತು ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಶಿಕ್ಷಣ ಇವುಗಳ ನಿಕಟ ಸಹವರ್ತನೆ ಮತ್ತು ಒಗ್ಗೂಡುವಿಕೆಗೆ ಜವಾಬ್ದಾರನಾಗಿರತಕ್ಕದ್ದು.

(12) ಕುಲಪತಿಯವರು ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳ ಅಡಿಯಲ್ಲಿ ತಮಗೆ ಪ್ರದಾನ ಮಾಡಿದ ಅಥವಾ ವಹಿಸಿದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

30. ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು.– 24ನೇ ಪ್ರಕರಣದ (iv) ರಿಂದ (ix)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ನಿಯಮಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮಂಡಳಿಯ ಅನುಮೋದನೆಯೊಂದಿಗೆ ಕುಲಪತಿಯವರು ನೇಮಿಸತಕ್ಕದ್ದು:

ಪರಂತು, ಕುಲಪತಿಯವರು ಅಂಥ ಅಧಿಕಾರಿಗಳ ನೇಮಕಾತಿಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಿ ಆರು ತಿಂಗಳ ಅವಧಿಗೆ ತಾತ್ಕಾಲಿಕ ಕ್ರಮವಾಗಿ ಮಾಡಬಹುದು.

31. ನಿರ್ದೇಶಕರುಗಳು, ಡೀನ್‌ಗಳು, ಕುಲಸಚಿವರು, ಲೆಕ್ಕ ನಿಯಂತ್ರಕರು ಇತ್ಯಾದಿ.–

(1) **ಶಿಕ್ಷಣ ನಿರ್ದೇಶಕರು**

(ಎ) ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಲು ಜವಾಬ್ದಾರರಾಗಿರತಕ್ಕದ್ದು. ವಿಶ್ವವಿದ್ಯಾಲಯದಲ್ಲಿನ ಕಾರ್ಯನೀತಿ ವಿಷಯಗಳ ಮತ್ತು ನಿವಾಸಿ ಬೋಧನೆ ಬಗೆಗಿನ ಪದ್ಧತಿಗೆ ಮತ್ತು ಶೈಕ್ಷಣಿಕ ತಂತ್ರಜ್ಞಾನ ಮತ್ತು ಅಧ್ಯಾಪಕರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಕಾರ್ಯನಿರ್ವಹಿಸುತ್ತಾರೆ. ಅವರು ಪರೀಕ್ಷೆಯ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು;

(ಬಿ) ವಿದ್ಯಾವಿಷಯಕ ಪರಿಷತ್ತು, ಪದವಿ ಕಾರ್ಯಕ್ರಮಗಳ ಅಧ್ಯಯನಗಳ ಮಂಡಳಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಗಳ ಶಾಶ್ವತವಾದ ದಾಖಲೆಗಳನ್ನು ನಿರ್ವಹಿಸಲು ಮತ್ತು ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡಿಕೊಂಡು ಬರಲು ಜವಾಬ್ದಾರರಾಗಿರತಕ್ಕದ್ದು;

(ಸಿ) ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಸಮನ್ವಯ ನಡೆಸತಕ್ಕದ್ದು ಮತ್ತು ಪುನರಾವಲೋಕಿಸತಕ್ಕದ್ದು;

(ಇ) ಮಾಹಿತಿ ಕೇಂದ್ರ ಮತ್ತು ವಿಶ್ವವಿದ್ಯಾಲಯದ ಪ್ರಕಟಣೆ ವಿಭಾಗದ ಚಟುವಟಿಕೆಗಳ ಮೇಲ್ವಿಚಾರಣೆ ಮಾಡತಕ್ಕದ್ದು.

(2) **ಸಂಶೋಧನಾ ನಿರ್ದೇಶಕರು:** 33ನೇ ಪ್ರಕರಣದಲ್ಲಿ ಹೇಳಿದಂತೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯಕ್ರಮಗಳ ನಿರ್ದೇಶನ ಮತ್ತು ಸಮನ್ವಯ ಮತ್ತು ಸಂಶೋಧನೆ ಕೇಂದ್ರಗಳ ದಕ್ಷ ಕೆಲಸಗಳಿಗೆ ಜವಾಬ್ದಾರನಾಗಿರತಕ್ಕದ್ದು.

(3) ವಿಸ್ತರಣಾ ನಿರ್ದೇಶಕರು: 34ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕೃಷಿ ವಿಸ್ತರಣಾ ಶಿಕ್ಷಣದ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(4) ಡೀನ್: ಕಾಲೇಜಿನ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಕಾಲೇಜಿನಲ್ಲಿ ಕಲಿಸುವ, ಸಂಶೋಧನೆಯ ಮತ್ತು ವಿಸ್ತರಣಾ ಚಟುವಟಿಕೆಗಳ ಆಡಳಿತಕ್ಕೆ ಮತ್ತು ಅನುಷ್ಠಾನಕ್ಕೆ ಜವಾಬ್ದಾರನಾಗಿರತಕ್ಕದ್ದು.

(5) ಸ್ನಾತಕೋತ್ತರ ಅಧ್ಯಯನಗಳ ಡೀನ್: ಸ್ನಾತಕೋತ್ತರ ಅಧ್ಯಯನಗಳು ಮತ್ತು ಡಿಪ್ಲೊಮೊಗಳನ್ನೊಳಗೊಂಡಂತೆ ಇತರ ಶೈಕ್ಷಣಿಕ ಕಾರ್ಯಕ್ರಮಗಳ ಆಡಳಿತ ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು.

(6) ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಡೀನ್:

(ಎ) ವಿದ್ಯಾರ್ಥಿಗಳ ಸಲಹೆ ನೀಡಿಕೆ ಮತ್ತು ಕೌನ್ಸಿಲಿಂಗ್ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ನಿರ್ದೇಶನ ಮಾಡುವುದು ಮತ್ತು ವಿಶ್ವವಿದ್ಯಾಲಯದ ಪದವೀಧರರಿಗೆ ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡುವುದಕ್ಕಾಗಿ ಭಾವೀ ಉದ್ಯೋಗದಾತರು ಮತ್ತು ಉದ್ಯೋಗ ಏಜೆನ್ಸಿಗಳ ಸಹಕಾರವನ್ನು ಪಡೆದುಕೊಳ್ಳುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಪ್ರೋತ್ಸಾಹಿಸತಕ್ಕದ್ದು;

(ಬಿ) ಕ್ರೀಡೆಗಳು, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳು, ರಾಷ್ಟ್ರೀಯ ಯುವಸೇನಾದಳ (ಎನ್.ಸಿ.ಸಿ.), ಎನ್‌ಎಸ್‌ಎಸ್, ಮಾತುಗಾರಿಕೆ ಕೌಶಲ್ಯ ಸುಧಾರಣೆ ಮುಂತಾದ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು ಹಾಗೂ ಅದೇ ತರಹದ ಇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಯೋಜಿಸುವುದು ಮತ್ತು ಏರ್ಪಡಿಸುವುದು.

(ಸಿ) ವಿದ್ಯಾರ್ಥಿ ನಿಲಯ, ಕೆಫ್ಟೇರಿಯಾ ಹಾಗೂ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಡೀನ್‌ಗಳಿಗೆ ಸಹಾಯ ಮಾಡತಕ್ಕದ್ದು;

(ಡಿ) ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳು ಮತ್ತು ಇತರ ಕ್ಷೇಮಾಭಿವೃದ್ಧಿ ಕ್ರಮಗಳ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು.

(7) ಕುಲಸಚಿವರು:

(ಎ) ಇವರು ವಿಶ್ವವಿದ್ಯಾಲಯದ ಪ್ರೊಫೆಸರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕೃಷಿ ವಿಜ್ಞಾನಗಳ ಕ್ಷೇತ್ರದಲ್ಲಿ ಒಬ್ಬ ವಿದ್ವಾಂಸರಾಗಿರತಕ್ಕದ್ದು ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯಾಗಿರತಕ್ಕದ್ದು;

(ಬಿ) ವ್ಯವಸ್ಥಾಪನ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಎಲ್ಲಾ ಪರಿಷತ್ತುಗಳ ಖಾಯಂ ಸದಸ್ಯರಾಗಿರತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರಿನ ಕ್ರಮಬದ್ಧ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು;

(ಡಿ) ವಿಶ್ವವಿದ್ಯಾಲಯಕ್ಕೆ ಪ್ರವೇಶದ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು ಮತ್ತು ಎಲ್ಲಾ ವ್ಯಾಸಂಗ ಕ್ರಮಗಳು, ಪಠ್ಯ ವಿಷಯಗಳು ಮತ್ತು ಅವಶ್ಯವಾಗಬಹುದಾದ ಇತರ ಮಾಹಿತಿಯ ಶಾಶ್ವತ ದಾಖಲೆಯನ್ನು ಇಟ್ಟುಕೊಂಡುಬರತಕ್ಕದ್ದು.

(ಇ) ನಿಯಮಿಸಲಾದಂತೆ ವಿಶ್ವವಿದ್ಯಾಲಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾನ್ಯ ಆಡಳಿತ ನಡೆಸಲು ಜವಾಬ್ದಾರರಾಗಿರತಕ್ಕದ್ದು.

(8) ವಿಶ್ವವಿದ್ಯಾಲಯದ ಗ್ರಂಥಪಾಲಕ.–

ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ಪದ್ಧತಿಯ ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಮತ್ತು ವಿಶ್ವವಿದ್ಯಾಲಯದ ಎಲ್ಲಾ ಘಟಕಗಳ ಗ್ರಂಥಾಲಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಮತ್ತು ಸಮನ್ವಯ ನಡೆಸುವುದಕ್ಕೆ ಇವರು ಜವಾಬ್ದಾರರಾಗಿರತಕ್ಕದ್ದು.

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, 24ನೇ ಪ್ರಕರಣದ (iv) ರಿಂದ (ix)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ವಿಶ್ವವಿದ್ಯಾಲಯದ ಅಧಿಕಾರಿಗಳು, ಕುಲಪತಿಯವರು ಕಾಲಕಾಲಕ್ಕೆ ನಿಯಮಿಸಬಹುದಾದ ಅಥವಾ ಅವರಿಗೆ ವಹಿಸಿಕೊಡಬಹುದಾದಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(9) ಲೆಕ್ಕ ನಿಯಂತ್ರಕರು.-

(ಎ) ಲೆಕ್ಕ ನಿಯಂತ್ರಕರು, ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಇವರು, ಕುಲಪತಿಯವರು ವ್ಯವಸ್ಥಾಪನಾ ಮಂಡಳಿಗೆ ಶಿಫಾರಸ್ಸು ಮಾಡಿದ ಲೆಕ್ಕ ಪರಿಶೋಧನೆ, ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವುಳ್ಳ ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರ ಕೇಡರ್‌ನ ಅಧಿಕಾರಿಗಳು ಅಥವಾ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಉಪಮಹಾಲೇಖಪಾಲರ ದರ್ಜೆಯ ಒಬ್ಬ ಅಧಿಕಾರಿ ಇವರ ಹೆಸರುಗಳುಳ್ಳ ಮೂವರಿಗೆ ಕಡಿಮೆಯಿಲ್ಲದ ಒಂದು ಹೆಸರುಪಟ್ಟಿಯಿಂದ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ಮತ್ತು ಕುಲಪತಿಯವರು ನೇಮಿಸಿದ ಅಧಿಕಾರಿಯಾಗಿರತಕ್ಕದ್ದು. ಹೆಸರು ಪಟ್ಟಿಯಲ್ಲಿರುವ ಯಾರನ್ನೂ ವ್ಯವಸ್ಥಾಪನಾ ಮಂಡಳಿಯು ಮೂವತ್ತು ದಿನಗಳೊಳಗೆ ಅನುಮೋದಿಸದಿದ್ದಲ್ಲಿ, ಕುಲಾಧಿಪತಿಯವರು ಕುಲಪತಿಯವರೊಡನೆ ಸಮಾಲೋಚಿಸಿ, ಲೆಕ್ಕ ನಿಯಂತ್ರಕರಾಗಲು ಸೂಕ್ತ ವ್ಯಕ್ತಿಯೆಂದು ತಾವು ಭಾವಿಸುವಂಥ ಇತರ ವ್ಯಕ್ತಿಯನ್ನು ಲೆಕ್ಕ ನಿಯಂತ್ರಕರನ್ನಾಗಿ ನೇಮಿಸಬಹುದು.

(ಬಿ) ಲೆಕ್ಕ ನಿಯಂತ್ರಕರ ನೇಮಕಾತಿಯ ಅವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು.

(ಸಿ) ಲೆಕ್ಕ ನಿಯಂತ್ರಕರು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಶಾಸನಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಬಹುದಾದ ಅಥವಾ ಕುಲಪತಿಯವರು ಅಥವಾ ಕುಲಸಚಿವರು ಕಾಲದಿಂದ ಕಾಲಕ್ಕೆ ಅಗತ್ಯ ಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(10) 24ನೇ ಪ್ರಕರಣದ (iv) ರಿಂದ (X)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಅವರ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಶಾಸನಗಳು ಅಥವಾ ಇತರ ಆದೇಶಗಳಲ್ಲಿ ಉಪಬಂಧ ಕಲ್ಪಿಸುವಂತಹವುಗಳನ್ನುಳಿದು ವಿಶ್ವವಿದ್ಯಾಲಯದಲ್ಲಿನ ಯಾವುದೇ ಕೆಲಸಕ್ಕೆ ಬೇರೆ ಯಾವುದೇ ಪರಿಶ್ರಮಧನವನ್ನು ನೀಡತಕ್ಕದ್ದಲ್ಲ ಮತ್ತು ಅವರು ಸ್ವೀಕರಿಸತಕ್ಕದ್ದಲ್ಲ.

ಅಧ್ಯಾಯ - V

ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ

32. ಶಿಕ್ಷಣ.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ಶಿಕ್ಷಣವು ನಿಯಮಿಸಲಾದಂತೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ವಿಷಯದಲ್ಲಿ ಪದವಿಯ, ಸ್ನಾತಕೋತ್ತರ ಪದವಿಯ ಮತ್ತು ಡಾಕ್ಟರಲ್ ಡಿಗ್ರಿ ಕಾರ್ಯಕ್ರಮಗಳು ಮತ್ತು ಅಲ್ಪಾವಧಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸುಗಳನ್ನು ಒಳಗೊಂಡಿರತಕ್ಕದ್ದು.

(2) ಈ ಶೈಕ್ಷಣಿಕ ಕಾರ್ಯಕ್ರಮಗಳು ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗೆ ಅನುಗುಣವಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ಇ–ಕಲಿಕೆ, ವಿತರಿತ/ದೂರ ಶಿಕ್ಷಣ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಜ್ಞಾನವನ್ನು ಹಂಚಿಕೊಳ್ಳುವುದು ಈ ಸಾಧನಗಳನ್ನು ಬಳಸಿಕೊಳ್ಳತಕ್ಕದ್ದು.

(4) ಸಕ್ಷಮ ಮತ್ತು ಕುಶಲ ಪದವೀಧರರನ್ನು ಮತ್ತು ಸ್ನಾತಕೋತ್ತರ ಪದವೀಧರರನ್ನು ತಯಾರಿಸುವ ಗುರಿಯನ್ನು ಕೃಷಿ ಶಿಕ್ಷಣ ಕಾರ್ಯಕ್ರಮಗಳು ಹೊಂದಿರತಕ್ಕದ್ದು.

33. ಸಂಶೋಧನೆ.– (1) ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯವು ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಾರ್ಯತಂತ್ರದ, ಮೂಲಭೂತ ಮತ್ತು ಆನ್ವಯಿಕ ಸಂಶೋಧನೆಗಳನ್ನು ಮಾಡತಕ್ಕದ್ದು.

(2) ವಿಶ್ವವಿದ್ಯಾಲಯವು ತನ್ನ ಸಂಶೋಧನಾ ಸಂಸ್ಥೆಯ ಮೂಲಕ ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ಕೃಷಿ, ಪಶುಸಂಗೋಪನೆ ಮತ್ತಿತರ ಸಂಬಂಧಪಟ್ಟ ಶಾಖೆಗಳಲ್ಲಿನ ಸಂಶೋಧನಾ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಪ್ರಧಾನ ಏಜೆನ್ಸಿಯಾಗಿರತಕ್ಕದ್ದು.

(3) ವಿಶ್ವವಿದ್ಯಾಲಯವು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸಂಶೋಧನೆಯೂ ಸೇರಿದಂತೆ ಸಂಶೋಧನೆಗಳನ್ನು ನಡೆಸುವುದಕ್ಕೆ ಬೇರೆ ಬೇರೆ ಕೃಷಿ–ವಾತಾವರಣ ವಲಯಗಳಲ್ಲಿ ಸರ್ಕಾರದ ಸಹಮತಿಯೊಂದಿಗೆ ಪ್ರಾದೇಶಿಕ ವಲಯ ಸಂಶೋಧನಾ ಕೇಂದ್ರಗಳು ಮತ್ತು ಉಪಕೇಂದ್ರಗಳನ್ನು ಸ್ಥಾಪಿಸಬಹುದು.

34. ವಿಸ್ತರಣಾ ಶಿಕ್ಷಣ.– (1) ತಾಂತ್ರಿಕ ಮೌಲ್ಯಮಾಪನ ಮತ್ತು ಪರಿಷ್ಕರಣೆಯಾಗುವಂತೆ ನೋಡಿಕೊಳ್ಳಲು ಮತ್ತು ಸಂಶೋಧನೆಗಳಲ್ಲಿ ಕಂಡುಬಂದ ವಿಚಾರಗಳನ್ನು ಆಧರಿಸಿದ ತಂತ್ರಜ್ಞಾನವನ್ನು ತ್ವರಿತ ಕೃಷಿ ಬೆಳವಣಿಗೆಗಾಗಿ ರೈತರು ಮತ್ತು ಇತರರು ಅಳವಡಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ವಿಶ್ವ ವಿದ್ಯಾಲಯದಲ್ಲಿ ಈ ಅಧಿನಿಯಮ ಮತ್ತು ಶಾಸನಗಳಿಗೊಳಪಟ್ಟು ಸ್ಥಾಪಿಸತಕ್ಕದ್ದು. ಈ ವಿಭಾಗವು ವಿವಿಧ ಹಿತಾಸಕ್ತಿದಾರರ ಅನುಕೂಲಕ್ಕಾಗಿ ಪ್ರಾತ್ಯಕ್ಷಿಕೆಗಳನ್ನು ಮತ್ತು ತರಬೇತಿಯನ್ನು ನಡೆಸತಕ್ಕದ್ದು. ಈ ವಿಸ್ತರಣಾ ಕಾರ್ಯವನ್ನು ವಿಶ್ವವಿದ್ಯಾಲಯದ ವಿವಿಧ ಘಟಕಗಳು ಮತ್ತು ಕೇಂದ್ರ ಹಾಗೂ ರಾಜ್ಯದ ಇತರ ಸಮುಚಿತ ಏಜೆಂಟ್‌ಗಳೊಂದಿಗೆ ಸಮನ್ವಯದಿಂದ ಮಾಡತಕ್ಕದ್ದು.

(2) ರಾಜ್ಯದಲ್ಲಿ ವಿಸ್ತರಣಾ ಕೃಷಿಯ ಮಾದರಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರತಕ್ಕದ್ದು.

35. ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯ ಸಂಯೋಜನೆ.–(1) ವಿಶ್ವವಿದ್ಯಾಲಯದ ಯುಕ್ತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ಚಟುವಟಿಕೆಗಳು ಸಂಪೂರ್ಣವಾಗಿ ಬೆರೆತು ಕೆಲಸಮಾಡುವುದಕ್ಕೆ ಅವಶ್ಯವಾಗಬಹುದಾದ ಕ್ರಮಗಳನ್ನು ತೆಗೆದುಕೊಳ್ಳಲು ಕುಲಪತಿಯವರು ಜವಾಬ್ದಾರರಾಗಿರತಕ್ಕದ್ದು.

(2) ಬೋಧಕರ ಕೇಡರ್‌ನಲ್ಲಿರತಕ್ಕ ಪ್ರತಿಯೊಬ್ಬ ಫ್ಯಾಕಲ್ಟಿ ಸದಸ್ಯರು ಬೋಧನೆಯ ಕಾರ್ಯದ ಜೊತೆಗೆ ತಮ್ಮ ಶೇಕಡ ಮೂವತ್ತರಷ್ಟು ಸಮಯವನ್ನು ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕೈಗೊಳ್ಳಲು ಮೀಸಲಿಡತಕ್ಕದ್ದು. ಹಾಗೆಯೇ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದಲ್ಲಿರತಕ್ಕ ಫ್ಯಾಕಲ್ಟಿ ಸದಸ್ಯರು ಸಂದರ್ಭಾನುಸಾರ ಬೋಧನೆ ಅಥವಾ ವಿಸ್ತರಣೆ ಅಥವಾ ಸಂಶೋಧನೆಯ ಕೆಲಸಕ್ಕೆ ತಮ್ಮ ಶೇಕಡಾ ಮೂವತ್ತರಷ್ಟು ಸಮಯವನ್ನು ವಿನಿಯೋಗಿಸತಕ್ಕದ್ದು.

(3) ಕಾಲೇಜಿನಲ್ಲಿರುವ ಎಲ್ಲಾ ಬೋಧನೆ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಸಿಬ್ಬಂದಿಯು ಸಂದರ್ಭಾನುಸಾರ ಕಾಲೇಜಿನ ಡೀನ್‌ರವರ ಆಡಳಿತ ನಿಯಂತ್ರಣ ಅಥವಾ ನಿರ್ದೇಶಕರು (ಸಂಶೋಧನೆ) ಮತ್ತು ನಿರ್ದೇಶಕರು (ವಿಸ್ತರಣೆ) ಇವರ ತಾಂತ್ರಿಕ ನಿಯಂತ್ರಣದಲ್ಲಿರತಕ್ಕದ್ದು.

(4). ವಿಶ್ವವಿದ್ಯಾಲಯವು ರಾಜ್ಯದ ಪ್ರಾದೇಶಿಕ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸತಕ್ಕದ್ದು. ಮತ್ತು ರಾಜ್ಯ ಸರ್ಕಾರಕ್ಕೆ ಹಾಗೂ ಇತರ ಹಿತಾಸಕ್ತಿದಾರರಿಗೆ ಸೂಕ್ತವಾದ ತಾಂತ್ರಿಕ ಬ್ಯಾಕ್ ಸ್ಟಾಪಿಂಗ್ ಒದಗಿಸತಕ್ಕದ್ದು.

ಅಧ್ಯಾಯ - VI

ನಿಧಿಗಳು ಮತ್ತು ಲೆಕ್ಕಪತ್ರಗಳು

36. ವಿಶ್ವವಿದ್ಯಾಲಯದ ನಿಧಿಗಳು.– (1) ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳು ಜಮೆಯಾಗತಕ್ಕದ್ದು,–

(ಎ) ಶುಲ್ಕಗಳಿಂದ, ದತ್ತಿಗಳಿಂದ ಮತ್ತು ಯಾವುದಾದರೂ ದಾನಗಳು ಇದ್ದರೆ ಅವುಗಳಿಂದ ಬರುವ ಆದಾಯ, ವಿದ್ಯಾರ್ಥಿ ನಿಲಯ, ಪ್ರಯೋಗ ಕೇಂದ್ರಗಳು ಹಾಗೂ ಫಾರ್ಮುಗಳೂ ಸೇರಿದಂತೆ ವಿಶ್ವವಿದ್ಯಾಲಯದ ಸ್ವತ್ತುಗಳಿಂದ ಬರುವ ಆದಾಯ;

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿರುವಂತಹ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ನೀಡಿದ ವಂತಿಕೆಗಳು ಅಥವಾ ಅನುದಾನಗಳು;

(ಸಿ) ಇತರ ವಂತಿಕೆಗಳು, ಅನುದಾನಗಳು, ದೇಣಿಗೆಗಳು, ಲಾಭಗಳು, ಸಾಲಗಳು ಮತ್ತು ಇತರ ಸ್ವೀಕೃತಿಗಳು.

(2) ವಿಶ್ವವಿದ್ಯಾಲಯವು ಪ್ರತಿಷ್ಠಾನ ನಿಧಿ ಎಂಬ ಹೆಸರಿನ ನಿಧಿಯನ್ನು ಹೊಂದಿರತಕ್ಕದ್ದು. ಇದಕ್ಕೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಅನುಮೋದಿತ ಏಜೆನ್ಸಿಯು ನೀಡುವ ವಂತಿಕೆಗಳು ಮತ್ತು ಅನುದಾನಗಳು ಹಾಗೂ ಮಂಡಳಿಯು ನಿರ್ದಿಷ್ಟಪಡಿಸಬಹುದಾ ದಂತಹ ಇತರ ಮೊತ್ತಗಳು ಜಮೆಯಾಗತಕ್ಕದ್ದು. ಮಂಡಳಿಯು ಅವಶ್ಯವಿ ದ್ದಾಗಲೆಲ್ಲ ಅಂತಹ ಮೊಬಲಗನ್ನು ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಷ್ಠಾನ ನಿಧಿಯಿಂದ ಸಾಮಾನ್ಯ ನಿಧಿಗೆ ನಿಯಮಿಸಬಹುದಾದ ವಿಧಾನದಲ್ಲಿ ವರ್ಗಾಯಿಸಬಹುದು.

(3) ವಿಶ್ವವಿದ್ಯಾಲಯವು, ಸರ್ಕಾರವು ನೀಡಿದ ಯಾವುದೇ ಅನುದಾನಗಳ ಸಂಬಂಧದಲ್ಲಿ ಲೆಕ್ಕಪತ್ರ ತಃಖ್ತೆಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ಸರ್ಕಾರಕ್ಕೆ ನೀಡತಕ್ಕದ್ದು ಹಾಗೂ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಮತ್ತು ವಿಧಾನದಲ್ಲಿ ಯಾವುದೇ ಅನುದಾನದ ಬಳಕೆಗೆ ಸಂಬಂಧಿಸಿದಂತೆ ತಃಖ್ತೆಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮ ವಾಗಿರತಕ್ಕದ್ದು.

37. ನಿಧಿಯ ಆಡಳಿತ.– ವಿಶ್ವವಿದ್ಯಾಲಯದ ಸಾಮಾನ್ಯ ನಿಧಿ, ಪ್ರತಿಷ್ಠಾನ ನಿಧಿ ಮತ್ತು ಇತರ ನಿಧಿಗಳನ್ನು ಶಾಸನಗಳಲ್ಲಿ ಹೇಳಿದ ಉಪಬಂಧಗಳಿಗೆ ಅನುಗುಣವಾಗಿ ನಿರ್ವಹಿಸತಕ್ಕದ್ದು.

38. ಲೆಕ್ಕಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ.– ಸರ್ಕಾರವು, ಯಾವುದೇ ಸಮಯದಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆಯನ್ನು ತಾನು ನಿರ್ದೇಶಿಸಬಹುದಾದಂತಹ ಲೆಕ್ಕಪರಿ ಶೋಧಕರಿಂದ ಮಾಡಿಸಬೇಕೆಂದು ಆದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

39. ಹಣಕಾಸಿನ ಅಂದಾಜುಗಳು.– (1) ಕುಲಪತಿಯು ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸಿನ ಅಂದಾಜುಗಳನ್ನು ತಯಾರಿಸುವಂತೆ ಮಾಡತಕ್ಕದ್ದು ಮತ್ತು ಅನುಮೋದನೆಗಾಗಿ ಅದನ್ನು ಮಂಡಳಿಯ ಮುಂದೆ ಮಂಡಿಸತಕ್ಕದ್ದು.

(2) ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ಮಾರ್ಪಾಡುಗಳಿಗೆ ಒಳಪಟ್ಟು ಹಣಕಾಸಿನ ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಮಂಡಳಿಯು ಅನುಮೋದಿಸಿದ ಹಣಕಾಸಿನ ಅಂದಾಜಿಗೆ ಅನುಸಾರವಾಗಿ ಅಲ್ಲದೆ ಯಾವ ವೆಚ್ಚವನ್ನು ಮಾಡತಕ್ಕದ್ದಲ್ಲ.

40. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಲೆಕ್ಕಪತ್ರ ನಿರ್ವಹಣೆಯು ಜೋಡಿದಾಖಲಾತಿ ಪದ್ಧತಿಯನ್ನು ಆಧರಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಕುಲಪತಿಯವರ ನಿರ್ದೇಶನದ ಮೇರೆಗೆ ಲೆಕ್ಕ ನಿಯಂತ್ರಕರು ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಯಾವುದೇ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಅದು ಸ್ವೀಕರಿಸುವ ಎಲ್ಲಾ ಮೊಬಲಗುಗಳನ್ನು ಹಾಗೂ ವಿಶ್ವವಿದ್ಯಾಲಯವು ವಿತರಣೆ ಮಾಡುವ ಅಥವಾ ಸಂದಾಯ ಮಾಡುವ ಎಲ್ಲಾ ಮೊಬಲಗುಗಳನ್ನು ಈ ಲೆಕ್ಕಪತ್ರಗಳಲ್ಲಿ ದಾಖಲಿಸತಕ್ಕದ್ದು.

(2) ವಾರ್ಷಿಕ ಲೆಕ್ಕಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ಕುಲಪತಿಯವರು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ತಾನು ನೇಮಿಸಬಹುದಾದಂತಹ ವ್ಯಕ್ತಿಗಳು ಲೆಕ್ಕ ಪರಿಶೋಧನೆಯನ್ನು ನಡೆಸುವಂತೆ ಮಾಡತಕ್ಕದ್ದು. ಲೆಕ್ಕಪತ್ರಗಳನ್ನು ಪರಿಶೋಧಿಸಿದ ಮೇಲೆ ಅವುಗಳನ್ನು ಮುದ್ರಿಸತಕ್ಕದ್ದು ಹಾಗೂ ಕುಲಪತಿಯವರು ಅವುಗಳ ಪ್ರತಿಗಳನ್ನು ಲೆಕ್ಕಪರಿಶೋಧನೆಯ ವರದಿಯೊಡನೆ ಮಂಡಲಿಗೆ ಮತ್ತು ಕುಲಾಧಿಪತಿಯವರಿಗೆ ಮಂಡಿಸತಕ್ಕದ್ದು.

(3) ಮಂಡಳಿಯು, ಲೆಕ್ಕಪತ್ರಗಳ ಪ್ರತಿಯನ್ನು ಹಾಗೂ ವರದಿಯನ್ನು ಲೆಕ್ಕಪರಿಶೋಧನೆಯ ವರದಿಯ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಒಂದು ಹೇಳಿಕೆಯೊಡನೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಹಾಗೂ ರಾಜ್ಯ ಸರ್ಕಾರವು ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯವು ಯೋಜನೆಗಳ ಸಂಬಂಧದಲ್ಲಿ ಮತ್ತು ಭಾರತದ ಕೃಷಿ ಸಂಶೋಧನಾ ಪರಿಷತ್ತು, ಭಾರತ ಸರ್ಕಾರ ಮತ್ತು ಇತರ ಯೋಜನೆಗಳು/ಚಾರ್ಟೆಡ್ ಅಕೌಂಟೆಟ್ ಪ್ರಮಾಣ ಪತ್ರ ನೀಡಿದ ಸಂಸ್ಥೆಗಳು ಪ್ರಾಯೋಜಿಸಿದ ಕೃಷಿ ವಿಜ್ಞಾನ ಕೇಂದ್ರಗಳ ಸಂಬಂಧದಲ್ಲಿ ಲೆಕ್ಕಪರಿಶೋಧನೆ ಬಳಿಕ ಪ್ರಮಾಣ ಪತ್ರಗಳನ್ನು ನೀಡುವಂತೆ ಮಾಡತಕ್ಕದ್ದು.

41. ಭವಿಷ್ಯ ನಿಧಿ, ನಿವೃತ್ತಿ ವೇತನ ಮತ್ತು ವಿಮೆ.– (1) ಸರ್ಕಾರದ ಪೂರ್ವಾನುಮೋದನೆಯೊಡನೆ ವಿಶ್ವವಿದ್ಯಾಲಯವು ತನ್ನ ಅಧಿಕಾರಿಗಳು, ಪ್ರಾಧ್ಯಾಪಕರು, ಲಿಪಿಕ ಸಿಬ್ಬಂದಿ ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ನಿಯಮಿಸಬಹುದಾದಂತಹ ವಿಧಾನಗಳು ಮತ್ತು ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂತಹ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿ, ವಂತಿಗೆ ನಿವೃತ್ತಿ ವೇತನ ನಿಧಿ ಮತ್ತು ಇನ್ನಾವುದೇ ಅಂತಹ ನಿಧಿಗಳನ್ನು ರಚಿಸತಕ್ಕದ್ದು.

(2) ಸರ್ಕಾರವು, ಭವಿಷ್ಯ ನಿಧಿ ಅಧಿನಿಯಮ 1925 (1925ರ ಕೇಂದ್ರ ಅಧಿನಿಯಮ 19) ವಿಶ್ವವಿದ್ಯಾಲಯವು ಹಾಗೆ ರಚಿಸಿದ ಭವಿಷ್ಯ ನಿಧಿ ಅಥವಾ ನಿವೃತ್ತಿ ವೇತನ ನಿಧಿಗಳಿಗೆ ಅವು ಸರ್ಕಾರದ ಭವಿಷ್ಯ ನಿಧಿಗಳು ಆಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು:

ಪರಂತು, ವಿಶ್ವವಿದ್ಯಾಲಯವು ಹಣಕಾಸು ಸಮಿತಿ ಮತ್ತು ಮಂಡಳಿಯೊಡನೆ ಸಮಾಲೋಚಿಸಿ ತಾನು ನಿರ್ಧರಿಸಬಹುದಾದಂತಹ ವಿಧಾನದಲ್ಲಿ ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

42. ಸರ್ಕಾರದ ಅನುದಾನಗಳು.– (1) ರಾಜ್ಯ ಸರ್ಕಾರವು, ಪ್ರತಿ ವರ್ಷವೂ ವಿಶ್ವವಿದ್ಯಾಲಯಕ್ಕೆ ಲುಪ್ತವಾಗದಂತಹ ಇಡಿಗಂಟು ಅನುದಾನ ವನ್ನು ನೀಡತಕ್ಕದ್ದು, ಎಂದರೆ :–

(i) ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಸಿಬ್ಬಂದಿಯ ವೇತನ, ಭತ್ಯೆಗಳು, ಸಾದಿಲ್ವಾರು, ಇತರ ಸರಬರಾಜು ಮತ್ತು ಸೇವೆಗಳ ಮೇಲಿನ ಅಂದಾಜು ವೆಚ್ಚಕ್ಕಿಂತ ಕಡಿಮೆಯಲ್ಲದ ಒಂದು ಅನುದಾನ;

(ii) ರಾಜ್ಯ ಸರ್ಕಾರವು ವಿಶ್ವವಿದ್ಯಾಲಯದ ಸೂಕ್ತ ಕಾರ್ಯನಿರ್ವಹಣೆಗಾಗಿ ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚುವರಿ ಬಾಬುಗಳ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸುವುದಕ್ಕೆ ಒಂದು ಅನುದಾನ.

(2) ರಾಜ್ಯ ಸರ್ಕಾರವು, ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಮತ್ತು ವಿಶ್ವವಿದ್ಯಾಲಯವು ಜಾರಿಗೊಳಿಸಲೆಂದು ವರ್ಗಾಯಿಸಿದ ಯೋಜನೆಗಳ ಸಂಬಂಧದಲ್ಲಿ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ ಮತ್ತು ಅಂತಹ ಯೋಜನೆಗಳನ್ನು ಪ್ರಾಯೋಜಿಸಿದ ಇತರ ಏಜೆನ್ಸಿಗಳಿಂದ ನಿರೀಕ್ಷಿತ ಸಹಾಯವನ್ನು ಕಳೆದ ತರುವಾಯ ವಾರ್ಷಿಕ ಯೋಜನೆಯಲ್ಲಿ ತೋರಿಸಿದ ನಿವ್ವಳ ವೆಚ್ಚದ ಏರ್ಪಾಡಿಗೆ ಸಮನಾದ ಮೊತ್ತದ ಲುಪ್ತವಾಗದಂತಹ ಇಡಿಗಂಟು ಅನುದಾನವನ್ನು ಸಹ ನೀಡತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡುವ ಮೊದಲು ಅದು ಅಗತ್ಯಪಡಿಸಬಹುದಾದಂತಹ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಸಲ್ಲಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ಅವಧಿಯೊಳಗೆ ಹಾಗೂ ಅಂತಹ ವಿಧಾನದಲ್ಲಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಯಾವುದೇ ಅನುದಾನವನ್ನು ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು, ಲೆಕ್ಕಪತ್ರಗಳು, ವರದಿಗಳು ಹಾಗೂ ಇತರ ವಿವರಗಳನ್ನು ಒದಗಿಸತಕ್ಕದ್ದು.

(4) ವಿಶ್ವವಿದ್ಯಾಲಯವು ಸರ್ಕಾರದಿಂದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಗಳಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಾತ್ಮಕ ನಿಕಾಯಗಳಿಂದ ಅಥವಾ ದತ್ತಿಗಳಿಂದ ಅಥವಾ ದಾನಗಳಿಂದ, ವಿಶ್ವವಿದ್ಯಾಲಯವು ಮತ್ತು ದಾನಿ ಅಥವಾ ಅನುದಾನದಾತರ ನಡುವೆ ಮಾಡಿಕೊಂಡ ಒಪ್ಪಂದಗಳಲ್ಲಿಯ ಷರತ್ತುಗಳಿಗೆ ಒಳಪಟ್ಟು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಅನುದಾನ ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

43. ಹಣಕಾಸು ಸಮಿತಿ.– (1) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನೊಳಗೊಂಡ ಒಂದು ಹಣಕಾಸು ಸಮಿತಿಯನ್ನು ರಚಿಸತಕ್ಕದ್ದು ಎಂದರೆ :–

(i) ಕುಲಪತಿಯವರು – ಅಧ್ಯಕ್ಷರಾಗಿರತಕ್ಕದ್ದು;

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iii) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕೃಷಿ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು;

(iv) ಕುಲಪತಿಯವರು ನಾಮನಿರ್ದೇಶಿಸಿದ ವ್ಯವಸ್ಥಾಪನಾ ಮಂಡಳಿಯ ಒಬ್ಬ ಸದಸ್ಯರು;

(v) ಕುಲಸಚಿವರು;

(vi) ಲೆಕ್ಕ ನಿಯಂತ್ರಕರು – ಸದಸ್ಯ ಕಾರ್ಯದರ್ಶಿ.

(2) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಅಂದಾಜುಗಳನ್ನು ಪರೀಕ್ಷಿಸುವುದು ಮತ್ತು ಅದರ ಮೇಲೆ ಮಂಡಳಿಗೆ ಸಲಹೆಗಳನ್ನು ನೀಡುವುದು;

(ii) ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಪರಿವೀಕ್ಷಿಸುವುದು;

(iii) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಮೇಲೆ ಮಂಡಳಿಗೆ ಶಿಫಾರಸ್ಸುಗಳನ್ನು ಮಾಡುವುದು;

(iv) ಮಂಡಳಿಗೆ ಕಟ್ಟುನಿಟ್ಟಾದ ಆರ್ಥಿಕ ಮಿತವ್ಯಯವನ್ನು ಅನುಸರಿಸಲು ಕಠಿಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಶಿಫಾರಸ್ಸುಗಳನ್ನು ಮಾಡುವುದು ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಲು ಸಲಹೆಗಳನ್ನು ನೀಡುವುದು;

(v) ವಿಶ್ವವಿದ್ಯಾಲಯದ ಹಣ ಬಲವನ್ನು ಉತ್ತಮಗೊಳಿಸಲು ಸಂಶೋಧನೆ ಮತ್ತು ಬೋಧನೆಗಳೆರಡರಲ್ಲೂ ವೆಚ್ಚ ವಸೂಲಿ ವಿಧಾನಗಳ, ಬಗ್ಗೆ ಮಂಡಳಿಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

ಅಧ್ಯಾಯ - VII

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

44. ಕಾಲೇಜುಗಳ ಸಂಯೋಜನೆ.– (1) ವಿಶ್ವವಿದ್ಯಾಲಯದ ಪ್ರದೇಶದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ತರುವಾಯ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇಲೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸತಕ್ಕದ್ದು.

(2) ಕುಲಸಚಿವರು, ಹೊಸ ಕಾಲೇಜುಗಳ ಸಂಯೋಜನೆಯ ಬಗ್ಗೆ, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳ ಬಗ್ಗೆ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವಿಷಯಗಳು ಮತ್ತು ಮಂಜೂರಾದ ಪ್ರವೇಶ ಅವಕಾಶದಲ್ಲಿನ ಬದಲಾವಣೆಯ ಬಗ್ಗೆ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳ ಸ್ವೀಕೃತಿಗೆ ಕೊನೆಯ ದಿನಾಂಕವನ್ನು ನಿಗದಿಪಡಿಸಿ, ಒಂದು ಇಂಗ್ಲಿಷ್ ವೃತ್ತ ಪತ್ರಿಕೆ ಮತ್ತು ಒಂದು ಕನ್ನಡ ವೃತ್ತ ಪತ್ರಿಕೆ ಹೀಗೆ ಕಡೆಯ ಪಕ್ಷ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು. ಈ ಜಾಹಿರಾತು, ವಿಶ್ವವಿದ್ಯಾಲಯವು ಅಗತ್ಯ ಪಡಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಕಾಲೇಜುಗಳು ಭಾರತದ ಕೃಷಿ ಸಂಶೋಧನಾ ಪರಿಷತ್ತು ಅಥವಾ ಅಂತಹ ಇತರ ಪ್ರಾಧಿಕಾರಗಳ ಅನುಮೋದನೆ ಅಥವಾ ಮನ್ನಣೆಯನ್ನು ಪಡೆಯಬೇಕೆಂಬುದನ್ನು ಅಗತ್ಯ ಪಡಿಸಿದಲ್ಲಿ, ಆ ಬಗ್ಗೆ ನಿರ್ದಿಷ್ಟ ಸೂಚನೆ ನೀಡತಕ್ಕದು ಮತ್ತು ಸಂಯೋಜನೆಗಾಗಿ ಸಲ್ಲಿಸಬೇಕಾದ ಶುಲ್ಕದ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(3) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಸಲ್ಲಿಸುವ ಕಾಲೇಜು, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಿ ಜಾಹಿರಾತಿನಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಅರ್ಜಿಯನ್ನು ಕುಲಸಚಿವರಿಗೆ ಕಳುಹಿಸತಕ್ಕದ್ದು, ಎಂದರೆ:–

(i) ಆ ಕಾಲೇಜು ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯನ್ನೂ

ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆ;

(ii) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಳಿಯ ಆಡಳಿತ ನಿರ್ವಹಣೆಗೆ ಒಳಪಟ್ಟಿದೆ;

(iii) ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳು ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ, ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥದ್ದಾಗಿದೆ;

(iv) ಕಾಲೇಜನ್ನು ನಡೆಸುವಂಥ ಕಟ್ಟಡಗಳು ಸೂಕ್ತವಾಗಿವೆ ಮತ್ತು ತಂದೆ ತಾಯಿಗಳ ಅಥವಾ ಪಾಲಕರ ಜೊತೆಯಲ್ಲಿ ವಾಸವಾಗಿರದೆ ಇರುವ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಹಾಗೂ ಮೇಲ್ವಿಚಾರಣೆ ಮತ್ತು ಕ್ಷೇಮಾಭಿವೃದ್ಧಿಗಾಗಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದು;

(v) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ;

(vi) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಯಲ್ಲಿ ಸಂಯೋಜನೆಯನ್ನು ಕೋರಿರುವಲ್ಲಿ, ಶಾಸನಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯ ವ್ಯವಸ್ಥೆಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಾಡಲಾಗಿದೆ ಅಥವಾ ಮಾಡಲಾಗುವುದು;

(vii) ಸನ್ನಿವೇಶಗಳಲ್ಲಿ ಅವಕಾಶವಿರುವಷ್ಟರ ಮಟ್ಟಿಗೆ ಕಾಲೇಜಿನ ಪರಿಮಿತಿಯಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ

ಪ್ರಾಂಶುಪಾಲರ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ವಸತಿಗಾಗಿ ಸೂಕ್ತ ಏರ್ಪಾಟು ಮಾಡಲಾಗುವುದು;

(viii) ಕಾಲೇಜಿನ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಷ್ಟು ಕಾಲೇಜಿನ ಹಣಕಾಸು ಸಂಪನ್ಮೂಲಗಳಿವೆ; ಮತ್ತು

(ix) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು ಏನಾದರೂ ಇದ್ದರೆ ಅದನ್ನು ನಿಗದಿಮಾಡುವ ನಿಯಮಗಳನ್ನು ರಚಿಸಲಾಗಿದೆ.

(4) ಹೊಸ ಕಾಲೇಜುಗಳಿಗೆ ಸಂಯೋಜನೆಯ ಅರ್ಜಿಗಳನ್ನು ವ್ಯಕ್ತಿಗಳಿಂದ ಅಂಗೀಕರಿಸತಕ್ಕದ್ದಲ್ಲ ರಾಜ್ಯ ಸರ್ಕಾರದ ನೆರವು ಇಲ್ಲದೆಯೇ ಕಾಲೇಜುಗಳನ್ನು ನಡೆಸಲು ಸಾಧ್ಯವಾಗುವ ಹಣಕಾಸು ಚೈತನ್ಯ ಹೊಂದಿರುವ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ ಟ್ರಸ್ಟ್‌ಗಳಿಂದ ಮಾತ್ರವೇ ಅಂಗೀಕರಿಸತಕ್ಕದ್ದು.

(5) ಅರ್ಜಿಯ ಜೊತೆಗೆ ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯನ್ನು ವರ್ಗಾವಣೆ ಮಾಡುವುದಿಲ್ಲ ಅಥವಾ ಕಾಲೇಜಿನ ಹೆಸರು ಮತ್ತು ಅಭಿನಾಮವನ್ನು ಬದಲಾವಣೆ ಮಾಡುವುದಿಲ್ಲವೆಂಬ ಒಂದು ಮುಚ್ಚಳಿಕೆಯು ಇರತಕ್ಕದ್ದು.

(6) (2)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಮಂಡಳಿಯ ಮುಂದೆ ಇಡತಕ್ಕದ್ದು. ಮಂಡಳಿಯು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಒಂದು ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆ ಮಾಡಬೇಕೆಂದು ನಿರ್ದೇಶನ ನೀಡತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) ವಿದ್ಯಾ ವಿಷಯಕ ಪರಿಷತ್ತು, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸ್ವೀಕರಿಸಿದ ತರುವಾಯ ಕೂಡಲೇ ವರದಿಯಲ್ಲಿ ವಿವರಿಸಿದ ಸಮಿತಿಯ ತೀರ್ಮಾನಗಳನ್ನು ಪರಿಗಣಿಸತಕ್ಕದ್ದು ಮತ್ತು ತನಗೆ

ಅವಶ್ಯಕವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಮನವಿಯ ಮೇಲೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಮಂಡಳಿಗೆ ಕಳುಹಿಸತಕ್ಕದ್ದು.

(9) ಮಂಡಳಿಯು, ಸಮಿತಿಯ ವರದಿಯನ್ನು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಗೊತ್ತುವಳಿಯನ್ನು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮನವಿಯನ್ನು ಪೂರ್ಣವಾಗಿ ಅಥವಾ ಭಾಗಶ: ಮಂಜೂರುಮಾಡಬೇಕೆ ಅಥವಾ ನಿರಾಕರಿಸಬೇಕೆ ಎಂಬ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

(10) ಕುಲಸಚಿವರು ಅರ್ಜಿಯನ್ನು ಅದರ ಅಡಕವನ್ನು, ಅನುಬಂಧ ಗಳನ್ನು ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಹಾಗೂ ಮಂಡಳಿಯ ಎಲ್ಲಾ ನಡವಳಿಗಳನ್ನು ಮುಂಬರುವ ವರ್ಷದ ಮಾರ್ಚ್ ಮೂವತ್ತೊಂದಕ್ಕೆ ಮೊದಲು ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(11) ರಾಜ್ಯ ಸರ್ಕಾರವು, ಸ್ಥಳಿಯ ವಿಚಾರಣಾ ಸಮಿತಿಯ, ವಿದ್ಯಾ ವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ಅವಶ್ಯಕವೆಂದು ಅದಕ್ಕೆ ಕಂಡುಬರುಬಹುದಾದಂತಹ ವಿಚಾರಣೆಯ ತರುವಾಯ ಪ್ರವೇಶಾವಕಾಶದಲ್ಲಿ ವ್ಯತ್ಯಾಸಗಳು ಸೇರಿದಂತೆ, ಸಂಯೋಜಿಸಲು ಅಥವಾ ಸಂಧರ್ಭಾನುಸಾರ ಸಂಯೋಜನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರಾಕರಿಸಲು ವಿಶ್ವವಿದ್ಯಾಲಯಕ್ಕೆ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು.

(12) ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು.

(13) ಆದಾಗ್ಯೂ ಸಂಯೋಜನೆಯ ಮಂಜೂರಾತಿಯು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅಥವಾ ಸಂಬಂಧಪಟ್ಟಂತಹ ಇತರ ಪ್ರಾಧಿಕಾರಗಳು ಅಥವಾ ನಿಕಾಯಗಳ ಪೂರ್ವಾನುಮೋದನೆ ಪಡೆಯುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶದ ಸಂಖ್ಯೆಯು, ಅಂತಹ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ.

(14) ಸಂಯೋಜನೆಗಾಗಿ ಅಥವಾ ಪ್ರವೇಶಾವಕಾಶದ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಅರ್ಜಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯವು ಮಂಜೂರು ಮಾಡಿದ್ದರೆ, ವಿಶ್ವವಿದ್ಯಾಲಯವು, ನಿರ್ದಿಷ್ಟ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ನಿರ್ದಿಷ್ಟ ಪ್ರವೇಶಾವಕಾಶದ ಸಂಖ್ಯೆಯೊಡನೆ ಯಾವ ವ್ಯಾಸಂಗಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ, ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಸಂಯೋಜಿಸಲಾಗಿದೆಯೋ, ಆ ವ್ಯಾಸಂಗ ಕ್ರಮಗಳನ್ನು ಮತ್ತು ಅವಧಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(15) ಅಂತಹ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಅಥವಾ ವಿಶ್ವವಿದ್ಯಾಲಯವು ನಿರಾಕರಿಸಿದ್ದರೆ, ಹಾಗೆ ನಿರಾಕರಿಸಲು ಕಾರಣಗಳನ್ನು ತಿಳಿಸತಕ್ಕದ್ದು.

(16) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಯಾವುದೇ ಅರ್ಜಿಯನ್ನು (12)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಅರ್ಜಿದಾರನು ಹಿಂದಕ್ಕೆ ಪಡೆಯಬಹುದು.

(17) ಪ್ರತಿಯೊಂದು ಶೈಕ್ಷಣಿಕ ವರ್ಷಕ್ಕಾಗಿ, ಪ್ರಸಕ್ತ ಇರುವ ವ್ಯಾಸಂಗ ಕ್ರಮಗಳಿಗಾಗಿ ಮತ್ತು ಹೊಸ ವ್ಯಾಸಂಗ ಕ್ರಮಗಳನ್ನು ಹೊರತುಪಡಿಸಿ ಅನುಸರಣಾ ವ್ಯಾಸಂಗ ಕ್ರಮಗಳಿಗೆ ಸಂಯೋಜನೆಯನ್ನು ನವೀಕರಿಸುವುದಕ್ಕಾಗಿ ಅಥವಾ ಮುಂದುವರೆಸುವುದಕ್ಕಾಗಿ ಮಂಜೂರಾತಿಯನ್ನು ಮಂಡಳಿಯು ಹೊಸ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗುವ ರೀತಿಯಲ್ಲಿಯೇ, ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿ ನೀಡಬಹುದು.

(18) ರಾಜ್ಯ ಸರ್ಕಾರವು ಪ್ರತಿಯೊಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರವೇಶಾವಕಾಶವನ್ನು ವಾರ್ಷಿಕ ಆಧಾರದಲ್ಲಿ ನಿರ್ಧರಿಸತಕ್ಕದ್ದು.

45. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವುದಕ್ಕೆ ನಿರ್ಬಂಧ.– (1) ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಒಂದು ಹೊಸ ಕಾಲೇಜು ಹೊಸ ವ್ಯಾಸಂಗ ಕ್ರಮಕ್ಕೆ ಸಂಯೋಜನೆಯನ್ನು ಕೋರುತ್ತಿರುವ ಅಥವಾ

ನಿರ್ದಿಷ್ಟಪಡಿಸಲಾದಂಥ ಪ್ರವೇಶಾವಕಾಶಕ್ಕಿಂತಲೂ ಹೆಚ್ಚು ಪ್ರವೇಶಾವಕಾಶ ವನ್ನು ಕೋರುತ್ತಿರುವ ಈಗಾಗಲೇ ಇರುವ ಒಂದು ಕಾಲೇಜು ಸಂದರ್ಭಾ ನುಸಾರ ಆ ಹೊಸ ಕಾಲೇಜಿಗೆ ಸಂಯೋಜನೆಯನ್ನು ಅಥವಾ ಈಗಾಗಲೇ ಇರುವ ಸಂಯೋಜಿತ ಕಾಲೇಜಿನಲ್ಲಿ ಒಂದು ಹೊಸ ವ್ಯಾಸಂಗ ಕ್ರಮವನ್ನು ಅಥವಾ ಅಂಥ ಒಂದು ವ್ಯಾಸಂಗ ಕ್ರಮದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಪ್ರವೇಶಾವಕಾಶವನ್ನು ಬದಲಾಯಿಸಲು ವಿಶ್ವ ವಿದ್ಯಾಲಯವು ಮಂಜೂರಾತಿ ನೀಡಿದ್ದ ಹೊರತು ಅವುಗಳು ಆ ಸಂಬಂಧದಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಯು ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜನೆ ಹೊಂದಿರದ ವಿದ್ಯಾ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ 7) ಅಡಿಯಲ್ಲಿ ಕೈಗೊಳ್ಳುವ ಕ್ರಮಕ್ಕೆ ಗುರಿಯಾಗತಕ್ಕದ್ದು.

46. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.– ತನ್ನ ಪ್ರವೇಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ತನ್ನ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶಪಡೆದಿರುವ ಯಾವೊಬ್ಬ ವಿದ್ಯಾರ್ಥಿಯು, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ.

47. ಖಾಯಂ ಸಂಯೋಜನೆ.–(1) ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜು ಖಾಯಂ ಸಂಯೋಜನೆಯ ಮಂಜೂರಾತಿಗೆ ಅರ್ಹವಾಗಿರತಕ್ಕದ್ದು.

(2) 45ನೇ ಪ್ರಕರಣದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಖಾಯಂ ಸಂಯೋಜನೆಯ ಮಂಜೂರಾತಿಗೆ ಅನ್ವಯವಾಗತಕ್ಕದ್ದು.

(3) ಖಾಯಂ ಆಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯ ವೈಖರಿಯನ್ನು ಐದು ವರ್ಷಗಳ ಅವಧಿಯಲ್ಲಿ ಕೊನೆಪಕ್ಷ ಒಂದು ಸಲದಂತೆ ಆಗಾಗ್ಗೆ, ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರಗಳು ಪರಿಶೀಲನೆ ಮಾಡತಕ್ಕದ್ದು.

(4) ಪೂರ್ವೋಕ್ತ ಉಪ ಪ್ರಕರಣಗಳಲ್ಲಿ ಏನೇ ಇದ್ದರೂ, ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದಲ್ಲಿ, ಅದರ ಖಾಯಂ ಸಂಯೋಜನೆಯನ್ನು ರದ್ದುಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಕಾಲೇಜಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ವಿಶ್ವವಿದ್ಯಾಲಯವು ಒಂದು ಅವಕಾಶಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಖಾಯಂ ಸಂಯೋಜನೆಯನ್ನು ರದ್ದುಗೊಳಿಸಿದ ತರುವಾಯ ಸಂಬಂಧಪಟ್ಟ ಕಾಲೇಜು, ಸಂಯೋಜನೆಯನ್ನು ವಾರ್ಷಿಕ ಆಧಾರದ ಮೇಲೆ ತಾತ್ಕಾಲಿಕವಾಗಿ ಮುಂದುವರೆಸಲು ಕೋರತಕ್ಕದ್ದು.

48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.– (1) ಸಂಯೋಜನೆಗೊಂಡ ಕಾಲೇಜು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ವಿಫಲವಾದರೆ ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲವಾದರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ದಕ್ಕೆ ಉಂಟು ಮಾಡುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಡು ಮಾಡಬಹುದು.

(2) ಅಂತಹ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟುಮಾಡುವುದಕ್ಕೆ ಸೂಚನೆಯನ್ನು ಮಂಡಳಿಯ ಸಭೆಯಲ್ಲಿ ಮಾತ್ರ ಮಂಡಿಸತಕ್ಕದ್ದು. ಮಂಡಳಿಯ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಅಂತಹ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂತಹ ಸೂಚನೆಯನ್ನು ಮಂಡಿಸಲಾಗಿದೆಯೋ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಅಂಥ ಒಂದು ನೋಟೀಸನ್ನು ನೀಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಮಂಡಳಿಯು, ನೋಟೀಸಿನ ಒಂದು ಪ್ರತಿಯನ್ನು, ತನ್ನ ತಿಳುವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜು ಸದರಿ ಸೂಚನೆಯ ಬಗ್ಗೆ ತನ್ನ ಯಾವುದೇ ಮನವಿಯನ್ನು ಬರೆದು ಸಲ್ಲಿಸತಕ್ಕದೆಂದು ಮತ್ತು ಅದನ್ನು ಮಂಡಳಿಯು ಪರ್ಯಾಲೋಚಿಸುವುದೆಂದು ನಿರ್ದಿಷ್ಟವಾಗಿ ತಿಳಿಸಿದ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು ಅವಶ್ಯವಿದ್ದಲ್ಲಿ, ಮಂಡಳಿಯು ಸಮಂಜಸ ಸಮಯದವರೆಗೆ ವಿಸ್ತರಿಸಬಹುದು.

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದಿನ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದ ಮೇಲೆ, ಮಂಡಳಿಯು ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಅದರ ಮೇಲೆ ಸಲ್ಲಿಸಿದ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಈ ಸಂಬಂಧದಲ್ಲಿ ತಾನು ರಚಿಸಿದ ಮತ್ತು ಪ್ರಾಧಿಕಾರ ನೀಡಿದ ಒಂದು ಸಮಿತಿಯು ತನಗೆ ಅವಶ್ಯವೆಂದು ಕಂಡು ಬರಬಹುದಾದಂತಹ ಪರಿಶೀಲನೆಯನ್ನು ನಡೆಸಿದ ತರುವಾಯ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ಣಯವನ್ನು ಅದಕ್ಕೆ ಕಾರಣಗಳನ್ನು ದಾಖಲಿಸಿ ಅಂಗೀಕರಿಸತಕ್ಕದ್ದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು.

(6) (5)ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾ ವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಮಂಡಳಿಗೆ ವಾಪಸ್ಸು ಕಳುಹಿಸಿಕೊಡತಕ್ಕದ್ದು.

(7) ಮಂಡಳಿಯು, ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದುಕೊಳ್ಳ ಬೇಕೆಂದು ಶಿಫಾರಸ್ಸು ಮಾಡಿದ ಅಂತಿಮ ನಿರ್ಣಯವನ್ನು ಅಂಗೀಕರಿ ಸತಕ್ಕದ್ದು. ಅಂತಹ ನಿರ್ಣಯಕ್ಕೆ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ದೊರೆತ ಹೊರತು ನಿರ್ಣಯವು

ಮಂಡಳಿಯಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಕುಲಸಚಿವರು ಪ್ರಸ್ತಾವವನ್ನು, ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಮಂಡಳಿಯ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳ ಸಮೇತ ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(9) ರಾಜ್ಯ ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂತಹ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆಯನ್ನು ಪೂರ್ತಿಯಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳುವಂತೆ ಅಥವಾ ಮಾರ್ಪಾಟು ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

(10) ವಿಶ್ವವಿದ್ಯಾಲಯವು ಅಂತಹ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ, ಅಂತಹ ನಿರ್ದೇಶನಕ್ಕೆ ಅನುಸಾರವಾಗಿ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು.

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಹಾಗೆ ಸ್ಥಳಾವಕಾಶ ಕಲ್ಪಿಸಬೇಕಾದಂತಹ ವಿದ್ಯಾರ್ಥಿಗಳ ಸಂಖ್ಯೆಯಷ್ಟರ ಮಟ್ಟಿಗೆ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದುಕೊಂಡ ಕಾಲೇಜಿನಿಂದ ವಿಶ್ವವಿದ್ಯಾಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು.

49. ಕಾಲೇಜು ಅಥವಾ ವ್ಯಾಸಂಗ ಕ್ರಮವನ್ನು ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ದೃಷ್ಟಿಯಿಂದ ಉರ್ಜಿತವಾಗದ ಕಾರಣದಿಂದ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ಕಾರಣದಿಂದ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು

ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಆ ಬಗ್ಗೆ ಕಾರಣಗಳನ್ನು ತಿಳಿಸಿ, ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಮಂಡಳಿಗಳು ಪರಿಗಣಿಸತಕ್ಕದ್ದು ಮತ್ತು ಅವು ಅದರ ಮೇಲೆ ಸೂಕ್ತ ಗೊತ್ತುವಳಿಗಳನ್ನು ಅಂಗೀಕರಿಸತಕ್ಕದ್ದು.

(3) ಕುಲಸಚಿವರು, ಅರ್ಜಿಯನ್ನು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮತ್ತು ಮಂಡಳಿಯ ಗೊತ್ತುವಳಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅವುಗಳನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡಬೇಕೆಂದು ಅಥವಾ ಮುಚ್ಚುವಿಕೆಗೆ ಅನುಮತಿ ನಿರಾಕರಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾಲಯವು ಮುಚ್ಚಬಹುದೆಂದು ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅವರ ವರ್ಗಾವಣೆಯ ನಂತರ, ವಿಶ್ವವಿದ್ಯಾಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ

ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಳಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

50. ಕೆಲವು ಸಂಸ್ಥೆಗಳಿಗೆ ಮಾನ್ಯತೆ.- (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ವಿಶೇಷ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಮಂಡಳಿಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

51. ಕಾಲೇಜುಗಳ ಪರಿವೀಕ್ಷಣೆ .- (1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜುಗಳೂ ಒಳಗೊಂಡಂತೆ ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ಮಂಡಳಿಯು ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ಮತ್ತು ಅದು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಮಂಡಳಿಯು, ಅಂಥ ಪ್ರತಿಯೊಂದು ಕಾಲೇಜನ್ನು ಈ ಉದ್ದೇಶಕ್ಕಾಗಿ ರಚಿಸಿದ ಒಂದು ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಮಂಡಳಿಯು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

(4) ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯವು ವಿದ್ಯಾವಿಷಯಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮತ್ತು ಅದಕ್ಕೆ ಪೂರಕವಾದ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅಧ್ಯಾಯ - VIII
ಶಾಸನಗಳು ಮತ್ತು ವಿನಿಯಮಗಳು

52. ಶಾಸನಗಳು.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದ ಶಾಸನಗಳು, ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು ಮತ್ತು ವಿಶೇಷವಾಗಿ, ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

(1) ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;

(2) ವಿಶ್ವವಿದ್ಯಾಲಯದ ವಿದ್ಯಾವಿಷಯಕ ಜೀವನವನ್ನು ಉತ್ತಮಗೊಳಿಸಲು ಅವಶ್ಯವಾದ ಅಥವಾ ಅಪೇಕ್ಷಣೀಯವಾದ ಇತರ ನಿಕಾಯಗಳ ಅಥವಾ ಸಮಿತಿಗಳ ರಚನೆ, ಸಂಯೋಜನೆ ಮತ್ತು ಪ್ರಕಾರ್ಯಗಳು;

(3) ಕುಲಪತಿಯವರನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಅಧಿಕಾರಿಗಳ ಪದನಾಮಗಳು, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ನೇಮಕಾತಿಯ ರೀತಿ ಮತ್ತು ಆಯ್ಕೆಗಳು ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;

(4) ವಿಶ್ವವಿದ್ಯಾಲಯದ ಬೋಧಕರ ಮತ್ತು ಇತರ ಸಿಬ್ಬಂದಿಗಳ ವರ್ಗೀಕರಣ, ವಿದ್ಯಾರ್ಹತೆ ಮತ್ತು ನೇಮಕಾತಿಯ ರೀತಿ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕರ್ತವ್ಯಗಳು;

(5) ವಿಶ್ವವಿದ್ಯಾಲಯಗಳ ಫ್ಯಾಕಲ್ಟಿಗಳು, ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಕೇಂದ್ರಗಳು ಮತ್ತು ಇತರ ಘಟಕಗಳ ಸ್ಥಾಪನೆ, ಸಮ್ಮಿಲನ, ಉಪವಿಭಜನೆ ಅಥವಾ ರದ್ದತಿ;

(6) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ಪ್ರಯೋಜನಕ್ಕಾಗಿ ವಿಶ್ರಾಂತಿ ವೇತನ ಮತ್ತು ವಿಮಾ ಯೋಜನೆಗಳ ರಚನೆ ಮತ್ತು ಅಂಥ ಯೋಜನೆಗಳ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳು;

(7) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಕೋತ್ಸವಗಳನ್ನು ನಡೆಸುವುದು;

(8) ಗೌರವ ಪದವಿಗಳು ಮತ್ತು ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಹಿಂಪಡೆಯುವುದು;

(9) ವಿಶ್ವವಿದ್ಯಾಲಯದಡಿಯಲ್ಲಿ, ನೇಮಕವಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಸೇವಾಷರತ್ತುಗಳು ಸಂದಾಯಮಾಡಬೇಕಾದ ಪರಿಶ್ರಮಧನ ಮತ್ತು ಪ್ರಯಾಣ ಮತ್ತು ದಿನ ಭತ್ಯೆಗಳೂ ಸೇರಿದಂತೆ ಭತ್ಯೆಗಳು;

(10) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿಯ ಷರತ್ತುಗಳು ಮತ್ತು ವಿಧಾನ;

(11) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುವ ಕಾಲೇಜುಗಳು, ಕೇಂದ್ರಗಳು, ವಿಭಾಗಗಳು, ಇಲಾಖೆಗಳು, ವಲಯ ಮತ್ತು ಪ್ರಾದೇಶಿಕ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳ ನಿರ್ವಹಣೆ;

(12) ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕರು ಮತ್ತು ಇತರ ಸಿಬ್ಬಂದಿಗಳ ನೇಮಕಾತಿಗಾಗಿ ಆಯ್ಕೆ ಸಮಿತಿಗಳ ರಚನೆ;

(13) ಈ ಅಧಿನಿಯಮದ ಮೂಲಕ ಶಾಸನಗಳ ಉಪಬಂಧ ಕಲ್ಪಿಸಬೇಕಾದ ಇತರ ಎಲ್ಲಾ ವಿಷಯಗಳು.

53. ಶಾಸನಗಳ ರಚನೆ.– (1) ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಮಂಡಳಿಯು ಯಾವುದೇ ಶಾಸನವನ್ನು ರಚಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಈ ಅಧಿನಿಯಮದಡಿಯಲ್ಲಿ ರಚಿಸಿದ ಶಾಸನಗಳನ್ನು ಮಂಡಳಿಯು ಪ್ರಸ್ತಾಪಿಸತಕ್ಕದ್ದು ಮತ್ತು ಸರ್ಕಾರದ ಮೂಲಕ ಕುಲಾಧಿಪತಿ ಯವರಿಗೆ ಅವರ ಅನುಮತಿ ಕೋರಿ ಸಲ್ಲಿಸತಕ್ಕದ್ದು ಮತ್ತು ಕುಲಾಧಿಪತಿ ಯವರ ಅನುಮತಿ ಪಡೆದ ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಅದು ಪ್ರಕಟಣೆಯಾದ ತರುವಾಯ ಮಾತ್ರವೇ ಇದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದಡಿಯಲ್ಲಿ ರಚಿಸಲಾದ ಎಲ್ಲಾ ಶಾಸನಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಳ್ಳತಕ್ಕದ್ದು.

54. ವಿನಿಯಮಗಳು.– (1) ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾದ ವಿನಿಯಮಗಳನ್ನು.–

(ಎ) ತಮ್ಮ ಸಭೆಗಳ ಕಾರ್ಯ ವಿಧಾನ ಮತ್ತು ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ ನಿಗದಿಪಡಿಸುವುದಕ್ಕಾಗಿ:

(ಬಿ) ಈ ಅಧಿನಿಯಮ ಅಥವಾ ಶಾಸನಗಳ ಪ್ರಕಾರ ವಿನಿಯಮಗಳ ಮೂಲಕ ನಿಯಂತ್ರಿಸಬೇಕಾದ ವಿಷಯ ಗಳನ್ನು ಉಪಬಂಧಿಸುವುದಕ್ಕಾಗಿ:

(ಸಿ) ಈ ಅಧಿನಿಯಮ ಮತ್ತು ಶಾಸನಗಳಿಂದ ಉಪಬಂಧಿ ಸಿರದ ಮತ್ತು ಪ್ರಾಧಿಕಾರಗಳಿಗೇ ಪೂರ್ಣವಾಗಿ ಸಂಬಂಧಪಟ್ಟ ಯಾವುದೇ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ:

- ರಚಿಸಬಹುದು.

(2) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ರಚಿಸಿದ ವಿನಿಯಮಗಳು, ಈ ಬಗ್ಗೆ ಮಂಡಳಿಯು ಕಾಲದಿಂದ ಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು, ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವ್ಯಾಸಂಗ ಕ್ರಮಗಳು, ಪರೀಕ್ಷಾ ಪದ್ಧತಿ, ಶೈಕ್ಷಣಿಕ ಕರ್ತವ್ಯಗಳ ಕಾಲಾನುಕ್ರಮ, ವಿಶ್ವವಿದ್ಯಾಲಯದ ಪದವಿಗಳು ಮತ್ತು ಡಿಪ್ಲೊಮಾಗಳನ್ನು ನೀಡುವುದು ಮತ್ತು ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ವಿನಿಯಮಗಳನ್ನು ರಚಿಸತಕ್ಕದ್ದು.

(4) ವಿದ್ಯಾವಿಷಯಕ ಪರಿಷತ್ತು, ಹಿಂದಿನ ಉಪಪ್ರಕರಣಗಳ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಧಕ್ಕೆಯಾಗದಂತೆ, ವಿನಿಯಮಗಳನ್ನು,-

(ಎ) ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪ್ರದಾನಮಾಡಲು ಘಟಿಕೋತ್ಸವಗಳನ್ನು ನಡೆಸುವುದಕ್ಕಾಗಿ;

(ಬಿ) ಗೌರವ ಪದವಿಗಳು, ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ಪದವಿ ಹಿಂಪಡೆಯುವುದಕ್ಕಾಗಿ ;

(ಸಿ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಸ್ಥಾಪನೆ ಮತ್ತು ರದ್ದತಿಗಾಗಿ;

(ಡಿ) ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳು, ಸ್ಟೈಪೆಂಡುಗಳು, ಶಿಷ್ಯವೇತನಗಳು, ಪದಕಗಳು ಮತ್ತು ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳಿಗಾಗಿ;

(ಇ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರವೇಶ ಮತ್ತು ಅದರ ಪಟ್ಟಿಯಲ್ಲಿ ಹೆಸರು ಸೇರಿಸುವ ಮತ್ತು ವಿದ್ಯಾರ್ಥಿಗಳಾಗಿ ಮುಂದುವರಿಸುವ ಮತ್ತು ಪಟ್ಟಿಯಿಂದ ವಿದ್ಯಾರ್ಥಿಗಳನ್ನು ಬಿಟ್ಟುಬಿಡುವ ಬಗ್ಗೆ ಷರತ್ತುಗಳು ಮತ್ತು ಪ್ರಕ್ರಿಯೆಗಾಗಿ;

(ಎಫ್) ವಿಶ್ವವಿದ್ಯಾಲಯವು ಚಾರ್ಜು ಮಾಡಬಹುದಾದ ಶುಲ್ಕಕ್ಕಾಗಿ;

(ಜಿ) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳಿಗಾಗಿ ರಚಿಸಲಾಗುವ ವ್ಯಾಸಂಗ ಕ್ರಮಗಳಿಗಾಗಿ;

(ಎಚ್) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ವ್ಯಾಸಂಗಕ್ರಮಗಳು ಮತ್ತು ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪ್ರವೇಶಿಸಲು ಷರತ್ತುಗಳು ಹಾಗೂ ಪದವಿಗಳು ಮತ್ತು ಡಿಪ್ಲೊಮಾಗಳನ್ನು ಪಡೆಯುವುದಕ್ಕಾಗಿ ಅಗತ್ಯವಾದ ಅರ್ಹತೆಗಾಗಿ;

(ಐ) ಪದವಿಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಷರತ್ತುಗಳಿಗಾಗಿ;

(ಜೆ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದಕ್ಕಾಗಿ;

(ಕೆ) ವಿದ್ಯಾರ್ಥಿನಿಯರ ವಸತಿ, ಶಿಸ್ತು ಮತ್ತು ಅವರಿಗೆ ಬೋಧನೆಗೆ ಯಾವುದಾದರೂ ವಿಶೇಷ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಮತ್ತು ವಿದ್ಯಾರ್ಥಿನಿಯರಿಗಾಗಿಯೇ ವಿಶೇಷ ವ್ಯಾಸಂಗಕ್ರಮಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ;

(ಎಲ್) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು ಮತ್ತು ವಿದ್ಯಾರ್ಥಿನಿಲಯಗಳ ನಿವಾಸಿಸುವುದಕ್ಕಾಗಿ ಶುಲ್ಕವನ್ನು ವಿಧಿಸುವುದಕ್ಕಾಗಿ;

(ಎಂ) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಮಾನ್ಯತೆ ಮತ್ತು ನಿರ್ವಹಣೆಗಾಗಿ;

ರಚಿಸತಕ್ಕದ್ದು.

ಅಧ್ಯಾಯ - IX

ಸಂಕೀರ್ಣ

55. ಕಾರ್ಯಗಳ ಹಾಗೂ ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು.– ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು ಕೇವಲ ಈ ಮುಂದಿನ ಕಾರಣಗಳಿಗಾಗಿ ಪ್ರಶ್ನಿಸತಕ್ಕದ್ದಲ್ಲ, ಎಂದರೆ:–

(i) ಯಾವುದೇ ಪ್ರಾಧಿಕಾರದ ರಚನೆಯಲ್ಲಿ ಯಾವುದೇ ಖಾಲಿಸ್ಥಾನ ಅಥವಾ ದೋಷ ಇರುವುದು, ಅಥವಾ

(ii) ಪ್ರಕರಣದ ಗುಣಾಂಶಗಳಿಗೆ ಬಾಧೆ ಉಂಟುಮಾಡದ ಆ ಕಾರ್ಯ ಅಥವಾ ವ್ಯವಹರಣೆಗಳಲ್ಲಿರುವ ಯಾವುದೇ ದೋಷ ಅಥವಾ ಕ್ರಮಬಾಹಿರತೆ.

56. ವಿದ್ಯಾರ್ಥಿಗಳ ವಾಸಸ್ಥಳ.– ವಿಶ್ವವಿದ್ಯಾಲಯವು ನಿರ್ವಹಿಸುವ ಅಥವಾ ಕುಲಪತಿಯವರು ಅನುಮೋದಿಸಿದ ವಾಸಸ್ಥಳದಲ್ಲಿ ವಿದ್ಯಾರ್ಥಿಗಳು ನಿಯಮಿಸಲಾದಂಥ ಷರತ್ತುಗಳಿಗೊಳಪಟ್ಟು ವಾಸಿಸತಕ್ಕದ್ದು. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಅಂಥ ವಾಸಸ್ಥಳವು ದೊರಕದಿದ್ದಲ್ಲಿ ವಿಶ್ವವಿದ್ಯಾಲಯದ ಕುಲಪತಿಯವರು ಅಥವಾ ಅಧಿಕೃತರಾದ ಒಬ್ಬ ಅಧಿಕಾರಿಯು

ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯವರೊಂದಿಗೆ ಅಥವಾ ಖಾಸಗಿ ವಾಸಸ್ಥಳಗಳಲ್ಲಿ ವಾಸಿಸಲು ಅನುಮತಿಸಬಹುದು.

57. ವಾರ್ಷಿಕ ವರದಿ.– ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕುಲಸಚಿವರು ಅಥವಾ ಕುಲಪತಿಯವರ ನಿರ್ದೇಶನಗಳಡಿಯಲ್ಲಿ ಇತರ ಯಾವೊಬ್ಬ ಅಧಿಕಾರಿಯು ಹಣಕಾಸು ವರ್ಷದ ಮುಕ್ತಾಯದಿಂದ ಆರು ತಿಂಗಳೊಳಗೆ ತಯಾರಿಸತಕ್ಕದ್ದು ಮತ್ತು ಇದನ್ನು ಪರಿಗಣನೆಗೆ ತೆಗೆದು ಕೊಳ್ಳುವ ಸಭೆಯು ನಡೆಯುವುದಕ್ಕೆ ಒಂದು ತಿಂಗಳ ಮೊದಲು ಮಂಡಳಿಯ ಸದಸ್ಯರುಗಳಿಗೆ ಪರಿಚಲನೆ ಮಾಡತಕ್ಕದ್ದು. ಮಂಡಳಿಯು ವಾರ್ಷಿಕ ವರದಿಯ ಪರಿಗಣನೆಯ ತರುವಾಯ ಅದರ ಪ್ರತಿಯನ್ನು ಸರ್ಕಾರದ ಮುಂದಿಡತಕ್ಕದ್ದು, ಅದನ್ನು ವಿಧಾನಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

58. ಅಧಿಕಾರಗಳ ಪ್ರತ್ಯಾಯೋಜನೆ.– ಕುಲಪತಿಯವರು, ಆದೇಶದ ಮೂಲಕ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾಗಿರುವ ಶಾಸನಗಳಡಿಯಲ್ಲಿ ತಾನು ಚಲಾಯಿಸಬಹುದಾದ ಅಧಿಕಾರಗಳನ್ನು ಕುಲಪತಿ ಯವರು ಸರಿಯಾಗಿದೆಯೆಂದು ಭಾವಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳಿಗೊಳಪಟ್ಟು ಯಾವುದೇ ಪ್ರಾಧಿಕಾರ, ಅಧಿಕಾರಿ, ಕಾಲೇಜುಗಳ ಮುಖ್ಯಸ್ಥರು, ಇಲಾಖೆಗಳು, ಸಂಸ್ಥೆಗಳು ಅಥವಾ ಘಟಕಗಳು ಅಥವಾ ಕಚೇರಿಗೆ ಪ್ರತ್ಯಾಯೋಜಿಸಬಹುದು.

59. ಅಡ್–ಹಾಕ್ ಸಮಿತಿಗಳ ರಚನೆ.– ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳ ಉಪಬಂಧಗಳನ್ವಯ ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳು ಅಥವಾ ನಿಕಾಯಗಳು ರಚನೆಯಾಗುವವರೆಗೆ ಕುಲಾಧಿಪತಿಯವರ ಪೂರ್ವಾ ನುಮೋದನೆಗೊಳಪಟ್ಟು ಕುಲಪತಿಯವರು, ಈ ಅಧಿನಿಯಮ ಅಥವಾ ಶಾಸನಗಳು ಅಥವಾ ವಿನಿಯಮಗಳಡಿಯಲ್ಲಿನ ಅಂಥ ಪ್ರಾಧಿಕಾರಗಳ ಅಥವಾ ನಿಕಾಯಗಳ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಮಾಡಲು ತಾತ್ಕಾಲಿಕವಾಗಿ ಅಡ್–ಹಾಕ್ ಸಮಿತಿಗಳನ್ನು ನೇಮಿಸಬಹುದು.

60. ಪ್ರಾಧಿಕಾರಗಳು ಅಥವಾ ನಿಕಾಯಗಳ ಸ್ಥಾಪನೆಯಲ್ಲಿ ವಿವಾದಗಳು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ನೇಮಕಾತಿ ಹೊಂದಲು ಅಥವಾ ಸದಸ್ಯನಾಗಲು ಯಾವುದೇ ವ್ಯಕ್ತಿಯ ಅರ್ಹತೆಯ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದಲ್ಲಿ, ಆ ವಿಷಯವನ್ನು ಕುಲಾಧಿಪತಿಯವರಿಗೆ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಯಾವುದೇ ಅಂಥ ತೀರ್ಮಾನವನ್ನು ತೆಗೆದುಕೊಳ್ಳುವ ಮುಂಚೆ, ಕುಲಾಧಿಪತಿಯವರು ಅದರಿಂದ ಬಾಧಿತನಾಗುವ ವ್ಯಕ್ತಿಗೆ ತನ್ನ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

61. ವಿಶ್ವವಿದ್ಯಾಲಯದ ಪುನರಾವಲೋಕನ ಆಯೋಗದ ನೇಮಕ.– (1) ಕುಲಾಧಿಪತಿಯು, ಪ್ರತಿ ಐದು ವರ್ಷಗಳಿಗೊಮ್ಮೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸುಗಳನ್ನು ಮಾಡುವುದಕ್ಕಾಗಿ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ಮೂವರಿಗೆ ಕಡಿಮೆಯಿಲ್ಲದಂತೆ, ಕುಲಾಧಿಪತಿ ಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ಕೃಷಿ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರಾಗತಕ್ಕದ್ದು.

(3) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳು ಆಗಿರತಕ್ಕದ್ದು.

(4) ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆ ಯನ್ನು ನಡೆಸಿದ ತರುವಾಯ ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಶಿಫಾರಸ್ಸಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ಶಿಫಾರಸುಗಳ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

62. ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳಿಗೆ ನೇಮಕಾತಿ.– (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇಮಕಾತಿ ಮತ್ತು ಸೇವೆಗಳನ್ನು ನಿಯಮಿಸಲಾದಂತೆ ಮಂಡಳಿಯ ಪೂರ್ವಾನುಮತಿಯೊಡನೆ ಕುಲಪತಿಯವರು ಮಾಡಬಹುದು:

ಪರಂತು, ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯದ್ದಕ್ಕಿಂತ ಕಡಿಮೆ ವೇತನಶ್ರೇಣಿಯಿರುವ ಹುದ್ದೆಗಳ ನೇಮಕಾತಿಯ ಸಂಬಂಧದಲ್ಲಿ ಅಂಥ ಅನುಮೋದನೆಯ ಅವಶ್ಯಕತೆ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಶಾಸನಗಳು ರಚನೆಯಾಗುವ ಅಥವಾ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಸ್ಥಾಪನೆಯಾಗುವವರೆಗಿನ ಅವಧಿಗೆ, ವಿಶ್ವವಿದ್ಯಾಲಯದ ವ್ಯವಹರಣೆಗಳ ಸಂಬಂಧದಲ್ಲಿ ಹುದ್ದೆಗಳು ಮತ್ತು ಸೇವೆಗಳಿಗೆ ನೇಮಕಾತಿಗಳನ್ನು, ಕುಲಾಧಿಪತಿಯವರು ಅನುಮೋದಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕುಲಪತಿಯವರು ಮಾಡಬಹುದು.

63. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಅಥವಾ ನಿಕಾಯವು ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ನಿರ್ವಹಿಸಬೇಕಾದ ಯಾವುವೇ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಅಥವಾ ವಿನಿಯಮಗಳಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಥವಾ ನಿಕಾಯವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

64. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಶಾಸನಗಳು ಅಥವಾ ವಿನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ನಡೆಸಲು ಅವಕಾಶ ಇರತಕ್ಕದ್ದಲ್ಲ ಮತ್ತು ಅವರಿಂದ ಯಾವುದೇ ನಷ್ಟ ಪರಿಹಾರಗಳನ್ನು ಕ್ಲೈಮ್ ಮಾಡತಕ್ಕದ್ದಲ್ಲ.

65. ತೊಂದರೆಗಳ ನಿವಾರಣೆಗೆ ಅಧಿಕಾರ.- (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಮೊದಲ ರಚನೆಯ ಅಥವಾ ಪುನಾರಚನೆಯ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 8ನೇ ಪ್ರಕರಣದ (8)ನೇ ಉಪ-ಪ್ರಕರಣದಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಮಂಡಲದ ಯಾವೊಂದು ಸದನವು ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ, ಅಥವಾ ಆ ಅಧಿಸೂಚನೆಯು

ಪರಿಣಾಮಕ್ಕೆ ಬರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಹಾಗೂ ಆ ಮಾರ್ಪಾಡು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ತದನಂತರ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗ ತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ಧತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

66. ಕಾನೂನು ವ್ಯವಹರಣೆ.– ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧವಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಅಥವಾ ಕುಲಪತಿಯವರು ಇದರ ಬಗ್ಗೆ ಆಧಿಕಾರ ನೀಡಿದ ಯಾವೊಬ್ಬ ಇತರ ಅಧಿಕಾರಿಯು ಪ್ರಾರಂಭಿಸತಕ್ಕದ್ದು, ಪ್ರಾಸಿಕ್ಯೂಟ್ ಮಾಡತಕ್ಕದ್ದು ಅಥವಾ ಪ್ರತಿರಕ್ಷಿಸತಕ್ಕದ್ದು.

67. ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗೆ ರಾಜ್ಯ ಸಮನ್ವಯ ಸಮಿತಿ.– (1) ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ, ವಿಶೇಷವಾಗಿ, ಬೋಧನೆ, ಸಂಶೋಧನೆ, ವಿಸ್ತರಣಾ ಶಿಕ್ಷಣ ಮತ್ತು ಸಾಮಾನ್ಯ ಆಸಕ್ತಿಗಳ ಇತರ ವಿಷಯಗಳ ಸಂಬಂಧದಲ್ಲಿ ಪರಿಣಾಮಕಾರಿ ಸಮನ್ವಯದ ಉದ್ದೇಶಕ್ಕಾಗಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗಾಗಿ ಒಂದು ರಾಜ್ಯ ಸಮನ್ವಯ ಸಮಿತಿಯು ಇರತಕ್ಕದ್ದು.

(2) ರಾಜ್ಯ ಸಮನ್ವಯ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕೃಷಿ ಪ್ರಭಾರದಲ್ಲಿರುವ ಸಚಿವರು, ಕರ್ನಾಟಕ ಸರ್ಕಾರ ಇವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಯವರು;

(ಸಿ) ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತಾರಣೆ ನಿರ್ದೇಶಕರುಗಳು;

(ಡಿ) ರಾಜ್ಯದಲ್ಲಿಯ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಸಚಿವರು;

(ಇ) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಸಮನ್ವಯ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(ಎ) ರಾಜ್ಯದಲ್ಲಿಯ ಕೃಷಿ ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಭಂಗವಾಗದಂತೆ ನೋಡಿಕೊಳ್ಳುವುದು;

(ಬಿ) ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿನಿಯಮಗಳನ್ನು ಸಮನ್ವಯಗೊಳಿಸುವುದು;

(ಸಿ) ರಾಜ್ಯದಲ್ಲಿಯ ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳಲ್ಲಿ ಸಹಕಾರದ ಪ್ರದೇಶಗಳನ್ನು ಗುರುತಿಸುವ ಮೂಲಕ ಪರಸ್ಪರ ಪೂರಕ ಮತ್ತು ಕೂಡುಬಲದಿಂದ ಕೆಲಸ ಮಾಡುವಂತೆ ನೋಡಿಕೊಳ್ಳುವುದು;

(ಡಿ) ರಾಜ್ಯದಲ್ಲಿಯ ಮತ್ತು ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಡನೆ ಕೃಷಿ ಅಭಿವೃದ್ಧಿಗಾಗಿ ಹೊಸ ಕಾರ್ಯಕ್ರಮಗಳು ಮತ್ತು ಕ್ರಿಯಾ ಯೋಜನೆಗಳನ್ನು ಸಲಹೆ ಮಾಡುವುದು;

(ಇ) ಅಂತರ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ – ರಾಜ್ಯ ಇವುಗಳ ನಡುವಿನ ವಿವಾದಗಳನ್ನು ಪರಿಹರಿಸುವುದು.

(4) ಸಮಿತಿಯು ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

68. ಶಾಸನಗಳ ಮತ್ತು ವಿನಿಯಮಗಳು ಮುಂತಾದವುಗಳ ಮುಂದುವರಿಕೆ.– (1) ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ಶಾಸನಗಳು ಅಥವಾ ವಿನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 1963ರ ಉಪಬಂಧಗಳ ಅಡಿಯಲ್ಲಿ ರಚಿಸಿದ ಹಾಗೂ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಶಾಸನಗಳು ಮತ್ತು ವಿನಿಯಮಗಳನ್ನು, ಅವು ಈ

ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಮತ್ತು ಕುಲಾಧಿಪತಿಯವರ ಅನುಮೋದನೆ ಪಡೆದುಕೊಂಡು ಕುಲಪತಿಯು ಅದರಲ್ಲಿ ಮಾಡಬಹುದಾದಂತಹ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ವಿಶ್ವವಿದ್ಯಾಲಯವು ರಚಿಸಿದ ಶಾಸನಗಳು ಮತ್ತು ವಿನಿಯಮಗಳೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನದಂದು, ಕರ್ನಾಟಕ ಕೃಷಿ ವಿಜ್ಞಾನಗಳ ಅಧಿನಿಯಮ, 1963ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಕುಲಪತಿಗಳ ಪದವನ್ನು ಧಾರಣ ಮಾಡಿದ ವ್ಯಕ್ತಿಯು ಈ ಅಧಿನಿಯಮವನ್ನು ಪ್ರಖ್ಯಾಪಿಸದಿದ್ದರೆ ಎಲ್ಲಿಯವರೆಗೆ ಆತನು ತನ್ನ ಹುದ್ದೆಯನ್ನು ಧಾರಣ ಮಾಡಿರುತ್ತಿದ್ದನೋ ಅಲ್ಲಿಯವರೆಗೆ ಆ ಪದದಲ್ಲಿ ಮುಂದುವರೆಯತಕ್ಕದ್ದು.

69. ನಿರಸನ ಮತ್ತು ಉಳಿಸುವಿಕೆಗಳು.– (1) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 2) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 09.02.1995 ರಂದು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಒಂದು ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿದ್ದಾರೆ ಮತ್ತು 2008ರಲ್ಲಿ ಒಂದು ಪರಿಷ್ಕೃತ ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿ ಮಾದರಿ ವಿಧೇಯಕವನ್ನು ರಾಜ್ಯ ಸರ್ಕಾರಗಳು ಪರಿಗಣಿಸಬೇಕೆಂದು, ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಡನೆ ಅವನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ಪ್ರತಿಯೊಂದು ರಾಜ್ಯವು, ಸಮಗ್ರ ರೀತಿಯಲ್ಲಿ ತರಬೇತಿ ಹಾಗೂ ವಿದ್ಯಾಭ್ಯಾಸ ವನ್ನು ನೀಡುವಂತಹ ವಿವಿಧ ವಿದ್ಯಾ ವಿಷಯಗಳನ್ನು ಒಳಗೊಂಡ ಒಂದು ಶಿಕ್ಷಣ ಕ್ರಮವುಳ್ಳ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಹೊಂದಿರಬೇಕೆಂದು ಸದರಿ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

ಅದಕ್ಕನುಗುಣವಾಗಿ ಒಂದು ವ್ಯಾಪಕ ಶಾಸನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ರ ಕೆಲವು ಪ್ರಮುಖ ಅಂಶಗಳು ಈ ಮುಂದಿನಂತಿವೆ:-

(1) ರಿಜೆಂಟ್‌ಗಳ ಮಂಡಳಿ ಎಂಬುದನ್ನು ವ್ಯವಸ್ಥಾಪನಾ ಮಂಡಳಿ ಎಂದು ಬದಲಾಯಿಸಲಾಗಿದೆ.

(2) ದೇಣಿಗೆಗಳನ್ನು ಸ್ವೀಕರಿಸಲು ಮತ್ತು ಭಾರತದ ಹೊರಗೆ ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಗಳನ್ನು ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಸೇರಿಸಿಕೊಳ್ಳಲು, ಮತ್ತು ಕೃಷಿ ಹಾಗೂ ಸಂಬಂಧಪಟ್ಟ ವಿಜ್ಞಾನಗಳಲ್ಲಿ ಬೋಧನೆಯನ್ನು ನಡೆಸಲು ಅವುಗಳಿಗೆ ಸಂಯೋಜನೆಯನ್ನು ನೀಡಲು ಉಪಬಂಧಗಳನ್ನು ಪ್ರಸ್ತಾವಿಸಲಾಗಿದೆ.

(3) ಕುಲಾಧಿಪತಿಯವರು ಕೃಷಿ ಮತ್ತು ಸಂಬಂಧಪಟ್ಟ ವಿಜ್ಞಾನ ರಂಗಗಳಲ್ಲಿನ ಒಬ್ಬ ಖ್ಯಾತ ಶಿಕ್ಷಣ ತಜ್ಞರನ್ನು ಅಥವಾ ವಿಜ್ಞಾನಿಯನ್ನು ನಾಮನಿರ್ದೇಶನ ಮಾಡಲು ಒಂದು ಉಪಬಂಧವನ್ನು ಸೇರಿಸಲಾಗಿದೆ.

(4) ಕೃಷಿ ಉದ್ಯಮ ರಂಗದ ಒಬ್ಬ ವ್ಯಕ್ತಿಯನ್ನು ವ್ಯವಸ್ಥಾಪನ ಮಂಡಳಿಗೆ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಉದ್ದೇಶಿತ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

(5) ನಾಮನಿರ್ದೇಶಿತ ಸದಸ್ಯರ ಗರಿಷ್ಠ ಪದಾವಧಿಯು ಕೇವಲ ಮೂರು ವರ್ಷಗಳು ಹಾಗೂ ಅವರು ಒಂದಕ್ಕಿಂತ ಹೆಚ್ಚುಸಲು ನಾಮನಿರ್ದೇಶಿತರಾಗಲು ಅವಕಾಶ ಇಲ್ಲ ಎಂಬುದನ್ನು ಸಹ ಉದ್ದೇಶಿತ ವಿಧೇಯಕದಲ್ಲಿ ಸೇರಿಸಲಾಗಿದೆ.

(6) ಪದವಿ ಅಧ್ಯಯನ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಉಪಬಂಧಸಲಾಗಿದೆ.

(7) ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣ ಪರಿಷತ್ತುಗಳಿಗೆ ಹೆಚ್ಚು ಪ್ರತಿನಿಧಿಗಳನ್ನು ಸೇರಿಸಿ ಪುನರ್ ಸಂಘಟಿಸಲಾಗಿದೆ.

(8) ಕುಲಪತಿಗಳ ಪದಾವಧಿ ನಾಲ್ಕು ವರ್ಷಗಳು.

(9) ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ರಾಜ್ಯ ಸಮನ್ವಯ ಸಮಿತಿ ಸ್ಥಾಪಿಸಲು ಉಪಬಂಧ ಕಲ್ಪಿಸಲಾಗಿದೆ.

(10) ಖಾಸಗಿ ಕಾಲೇಜುಗಳ ಸ್ಥಾಪನೆಗೆ ಮತ್ತು ಅದಕ್ಕೆ ಸಂಯೋಜನೆ ನೀಡುವುದಕ್ಕೆ ಅವಕಾಶ ನೀಡಿ ಒಂದು ಉಪಬಂಧವನ್ನು ಕಲ್ಪಿಸಲಾಗಿದೆ.

(11) ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ.

ಮೇಲ್ಕಂಡ ಉದ್ದೇಶಗಳ ಸಾಧನೆಗಾಗಿ ಒಂದು ವ್ಯಾಪಕ ಶಾಸನವನ್ನು ತರಲು ಉದ್ದೇಶಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ದಿನಾಂಕ: 22.11.2008ರಂದು ಪ್ರಖ್ಯಾಪಿಸಲಾಗಿತ್ತು.

ಕರ್ನಾಟಕ ವಿಧಾನ ಸಭೆಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009ನ್ನು (2009ರ ವಿಧಾನಸಭೆ ವಿಧೇಯಕ ಸಂಖ್ಯೆ 10) ಮಂಡಿಸಲಾಗಿತ್ತು. ವಿಧಾನಮಂಡಲದ ಅಧಿವೇಶನದಲ್ಲಿ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಕರ್ನಾಟಕ ವಿಧಾನಮಂಡಲವು ಮರುಸಮಾವೇಶಗೊಂಡು ಆರು ವಾರಗಳು ಮುಕ್ತಾಯವಾದ ಕಾರಣ ದಿನಾಂಕ: 26.02.2009 ರಂದು ಈ ಅಧ್ಯಾದೇಶದ ಕಾರ್ಯಾಚರಣೆಯು ನಿಂತುಹೋಗಿರುತ್ತದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಅಧಿವೇಶನದಲ್ಲಿ ಇರದಿದ್ದುದರಿಂದ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ 2) ದಿನಾಂಕ: 02.06.2009 ರಂದು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲು ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾಪಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯ ಬೊಕ್ಕಸಕ್ಕೆ ಸುಮಾರು 90 ಕೋಟಿ ರೂಪಾಯಿಗಳ ವೆಚ್ಚ ಉಂಟಾಗುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 09.02.1995 ರಂದು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಒಂದು ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿದ್ದಾರೆ ಮತ್ತು 2008ರಲ್ಲಿ ಒಂದು ಪರಿಷ್ಕೃತ ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿ ಮಾದರಿ ವಿಧೇಯಕವನ್ನು ರಾಜ್ಯ ಸರ್ಕಾರಗಳು ಪರಿಗಣಿಸಬೇಕೆಂದು, ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಡನೆ ಅವನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ಪ್ರತಿಯೊಂದು ರಾಜ್ಯವು, ಸಮಗ್ರ ರೀತಿಯಲ್ಲಿ ತರಬೇತಿ ಹಾಗೂ ವಿದ್ಯಾಭ್ಯಾಸ ವನ್ನು ನೀಡುವಂತಹ ವಿವಿಧ ವಿದ್ಯಾ ವಿಷಯಗಳನ್ನು ಒಳಗೊಂಡ ಒಂದು ಶಿಕ್ಷಣ ಕ್ರಮವುಳ್ಳ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಹೊಂದಿರಬೇಕೆಂದು ಸದರಿ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

ಅದಕ್ಕನುಗುಣವಾಗಿ ಒಂದು ವ್ಯಾಪಕ ಶಾಸನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ರ ಕೆಲವು ಪ್ರಮುಖ ಅಂಶಗಳು ಈ ಮುಂದಿನಂತಿವೆ:-

(1) ರಿಜೆಂಟ್‌ಗಳ ಮಂಡಳಿ ಎಂಬುದನ್ನು ವ್ಯವಸ್ಥಾಪನಾ ಮಂಡಳಿ ಎಂದು ಬದಲಾಯಿಸಲಾಗಿದೆ.

(2) ದೇಣಿಗೆಗಳನ್ನು ಸ್ವೀಕರಿಸಲು ಮತ್ತು ಭಾರತದ ಹೊರಗೆ ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಗಳನ್ನು ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಸೇರಿಸಿಕೊಳ್ಳಲು, ಮತ್ತು ಕೃಷಿ ಹಾಗೂ ಸಂಬಂಧಪಟ್ಟ ವಿಜ್ಞಾನಗಳಲ್ಲಿ ಬೋಧನೆಯನ್ನು ನಡೆಸಲು, ಅವುಗಳಿಗೆ ಸಂಯೋಜನೆಯನ್ನು ನೀಡಲು ಉಪಬಂಧಗಳನ್ನು ಪ್ರಸ್ತಾವಿಸಲಾಗಿದೆ.

(3) ಕುಲಾಧಿಪತಿಯವರು ಕೃಷಿ ಮತ್ತು ಸಂಬಂಧಪಟ್ಟ ವಿಜ್ಞಾನ ರಂಗಗಳಲ್ಲಿನ ಒಬ್ಬ ಖ್ಯಾತ ಶಿಕ್ಷಣ ತಜ್ಞರನ್ನು ಅಥವಾ ವಿಜ್ಞಾನಿಯನ್ನು ನಾಮನಿರ್ದೇಶನ ಮಾಡಲು ಒಂದು ಉಪಬಂಧವನ್ನು ಸೇರಿಸಲಾಗಿದೆ.

(4) ಕೃಷಿ ಉದ್ಯಮ ರಂಗದ ಒಬ್ಬ ವ್ಯಕ್ತಿಯನ್ನು ವ್ಯವಸ್ಥಾಪನ ಮಂಡಳಿಗೆ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಉದ್ದೇಶಿತ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

(5) ನಾಮನಿರ್ದೇಶಿತ ಸದಸ್ಯರ ಗರಿಷ್ಠ ಪದಾವಧಿಯು ಕೇವಲ ಮೂರು ವರ್ಷಗಳು ಹಾಗೂ ಅವರು ಒಂದು ಕ್ಕಿಂತ ಹೆಚ್ಚುಸಲ ನಾಮನಿರ್ದೇಶಿತರಾಗಲು ಅವಕಾಶ ಇಲ್ಲ ಎಂಬುದನ್ನು ಸಹ ಉದ್ದೇಶಿತ ವಿಧೇಯಕದಲ್ಲಿ ಸೇರಿಸಲಾಗಿದೆ.

(6) ಪದವಿ ಅಧ್ಯಯನ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಉಪಬಂಧಿಸಲಾಗಿದೆ.

(7) ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣಾ ಪರಿಷತ್ತುಗಳಿಗೆ ಹೆಚ್ಚು ಪ್ರತಿನಿಧಿಗಳನ್ನು ಸೇರಿಸಿ ಪುನರ್ ಸಂಘಟಿಸಲಾಗಿದೆ.

(8) ಕುಲಪತಿಗಳ ಪದಾವಧಿ ನಾಲ್ಕು ವರ್ಷಗಳು.

(9) ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ರಾಜ್ಯ ಸಮನ್ವಯ ಸಮಿತಿ ಸ್ಥಾಪಿಸಲು ಉಪಬಂಧ ಕಲ್ಪಿಸಲಾಗಿದೆ.

(10) ಖಾಸಗಿ ಕಾಲೇಜುಗಳ ಸ್ಥಾಪನೆಗೆ ಮತ್ತು ಅದಕ್ಕೆ ಸಂಯೋಜನೆ ನೀಡುವುದಕ್ಕೆ ಅವಕಾಶ ನೀಡಿ ಒಂದು ಉಪಬಂಧವನ್ನು ಕಲ್ಪಿಸಲಾಗಿದೆ.

(11) ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆ.

ಮೇಲ್ಕಂಡ ಉದ್ದೇಶಗಳ ಸಾಧನೆಗಾಗಿ ಒಂದು ವ್ಯಾಪಕ ಶಾಸನವನ್ನು ತರಲು ಉದ್ದೇಶಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ದಿನಾಂಕ: 22.11.2008ರಂದು ಪ್ರಖ್ಯಾಪಿಸಲಾಗಿತ್ತು.

ಕರ್ನಾಟಕ ವಿಧಾನ ಸಭೆಯಲ್ಲಿ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ವಿಧೇಯಕ, 2009ನ್ನು (2009ರ ವಿಧಾನಸಭೆ ವಿಧೇಯಕ ಸಂಖ್ಯೆ 10) ಮಂಡಿಸಲಾಗಿತ್ತು. ವಿಧಾನಮಂಡಲದ ಅಧಿವೇಶನದಲ್ಲಿ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಕರ್ನಾಟಕ ವಿಧಾನಮಂಡಲವು ಮರುಸಮಾವೇಶಗೊಂಡು ಆರು ವಾರಗಳು

ಮುಕ್ತಾಯವಾದ ಕಾರಣ ದಿನಾಂಕ: 26.02.2009 ರಂದು ಈ ಅಧ್ಯಾದೇಶದ ಕಾರ್ಯಾಚರಣೆಯು ನಿಂತುಹೋಗಿರುತ್ತದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಅಧಿವೇಶನದಲ್ಲಿ ಇರದಿದ್ದುದರಿಂದ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ 2) ದಿನಾಂಕ: 02.06.2009 ರಂದು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಎಸ್.ಎ. ರವೀಂದ್ರನಾಥ
ಕೃಷಿ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009ಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನದ 200ನೇ ಅನುಚ್ಛೇದದ ಅಡಿಯಲ್ಲಿ, ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿಗೆ ಸಂದೇಶ.

* * * *

ಸರ್ಕಾರವು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009ನ್ನು ನನ್ನ ಅನುಮತಿ ಕೋರಿ ಒಪ್ಪಿಸಿದೆ. ಭಾರತ ಸಂವಿಧಾನದಲ್ಲಿ ನಿರೂಪಿಸಲಾಗಿರುವ ತತ್ವಗಳಲ್ಲಿ, ಉನ್ನತ ಕಲಿಕೆಯ ಪವಿತ್ರ ದೇವಾಲಯಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಸಾಕಾರಗೊಳಿಸುವ ಅವಕಾಶ ಕಲ್ಪಿಸಲಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಪರಿಸರ ಪಾವಿತ್ರ್ಯವನ್ನು ಸಂರಕ್ಷಿಸುವುದಕ್ಕಾಗಿ ಅವುಗಳನ್ನು ರಾಜಕೀಯ ಚಟುವಟಿಕೆಗಳ ಪ್ರಭಾವ ಮತ್ತು ಒತ್ತಡಗಳಿಂದ ಮುಕ್ತಗೊಳಿಸತಕ್ಕದ್ದು. ಇದು ನಮ್ಮ ದೇಶದಲ್ಲಿ ಒಂದು ಸುಸ್ಥಾಪಿತ ಸಂಗತಿಯಾಗಿದೆ. ಈ ಉದ್ದೇಶದಿಂದ ಶಿಕ್ಷಣ ವಿಷಯವನ್ನು ಸಮವರ್ತಿ ಪಟ್ಟಿಯಲ್ಲಿಡಲಾಗಿದೆ ಮತ್ತು ರಾಜ್ಯಪಾಲರನ್ನು, ರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳನ್ನಾಗಿ ಮಾಡಲಾಗಿದೆ.

ಕೃಷಿ ವಿಶ್ವವಿದ್ಯಾಲಯಗಳ ಪಾತ್ರವು ಕೃಷಿ ಶಿಕ್ಷಣವನ್ನು ನೀಡುವುದರ ಜೊತೆಗೆ ಆಹಾರ ಭದ್ರತೆ, ತಲಾವಾರು ಆದಾಯ ಹಾಗೂ ನಮ್ಮ ದೇಶದ ಅಭಿವೃದ್ಧಿಗಾಗಿ ಕೃಷಿಯನ್ನೇ ಅವಲಂಬಿಸಿರುವ ನಮ್ಮ ರಾಷ್ಟ್ರದ ಜನತೆಯೊಂದಿಗೆ ಸಹಜವಾಗಿಯೇ ಸಂಬಂಧ ಹೊಂದಿ, ಕೃಷಿ ಉತ್ಪನ್ನದ ಗುಣಮಟ್ಟ ಮತ್ತು ಪರಿಮಾಣ ಇವೆರಡನ್ನು ಹೆಚ್ಚಿಸಲು ಅವಕಾಶ ನೀಡುವ ನಮ್ಮ ಅರ್ಥ ವ್ಯವಸ್ಥೆಯ ಪ್ರಾಥಮಿಕ ವಲಯದಲ್ಲಿ ಕೃಷಿ ವಿಶ್ವವಿದ್ಯಾಲಯಗಳು ವಹಿಸಿದ ಪಾತ್ರವನ್ನು ಪುನಃ ಒತ್ತಿ ಹೇಳಬೇಕಾಗಿಲ್ಲ. ಆದ್ದರಿಂದ ಇಂಥ ಪ್ರಧಾನ ಕ್ಷೇತ್ರದಲ್ಲಿ ಶಿಕ್ಷಣವನ್ನು ನೀಡುವ ಮತ್ತು ಸಂಶೋಧನೆಗೆ ಅವಕಾಶ ಒದಗಿಸುವ ಶಿಕ್ಷಣ ಸಂಸ್ಥೆಗಳು ಅನಿಶ್ಚಿತ ರಾಜಕೀಯ ಸ್ವೇಚ್ಛೆಗೆ ಗುರಿಯಾಗದಂತೆ ಸಂರಕ್ಷಿಸುವುದು ಮತ್ತು ಕೃಷಿ ವಲಯಕ್ಕೆ ಒಟ್ಟಾರೆ ಪ್ರಯೋಜನಗಳು ದೊರೆಕುವಂತೆ ಹಾಗೂ ಅವು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ತೀರಾ ಅವಶ್ಯಕವಾಗಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧ್ಯಾದೇಶ, 2008ನ್ನು, 2008ರ ನವೆಂಬರ್ 22ರಂದು ಪ್ರಖ್ಯಾಪಿಸಲಾಯಿತು, ಆ ತರುವಾಯ, 2009ರ ಮೇನಲ್ಲಿ ಪುನಃ ಪ್ರಖ್ಯಾಪಿಸಲಾಯಿತು. ಪರಂತು, ಕುಲಾಧಿಪತಿಯವರು ಅವಶ್ಯವೆಂದು ಪರಿಗಣಿಸಿದರೆ, ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೇ ಪಟ್ಟಿಯನ್ನು ಕೇಳಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಅದು ಅಂತಿಮವಾಗಿರತಕ್ಕದ್ದು.

ವಿಧೇಯಕದ 27(4) ನೇ ಪ್ರಕರಣವು, ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯವರನ್ನು ನೇಮಕ ಮಾಡಲು ಉಪಬಂಧ ಕಲ್ಪಿಸುತ್ತದೆ.

ಪ್ರಸ್ತಾವಿತ ವಿಧೇಯಕದಲ್ಲಿಯ ಈ ಉಪಬಂಧದೊಡನೆ, ಈ ಮೊದಲು ಕಳುಹಿಸಿದ ಅಧ್ಯಾದೇಶ ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 1963 ಅಥವಾ ಭಾರತದ ಕೃಷಿ ಸಂಶೋಧನಾ ಪರಿಷತ್ತಿನ (ಡಿಸಿಎಆರ್) ಮಾದರಿ ಅಧಿನಿಯಮದ (ಇದರ ಆದಾರದ ಮೇಲೆ ವಿಧೇಯಕವನ್ನು ಸಿದ್ಧಪಡಿಸಬೇಕಾಗಿತ್ತು) ಉಪಬಂಧವನ್ನು ಹೋಲಿಸಲಾಗಿ, 27ನೇ ಪ್ರಕರಣವು ಬೇರೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಅಧ್ಯಾದೇಶದ 27 (1) ನೇ ಪ್ರಕರಣವು ಕುಲಾಧಿಪತಿಯವರ ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಶೋಧನಾ ಸಮಿತಿಯು ತಯಾರಿಸಿದ ಕೃಷಿ ವಿಜ್ಞಾನಗಳ ಖ್ಯಾತ ವಿದ್ವಾಂಸರ ಅಥವಾ ವಿಜ್ಞಾನಿಗಳ ಪಟ್ಟಿಯಿಂದ ಕುಲಪತಿಯವರನ್ನು ನೇಮಕ ಮಾಡಲು ಉಪಬಂಧ ಕಲ್ಪಿಸಿದೆ, ಎಂದರೆ:–

(i) ಮಹಾ ನಿರ್ದೇಶಕರು, ಭಾರತದ ಕೃಷಿ ಸಂಶೋಧನಾ ಪರಿಷತ್ತು (ಐಸಿಎಆರ್)

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ಪರಂತು, ಕುಲಾಧಿಪತಿಯವರು, ಸದಸ್ಯರ ಪೈಕಿಯಿಂದ ಒಬ್ಬರನ್ನು ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ನಾಮನಿರ್ದೇಶಿಸತಕ್ಕದ್ದು. ಕೃಷಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರು ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

ಅಧ್ಯಾದೇಶದ 27(2)ನೇ ಪ್ರಕರಣವು, ಸಮಿತಿಯು, ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಕುಲಾಧಿಪತಿಯವರಿಗೆ ಒಂದು ಪಟ್ಟಿಯನ್ನು ಸಲ್ಲಿಸುವುದಕ್ಕೆ ಮತ್ತು ಕುಲಾಧಿಪತಿಯವರು, ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡುವುದಕ್ಕೆ ಉಪಬಂಧ ಕಲ್ಪಿಸಿದೆ. ಸಮಿತಿಯು ಶಿಫಾರಸ್ಸು ಮಾಡಿದ ಯಾವ ಹೆಸರುಗಳನ್ನು ಕುಲಾಧಿಪತಿಯವರು ಅನುಮೋದಿಸದಿದ್ದಲ್ಲಿ, ಅವರು ಸರ್ಕಾರದ ಸಹಮತಿಯನ್ನು ಪಡೆದು ಅವಶ್ಯವಿದ್ದಲ್ಲಿ ಎರಡನೇ ಪಟ್ಟಿಯನ್ನು ಕೋರಬಹುದು. ಹಾಗೆ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ಸಮಿತಿಯು ಪಟ್ಟಿಯನ್ನು ಸಲ್ಲಿಸಲು ವಿಫಲವಾದಲ್ಲಿ ಕುಲಾಧಿಪತಿಯವರು, ಕುಲಪತಿಯಾಗುವುದಕ್ಕೆ ಯೋಗ್ಯರೆಂದು ತಾವು ಭಾವಿಸುವ ಯಾವೊಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡಬಹುದು.

ಅಧ್ಯಾದೇಶದ 27 (3) ಪ್ರಕರಣವು ಕುಲಾಧಿಪತಿಯವರು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಪ್ರಥಮ ಕುಲಪತಿಯವರನ್ನು ನೇಮಕ ಮಾಡಲು ಉಪಬಂಧ ಕಲ್ಪಿಸಿದೆ.

ಭಾರತದ ಕೃಷಿ ಸಂಶೋಧನಾ ಪರಿಷತ್ತಿನ ಮಾದರಿ ಅಧಿನಿಯಮದ 24ನೇ ಪ್ರಕರಣವು ಈ ಮುಂದಿನಂತೆ ತಿಳಿಸುತ್ತದೆ.

(1) "ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರನ್ನು, ಶೋಧನಾ ಸಮಿತಿಯು ತಯಾರಿಸಿದ ಕೃಷಿ ವಿಜ್ಞಾನಗಳ ಖ್ಯಾತ ವಿದ್ವಾಂಸರ ಅಥವಾ ವಿಜ್ಞಾನಿಗಳ ಪಟ್ಟಿಯಿಂದ ಕುಲಾಧಿಪತಿಯವರು ನೇಮಕಮಾಡತಕ್ಕದ್ದು. ಶೋಧನಾ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಮಹಾ ನಿರ್ದೇಶಕರು, ಭಾರತದ ಕೃಷಿ ಸಂಶೋಧನಾ ಪರಿಷತ್ತು

(ii) ರಾಜ್ಯ ಸಕಾರದ ಒಬ್ಬ ನಾಮನಿರ್ದೇಶಿತರು;

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

ಪ್ರಸಕ್ತ ವಿಧೇಯಕದ 27ನೇ ಪ್ರಕರಣವು, 2008ರ ನವೆಂಬರಿನಲ್ಲಿ ಪ್ರಖ್ಯಾಪಿಸಲಾದ ಅಧ್ಯಾದೇಶದಲ್ಲಿದ್ದುದಕ್ಕಿಂತ ಮತ್ತು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ, 1963ಕ್ಕಿಂತ ಬೇರೆಯಾಗಿದ್ದರಿಂದ ಹಾಗೂ ನಮ್ಮ ಸಂವಿಧಾನದಲ್ಲಿ ವಿವರಿಸಲಾದಂತೆ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತದೆಯಾದ್ದರಿಂದ ಅದನ್ನು ಕಾಯ್ದಿರಿಸಿದ್ದೆನು.

ಪ್ರಸ್ತಾವಿತ ವಿಧೇಯಕದ 27ನೇ ಪ್ರಕರಣವು ಕುಲಪತಿಯವರ ನೇಮಕದ ವಿಧಾನವನ್ನು ನಿಯಮಿಸುತ್ತದೆ.

ರಾಜ್ಯ ವಿಧಾನಮಂಡಲದ ಉಭಯಸದನಗಳು ಅಂಗೀಕರಿಸಿದ ಮತ್ತು ನನ್ನ ಅನುಮತಿಗಾಗಿ ಕಳುಹಿಸಲಾದ ವಿಧೇಯಕದ 27(2)ನೇ ಪ್ರಕರಣವು ರಾಜ್ಯ ಸರ್ಕಾರವು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸುವ ಬಗ್ಗೆ ನಿಯಮಿಸುತ್ತದೆ, ಎಂದರೆ:–

(i) ಮಹಾ ನಿರ್ದೇಶಕರು, ಭಾರತದ ಕೃಷಿ ಸಂಶೋಧನಾ ಪರಿಷತ್ತು

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು

(iii) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(iv) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

ರಾಜ್ಯ ಸರ್ಕಾರವು ಅಂಥ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕಮಾಡತಕ್ಕದ್ದು. ಕೃಷಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರು ಅಥವಾ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

27(3)ನೇ ಪ್ರಕರಣವು, ಶೋಧನಾ ಸಮಿತಿಯು, ಖ್ಯಾತ ಕೃಷಿ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದೆಂದು ಉಪಬಂಧಿಸುತ್ತದೆ. ರಾಜ್ಯ ಸರ್ಕಾರವು, ಕುಲಾಧಿಪತಿಯವರಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಕುಲಾಧಿಪತಿಯವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಸದರಿ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು:

ಪರಂತು, ಕುಲಾಧಿಪತಿಯವರು ಸದಸ್ಯರ ಪೈಕಿ ಒಬ್ಬರನ್ನು ಸಂಚಾಲಕರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ನಾಮನಿರ್ದೇಶನ ಮಾಡತಕ್ಕದ್ದು.

ಸರ್ಕಾರದ ಮತ್ತು ಕುಲಾಧಿಪತಿಯವರ ನಾಮನಿರ್ದೇಶಿತರು, ಕುಲಪತಿಯವರ ಅಥವಾ ತತ್ಸಮಾನ ದರ್ಜೆಯವರಾಗಿರತಕ್ಕದ್ದು.

ಹೀಗೆ, ಮೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಕುಲಾಧಿಪತಿಯವರ ಅಧಿಕಾರಗಳನ್ನು ಪ್ರಜ್ಞಾಪೂರ್ವಕವಾಗಿ ದುರ್ಬಲಗೊಳಿಸುವ ಪ್ರಯತ್ನ ಇದೆ ಎಂದು ಸ್ಪಷ್ಟವಾಗುತ್ತದೆ.

ರಾಜ್ಯ ವಿಧಾನಮಂಡಲದ ಮಾನ್ಯ ಸದಸ್ಯರ ಬಗ್ಗೆ ನನಗಿರುವ ಅಪಾರ ಗೌರವವನ್ನು ವ್ಯಕ್ತ ಪಡಿಸುತ್ತಾ, ಕರ್ನಾಟಕ ರಾಜ್ಯಪಾಲರಾದ ಹೆಚ್.ಆರ್.ಭಾರದ್ವಾಜ ಎಂಬ ನಾನು, ಭಾರತ ಸಂವಿಧಾನದ 200ನೇ ಅನುಚ್ಛೇದದ ಅಡಿಯಲ್ಲಿ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೇಲೆ ಹೇಳಿದ ವಿವರಣಾತ್ಮಕ ಅಭಿಪ್ರಾಯಗಳನ್ನು, ಅನೇಕ ಗಂಭೀರ ತೊಡಕುಗಳನ್ನು ಸಂವಿಧಾನಾತ್ಮಕ ಬದ್ಧತೆಯನ್ನು ಮತ್ತು ಕರ್ನಾಟಕ ರಾಜ್ಯದಲ್ಲಿ ಅಧ್ಯಾದೇಶದ ದೀರ್ಘಾಕಾಲಿಕ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಶಾಸಕರು ವಿವೇಚನಾಪೂರ್ಣವಾಗಿ ಪುನರ್ ಪರಿಶೀಲನೆ ಮಾಡಬೇಕೆಂಬ ಮನವಿಯೊಂದಿಗೆ, ಈ ಮೂಲಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ, 2009ನ್ನು ಹಿಂದಿರುಗಿಸುತ್ತಿದ್ದೇನೆ.

(ಸಹಿ)
ಹೆಚ್.ಆರ್. ಭಾರದ್ವಾಜ
ಕರ್ನಾಟಕ ರಾಜ್ಯಪಾಲರು

ಅನುಬಂಧ – III

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಐದನೇ ಅಧಿವೇಶನ

ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2010
(2010ನೇ ವಿಧಾನಸಭೆಯ ವಿಧೇಯಕ ಸಂಖ್ಯೆ 01)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು **ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2010** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 9ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 9ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ :-

"ಮತ್ತು ಪರಂತು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ, ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರ, ಸಹ ಅಭಿವೃದ್ಧಿದಾರ, ಭೂಮಾಲೀಕರು, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ ಮತ್ತು

ಸರ್ಕಾರಿ ಆದೇಶ ಸಂಖ್ಯೆ ಸಿಐ 114 ಎಸ್‌ಪಿಐ 2007, ದಿನಾಂಕ: 28–2–2009ರಲ್ಲಿ ಪರಿಭಾಷಿಸಿದಂತೆ ಹಣಕಾಸು ಸಂಸ್ಥೆಗಳು ಇವುಗಳಿಂದ ಅಥವಾ ಇವುಗಳ ನಡುವಿನ ಯಾವುದೇ ಲಿಖಿತದ ಮೇಲೆ ಸಂದಾಯ ವಾಗತಕ್ಕ ಸ್ಟಾಂಪು ಶುಲ್ಕವನ್ನು ಅಧಿಸೂಚನೆ ಮೂಲಕ ಅದರಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಕಡಿಮೆಗೊಳಿಸಬಹುದು ಅಥವಾ ಮಾಫಿ ಮಾಡಬಹುದು.

ಮತ್ತು ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಹೊಸ ಮತ್ತು ಪ್ರಸ್ತುತ ಇರುವ ಮೈಕ್ರೋ, ಸಣ್ಣ, ಮಧ್ಯಮ ಉದ್ಯಮಗಳು, ದೊಡ್ಡ ಕೈಗಾರಿಕಾ ಘಟಕಗಳು ಮತ್ತು ಬೃಹತ್ ಯೋಜನೆಗಳು ವಿಸ್ತರಣೆ ಅಥವಾ ಆಧುನೀಕರಣ ಅಥವಾ ಬದಲಾವಣೆಗಳ ಯೋಜನೆಗಳನ್ನೂ ಒಳಗೊಂಡಂತೆ ಸರ್ಕಾರಿ ಆದೇಶ ಸಂಖ್ಯೆ ಸಿಐ 233 ಎಸ್‌ಪಿಐ 2008, ದಿನಾಂಕ: 28–2–2009 ರಲ್ಲಿ ಪರಿಭಾಷಿಸಿದಂತೆ, ಕರ್ನಾಟಕ ಕೈಗಾರಿಕಾ ನೀತಿ 2009–14 ಅಥವಾ ಸದರಿ ನೀತಿಯಲ್ಲಿ ಪರಿಭಾಷಿಸಿದಂತೆ ಅಂಥ ಪ್ರದಾನ ಕ್ಷೇತ್ರದ ಪ್ರಮುಖ ಯೋಜನೆಗಳ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟ ಪಡಿಸಬಹುದಾದಂತೆ, ಇವರುಗಳು ಬರೆದುಕೊಟ್ಟ ಯಾವುದೇ ಲಿಖಿತದ ಮೇಲೆ ಸಂದಾಯವಾಗುವ ಸ್ಟಾಂಪು ಶುಲ್ಕವನ್ನು 2014 ರ ಮಾರ್ಚ್ 31ರವರೆಗೆ ಕಡಿಮೆಗೊಳಿಸಬಹುದು ಅಥವಾ ಮಾಫಿ ಮಾಡಬಹುದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಚಾಲ್ತಿಯಲ್ಲಿರುವ ಜಾಗತಿಕ, ಆರ್ಥಿಕ ಮುಗ್ಗಟ್ಟಿನೊಡನೆ ಹೋರಾಡಲು ಮತ್ತು 2009-14ನೇ ಸಾಲಿನ ಹೊಸ ಕೈಗಾರಿಕಾ ನೀತಿಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗಾಗಿ ಉದ್ಯಮಿಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ವಿಶೇಷ ಆರ್ಥಿಕ ವಲಯದಲ್ಲಿಯ ಪ್ರದಾನ ಕ್ಷೇತ್ರದ ಪ್ರಮುಖ ಯೋಜನೆಗಳು ಬರೆದುಕೊಡುವ ಯಾವುದೇ ಲಿಖಿತದ ಮೇಲೆ ಸಂದಾಯ ಮಾಡುವ ಸ್ಟಾಂಪು ಶುಲ್ಕವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕಡಿಮೆಗೊಳಿಸಲು ಅಥವಾ ಮಾಫಿ ಮಾಡಲು ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಸುಮಾರು 200 ಕೋಟಿ ರೂಪಾಯಿಗಳ ವೆಚ್ಚವನ್ನು ಒಳಗೊಂಡಿರುತ್ತದೆ.

ಜಿ.ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ

9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ.– (1) xx xx

(ಎ) xx xx

ಮತ್ತು ಪರಂತು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಿ ಆದೇಶ ಸಿಐ 319 ಎಸ್‌ಪಿಐ 2005, ದಿನಾಂಕ: 26.8.2006 ರಲ್ಲಿ ನಿರ್ದಿಷ್ಟಪಡಿಸಲಾದ ಅಥವಾ ಸದರಿ ನೀತಿಯಲ್ಲಿ ಪರಿಭಾಷಿಸಲಾದಂತೆ ಮುಖ್ಯ ಪ್ರದೇಶದ ಪ್ರಮುಖ ಯೋಜನೆಗಳ ಮೂಲಕ ನಿರ್ದಿಷ್ಟಪಡಿಸಲಾದಂತೆ ಅಥವಾ ಕಾಲಕಾಲಕ್ಕೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಲಾದಂತೆ ಹೊಸ ಕೈಗಾರಿಕಾ ನೀತಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಹೊಸ ಅಡಿ ಸಣ್ಣ ಪ್ರಮ್ಯಾಣದ, ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಅಥವಾ ಬೃಹತ್ ಪ್ರಮಾಣದ ಕೈಗಾರಿಕಾ ಘಟಕಗಳು ಅಥವಾ ಮಹಾಯೋಜನೆಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಲಾದಂತೆ ಕಾರ್ಯರೂಪಕ್ಕೆ ತರುವ ಯಾವುದೇ ಲಿಖಿತ ಪತ್ರದ ಮೇಲೆ ಸಂದಾಯ ಮಾಡತಕ್ಕ ಸ್ಟಾಂಪು ಸುಂಕವನ್ನು ಅಧಿಸೂಚನೆಯ ಮೂಲಕ 31ನೇ ಮಾರ್ಚ್ 2011ರವರೆಗೆ ಕಡಿತಗೊಳಿಸಬಹುದು ಅಥವಾ ಮಾಫಿಮಾಡಬಹುದು.

xx xx xx xx

ಅನುಬಂಧ – IV

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಐದನೇ ಅಧಿವೇಶನ

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 04)

ಕರ್ನಾಟಕ ರಾಜ್ಯದಲ್ಲಿ ಜಾನುವಾರುಗಳ ಹತ್ಯೆಯನ್ನು ಪ್ರತಿಬಂಧಿಸಲು ಮತ್ತು ಅವುಗಳನ್ನು ಸಂರಕ್ಷಿಸಲು ಒಂದು ಸಮಗ್ರ ಶಾಸನಕ್ಕಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಜಾನುವಾರುಗಳ ಹತ್ಯೆಯನ್ನು ಪ್ರತಿಬಂಧಿಸಲು ಮತ್ತು ಅವುಗಳನ್ನು ಸಂರಕ್ಷಿಸಲು ಒಂದು ಸಮಗ್ರ ಶಾಸನಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಗೋಮಾಂಸ" ಎಂದರೆ, ಜಾನುವಾರಿನ ಯಾವುದೇ ಬಗೆಯ ಮಾಂಸ;

(2) "ಜಾನುವಾರು" ಎಂದರೆ, ಹಸು ಹಾಗೂ ಹಸುವಿನ ಕರು, ಹೋರಿ, ಎತ್ತು, ಎಮ್ಮೆ ಅಥವಾ ಕೋಣ ಹಾಗೂ ಎಮ್ಮೆಯ ಕರು;

(3) "ಸಕ್ಷಮ ಪ್ರಾಧಿಕಾರಿ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಸಕ್ಷಮ ಪ್ರಾಧಿಕಾರಿ;

(4) "ಅಧಿಸೂಚನೆ" ಎಂದರೆ, ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ;

(5) "ಆವರಣ" ಎಂದರೆ, ಮತ್ತು ಇದು, ಯಾವುದೇ ಆವರಣಗಳು, ನೌಕೆ ಅಥವಾ ವಾಹನವನ್ನು ಒಳಗೊಳ್ಳುತ್ತದೆ.

(6) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಿಯಮಗಳ ಮೂಲಕ ನಿಯಮಿಸಲಾದುದು;

3. ಸಕ್ಷಮ ಅಧಿಕಾರಿಯ ನೇಮಕ.– ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ರೆವಿನ್ಯೂ ತಾಲ್ಲೂಕಿನ ತಹಶೀಲ್ದಾರರನ್ನು ಅಥವಾ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಪಶುಸಂಗೋಪನಾ ಇಲಾಖೆಯ ಒಬ್ಬ ಅಧಿಕಾರಿಯನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪ್ರದೇಶಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ನೇಮಕ ಮಾಡಬಹುದು.

4. ಜಾನುವಾರು ಹತ್ಯೆಯ ನಿಷೇಧ.– ಇದಕ್ಕೆ ವಿರುದ್ಧವಾಗಿ ಯಾವುದೇ ಕಾನೂನಿನಲ್ಲಿ ರೂಢಿಯಲ್ಲಿ ಅಥವಾ ಆಚರಣೆಯಲ್ಲಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು, ಯಾವುದೇ ಜಾನುವಾರನ್ನು ಹತ್ಯೆ ಮಾಡತಕ್ಕದ್ದಲ್ಲ ಅಥವಾ ಹತ್ಯೆ ಮಾಡುವಂತೆ ಮಾಡತಕ್ಕದ್ದಲ್ಲ ಅಥವಾ ಹತ್ಯೆ ಮಾಡುವುದಕ್ಕಾಗಿ ನೀಡತಕ್ಕದ್ದಲ್ಲ ಅಥವಾ ಹತ್ಯೆ ಮಾಡುವುದಕ್ಕಾಗಿ ನೀಡುವಂತೆ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಉದ್ದೇಶಪೂರ್ವಕವಾಗಿ ಕೊಲ್ಲತಕ್ಕದ್ದಲ್ಲ ಅಥವಾ ಕೊಲ್ಲುವುದಕ್ಕಾಗಿ ನೀಡತಕ್ಕದ್ದಲ್ಲ ಅಥವಾ ನೀಡುವಂತೆ ಮಾಡತಕ್ಕದ್ದಲ್ಲ.

5. ಗೋಮಾಂಸ ಮಾರಾಟ, ಬಳಕೆ ಮತ್ತು ಸ್ವಾಧೀನತೆಯ ನಿಷೇಧ.– ಇದಕ್ಕೆ ವಿರುದ್ಧವಾಗಿ ಯಾವುದೇ ಕಾನೂನಿನಲ್ಲಿ, ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ ಯಾವೊಬ್ಬ ವ್ಯಕ್ತಿಯು, ಗೋಮಾಂಸ ಅಥವಾ ಗೋಮಂಸದ ಉತ್ಪನ್ನಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆ ಮಾಡುವಂತೆ ಮಾಡತಕ್ಕದ್ದಲ್ಲ.

6. ಜಾನುವಾರು ಸಾಗಣೆ ಮೇಲೆ ನಿರ್ಬಂಧ.– ಯಾವೊಬ್ಬ ವ್ಯಕ್ತಿಯು, ಹತ್ಯೆ ಮಾಡುವುದಕ್ಕಾಗಿ ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದೊಳಗಿನ ಇನ್ನಾವುದೇ ಸ್ಥಳಕ್ಕೆ ಯಾವುದೇ ಜಾನುವಾರನ್ನು ಯಾವುದೇ ರೀತಿಯಲ್ಲಿ ಸಾಗಣೆ ಮಾಡತಕ್ಕದ್ದಲ್ಲ ಅಥವಾ ಸಾಗಣೆ ಮಾಡುವುದಕ್ಕಾಗಿ ನೀಡತಕ್ಕದ್ದಲ್ಲ ಅಥವಾ ಸಾಗಣೆ ಮಾಡುವಂತೆ ಮಾಡತಕ್ಕದ್ದಲ್ಲ:

ಪರಂತು, ಕೃಷಿ ಅಥವಾ ಪಶುಸಂಗೋಪನೆಗಾಗಿ, ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ನಿಯಮಿಸಬಹುದಾದ ರೀತಿಯಲ್ಲಿ, ಸದುದ್ದೇಶದಿಂದ ಯಾವುದೇ ಜಾನುವಾರು ಸಾಗಾಣೆ ಮಾಡುವುದು ಈ ಪ್ರಕರಣದ ಅಡಿಯಲ್ಲಿ ಅಪರಾಧವಾಗುವುದೆಂದು ಅರ್ಥೈಸತಕ್ಕದ್ದಲ್ಲ.

7. ರಾಜ್ಯದ ಹೊರಗಡೆ ಜಾನುವಾರುಗಳ ಸಾಗಣೆ ನಿಷೇಧ.– (1) ಯಾವೊಬ್ಬ ವ್ಯಕ್ತಿಯು, ಹತ್ಯೆಯ ಉದ್ದೇಶಕ್ಕಾಗಿ ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದ ಹೊರಗೆ ಜಾನುವಾರನ್ನು ಯಾವುದೇ ರೀತಿಯಲ್ಲಿ ಸಾಗಣೆ ಮಾಡತಕ್ಕದ್ದಲ್ಲ ಅಥವಾ ಸಾಗಣೆಗೆ ನೀಡತಕ್ಕದ್ದಲ್ಲ ಅಥವಾ ಸಾಗಣೆ ಮಾಡುವಂತೆ ಮಾಡತಕ್ಕದ್ದಲ್ಲ.

ಪರಂತು, ತಾಲ್ಲೂಕು ಮ್ಯಾಜಿಸ್ಟ್ರೇಟರು, ಕೃಷಿ ಅಥವಾ ಪಶುಸಂಗೋಪನೆಯ ನಿಜವಾದ ಉದ್ದೇಶಗಳಿಗಾಗಿ, ಜಾನುವಾರುಗಳ ಸಾಗಣೆಗಾಗಿ ಪರ್ಮಿಟನ್ನು ನೀಡಬಹುದು.

ಮತ್ತು ಪರಂತು, ಅಂಥ ಜಾನುವಾರು ಸಾಗಣೆಯು, ಪ್ರಾಣಿ ಹಿಂಸಾ ಪ್ರತಿಬಂಧಕ ಅಧಿನಿಯಮ, 1960ರ (1960ರ ಕೇಂದ್ರ ಅಧಿನಿಯಮ 59) ಅಡಿಯಲ್ಲಿ ಜಾನುವಾರು ಸಾಗಣೆಯನ್ನು ನಿಯಂತ್ರಿಸುವ ನಿಯಮಗಳ ಮೂಲಕ ಕೇಂದ್ರ ಸರ್ಕಾರವು ನಿಯಮಿಸಿದ ರೀತಿಯಲ್ಲಿ ಇರತಕ್ಕದ್ದು.

(2) (1)ನೇ ಉಪ ಪ್ರಕರಣದಡಿಯಲ್ಲಿ ನೀಡಿದ ಪರ್ಮಿಟ್ಟು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡುವುದಕ್ಕೊಳಪಟ್ಟಿರತಕ್ಕದ್ದು.

8. ಹತ್ಯೆಗಾಗಿ ಜಾನುವಾರುಗಳ ಮಾರಾಟ, ಖರೀದಿ ಅಥವಾ ವಿಲೆ ನಿಷೇಧ.– ಜಾನುವಾರನ್ನು ಹತ್ಯೆ ಮಾಡುವುದಕ್ಕಾಗಿ ಅಥವಾ ಹತ್ಯೆ ಮಾಡಲಾಗುತ್ತದೆ ಎಂದು ತಿಳಿದಿರುವ ಅಥವಾ ನಂಬಲು ಕಾರಣವಿರುವ, ಯಾವೊಬ್ಬ ವ್ಯಕ್ತಿಯು, ಜಾನುವಾರನ್ನು ಖರೀದಿಸತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ ಅಥವಾ ಖರೀದಿಸಲು, ಮಾರಾಟ ಮಾಡಲು ಅಥವಾ ಅನ್ಯಥಾ ವಿಲೆ ಮಾಡಲು ನೀಡತಕ್ಕದ್ದಲ್ಲ.

9. ಶೋಧನೆ ಮತ್ತು ಜಫ್ತಿಗೆ ಅಧಿಕಾರ.– (1) ಸಬ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯು, ಈ ಅಧಿನಿಯಮದಡಿಯಲ್ಲಿ ಅಪರಾಧವು ನಡೆದಿದೆ ಎಂದು ನಂಬಲು ಕಾರಣಗಳು ಇದ್ದಲ್ಲಿ, ಅಂಥ ಅಪರಾಧ ಘಟಿಸುವುದಕ್ಕೆ ಬಳಸಿದ, ಬಳಸಲು ಉದ್ದೇಶಿಸಿದ ಅಂಥ ಜಾನುವಾರನ್ನು ಮತ್ತು ಆವರಣಗಳನ್ನು ಹಾಗೂ ಅದಕ್ಕಾಗಿ ಉಪಯೋಗಿಸಿದ ವಸ್ತುಗಳನ್ನು ತಪಾಸಣೆ ಮಾಡಲು ಮತ್ತು ಜಫ್ತಿ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಂಥ ಆವರಣಗಳ ಅಧಿಭೋಗದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಮೇಲೆ ಹೇಳಿದ ಉದ್ದೇಶಕ್ಕಾಗಿ ಅವಶ್ಯಕಬಹುದಾದಂತೆ, ಆವರಣಕ್ಕೆ ಪ್ರವೇಶಿಸಲು ಸಕ್ಷಮ ಪ್ರಾಧಿಕಾರಿಗೆ ಅಥವಾ ಸಬ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಗೆ ಅಂಥ ಅವಕಾಶವನ್ನು ಕೊಡತಕ್ಕದ್ದು ಮತ್ತು ಸಬ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಯು ಅಥವಾ ಸಕ್ಷಮ ಪ್ರಾಧಿಕಾರಿಯು ಕೇಳಿದ ಯಾವುದೇ ಪ್ರಶ್ನೆಗಳಿಗೆ ಅವನು ತನಗೆ ತಿಳಿದ ಮಟ್ಟಿಗೆ ಮತ್ತು ನಂಬಿರುವಷ್ಟರ ಮಟ್ಟಿಗೆ ಉತ್ತರ ನೀಡತಕ್ಕದ್ದು.

(3) (1)ನೇ ಉಪ ಪ್ರಕರಣದಡಿಯಲ್ಲಿ ಜಪ್ತಿ ಮಾಡಿದ ತರುವಾಯ, ತಾನು ಅದನ್ನು ಅನುಚಿತ ವಿಳಂಬವಿಲ್ಲದೆ ಮುಟ್ಟುಗೋಲು ಹಾಕುವುದಕ್ಕಾಗಿ ಉಪವಿಭಾಗದ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸತಕ್ಕದ್ದು.

(4) ವರದಿಯನ್ನು, ಅಪರಾಧ ಘಟಿಸುವಲ್ಲಿ ಬಳಸಿದ ಅಥವಾ ಉದ್ದೇಶಿಸಿದ ಆವರಣಗಳಿಗೆ ಮತ್ತು ವಸ್ತುಗಳಿಗೆ ಸಂಬಂಧಪಡುವ ದಾಖಲೆಗಳನ್ನು ಸ್ವೀಕರಿಸಿದ ಮೇಲೆ, ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಘಟಿಸಿದೆ ಎಂದು ಅಥವಾ ಅಪರಾಧ ಎಸಗಲು ಉದ್ದೇಶಿಸಲಾಗಿತ್ತೆಂದು ಉಪವಿಭಾಗ ಮ್ಯಾಜಿಸ್ಟ್ರೇಟರಿಗೆ ಮನವರಿಕೆಯಾದರೆ, ಆಪಾದಿಸಲಾದ ಅಪರಾಧದ ಸಂಬಂಧದಲ್ಲಿ ಪ್ರಾರಂಭಿಸಲಾದ ಕ್ರಿಮಿನಲ್ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ ಆತನು ಅಂದಾಜು ಮಾಡಿದ ಮೌಲ್ಯಕ್ಕೆ ಸಮನಾದ ಬ್ಯಾಂಕ್ ಖಾತರಿಯನ್ನು ಒದಗಿಸಿದ ಮೇಲೆ, ವಾಹನವೂ ಒಳಗೊಂಡಂತೆ, ಜಾನುವಾರನ್ನು ಹೊರತುಪಡಿಸಿ, ವಸ್ತುಗಳನ್ನು ಬಿಡುಗಡೆ ಮಾಡಬಹುದು ಮತ್ತು ಜಪ್ತಿ ಮಾಡಿದ್ದುದರ ಸಂಬಂಧದಲ್ಲಿ ಅಪರಾಧದ ವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಹೊಂದಿದ ಮ್ಯಾಜಿಸ್ಟ್ರೇಟರ ಮುಂದೆ, ಹಾಗೆ ಬಿಡುಗಡೆ ಮಾಡಿದ ಸ್ವತ್ತನ್ನು ಅಗತ್ಯಪಡಿಸಿದಾಗಲ್ಲೆಲ್ಲಾ ಹಾಜರುಪಡಿಸುವ ಬಗ್ಗೆ ಒಂದು ಬಂಧಪತ್ರದೊಡನೆ ಬ್ಯಾಂಕ್ ಖಾತರಿಯನ್ನು ಅದರ ಮಾಲೀಕನು ಬರೆದುಕೊಟ್ಟ ಮೇಲೆ, ಜಾನುವಾರುಗಳನ್ನು 18ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಿಲಾದ ಸಂಸ್ಥೆಗೆ ಒಪ್ಪಿಸುವುದಕ್ಕಾಗಿ ಆದೇಶಿಸಬಹುದು.

(5) ಅಪರಾಧ ಘಟಿಸುವಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಆವರಣಗಳಿಗೆ ಮತ್ತು ವಸ್ತುಗಳಿಗೆ ಸಂಬಂಧಿಸಿದ ದಾಖಲೆಗಳ ಸಂಬಂಧದಲ್ಲಿ ಹಾಗೆ ವಶಪಡಿಸಿಕೊಂಡ ಬಗ್ಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಘಟಿಸಿದೆ ಎಂದು ಅಥವಾ ಅಪರಾಧ ಎಸಗಲು ಉದ್ದೇಶಿಸಲಾಗಿತ್ತೆಂದು ಉಪವಿಭಾಗ ಮ್ಯಾಜಿಸ್ಟ್ರೇಟರಿಗೆ ಮನವರಿಕೆಯಾದ ಮೇಲೆ ಅಂಥ ಅಪರಾಧಕ್ಕಾಗಿ ಅಭಿಯೋಜನೆ ಹೂಡಿರಲಿ ಅಥವಾ ಇಲ್ಲದಿರಲಿ, ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಂಥ ಆದೇಶ ಮಾಡಬಹುದು.

ಪರಂತು, ಅಪರಾಧವನ್ನು ಎಸಗಿದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಡದೇ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(6) (5)ನೇ ಉಪಪ್ರಕರಣದ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕಾಗಿ ಆದೇಶವನ್ನು ಮಾಡುವಾಗ ಉಪವಿಭಾಗ ಮ್ಯಾಜಿಸ್ಟ್ರೇಟರು, ಮುಟ್ಟುಗೋಲು ಹಾಕಿಕೊಳ್ಳುವ ಆದೇಶವು ಸಂಬಂಧಪಡುವ ಅಂಥ ಸ್ವತ್ತುಗಳನ್ನು ಸಂರಕ್ಷಿಸಿಡಲು ಸಾಧ್ಯವಿಲ್ಲವೆಂದು ಅಥವಾ ಮಾನವರ ಬಳಕೆಗೆ ಸೂಕ್ತವಾಗಿಲ್ಲವೆಂದು ಅವರು ಅಭಿಪ್ರಾಯಪಟ್ಟರೆ, ಅವುಗಳನ್ನು ನಾಶಪಡಿಸಲು ಸಹ ಆದೇಶಿಸಬಹುದು.

(7) ಉಪವಿಭಾಗ ಮ್ಯಾಜಿಸ್ಟ್ರೇಟರು, ಮುಟ್ಟುಗೋಲು ಹಾಕಿಕೊಂಡ ಆವರಣವನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರೆ, ಅವರು ಹಾಗೆ ಮಾಡಬಹುದು.

(8) ಮೇಲೆ ಹೇಳಿದಂತೆ, ಮುಟ್ಟುಗೋಲು ಹಾಕಿಕೊಂಡ ಸ್ವತ್ತನ್ನು ಮಾರಾಟ ಮಾಡಿದಾಗ ಅದರ ಉತ್ಪತ್ತಿಯನ್ನು, ಅದಕ್ಕೆ ಸಂಬಂಧಪಟ್ಟ ಯಾವುದೇ ಅಂಥ ಹರಾಜಿನ ವೆಚ್ಚಗಳನ್ನು ಅಥವಾ ಇತರ ಪ್ರಾಸಂಗಿಕ ವೆಚ್ಚಗಳನ್ನು ವಜಾ ಮಾಡಿಕೊಂಡು ತರುವಾಯ, (5)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ್ದ ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಅಪೀಲು ನ್ಯಾಯಾಲಯವು ತಳ್ಳಿ ಹಾಕಿದ್ದಲ್ಲಿ ಅಥವಾ ರದ್ದುಗೊಳಿಸಿದ್ದಲ್ಲಿ, ಅದರ ಮಾಲೀಕನಿಗೆ ಅಥವಾ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅದನ್ನು ಯಾರಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(9) (5)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ್ದ ಮುಟ್ಟುಗೋಲು ಹಾಕಿಕೊಳ್ಳುವ ಅಂಥ ಆದೇಶವು ಅಂತಿಮವಾದಾಗ ಹಾಗೂ ಅಂಥ ಸ್ವತ್ತನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ ಅಂಥ ಆದೇಶವನ್ನು ಅಪೀಲು ನ್ಯಾಯಾಲಯವು ದೃಢೀಕರಿಸಿದ್ದರೆ, ಅಂಥ ಸ್ವತ್ತು ಅಥವಾ ಸಂದರ್ಭಾನುಸಾರ ಅದರ ಭಾಗವು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(10) ಮುಟ್ಟುಗೋಲು ಹಾಕಿಕೊಂಡ ಜಾನುವಾರುಗಳನ್ನು 18ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಸಂಸ್ಥೆಗೆ ಒಪ್ಪಿಸತಕ್ಕದ್ದು ಮತ್ತು ಯಾವುವೇ ಸಂದರ್ಭಗಳಲ್ಲಿ ಆಪಾದಿತನಿಗೆ ಒಪ್ಪಿಸತಕ್ಕದ್ದಲ್ಲ ಅಥವಾ ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡತಕ್ಕದ್ದಲ್ಲ.

10. ಅಪೀಲುಗಳು.– (1) 9ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ವಶಪಡಿಸಿಕೊಳ್ಳಲಾದ ಸ್ವತ್ತು ಸಂಬಂಧಪಡುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಸೆಷನ್ ನ್ಯಾಯಾಧೀಶರಿಗೆ, ಅಪೀಲನ್ನು ಸಲ್ಲಿಸಬಹುದು.

(2) ಸೆಷನ್ ನ್ಯಾಯಾಧೀಶರು, ಬಾಧಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

11. ಕೆಲವು ಪ್ರಕರಣಗಳಲ್ಲಿ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.– ಅಂಥ ಅಪರಾಧವನ್ನು ಮಾಡುವುದಕ್ಕಾಗಿ ಯಾವುದೇ ಜಾನುವಾರು ಮತ್ತು ಆವರಣಗಳು ಮತ್ತು ವಸ್ತುಗಳನ್ನು ಬಳಸಿದಾಗ ಅಥವಾ ಬಳಸಲು ಉದ್ದೇಶಿಸಿದಾಗ ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತಡೆಹಿಡಿದಿಟ್ಟಾಗ 10ನೇ ಪ್ರಕರಣದ ಅಡಿಯಲ್ಲಿ ಅಪೀಲಿನ ವಿಚಾರಣೆ ನಡೆಸುತ್ತಿರುವ ಉಪವಿಭಾಗ ಮ್ಯಾಜಿಸ್ಟ್ರೇಟರು ಅಥವಾ ಸೆಷನ್ ನ್ಯಾಯಾದೀಶರು, ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನತೆ, ವಶಾವಣೆ, ವಿಲೆ ಅಥವಾ ನಾಶಪಡಿಸುವುದಕ್ಕೆ ಸಂಬಂಧಪಟ್ಟಂತೆ ಆದೇಶಗಳನ್ನು ಮಾಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು. ಮತ್ತು ಯಾವೊಬ್ಬ ಇತರ ಅಧಿಕಾರಿಯಾಗಲೀ ಅಥವಾ ನ್ಯಾಯಾಲಯವಾಗಲೀ, ನ್ಯಾಯಧಿಕರಣ ಅಥವಾ ಪ್ರಾಧಿಕಾರವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

12. ದಂಡಗಳು.– (1) ಈ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯ ವಾದ ಮೇಲೆ, ಒಂದು ವರ್ಷಕ್ಕೆ ಕಡಿಮೆಯಿಲ್ಲದೆ ಆದರೆ ಏಳುವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಆದರೆ ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತ ನಾಗತಕ್ಕದ್ದು. ಎರಡನೆಯ ಅಥವಾ ಅಪರಾಧದ ಮುಂದುವರೆದ ಸಂದರ್ಭದಲ್ಲಿ, ಕಾರಾವಾಸದ ಶಿಕ್ಷೆಯೊಂದಿಗೆ, ಐವತ್ತು ಸಾವಿರ ರೂಪಾಯಿ ಗಳಿಗೆ ಕಡಿಮೆಯಿಲ್ಲದ ಆದರೆ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸ ಬಹುದಾದ ಹೆಚ್ಚಿನ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) ಈ ಅಧಿನಿಯಮದ 4ನೇ ಪ್ರಕರಣವನ್ನು ಹೊರತುಪಡಿಸಿ ಇತರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷಕ್ಕೆ ಕಡಿಮೆಯಲ್ಲದೆ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

13. ಅಧಿನಿಯಮದಡಿಯಲ್ಲಿಯ ಅಪರಾಧಗಳು ಸಂಜ್ಞೇಯವಾ ಗಿರತಕ್ಕದ್ದು.– ಈ ಅಧಿನಿಯಮದಡಿಯಲ್ಲಿನ ಎಲ್ಲಾ ಅಪರಾಧಗಳು, ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನಿಯವಾಗಿರತಕ್ಕದ್ದಲ್ಲ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರು ನ್ಯಾಯಾಲಯದಿಂದ ಅಧಿವಿಚಾರಣೆ ಗೊಳಪಡತಕ್ಕದ್ದು.

14. ದುಷ್ಪ್ರೇರಣೆ.– ಯಾವೊಬ್ಬನು, ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ದುಷ್ಪ್ರೇರಿಸದಲ್ಲಿ ಅಥವಾ ಯಾವುದೇ ಅಂಥ ಅಪರಾಧವನ್ನು ಮಾಡಲು ಪ್ರಯತ್ನಿಸಿದಲ್ಲಿ, ಅಂಥ ಅಪರಾಧಕ್ಕಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಲಾದ ದಂಡದಿಂದ ದಂಡಿತನಾಗತಕ್ಕದ್ದು.

15. ಅಧಿನಿಯಮದಡಿ ಅಧಿಕಾರಗಳನ್ನು ಚಲಾಯಿಸುವ ವ್ಯಕ್ತಿಗಳನ್ನು ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.– ಈ ಅಧಿನಿಯಮದಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಎಲ್ಲಾ ವ್ಯಕ್ತಿಗಳನ್ನು, ಭಾರತ ದಂಡ ಸಂಹಿತೆಯ 21ನೇ ಪ್ರಕರಣದಡಿಯ ಅರ್ಥದೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

16. ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ರಕ್ಷಣೆ.– ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಸಕ್ಷಮ ಪ್ರಾಧಿಕಾರಿಯು ಅಥವಾ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

17. ವಿನಾಯಿತಿಗಳು.– (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮವು,–

(ಎ) ಯಾವುದೇ ಜಾನುವಾರನ್ನು, ರಾಜ್ಯ ಸರ್ಕಾರವು ಸ್ಥಾಪಿಸಿರುವ, ನಡೆಸುತ್ತಿರುವ ಅಥವಾ ಮಾನ್ಯತೆ ನೀಡಿರುವ ಒಂದು ಸಂಸ್ಥೆಯಲ್ಲಿ ಲಸಿಕೆ, ದೇವಿ ಹಾಕುವುದಕ್ಕಾಗಿ, ಸೀರಂಗಾಗಿ ಅಥವಾ ಯಾವುದೇ ಪ್ರಯೋಗಕ್ಕಾಗಿ ಅಥವಾ ಸಂಶೋದನೆ ಉದ್ದೇಶಕ್ಕಾಗಿ ಪ್ರಯೋಗಕ್ಕೆ ಗುರಿಪಡಿಸಿದ್ದರೆ; ಅಥವಾ

(ಬಿ) ಯಾವುದೇ ಜಾನುವಾರನ್ನು,–

(i) ಅದರ ಹತ್ಯೆಯು, ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಯಲ್ಲಿ ಅವಶ್ಯಕವಾಗಿದೆಯೆಂದು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಒಬ್ಬ ಪಶುವೈದ್ಯಾಧಿಕಾರಿಯು ಪ್ರಮಾಣೀಕರಿಸಿದ್ದರೆ;

(ii) ಅದು ಯಾವುದೇ ಸೋಂಕು ರೋಗದಿಂದ ಬಳಲುತ್ತಿದೆಂದು ಮತ್ತು ಅದು ಇತರ ಜಾನುವಾರುಗಳಿಗೆ

ಅಪಾಯ ಉಂಟುಮಾಡುತ್ತದೆ ಎಂದು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪಶುವೈದ್ಯಾಧಿಕಾರಿಯು ಪ್ರಮಾಣಿಕರಿಸಿದ್ದರೆ;

(ಸಿ) ಯಾವುದೇ ಜಾನುವಾರು, ಮರಣಾಂತಕವಾದ, ವಾಸಿಯಾಗದ ಖಾಯಿಲೆಯಿಂದ ಬಳಲುತ್ತಿದೆ ಎಂಬ ಕಾರಣದ ಮೇಲೆ ಯಾವುದೇ ಜಾನುವಾರಿನ ಹತ್ಯೆಯು ಅವಶ್ಯವಾಗಿದೆ, ಎಂದು,-

(i) ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯಕ್ಕೆ ಸೇರಿರುವ ಒಂದು ಜಾನುವಾರಿನ ಸಂದರ್ಬದಲ್ಲಿ, ಭಾರತೀಯ ಸೇನೆಯ ಪಶುವೈದ್ಯಾಧಿಕಾರಿಯು ಪ್ರಮಾಣೀಕರಿಸಿದ್ದರೆ,

(ii) ಯಾವುದೇ ಇತರ ಜಾನುವಾರಿನ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಪಶುವೈದ್ಯ ವಿಜ್ಞಾನದ ಸಹಾಯಕ ನಿರ್ದೇಶಕರು ಪ್ರಮಾಣೀಕರಿಸಿದ್ದರೆ;

– ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಡಿಯಲ್ಲಿ ಯಾವುದೇ ಜಾನುವಾರನ್ನು ಹತ್ಯೆ ಮಾಡಲಾಗಿದ್ದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ, ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪಶುವೈದ್ಯ ಅಧಿಕಾರಿಯ ಮೇಲ್ವಿಚಾರಣೆ ಯಲ್ಲಿ ವಿಲೆಯಾಗತಕ್ಕದ್ದು.

18. ಜಾನುವಾರುಗಳ ರಕ್ಷಣೆಗಾಗಿ ಸಂಸ್ಥೆಗಳ ಸ್ಥಾಪನೆ.- (1) ರಾಜ್ಯ ಸರ್ಕಾರವು, ಕಳುಹಿಸಲಾಗಿರುವ ಜಾನುವಾರುಗಳ ಪಾಲನೆಗಾಗಿ ಅವಶ್ಯಕವೆಂದು ಭಾವಿಸಬಹುದಾದಂಥ ಸ್ಥಳಗಳಲ್ಲಿ ಅಂಥ ಸಂಸ್ಥೆಗಳನ್ನು ಸ್ಥಾಪಿಸಬಹುದು ಅಥವಾ ಸ್ಥಾಪಿಸುವಂತೆ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಣಿಯಾದ ಸಂಘಕ್ಕೆ ಅಥವಾ ಯಾವುದೇ ಅಸೋಸಿಯೇಷನ್‌ಗೆ ಅಥವಾ ಸಂಸ್ಥೆಗೆ ಅನುಮತಿಸಬಹುದು.

O.14 F – 43

(2) ರಾಜ್ಯ ಸರ್ಕಾರವು, ಅಂಥ ಸಂಸ್ಥೆಗಳಲ್ಲಿರುವ ಜಾನುವಾರುಗಳ ರಕ್ಷಣೆಗಾಗಿ ಮತ್ತು ಅಲ್ಲಿಗೆ ಸೇರಿಸಲಾಗಿರುವ ಹಸುಗಳ ಅಥವಾ ಇತರ ಜಾನುವಾರುಗಳ ವರ್ಗಗಳಿಗೆ ಅಥವಾ ತಳಿಗಳ ರಕ್ಷಣೆಗೆ ಬೆಂಬಲ ನೀಡುವುದಕ್ಕಾಗಿ ಹಾಗೂ ಅಂಥ ಸಂಸ್ಥೆಯ ಸೂಕ್ತ ನಿರ್ವಹಣೆಗಾಗಿ ನಿಯಮಗಳನ್ನು ರಚಿಸಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸುವ, ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು, ಸ್ಥಳೀಯ ಪ್ರಾಧಿಕಾರ, ಸಂಘ ಅಥವಾ ವ್ಯಕ್ತಿಗಳ ನಿಕಾಯ ಅಥವಾ ಅಸೋಸಿಯೇಷನ್, ಅಂಥ ಸಂಸ್ಥೆಗಳ ನಿರ್ವಹಣೆಗಾಗಿ ನಿಯಮಿಸಬಹುದಾದಂತೆ ಅಂಥ ಶುಲ್ಕಗಳನ್ನು ವಿಧಿಸಬಹುದು.

19. ನಿಯಮಗಳನ್ನು ರಚಿಸಲು ಅಧಿಕಾರ.– (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯ ನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನವುಗಳಿಗಾಗಿ, ಎಂದರೆ:–

(ಎ) ಈ ಅಧಿನಿಯಮದಲ್ಲಿ, ಉಪಬಂಧಿಸಿದವುಗಳಿಗೆ ಹೆಚ್ಚಿಗೆಯಾಗಿ, ಸಕ್ಷಮ ಪ್ರಾಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(ಬಿ) 7ನೇ ಪ್ರಕರಣದ (2) ನೇ ಉಪಪ್ರಕರಣದಡಿಯಲ್ಲಿ ಜಾನುವಾರುಗಳ ಸಾಗಣೆಗಾಗಿ ಪರ್ಮಿಟ್ಟುಗಳ ನಮೂನೆ;

(ಸಿ) ಈ ಅಧಿನಿಯಮವು 17ನೇ ಪ್ರಕರಣದ ಅಡಿಯಲ್ಲಿ ಯಾವ ಜಾನುವಾರುಗಳಿಗೆ ಯಾವ ಷರತ್ತುಗಳಿಗೊಳಪಟ್ಟು ಅನ್ವಯವಾಗತಕ್ಕದ್ದಲ್ಲವೋ ಆ ಷರತ್ತುಗಳು;

(ಡ) ನಿಯಮಿಸತಕ್ಕ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

– ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

(3) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನ ದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನಮಂಡಲದ ಎರಡೂ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಎರಡೂ ಸದನಗಳು ಒಪ್ಪಿದರೆ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾ ಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ಧತಿಯು, ಈ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕ ಉಂಟುಮಾಡತಕ್ಕದ್ದಲ್ಲ.

20. ತೊಂದರೆಗಳನ್ನು ನಿವಾರಿಸಲು ಅಧಿಕಾರ.– ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವೆಂದು ಅದಕ್ಕೆ ಕಂಡುಬರುವಂತೆ ಈ ಅಧಿನಿಯಮದ ಉಪಬಂಧಕ್ಕೆ ಅಸಂಗತವಾಗಿಲ್ಲದ ಉಪಬಂಧಗಳನ್ನು ಮಾಡಬಹುದು.

21. ನಿರಸನ ಮತ್ತು ಉಳಿಸುವಿಕೆಗಳು.– ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಜಾನುವಾರುಗಳ ಸಂರಕ್ಷಣೆ ಅಧಿನಿಯಮ, 1964 (1899ರ ಕರ್ನಾಟಕ ಅಧಿನಿಯಮ 3) ಈ ಮೂಲಕ ನಿರಸಿತವಾಗಿದೆ:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣದ ಉಪಬಂಧಗಳು, ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾನೂನಿನ ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳ ಉಪಬಂಧಗಳು ಸದರಿ ಅಧಿನಿಯಮವನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದರೆ ಮತ್ತು ಪುನಃ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತ ಸಂವಿಧಾನದ 48ನೇ ಅನುಚ್ಛೇದಕ್ಕೆ ಅನುಸಾರವಾಗಿ ಹಸುಗಳ ಮತ್ತು ಹಸು ಅಥವಾ ಎಮ್ಮೆ ಕರುಗಳ, ಎತ್ತು, ಹೋರಿ, ಎಮ್ಮೆ ಅಥವಾ ಕೋಣ ಇವುಗಳ ಹತ್ಯೆಯನ್ನು ನಿಷೇಧಿಸುವುದಕ್ಕಾಗಿ ಮತ್ತು ಜಾನುವಾರಗಳ ತಳಿಗಳನ್ನು ಸಂರಕ್ಷಿಸಿ ಸುಧಾರಿಸುವುದಕ್ಕಾಗಿ ಹಾಗೂ ಕೃಷಿ ಮತ್ತು ಪಶುಸಂಗೋಪನೆಯನ್ನು ಸಂಘಟಿಸಲು ಪ್ರಯತ್ನಿಸುವುದಕ್ಕಾಗಿ ಕರ್ನಾಟಕ ಗೋಹತ್ಯೆ ಪ್ರತಿಬಂಧ ಮತ್ತು ಜಾನುವಾರು ಸಂರಕ್ಷಣೆ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 35) ಒಂದು ಸಮಗ್ರ ಶಾಸನವನ್ನು ಅಧಿನಿಯಮಿಸುವ ಮೂಲಕ ಪ್ರತಿಸ್ಥಾಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಅಧಿನಿಯಮದ ಉಲ್ಲಂಘನೆಗಾಗಿ ಕಠಿಣ ಶಿಕ್ಷೆಯನ್ನು ವಿಧಿಸುವುದಕ್ಕೆ ವಿಧೇಯಕವು ಉಪಬಂಧವನ್ನು ಕಲ್ಪಿಸುತ್ತದೆ ಮತ್ತು ನೌಕೆ ಅಥವಾ ವಾಹನವೂ ಒಳಗೊಂಡಂತೆ, ಯಾವುದೇ ಆವರಣದ ಶೋಧನೆ ಮಾಡಲು ಮತ್ತು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರವನ್ನು ನೀಡುತ್ತದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

1) **ಖಂಡ 7:** 7ನೇ ಖಂಡದ (2)ನೇ ಉಪಖಂಡವು ಪರ್ಮಿಟ್ಟಿನ ನಮೂನೆ ಮತ್ತು ಜಾನುವಾರುಗಳ ಸಾಗಣೆಗಾಗಿ ಶುಲ್ಕವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

2) **ಖಂಡ 17:** 17ನೇ ಖಂಡದ (1)ನೇ ಉಪಖಂಡವು ಯಾವ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉಪಬಂಧಗಳಿಂದ ವಿನಾಯಿತಿಗಳನ್ನು ನೀಡಬಹುದು ಎಂಬ ಬಗ್ಗೆ ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. 17ನೇ ಖಂಡದ (2)ನೇ ಉಪಖಂಡವು ಹತ್ಯೆಗೆ ಒಳಗಾದ ಜಾನುವಾರನ್ನು ವಿಲೆ ಮಾಡುವ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

3) **ಖಂಡ 18:** 18ನೇ ಖಂಡದ (3)ನೇ ಉಪಖಂಡವು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ, ಸಂಘ ಅಥವಾ ವ್ಯಕ್ತಿಗಳ ನಿಕಾಯ ಅಥವಾ ಅಸೋಸಿಯೇಷನ್‌ಗಳು (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ವಿಧಿಸಬಹುದಾದ ಶುಲ್ಕಗಳನ್ನು ನಿಯಮದ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ, ಅಧಿಕಾರವನ್ನು ನೀಡುತ್ತದೆ.

4) **ಖಂಡ 19:** 19ನೇ ಖಂಡದ (2)ನೇ ಉಪ ಖಂಡದ (ಡಿ) ಬಾಬು ಈ ಅಧಿನಿಯಮದ ಉಪಬಂಧಗಳ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯ ವಾಡಿಕೆಯ ಸ್ವರೂಪದ್ದಾಗಿದೆ.

ರೇವುನಾಯಕ ಬೆಳಮಗಿ
ಪಶುಸಂಗೋಪನಾ ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ – I

ಮೂಡಬಿದ್ರೆಯಲ್ಲಿ ವಸತಿ ನಿವೇಶನಗಳ ಹಂಚಿಕೆ

95 (468) ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದ್ರೆ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 2006–07, 2007–08 ಮತ್ತು 2008–09ನೇ ಸಾಲಿನಲ್ಲಿ ಮಂಜೂರಾದ ಮನೆ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಮೂಡಬಿದರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2006–07, 2007–08, ಮತ್ತು 2008–09 ನೇ ಸಾಲಿನಲ್ಲಿ ಒಟ್ಟು 746 ಮನೆಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಗಿನಂತಿದೆ.

ಶ್ರೇಣಿ	2006–07	2007–08	2008–09	ಒಟ್ಟು
ಮನೆಗಳು	420	27	299	746

ಕಳೆದ ಮೂರು ವರ್ಷಗಳಲ್ಲಿ ಯಾವುದೇ ನಿವೇಶನಗಳು ಹಂಚಿಕೆಯಾಗಿರುವುದಿಲ್ಲ.

ಐತಿಹಾಸಿಕ ಸ್ಥಳಗಳನ್ನು ಪ್ರವಾಸೋದ್ಯಮ ಇಲಾಖೆಯಲ್ಲಿ ಸೇರಿಸುವುದು.

96 (300) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಷ್ಟು ಐತಿಹಾಸಿಕ ಸ್ಥಳಗಳನ್ನು ಪ್ರವಾಸೋದ್ಯಮ ಇಲಾಖೆಯ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ., ಅವು ಯಾವುವು;

ಆ) ಈ ಪೈಕಿ ಕುಷ್ಟಗಿ ತಾಲ್ಲೂಕಿನ ಯಾವ ಯಾವ ಐತಿಹಾಸಿಕ ಸ್ಥಳಗಳನ್ನು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ;

ಇ) ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಚಂದಾಲಿಂಗೇಶ್ವರ ದೇವಸ್ಥಾನ ಹನುಮಸಾಗರ, ಶ್ರೀ ಸೋಮಲಿಂಗೇಶ್ವರ ದೇವಸ್ಥಾನ, ಪುರ, ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನ ಎಂ.ಗುಡದೂರು ಈ ಐತಿಹಾಸಿಕ ಸ್ಥಳಗಳು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರಿವಿಯೇ;

ಈ) ಈ ದೇವಸ್ಥಾನಗಳ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ವಸತಿ ಸೌಕರ್ಯ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಇಲಾಖೆಯು ತೆಗೆದುಕೊಂಡ ಕ್ರಮಗಳೇನು;

ಉ) ಹಾಗಿದ್ದಲ್ಲಿ, ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಕೊಪ್ಪಳ ಜಿಲ್ಲೆಯಲ್ಲಿ 6 ಸ್ಥಳಗಳನ್ನು ಗುರುತಿಸಲಾಗಿದೆ.

1. ಕುಷ್ಟಗಿ
2. ಯಲಬುರ್ಗ
3. ಕೊಪ್ಪಳ
4. ಗಂಗಾವತಿ
5. ಕಾತರಗಿ
6. ಕನಕಗಿರಿ

ಆ) ಕುಷ್ಟಗಿ ತಾಲ್ಲೂಕಿನ ಕಿಡದೂರು ಗ್ರಾಮದ ಶ್ರೀ ಸಾಧ್ವಿ ಶಿರೋಮಣಿ ತುರುಡಗಿ ತಿಮ್ಮಮ್ಮನವರ ಬೃಂದಾವನ ಬಳಿ ಶ್ರೀ ವೆಂಕಟೇಶ್ವರ ದೇವಸ್ಥಾನವನ್ನು ಪ್ರವಾಸೋದ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಇ) ಸೇರಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಪ್ರವಾಸಿ ತಾಣಗಳ ಅಭಿವೃದ್ಧಿ

97 (512) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನಲ್ಲಿ ಪ್ರವಾಸಿ ತಾಣಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಸ್ಥಳಗಳು ಯಾವುವು;

ಇ) ಈ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ, ಹಾಲಿ ಅನುಷ್ಠಾನ ಗೊಂಡಿರುವ ಕಾರ್ಯಕ್ರಮಗಳು ಮತ್ತು ಹಮ್ಮಿಕೊಂಡಿರುವ ಕಾರ್ಯ ಕ್ರಮಗಳು ಯಾವುವು; ಹಾಗೂ ಅದಕ್ಕಾಗಿ ಬಿಡುಗಡೆಗೊಂಡಿರುವ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಮುಳಬಾಗಿಲು ತಾಲ್ಲೂಕಿನಲ್ಲಿ ಈ ಕೆಳಗಿನ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ.

1. ಮುಳುಬಾಗಿಲು.
2. ಕುರುಡುಮಲೆ
3. ಆವಣಿ
4. ವಿರೂಪಾಕ್ಷಿ
5. ಗುಟ್ಟಳ್ಳಿ ತಿರುಪತಿ
6. ಲಕ್ಷ್ಮೀ ವರಹಾಸ್ವಾಮಿ

ಇ) 1) **ಮುಳಬಾಗಿಲು :**

ಆಂಜನೇಯ ದೇವಾಲಯದ ಬಳಿ ಕುಡಿಯುವ ನೀರು ಮತ್ತು ಶೌಚಾಲಯವನ್ನು ರೂ. 12.50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಡಾರ್ಮಿಟರಿ ನಿರ್ಮಾಣಕ್ಕೆ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೋಲಾರರವರಿಗೆ ಬಿಡುಗಡೆ ಮಾಡಲಾಗಿದೆ.

2) ಕುರುಡುಮಲೆ

ಕುರುಡುಮಲೆ ವಿನಾಯಕ ದೇವಸ್ಥಾನದ ಬಳಿ ಡಾರ್ಮಿಟರಿ ವಸತಿ ಹಾಗೂ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ರೂ.50.00 ಲಕ್ಷಗಳನ್ನು ಕಾರ್ನಿಕ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

3) ಆವಣಿ

ಆವಣಿಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯವನ್ನು ರೂ.12,50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

4) ವಿರೂಪಾಕ್ಷಿ ಗ್ರಾಮದ ವಿರೂಪಾಕ್ಷ ದೇವಳದ ಬಳಿ ರೂ.50.00 ಲಕ್ಷಗಳ ಅಂದಾಜಿನಲ್ಲಿ ಡಾರ್ಮಿಟರಿ ನಿರ್ಮಿಸಲಾಗುವುದು.

5) ಗುಟ್ಟಳ್ಳಿ ತಿರುಪತಿ ಬಳಿ ಕುಡಿಯುವ ನೀರು ಮತ್ತು ಶೌಚಾಲಯ ವನ್ನು ರೂ.12.50 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ವಿವಿಧ ವಸತಿ ಯೋಜನೆಗಳನ್ನು ವಿತರಿಸಲಾದ ಮನೆಗಳು

98 (513) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್, ದೇವದಾಸಿ ಮತ್ತಿತರ ವಸತಿ ಯೋಜನೆಯಲ್ಲಿ ಮಂಜೂರಾದ ಮನೆಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಹಾಗೂ ವರ್ಷಾವಾರು ಮಾಹಿತಿ ನೀಡುವುದು);

ಆ) ಯಾವ ಯಾವ ವಸತಿ ಯೋಜನೆಯಲ್ಲಿ ಎಷ್ಟೆಷ್ಟು ಮನೆಗಳು ಪೂರ್ಣಗೊಂಡಿವೆ;

ಇ) ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಈ) ಈ ಯೋಜನೆಗಳಲ್ಲಿನ ಮನೆಗಳ ನಿರ್ಮಾಣಕ್ಕೆ ಸರ್ಕಾರವು ಈವರೆವಿಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್, ದೇವದಾಸಿ ಮತ್ತಿತರ ಯೋಜನೆಗಳಲ್ಲಿ ಒಟ್ಟು 843412 ಮನೆಗಳು ಮಂಜೂರಾಗಿದ್ದು ವಿವರ ಇಂತಿದೆ.

ಯೋಜನೆ	ಗುರಿ			
	2006–07	**2007–08**	**2008–09**	**Total**
ಗ್ರಾಮೀಣ ಆಶ್ರಯ	340560	0	200000	540560
ಗ್ರಾಮೀಣ ಅಂಬೇಡ್ಕರ್	0	18333	15871	34204
ಇಂದಿರಾ ಆವಾಸ್ ಯೋಜನೆ	53299	74029	137845	265173
ದೇವದಾಸಿ ವಿಶೇಷ ವರ್ಗದ ಯೋಜನೆ	3475	0	0	3475
ಒಟ್ಟು	**397334**	**92362**	**353716**	**843412**

ಈ ಮೇಲ್ಕಂಡ ಯೋಜನೆಗಳಡಿ ಗುರಿಯನ್ನು ಗ್ರಾಮ ಪಂಚಾಯಿತಿವಾರು ಹಾಗೂ ತಾಲ್ಲೂಕುವಾರು ನಿಗದಿಪಡಿಸುತ್ತಿರುವುದರಿಂದ ಗುರಿಯ ವಿವರಗಳನ್ನು ತಾಲ್ಲೂಕುವಾರು ತಯಾರಿಸಿ ಲಗತ್ತಿಸಲಾಗಿದೆ.

ಆ) ಇಲ್ಲಿಯವರೆಗೆ ಒಟ್ಟು 560973 ಮನೆಗಳು ಪೂರ್ಣಗೊಂಡು ವಿತರಣೆ ಆಗಿವೆ. ಯೋಜನೆವಾರು ವಿವರಗಳು ಕೆಳಕಂಡಂತಿವೆ:–

ಯೋಜನೆ	2006–07		2007–08		2008–09		ಒಟ್ಟು	
	ಪೂರ್ಣ ಗೊಂಡ ಮನೆಗಳು	ವಿತರಿಸ ಲಾದ ಮನೆಗಳು	ಪೂರ್ಣ ಗೊಂಡ ಮನೆಗಳು	ವಿತರಿಸ ಲಾದ ಮನೆಗಳು	ಪೂರ್ಣ ಗೊಂಡ ಮನೆಗಳು	ವಿತರಿಸ ಲಾದ ಮನೆಗಳು	ಪೂರ್ಣ ಗೊಂಡ ಮನೆಗಳು	ವಿತರಿಸಲಾದ ಮನೆಗಳು
ಗ್ರಾಮೀಣ ಆಶ್ರಯ	285513	285513	0	0	65162	65162	350675	350675
ಗ್ರಾಮೀಣ ಅಂಬೇಡ್ಕರ್	0	0	15009	15009	6037	6037	21046	21046
ಇಂದಿರಾ ಆವಾಸ್ ಯೋಜನೆ	44418	44418	57959	57959	83848	83848	186225	186225
ದೇವದಾಸಿ ವಿಶೇಷ ವರ್ಗದ ಯೋಜನೆ	3027	3027	ಗುರಿ ನಿಗದಿಪಡಿಸಿರುವುದಿಲ್ಲ				3027	3027
ಒಟ್ಟು	332958	332958	72968	72968	155047	155047	560973	560973

ಮೇಲ್ಕಂಡ ಯೋಜನೆಗಳಡಿ ಗುರಿಯನ್ನು ಗ್ರಾಮ ಪಂಚಾಯತಿ ವಾರು ಹಾಗೂ ತಾಲ್ಲೂಕುವಾರು ನಿಗದಿಪಡಿಸುತ್ತಿರುವುದರಿಂದ ಗುರಿಯ ವಿವರಗಳನ್ನು ತಾಲ್ಲೂಕುವಾರು ತಯಾರಿಸಿ ಲಗತ್ತಿಸಲಾಗಿದೆ.

ಈ) ಈ ಕೆಳಗೆ ತಿಳಿಸಿದ ಯೋಜನೆಗಳಡಿ ಸರ್ಕಾರವು ಈವರೆಗೂ ಆಯವ್ಯಯದಲ್ಲಿ ರೂ. **2287.85** ಕೋಟಿಗಳನ್ನು ಅನುದಾನವನ್ನು ಒದಗಿಸಲಾಗಿದ್ದು, ಇದರಲ್ಲಿ ಈವರೆಗೆ ರೂ. **2081.60** ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದು ಗುರಿಗೆ ತಕ್ಕಂತೆ ಇನ್ನೂ ರೂ. **446.57** ಕೋಟಿಗಳ ಅನುದಾನ ಬಿಡುಗಡೆಯಾಗಬೇಕಿದೆ.

(ರೂ. ಕೋಟಿಗಳಲ್ಲಿ)

ಯೋಜನೆ	ಗುರಿಗೆ ತಕ್ಕಂತೆ ಬೇಕಾದ ಅನು ದಾನ	ಆಯವ್ಯ ಯದಲ್ಲಿ ಒದಗಿಸಲಾದ ಅನುದಾನ	ಈವರೆಗೂ ಬಿಡುಗಡೆ ಮಾಡ ಲಾದ ಅನುದಾನ	ಆಯವ್ಯಯದಲ್ಲಿ ಬಾಕಿ ಇನ್ನು ಒದಗಿಸಬೇಕಾದ ಅನುದಾನ
ಗ್ರಾಮೀಣ ಆಶ್ರಯ	1821.68	1375.11	1168.86	446.57

ಗ್ರಾಮೀಣ ಅಂಬೇಡ್ಕರ್	111.96	111.96	111.96	0.00
ಇಂದಿರಾ ಆವಾಸ್ ಯೋಜನೆ	800.78	800.78	800.78	0.00
ಒಟ್ಟು	**2734.42**	**2287.85**	**2081.60**	**446.57**

ಮುಳಬಾಗಿಲು ಪುರಸಭೆಗೆ ಬಿಡುಗಡೆಯಾಗಿರುವ ಅನುದಾನ

99 (514) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ಪುರಸಭೆಗೆ 2007–08ನೇ ಸಾಲಿನಿಂದ 2009–10 ನೇ ಸಾಲಿನವರೆಗೆ ಯೋಜನಾವಾರು ಬಿಡುಗಡೆಯಾದ ಅನುದಾನವೆಷ್ಟು; ಹಾಗೂ ಬಳಕೆಯಾಗಿರುವ ಅನುದಾನವೆಷ್ಟು; (ಸಮಗ್ರ ವರದಿ ನೀಡುವುದು);

ಆ) ಅನುದಾನ ಸರಿಯಾಗಿ ಬಳಕೆಯಾಗದಿರುವುದು ಮತ್ತು ಕಾಮಗಾರಿಗಳ ಗುಣಮಟ್ಟ ಕಾಪಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಎಸ್.ಎಫ್.ಸಿ ಯೋಜನೆ

(ರೂ.ಲಕ್ಷಗಳಲ್ಲಿ)

ಬಿಡುಗಡೆಯಾದ ಅನುದಾನದ				ಖರ್ಚು			ಉಳಿಕೆ			ಶೇಕಡಾ
ವರ್ಷ	ಮುಕ್ತ ನಿಧಿ	ವಿಶೇಷ	ಒಟ್ಟು	ಮುಕ್ತ ನಿಧಿ	ವಿಶೇಷ	ಒಟ್ಟು	ಮುಕ್ತ ನಿಧಿ	ವಿಶೇಷ	ಒಟ್ಟು	
2007–08	221.56	810.00	1031.56	202.11	790.10	992.21	19.45	19.90	3935	96%
2008–09	214.80	0	214.80	214.80	0	214.80	0	0	0	100%
2009–10	218.43	0	218.43	7.78	0	7.78	210.65	0	210.65	3.5%
ಒಟ್ಟು	654.79	810.00	1464.79	424.69	790.10	1214.79	230.10	19.90	250.00	83%

12ನೇ ಹಣಕಾಸು ಯೋಜನೆ

(ರೂ.ಲಕ್ಷಗಳಲ್ಲಿ)

ವರ್ಷ	ಬಿಡುಗಡೆ ಯಾದ ಅನುದಾನ	ಖರ್ಚು	ಉಳಿಕೆ	ಶೇಕಡಾ	ಷರಾ
2007-08	65.96	37.82	28.14	57	ಉಳಿದ ಕಾಮಗಾರಿಗಳು ಪ್ರಗತಿಯಲ್ಲಿ ರುತ್ತದೆ
2008-09	49.96	27.55	22.41	55	
2009-10	13.60	0	13.60	0	
ಒಟ್ಟು	**129.52**	**65.37**	**64.15**	**50%**	

ಯುಐಡಿಎಸ್‌ಎಸ್‌ಎಂಟಿ ಯೋಜನೆ:

14-08-2007ರಲ್ಲಿ ಮುಳಬಾಗಿಲು ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ರೂ.1894.76 ಲಕ್ಷ ಅಂದಾಜು ವೆಚ್ಚದಲ್ಲಿ ಮಂಜೂರಾಗಿರುತ್ತದೆ. ಈ ಯೋಜನೆಯಲ್ಲಿ ಯರಗೋಳು ಯೋಜನೆಯಿಂದ ಕುಡಿಯುವ ನೀರನ್ನು ಪೂರೈಸಬೇಕಾಗಿರುತ್ತದೆ. ಆದ್ದರಿಂದ ಪ್ರಸ್ತುತ ಪ್ರಗತಿಯಲ್ಲಿರುವ ಯರಗೋಳು ಯೋಜನೆಯ ಪೂರ್ಣಗೊಂಡ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಭಾರತ ಸರ್ಕಾರದ ಹಾಗೂ ರಾಜ್ಯದ ಮೊದಲನೇ ಕಂತಿನ ಅನುದಾನ ರೂ. 852.64 ಲಕ್ಷ ಹಣ ಬಿಡುಗಡೆಯಾಗಿರುತ್ತದೆ.

ಆ) ಮುಳಬಾಗಿಲು ಪುರಸಭೆಗೆ ಬಿಡುಗಡೆಯಾಗಿರುವ ಅನುದಾನ ವನ್ನು ಅನುಮೋದಿತ ಕಾಮಗಾರಿಗಳಿಗೆ ಬಳಸಲಾಗುತ್ತಿದ್ದು, ಕೆಲವೊಂದು ಕಾಮಗಾರಿಗಳನ್ನು ಕೈಗೊಳ್ಳಲು ತಂಟೆ ತಕರಾರು ಇರುವುದರಿಂದ ಅನುದಾನವನ್ನು ಸಂಪೂರ್ಣವಾಗಿ ಬಳಸಲು ವಿಳಂಬವಾಗುತ್ತಿದೆ. ಮತ್ತು 2009-10 ನೇ ಸಾಲಿನ ಅನುದಾನಗಳಿಗೆ ಟೆಂಡರ್ ಕರೆಯಲಾಗಿರುತ್ತದೆ.

ಮುಳಬಾಗಿಲು ಪುರಸಭೆವತಿಯಿಂದ ಪಟ್ಟಣದ ವ್ಯಾಪ್ತಿಯಲ್ಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುತ್ತಿದ್ದು, ತಾಂತ್ರಿಕ ವಿಭಾಗದ ಪರಿಶೀಲನೆ ಮತ್ತು 3ನೇ ವ್ಯಕ್ತಿ ತಪಾಸಣೆಯ ವರದಿಯನ್ನು ಪಡೆದ ನಂತರ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ.

ಇ) ಅನ್ವಯಿಸುವುದಿಲ್ಲ.

100 (515) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ರಹಿತ ದುರ್ಬಲ ವರ್ಗದವರು ಸರ್ಕಾರ ಜಾಗದಲ್ಲಿ ಮನೆ ಕಟ್ಟಿ ವಾಸ್ತವ್ಯ ಇರುವವರಿಗೆ ನಿವೇಶನದ ಹಕ್ಕುಪತ್ರ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಆ ಜಾಗವನ್ನು ಸಕ್ರಮಗೊಳಿಸಲು ಅವಕಾಶ ಮಾಡಿಕೊಡಲಾಗುವುದೇ?

ಇ) ಅಕ್ರಮ ಸಕ್ರಮ ಯೋಜನೆಯು ಕೇವಲ ನಗರ ಪ್ರದೇಶಕ್ಕೆ ಅಥವಾ ತಾಲ್ಲೂಕು ಪಟ್ಟಣಕ್ಕೆ ಸಂಬಂಧಿಸಿದೆಯೆ (ವಿವರ ಒದಗಿಸುವುದು);

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ಸಿ ಪ್ರಕಾರ ಸರ್ಕಾರಿ ಜಮೀನುಗಳನ್ನು ದಿ: 14-4-1998ರ ಪೂರ್ವದಲ್ಲಿ ಮನೆ ಕಟ್ಟಿ ವಾಸ ಇರುವ ಬಡ ಕುಟುಂಬದವರಿಗೆ ಅಂತಹವರ ಅನಧಿಕೃತ ಮನೆಗಳನ್ನು ಸಕ್ರಮೀಕರಣಗೊಳಿಸಲು ದಿ: 31.12.2001 ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹತೆ ಅನುಸಾರ ಮಂಜೂರು ಮಾಡಿ ಹಕ್ಕು ಪತ್ರ ನೀಡಲು ಅವಕಾಶವಿದೆ.

ಇ) ಇದನ್ನು ನಗರ ಪ್ರದೇಶಕ್ಕೆ ಹಾಗೂ ತಾಲ್ಲೂಕು, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಕ್ಕೂ ಅನ್ವಯಿಸಲಾಗಿತ್ತು.

ರಾಜೀವ್‌ಗಾಂಧಿ ವಿದ್ಯುತ್ ಯೋಜನೆ

102 (48) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ., (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಕೊಡಗು ಜಿಲ್ಲೆಯಲ್ಲಿ ಯಾವ ಕಂಪನಿಗೆ ನೀಡಲಾಗಿದೆ?

ಆ) ಈ ಕಂಪನಿಯವರು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ನೀಡಲು ವಿಳಂಬ ಮಾಡಲು ಕಾರಣವೇನು?

ಇ) ಈ ಕಂಪನಿಗೆ ಕೊಡಗು ಜಿಲ್ಲೆಯಿಂದ ಎಷ್ಟು ಮೊತ್ತದ ಹಣ ನೀಡಲಾಗಿದೆ?

ಈ) ಕಾಮಗಾರಿ ಕೈಗೊಳ್ಳುವುದಕ್ಕಿಂತ ಮೊದಲು ಹಣ ಪಾವತಿಸಲು ಕಾರಣವೇನು?

ಉ) ಕಾಮಗಾರಿ ಮೇಲ್ವಿಚಾರಣೆ ಯಾರು ನೋಡಿಕೊಳ್ಳುತ್ತಿದ್ದಾರೆ?

ಊ) ಕೊಡಗು ಜಿಲ್ಲೆಯಲ್ಲಿ ಅಂದಾಜು ರೂ.13.00 ಕೋಟಿ ಪಾವತಿ ಯಾಗಿರುವ ಬಗ್ಗೆ ಸಾರ್ವಜನಿಕವಾಗಿ ಕೇಳಿ ಬರುತ್ತಿದೆ. ಇದಕ್ಕೆ ಸರ್ಕಾರದ ಸಮಜಾಯಿಷಿ ಏನು?

ಋ) ಕೊಡಗು ಜಿಲ್ಲೆಯಲ್ಲಿ ಆಗಿಂದಾಗ್ಗೆ ವಿದ್ಯುತ್ ಕಡಿತಗೊಳ್ಳಲು ಕಾರಣವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮೆ: ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು ಇವರಿಗೆ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ನೀಡಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಕೊಡಗು ಜಿಲ್ಲೆಗೆ ರಾಜೀವ್ ಗಾಂಧೀ ವಿದ್ಯುತ್ ಯೋಜನೆಯ ಮಂಜೂರಾತಿ ದೊರೆಯುವಲ್ಲಿ ವಿಳಂಬವಾದು ದರಿಂದ ವಿದ್ಯುತ್ ಸಂಪರ್ಕ ಏರ್ಪಡಿಸುವ ಕಾಮಗಾರಿಯಲ್ಲಿ ವಿಳಂಬ ವಾಗಿರುತ್ತದೆ.

ಇ) ಕಂಪನಿಗೆ ನಿಯಮಾನುಸಾರವಾಗಿ ರೂ. 13.63 ಕೋಟಿ ಗಳನ್ನು ನೀಡಲಾಗಿರುತ್ತದೆ.

ಈ) ಟೆಂಡರ್ ಕಾಮಗಾರಿ ಕೈಗೊಳ್ಳುವುದಕ್ಕಿಂತ ಮೊದಲು ಕ್ರೋಢೀಕರಣ ಮುಂಗಡ (Mobilization Advance) ಹಣ ಪಾವತಿಸ ಬೇಕಾಗಿರುತ್ತದೆ.

ಉ) ಕಾಮಗಾರಿ ಮೇಲ್ವಿಚಾರಣೆಯನ್ನು ವಿದ್ಯುತ್ ಸರಬರಾಜು ಕಂಪನಿಯ ಆಯಾಯ ಜಿಲ್ಲೆಯ ವಿಭಾಗಾಧಿಕಾರಿ ಹಾಗೂ ಉಪ ವಿಭಾಗಾಧಿ ಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

ಊ) ಟೆಂಡರ್ ನಿಯಮದಂತೆ ಕಾಮಗಾರಿಯನ್ನು ಕೈಗೊಳ್ಳಲು ಕ್ರೋಢೀಕರಣ ಮುಂಗಡ (Mobilization Advance) ಹಣವನ್ನು ಸಾಮಗ್ರಿಗಳ ಖರೀದಿಗಾಗಿ ಹಾಗೂ ಇತರೆ ವೆಚ್ಚವನ್ನು ಭರಿಸಲು ಕಂಪನಿಯ ವರಿಗೆ ನೀಡಬೇಕಾಗಿರುತ್ತದೆ. ಆದುದರಿಂದ, ಮೇಲಿನ ಮೊಬಲಗನ್ನು ಪಾವತಿ ಮಾಡಲಾಗಿರುತ್ತದೆ.

ಖ) ವಿದ್ಯುತ್ ಜಾಲದ ತಾಂತ್ರಿಕ ದೋಷ ಹಾಗೂ ಅನಿಯಮಿತ ವಿದ್ಯುತ್ ಕಡಿತ ಹೊರತುಪಡಿಸಿ ವೇಳಾಪಟ್ಟಿಯಂತೆ ನಿಗಧಿತ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ವಿದ್ಯುತ್ ಸರಬರಾಜು

108 (423) ಶ್ರೀ ಬಚ್ಚೇಗೌಡ. ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ದಿನಕ್ಕೆ ಎಷ್ಟು ಗಂಟೆಗಳ ಕಾಲ 3 ಫೇಸ್ ಕರೆಂಟ್‌ನ್ನು ರೈತರ ಐ.ಪಿ.ಸೆಟ್‌ಗಳಿಗೆ ನೀಡಲಾಗುತ್ತಿದೆ (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು);

ಆ) ರಾಜ್ಯದಲ್ಲಿ ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ರೈತಾಪಿ ಜನಗಳ ಐ.ಪಿ.ಸೆಟ್ಟಿನ ಹಾಗೂ ಕುಡಿಯುವ ನೀರಿನ ಹಾಗೂ ಗ್ರಾಮಗಳ ಬೀದಿ ದೀಪಗಳ ಎಷ್ಟು ಟಿ.ಸಿ.ಗಳು ಹಾಳಾಗಿರುತ್ತವೆ?

ಇ) ಎಷ್ಟು ಟಿ.ಸಿ.ಗಳನ್ನು ಬದಲಾಯಿಸಬೇಕಾಗಿದೆ? ಅವುಗಳಲ್ಲಿ ಎಷ್ಟು ಸಾಮರ್ಥ್ಯದ ಟಿ.ಸಿ.ಗಳು ಚಾಲನೆಯಲ್ಲಿವೆ? ಸಾಮರ್ಥ್ಯವಾರು ಅವುಗಳನ್ನು ಅಳವಡಿಸಲು ಎಷ್ಟು ಕಾಲಾವಕಾಶ ತೆಗೆದುಕೊಳ್ಳಲಾಗುವುದು; (ಕಳೆದ 3 ವರ್ಷಗಳ ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು);

ಈ) ರಾಜ್ಯದಲ್ಲಿ ಬೆಂಗಳೂರು ವಿದ್ಯುತ್ ಕಂಪೆನಿ, ಮಂಗಳೂರು ವಿದ್ಯುತ್ ಕಂಪೆನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪೆನಿ, ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪೆನಿಗಳ ವ್ಯಾಪ್ತಿಗೆ ಬರುವ ಪರಿಶಿಷ್ಟ ಸಮಾಜ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಅಳವಡಿಸಿರುವ ಐ.ಪಿ.ಸೆಟ್ ಗಳೆಷ್ಟು; ಅವುಗಳಲ್ಲಿ ವಿದ್ಯುತ್ ಸಂಪರ್ಕವನ್ನು ಎಂದಿನಿಂದ ಕಲ್ಪಿಸಲಾಗಿರುತ್ತದೆ;

ಇಲ್ಲಿಯವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣಗಳೇನು; (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಯಾವುದೇ ತಾರತಮ್ಯವಿಲ್ಲದೆ, ಬೆಂಗಳೂರು ವಿದ್ಯುತ್ ಕಂಪನಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ 6 ಗಂಟೆಗಳ ಕಾಲ ಸಿಂಗಲ್ ಫೇಸ್ ಮತ್ತು 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ 6 ಗಂಟೆಗಳ ಅವಧಿಯಲ್ಲಿ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲಾ/ತಾಲ್ಲೂಕ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಕ್ಕೆ ಪ್ರತಿದಿನ 6 ತಾಸು 3 ಫೇಸ್ ವಿದ್ಯುತ್‌ನ್ನು ರೈತರ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡಲಾಗುತ್ತಿದೆ.

27. Chitkota	Basavakalyan
28. Gilgili	Basavakalyan
29. Attoor	Basavakalyan
30. Handral	Basavakalyan
31. Sirgapur	Basavakalyan
32. Honnalli	Basavakalyan
33. Kamblewadi	Basavakalyan
34. Jafarwadi	Basavakalyan
35. Kohinoorwadi	Basavakalyan
36. Fuldarwadi	Basavakalyan
37. Jogewadi	Basavakalyan
38. Madarwadi	Basavakalyan
39. Navalchandwadi	Basavakalyan
40. Sirrowadi	Basavakalyan
41. Ladwanthi Wadi	Basavakalyan
42. Bhatgerawadi	Basavakalyan

43. Guntur Thanda	Basavakalyan
44. Elladgundi Thanda	Basavakalyan
45. Chitta Thanda	Basavakalyan
46. Gadlegoun K Thanda	Basavakalyan
47. Attor Thanda	Basavakalyan
18. HULSOOR POLICE STATION	
1. Gour	Basavakalyan
2. Khandal	Basavakalyan
3. Gutti	Basavakalyan
4. Anandwadi	Basavakalyan
5. Bet Balkunda	Basavakalyan
6. Belur	Basavakalyan
7. Gadi Goudgaon	Basavakalyan
8. Sol Dabaka	Basavakalyan
9. Togaloor	Basavakalyan
10. Halahalli	Basavakalyan
11. Kadarabad	Basavakalyan
12. Goudgoan Rachappa	Bhalki
13. Ladha	Bhalki
14. Kesar Jawalga	Bhalki
15. Inchur	Bhalki
16. Hulsoor	Basavakalyan
17. Devanal	Basavakalyan
18. Machanal	Basavakalyan
19. Jamakhandi	Bhalki
20. Mirkhal	Basavakalyan
21. Wanjarwadi	Basavakalyan
22. Kotmal	Basavakalyan
23. Hanmanthwadi	Basavakalyan
24. Ambewadi	Basavakalyan
25. Saigoan	Bhalki
26. Pandri	Bhalki
27. Jeergyal	Bhalki

28. Halasi	Bhalki
29. Khuddampur	Bhalki
30. Wagalgoan	Bhalki
31. Bolegoan	Bhalki
32. Kongali	Bhalki
33. Togoan H	Bhalki
34. Srimali	Bhalki
35. Gunjarga	Bhalki
36. Attarga	Bhalki
37. Manikeshwar	Bhalki
38. Alawai	Bhalki
39. Basvanwadi	Bhalki
40. Wanjar bead	Bhalki
41. khutegaon	Bhalki
42. Mehakar	Bhalki
43. Narad Sangam	Bhalki
44. Yallamwadi	Bhalki
19. BASVAKALYAN TRAFFICE POLICE STATION	
All Muncipal Area	Basavakalyan
Bahalki Sub Division	
20. BHALKI TOWN POLICE STATION	
All Bhalki Town Area	Bhalki
21. BHALKI RUARAL POLICE STATION	
1. Anand Wadi	Bhalki
2. Atnur	Bhalki
3. Ambesangvi	Bhalki
4. Alandi	Bhalki
5. Bhagwanwadi	Bhalki
6. Bhatambra	Bhalki
7. Bahtsangvi	Bhalki
8. Biri (B)	Bhalki
9. Biri K	Bhalki
10. Balur	Bhalki

11. Chikalchanda	Bhalki
12. Eklaspurwadi	Bhalki
13. Ganesh Pur Wadi	Bhalki
14. Dongapur	Bhalki
15. Hunaji (A)	Bhalki
16. Hattikamta	Bhalki
17. Chikalchanda	Bhalki
18. Jaigaon	Bhalki
19. Kaknal	Bhalki
20. Kasartugaon Wadi	Bhalki
21. Kasartughaon	Bhalki
22. Kalasdal	Bhalki
23. Kotgel Wadi	Bhalki
24. Kerur	Bhalki
25. Karediyal	Bhalki
26. Kunt Sirisi	Bhalki
27. Lakhangaon	Bhalki
28. Lanjwad	Bhalki
29. Ramtirth Wadi	Bhalki
30. Meti Melkunda	Bhalki
31. Meti Melkunda	Bhalki
32. Saidapur Wadi	Bhalki
33. Shivni	Bhalki
34. Sompur	Bhalki
35. Thamgyal	Bhalki
36. Telgaon	Bhalki
37. Walsang	Bhalki
38. Talwad M	Bhalki
39. Siddapur Wadi	Bhalki
40. Shamshapur Wadi	Bhalki
41. Talwad K	Bhalki
42. Biri B Thanda	Bhalki
43. Balur Thanda	Bhalki

44. Kalsdala Thanda	Bhalki
45. Biri B Mla Thada	Bhalki
46. Bhatambra Thanda	Bhalki
22. DHANNURA POLICE STATION	
1. Byalhalli (K)	Bhalki
2. Hallhalli (k)	Bhalki
3. Halhalli Thanda	Bhalki
4. Nilamnalli	Bhalki
5. thdna	Bhalki
6. Dhannura (H)	Bhalki
7. Thanda	Bhalki
8. Dadodi Thanda	Bhalki
9. Karma thanda	Bhalki
10. Rudnoor Thanda	Bhalki
11. Rudnoor	Bhalki
12. Malchapur	Bhalki
13. Khanapur	Bhalki
14. Konmelkunda	Bhalki
15. Halbarga	Bhalki
16. Tegampur	Bhalki
17. Ahmedabad	Bhalki
18. Hupla	Bhalki
19. Mural	Bhalki
20. Kotgyal	Bhalki
21. Nittur (b)	Bhalki
22. Chandapur	Bhalki
23. Dongurgi	Bhalki
24. Gornal	Bhalki
25. Hajnal	Bhalki
26. Jainapur	Bhalki
27. Kudli	Bhalki
28. Kolsang	Bhalki
29. Khashempur	Bhalki

30. Halhipparga	Bhalki
31. Nagral	Bhalki
32. Naguru k	Bhalki
33. Siddeshwar	Bhalki
34. Thanda	Bhalki
35. Joldabka	Bhalki
36. Nelgi	Bhalki
37. Marur	Bhalki
38. Ghodi Hipparga	Bhalki
39. Masimad	Bhalki
40. Tarnalli	Bhalki
41. Janthi	Bhalki
42. Hunji K	Bhalki
43. Kanaji	Bhalki
44. Katti Tugaon	Bhalki
45. Nelwad	Bhalki
46. Khanapur Thanda	Bhalki
23. KHATAK CHINCHOLI POLICE STATION	
1. Baradapur	Bhalki
2. Bajolaga	Bhalki
3. Byalhalli (w)	Bhalki
4. Hajjarnagar	Bhalki
5. Chalkarpur	Bhalki
6. Wadi	Bhalki
7. Chitta K	Bhalki
8. Dawargaon	Bhalki
9. Dadgi	Bhalki
10. Gorchincholli	Bhalki
11. Halgorta	Bhalki
12. Haonnalli	Bhalki
13. KC	Bhalki
14. Kaplapur	Bhalki
15. Korur	Bhalki

16. Kotgera	Bhalki
17. Kurubkehlgi	Bhalki
18. mavinalli	Bhalki
19. Madkatti	Bhalki
20. Morambi	Bhalki
21. Navadgi	Bhalki
22. Thanda	Bhalki
23. Nideban	Bhalki
24. Sikindrapur	Bhalki
25. Ucha	Bhalki
26. Warwatti B	Bhalki
24. AURAD POLICE STATION	
1. Aurad	Aurad
2. Mugnal	Aurad
3. Tegampur	Aurad
4. Mamdapur	Aurad
5. Alapur	Aurad
6. Narayanpur	Aurad
7. Badalgoun	Aurad
8. Vanmarpalli	Aurad
9. Khandikeri	Aurad
10. Jamalpur	Aurad
11. Tudaknal	Aurad
12. Ekamba	Aurad
13. Karkyal	Aurad
14. Dongargoun	Aurad
15. Hulyal	Aurad
16. Ganeshpur A	Aurad
17. Boral	Aurad
18. Malegoun	Aurad
19. Hokrana	Aurad
20. KHEDA (B)	Aurad
21. Bhandarkumta	Aurad

22. DABKA C	Aurad
23. Ganganbeed	Aurad
24. Ganeshpur U	Aurad
25. Chikli U	Aurad
26. Chondi Mukhed	Aurad
27. Dawargoun	Aurad
28. Lingi	Aurad
29. Bonthi	Aurad
30. Hangaraga B	Aurad
31. Nandi Bijalgoun	Aurad
32. Mudkhed	Aurad
33. Bawalgoun	Aurad
34. Aknapur	Aurad
35. Tirgunwadi	Aurad
25. SANTHPUR POLICE STATION	
1. Kappikeri	Aurad
2. Chonikeri	Aurad
3. Jojana	Aurad
4. Nagur N	Aurad
5. Nagur M	Aurad
6. Borgi	Aurad
7. Wadgoun	Aurad
8. Khasempur B	Aurad
9. Jamgi	Aurad
10. Wallepur	Aurad
11. Pasapur	Aurad
12. Gadi Kushnor	Aurad
13. Dharajwadi	Aurad
14. Kandgul	Aurad
15. Alur B	Aurad
16. Alur K	Aurad
17. Khanapur	Aurad
18. Jirga B	Aurad

19. Jirga K	Aurad
20. Shambelli	Aurad
21. Mustapur	Aurad
22. koudgoun	Aurad
23. Ballur	Aurad
24. Kouta B	Aurad
25. Kouta K	Aurad
26. Belur N	Aurad
27. Toralli	Aurad
28. Lada	Aurad
29. Dhupatmagoun	Aurad
30. Pachepalli	Aurad
31. Baballi	Aurad
32. Managempur	Aurad
33. Chatnal	Aurad
26. CHINTAKI POLICE STATION	
1. Chintaki	Aurad
2. Yengunda	Aurad
3. Khasempur A	Aurad
4. Sundyal	Aurad
5. Itgyal	Aurad
6. Chaknal	Aurad
7. Nandiyal	Aurad
8. Nagamarpalli	Aurad
9. Nanur K	Aurad
10. Raypalli	Aurad
11. Karanji B	Aurad
12. Karanji K	Aurad
13 Ujani	Aurad
14. Chikli J	Aurad
15. Sunkanal	Aurad
16. Nadpalli	Aurad
17. Gutpalli	Aurad

0.14F-76

18. Lingdalli K	Aurad
19. Lingdalli J	Aurad
20. Beldal	Aurad
21. Bardapur	Aurad
22. Kollur	Aurad
23. Eklar	Aurad
24. tuljapur	Aurad
25. Naganpalli	Aurad
27. KAMALNAGAR POLICE STATION	
1. Kamalnagar	Aurad
2. Chickmurg	Aurad
3. Balur	Aurad
4. Horandi	Aurad
5. Sonal	Aurad
6. Sonal Wadi	Aurad
7. Chandeshwar	Aurad
8. Diggi	Aurad
9. Hulsor	Aurad
10. HULSOR K	Aurad
11. Kalgapur	Aurad
12. Sauli	Aurad
13. Holsamudra	Aurad
14. Khed	Aurad
15. Rampur	Aurad
16. Kodgyal	Aurad
17. Randyal	Aurad
18. Dongoun (M)	Aurad
19. Khatgoun	Aurad
20. Hakyal	Aurad
21. Madnoor	Aurad
22. Belkkuni (B)	Aurad
23. Sangnal	Aurad
24. Bhavani Bijjallgoun	Aurad

25. Bhopalghad	Aurad
26. Torna	Aurad
27. Torna Wadi	Aurad
28. Dongoun Wadi	Aurad
29. Murki	Aurad
30. Murki Wadi	Aurad
31. Shivpur	Aurad
32. Wagengera	Aurad
33. Handikera	Aurad
34. Chimmegoun	Aurad
35. Dhoparwadi	Aurad
28. KUSHNUR POLICE STATION	
1. Kushnur	Aurad
2. Bemra	Aurad
3. Bedkunda	Aurad
4. Goudgoun	Aurad
5. Hippalgoun	Aurad
6. Korekal	Aurad
7. Hassikera	Aurad
8. Mahadongoun	Aurad
9. Belkuni C	Aurad
10. Balath K	Aurad
11. Balath B	Aurad
12. Hallhali	Aurad
13. Hedgapur	Aurad
14. Nittur K	Aurad
15. Nidoda	Aurad
16. Rakshyal K	Aurad
17. Rakshyal B	Aurad
18. Basnal	Aurad
19. Chandori	Aurad
20. Koriyal	Aurad
21. Mudhol B	Aurad

22. Mudhol K	Aurad
23. Lingdalli	Aurad
24. Sangam	Aurad
25. Tapsyal	Aurad
26. Nagur B	Aurad
27. Maskal	Aurad
28. Maskal	Aurad

ಹಣಕಾಸು ಇಲಾಖೆಯ ವಿಶೇಷ ಪ್ಯಾಕೇಜ್

134 (293) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಹಣಕಾಸು ಇಲಾಖೆಯಿಂದ ಸರ್ಕಾರವು ಯಾವ ಯಾವ ಜಿಲ್ಲೆಗಳಿಗೆ ವಿಶೇಷ ಪ್ಯಾಕೇಜಿನ ನೆರವನ್ನು ಘೋಷಣೆ ಮಾಡಿತ್ತು? ಹಾಗೂ ಈ ನೆರವಿನ ಮೊತ್ತವೆಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು).

ಆ) ಇದರ ಅನ್ವಯ ವಿವಿಧ ಜಿಲ್ಲೆಗಳಿಗೆ ವಿಶೇಷವಾಗಿ ಬೀದರ್ ಜಿಲ್ಲೆಗೆ ಬಿಡುಗಡೆಯಾದ ಹಣದ ಮೊತ್ತವೆಷ್ಟು?

ಇ) ಈ ಹಣದಿಂದ ಜಿಲ್ಲೆಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಆರ್ಥಿಕ ಇಲಾಖೆಯಿಂದ ನೇರವಾಗಿ ಯಾವುದೇ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಸತಿ ರಹಿತರಿಗೆ ಆಶ್ರಯ ಕೊಡುವ ಕುರಿತು.

135 (113) ಶ್ರೀ ಸಿದ್ದು ಸವದಿ (ತೇರದಾಳ್) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ವಸತಿ ರಹಿತರಿಗೆ ಒದಗಿಸಿದ ಎಲ್ಲಾ ಯೋಜನೆಗಳು ಸೇರಿ ವಿತರಿಸಿದ ಒಟ್ಟು ಮನೆಗಳ ಸಂಖ್ಯೆ ಎಷ್ಟು; (ಪಟ್ಟಣ ಮತ್ತು ಗ್ರಾಮೀಣ ಪ್ರತ್ಯೇಕವಾಗಿ ಮಾಹಿತಿ ನೀಡುವುದು);

ಆ) ಪಟ್ಟಣಗಳಲ್ಲಿ ಬಹಳಷ್ಟು ಕಡುಬಡವರು, ದಲಿತರು ಕೊಳಚೆ ಪ್ರದೇಶದಲ್ಲಿ ವಾಸಿಸುವವರಿಗೆ ಇದುವರೆಗೆ ಆಶ್ರಯಗಳನ್ನು ಕೊಡದೆ ಇರುವ ಕಾರಣಗಳೇನು;

ಇ) ಈ ವರ್ಷದಲ್ಲಾದರೂ ನಗರ ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಆಶ್ರಯ ಕೊಡಲಾಗುವುದೇ; (ಸಂಪೂರ್ಣ ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳಲ್ಲಿ ಕೊಡಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹಿಂದಿನ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದ ವಸತಿರಹಿತರಿಗೆ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳಲ್ಲಿ ಒಟ್ಟು 535567 ಮನೆಗಳನ್ನು ವಿತರಿಸಿದ್ದು ಅದರ ವಿವರ ಈ ಕೆಳಗಿನಂತಿದೆ.

ಗ್ರಾಮೀಣ ಪ್ರದೇಶ :

ಯೋಜನೆ	ಗುರಿ			
	2007–08	**2008–09**	**2009–10**	ಒಟ್ಟು
ಗ್ರಾಮೀಣ ಆಶ್ರಯ	ಗುರಿ ನಿಗದಿಪಡಿಸಿರುವುದಿಲ್ಲ	200000	ಗುರಿ ನಿಗದಿಪಡಿಸಿರುವುದಿಲ್ಲ	200000
ಗ್ರಾಮೀಣ ಅಂಬೇಡ್ಕರ್	18333	15871	10000	44204

ಇಂದಿರಾ ಆವಾಸ್ ಯೋಜನೆ	74029	137845	79489	291363
ಒಟ್ಟು	**92362**	**353716**	**89489**	**535576**

ನಗರ ಪ್ರದೇಶ:

ಯೋಜನೆ	ಗುರಿ			
	2007–08	**2008–09**	**2009–10**	**ಒಟ್ಟು**
ನಗರ ಆಶ್ರಯ	ನಗರ ಪ್ರದೇಶದಲ್ಲಿ ಸರ್ಕಾರದಿಂದ ಯಾವುದೇ ಗುರಿಯನ್ನು ನಿಗದಿಪಡಿಸಿರುವುದಿಲ್ಲ.			

ಆ) ಪಟ್ಟಣದಲ್ಲಿ ವಾಸಿಸುತ್ತಿರುವ ಬಡವರಿಗೆ ನಗರ ಆಶ್ರಯ ಯೋಜನೆಯಡಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದ್ದು, ಈ ಯೋಜನೆಯಡಿಯಲ್ಲಿ ಸರ್ಕಾರದಿಂದ ಗುರಿ ನಿಗದಿಪಡಿಸಲಾಗಿಲ್ಲವಾದ್ದರಿಂದ ಮನೆಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಕೊಳಚೆ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ವಸತಿ ಯೋಜನೆಗಳಡಿ ಅನುದಾನ ಬಿಡುಗಡೆಗೆ ಅನುಗುಣವಾಗಿ ವಸತಿ ಸೌಕರ್ಯ ಕಲ್ಪಿಸಬೇಕಾಗಿರುತ್ತದೆ.

ಇ) ಅನುದಾನ ಬಿಡುಗಡೆ ಆಧರಿಸಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಈ) ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆಯು ನಗರ ಪ್ರದೇಶಗಳಲ್ಲಿ ಬಡಜನರಿಗೆ ನಿರ್ಮಿಸಲ್ಪಟ್ಟ ಮನೆಯನ್ನು ಖರೀದಿಸಲು ಅಥವಾ ಅವರ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ರೂ.1.00 ಲಕ್ಷಗಳಿಂದ ರೂ 1.60 ಲಕ್ಷಗಳವರೆಗೆ ಸಾಲ ನೀಡಲು "ನಗರದ ಬಡಜನರ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆ"ಯನ್ನು (Interest Subsidy Scheme for Housing the Urban Poor- ISHUP) ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಬ್ಯಾಂಕ್ ನಿಗದಿಪಡಿಸಿರುವ ಬಡ್ಡಿಯಲ್ಲಿ ಪ್ರತಿಶತ 5 ರಷ್ಟು ರಿಯಾಯಿತಿ ದರದಲ್ಲಿ ಸಾಲವನ್ನು ನೀಡಲಾಗುತ್ತದೆ. ಈ ಯೋಜನೆಯನ್ನು ಜಿಲ್ಲಾಧಿಕಾರಿಗಳು ಹಾಗೂ ಪೌರಾಡಳಿತ ನಿರ್ದೇಶಕರ ಮುಖಾಂತರ ನಗರ ಸ್ಥಳೀಯ

ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದಲ್ಲಿ "ನಮ್ಮ ಮನೆ" ಕಾರ್ಯಕ್ರಮ ದಡಿಯಲ್ಲಿ ಜಾರಿಗೆ ತರಲಾಗಿರುತ್ತದೆ.

ಈ ಯೋಜನೆಯಡಿಯಲ್ಲಿ ಗರಿಷ್ಠ ರೂ. 3,300/- ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಆರ್ಥಿಕವಾಗಿ ಅಶಕ್ತರೆಂದೂ (EWS) ಹಾಗೂ ರೂ. 3,301 ಗಳಿಂದ ರೂ. 7,300 ಒಳಗಿನ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಕಡಿಮೆ ಆದಾಯದ ಗುಂಪು (LIG) ಎಂದು ವರ್ಗೀಕರಿಸಲಾಗಿದೆ. ಇವರುಗಳು ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಈ ಯೋಜನೆಯಡಿಯಲ್ಲಿ ನಿವೇಶನ ಹೊಂದಿರುವ ಎಲ್ಲಾ ಮೇಲ್ಕಾಣಿಸಿದ ವರ್ಗಗಳ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು / ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಂಬಂಧಿಸಿದಂತೆ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ ಅಲ್ಲದೇ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ನಗರ ಬಡಜನರಿಗೆ ಮೂಲ ಸೌಕರ್ಯ ಯೋಜನೆಗಳಡಿ ಆಶ್ರಯ ಒದಗಿಸಲಾಗುವುದು.

ಬೆಂಗಳೂರಿನ ಸರ್ವಜ್ಞನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ

136 (490) ಶ್ರೀ ಜಾರ್ಜ್ ಕೆ.ಜೆ.(ಸರ್ವಜ್ಞನಗರ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ (ಹಳೆ ಸಿ.ಎಂ.ಸಿ ಭಾಗದಲ್ಲಿ ಕಾವೇರಿ ನೀರು ಒದಗಿಸಲು 10 ವರ್ಷಗಳ ಹಿಂದೆ ಕೊಳವೆ ಪೈಪ್ ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ);

ಆ) ಹಾಗಿದ್ದಲ್ಲಿ, ಇದುವರೆಗೆ ನೀರು ಸಂಪರ್ಕ ಒದಗಿಸದೇ ಇರಲು ಕಾರಣವೇನು ಮತ್ತು ಯಾವಾಗ ಸಂಪರ್ಕ ನೀಡಲಾಗುತ್ತದೆ (ಖರ್ಚಾದ ಮೊತ್ತದ ವಿವರ ನೀಡುವುದು);

ಇ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರಕ್ಕೆ ಹೂಡಿಯಿಂದ ಓ.ಎಂ. ಬಿ.ಆರ್ ಜಲಗಾರ ಯೋಜನೆಯಡಿ 4ನೇ ಹಂತ, 2ನೇ ಫೇಸ್ ಕಾವೇರಿ ನೀರು ಸಂಪರ್ಕ ನೀಡಲು ತೆಗೆದುಕೊಂಡ ಕ್ರಮಗಳೇನು; ಯೋಜನೆ ನಿಗದಿ ಮಾಡಿದ ಮೊತ್ತವೆಷ್ಟು (ಕಾಮಗಾರಿ ಪ್ರಾರಂಭವಾದ ವರ್ಷ ಹಾಗೂ ನಿಗದಿ ಮಾಡಿದ ಕಾಲಾವಕಾಶ ಮತ್ತು ಇದುವರೆಗೆ ಖರ್ಚಾದ ಮೊತ್ತದ ವಿವರ ನೀಡುವುದು);

ಈ) ಟಿ.ಕೆ.ಹಳ್ಳಿಯಿಂದ ಕಾವೇರಿ ಪೂರ್ವದ ಕಡೆ ಯಾವುದೇ ನೀರು ಸಂಪರ್ಕ ಇರುವುದಿಲ್ಲ; 4ನೇ ಹಂತದ 2ನೇ ಫೇಸ್ ಈ ನೀರು ಸಂಪರ್ಕ ಪೂರ್ವದ ಕಡೆ ಇದೆಯೇ (ಇದ್ದಲ್ಲಿ ಅದರ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಹಿಂದಿನ ಬ್ಯಾಟರಾಯನಪುರ ನಗರ ಸಭೆಯ 22 ರಿಂದ 31ರ ವಾರ್ಡ್‌ಗಳು ಸೇರಿರುತ್ತವೆ.

ಹಿಂದಿನ ನಗರಸಭೆ ವತಿಯಿಂದ ಅಳವಡಿಸಲಾದ PVC ಪೈಪ್‌ಗಳ ಮೂಲಕ ಕೊಳವೆ ಬಾವಿಯ ನೀರನ್ನು ಸರಬರಾಜು ಮಾಡಲಾಗುತ್ತಿತ್ತು.

2003ರ ಆದೇಶದ ನಂತರ ಬೆಂಗಳೂರು ಜಲಮಂಡಳಿಯು ಹಿಂದಿನ ಬ್ಯಾಟರಾಯನಪುರ ನಗರ ಸಭೆಯ ವ್ಯಾಪ್ತಿಯಲ್ಲಿನ ವಾರ್ಡ್ ನಂ.1 ರಿಂದ 31 ರವರೆಗೆ ಬರುವ ಎಲ್ಲಾ ರಸ್ತೆಗಳಲ್ಲಿ (ಅಂದಾಜು ವೆಚ್ಚ ರೂ.44.00 ಕೋಟಿ) ಸುಮಾರು 400 ಕಿ.ಮೀ. DI ಪೈಪ್‌ಗಳನ್ನು ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆ Ph-I, Ph-II ರ ಅಡಿಯಲ್ಲಿ ಕಾವೇರಿ ನೀರು ಸರಬರಾಜಿಗಾಗಿ 2005 ರಿಂದ 2008ರಲ್ಲಿ ಅಳವಡಿಸಲಾಗಿದೆ.

ಹಾಗೆಯೇ ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆಯ ಮುಖ್ಯ ಕೊಳವೆ ಮಾರ್ಗದ ಗುತ್ತಿಗೆ Package 9C ಅಡಿಯಲ್ಲಿ 1200 ಮಿ.ಮೀ ವ್ಯಾಸದಿಂದ 800 ಮಿ.ಮೀ. ವ್ಯಾಸದವರೆಗೆ Feeder Main ಪೈಪ್‌ಗಳನ್ನು ಅಳವಡಿಸಲಾಗಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. (ಅಂದಾಜು ವೆಚ್ಚ ರೂ.26.00 ಕೋಟಿ)

ಆ) ಜಲಮಂಡಳಿಯ CWSS IV Stage II Phase ಯೋಜನೆ ಅಡಿಯಲ್ಲಿ (ಅಂದಾಜು ವೆಚ್ಚ ರೂ.3384.00 ಕೋಟಿ) ದಿನಂಪ್ರತಿ 500 ದ.ಲ.ಲೀ. ನೀರನ್ನು ನಗರಕ್ಕೆ ಸರಬರಾಜು ಮಾಡುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯ ಕಾಮಗಾರಿಯು 2011–12ರಲ್ಲಿ ಮುಕ್ತಾಯವಾದ ಮೇಲೆ 8 ಹಳೆ ನಗರಸಭೆ/ ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಿಗೆ ಕಾವೇರಿ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆ.

ಇ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀರು ಸರಬರಾಜು ಮಾಡಲು ಕಾವೇರಿ 4ನೇ ಹಂತ, 2ನೇ ಘಟ್ಟದ ಯೋಜನೆಯಡಿಯಲ್ಲಿ ಕನಕಪುರ ರಸ್ತೆ ವಾಜರಹಳ್ಳಿಯಿಂದ ಓ.ಎಂ.ಬಿ.ಆರ್. ಜಲಾಗಾರಕ್ಕೆ 49 ಕಿ.ಮೀ. ಉದ್ದದ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸುತ್ತಿದ್ದು ಇದಕ್ಕೆ ಹೊಂದಿಕೊಂಡಂತೆ ಮೂರು ಭೂಮಟ್ಟದ ಜಲಗಾರಗಳನ್ನು ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಯ ಒಟ್ಟು ಮೊತ್ತ ರೂ. 275 ಕೋಟಿಗಳಾಗಿರುತ್ತದೆ. ಈ ಕಾಮಗಾರಿಗಳು ಜನವರಿ 2010ರಲ್ಲಿ ಪ್ರಾರಂಭವಾಗಿದ್ದು, ಡಿಸೆಂಬರ್ 2011ಕ್ಕೆ ಮುಕ್ತಾಯಗೊಳ್ಳಲಿದೆ (2 ವರ್ಷ). ಮೇಲಿನ ಕಾಮಗಾರಿಗಳು ಇತ್ತೀಚಿಗೆ ಪ್ರಾರಂಭವಾಗಿದ್ದು ಇದುವರೆವಿಗೂ ಯಾವುದೇ ಹಣ ಖರ್ಚಾಗಿರುವುದಿಲ್ಲ.

ಈ) ಬೆಂಗಳೂರಿನ ಪೂರ್ವ ಭಾಗಕ್ಕೆ ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆಯಡಿ ಕನಕಪುರ ರಸ್ತೆ ವಾಜರಹಳ್ಳಿಯಿಂದ ಓ.ಎಂ.ಬಿ.ಆರ್ ಜಲಾಗ್ಾರದವರೆಗೆ 49 ಕಿ.ಮೀ.ಉದ್ದದ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸುತ್ತಿದ್ದು ಇದಕ್ಕೆ ಹೊಂದಿಕೊಂಡಂತೆ ನಾಲ್ಕು ಭೂ ಮಟ್ಟದ ಜಲಗಾರಗಳನ್ನು ನಿರ್ಮಿಸಲಾಗುತ್ತಿದೆ. ಈ ಜಲಗಾರಗಳನ್ನು ಕೂಡ್ಲು, ಹೂಡಿ, ಬಿ.ನಾರಾಯಣಪುರ ಮತ್ತು ಓ.ಎಂ.ಬಿ.ಆರ್. ನಿರ್ಮಿಸುತ್ತಿದ್ದು ಇವುಗಳ ಒಟ್ಟು ಸಾಮರ್ಥ್ಯ 58 ದ.ಲ.ಲೀ.

ಕಾರ್ಕಳ ನಗರದಲ್ಲಿ ಒಳಚರಂಡಿ ವ್ಯವಸ್ಥೆ & ನೀರಿನ ಟ್ಯಾಂಕ್ ಪುನರ್ ನಿರ್ಮಾಣ

140 (532) ಶ್ರೀ ಗೋಪಾಲ ಭಂಡಾರಿ. ಹೆಚ್ (ಕಾರ್ಕಳ) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ನಗರದಲ್ಲಿ ಸಂಪೂರ್ಣ ಕೆಟ್ಟು ಹೋಗಿರುವ ಒಳಚರಂಡಿ ವ್ಯವಸ್ಥೆಯನ್ನು ಪುನಃ ನಿರ್ಮಾಣ ಮಾಡಬೇಕೆಂದು ಕಾರ್ಕಳ ಪುರಸಭಾ ಆಡಳಿತ ಮನವಿ ಮಾಡಿದ್ದು ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಕಾರ್ಕಳ ನಗರ ನೀರು ಸರಬರಾಜು ವ್ಯವಸ್ಥೆಯ ನೀರಿನ ಟ್ಯಾಂಕ್ ಕಳೆದ ವರ್ಷ ಬಿದ್ದು ಹೋಗಿದ್ದು, ಅದನ್ನು ಪುನಃ ನಿರ್ಮಾಣ ಮಾಡಲು ಪುರಸಭೆ ಎಷ್ಟು ಹಣ ಒದಗಿಸಿದೆ; ಎಷ್ಟು ಖರ್ಚಾಗಿದೆ;

ಇ) ನೀರಿನ ಟ್ಯಾಂಕ್ ನಿರ್ಮಾಣ ಮಾಡಿದವರು ಯಾರು;

ಈ) ಪುನಃ ಹೆಚ್ಚುವರಿ ಹಣವನ್ನು ಪುರಸಭೆಯವರಿಂದ ಕೇಳುತ್ತಿರುವುದು ನಿಜವೆ;

ಉ) ಹಾಗಿದ್ದಲ್ಲಿ, ಕಾರಣವೇನು?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು) :

ಅ) ಕಾರ್ಕಳ ನಗರದಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಃ ನಿರ್ಮಾಣ ಮಾಡಲು ಹಾಗೂ 2ನೇ ಹಂತದ ಒಳಚರಂಡಿ ಯೋಜನೆಯನ್ನು ತಯಾರಿಸುವ ಸಲುವಾಗಿ ಕನ್ಸಲ್ಟೆಂಟ್ಸ್, ಇವರಿಗೆ ವಹಿಸಿಕೊಡಲಾಗಿರುತ್ತದೆ. ಸರ್ವೆ ಕಾರ್ಯ ಮುಗಿದಿದ್ದು ಡಿಪಿಆರ್ ತಯಾರಿಕೆಯ ಹಂತದಲ್ಲಿದೆ.

ಆ) ಟ್ಯಾಂಕ್ ನಿರ್ಮಾಣಕ್ಕೆ ಕಾರ್ಕಳ ಪುರಸಭೆಯು ರೂ.113.50 ಲಕ್ಷಗಳನ್ನು ಮಂಡಳಿಗೆ ಪಾವತಿಸಿದ್ದು, ಸದರಿ ಮೊತ್ತದಲ್ಲಿ ರೂ.118.0: ಲಕ್ಷಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಭರಿಸಿದ್ದು, ಉಳಿಕೆ ಹಣ ರೂ.34.00 ಲಕ್ಷಗಳನ್ನು ಪುರಸಭೆಯಿಂದ ಮಂಡಳಿಗೆ ಪಾವತಿಯಾಗಬೇಕಾಗಿರುತ್ತದೆ.

ಇ) ಹೊಸದಾಗಿ ಟ್ಯಾಂಕ್‌ನ್ನು ನಿರ್ಮಾಣ ಮಾಡಿದ ಗುತ್ತಿಗೆದಾರರು ಮೆ:ಶ್ರೀ ಸುಭಾ ಸೇಲ್ಸ್, ಬೆಂಗಳೂರು.

ಈ) ಮತ್ತು ಉ) ಹೌದು.

ಕಾಮಗಾರಿಗೆ ರೂ.113.50 ಲಕ್ಷಗಳ ಅಂದಾಜಿಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಆದೇಶ ಸಂಖ್ಯೆ: ಪೌನಿ/ತಾಂತ್ರಿಕ/ಕು.ನಿ/ ಕಾರ್ಕಳ/21/2008-09 ದಿನಾಂಕ: 8.7.2008 ರಲ್ಲಿ ಅನುಮೋದನೆ ನೀಡಲಾಗಿದೆ. ಆದರೆ ಸ್ಥಳಕ್ಕೆ ಅನುಗುಣವಾಗಿ ವಿನ್ಯಾಸವನ್ನು ಮಾರ್ಪಡಿಸಿರುವುದರಿಂದ ಟ್ಯಾಂಕಿನ ಅಡಿಪಾಯದಲ್ಲಿ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಂಡ ಪ್ರಯುಕ್ತ ಅಂದಾಜು ಮೊತ್ತವು ಪರಿಷ್ಕೃತಗೊಂಡಿರುತ್ತದೆ.

ರಾಜ್ಯ ಪೊಲೀಸ್ ಶ್ವಾನದಳದ ವ್ಯವಸ್ಥೆಯ ಅಭಿವೃದ್ಧಿ

(461) 141 ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಶ್ವಾನದಳದ ಬಲ ಸಂವರ್ಧನೆಗಾಗಿ ಸರ್ಕಾರದ ಕ್ರಮಗಳೇನು?

ಆ) ತನಿಖೆ ಮತ್ತು ಅಪರಾಧಗಳ ಪತ್ತೆ ಹಚ್ಚುವ ಕಾರ್ಯದಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುವ ಶ್ವಾನದಳದ ಸೌಲಭ್ಯವನ್ನು ಎಲ್ಲ ಜಿಲ್ಲೆಗಳಿಗೂ ಒದಗಿಸಿಕೊಡಲಾಗಿದೆಯೇ? ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು?

ಇ) ಉಗ್ರಗಾಮಿ ಚಟುವಟಿಕೆಗಳು, ಅಪರಾಧ ಪ್ರಕರಣಗಳಲ್ಲಿನ ಹೆಚ್ಚಳ, ಭೂಗತ ಚಟುವಟಿಕೆಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಶ್ವಾನದಳವನ್ನು ಸುಸಜ್ಜಿತ ಮತ್ತು ವೈಜ್ಞಾನಿಕ ರೀತ್ಯಾ ಬಲ ಪಡಿಸಲು ಸರ್ಕಾರದ ನಿಲುವುಗಳೇನು? (ಮಾಹಿತಿ ನೀಡುವುದು).

ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಒಟ್ಟು 148 ಶ್ವಾನಗಳ ಮಂಜೂರಾತಿ ಬಲವಿರುತ್ತದೆ. ಸದ್ಯ 124 ವಾಸ್ತವಿಕ ಬಲವಿದ್ದು, 24 ರಿಕ್ತಸ್ಥಾನಗಳಿರುತ್ತದೆ. ಖಾಲಿ ಇರುವ ಸ್ಥಾನಗಳನ್ನು ತುಂಬಲು ಘಟಕಾಧಿಕಾರಿಗಳ ಕೋರಿಕೆಯ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/72/ಇಎಫ್‌ಎಸ್/09, ದಿನಾಂಕ: 25/08/2009 ರಲ್ಲಿ ಶ್ವಾನಗಳನ್ನು ಖರೀದಿಸಲು ಇಲಾಖಾ ಮುಖ್ಯಸ್ಥರಿಗೆ ಈ ಹಿಂದೆ ಇದ್ದ ರೂ.5,000/- ಗಳ ವಿತ್ತಾಧಿಕಾರವನ್ನು ರೂ.10,000/- ಗಳಿಗೆ ಹೆಚ್ಚಿಸಿದ್ದು, ಈ ಕ್ರಮದಿಂದ ರಾಜ್ಯ ಪೊಲೀಸ್ ಇಲಾಖೆಗೆ ಅತ್ಯುತ್ತಮ ತಳಿಯ ಶ್ವಾನಗಳನ್ನು ಖರೀದಿಸಲು ಅವಕಾಶ ಮಾಡಲಾಗಿರುತ್ತದೆ.

ಆ) ಹೊಸದಾಗಿ ಸೃಜನೆಯಾಗಿರುವ ಚಿಕ್ಕಬಳ್ಳಾಪುರ, ರಾಮನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ನಗರ ಹಾಗೂ ಜಿಲ್ಲಾ ಪೊಲೀಸ್ ಘಟಕಗಳಿಗೆ ಶ್ವಾನದಳದ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಹೊಸದಾಗಿ ಸೃಜಿಸಲಾಗಿರುವ ಜಿಲ್ಲಾ ಘಟಕಗಳಿಗೆ ಅವರ ಕೋರಿಕೆಗನುಗುಣವಾಗಿ ಶ್ವಾನಬಲ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಶ್ವಾನದಳವನ್ನು ಸುಸಜ್ಜಿತ ಹಾಗೂ ವೈಜ್ಞಾನಿಕ ರೀತಿಯಲ್ಲಿ ಬಲಪಡಿಸುವ ನಿಟ್ಟಿನಲ್ಲಿ ಅವುಗಳಿಗೆ ಪ್ರತ್ಯೇಕ "ಕೆನಲ್" ವ್ಯವಸ್ಥೆ, ಅಪರಾಧ ನಡೆದ ಸ್ಥಳಗಳಿಗೆ ಶ್ವಾನಗಳನ್ನು ಕೊಂಡೊಯ್ಯಲು ಪ್ರತ್ಯೇಕ ವಾಹನ ವ್ಯವಸ್ಥೆ ಹಾಗೂ ಪೌಷ್ಠಿಕಾಂಶಗಳನ್ನು ಒಳಗೊಂಡ ಆಹಾರಗಳನ್ನು ಕಾಲಕಾಲಕ್ಕೆ ನೀಡುತ್ತಿದ್ದು, ಪಶು ವೈದ್ಯರ ಸಲಹೆಯಂತೆ ಮೇಲಿಂದ ಮೇಲೆ ಅವುಗಳ ಆರೋಗ್ಯ ತಪಾಸಣೆ, ಶುಶ್ರೂಷೆ ಇತ್ಯಾದಿ ಕಾರ್ಯಗಳನ್ನು ಮುತುವರ್ಜಿ ವಹಿಸಿ ನಿರ್ವಹಿಸಲಾಗುತ್ತಿದೆ. ಅಂತೆಯೇ ಶ್ವಾನವೊಂದನ್ನು ದಿನವೊಂದಕ್ಕೆ ನಿಗಧಿಪಡಿಸಿರುವ ರೂ.70/-ಗಳ ಆಹಾರ ಭತ್ಯೆಯನ್ನು ರೂ. 177/-ಕ್ಕೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಯಲ್ಲಿರುತ್ತದೆ.

ಶ್ವಾನದಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮಧ್ಯಪ್ರದೇಶದಲ್ಲಿರುವ ಬಿಎಸ್‌ಎಫ್ ಕೇಂದ್ರದ ರಾಷ್ಟ್ರೀಯ ಶ್ವಾನದಳದ ತರಬೇತಿ ಕೇಂದ್ರದಲ್ಲಿ ಒಂದು ವರ್ಷದ ತರಬೇತಿ ಶಿಬಿರಗಳಿಗೆ ನಿಯೋಜಿಸಿ ಅವರು ಹೆಚ್ಚಿನ ಪರಿಣಿತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.

ಅಪರಾಧ, ಸ್ಫೋಟಕ ಪ್ರಕರಣಗಳಲ್ಲಿ ಮತ್ತು ಮಾದಕ ವಸ್ತುಗಳನ್ನು ಶೋಧನೆ ಮಾಡಲು ಶ್ವಾನಗಳಿಗೆ ವೈಜ್ಞಾನಿಕವಾಗಿ ಆಧುನಿಕ ತರಬೇತಿ ನೀಡಲು ಸಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಪೌರಾಡಳಿತ & ಸ್ಥಳೀಯ ಸಂಸ್ಥೆಯ ಅಭಿವೃದ್ಧಿ ಯೋಜನೆಗಳು

142 (462) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಒಟ್ಟು ಸಂಖ್ಯೆಗಳು ಹಾಗೂ ಅವುಗಳ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳಾವುವು (ಮಾಹಿತಿ ನೀಡುವುದು);

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳಡಿಯಲ್ಲಿ ಈ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಮೊತ್ತ ಎಷ್ಟು;

ಇ) ಈ ಸಂಸ್ಥೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡಿರುವ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲಾಗಿದೆಯೇ;

ಈ) ಈ ಸಂಸ್ಥೆಗಳಿಗೆ ಯಾವ್ಯಾವ ಮೂಲಗಳಿಂದ ತೆರಿಗೆ ರೂಪದ ಹಣ ಸಂಗ್ರಹಣೆಯ ಅವಕಾಶಗಳಿವೆ (ಮಾಹಿತಿ ನೀಡುವುದು)?

ಶ್ರೀ ಬಾಲಚಂದ್ರ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) 214 (ಬಿಬಿಎಂಪಿ ಹೊರತುಪಡಿಸಿ)

ನೂತನ ಯೋಜನೆಗಳು :

2008-09-ರೂ. 100 ಕೋಟಿ ಯೋಜನೆ

2009-10:

1) ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ.
2) ಐ.ಎಸ್.ಎಚ್.ಯು.ಪಿ (Interest Subsidy for Housing Urban Poor)

ಆ) (ರೂ.ಕೋಟಿಗಳಲ್ಲಿ)

		ರಾಜ್ಯ	ಕೇಂದ್ರ
1.	ಎಸ್ .ಎಫ್.ಸಿ. ಮುಕ್ತ ನಿಧಿ (2009–10) ಜನವರಿ 2010ರ ವರೆಗೆ	2894.21	—
2.	12ನೇ ಹಣಕಾಸು	484.00	—
3.	UIDSSMT	35.91	291.99
4.	C.M.S.M.T.D.P	1304.63	—
5.	ಮುಖ್ಯಮಂತ್ರಿಗಳ 100 ಕೋಟಿ ಯೋಜನೆ	312.00	—

ಇ)

- 12ನೇ ಹಣಕಾಸು ಯೋಜನೆಯಲ್ಲಿ ಈವರೆಗೆ ರೂ.374.40 ಕೋಟಿ ಕೇಂದ್ರದ ಅನುದಾನ ಖರ್ಚಾಗಿದ್ದು, ಶೇ.77.36ರಷ್ಟು ಪ್ರಗತಿಯಾಗಿರುತ್ತದೆ.
- ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಲ್ಲಿ ಒಟ್ಟು ಬಿಡುಗಡೆಯಾದ ಅನುದಾನದಲ್ಲಿ ರೂ.298.00 ಕೋಟಿಗಳ ಮೊತ್ತ ಈವರೆವಿಗೆ ಖರ್ಚಾಗಿದ್ದು ಶೇ.90.85 ರಷ್ಟು ಪ್ರಗತಿಯಾಗಿರುತ್ತದೆ.

ಈ) 1) ಆಸ್ತಿ ತೆರಿಗೆ
2) ನೀರಿನ ತೆರಿಗೆ
3) ಜಾಹಿರಾತು ತೆರಿಗೆ

ರಾಜ್ಯದ ಸಾರ್ವಜನಿಕ ಉದ್ಯಮಗಳ ಸ್ಥಿತಿಗತಿಗಳು

143 (463) ಶ್ರೀ ಹ್ಯಾರೀಸ್ ಎನ್.ಎ.(ಶಾಂತಿನಗರ) : ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ಯಮಗಳ ಪ್ರಸ್ತುತ ಸ್ಥಿತಿಗತಿಗಳೇನು, ಎಷ್ಟು ಉದ್ದಿಮೆಗಳು ಲಾಭ ಮತ್ತು ನಷ್ಟದಲ್ಲಿವೆ?

ಆ) ನಷ್ಟದಲ್ಲಿರುವ ಉದ್ಯಮಗಳನ್ನು ಅಭಿವೃದ್ಧಿಪಡಿಸುವ ಅಥವಾ ಮುಚ್ಚುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? ವಿವರ ನೀಡುವುದು;

ಇ) ನಷ್ಟದಲ್ಲಿರುವ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಮಾಹಿತಿ ನೀಡುವುದು;

ಶ್ರೀ ಬಾಲಚಂದ್ರ ಲಕ್ಷಣ ರಾವ್ ಜಾರಕಿಹೋಳಿ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 92 ನಿಗಮ : ಮಂಡಳಿಗಳು ಇವೆ. ಅವುಗಳಲ್ಲಿ 72 ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ 20 ನಿಗಮ: ಮಂಡಳಿಗಳು ಮುಚ್ಚಲ್ಪಟ್ಟಿವೆ. 30 ಉದ್ಯಮಗಳು ಲಾಭದಲ್ಲಿ ನಡೆಯುತ್ತಿದ್ದು 42 ಉದ್ಯಮಗಳು ನಷ್ಟ ಅನುಭವಿಸುತ್ತಿವೆ, (ನಿಗಮ : ಮಂಡಳಿಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)

ಆ)

i) ಹೌದು

ii) ಸರ್ಕಾರವು ಕೆಲವು ಕಂಪನಿಗಳನ್ನು ಪುನಶ್ಚೇತನ ಮಾಡಲು ಸಾಧ್ಯವಿರುವುದಿಲ್ಲವಾದ್ದರಿಂದ ಮುಚ್ಚಲು ಆದೇಶಿಸಿದೆ.

ಇ)

i) ಇಲ್ಲ

ii) ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ನಿಗಮ:ಮಂಡಳಿಗಳ ಪಟ್ಟಿ

ಕ್ರ. ಸಂ.	ಸಾರ್ವಜನಿಕ ಉದ್ದಿಮೆಗಳ ಹೆಸರು	
	ಸಾರ್ವಜನಿಕ ಉಪಯುಕ್ತತೆಯ ಉದ್ಯಮಗಳು	
1	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ	*
2	ಕೆಪಿಸಿ, ಬಿಡದಿ ವಿದ್ಯುತ್ ಪ್ರೈ. ನಿಯಮಿತ	**
3	ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ	**
4	ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ	**
5	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ	*
6	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	**
7	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ	**
8	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	**
9	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ	*
10	ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ	**
11	ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ	**
12	ಬೆಂಗಳೂರು ಮಹಾನಗರ ಸಾರಿಗೆ ನಿಗಮ	*
	ಹಣಕಾಸು ಸಂಸ್ಥೆಗಳು	
13	ಕರ್ನಾಟಕ ರಾಜ್ಯ ಹಣಕಾಸು ನಿಗಮ	*
14	ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ	*
	ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯೇತರ)	
15	ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ	**
16	ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	*
17	ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	**
18	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ	**

19	ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ	**
	ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯ)	
20	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ	**
21	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ನಿಯಮಿತ	***
22	ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ	***
23	ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ	**
24	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ	*
25	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ	**
26	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	**
27	ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ	**
28	ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ	**
29	ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತ	**
30	ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ	***
31	ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ	**
32	ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ನಿಯಮಿತ	*
33	ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ	**
34	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ	**

0.14F-78

	ಸೇವಾ ಉದ್ಯಮಗಳು	
35	ಕರ್ನಾಟಕ ಗೃಹ ಮಂಡಳಿ	**
36	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	*
37	ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ	*
38	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ	**
39	ಶ್ರೀ. ಕಂಠೀರವ್ ಸ್ಟುಡಿಯೋ ಲಿಮಿಟೆಡ್	**
40	ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ	***
41	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ	*
42	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ	*
43	ಕರ್ನಾಟಕ ಭೂಸೇನಾ ನಿಗಮ ನಿಯಮಿತ	**
44	ಅರಣ್ಯಾ ವಸತಿ ಗೃಹಗಳು ಮತ್ತು ವಿಹಾರಧಾಮಗಳು ನಿಯಮಿತ	*
45	ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ನಿಯಮಿತ	**
46	ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	**
47	ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	**
48	ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿ.	**
49	ಕೃಷ್ಣ ಜಲ ಭಾಗ್ಯ ನಿಗಮ ನಿಯಮಿತ	*
50	ಕರ್ನಾಟಕ ನೀರಾವರಿ ನಿಗಮ ನಿಯಮಿತ	**
51	ಕಾವೇರಿ ನೀರಾವರಿ ನಿಗಮ ನಿಯಮಿತ	**
52	ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತ	**
53	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ	*

	ನಿಗಮ ನಿಯಮಿತ	
54	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	**
55	ಕರ್ನಾಟಕ ಅಸೆಟ್ ಮ್ಯಾನೆಜ್ ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್	*
56	ಕರ್ನಾಟಕ ಟ್ರಸ್ಟಿ ಕಂಪನಿ ಲಿಮಿಟೆಡ್	*
	ತಯಾರಿಕಾ ಉದ್ಯಮಗಳು	
57	ಮೈಸೂರು ಸಕ್ಕರೆ ಕಂಪನಿ ನಿಯಮಿತ	**
58	ಮೈಸೂರು ಕಾಗದ ಕಾರ್ಖಾನೆ ನಿಯಮಿತ	*
59	ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ	***
60	ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ	***
61	ಮೈಸೂರು ಮ್ಯಾಚ್ ಕಂಪನಿ ನಿಯಮಿತ	***
62	ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮಿತ	*
63	ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ	***
64	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ	**
65	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ	*
66	ಎನ್.ಜಿ.ಇ.ಎಫ್. ಲಿಮಿಟೆಡ್	***
67	ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ	***
68	ಮೈಸೂರು ಮಿನರಲ್ಸ್ ಲಿಮಿಟೆಡ್	*
69	ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್	***
70	ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ನಿಯಮಿತ	**
71	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ	*
72	ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ	***
73	ಚಾಮುಂಡಿ ಮಷಿನ್ ಟೂಲ್ಸ್ ನಿಯಮಿತ	***
74	ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತ	***
75	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	*
76	ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ	*

77	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	*
78	ಕರ್ನಾಟಕ ರಾಜ್ಯ ಜವಳಿ ನಿಯಮಿತ	***
79	ಕರ್ನಾಟಕ ಟೆಲಿಕಾಂ ನಿಯಮಿತ	***
80	ಕರ್ನಾಟಕ ಪಲ್ಫ್ವುಡ್ ನಿಯಮಿತ	***
81	ಕರ್ನಾಟಕ ಟಂಗ್‌ಸ್ಟನ್ ಮೋಲಿ ನಿಯಮಿತ	***
82	ಎನ್.ಜಿ.ಇ.ಎಫ್. (ಹುಬ್ಬಳಿ) ನಿಯಮಿತ	**
83	ವಿಜಯನಗರ ಸ್ಟೀಲ್ ಲಿಮಿಟೆಡ್	***
	ಮಾರುಕಟ್ಟೆ ಮತ್ತು ಜಾಹಿರಾತು ಉದ್ಯಮಗಳು	
84	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್	*
85	ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸೀಸ್ ನಿಯಮಿತ	*
86	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ	**
87	ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ	**
88	ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ	**
89	ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ ನಿಯಮಿತ	***
90	ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ	**
91	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಮಾರಾಟ ಮತ್ತು ರಫ್ತು ನಿಯಮಿತ	*
92	ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ	*

* **ಲಾಭದಲ್ಲಿರುವ ಉದ್ದಿಮೆಗಳು**	**30**
** **ನಷ್ಟದಲ್ಲಿರುವ ಉದ್ದಿಮೆಗಳು**	**42**
*** **ಮುಚ್ಚಲ್ಪಟ್ಟ/ ಸ್ಥಗಿತಗೊಂಡ ಉದ್ದಿಮೆಗಳು**	**20**
ಒಟ್ಟು ಉದ್ದಿಮೆಗಳು	**92**

ಬೇಸಿಗೆಯಲ್ಲಿ ಸಮರ್ಪಕ ವಿದ್ಯುತ್ ಪೂರೈಸುವ ಬಗ್ಗೆ

144 (464) ಶ್ರೀ ಹ್ಯಾರೀಸ್. ಎನ್.ಎ (ಶಾಂತಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಸಿಗೆ ಕಾಲದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಸಮರ್ಪಕ ವಿದ್ಯುತ್ ಸರಬರಾಜಿಗೆ ಸರಕಾರ ಕೈಗೊಂಡ ಮುಂಜಾಗರೂಕತಾ ಕ್ರಮಗಳಾವುವು;

ಆ) ಪ್ರಸ್ತುತ ಇರುವ ಬೇಡಿಕೆ ಮತ್ತು ಪೂರೈಕೆಯ ವಿವರಗಳೇನು; ವಿದ್ಯುತ್ ಕೊರತೆ ಎದುರಿಸಲು ಅನುಸರಿಸಿದ ಏರ್ಪಾಡುಗಳೇನು; ನಾಗರೀಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನಾನುಕೂಲವಾಗದಂತೆ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಮಾಡಲು ಮುಂದಾಗುವುದೇ;

ಇ) ರಾಜ್ಯದಲ್ಲಿನ ಪ್ರಮುಖ ನಗರ ಮತ್ತು ಗ್ರಾಮಾಂತರ ಪ್ರೇಶಗಳಲ್ಲಿ ವಿದ್ಯುತ್ ಕಡಿತವನ್ನು ಕಡಿಮೆಗೊಳಿಸುವ ಕುರಿತಾದ ನಿಲುವುಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಬೇಸಿಗೆ ಕಾಲದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಮಾಡಲು ಸರ್ಕಾರವು ಕೆಳಕಂಡ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿದೆ.

- ಫೆಬ್ರವರಿ 2010ರ ಅಂತ್ಯದಲ್ಲಿ 750 ಮೆ.ವ್ಯಾ.ಗಳಷ್ಟು ಹೆಚ್ಚುವರಿ ವಿದ್ಯುತ್‌ನ್ನು ಖರೀದಿ ಮಾಡಲಾಗಿದೆ. ಮಾರ್ಚ್ 2010 ರಲ್ಲಿ 1,000 ಮೆ.ವ್ಯಾ.ಗಳಷ್ಟು ವಿದ್ಯುತ್‌ನ್ನು ಹೆಚ್ಚುವರಿಯಾಗಿ ಬಾಹ್ಯ ಮೂಲಗಳಿಂದ ಖರೀದಿ ಮಾಡಲಾಗುತ್ತಿದೆ.
- ಪ್ರಸಕ್ತ ವರ್ಷವಾದ 2010ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಿಗೆ ದಿನವಹಿ 750 ಮೆ.ವ್ಯಾ.ಗಳಷ್ಟು ಹೆಚ್ಚುವರಿಯಾಗಿ ವಿದ್ಯುತ್ ಖರೀದಿಸಲು ಸರ್ಕಾರವು ಕ್ರಮಗಳನ್ನು ಕೈಗೊಂಡಿದೆ.

ಆ) ಪ್ರಸ್ತುತ ರಾಜ್ಯದ ದಿನವಹಿ ವಿದ್ಯುತ್ ಬೇಡಿಕೆ ಅಂದಾಜು 150 ಮಿಲಿಯನ್ ಯೂನಿಟ್‌ಗಳಾಗಿದ್ದು, ರಾಜ್ಯಕ್ಕೆ ಎಲ್ಲಾ ಮೂಲಗಳಿಂದ ಪ್ರತಿ ದಿನ ಆಂತರಿಕವಾಗಿ ಲಭ್ಯವಾಗುತ್ತಿರುವ ವಿದ್ಯುತ್‌ನ ಪ್ರಮಾಣ 125 ಮಿಲಿಯನ್ ಯೂನಿಟ್‌ಗಳು.

ಈ ಬೇಸಿಗೆಯಲ್ಲಿ ವಿದ್ಯುತ್ ಕೊರತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮದ ವಿವರಗಳನ್ನು ಪ್ರಶ್ನೆಯ 'ಅ' ಭಾಗಕ್ಕೆ ನೀಡಲಾಗಿರುವ ಉತ್ತರದಲ್ಲಿ ತಿಳಿಸಲಾಗಿದೆ.

ನಾಗರೀಕರು ಮತ್ತು ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗದಂತೆ ವಿದ್ಯುತ್ ಸರಬರಾಜು ಮಾಡಲು ರಾಜ್ಯ ಸರ್ಕಾರವು ಎಲ್ಲಾ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿದೆ.

ಇ) ರಾಜ್ಯ ಸರ್ಕಾರವು ನಗರ ಮತ್ತು ಗ್ರಾಮೀಣ ಭಾಗಗಳಲ್ಲಿನ ವಿದ್ಯುತ್ ಕಡಿತವನ್ನು ಕಡಿಮೆಗೊಳಿಸುವ ಸಲುವಾಗಿ ಪ್ರಸಕ್ತ ಮಾರ್ಚ್ 2010 ರಲ್ಲಿ 1,000 ಮೆಗಾವ್ಯಾಟ್ ವಿದ್ಯುತ್‌ನ್ನು ಹೆಚ್ಚುವರಿಯಾಗಿ ಬಾಹ್ಯ ಮೂಲಗಳಿಂದ ಖರೀದಿಸಿ, ಸರಬರಾಜು ಮಾಡಲಾಗುತ್ತಿದೆ. ಪ್ರಸಕ್ತ ವರ್ಷವಾದ 2010ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಿಗೆ ದಿನವಹಿ 750 ಮೆ.ವ್ಯಾಗಳಷ್ಟು ಹೆಚ್ಚುವರಿಯಾಗಿ ವಿದ್ಯುತ್ ಖರೀದಿಸಲು ಸರ್ಕಾರವು ಕ್ರಮಗಳನ್ನು ಕೈಗೊಂಡಿದ್ದು, ಪ್ರಸ್ತುತ ಬೆಂಗಳೂರು ನಗರಕ್ಕೆ 23 ಗಂಟೆಗಳ ಕಾಲ, ಉಳಿದ ನಗರ/ಪಟ್ಟಣಗಳಿಗೆ 22 ಗಂಟೆಗಳ ಕಾಲ ಮತ್ತು ಗ್ರಾಮೀಣ ಪ್ರದೇಶಗಳಿಗೆ ಕನಿಷ್ಠ 6 ಗಂಟೆಗಳ ಕಾಲ 3 ಫೇಸ್ ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಅಲ್ಲದೇ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 250 ಮೆಗಾವಾಟ್ ಸಾಮರ್ಥ್ಯದ 8ನೇ ಘಟಕವು ಇದೇ ಮಾರ್ಚ್ ಅಂತ್ಯದ ವೇಳೆಗೆ ಹಾಗೂ ಉಡುಪಿ ಪವರ್ ಕಾರ್ಪೋರೇಷನ್ ಸಂಸ್ಥೆಯ 600 ಮೆಗಾವ್ಯಾಟ್ ಸಾಮರ್ಥ್ಯದ ಮೊದಲನೆಯ ಘಟಕವು ಏಪ್ರಿಲ್ 2010ರ ಅಂತ್ಯದವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದ್ದು, ಇದರಿಂದಾಗಿ ರಾಜ್ಯದ ವಿದ್ಯುತ್ ಪರಿಸ್ಥಿತಿಯು ಉತ್ತಮಗೊಳ್ಳಲಿದೆ.

ಕೊಪ್ಪಳ ನಗರದಲ್ಲಿ ಉದ್ಯಾನವನ್ನು ನಿರ್ಮಿಸುವುದು

146 (622) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರದಲ್ಲಿ ಉದ್ಯಾನವನವನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಉದ್ಯಾನವನಕ್ಕಾಗಿ ಸ್ಥಳ ಗುರುತಿಸಲಾಗಿದೆಯೇ; ಯಾವ ಬಡಾವಣೆಯಲ್ಲಿ ಗುರುತಿಸಲಾಗಿದೆ; ಅದರ ರೂಪುರೇಷೆಗಳೇನು;

ಇ) ಉದ್ಯಾನವನವನ್ನು ನಿರ್ಮಿಸಲು ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಈ) ಉದ್ಯಾನವನ ನಿರ್ಮಾಣಕ್ಕಾಗಿ ಸರ್ಕಾರವು ನೀಡುವ ಅನುದಾನದ ಮೊತ್ತವೆಷ್ಟು?

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಹೌದು.

ಆ) ಗುರುತಿಸಲಾಗಿದೆ. ಈಶ್ವರ ದೇವಸ್ಥಾನದ ಉದ್ಯಾನವನ, ಗವೀಶ್ರೀ ನಗರ ಉದ್ಯಾನವನ ಮತ್ತು ಶ್ರೀ ಬಿ.ಟಿ.ಪಾಟೀಲ್ ನಗರ ಉದ್ಯಾನವನ. ಉದ್ಯಾನವನದ ಸುತ್ತಲೂ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವುದು, ಲ್ಯಾಂಡ್ ಸ್ಕೇಪಿಂಗ್, ದೀಪಗಳು, ಆಸನಗಳು ಇತ್ಯಾದಿಗಳೊಂದಿಗೆ ಅಭಿವೃದ್ಧಿ ಪಡಿಸಲಾಗುವುದು.

ಇ) ಟೆಂಡರ್ ಅನುಮೋದನೆಯಾಗಿದ್ದು ಕಾರ್ಯಾದೇಶ ನೀಡಬೇಕಾಗಿದೆ.

ಈ) ರೂ. 30 ಲಕ್ಷ

ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ದಾಖಲಾದ ಪ್ರಕರಣಗಳು

147 (21) ಶ್ರೀ. ಕಟಕದೋಂಡ ವಿಠ್ಠಲ ದೋಂಡಿಬಾ (ನಾಗಠಾಣ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ದಾಖಲಾದ ಪ್ರಕರಣ ತನಿಖೆಯನ್ನು ಎಷ್ಟು ದಿನಗಳೊಳಗೆ ಅಂತಿಮ ಗೊಳಿಸಬೇಕಾಗುತ್ತದೆ.

ಆ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ದಾಳಿಗೀಡಾದ ಅಧಿಕಾರಿಗೆ ತನಿಖೆಯ ಪ್ರಾರಂಭದಲ್ಲಿಯೇ 1 ರಿಂದ 16ಬಿ ಹಾಗೂ 17 ರಿಂದ 23 ರ ಖಾಲಿ ನಮೂನೆಗಳನ್ನು (ಷೆಡ್ಯೂಲ್‌ಗಳನ್ನು) ಕೊಡುವುದು ಸರಿಯೇ;

ಇ) ಹಾಗಿದ್ದಲ್ಲಿ, ಯಾವ ಕಾನೂನಿನ ಪ್ರಕಾರ ಈ ಷೆಡ್ಯೂಲ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ.

ಈ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ತನಿಖೆಯ ಅಂತ್ಯದಲ್ಲಿ ಅಧಿಕಾರಿಗಳು ಆದಾಯ ಮೀರಿ ಆಸ್ತಿಗಳನ್ನು ಹೊಂದಿದ್ದು ಕಂಡು ಬಂದಲ್ಲಿ, ಆ ಆಪಾದಿತ ಅಧಿಕಾರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ಕಲಂ 13(1)(ಇ) ಪ್ರಕಾರ ತನಿಖೆಯಿಂದ ತಿಳಿದು ಬಂದ ಆದಾಯ ಮೀರಿದ ಆಸ್ತಿಗಳ ಪಟ್ಟಿ ಕೊಟ್ಟು, ಆ ಅಧಿಕಾರಿಯಿಂದ ಅಂತಹ ಆಸ್ತಿ ಬಗ್ಗೆ ಸಮಂಜಸ ಉತ್ತರವನ್ನು ತೆಗೆದು ಕೊಳ್ಳಲಾಗಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಈ ಕಾಯ್ದೆಯಲ್ಲಿ ಅವಧಿಯನ್ನು ನಿಗದಿಗೊಳಿಸಿರುವುದಿಲ್ಲ.

ಆ) ಷೆಡ್ಯೂಲ್ ಕೊಡುವುದು ಸರಿ ಇರುತ್ತದೆ.

ದಾಳಿಗೀಡಾದ ಅಧಿಕಾರಿ ನಮೂನೆಯಲ್ಲಿ ವಿವರಣೆಯನ್ನು ಶೀಘ್ರ ವಾಗಿ ಕೊಟ್ಟಲ್ಲಿ ತನಿಖೆಯನ್ನು ಶೀಘ್ರವಾಗಿ ಪೂರೈಸಲು ಸಾಧ್ಯವಾಗುತ್ತದೆ.

ಇ) ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಕಲಂ 13(1)(ಇ) ರನ್ವಯ ದಾಳಿಗೀಡಾದ ಅಧಿಕಾರಿಯ ವಿವರಣೆಯು ಅನಿವಾರ್ಯ ವಾಗಿರುತ್ತದೆ. ಈ ವಿವರಣೆ ಪಡೆಯಲು ಷೆಡ್ಯೂಲ್ ತಯಾರು ಮಾಡಲಾಗಿದೆ.

ಈ) ಷೆಡ್ಯೂಲ್ ಪ್ರಕಾರ ಆಪಾದಿತರು ಸಲ್ಲಿಸಿದ ವಿವರಣೆ ಪರಿಶೀಲಿಸಿ ಈ ಬಗ್ಗೆ ತನಿಖೆ ಕೈಗೊಂಡು ತನಿಖೆ ಪೂರೈಸಲಾಗುತ್ತದೆ. ತನಿಖೆ ಮುಗಿದ ನಂತರ ಆಸ್ತಿಯ ಪಟ್ಟಿಯನ್ನು ದಾಳಿಗೀಡಾದ ಅಧಿಕಾರಿಗೆ ಕೊಡಲಾಗುವುದಿಲ್ಲ. ಈ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ನ್ಯಾಯಾಲಯವು ಆಪಾದನೆಯ ಪಟ್ಟಿಯನ್ನು ಅಂಗೀಕರಿಸಿದ ನಂತರ ಇದರ ಒಂದು ಪ್ರತಿಯನ್ನು ದಾಳಿಗೊಳಗಾದ ಅಧಿಕಾರಿಗೆ ಕೊಡುತ್ತದೆ.

ತೀರ್ಥಹಳ್ಳಿಯ ಕ್ಷೇತ್ರದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

145 (471) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಖ್ಯಾತ ಪ್ರವಾಸಿ ಕೇಂದ್ರಗಳಾದ ಗಾಜನೂರು, ಮಂಡಲಗದ್ದೆ ಪಕ್ಷಿದಾಮ, ಚಪ್ಪಲುಗುಡ್ಡೆ, ಕುಂದಾಪುರ, ಆಗುಂಬೆ, ಕವಲೆದುರ್ಗಕೋಟೆ ನಗರದ ಕೋಟೆ, ಅಂಬುತೀರ್ಥ (ಶರಾವತಿ ಉಗಮ ಸ್ಥಾನ) ಹುಂಬುಚದ ಜೈನ ಕ್ಷೇತ್ರ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕಾರ್ಯಕ್ರಮ ರೂಪಿಸಿದೆಯೆ (ವಿವರ ಮತ್ತು ಅಂದಾಜು ವೆಚ್ಚ ನೀಡುವುದು);

ಇ) ಜೋಗ್ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ಮತ್ತು ಅವುಗಳು ಯಾವ ಹಂತದಲ್ಲಿದೆ?

ಶ್ರೀ ಬಾಲಚಂದ್ರ ಲಕ್ಷಣರಾವ್ ಜಾರಕಿಹೊಳಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗಾಜನೂರು, ಮಂಡಲಗದ್ದೆ ಪಕ್ಷಿಧಾಮ, ಕುಂದಾಪುರ, ಆಗುಂಬೆ, ಕವಲೆದುರ್ಗ ಕೋಟೆ, ನಗರ ಕೋಟೆ, ಅಂಬುತೀರ್ಥ ಮತ್ತು ಹುಂಚ ಮುಂತಾದ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಶಿವಮೊಗ್ಗ ಜಿಲ್ಲೆಯ ಮಾಸ್ಟರ್ ಪ್ಲಾನಿನಲ್ಲಿ ಗುರುತಿಸಲಾಗಿದೆ.

ಆ) ಮಾಸ್ಟರ್ ಪ್ಲಾನ್ ಅಂತಿಮವಾಗಿ ಅನುಮೋದನೆಯಾದ ಬಳಿಕ ಈ ತಾಣಗಳ ಅಭಿವೃದ್ಧಿ ಬಗ್ಗೆ ಕಾರ್ಯಕ್ರಮ ರೂಪಿಸಲಾಗುವುದು.

ಇ) ಜೋಗ್ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಅವುಗಳ ಪ್ರಸ್ತುತ ಹಂತ ಕೆಳಗಿನಂತಿವೆ:

1. ಜೋಗ್ ಜಲಪಾತದ ತಳ ತಲುಪಲು 1388 ಮೆಟ್ಟಿಲುಗಳ ನಿರ್ಮಾಣ ಪೂರ್ಣಗೊಂಡಿದೆ. ಟೈಲ್ಸ್ ಮತ್ತು ರೈಲಿಂಗ್ ಗಳನ್ನು ಹಾಕಲಾಗುತ್ತಿದೆ.
2. ಜಲಪಾತ ಪ್ರದೇಶದಲ್ಲಿ ಸುಮಾರು 150 ಮೀಟರ್ ಪಾಥ್‌ವೇ ಮತ್ತು ರೈಲಿಂಗ್ ಪೂರ್ಣಗೊಂಡಿರುತ್ತದೆ.

0.14F-79

ಎರಡನೇ ಹಂತದ 175 ಮೀಟರ್ ಪಾಥ್ ವೇ ಪ್ರಗತಿಯಲ್ಲಿದೆ.

3. ಜಲಪಾತ ಪ್ರದೇಶದಲ್ಲಿ ಲ್ಯಾಂಡ್ ಸ್ಕೇಪಿಂಗ್, ಆಂಫಿ ಥಿಯೇಟರ್, ಪರಗೋಲ, ಪಾಥ್ ವೇ ನಿರ್ಮಾಣ, ಶೌಚಾಲಯ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.
4. ಜಲಪಾತ ಪ್ರದೇಶದಲ್ಲಿ ಸಾಫ್ಟ್ ಸ್ಕೇಪ್ ಯೋಜನೆಗೆ ಟೆಂಡರ್ ಅಂತಿಮಗೊಳಿಸಲಾಗುತ್ತಿದೆ.
5. ಜಲಪಾತದ ಬಳಿ ಶರಾವತಿ ನಿಸರ್ಗಧಾಮ ಪರಗೋಲ, ಎರಡು ಟೆಂಟ್ ಕುಟೀರಗಳ ಕಾಮಗಾರಿ ಪೂರ್ಣ ಗೊಳಿಸಲಾಗಿದೆ.
6. ಜಲಪಾತ ಪ್ರದೇಶದಲ್ಲಿ 40 ಮೀಟರ್ ಉದ್ದದ ತೂಗು ಸೇತುವೆ ನಿರ್ಮಾಣ ಪೂರ್ಣಗೊಂಡಿದೆ.
7. ಯಾತ್ರಿನಿವಾಸದ ಬಳಿ ಸುಮಾರು 3.20 ಎಕರೆ ಪ್ರದೇಶದಲ್ಲಿ ವಾಹನ ನಿಲುಗಡೆ ಕಾಮಗಾರಿ ಪ್ರಗತಿಯಲ್ಲಿದೆ.
8. ಸಂಗೀತ ಕಾರಂಜಿ ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದೆ.
9. ಲಿಂಗನಮಕ್ಕಿ ಬಳಿ 60 ಎಕರೆ ಪ್ರದೇಶದಲ್ಲಿ ಅಂತರ ರಾಷ್ಟ್ರೀಯ ಉದ್ಯಾನವನ ಅಭಿವೃದ್ಧಿಯನ್ನು ಕೆ.ಪಿ.ಸಿ.ಎಲ್ ಮೂಲಕ ಕೈಗೊಳ್ಳಲಾಗುತ್ತಿದೆ.

ಲೋಕಾಯುಕ್ತರು ದಾಳಿ ಕುರಿತು ಮಾಧ್ಯಮಗಳಿಗೆ ನೀಡುವ ಮಾಹಿತಿ ಕುರಿತು

148 (22) ಶ್ರೀ. ಕಟಕದೋಂಡ ವಿಠ್ಠಲ ದೋಂಡಿಬಾ (ನಾಗಠಾಣ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯನ್ವಯ ಮಾಡಿದ ದಾಳಿ ಪ್ರಕರಣಗಳಲ್ಲಿ ಮಾನ್ಯ ಲೋಕಾಯುಕ್ತರು ಮಾಧ್ಯಮಗಳ ಮುಂದೆ ವಿವರ ನೀಡುತ್ತಿದ್ದು, ಅವರಿಗೆ ಮಾಹಿತಿಯನ್ನು ಯಾವ ಅಧಿಕಾರಿ ನೀಡುತ್ತಾರೆ; ಮಾಹಿತಿ ನೀಡುವಾಗ ಈ ಮಾಹಿತಿ ಸತ್ಯಾಂಶವನ್ನು ಯಾರು ಪರಿಶೀಲಿಸುತ್ತಾರೆ?

ಆ) ಮಾನ್ಯ ಲೋಕಾಯುಕ್ತರು ಮಾಧ್ಯಮದವರಿಗೆ ಕೊಟ್ಟ ಮಾಹಿತಿ ತಪ್ಪಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮ ಜರುಗಿಸಲಾಗುತ್ತದೆ? (ಅಂತಹ ಪ್ರಕರಣಗಳ ಪಟ್ಟಿಯನ್ನು ಒದಗಿಸುವುದು);

ಇ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಅನ್ವಯ ದಾಳಿ ಮಾಡುವ ಮೊದಲೇ ಲೋಕಾಯುಕ್ತ ಪೊಲೀಸರು ನ್ಯಾಯಾಧೀಶರ ಮುಂದೆ ಮಂಡಿಸುವ ಸೋರ್ಸ್ ರಿಪೋರ್ಟ್‌ನಲ್ಲಿ ತಪ್ಪು ಮಾಹಿತಿಗಳನ್ನು ನೀಡಿದ ಅಧಿಕಾರಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುತ್ತದೆ, ಈವರೆವಿಗೆ ಇಂತಹ ಎಷ್ಟು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ? (ವಿವರ ನೀಡುವುದು);

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ದಾಳಿ ನಂತರ ತನಿಖಾಧಿಕಾರಿಗಳು ನೀಡುವ ವಿವರಗಳನ್ನು ಆಧರಿಸಿ ಅಪರ ಪೊಲೀಸ್ ಮಹಾ ನಿರ್ದೇಶಕರು ಸದರಿ ವಿವರಗಳನ್ನು ಗೌರವಾನ್ವಿತ ಲೋಕಾಯುಕ್ತರವರಿಗೆ ನೀಡುತ್ತಾರೆ. ಮಾಹಿತಿಯ ಸತ್ಯಾಂಶವನ್ನು ಆ ಹಂತದಲ್ಲಿ ಪರಿಶೀಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಇಂತಹ ಸಂದರ್ಭ ಒದಗಿ ಬಂದಿರುವುದಿಲ್ಲ.

ಇ) ಸೋರ್ಸ್ ನೀಡಿದ ವ್ಯಕ್ತಿಯ ಹೆಸರನ್ನು ಬಹಿರಂಗಗೊಳಿಸುವುದಿಲ್ಲ. ಸೋರ್ಸ್ ರಿಪೋರ್ಟ್‌ನಲ್ಲಿ ಯಾವುದೇ ಅಧಿಕಾರಿಯು ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಕಂಡು ಬಂದಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಈವರೆವಿಗೆ ಇಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಪಾರ್ಕ್‌ಗಳ ಸ್ಥಾಪನೆ

149 (446) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ ಯಾವ್ಯಾವ ಸ್ಥಳಗಳನ್ನು ಗುರುತಿಸಲಾಗಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹೌದು.

ಆ) **1] ಮಾಹಿತಿ ತಂತ್ರಜ್ಞಾನ ಪಾರ್ಕ್ :-**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ದೇರೇಬೈಲ್‌ನ ಸರ್ವೆ ನಂ 129–1ಎ ನಲ್ಲಿ ಕಿಯೋನಿಕ್ಸ್ ಸಂಸ್ಥೆಯು ಹೊಂದಿರುವ 3.25 ಎಕರೆ ಭೂಮಿಯಲ್ಲಿ ಐಟಿ ಪಾರ್ಕ್‌ನ್ನು ಕಿಯೋನಿಕ್ಸ್ ಹಾಗೂ ಖಾಸಗಿ ಸಹಭಾಗಿತ್ವದ ಮಾದರು (ಪಿಪಿಪಿ ಮಾಡೆಲ್)ಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದಕ್ಕೆ ಆಸಕ್ತ ಬಂಡವಾಳ ದಾರರಿಂದ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

2] ಜೈವಿಕ ತಂತ್ರಜ್ಞಾನ ಪಾರ್ಕ್ :-

ಕಾಲೇಜ್ ಆಫ್ ಫಿಷರೀಸ್, ಮಂಗಳೂರು ಇಲ್ಲಿನ ಸುಮಾರು ಹದಿನೆಂಟು ಎಕರೆ ಪ್ರದೇಶದಲ್ಲಿ ಮರೀನ್ ಜೈವಿಕ ತಂತ್ರಜ್ಞಾನ ಉದ್ಯಾನವನ್ನು ಸುಮಾರು ರೂ. 30 ಕೋಟಿ ವೆಚ್ಚದಲ್ಲಿ ಖಾಸಗೀ ಸಹಭಾಗಿತ್ವದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ತತ್ಸಂಬಂಧವಾಗಿ ಯೋಜನಾ ವ್ಯವಸ್ಥಾಪಕರನ್ನು ಆಯ್ಕೆಗೊಳಿಸಲಾಗಿದ್ದು, ಯೋಜನೆಯ ರೂಪುರೇಷೆಗಳನ್ನು, ಬಂಡವಾಳದಾರರನ್ನು ಗುರುತಿಸುವ ಪ್ರಕ್ರಿಯೆಗಳನ್ನು ಅವರಿಗೆ ವಹಿಸಲಾಗಿರುತ್ತದೆ.

ರಾಜ್ಯದ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸುವ ಬಗ್ಗೆ

151 (448) ಶ್ರೀ ಖಾದರ್ ಯು.ಟಿ (ಮಂಗಳೂರು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಪೈಕಿ ಯಾವ್ಯಾವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಲಾಗುವುದು;

ಆ) ಮೇಲ್ದರ್ಜೆಗೇರಿಸಲು ಅನುಸರಿಸಲಾಗುವ ಮಾನದಂಡಗಳೇನು;

ಇ) ಇದನ್ನು ಎಂದಿನಿಂದ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಕರ್ನಾಟಕ ಪುರಸಭೆ ಕಾಯ್ದೆ, 1964ರ ಕಲಂ 3 ಮತ್ತು 349 ರನ್ವಯ ಹಾಗೂ 2001ರ ಜನಗಣತಿಯನ್ವಯ 10,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಒಟ್ಟು 247 ಗ್ರಾಮ ಪಂಚಾಯಿತಿಗಳ ಪಟ್ಟಿ ಮಾಡಿ ಮೇಲ್ದರ್ಜೆಗೇರಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿರುತ್ತಾರೆ.

ಆದರೆ, ಕಂದಾಯ ಇಲಾಖೆಯ ಆದೇಶ ಸಂಖ್ಯೆ ಆರ್‌ಡಿ 70 ಭೂದಪು 2009 ದಿನಾಂಕ: 24.12.2009 ರಲ್ಲಿ ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಕಾರ್ಯವು ಪ್ರಗತಿಯಲ್ಲಿರುವುದರಿಂದ ದಿನಾಂಕ: 31.03.2011 ರವರೆಗೆ ಯಾವುದೇ ಪ್ರದೇಶವನ್ನು ಮೇಲ್ದಜೆಗೇರಿಸದಂತೆ ನಿರ್ಭಂದಿಸಲಾಗಿದೆ. ಆದ್ದರಿಂದ ದಿನಾಂಕ: 31.03.2010ರ ನಂತರ ಸದರಿ ವಿಷಯದ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಣಯವನ್ನು ತೆಗೆದು ಕೊಳ್ಳಲಾಗುವುದು.

ಆ) ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಮತ್ತು ಕಲಂ 9 ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;

3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂ ಸಹ, ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಇ) ಕಂದಾಯ ಇಲಾಖೆಯ ಆದೇಶ ಸಂಖ್ಯೆ ಆರ್‌ಡಿ 70 ಭೂದಮ 2009 ದಿನಾಂಕ: 24.12.2009 ರಲ್ಲಿ ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಕಾರ್ಯವು ಪ್ರಗತಿಯಲ್ಲಿರುವುದರಿಂದ ದಿನಾಂಕ: 31.03.2011ರವರೆಗೆ ಯಾವುದೇ ಪ್ರದೇಶವನ್ನು ಮೇಲ್ದರ್ಜೆಗೇರಿಸದಂತೆ ನಿರ್ಭಂದಿಸಲಾಗಿದೆ. ಆದ್ದರಿಂದ ದಿನಾಂಕ: 31.03.2010ರ ನಂತರ ಸದರಿ ವಿಷಯದ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ವಾರ್ತಾ ಇಲಾಖೆಯ ಕಛೇರಿಗೆ ಮೂಲ ಸೌಲಭ್ಯದ ಕೊರತೆ

152 (449) ಶ್ರೀ ಖಾದರ್ ಯು.ಟ. (ಮಂಗಳೂರು) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ವಾರ್ತಾ ಇಲಾಖೆಯ ಕಛೇರಿಗೆ ಅಗತ್ಯ ಮೂಲ ಸೌಲಭ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ವಾರ್ತಾ ಇಲಾಖೆಯ ದೈನಂದಿನ ಚಟುವಟಿಕೆಗಳಿಗೆ ತೊಂದರೆ ಆಗಿದ್ದು, ಇದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಾವುವು (ವಿವರಗಳನ್ನು ಒದಗಿಸುವುದು);

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬಂದಿದೆ.

ಆ) ಈಗಾಗಲೇ ಮಂಗಳೂರು ವಾರ್ತಾ ಇಲಾಖೆ ಕಛೇರಿಗೆ ಕಂಪ್ಯೂಟರ್, ಫ್ಯಾಕ್ಸ್, ಟೆಲಿಫೋನ್‌ಗಳನ್ನು ಒದಗಿಸಲಾಗಿದೆ. ಅಗತ್ಯವಿರುವ ಸಿಬ್ಬಂದಿಯನ್ನು ಸಹ ತುಂಬಲಾಗಿದೆ. ಹಿರಿಯ ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇದ್ದು, ಅದೇ ಕಛೇರಿಯ ಸಹಾಯಕ ನಿರ್ದೇಶಕರನ್ನು ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ.

ಮಂಗಳೂರಿನ ವಾರ್ತಾ ಭವನದ ಕಟ್ಟಡದ ದುರಸ್ತಿ ಮತ್ತು ಮರು ವಿದ್ಯುದ್ದೀಕರಣ ಕಾಮಗಾರಿ ಸಂಬಂಧ 9.51ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ – ಯವರು ವಾರ್ತಾ ಇಲಾಖೆಗೆ ದಿನಾಂಕ: 09–02–2010 ರಂದು ಸಲ್ಲಿಸಿರುತ್ತಾರೆ. 2009–10ನೇ ಸಾಲಿನಲ್ಲಿ ವಾರ್ತಾ ಇಲಾಖೆಯ ಮೇಲಣ ಬಂಡವಾಳ ವೆಚ್ಚದಡಿ ಅನುದಾನದ ಕೊರತೆ ಇರುವುದರಿಂದ 2010–11ನೇ ಸಾಲಿನಲ್ಲಿ ಈ ಕಾಮಗಾರಿಗೆ ತಗಲುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಾನೂನು ನೆರವು ಸಮಿತಿಯ ಕಾರ್ಯವೈಖರಿ

153 (470) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಕಾನೂನು ನೆರವು ಸಮಿತಿಯಿಂದ ಎಷ್ಟು ಜನ ಬಡವರು ಪ್ರತಿಫಲ ಪಡೆದವರ ವಿವರ ನೀಡುವುದು;

ಆ) ಕಳೆದ ಒಂದು ವರ್ಷದಲ್ಲಿ ಕಾನೂನು ನೆರವು ಪ್ರಾಧಿಕಾರದಿಂದ ಎಷ್ಟು ಜನಬಡವರು ನ್ಯಾಯ ಪಡೆದಿದ್ದಾರೆ ಮತ್ತು ಅರ್ಜಿ ಸಲ್ಲಿಸಿದ್ದಾರೆ;

ಇ) ಕಾನೂನು ನೆರವು ಸಮಿತಿಯ ರೂಪರೇಷೆಗಳನ್ನು ಬದಲಾಯಿಸುವ ಇರಾದೆ ಸರ್ಕಾರದ ಮುಂದೆ ಇದೆಯೇ;

ಈ) ಕಾನೂನು ಸೇವಾ ಪ್ರಾಧಿಕಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲವೆ?

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರು) :

ಅ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ 1997 ರಿಂದ 2009ರ ನವೆಂಬರ್ ಅಂತ್ಯಕ್ಕೆ 58,99,863 ಜನರು ಪ್ರತಿಫಲ ಪಡೆದಿರುತ್ತಾರೆ.

ಆ) 8,584 (ಜನವರಿ 2009 ರಿಂದ ನವೆಂಬರ್ 2009)

ಇ) ಇಲ್ಲ.

ಈ) ಸಾಧ್ಯವಿದೆ. ಈಗಾಗಲೇ ಕಾನೂನು ಸಾಕ್ಷರತಾ ರಥದ ಮೂಲಕ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಕಾನೂನು ಸಾಕ್ಷರತಾ ಅರಿವು ಹಾಗೂ ಜನತಾ ನ್ಯಾಯಾಲಯ ಮುಖಾಂತರ ಹೆಚ್ಚಿನ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮತ್ತು ಈಗಾಗಲೇ ಮಧ್ಯಸ್ಥಿಕೆ ಕೇಂದ್ರಗಳನ್ನು ಹಾಗೂ ಆರು ಖಾಯಂ ಲೋಕ ಅದಾಲತ್‌ಗಳನ್ನು ಸ್ಥಾಪಿಸಲಾಗಿದೆ.

ತೀರ್ಥಹಳ್ಳಿ ಕ್ಷೇತ್ರದಲ್ಲಿ ಕಲ್ಲುಬಂಡೆ ಮತ್ತು ಮರಳು ಕ್ವಾರಿಗಳ ಬಗ್ಗೆ

155 (472) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮರಳು ಹರಾಜಿನಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು;

ಆ) ಎಷ್ಟು ಜನ ಗುತ್ತಿಗೆದಾರರು, ಯಾವಯಾವ ಸರ್ವೆ ನಂಬರು ಯಾವ ಹೋಬಳಿಯಲ್ಲಿ ಎಷ್ಟು ಹಣ ಪಾವತಿ ಮಾಡಿ ಹರಾಜು ಪಡೆದಿದ್ದಾರೆ (ಅವರುಗಳ ಹೆಸರು ಮತ್ತು ವಿಳಾಸ ನೀಡುವುದು);

ಇ) ಇಂದಿರಾ ಅವಾಜ್, ಆಶ್ರಯ ಮನೆ ಅಥವಾ ಸರ್ಕಾರದ ಸಹಾಯದಿಂದ ಕಟ್ಟುವ ಮನೆಗಳಿಗೆ, ದೇವಸ್ಥಾನಗಳಿಗೆ ಮರಳು ಗುತ್ತಿಗೆದಾರರ ಹಿತದಿಂದ ಹೊರಗುಳಿಯಲು ಯಾವುದಾದರೂ ನಿಯಮ ಕಾನೂನು ರೂಪಿಸಿದೆಯೆ;

ಈ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ಎಷ್ಟು ಎಕರೆ ಕಲ್ಲುಬಂಡೆಗಳನ್ನು ಯಾರಯಾರ ಹೆಸರಿನಲ್ಲಿ ಲೀಸ್‌ಗೆ ನೀಡಲಾಗಿದೆ (ಹೆಸರು, ಸರ್ವೆ ನಂಬರ್ ಮತ್ತು ಹೋಬಳಿ ವಿವರ ನೀಡುವುದು);

ಉ) ಅಭಿವೃದ್ಧಿ ಕಾಮಗಾರಿಗಳಿಗೆ ಜಲ್ಲಿ ಪಡೆಯಲು ಕಾನೂನು ನಿಯಮಗಳನ್ನು ಸರಳೀಕರಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರೂ.403.42 ಲಕ್ಷಗಳು.

ಆ) ಒಟ್ಟು 36 ಜನರಿಗೆ ಮರಳು ಗುತ್ತಿಗೆಗಳನ್ನು ಹರಾಜಿನಲ್ಲಿ ನೀಡಲಾಗಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಇ) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994 ರಲ್ಲಿ ಈ ರೀತಿಯ ಅವಕಾಶವಿರುವುದಿಲ್ಲ.

ಈ) ಒಟ್ಟು 24 ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿದ್ದು, ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಉ) ಅಭಿವೃದ್ಧಿ ಕಾಮಗಾರಿಗಳಿಗೆ ಜಲ್ಲಿ ಕೊರತೆಯಿರುವ ಮಲೆನಾಡು ಪ್ರದೇಶದಲ್ಲಿ ಅರಣ್ಯ ಪ್ರದೇಶದಲ್ಲಿರುವ ಕಲ್ಲಿನ ನಿಕ್ಷೇಪಗಳನ್ನು ಗುರುತಿಸಿ ಅರಣ್ಯ ಇಲಾಖೆಯ ಅನುಮತಿ ಪಡೆದು ಕಲ್ಲುಗಣಿಗಾರಿಕೆ ಮಾಡಲು ಕ್ರಮಕೈಗೊಳ್ಳಲಾಗಿದೆ.

0.14F-80

ಅನುಬಂಧ - 1

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಮರಳು ಹರಾಜು ಗುತ್ತಿಗೆಗಳ ವಿವರಗಳು:-

ಕ್ರ ಸಂ.	ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು ಶ್ರೀಯುತರಾದ	ಗುತ್ತಿಗೆ ಮಂಜೂರಾದ ದಿನಾಂಕ	ಗುತ್ತಿಗೆ ಮುಕ್ತಾಯ ದಿನಾಂಕ	ಗ್ರಾಮ	ಸರ್ವೆ ನಂ. ಹಳ್ಳ ನದಿ ಪಾತ್ರ	ವಿಸ್ತೀರ್ಣ ಎಕರೆ ಗಳಲ್ಲಿ	ಪಾವತಿ ಮಾಡಿದ ಬಿಡ್ ಮೊತ್ತ ರೂ. ಲಕ್ಷಗಳಲ್ಲಿ
1	2	3	4	5	6	7	8	9
1	328	ಮಹೇಶ್ ಡಿ.ಶೆಟ್ಟಿ ಬಿನ್ ಧರ್ಮರಾಜಶೆಟ್ಟಿ, ಮ್ಯಾನೇಜಿಂಗ್ ಪಾರ್ಟನರ್ ಬಾರ್ & ರೆಸ್ಟೋರೆಂಟ್, ಬಿ.ಹೆಚ್.ರಸ್ತೆ, ಶಿವಮೊಗ್ಗ	12.3.09	11.3.10	ಹೊಳೆಕೊಪ್ಪ	6,7	1.00	7,25,000/-
2	333	ಅನಿಲ್ ಕುಮಾರ್ ಬಿನ್ ಪುಟ್ಟಪ್ಪಗೌಡ, ಕುರುವಳ್ಳಿ ಗ್ರಾಮ ಮತ್ತು ಅಂಚೆ, ತೀರ್ಥಹಳ್ಳಿ ತಾ.	18.3.09	17.3.10	ಕುರುವಳ್ಳಿ	13	1.00	2,00,000/-
3	334	ವೈ.ಬಿ.ರಾಘವೇಂದ್ರ ಬಿನ್ ಬಿ.ಎಸ್.ಬಸಪ್ಪ, ಯಡಹಳ್ಳಿ ಗ್ರಾಮ, ಹಿರೇಬೈಲ್ ಅಂಚೆ, ತೀರ್ಥಹಳ್ಳಿ ತಾ.	18.3.091	17.3.10	ಬೆಜ್ಜವಳ್ಳಿ	64	0.20	2,08,000/-
4	335	ಎಸ್. ಪ್ರಶಾಂತ್ ಬಿನ್ ಸಂಜೀವ ಪೂಜಾರಿ, ಬಾಳೇಬೈಲು, ತೀರ್ಥಹಳ್ಳಿ ತಾ.	23.3.09	22.3.10	ಮುಂಡುವಳ್ಳಿ	146	5.00	5,82,000/-
5	336	ಸಂತೋಷ್ ಕುಮಾರ್ ಬಿನ್ ಸಂಜೀವ ಪೂಜಾರಿ, ಬಾಳೇಬೈಲು, ತೀರ್ಥಹಳ್ಳಿ ತಾ.	2.4.09	1.4.10	ಚಕ್ಕೋಡಬೈಲು	64	2.00	5,22,500/-
6	337	ವೈ.ಗಣಪತಿ ಬಿನ್ ಯಲ್ಲಪ್ಪ, ಕುರುವಳ್ಳಿ ಗ್ರಾಮ ಮತ್ತು ಅಂಚೆ, ಬಿನ್ ಸಂಜೀವ ಪೂಜಾರಿ, ಬಾಳೇಬೈಲು, ತೀರ್ಥಹಳ್ಳಿ ತಾ.	6.4.09	5.4.10	ಮುಂಡುವಳ್ಳಿ	146	3.00	2,15,000/-
7	339	ಎ.ಎಸ್. ಧನಂಜಯ ಬಿನ್ ಸುಬ್ರಹ್ಮಣ್ಯ; ಜ್ಯೂನಿಯರ್ ಕಾಲೇಜು ರಸ್ತೆ, ತೀರ್ಥಹಳ್ಳಿ ಟೌನ್	15.5.09	14.5.10	ಹೊಳೆಕೊಪ್ಪ	6, 7, 8	6.00	12,50,000/-
8	340	ಕೆ.ಎ.ಹರೀಶ್ ಬಿನ್ ಕೆ. ಅಣ್ಣಪ್ಪಗೌಡ, ಕಣಗಲ್ಲು; ಆರಗ ಅಂಚೆ, ತೀರ್ಥಹಳ್ಳಿ ತಾ.	15.5.09	14.5.10	ಮುಳುಬಾಗಿಲು	1, 96, 97	0.20	1,66,000/-
9	341	ಎಸ್.ಸಂತೋಷ್ ಕುಮಾರ್ ಬಿನ್ ಸಂಜೀವ ಪೂಜಾರಿ, ಬಾಳೇಬೈಲು, ತೀರ್ಥಹಳ್ಳಿ ತಾ.	15.5.09	14.5.10	[illegible]	97, 98	2.20	2,01,000/-

10	342	[illegible]	15.5.09	14.5.10	[illegible]	146, 167, 172	5.00	15,01,000/-
11	343	[illegible]	15.5.09	14.5.10	[illegible]	64	2.00	10,01,500/-
12	344	[illegible]	15.5.09	14.5.10	[illegible]	13	1.00	2,00,000/-
13	348	[illegible]	15.5.09	14.5.10	[illegible]	96	2.00	3,63,000/-
14	346	[illegible]	15.5.09	14.5.10	[illegible]	146	5.00	12,05,000/-
15	350	[illegible]	9.10.09	8.9.11	[illegible]	34	1.00	2,31,000/-
16	351	[illegible]	16.10.09	15.10.10	[illegible]	[illegible]	4-00	20,05,000/-
17	352	ಅದೇ	16.10.09	15.10.10	[illegible]	24	5.00	30,10,000/-
18	353	ಅದೇ	16.10.09	15.10.10	[illegible]	24	5.00	30,95,000/-
19	354	ಅದೇ	16.10.09	15.10.10	[illegible]	[illegible]	6.00	15,50,000/-
20	355	ಅದೇ	16.10.09	15.10.10	[illegible]	24	1.00	9,50,000/-
21	356	ಅದೇ	16.10.09	15.10.10	[illegible]	24	5.00	16,00,000/-
22	357	ಅದೇ	20.10.09	19.10.10	[illegible]	24	10.00	9,00,000/-
23	358	ಅದೇ	20.10.09	19.10.10	[illegible]	101	2.00	11,00,000/-
24	359	ಅದೇ	20.10.09	19.10.10	[illegible]	50	1.00	6,85,000/-
25	360	ಅದೇ	20.10.09	19.10.10	[illegible]	126, 13	1.20	8,50,000/-
26	361	ಅದೇ	20.10.09	19.10.10	[illegible]	133	3.00	11,00,000/-
27	362	ಅದೇ	20.10.09	19.10.10	[illegible]	24	1.00	7,95,000/-
28	363	ಅದೇ	20.10.09	19.10.10	[illegible]	146, 130	2.00	8,70,000/-
29	364	[illegible]	20.10.09	19.10.10	[illegible]	101	5.00	15,00,000/-
30	367	[illegible]	20.10.09	19.10.10	[illegible]	261	1.00	2,83,000/-
31	368	[illegible]	20.10.09	19.10.10	[illegible]	28	1.20	7,18,000/-

32	369	ಸತೀಶ್ ರೈ, ಸಂಪಿಲಮನೆ, ಇರಾ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.	20.10.09	19.10.10	ಬಗ್ಗೋಡಿಗೆ	28	1.00	6,50,000/-
33	370	ಬಿ.ಎಂ.ಕೃಷ್ಣಮೂರ್ತಿ, ತ್ಯಾಗರಾಜನಗರ, ಬೆಟ್ಟಮಕ್ಕಿ, ತೀರ್ಥಹಳ್ಳಿ ತಾ.	20.10.09	19.10.10	ಹೆದ್ದೂರು	24	6.00	41,12,000/-
34	371	ಎಸ್.ಲೋಕೇಶ್, ಸಿದ್ದೇಶ್ವರ ನಗರ, ಶಿವಮೊಗ್ಗ.	20.10.09	19.10.10	ಬಗ್ಗೋಡಿಗೆ	28	1.00	7,00,000/-
35	372	ಬಿ.ಎಂ.ಕೃಷ್ಣಮೂರ್ತಿ, ತ್ಯಾಗರಾಜನಗರ, ಬೆಟ್ಟಮಕ್ಕಿ, ತೀರ್ಥಹಳ್ಳಿ ತಾ.	20.10.09.	19.10.10	ದೇಗುವಳ್ಳಿ	127, 129	5.00	33,60,000/-
36	373	ವೈ.ಗಣಪತಿ ಬಿನ್ ಯಲ್ಲಪ್ಪ, ಕುರುವಳ್ಳಿ ಗ್ರಾಮ ಮತ್ತು ಅಂಚೆ, ಬಿನ್ ಸಂಜೀವ ಪೂಜಾರಿ, ಬಾಳೇಬೈಲು, ತೀರ್ಥಹಳ್ಳಿ ತಾ.	20.10.09	19.10.10	ಮುಂಡುವಳ್ಳಿ	146;169, 171	2.00	27,00,000/-

ಅನುಬಂಧ - 11

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿಗುತ್ತಿಗೆಗಳ ವಿವರಗಳು:-

ಕ್ರ. ಸಂ.	ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು ವಿಳಾಸ	ಗ್ರಾಮ	ಸರ್ವೆ ನಂ.	ಗುತ್ತಿಗೆ ಮಂಜೂರಾದ ದಿನಾಂಕ	ಗುತ್ತಿಗೆ ಮುಕ್ತಾಯ ದಿನಾಂಕ	ವಿಸ್ತೀರ್ಣ ಎಕರೆ ಗಳಲ್ಲಿ	ಖನಿಜ	ಲಭ್ಯವಿರುವ ಕಟ್ಟಡ ಕಲ್ಲಿನ ಅಂದಾಜು ಪ್ರಮಾಣ MT ಗಳಲ್ಲಿ
1	2	3	6	7	4	5	8	9	10
1	503	ಟಿ.ಎಲ್. ಸುರೇಶ್, ಆಜಾದ್ ರಸ್ತೆ, ತೀರ್ಥಹಳ್ಳಿ ಟೌನ್	ಮೇಲಿನಕುರುವಳ್ಳಿ	75	9-5-05	8-5-10	0-20	ಗ್ರಾನೈಟ್	24000
2	504	ಟಿ.ಎಲ್. ಸುರೇಶ್, ಆಜಾದ್ ರಸ್ತೆ, ತೀರ್ಥಹಳ್ಳಿ ಟೌನ್	ಬುಕ್ಲಾಪುರ	64	9-5-05	8-5-10	1-00	ಗ್ರಾನೈಟ್	48000
3	505	ಟಿ.ಎಲ್. ಸುರೇಶ್, ಆಜಾದ್ ರಸ್ತೆ, ತೀರ್ಥಹಳ್ಳಿ ಟೌನ್	ಮೇಲಿನಕುರುವಳ್ಳಿ	75	9-5-05	8-5-10	0-20	ಗ್ರಾನೈಟ್	24000
4	510	ಡಿ.ಸುಬ್ರಮಣಿ ಬಿನ್ ಡಿ.ಟಿ.ದೊರೆಸ್ವಾಮಿ, ಮೇಲಿನಕುರುವಳ್ಳಿ, ಕುರುವಳ್ಳಿ ಅಂಚೆ, ತೀರ್ಥಹಳ್ಳಿ ತಾ.	ಬುಕ್ಲಾಪುರ	64	18-10-05	17-10-10	0-20	ಅದೇ	24000
5	521	ಶ್ರೀಮತಿ.ಕೆ.ಎಸ್. [illegible], [illegible]	[illegible]	16	22-3-06	21-3-11	4-00	ಅದೇ	192000
6	525	ಶ್ರೀಮತಿ.ಕೆ.ಎಸ್. [illegible], [illegible]	[illegible]	16	30-4-06	29-4-11	6-20	ಅದೇ	312000
7	537	[illegible]	[illegible]	115	23-11-06	22-11-11	0-20	[illegible]	24000
8	538	[illegible] ಸಹಕಾರ ಸಂಘ, ಮೇಲಿನಕುರುವಳ್ಳಿ	ಮೇಲಿನಕುರುವಳ್ಳಿ	75	25-4-06	24-4-11	6-00	ಗ್ರಾನೈಟ್	488000
9	544	[illegible], ಮೇಲಿನಕುರುವಳ್ಳಿ	ಮೇಲಿನಕುರುವಳ್ಳಿ	75	24-4-06	23-4-11	2-00	ಅದೇ	80000
10	574	[illegible], ತೀರ್ಥಹಳ್ಳಿ	[illegible]	13	17-09-08	16-09-13	1-00	[illegible]	48000
11	579	[illegible], ತೀರ್ಥಹಳ್ಳಿ ತಾಲ್ಲೂಕು	[illegible]	01	20-04-09	19-04-14	1-20	[illegible]	72000
12	580	[illegible], ತೀರ್ಥಹಳ್ಳಿ ತಾಲ್ಲೂಕು.	[illegible]	13	24-4-09	23-4-14	0-33	[illegible]	39600

								ಮುಫತ್	
13	581	[illegible]	ಅದೇ	13	24-4-09	23-4-14	0-20	ಅದೇ	24000
14	582	[illegible]	ಅದೇ	13	24-4-09	23-4-14	0-05	ಅದೇ	6000
15	589	ಅದೇ	[illegible]	18	20-07-09	19-07-14	0-20	ಕಂದಾಯ ಭೂಮಿ	24000
16	590	[illegible]	[illegible]	18	20-07-09	19-07-14	0-20	ಕಂದಾಯ ಭೂಮಿ	24000
17	601	[illegible]	[illegible]	13	27-07-09	26-07-14	3-00	ಕಂದಾಯ ಭೂಮಿ	144000
18	602	[illegible]	[illegible]	13	27-07-09	26-07-14	4-00	ಕಂದಾಯ ಭೂಮಿ	194000
19	615	ಅದೇ	ಅದೇ	57	20-8-09	19-08-14	1-00	ಅದೇ	48000
20	635	[illegible]	ಅದೇ	13	15-9-09	14-9-14	1-20	ಕಂದಾಯ ಭೂಮಿ	72000
21	636	[illegible]	ಅದೇ	13	ಅದೇ	ಅದೇ	2-00	ಅದೇ	96000
22	637	[illegible]	ಅದೇ	13	ಅದೇ	ಅದೇ	1-00	ಅದೇ	48000
23	639	[illegible]	[illegible]	73	2-11-09	1-11-14	1-00	[illegible] ಮುಫತ್	48000
24	640	[illegible]	ಅದೇ	73	2-11-09	1-11-14	1-30	ಅದೇ	84000

ಶಿವಮೊಗ್ಗ & ಭದ್ರಾವತಿ ತಾಲ್ಲೂಕುಗಳಲ್ಲಿ ಜಮೀನು ಸರ್ವೆ ಮಾಡುವುದು

161 (60) ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಗೆ ಸೇರಿದ ಸಿ ಮತ್ತು ಡಿ ಜಮೀನು ಪೈಕಿ ಎಂ.ಪಿ.ಎಂ. ಅರಣ್ಯ ವಿಭಾಗಕ್ಕೆ ಗುತ್ತಿಗೆ ನೀಡಿ ಜಂಟಿ ಸರ್ವೆ ಮೂಲಕ ಹಸ್ತಾಂತರಿಸಿದ ಜಮೀನು ವಿಸ್ತೀರ್ಣವೆಷ್ಟು (ಸರ್ವೆ ನಂಬರ್‌ವಾರು, ಗ್ರಾಮವಾರು ವಿಸ್ತೀರ್ಣ ವಿವರ ನೀಡುವುದು);

ಆ) ಆ ಪೈಕಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶ (ಮ್ಯಾಗಲೇಸೆ ಪ್ರಶಸ್ತಿ ವಿಜೇತ ಶ್ರೀ ಕೆ.ವಿ.ಸುಬ್ಬಣ್ಣ ವಿರುದ್ಧ ಎಂ.ಪಿ.ಎಂ. ಅರಣ್ಯ ವಿಭಾಗ ಪ್ರಕರಣ)ದ ರೀತ್ಯಾ ಕಂದಾಯ ಇಲಾಖೆಗೆ ಹಿಂತಿರುಗಿಸಿದ ಜಮೀನು ಎಷ್ಟು (ಗ್ರಾಮವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು);

ಇ) ಎಂಪಿಎಂ ಅರಣ್ಯ ವಿಭಾಗದಲ್ಲಿರುವ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾಯಿಸಲು ಪ್ರತ್ಯೇಕ ಆದೇಶ ಹೊರಡಿಸಿರುವುದು ಅಗತ್ಯವಿದೆಯೇ;

ಈ) ಎಂ.ಪಿ.ಎಂ. ಅರಣ್ಯ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾವಲುಗಾರರು ಕಳೆದ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ (ಪೂರ್ಣ ವಿವರ ನೀಡುವುದು);

ಉ) ಈ ಹಂಗಾಮಿ ಕಾವಲುಗಾರರನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಪೂರ್ಣ ವಿವರ ನೀಡುವುದು)?

ಶ್ರೀ ಮುರುಗೇಶ್ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಒಟ್ಟು 26.35 ಹೆಕ್ಟೇರು ಮತ್ತು ಭದ್ರಾವತಿ ತಾಲ್ಲೂಕಿನಲ್ಲಿ 31.40 ಹೆಕ್ಟೇರು ಪ್ರದೇಶದಲ್ಲಿ ಕಂದಾಯ ಇಲಾಖೆಗೆ ಸೇರಿದ ಸಿ ಮತ್ತು ಡಿ ಜಮೀನು ಪೈಕಿ ಎಂ.ಪಿ.ಎಂ. ಅರಣ್ಯ ವಿಭಾಗಕ್ಕೆ ಗುತ್ತಿಗೆ ನೀಡಲಾಗಿದೆ. ಸರ್ವೆ ನಂಬರ್‌ವಾರು, ಗ್ರಾಮವಾರು ವಿಸ್ತೀರ್ಣ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಈ ಪೈಕಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ರೀತ್ಯಾ ಕಂದಾಯ ಇಲಾಖೆಗೆ ಇದುವರೆಗೆ ಯಾವುದೇ ಜಮೀನನ್ನು ಹಿಂತಿರುಗಿ ಸಲಾಗಿಲ್ಲ. ಸದರಿ ಜಮೀನು ಒತ್ತುವರಿಯಾಗುವ ಸಂಭವವಿರುವ ಕಾರಣ ಕಂದಾಯ ಇಲಾಖೆಯಿಂದ ಪುನಃ ಗುತ್ತಿಗೆ ನೀಡಲು ಕೋರಲಾಗಿದೆ.

ಇ) ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಜಾರಿಯಲ್ಲಿರುತ್ತದೆ.

ಈ) ಎಂ.ಪಿ.ಎಂ. ಅರಣ್ಯ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾವಲುಗಾರರು 1981 ರಿಂದ ವರ್ಷವಾರು 1992ರವರೆಗೆ ಆಯಾ ನೆಡುತೋಪಿನ ಸ್ಥಳೀಯರಾಗಿ ನೇಮಕಗೊಂಡಿರುತ್ತಾರೆ. ಪೂರ್ಣ ವಿವರ ಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಉ) ಹಂಗಾಮಿ ಕಾವಲುಗಾರರನ್ನು ಖಾಯಂಗೊಳಿಸಲು ಅರಣ್ಯ ಕ್ಷೇತ್ರ ಕೆಲಸಗಾರರ ಸಂಘಗಳು ತಮ್ಮ ಸೇವೆಯನ್ನು ಖಾಯಂಗೊಳಿಸಲು ಕಾರ್ಮಿಕ ಇಲಾಖೆಯ ಮುಂದೆ ಕೈಗಾರಿಕಾ ವಿವಾದವನ್ನು ಮಂಡಿಸಿದ್ದು, ಸರ್ಕಾರವು ಈ ವಿವಾದವನ್ನು ಹೆಚ್ಚುವರಿ ಕೈಗಾರಿಕಾ ಟ್ರಿಬ್ಯುನಲ್‌ಗೆ ಒಪ್ಪಿಸಿದ್ದು, ಈ ವಿಷಯದಲ್ಲಿ ಅರಣ್ಯ ಕ್ಷೇತ್ರ ಹಂಗಾಮಿ ಕೆಲಸಗಾರರನ್ನು ಖಾಯಂ ಗೊಳಿಸಲು ಸಾಧ್ಯವಿಲ್ಲವೆಂದು ಇತ್ಯರ್ಥವಾಗಿರುತ್ತದೆ. ಸದರಿ ಆದೇಶ ಈ ಕೆಳಕಂಡಂತಿರುತ್ತದೆ:

ಅರಣ್ಯ ಕ್ಷೇತ್ರ ಕೆಲಸಗಾರರ ಸಂಘಗಳು ಹೆಚ್ಚುವರಿ ಕೈಗಾರಿಕಾ ಟ್ರಿಬ್ಯುನಲ್‌ನ ಈ ಇತ್ಯರ್ಥವನ್ನು ಪ್ರಶ್ನಿಸಿ ರಿಟ್ ಪಿಟಿಷನ್ ಸಂ:14012/08 ಮತ್ತು 13284/08 ರಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

Ann-1

List of Captive plantations raised in non Forest lands (C & D class lands)

By the M.P.M.Ltd. Bhadravathi

Shimoga Taluk

1	2	3	4	5	6	7	8	9	10	11	12
218	80 C	Shimoga Holalur	Muscal	31 1		4.75 0.25	Gomal Gomal	1984	NO	NO	
219	123	Shimoga Holalur	Harmagatta	18		13.75	Gomal	1985	NO	NO	
220	178	Shimoga Holalur	Harmagatta	18		3.35	Gomal	1986	NO	NO	
221	378 A	Shimoga Holalur	Kunchenahalli	81 82	7.72 131.63	1.00 3.25	Hullubeni/Hanju zadi Hullubeni/Hanju zadi	1989	NO	NO	
Total of Shimoga Taluk						28.35					

ಅನುಬಂಧ – 1

List of Captive plantations raised in non-forest lands (C & D Class lands)

Bhadravathi Taluk

By the MPM Ltd., Bhadravathi

Sl. No.	MPM plantation number	Taluk/Hobli	Name of the village	Survey number	Extent of Sy. No. as per RTC(Ha)	Extent of MPM pltn. in Ha.	Nature of Land	Planting Year	Whether included in land bank	Whether already declared under section cp	Remarks
1	2	3	4	5	6	7	8	9	10	11	12
1	15	Bhadravathi Bhadravathi	Hullyaramanakoppa	13	74.50	2.00	Gomal/Mufath	1982	NO	NO	
2	35	Bhadravathi Bhadravathi	Hullyaramanakoppa	19	74.60	21.45	Gomal/Mufath	1982	NO	NO	
3	166	Bhadravathi Bhadravathi	Hullyaramanakoppa	15	109.48	4.00	Gomal/Mufath	1987	NO	NO	
4	996	Bhadravathi Holehonnur	Bhadrapura	23 22 21	2.84 2.58 2.50	0.20 1.25 0.85	Sarkari/Banjaru/Beelu Sarkari/Banjaru/Beelu Sarkari/Banjaru/Beelu	1987	NO	NO	
5	940	Bhadravathi Bhadravathi	Hullyalamanakoppa	5	18.74	1.65	Hullubani	1996	NO	NO	
	Total of Bhadravathi Taluk					31.40					

ಅನುಬಂಧ - 2

LIST OF FOREST FIELD WORKERS WORKING IN MPM. FOREST DIVISON, SHIMOGA.

SL. No.	OLD SL. NO.	EMP. NEW CODE	EMP. OLD CODE	NAME OF THE FOREST FIELD WORKERS (SRIYOUTHS)	FATHER'S NAME SRIYOUTHS	DESIG NATION	DATE OF BIRTH	QUALIFI-CATION	CASTE	DATE OF ENGAGEMENT	NAME OF THE WORKING DIVISION.
1	2	3	4	5	6	7	8	9	10	11	12
1	7	27500	3074	PUTTAPPA.K.	BASAVANYAPPA	WATCHER	02.06.1960	IV	BHOVI	01.09.1987	HOSANAGARA
2	8	24418	3036	NAGAMURTHY	MUNISWAMY	WATCHER	09.07.1960	II	ADIDRAVIDA	01.11.1988	RESEARCH
ಇ) ಈ ಘಟಕ ನಿರ್ಮಾಣ ಹಂತದಲ್ಲಿದೆ. ಸಧ್ಯಕೆ ಈ ಹಂತದಲ್ಲಿ ಸುಮಾರು 6000 ಜನರಿಗೆ ಉದ್ಯೋಗ ನೀಡಲಾಗಿದೆ.

ಈ) ನಿರ್ಮಾಣ ಹಂತದಲ್ಲಿ ಸುಮಾರು 55% ರಷ್ಟು ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ.

ಉ) ಯೋಜನೆಯು ಅಂತಿಮ ಹಂತದಲ್ಲಿದ್ದು, 400 ಕೆ.ವಿ. ವಿದ್ಯುತ್ ಸಾಮರ್ಥ್ಯದ ಕಾರ್ಯವು ಬಾಕಿಯಿದ್ದು, ಇದು ಪೂರ್ಣಗೊಂಡ ಕೂಡಲೇ ಅಂದಾಜು ಏಪ್ರಿಲ್ 2010ರ ಒಳಗಾಗಿ ಯೋಜನೆಯು ಕಾರ್ಯಾರಂಭ ಗೊಳ್ಳುವ ಸಾಧ್ಯತೆ ಇರುತ್ತದೆ.

ಉಡುಪಿ ದೇವಸ್ಥಾನಗಳ ಆದಾಯ

167 (506) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ಒಟ್ಟು ಎಷ್ಟು ದೇವಸ್ಥಾನಗಳಿವೆ;

ಆ) ಆ ದೇವಸ್ಥಾನಗಳಿಂದ ಬರುವ ಆದಾಯವೆಷ್ಟು;

ಇ) ಆ ದೇವಸ್ಥಾನಗಳಿಂದ ಬಂದ ಆದಾಯವನ್ನು ಸಾರ್ವಜನಿಕ ಕ್ಷೇತ್ರ ಮೂಲಭೂತ ಸೌಲಭ್ಯಗಳಿಗೆ ಬಳಕೆ ಮಾಡಿಕೊಳ್ಳಬಹುದೆ?

ಡಾ॥ ವಿ.ಎಸ್.ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) ಒಟ್ಟು 79.

ಆ) ವಾರ್ಷಿಕ ರೂ. 2,49,04,724-00 (ಅಂದಾಜು)

ಇ) ಸಾರ್ವಜನಿಕ ಕ್ಷೇತ್ರದ ಮೂಲಭೂತ ಸೌಲಭ್ಯಗಳಿಗೆ ದೇವಾಲಯಗಳ ಆದಾಯವನ್ನು ಬಳಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

ದೇವಸ್ಥಾನದ ಆದಾಯವನ್ನು ಆಯಾಯ ದೇವಸ್ಥಾನದ ಪೂಜಾ ಕೈಂಕಾರ್ಯಕ್ಕಾಗಿ ಹಾಗೂ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮತ್ತು ನಿಯಮಾವಳಿಯಂತೆ, ಧರ್ಮ, ಸಂಸ್ಕೃತಿ, ಶಿಕ್ಷಣ ಮುಂತಾದ ಉದ್ದೇಶಗಳಿಗಾಗಿ ಮಾತ್ರ ಬಳಕೆ ಮಾಡಲು ಅವಕಾಶವಿರುತ್ತದೆ.

ರಾಜ್ಯದ ವಿದ್ಯುತ್ ಕಂಪನಿಗಳಲ್ಲಿ ನೀಡಿದ್ದ ಠೇವಣಿ ಹಣ ನಷ್ಟವಾಗಿರುವುದು

165 (500) ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ 2007–08ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಇಟ್ಟ ಹಣವೆಷ್ಟು; ಹಾಗೂ ಠೇವಣಿ ಇಟ್ಟ ಹಣವನ್ನು ನಷ್ಟ ಮಾಡಲು ಕಾರಣಗಳೇನು; 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಆ) 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಇ) ಗುಲ್ಬರ್ಗಾ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಈ) ಚಾಮುಂಡಿ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಉ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಲು ಮೊತ್ತವೆಷ್ಟು, ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ 2007–08 ನೇ ಸಾಲಿನ ವಾರ್ಷಿಕ ವರದಿಯಲ್ಲಿರುವಂತೆ, 2007–08ನೇ ಸಾಲಿನ ಅಂತ್ಯದಲ್ಲಿ ರೂ.318.03 ಕೋಟಿಗಳ ನಿಶ್ಚಿತ ಠೇವಣಿ ಇದ್ದಿತ್ತು. 2008–09ನೇ ಸಾಲಿನಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿದ್ದರಿಂದ ಸದರಿ ಮೊತ್ತವನ್ನು ಬಳಸಿಕೊಳ್ಳಲಾಗಿರುತ್ತದೆ.

2008–09ನೇ ಸಾಲಿನ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವಾರ್ಷಿಕ ವರದಿಯ ಪ್ರಕಾರ ರೂ.588.24 ಕೋಟಿಗಳಷ್ಟು ನಷ್ಟವುಂಟಾಗಿರುತ್ತದೆ. 2009–10ನೇ ಸಾಲಿನಲ್ಲಿ ರೂ.791.74 ಕೋಟಿಗಳ ಅಂದಾಜು ನಷ್ಟವನ್ನು ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದ್ದು, ವಿದ್ಯುತ್ ದರ ಪರಿಷ್ಕರಣೆಯಿಂದ (ಉಳಿದಿರುವ 3 ತಿಂಗಳಿಗೆ) ರೂ.134.50 ಕೋಟಿಗಳನ್ನು ನಿರೀಕ್ಷಿಸಲಾಗಿದೆ ಮತ್ತು ರೂ.253.73 ಕೋಟಿಗಳನ್ನು ಹೆಚ್ಚುವರಿ ಅನುದಾನವಾಗಿ ಸರ್ಕಾರದಿಂದ ಪಡೆಯಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಆದೇಶಿಸಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ರೂ.403.50 ಕೋಟಿಗಳ ನಷ್ಟವನ್ನು ಅಂದಾಜು ಮಾಡಲಾಗಿದೆ.

ನಷ್ಟಕ್ಕೆ ಮುಖ್ಯ ಕಾರಣಗಳು ಕೆಳಕಂಡಂತಿವೆ :–

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿದ್ದರಿಂದ ಉಂಟಾಗಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಸದರಿ ಮೊತ್ತವನ್ನು ಗ್ರಾಹಕರಿಗೆ ವರ್ಗಾಯಿಸಲು ನಿರಾಕರಿಸಿದೆ. ಸದರಿ ನಷ್ಟದ ಮೊತ್ತವು ರಾಜ್ಯ ಸರ್ಕಾರವು ಉಚಿತ ವಿದ್ಯುತ್ ನೀಡುತ್ತಿರುವ ರೈತರ ಪಂಪುಸೆಟ್ಟುಗಳಿಂದ ಉಂಟಾಗಿದೆಯೆಂದು ಆಯೋಗವು ತೀರ್ಮಾನಿಸಿರುವುದರಿಂದ ಸದರಿ ಮೊತ್ತವನ್ನು ರಾಜ್ಯ ಸರ್ಕಾರವು ಭರಿಸಬೇಕೆಂದು ಆದೇಶಿಸಿದೆ. ಈ ಆದೇಶದ ಬಗ್ಗೆ ರಾಜ್ಯ ಸರ್ಕಾರವು ನಿಯಂತ್ರಣ ಆಯೋಗದ ಆದೇಶವನ್ನು ಪುನಃ ಪರಿಶೀಲನೆ ಮಾಡಬೇಕೆಂದು ದಿನಾಂಕ: 25–2–2010 ರಲ್ಲಿ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದೆ.

2007–08 ಮತ್ತು 2008–09ರ ವರ್ಷಗಳಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	12.57
2008–09	(–) 588.24 (ನಷ್ಟ)

ಆ) ರೂ.41.33 ಕೋಟಿಯಷ್ಟು ನಷ್ಟ ಉಂಟಾಗಿರುತ್ತದೆ. ಹೆಚ್ಚಿನ ದರದ ವಿದ್ಯುತ್ ಖರೀದಿಯಿಂದ ಮತ್ತು 2005ನೇ ಟ್ಯಾರಿಫ್ ದರವು 2008–09ರಲ್ಲಿ ಪರಿಷ್ಕೃತಗೊಳ್ಳದೇ ಇರುವುದು ಈ ನಷ್ಟಕ್ಕೆ ಮುಖ್ಯ ಕಾರಣವಾಗಿದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಇ) ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಲಾಭ/ನಷ್ಟ ಉಂಟಾಗಿರುವ ಮೊತ್ತದ ವಿವರಗಳು ಈ ಕೆಳಗಿನಂತಿದೆ.

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	3.12
2008–09	(–) 198.16 (ನಷ್ಟ)

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿರುವುದು ಮುಖ್ಯ ಕಾರಣವಾಗಿರುತ್ತದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಈ) 2007–08 ಮತ್ತು 2008–09ರ ವರ್ಷಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:–

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	0.51
2008–09	(–) 221.0 (ನಷ್ಟ)

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿ ರುವುದು ಮುಖ್ಯ ಕಾರಣವಾಗಿರುತ್ತದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಉ) 2007–08 ಮತ್ತು 2008–09 ರ ವರ್ಷಗಳಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:–

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	8.85
2008–09	(–) 560.25 (ನಷ್ಟ)

2008-09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ಸರ್ಕಾರ ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿರುವುದು ಹಾಗೂ ಹೆಸ್ಕಾಂ ಕಳೆದ ವರ್ಷಕ್ಕಿಂತ ರೂ.33.76 ಕೋಟಿಯಷ್ಟು ಹೆಚ್ಚಿಗೆ ಸಾಲದ ಮರುಪಾವತಿಯ ಮೇಲೆ ಬಡ್ಡಿಯನ್ನು ಪಾವತಿಸಿರುವುದು ಮುಖ್ಯ ಕಾರಣಗಳಾಗಿರುತ್ತವೆ.

2009-10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ವಿಜಯನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಪೇದೆಗಳ ಕೊರತೆ

168 (477) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಮಂಜೂರಾಗಿರುವ ಪೊಲೀಸ್ ಪೇದೆ/ಮುಖ್ಯ ಪೇದೆ ಹುದ್ದೆಗಳೆಷ್ಟು;

ಆ) ಕೊರತೆಯಿರುವ ಸಿಬ್ಬಂದಿಯಿಂದಾಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿದಿನ ಸರಗಳ್ಳತನ, ಮನೆಗಳ್ಳತನ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಹುದ್ದೆಗಳನ್ನು ತುಂಬಲು ಹಾಗೂ ಅಪರಾಧಗಳನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು;

ಡಾ|| ವಿ.ಎಸ್. ಆಚಾರ್ಯ (ಗೃಹ ಸಚಿವರು) :

ಅ) ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳು: 258 ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ಗಳ ಹುದ್ದೆಗಳು:92

ಆ) ಇಲ್ಲ.

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಪೊಲೀಸ್ ಠಾಣಾಧಿಕಾರಿಗಳಿಗೆ ಅಪರಾಧಗಳನ್ನು ತಡೆಗಟ್ಟಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. ಅಲ್ಲದೆ, ರಾತ್ರಿ ಮತ್ತು ಹಗಲು ಗಸ್ತು ಕರ್ತವ್ಯವನ್ನು ನಿರ್ವಹಿಸಲು ಕಟ್ಟುನಿಟ್ಟಿನ ಕ್ರಮವನ್ನು ಸಹ ಕೈಗೊಳ್ಳಲಾಗಿದೆ. ಅಪರಾಧಗಳನ್ನು ತಡೆಗಟ್ಟಲು ನುರಿತ ಸಿಬ್ಬಂದಿಗಳ ವಿಶೇಷ ತಂಡಗಳನ್ನು ರಚಿಸಿ ಅಪರಾಧತಡೆ ಮಾಸ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನಸಾಮಾನ್ಯರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ ಮೂಲಕ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟಲು ಮತ್ತು ಶೀಘ್ರವಾಗಿ ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗಿದೆ.

ವಿಜಯನಗರ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

170 (479) ಶ್ರೀ ಎಂ. ಕೃಷ್ಣಪ್ಪ (ವಿಜಯನಗರ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಬೇಸಿಗೆಯಲ್ಲಿ ಸಮರ್ಪಕ ಕುಡಿಯುವ ನೀರು ವಿತರಣೆ ಮಾಡಲು ಕೈಗೊಂಡ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹೌದು.

ಆ) ವಿಜಯನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 23,000 ಸಂಪರ್ಕಗಳಿದ್ದು, ಈ ಕ್ಷೇತ್ರದಲ್ಲಿ ಪ್ರತಿ ನಾಗರೀಕರಿಗೆ ದಿನಂಪ್ರತಿ ಸರಾಸರಿ 100 ಲೀಟರ್ ನೀರು ಸರಬರಾಜಾಗುತ್ತಿರುತ್ತದೆ. ಬೇಸಿಗೆ ಸಮಯದಲ್ಲಿ ನೀರಿನ ಬೇಡಿಕೆ ಸರಿದೂಗಿಸಲು ಹಾಲಿ ಇರುವ 217 ವಿದ್ಯುತ್ ಚಾಲಿತ ಕೊಳವೆ ಬಾವಿಗಳು ಹಾಗೂ 223 ಕೈಚಾಲಿತ ಕೊಳವೆ ಬಾವಿಗಳ ಜೊತೆಗೆ ಹೊಸದಾಗಿ 33 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಇದಲ್ಲದೇ ತುರ್ತು ಸಮಯದಲ್ಲಿ ನೀರು ಸರಬರಾಜು

ಮಾಡಲು 4 ಲಾರಿ ಟ್ಯಾಂಕರ್‌ಗಳಿದ್ದು, ಇವುಗಳಿಂದಲೂ ಸಹ ನೀರು ಸರಬರಾಜು ಮಾಡುತ್ತಿರುತ್ತದೆ.

ಕೊಳಚೆ ಪ್ರದೇಶದ ನಿವಾಸಿಗಳು ಹಾಗೂ ಬಡಜನರು ವಾಸಿಸುವ ಸ್ಥಳಗಳಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ 521 ಸಾರ್ವಜನಿಕ ಕೊಳಾಯಿ ಗಳಿಂದ ನೀರು ವಿತರಣೆ ಮಾಡಲಾಗುತ್ತಿರುತ್ತದೆ.

ಇ)

1. ನಗರದಲ್ಲಿ ಮುಖ್ಯ ನೀರು ಸರಬರಾಜು ಸ್ಥಾವರಗಳಾದ ಸಿ.ಜೆ.ಎಫ್ ಮಲ್ಲೇಶ್ವರಂ, ಎಲ್.ಎಲ್.ಆರ್ ರೇಸ್‌ಕೋರ್ಸ್ ರಸ್ತೆ, ಹೆಗ್ಗನಹಳ್ಳಿ, ಹೊಸಹಳ್ಳಿ ಮತ್ತು ಹೆಚ್.ಜಿ.ಆರ್ ಹೈಗ್ರೌಂಡ್ಸ್ ಸ್ಥಳಗಳಲ್ಲಿ ನೀರು ಸರಬರಾಜು ಅಡಚಣೆ ಇಲ್ಲದೆ ಕಾರ್ಯನಿರ್ವಹಿಸಲು ವಿದ್ಯುತ್ ಜನರೇಟರ್ ಗಳನ್ನು ಅಳವಡಿಸಲಾಗಿದೆ.
2. ತುರ್ತು ನೀರಿನ ಸಮಸ್ಯೆಯನ್ನು ನೀಗಿಸಲು ನಗರದಲ್ಲಿ 45 ಲಾರಿ ನೀರಿನ ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
3. ದುರಸ್ಥಿಯಲ್ಲಿರುವ ಕೊಳವೆ ಬಾವಿಗಳನ್ನು ತುರ್ತಾಗಿ ದುರಸ್ಥಿಗೊಳಿಸಿ ಸೇವೆಗೆ ಪುನರ್ ಕಲ್ಪಿಸಲಾಗುತ್ತಿದೆ.
4. ನೀರಿನ ಬೇಡಿಕೆ ಗಮನಿಸಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯ ಪ್ರಗತಿಯಲ್ಲಿವೆ.
5. ಕಾವೇರಿ ಮೂಲದಿಂದ ಪಂಪ್ ಮಾಡುವ ಮುಖ್ಯ ಸ್ಥಾವರಗಳಲ್ಲಿ ಮತ್ತು ನಗರದ ಪಂಪಿಂಗ್ ಸ್ಥಾವರಗಳಲ್ಲಿ ವಿದ್ಯುತ್ ವ್ಯತ್ಯಯ ಆಗದೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಬೆಸ್ಕಾಂ ಜೊತೆ ವ್ಯವಹರಿಸಲಾಗಿದೆ.

ಮೆಟ್ರೋ ಕಾಮಗಾರಿ ವಿಳಂಬದ ಬಗ್ಗೆ

172 (481) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕಡೆ ಮೆಟ್ರೋ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ;

ಆ) ಈ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣವೇನು;

ಇ) ಇದರಿಂದಾಗಿ ಸಂಚಾರ ದಟ್ಟಣೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರಿಕಿರಿಯನ್ನು ತಪ್ಪಿಸಲು ಕೈಗೊಂಡ ಕ್ರಮಗಳೇನು;

ಈ) ಎಷ್ಟು ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ವಿಜಯನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಮೆಟ್ರೊ ಕಾಮಗಾರಿಯು ಗಾಯಿತ್ರಿ ಫ್ಲೋರ್ ಮಿಲ್ (ಶಂಕರಪ್ಪ ಗಾರ್ಡನ್) ನಿಂದ ಮಾಗಡಿ ರಸ್ತೆ (ಮಾಗಡಿ ರಸ್ತೆ ಮೆಟ್ರೋ ನಿಲ್ದಾಣ)ದವರೆಗೆ ಪ್ರಗತಿಯಲ್ಲಿದೆ. ಈ ಕಾಮಗಾರಿ ರೀಚ್-2 (ಕುಷ್ಠರೋಗ ಆಸ್ಪತ್ರೆಯಿಂದ ನಾಯಂಡಳ್ಳಿಯವರೆಗೆ ಒಟ್ಟು 5.90 ಕಿ.ಮೀ)ನ ಒಂದು ಭಾಗವಾಗಿದೆ.

ಆ) ಮೆಟ್ರೋ ಕಾಮಗಾರಿಯು ಇಲ್ಲಿ ಸ್ವಲ್ಪ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳು:

- ಭೂಮಿಯ ಕೆಳಗಿರುವ ಹಲವಾರು utility ಗಳ ಬಗ್ಗೆ ದಾಖಲೆ/ಮಾಹಿತಿ ಇಲ್ಲ. ಭೂಮಿಯನ್ನು ಅಗೆದಾಗ, ಅವುಗಳನ್ನು ಕಂಡಾಗ, ಅವುಗಳನ್ನು ಸ್ಥಳಾಂತರಿಸಬೇಕಾಗುತ್ತದೆ. ಇದರಿಂದ ವಿಳಂಬವಾಗುತ್ತಿದೆ.
- ಭೂ ಸ್ವಾಧೀನಾ ಹಾಗೂ ಸ್ವತ್ತು ಸ್ವಾಧೀನ ಪ್ರಕ್ರಿಯೆಯಲ್ಲಿ ಅಡಚಣೆಗಳು.

ಇ) ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಮೆಟ್ರೋ ಕಾಮಗಾರಿ ನಡೆಯುವ ಹಲವಾರು ಕಡೆ ರಸ್ತೆಯನ್ನು ಅಗಲೀಕರಿಸಲಾಗಿದೆ. ದೀಪಾಂಜಲಿ ನಗರ ದವರೆಗೆ ತಡೆಗಟ್ಟುಗಳನ್ನು (Barricading) ನಿಲ್ಲಿಸಿ ಇಕ್ಕೆಲಗಳಲ್ಲಿ ವಾಹನಗಳು ಒಂದು ಲೇನ್‌ನಲ್ಲಿ ಸಾಗುವಂತೆ ಹಾಗೂ ಮೈಸೂರು ರಸ್ತೆಯಲ್ಲಿ ವಾಹನಗಳು 2 ಲೇನ್‌ಗಳಲ್ಲಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ.
- ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.
- ವಾಹನ ಸಂಚಾರವನ್ನು ಸರ್ವಿಸ್ ರಸ್ತೆ ಕಡೆಗೆ ತಿರುಗಿಸಿದ ಸಂದರ್ಭಗಳಲ್ಲಿ ವಾಹನಗಳು ಸುಗಮವಾಗಿ ಸಾಗಲು ಸರ್ವಿಸ್ ರಸ್ತೆಗಳನ್ನು ದುರಸ್ತಿಮಾಡಿ ಬಲಪಡಿಸಲಾಗುತ್ತಿದೆ.
- ಪಾದಚಾರಿ ಸಂಚಾರವನ್ನು ಸುಗಮಗೊಳಿಸುವುದಕ್ಕಾಗಿ ಹೊಸದಾಗಿ ಫುಟ್‌ಪಾತ್‌ನ್ನು ವಿಜಯನಗರದಿಂದ ದೀಪಾಂಜಲಿನಗರದವರೆಗೆ ನಿರ್ಮಿಸಲಾಗುತ್ತಿದೆ ಮತ್ತು ಈ ಮಾರ್ಗದಲ್ಲಿ ದುರಸ್ತಿಯಲ್ಲಿದ್ದ ಪಾದಚಾರಿ ಮಾರ್ಗವನ್ನು ಸುಭದ್ರಸ್ಥಿತಿಗೆ ತರಲು ಕಾಮಗಾರಿ ಕೈಗೊಳ್ಳಲಾಗುತ್ತಿದೆ.

ಈ) ರೀಚ್-2ರ ಕಾಮಗಾರಿಯನ್ನು (ಕುಷ್ಠರೋಗ ಆಸ್ಪತ್ರೆಯಿಂದ ನಾಯಂಡನಹಳ್ಳಿಯವರೆಗೆ) ಸೆಪ್ಟೆಂಬರ್ 2012 ರಲ್ಲಿ ಪೂರ್ಣಗೊಳಿಸಲು ಗುರಿಹೊಂದಲಾಗಿದೆ.

ನಗರ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ

173 (474) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ. ಹಾಗೂ 110 ಗ್ರಾಮಗಳಿಗೆ 01.01.2008 ರಿಂದ 20.02.2010 ರವರೆಗೆ ಬೆಂಗಳೂರು ನಗರದ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳೇನು; ಇದಕ್ಕೆ ಖರ್ಚು

ಮಾಡಿದ ಹಣವೆಷ್ಟು; (ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ ಹಾಗೂ 110 ಗ್ರಾಮಗಳ ಪೂರ್ಣ ಮಾಹಿತಿ ನೀಡುವುದು);

ಆ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ ಹಾಗೂ 110 ಗ್ರಾಮಗಳ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ 2008–09, 2009–10 ರಲ್ಲಿ ಹಾಗೂ 2010–2011 ರಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಗಳ ಕಾಮಗಾರಿಗಳ ಬಗ್ಗೆ ಯಾವ ಯಾವ ಟೆಂಡರ್ ಕರೆಯಲಾಗಿದೆ. ಅದರ ಸಂಪೂರ್ಣ ವಿವರ ಹಾಗು ಯಾವ ಯಾವ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡಲಾಗಿದೆ; ವಿಳಾಸದೊಂದಿಗೆ ಪೂರ್ಣ ಮಾಹಿತಿ ನೀಡುವುದು;

ಇ) ಬೆಂಗಳೂರು ನಗರ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ. ಹಾಗೂ 110 ಗ್ರಾಮಗಳ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ಯಾವ ಮಾನದಂಡವನ್ನು ಅಳವಡಿಸಲಾಗುವುದು; ಇದರ ಪೂರ್ಣ ಮಾಹಿತಿ ನೀಡುವುದು;

ಈ) ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ 110 ಗ್ರಾಮಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ವಿವರವಾದ ಪ್ರಾಜೆಕ್ಟ್ ರಿಪೋರ್ಟ್ ಅನ್ನು ತಯಾರು ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ 110 ಗ್ರಾಮಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಹಣಕಾಸು ವ್ಯವಸ್ಥೆ ಇರುತ್ತದೆಯೇ; ಹಾಗಿಲ್ಲದಿದ್ದಲ್ಲಿ ಯಾವ ರೀತಿ ವ್ಯವಸ್ಥೆ ಮಾಡಲಾಗುತ್ತದೆ;

ಉ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ ಹಾಗೂ 110 ಗ್ರಾಮಗಳಿಗೆ 2008–09, 2009–10ರಲ್ಲಿ ಹಾಗೂ 2010–2011 ರಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಗಳ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ: ವರ್ಷವಾರು ಪೂರ್ಣ ಮಾಹಿತಿ ನೀಡುವುದು;

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿರುವ ಹಿಂದಿನ ಸಿ.ಎಂ.ಸಿ ಪ್ರದೇಶಗಳಿಗೆ ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆಯಡಿಯಲ್ಲಿ ಕುಡಿಯುವ ನೀರು ಒದಗಿಸುವ ಕೊಳವೆ ಜಾಲವನ್ನು ರೂ. 410.00 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಿಶ್ವ ಬ್ಯಾಂಕ್ ಹಾಗೂ ಕರ್ನಾಟಕ ಪುರ ಸುಧಾರಣಾ ಯೋಜನೆ ಹಾಗೂ ಜವಾಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನದ ಆರ್ಥಿಕ ಸಹಾಯದಡಿಯಲ್ಲಿ ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲಸಗಳನ್ನು 2010ರಲ್ಲಿ ಪ್ರಾರಂಭವಾಗಿ 2013 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ 110 ಗ್ರಾಮಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳನ್ನು ಒದಗಿಸಲು ಸವಿಸ್ತಾರವಾದ ಯೋಜನಾ ವರದಿಯನ್ನು ರೂ. 2308.00 ಕೋಟಿಗಳಿಗೆ ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಹಿಂದಿನ 7 ನಗರಸಭೆ 1 ಪುರಸಭೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ನೀರು ಸರಬರಾಜು ವ್ಯವಸ್ಥೆಯನ್ನು ಬೆಂಗಳೂರು ಜಲಮಂಡಳಿ ದಿನಾಂಕ: 1.4.2008 ರಿಂದ ವಹಿಸಿಕೊಂಡಿರುತ್ತದೆ. ತದನಂತರ ಈ ಸ್ಥಳಗಳಲ್ಲಿ ಹಾಲಿ ಚಾಲ್ತಿಯಲ್ಲಿದ್ದ 3166 ಕೊಳವೆ ಬಾವಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಜಲಮಂಡಳಿಗೆ ಹಸ್ತಾಂತರ ಗೊಂಡಿರುತ್ತವೆ. ಇವುಗಳ ನಿರ್ವಹಣೆಗೆ ಮಾಹೆಯಾದ ರೂ. 1.00 ಕೋಟಿ ವಿದ್ಯುತ್‌ಚ್ಛಕ್ತಿ ಬಿಲ್ ಮತ್ತು ರೂ. 1.00 ಕೋಟಿ ನಿರ್ವಹಣಾ ವೆಚ್ಚವಾಗುತ್ತದೆ. ಈ ಸ್ಥಳಗಳಲ್ಲಿ ಹೊಸದಾಗಿ 1360 ಕೊಳವೆ ಬಾವಿಗಳನ್ನು ಸುಮಾರು ರೂ 46/- ಕೋಟಿ ವೆಚ್ಚದಲ್ಲಿ ಕೊರೆದು ನಾಗರೀಕರ ಸೇವೆಗೆ ಸಮರ್ಪಿಸಿರುತ್ತದೆ.

ಈ ಪ್ರದೇಶಗಳಲ್ಲಿ ಬರುವ 72 ವಿಭಾಗಗಳಲ್ಲಿ ಸುಮಾರು 29.300 ನೀರಿನ ಸಂಪರ್ಕಗಳನ್ನು ಮಂಜೂರು ಮಾಡಿ ಮಾಪನ ಅಳವಡಿಸಿ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿರುತ್ತದೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಹಳೇ ಸಿ.ಎಂ.ಸಿ ಹಾಗೂ 110 ಗ್ರಾಮಗಳ ಪೂರ್ಣ ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ.

ಆ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಹಿಂದಿನ ಸಿ.ಎಂ.ಸಿ ಪ್ರದೇಶಗಳಲ್ಲಿ 2009 ಡಿಸೆಂಬರ್‌ನಲ್ಲಿ ಆರು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಅವುಗಳ ವಿವರ ಕೆಳಗಿನಂತಿವೆ.

ಹಿಂದಿನ ನಗರಸಭಾ ಪ್ರದೇಶದಲ್ಲಿ ಕುಡಿಯುವ ನೀರಿನ ಕೊಳವೆ ಜಾಲ ನಿರ್ಮಿಸುವ ಕಾಮಗಾರಿಗಳ ವಿವರ ಈ ಕೆಳಗಿನಂತಿರುತ್ತದೆ.

<table>
<tr><th>ಕಾಮಗಾರಿಯ ಹೆಸರು</th><th>ವಹಿಸಿಕೊಟ್ಟ ದರ</th><th>ಗುತ್ತಿಗೆದಾರರ ಹೆಸರು ಮತ್ತು ವಿಳಾಸ</th></tr>
<tr><td>ಮಹದೇವಪುರ</td><td>ರೂ.7.97 ಕೋಟಿ</td><td>M/s Vishwa Infrastructure and Services Pvt. Ltd.</td></tr>
<tr><td>ಕೃಷ್ಣರಾಜಪುರ</td><td>ರೂ.7.28 ಕೋಟಿ</td><td rowspan="2">1-1-256/C/24, Plot No. 24, Gagan Vihar Colony, Begumpat, Hyderabad-500 016.</td></tr>
<tr><td>ದಾಸರಹಳ್ಳಿ</td><td>ರೂ.5.47 ಕೋಟಿ</td></tr>
<tr><td>ಬ್ಯಾಟರಾಯನಪುರ</td><td>ರೂ.3.91 ಕೋಟಿ</td><td rowspan="2">M/s Maloo Construction #A-204/205, 2nd Floor, Brigade Majestic No. 25/26, Ist main, Gandhinagar, Bangalore-560009</td></tr>
<tr><td>ಬೊಮ್ಮನಹಳ್ಳಿ</td><td>ರೂ.5.36 ಕೋಟಿ</td></tr>
<tr><td>ರಾಜರಾಜೇಶ್ವರಿ ನಗರ ಮತ್ತು ಕೆಂಗೇರಿ</td><td>ರೂ.6.63 ಕೋಟಿ</td><td>M/s. Shonan Engineering Works Pvt. Ltd., No.4, Sai Complex, Opp Hotel Roopali, F.C.Road, Poona-411 004.</td></tr>
</table>

ವಿಶ್ವಬ್ಯಾಂಕಿನ ಆರ್ಥಿಕ ನೆರವಿನಡಿಯಲ್ಲಿ ಕರ್ನಾಟಕ ಪುರ ಸುಧಾರಣಾ ಯೋಜನೆ ಹಾಗೂ ಕೇಂದ್ರ ಸರ್ಕಾರದ ಜವಹಾರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನ ಅಡಿಯಲ್ಲಿ ಈ ಕೆಳಗಿನ ಒಳಚರಂಡಿ ಕಾರ್ಯಗಳನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ವಹಿಸಿಕೊಟ್ಟಿರುವ 7 ಕಾಮಗಾರಿಗಳ ವಿವರಗಳು ಕೆಳಗಿನಂತಿರುತ್ತದೆ.

ಕಾಮಗಾರಿಯ ಹೆಸರು	ವಹಿಸಿಕೊಟ್ಟ ದರ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ
ಬೊಮ್ಮನಹಳ್ಳಿ 4E	ರೂ. 68.57 ಕೋಟಿ	M/s IVRCL Infrastructure & Projects Ltd. No. 438, Ist Floor, 18th Main, 6th Block, Koramangala, Bangalore-560096
ಬೊಮ್ಮನಹಳ್ಳಿ 4F	ರೂ.29.81 ಕೋಟಿ	
ಕೃಷ್ಣರಾಜಪುರ	ರೂ.38.26 ಕೋಟಿ	M/s Ramky Infrastructure Ltd., Ramky House, Site No. 25-30, 2nd Cross Raghavendra nagar, Hennur Ring Road, Kalyan Nagar Post, Bangalore-560043.
ಕೃಷ್ಣರಾಜಪುರ 3A	ರೂ.65.35 ಕೋಟಿ	M/s. ICOMM SIERRA Infra JV Head Off: 3rd
ಕೃಷ್ಣರಾಜಪುರ 3C	ರೂ.48.91 ಕೋಟಿ	
ರಾಜರಾಜೇಶ್ವರಿನಗರ 5A	ರೂ.31.91 ಕೋಟಿ	

ಕೆಂಗೇರಿ 06	ರೂ.42.22 ಕೋಟಿ	Floor, Trendset Towers, Road No.2, Banjara Hills, Hyderabad-500034

ಇ) ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ CPHEEO (Central Public Health Environment Engineering Organisation) ನ ಮಾನದಂಡದಂತೆ ಕೆಲಸಗಳನ್ನು ಮಾಡಲಾಗುವುದು.

ಈ) ವಿವರವಾದ ಪ್ರಾಜೆಕ್ಟ್ ರಿಪೋರ್ಟನ್ನು CPHEEO ಮಾನದಂಡದಂತೆ ತಯಾರು ಮಾಡಲಾಗಿದ್ದು, ಪರಿಶೀಲನೆಯಲ್ಲಿದೆ.

ಉ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಿಂದಿನ ಸಿ.ಎಂ.ಸಿ ಪ್ರದೇಶದಲ್ಲಿ ಕುಡಿಯುವ ನೀರಿನ ಕಾಮಗಾರಿಗಳಿಗಾಗಿ 2008-09 ರಲ್ಲಿ ರೂ.79.71 ಕೋಟಿ ಹಾಗೂ 2009-10 ರಲ್ಲಿ ರೂ. 21-70 ಕೋಟಿ ಹಣವನ್ನು ಖರ್ಚು ಮಾಡಲಾಗಿದೆ.

ಒಳಚರಂಡಿ ಯೋಜನಾ ಕಾಮಗಾರಿಗಳು ಇದೀಗ ಪ್ರಾರಂಭವಾಗಿವೆ. 2008-09ರಲ್ಲಿ ರೂ. 0.96 ಕೋಟಿ ಹಾಗೂ 2009-10 ರಲ್ಲಿ ರೂ. 0.69 ಕೋಟಿ ಹಣವನ್ನು ಖರ್ಚು ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:474 ಕ್ಕೆ ಅನುಬಂಧ

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಸಿ.ಎಂ.ಸಿ.ಗಳು:-

(1) ಹಾಲಿ ರಾಜರಾಜೇಶ್ವರಿ ನಗರ ಸಭೆ ಕ್ಷೇತ್ರ
(2) ಹಾಲಿ ದಾಸರಹಳ್ಳಿ ನಗರ ಸಭೆ ಕ್ಷೇತ್ರ
(3) ಹಾಲಿ ಬೊಮ್ಮನಹಳ್ಳಿ ನಗರ ಸಭೆ ಕ್ಷೇತ್ರ
(4) ಹಾಲಿ ಕೃಷ್ಣರಾಜಪುರಂ ನಗರ ಸಭೆ ಕ್ಷೇತ್ರ
(5) ಹಾಲಿ ಮಹದೇವಪುರ ನಗರ ಸಭೆ ಕ್ಷೇತ್ರ
(6) ಹಾಲಿ ಬ್ಯಾಟರಾಯನಪುರ ನಗರ ಸಭೆ ಕ್ಷೇತ್ರ
(7) ಹಾಲಿ ಯಲಹಂಕ ನಗರ ಸಭೆ ಕ್ಷೇತ್ರ
(8) ಹಾಲಿ ಕೆಂಗೇರಿ ಪುರಸಭೆ ಕ್ಷೇತ್ರ,

(9) ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಮೇಲ್ಕಂಡ ನಗರಸಭೆಗಳು/ ಪುರಸಭೆಗಳಿಗೆ ಹೊಂದಿಕೊಂಡಂತೆ ಹಳ್ಳಿಗಳನ್ನು ಈ ಕೆಳಕಂಡ ಕಲಂ.4ರಲ್ಲಿ ನಮೂದಿಸಿದೆ.

ಕ್ರ ಸಂ.	ತಾಲ್ಲೂಕು	ಗ್ರಾಮ ಪಂಚಾಯತ್	ಗ್ರಾಮ
1	2	3	4
1	ಆನೇಕಲ್	ಕೂಡ್ಲು	ಕೂಡ್ಲು
2	ಬೆಂಗಳೂರು ಪೂರ್ವ	ಆವಲಹಳ್ಳಿ	ವಾರಣಾಸಿ
3	ಬೆಂಗಳೂರು ಪೂರ್ವ	ಬೆಳ್ಳಂದೂರು	ಅಂಬಲೀಪುರ
4	ಬೆಂಗಳೂರು ಪೂರ್ವ	ಬೆಳ್ಳಂದೂರು	ಬೆಳ್ಳಂದೂರು
5	ಬೆಂಗಳೂರು ಪೂರ್ವ	ಬೆಳ್ಳಂದೂರು	ಬೆಳ್ಳಂದೂರು ಅಮಾನಿಕೆರೆ(ಬಿ) (ಸಿ)
6	ಬೆಂಗಳೂರು ಪೂರ್ವ	ಬೆಳ್ಳಂದೂರು	ದೇವರಬಿಸನಹಳ್ಳಿ
7	ಬೆಂಗಳೂರು ಪೂರ್ವ	ಬೆಳ್ಳಂದೂರು	ಹರಳೂರು
8	ಬೆಂಗಳೂರು ಪೂರ್ವ	ಬೆಳ್ಳಂದೂರು	ಕರಿಯಮ್ಮನ ಅಗ್ರಹಾರ
9	ಬೆಂಗಳೂರು ಪೂರ್ವ	ಚನ್ನಸಂದ್ರ	ಚನ್ನಸಂದ್ರ
10	ಬೆಂಗಳೂರು ಪೂರ್ವ	ಚನ್ನಸಂದ್ರ	ಕಾಡುಗೋಡಿ ಪ್ಲಾಂಟೇಷನ್
11	ಬೆಂಗಳೂರು ಪೂರ್ವ	ಚನ್ನಸಂದ್ರ	ಕುಂಟೇನ್ ಅಗ್ರಹಾರ
12	ಬೆಂಗಳೂರು ಪೂರ್ವ	ದಾಸರಹಳ್ಳಿ	ದಾಸರಹಳ್ಳಿ
13	ಬೆಂಗಳೂರು ಪೂರ್ವ	ದಾಸರಹಳ್ಳಿ	ರಾಚೇನಹಳ್ಳಿ
14	ಬೆಂಗಳೂರು ಪೂರ್ವ	ದೊಡ್ಡಗುಬ್ಬಿ	ಬಳಿಶಿವಾಲೆ
15	ಬೆಂಗಳೂರು ಪೂರ್ವ	ದೊಡ್ಡಗುಬ್ಬಿ	ಭೈರತಿ
16	ಬೆಂಗಳೂರು ಪೂರ್ವ	ದೊಡ್ಡಕನ್ನಳ್ಳಿ	ದೊಡ್ಡಕನ್ನಳ್ಳಿ
17	ಬೆಂಗಳೂರು ಪೂರ್ವ	ದೊಡ್ಡಕನ್ನಳ್ಳಿ	ಚುನ್ನಸಂದ್ರ

18	ಬೆಂಗಳೂರು ಪೂರ್ವ	ದೊಡ್ಡಕನ್ನಲ್ಲಿ	ಕೈಕೊಂಡ್ರಹಳ್ಳಿ
19	ಬೆಂಗಳೂರು ಪೂರ್ವ	ದೊಡ್ಡಕನ್ನಲ್ಲಿ	ಕಸವನಹಳ್ಳಿ
20	ಬೆಂಗಳೂರು ಪೂರ್ವ	ಗುಂಜೂರು	ಗುಂಜೂರು
21	ಬೆಂಗಳೂರು ಪೂರ್ವ	ಹಗದೂರು	ಹಗದೂರು
22	ಬೆಂಗಳೂರು ಪೂರ್ವ	ಹಗದೂರು	ನಾಗೊಂಡಹಳ್ಳಿ
23	ಬೆಂಗಳೂರು ಪೂರ್ವ	ಹೊರಮಾವು	ಕೆ.ಚನ್ನಸಂದ್ರ
24	ಬೆಂಗಳೂರು ಪೂರ್ವ	ಹೊರಮಾವು	ಕಲ್ಕೆರೆ
25	ಬೆಂಗಳೂರು ಪೂರ್ವ	ಹೊರಮಾವು/ಅಗರ	ಅಮಾನಿ ಬೈರತಿಖಾನೆ(ಬಿ)
26	ಬೆಂಗಳೂರು ಪೂರ್ವ	ಹೊರಮಾವು/ಅಗರ	ಚೇಳಿಕೆರೆ
27	ಬೆಂಗಳೂರು ಪೂರ್ವ	ಹೊರಮಾವು/ಅಗರ	ಹೊರಮಾವು/ ಅಗರ
28	ಬೆಂಗಳೂರು ಪೂರ್ವ	ಕೆ. ನಾರಾಯಣಪುರ	ಗೆದ್ದಲಹಳ್ಳಿ
29	ಬೆಂಗಳೂರು ಪೂರ್ವ	ಕೆ. ನಾರಾಯಣಪುರ	ಕೊತ್ತನೂರು ನಾರಾಯಣಪುರ
30	ಬೆಂಗಳೂರು ಪೂರ್ವ	ಕೆ. ನಾರಾಯಣಪುರ	ಕೊತ್ತನೂರು
31	ಬೆಂಗಳೂರು ಪೂರ್ವ	ಕೆ. ನಾರಾಯಣಪುರ	ಕ್ಯಾಲಸನಹಳ್ಳಿ
32	ಬೆಂಗಳೂರು ಪೂರ್ವ	ಕೊಡತಿ	ಬೆಳ್ಳಂದೂರು
33	ಬೆಂಗಳೂರು ಪೂರ್ವ	ಪಣತ್ತೂರು	ಬಳ್ಳಗೆರೆ
34	ಬೆಂಗಳೂರು ಪೂರ್ವ	ಪಣತ್ತೂರು	ಪಣತ್ತೂರು
35	ಬೆಂಗಳೂರು ಪೂರ್ವ	ರಾಮಗೊಂಡನಹಳ್ಳಿ	ಸಿದ್ದಾಪುರ
36	ಬೆಂಗಳೂರು ಪೂರ್ವ	ವತ್ತೂರು	ವರ್ತೂರು
37	ಬೆಂಗಳೂರು ಪೂರ್ವ	ಪಣತ್ತೂರು	ಕಾಡುಬೀಸನಹಳ್ಳಿ
38	ಬೆಂಗಳೂರು ಪೂರ್ವ	ಥಣಿಸಂದ್ರ	ಥಣಿಸಂದ್ರ
39	ಬೆಂಗಳೂರು ಪೂರ್ವ	ಹೊರಮಾವು	ಹೊರಮಾವು
40	ಬೆಂಗಳೂರು ಪೂರ್ವ	ಪಣತ್ತೂರು	ಜೋಗನಹಳ್ಳಿ
41	ಬೆಂಗಳೂರು ಪೂರ್ವ	ರಾಮಗೊಂಡನಹಳ್ಳಿ	ರಾಮಗೊಂಡನ ಹಳ್ಳಿ
42	ಬೆಂಗಳೂರು ಪೂರ್ವ	ರಾಮಗೊಂಡನಹಳ್ಳಿ	ತೂಬರಹಳ್ಳಿ

43	ಬೆಂಗಳೂರು ಪೂರ್ವ	ಸೀಗೇಹಳ್ಳಿ	ಬೆಳತ್ತೂರು
44	ಬೆಂಗಳೂರು ಪೂರ್ವ	ಸೊರಹುಣಸೆ	ಸೊರುಹುಣಸೆ
45	ಬೆಂಗಳೂರು ಪೂರ್ವ	ಕೆ.ನಾರಾಯಣಪುರ	ನಗರೇಶ್ವರ ನಾಗೇನಹಳ್ಳಿ
46	ಬೆಂಗಳೂರು ಪೂರ್ವ	ಸೊರಹುಣಸೆ	ಖಾನೆಕಂದಾಯ (ಬಿ)
47	ಬೆಂಗಳೂರು ದಕ್ಷಿಣ	ಅಂಜನಾಪುರ	ಪಿಳ್ಳಗಾನಹಳ್ಳಿ
48	ಬೆಂಗಳೂರು ದಕ್ಷಿಣ	ಬಸವನಪುರ	ಕಮ್ಮನಹಳ್ಳಿ
49	ಬೆಂಗಳೂರು ದಕ್ಷಿಣ	ಬೇಗೂರು	ಬೇಗೂರು
50	ಬೆಂಗಳೂರು ದಕ್ಷಿಣ	ದೊಡ್ಡಕಲ್ಲಸಂದ್ರ	ಹಾಲಳ್ಳಿ
51	ಬೆಂಗಳೂರು ದಕ್ಷಿಣ	ದೊಡ್ಡಕಲ್ಲಸಂದ್ರ	ದೊಡ್ಡಕಲ್ಲಸಂದ್ರ
52	ಬೆಂಗಳೂರು ದಕ್ಷಿಣ	ದೊಡ್ಡತೋಗೂರು	ಬಸಾಪುರ
53	ಬೆಂಗಳೂರು ದಕ್ಷಿಣ	ದೊಡ್ಡತೋಗೂರು	ಚಿಕ್ಕತೋಗೂರು
54	ಬೆಂಗಳೂರು ದಕ್ಷಿಣ	ದೊಡ್ಡತೋಗೂರು	ದೊಡ್ಡತೋ ಗೂರು(ಪಿ)
55	ಬೆಂಗಳೂರು ದಕ್ಷಿಣ	ಗೊಟ್ಟಿಗೆರೆ	ಗೊಟ್ಟಿಗೆರೆ
56	ಬೆಂಗಳೂರು ದಕ್ಷಿಣ	ಹೆಮ್ಮಿಗೆಪುರ	ಗಾಣಕಲ್
57	ಬೆಂಗಳೂರು ದಕ್ಷಿಣ	ಸುಬ್ರಮಣಿಪುರ	ಗುಬ್ಬಲಾಳ
58	ಬೆಂಗಳೂರು ದಕ್ಷಿಣ	ಸುಬ್ರಮಣಿಪುರ	ವಸಂತಪುರ
59	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಉತ್ತರಹಳ್ಳಿ
60	ಬೆಂಗಳೂರು ದಕ್ಷಿಣ	ಅಂಜನಾಪುರ	ಅಂಜನಾಪುರ
61	ಬೆಂಗಳೂರು ದಕ್ಷಿಣ	ಅಂಜನಾಪುರ	ಗೊಲ್ಲಹಳ್ಳಿ
62	ಬೆಂಗಳೂರು ದಕ್ಷಿಣ	ಅಂಜನಾಪುರ	ಕೆಂಬತ್ತಹಳ್ಳಿ
63	ಬೆಂಗಳೂರು ದಕ್ಷಿಣ	ಅಂಜನಾಪುರ	ತಿಪ್ಪಸಂದ್ರ
64	ಬೆಂಗಳೂರು ದಕ್ಷಿಣ	ಬಸವನಪುರ	ಬಸವನಪುರ
65	ಬೆಂಗಳೂರು ದಕ್ಷಿಣ	ಬಸವನಪುರ	ಕಾಳೇನ ಅಗ್ರಹಾರ
66	ಬೆಂಗಳೂರು ದಕ್ಷಿಣ	ಬೇಗೂರು	ಎಳೇನಹಳ್ಳಿ
67	ಬೆಂಗಳೂರು ದಕ್ಷಿಣ	ಹೆಮ್ಮಿಗೆಪುರ	ಲಿಂಗಧೀರನಹಳ್ಳಿ

68	ಬೆಂಗಳೂರು ದಕ್ಷಿಣ	ಕೋನಪ್ಪನ ಅಗ್ರಹಾರ	ಬೆಂಟೇನ ಅಗ್ರಹಾರ
69	ಬೆಂಗಳೂರು ದಕ್ಷಿಣ	ಕೋನಪ್ಪನ ಅಗ್ರಹಾರ	ನಾಗನಾಥಪುರ
70	ಬೆಂಗಳೂರು ದಕ್ಷಿಣ	ಕೋನಪ್ಪನ ಅಗ್ರಹಾರ	ಪರಪ್ಪನ ಅಗ್ರಹಾರ
71	ಬೆಂಗಳೂರು ದಕ್ಷಿಣ	ಸುಬ್ರಮಣ್ಯಪುರ	ಸುಬ್ರಮಣ್ಯಪುರ
72	ಬೆಂಗಳೂರು ದಕ್ಷಿಣ	ಸೂಲಿಗೆರೆ	ಸೋಣ್ಣೇನಹಳ್ಳಿ
73	ಬೆಂಗಳೂರು ದಕ್ಷಿಣ	ಕಲಘಟ್ಟಪುರ	ಹೊಸಹಳ್ಳಿ
74	ಬೆಂಗಳೂರು ದಕ್ಷಿಣ	ಕಲಘಟ್ಟಪುರ	ರಘುವನಹಳ್ಳಿ
75	ಬೆಂಗಳೂರು ದಕ್ಷಿಣ	ತಲಘಟ್ಟಪುರ	ಉತ್ತರಹಳ್ಳಿ ಮನವರ್ತೆ ಕಾವಲ್ (ಪಿ)
76	ಬೆಂಗಳೂರು ದಕ್ಷಿಣ	ತಲಘಟ್ಟಪುರ	ಪಾದರಹಳ್ಳಿ
77	ಬೆಂಗಳೂರು ದಕ್ಷಿಣ	ತಲಘಟ್ಟಪುರ	ತಲಘಟ್ಟಪುರ
78	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಅರೇಹಳ್ಳಿ
79	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಕುರುಹಳ್ಳಿ
80	ಬೆಂಗಳೂರು ದಕ್ಷಿಣ	ಬೇಗೂರು	ಚಂದ್ರಶೇಖರ್ ಪುರ
81	ಬೆಂಗಳೂರು ದಕ್ಷಿಣ	ಹೆಮ್ಮಿಗೆಪುರ	ಹೆಮ್ಮಿಗೆಪುರ
82	ಬೆಂಗಳೂರು ದಕ್ಷಿಣ	ಹಮ್ಮಿಗೆಪುರ	ಸೋಮಪುರ
83	ಬೆಂಗಳೂರು ದಕ್ಷಿಣ	ಹಮ್ಮಿಗೆಪುರ	ವರಹಾಸಂದ್ರ
84	ಬೆಂಗಳೂರು ದಕ್ಷಿಣ	ಸುಬ್ರಮಣ್ಯಪುರ	ವಡ್ಡರಹಳ್ಳಿ
85	ಬೆಂಗಳೂರು ಉತ್ತರ	ಹೇರೋಹಳ್ಳಿ	ಹೇರೋಹಳ್ಳಿ
86	ಬೆಂಗಳೂರು ಉತ್ತರ	ಕೊಡಿಗೇಹಳ್ಳಿ	ಉಲ್ಲಾಳು
87	ಬೆಂಗಳೂರು ಉತ್ತರ	ಅಬ್ಬಿಗೆರೆ	ಅಬ್ಬಿಗೆರೆ
88	ಬೆಂಗಳೂರು ಉತ್ತರ	ಚಿಕ್ಕಬಾಣಾವರ	ಚಕ್ಕಸಂದ್ರ
89	ಬೆಂಗಳೂರು ಉತ್ತರ	ಚಿಕ್ಕಬಾಣಾವರ	ಶೆಟ್ಟಿಹಳ್ಳಿ
90	ಬೆಂಗಳೂರು ಉತ್ತರ	ಚಿಕ್ಕಬಾಣಾವರ	ಸಿಡೇದಹಳ್ಳಿ

91	ಬೆಂಗಳೂರು ಉತ್ತರ	ದೊಡ್ಡಬೆಟ್ಟಹಳ್ಳಿ	ಚಿಕ್ಕಬೆಟ್ಟಹಳ್ಳಿ
92	ಬೆಂಗಳೂರು ಉತ್ತರ	ದೊಡ್ಡಬಿದುರುಕಲ್ಲ	ಕೆರೆಓಬನಳ್ಳಿ
93	ಬೆಂಗಳೂರು ಉತ್ತರ	ಹೇರೋಹಳ್ಳಿ	ಗಿಡನಕೋನೇ ಹಳ್ಳಿ
94	ಬೆಂಗಳೂರು ಉತ್ತರ	ಹೇರೋಹಳ್ಳಿ	ಅಂದ್ರಹಳ್ಳಿ
95	ಬೆಂಗಳೂರು ಉತ್ತರ	ಅಬ್ಬಿಗೆರೆ	ಮ್ಯಾದರಹಳ್ಳಿ
96	ಬೆಂಗಳೂರು ಉತ್ತರ	ದೊಡ್ಡಬೆಟ್ಟಹಳ್ಳಿ	ದೊಡ್ಡಬೆಟ್ಟಹಳ್ಳಿ
97	ಬೆಂಗಳೂರು ಉತ್ತರ	ದೊಡ್ಡಬಿದರಕಲ್ಲು	ದೊಡ್ಡಬಿದರಕಲ್ಲು
98	ಬೆಂಗಳೂರು ಉತ್ತರ	ಗಂಟಿಗಾನಾಹಳ್ಳಿ	ಹಾರೋಹಳ್ಳಿ
99	ಬೆಂಗಳೂರು ಉತ್ತರ	ಗಂಟಿಗಾನಾಹಳ್ಳಿ	ವಾಸುದೇವಪುರ
100	ಬೆಂಗಳೂರು ಉತ್ತರ	ಹೇರೋಹಳ್ಳಿ	ಲಿಂಗಧೀರನಹಳ್ಳಿ (ಬಿ)
101	ಬೆಂಗಳೂರು ಉತ್ತರ	ಕಟ್ಟಿಗೇನಹಳ್ಳಿ	ಬೆಲ್ಲಹಳ್ಳಿ
102	ಬೆಂಗಳೂರು ಉತ್ತರ	ಕಟ್ಟಿಗೇನಹಳ್ಳಿ	ಕಟ್ಟಿಗೇನಹಳ್ಳಿ
103	ಬೆಂಗಳೂರು ಉತ್ತರ	ಕಟ್ಟಿಗೇನಹಳ್ಳಿ	ಶ್ರೀನಿವಾಸಪುರ
104	ಬೆಂಗಳೂರು ಉತ್ತರ	ಕಟ್ಟಿಗೇನಹಳ್ಳಿ	ತಿರುಮೇನಹಳ್ಳಿ
105	ಬೆಂಗಳೂರು ಉತ್ತರ	ಕೊಡಿಗೇಹಳ್ಳಿ	ಹೊಸಹಳ್ಳಿ ಗೊಲ್ಲರಪಾಳ್ಯ
106	ಬೆಂಗಳೂರು ಉತ್ತರ	ಸಿಂಗನಾಯಕನಹಳ್ಳಿ	ಅನಂತಪುರ
107	ಬೆಂಗಳೂರು ಉತ್ತರ	ಗಂಟೀಗಾನಹಳ್ಳಿ	ಗೋವಿಂದಪುರ
108	ಬೆಂಗಳೂರು ಉತ್ತರ	ಗಂಟೀಗಾನಹಳ್ಳಿ	ಕೆಂಚೇನಹಳ್ಳಿ
109	ಬೆಂಗಳೂರು ಉತ್ತರ	ಗಂಟೀಗಾನಹಳ್ಳಿ	ಮಂಚೇನಹಳ್ಳಿ
110	ಬೆಂಗಳೂರು ಉತ್ತರ	ಕಟ್ಟೇನಹಳ್ಳಿ	ಚೊಕ್ಕನಹಳ್ಳಿ

0.14F-85

ಸರ್ಕಾರಿ ನೌಕರರು/ ಅಧಿಕಾರಿಗಳು ಸ್ವಯಂ ನಿವೃತ್ತಿ ಬಗ್ಗೆ

175 (476) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರು/ಅಧಿಕಾರಿಗಳು ಸ್ವಯಂ ನಿವೃತ್ತಿ ತೆಗೆದು ಕೊಳ್ಳಲು ಕೆ.ಸಿ.ಎಸ್.ಆರ್. ನಿಯಮದಲ್ಲಿ ಅವಕಾಶವಿದೆಯೇ, ಹಾಗಿದ್ದಲ್ಲಿ ಈ ಸಂಬಂಧ ಅನುಸರಿಸಬೇಕಾದ ಮಾನದಂಡಗಳೇನು ಹಾಗೂ ವಿಧಿ ವಿಧಾನಗಳೇನು?

ಆ) ಸಹಕಾರ ಇಲಾಖೆಯಲ್ಲಿ ದಿನಾಂಕ: 01-01-2009 ರಿಂದ ಇದುವರೆವಿಗೂ ಸ್ವಯಂ ನಿವೃತ್ತಿ ಕೋರಿ ಅರ್ಜಿ ಸಲ್ಲಿಸಿರುವ ಮತ್ತು ಅರ್ಜಿಯನ್ನು ಅಂಗೀಕರಿಸಿರುವ ಗ್ರೂಪ್-ಎ ದರ್ಜೆಯ ಅಧಿಕಾರಿಗಳ ಪೂರ್ಣ ವಿವರ ನೀಡುವುದು;

ಇ) ಸ್ವಯಂ ನಿವೃತ್ತಿ ಕೋರಿ ಸಲ್ಲಿಸಿರುವ ಅಧಿಕಾರಿಗಳ ಅರ್ಜಿಯನ್ನು ನಿಯಮಾನುಸಾರ ಪರಿಶೀಲಿಸಿದ ನಂತರವೇ ಸ್ವಯಂ ನಿವೃತ್ತಿಯನ್ನು ಅಂಗೀಕರಿಸಲಾಗಿದೆಯೇ;

ಈ) ನಿಯಮ ಪಾಲನೆ ಮಾಡದೇ ಸ್ವಯಂ ನಿವೃತ್ತಿ ಅರ್ಜಿಯನ್ನು ಅಂಗೀಕರಿಸಿದ್ದಲ್ಲಿ ಅದಕ್ಕೆ ಕಾರಣಗಳೇನು; ನಿಯಮ ಪಾಲಿಸದೆ ಸ್ವಯಂ ನಿವೃತ್ತಿ ಅರ್ಜಿಯನ್ನು ಸಲ್ಲಿಸಿದವರ ವಿರುದ್ಧ ಹಾಗೂ ಅಂಗೀಕರಿಸಿದವರ ವಿರುದ್ಧ ಕ್ರಮ ಯಾವ ಕೈಗೊಳ್ಳಲಾಗುವುದು?

ಶ್ರೀ ಲಕ್ಷ್ಮಣ ಸ, ಸವದಿ (ಸಹಕಾರ ಸಚಿವರು) :

ಅ) ಕರ್ನಾಟಕ ನಾಗರೀಕ ಸೇವಾ ನಿಯಮ 1958ರ ನಿಯಮ 285(1) ಮತ್ತು (2)ರಡಿ ಸರ್ಕಾರಿ ನೌಕರರು/ಅಧಿಕಾರಿಗಳು ಸ್ವಯಂ ನಿವೃತ್ತಿ ಹೊಂದಲು ಅವಕಾಶವಿರುತ್ತದೆ.

ಈ ನಿಯಮಗಳನ್ವಯ ಸರ್ಕಾರಿ ನೌಕರರು/ಅಧಿಕಾರಿಗಳು 15 ವರ್ಷಗಳಿಗೆ ಕಡಿಮೆ ಇಲ್ಲದೆ ಅರ್ಹತಾದಾಯಕ ಸೇವೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ಕನಿಷ್ಠ 3 ತಿಂಗಳ ನೋಟೀಸನ್ನು ಬರಹದಲ್ಲಿ ನೀಡತಕ್ಕದ್ದಾಗಿದೆ. ಆದರೆ ಸದರಿ ನಿಯಮದ ಉಪ ನಿಯಮ (IX) ರಡಿ ನೇಮಕಾತಿ ಪ್ರಾಧಿಕಾರವು ಯುಕ್ತ ಸಂದರ್ಭದಲ್ಲಿ ಸರ್ಕಾರದ ಪೂರ್ವಾನುಮೋದನೆ ಪಡೆದು 3 ತಿಂಗಳಿಗಿಂತ ಕಡಿಮೆ ಅವಧಿಯ ನೋಟೀಸನ್ನು ಅಂಗೀಕರಿಸಬಹುದಾಗಿದೆ.

ಆ) ಸಹಕಾರ ಇಲಾಖೆಯಲ್ಲಿ ದಿನಾಂಕ: 01–01–2009 ರಿಂದ ಇದುವರೆವಿಗೂ ಗ್ರೂಪ್–ಎ ದರ್ಜೆಯ 3 ಅಧಿಕಾರಿಗಳು ಸ್ವಯಂ ನಿವೃತ್ತಿ ಹೊಂದಿರುತ್ತಾರೆ. ವಿವರ ಈ ಕೆಳಗಿನಂತಿದೆ.

1. ಶ್ರೀ ಬಸವೇಗೌಡ, ಸಹಕಾರ ಸಂಘಗಳ ಅಪರ ನಿಬಂಧಕರು, ದಿನಾಂಕ: 25–01–2009ರಂದು ಸ್ವಯಂ–ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದು ದಿನಾಂಕ: 30–04–2009 ರಿಂದ ನಿವೃತ್ತಿಹೊಂದಲು ಅನುಮತಿ ನೀಡಿದೆ.
2. ಶ್ರೀ ಎಂ. ವಾಸುದೇವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು, ದಿನಾಂಕ: 31–03–2009 ರಂದು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದು ದಿನಾಂಕ: 03–07–2009 ರಿಂದ ನಿವೃತ್ತಿಹೊಂದಲು ಅನುಮತಿ ನೀಡಿದೆ.
3. ಶ್ರೀ ಹೆಚ್.ಡಿ. ರಮೇಶ್‌ಕಾಂತ್, ಸಹಕಾರ ಸಂಘಗಳ ಅಪರ ನಿಬಂಧಕರು, ದಿನಾಂಕ: 05–01–2010 ರಂದು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದು ದಿನಾಂಕ: 13–01–2010 ರಿಂದ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಗುಂಡ್ಲುಪೇಟೆ ಕ್ಷೇತ್ರದ ಬೇಗೂರು ಗ್ರಾಮದ ಹೊರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

177 (411) ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದ ಔಟ್‌ಪೋಸ್ಟ್ ಪೊಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಕಳೆದ 4 ವರ್ಷಗಳಿಂದ ಬಾಕಿ ಇರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ ವಿಳಂಬವಾಗಲು ಕಾರಣವೇನು;

ಇ) ಬೇಗೂರು ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಆ) ಮತ್ತು ಇ)

ರಾಜ್ಯದ ವಿವಿಧ ಸ್ಥಳಗಳಲ್ಲಿನ 20 ಪೊಲೀಸ್ ಔಟ್‌ಪೋಸ್ಟ್‌ಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ದಿನಾಂಕ: 30/05/2009 ರಲ್ಲಿ ಸರ್ಕಾರಕ್ಕೆ ಬಂದಿರುತ್ತದೆ. ಇದರಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದ ಔಟ್‌ಪೋಸ್ಟ್ ಪೊಲೀಸ್ ಠಾಣೆಯನ್ನು ಪೂರ್ಣಪ್ರಮಾಣದ ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸಹ ಸೇರಿರುತ್ತದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 207 ಪಿಓಪಿ 2008, ದಿನಾಂಕ: 10/02/2010 ರಲ್ಲಿ ಸದ್ಯಕ್ಕೆ 10 ಪೊಲೀಸ್ ಉಪಠಾಣೆಗಳನ್ನು ಮಾತ್ರ ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಲಾಗಿದ್ದು, ಇದರಲ್ಲಿ ಬೇಗೂರು ಗ್ರಾಮದ ಔಟ್‌ಪೋಸ್ಟ್ ಸೇರಿರುವುದಿಲ್ಲ. ಹಣಕಾಸಿನ ಲಭ್ಯತೆಗನುಗುಣವಾಗಿ ಮುಂದಿನ ವರ್ಷಗಳಲ್ಲಿ ಬೇಗೂರು ಔಟ್‌ಪೋಸ್ಟ್ ಸೇರಿದಂತೆ ಇನ್ನುಳಿದ ಪೊಲೀಸ್ ಔಟ್‌ಪೋಸ್ಟ್‌ಗಳನ್ನು ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುವುದು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದವರು ಭೂಸ್ವಾಧೀನ ಪ್ರಕ್ರಿಯೆ

182 (440) ಶ್ರೀ ಎಸ್.ಆರ್.ಮಹೇಶ್ : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದಿನಾಂಕ: 1.5.2008 ರಿಂದ 22.2.2010 ರವರೆಗೆ ಸಾರ್ವಜನಿಕರಿಗಾಗಿ ನಿವೇಶನಗಳನ್ನು ಹಂಚಲು ಹಾಗೂ ಇತರೇ ಉದ್ದೇಶಗಳಿಗಾಗಿ ಭೂ ಸ್ವಾಧೀನಪಡಿಸಿ ಕೊಳ್ಳಲು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದಾಗ ಪ್ರಕಟಿಸಿದ ಜಮೀನಿನ ವಿಸ್ತೀರ್ಣವೆಷ್ಟು, ತಾಲ್ಲೂಕುವಾರು ಮಾಹಿತಿ ನೀಡುವುದು ಹಾಗೂ ಅಧಿಸೂಚನೆಯ ಪ್ರತಿಗಳನ್ನು ಒದಗಿಸುವುದು.

ಆ) ಪ್ರಾಥಮಿಕ ಅಧಿಸೂಚನೆಯ ನಂತರ ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಭೂ ಸ್ವಾಧೀನ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು, ಕೈಬಿಡಲು ಕಾರಣಗಳೇನು, ತಾಲ್ಲೂಕುವಾರು ಪೂರ್ಣ ಮಾಹಿತಿಯೊಂದಿಗೆ ಅಧಿಸೂಚನೆಯ ಪ್ರತಿಯನ್ನು ನೀಡುವುದು;

ಇ) ಅಂತಿಮ ಅಧಿಸೂಚನೆಯಲ್ಲಿ ಭೂ ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು, ತಾಲ್ಲೂಕುವಾರು ಪೂರ್ಣ ಮಾಹಿತಿಯೊಂದಿಗೆ ಅಧಿಸೂಚನೆಯ ಪ್ರತಿಯನ್ನು ನೀಡುವುದು;

ಈ) ಭೂ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕರಿಗೆ ಪ್ರತಿ ಎಕರೆಗೆ ನೀಡಿರುವ ಪರಿಹಾರದ ಹಣವೆಷ್ಟು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 1.5.2008 ರಿಂದ 22.2.2010 ರವರೆಗೆ ಈ ಕೆಳಕಂಡ ಗ್ರಾಮಗಳ ಜಮೀನುಗಳನ್ನು ಬಡಾವಣೆ ಉದ್ದೇಶಕ್ಕಾಗಿ ಭೂ ಸ್ವಾಧೀನಪಡಿಸಿ ಕೊಳ್ಳಲು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. (ಪ್ರತಿಗಳನ್ನು ಲಗತ್ತಿಸಿದೆ)

ಗ್ರಾಮ	ವಿಸ್ತೀರ್ಣ ಎಕರೆ-ಗುಂಟೆ)
ಕೇರ್ಗಳ್ಳಿ	187-09
ಹಿನಕಲ್	16-01
ಬಸವನಹಳ್ಳಿ	9-38
ಒಟ್ಟು	**213-08**

ಆ) ಬಸವನಹಳ್ಳಿ ಗ್ರಾಮದ ಸ.ನಂ. 24 ಮತ್ತು 128/2 ರ ಒಟ್ಟು 4 ಎಕರೆ 31 ಗುಂಟೆ ಜಮೀನಿನಲ್ಲಿ ತೋಟವಿರುವುದರಿಂದ, ತೋಟವಾಗಿಯೇ ಉಳಿಸಿಕೊಂಡು ಹೋಗುವ ಷರತ್ತಿಗೊಳಪಟ್ಟು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ (ಪ್ರತಿ ಲಗತ್ತಿಸಿದೆ).

ಇ) ದಿನಾಂಕ: 1.5.08 ರಿಂದ 22.2.2010 ರವರೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಯಾವುದೇ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ.

ಈ) ದಿನಾಂಕ: 1.5.08 ರಿಂದ 22.2.2010 ರವರೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಯಾವುದೇ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಇದರಿಂದಾಗಿ ಭೂ ಪರಿಹಾರವನ್ನು ನೀಡಿರುವುದಿಲ್ಲ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಪ್ರಾಥಮಿಕ ಅಧಿಸೂಚನೆ

ಸಂಖ್ಯೆ:ಎಲ್ ಎಕ್ಯೂ(5)ಸಿಆರ್190/2007-08 ದಿನಾಂಕ:21.07.2009

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು [illegible] ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ "[illegible] 4ನೇ ಹಂತ 1ನೇ ಫೇಸ್" [illegible] ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಲಂ 17(1) ರನ್ವಯ ಅಧಿಸೂಚನೆ [illegible]

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ "[illegible] 4ನೇ ಹಂತ 1ನೇ ಫೇಸ್" [illegible]

ಈ [illegible] ನಗರಾಭಿವೃದ್ಧಿ ಪ್ರಾಧಿಕಾರಕ್ಕೆ [illegible] (30) [illegible] 1894 [illegible] 24ನ್ನು [illegible] ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ [illegible] 1987ರ ಕಲಂ 53 ರನ್ವಯ ನಗರಾಭಿವೃದ್ಧಿ ಪ್ರಾಧಿಕಾರದ [illegible]

ಜಿಲ್ಲೆ: ಮೈಸೂರು		ತಾಲ್ಲೂಕು : ಮೈಸೂರು					ಹೋಬಳಿ : [illegible]			ಗ್ರಾಮ : [illegible]		
ಕ್ರ.ಸಂ.	ಸರ್ವೆ ನಂ.	ಖಾತೆದಾರರ / ಅನುಭವದಾರರ ಹೆಸರು	ಒಟ್ಟು ವಿಸ್ತೀರ್ಣ	[illegible] ವಿಸ್ತೀರ್ಣ	ಖರಾಬು ವಿಸ್ತೀರ್ಣ	ಉಳಿದ ವಿಸ್ತೀರ್ಣ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	[illegible] ವಿಸ್ತೀರ್ಣ	ಷರಾ
1	2	3	4	5	6	7	8	9	10	11	12	13
1	283/1ಎ	[illegible]	1.06	-	-	1.06	ಸ.ನಂ.283/1ಬಿ 283/1ಸಿ	ಸ.ನಂ.305	ಸ.ನಂ.284	ಸ.ನಂ.283/2	1.06	
2	283/1ಬಿ	[illegible]	0.20	-	-	0.20	ಸ.ನಂ.285	ಸ.ನಂ.283/1ಎ	ಸ.ನಂ.284	ಸ.ನಂ.283/1ಸಿ	0.20	
3	283/2	[illegible]	4.13	-	0.01	4.14	ಸ.ನಂ.285	ಸ.ನಂ.305	ಸ.ನಂ.283/1ಎ 283/1ಸಿ	ಸ.ನಂ.282 [illegible]	4.14	

4	290/1	[illegible]	0.03	–	–	0.03	ಸ.ನಂ.290/2	[illegible]	[illegible]	ಸ.ನಂ.	0.03	
5.	290/2	[illegible]	0.03	–	–	0.03	ಸ.ನಂ.290/3	ಸ.ನಂ.290/1	[illegible]	ಸ.ನಂ.290/4	0.03	
6.	303/2ಎ	[illegible]	1.10	–	–	1.10	ಸ.ನಂ.284	ಸ.ನಂ.304	ಸ.ನಂ.303/1ಎ	ಸ.ನಂ.303/2ಬ	1.10	
7	322/1	[illegible]	1.36	–	–	1.36	[illegible]	[illegible]	[illegible]	ಸ.ನಂ.322/2	1.36	
8	322/2	[illegible]	1.23	–	–	1.23	[illegible]	[illegible]	ಸ.ನಂ.322/1	ಸ.ನಂ.323 ಸ.ನಂ.320 ಸ.ನಂ.321	1.23	
9	325	[illegible]	[illegible]	–	–	1.20	ಸ.ನಂ.325/1	[illegible]	ಸ.ನಂ.325/1	[illegible]	1.20	
10	325/1	[illegible]	[illegible]	–	–	1.39	ಸ.ನಂ.325/1	[illegible]	ಸ.ನಂ.325/2	[illegible]	1.39	
11	326/1	[illegible]	0.35	–	–	0.35	ಸ.ನಂ.328/2	ಸ.ನಂ.325	[illegible]	ಸ.ನಂ.326/4	0.35	
12	326/2	[illegible]	0.32	–	–	0.32	ಸ.ನಂ.326/1	ಸ.ನಂ.326/2	[illegible]	ಸ.ನಂ.326/4	0.32	
		[illegible]	[illegible]	–	0.01	[illegible]					18.01	

[illegible]

[illegible]

[illegible] 21.07.2009

[illegible] 1987ರ ಕಲಂ 17(1) [illegible]

[illegible]

[illegible] (30) [illegible] 1894 [illegible] 1987ರ [illegible] 33 [illegible]

[illegible]												
[illegible]	[illegible]						[illegible]			[illegible]		
[illegible]							[illegible]					
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
1	2	3	4	5	6	7	8	9	10	11	12	13
1	24	[illegible]	4.17	[illegible]	0.05	4.22	ಸ.ನಂ.25	ಸ.ನಂ.4	ಸ.ನಂ.128	ಸ.ನಂ.23 [illegible]	4.22	
2	122/2	[illegible]	1.10	-	-	1.10	[illegible]	ಸ.ನಂ.122/1	[illegible]	ಸ.ನಂ.122/3	1.10	

3	122/3	[illegible]	1.05	-	-	1.05	ಗ್ರಾಮದ ಗಡಿ	ಸ.ನಂ.122/1	ಸ.ನಂ.122/2	ಸ.ನಂ.122/4	1.05	
4	122/4	[illegible]	0.31	-	0.01	0.32	ಗ್ರಾಮದ ಗಡಿ	ಸ.ನಂ.122/1	ಸ.ನಂ.122/3	ಸ.ನಂ.122/1	0.32	
5	124/3ಡ [illegible]	[illegible]	0.20	-	-	0.20	ಹಳ್ಳ	ಸ.ನಂ.124/3ಡ [illegible]	ಸ.ನಂ.125	ಹಳ್ಳ	0.20	
6	126/2ಬ	[illegible]	1.03	-	-	1.03	ಸ.ನಂ.126/2ಎ	ಸ.ನಂ.127/2	ಸ.ನಂ.126/2ಎ	ಹಳ್ಳ [illegible] ಸ.ನಂ.15	1.03	
7	128/2	[illegible]	0.26	-	-	0.26	[illegible]	ಸ.ನಂ.4	ಸ.ನಂ.128/1	ಸ.ನಂ.14	0.26	
		ಒಟ್ಟು	9.32	-	0.06	9.38	-	-	-	-	9.38	

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಪ್ರಾಥಮಿಕ ಅಧಿಸೂಚನೆ

ಸಂಖ್ಯೆ [illegible](1)[illegible]/2008-09 ದಿನಾಂಕ.03.07.2009

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು [illegible] 1987ರ ಕಲಂ 17(1) ರಂತೆ [illegible]

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ [illegible]

[illegible] (30) [illegible] 1894ರ [illegible] 24ರ [illegible]

ಅನುಸೂಚಿ

ಜಿಲ್ಲೆ: ಮೈಸೂರು ತಾಲ್ಲೂಕು : ಮೈಸೂರು ಹೋಬಳಿ : [illegible] ಗ್ರಾಮ : [illegible]

[illegible]							ಚಕ್ಕುಬಂದಿ					
ಕ್ರ.ಸಂ.	ಸರ್ವೆ ನಂ.	ಖಾತೆದಾರ / ಅನುಭವದಾರರ ಹೆಸರು	[illegible]	[illegible]	[illegible]	[illegible]	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	[illegible]	[illegible]
1	2	3	4	5	6	7	8	9	10	11	12	13
1	34	[illegible]	5.03	–	0–18	5–21	ಸ.ನಂ. 33-35	[illegible]	[illegible]	[illegible]	[illegible]	

2	59/1	ವೆಂಕಟೇಶ ಬಿನ್ ಲೇ.ರಾಮಲಿಂಗಯ್ಯ ದೇವರಾಜು ಬಿನ್ ಲೇ.ರಾಮಲಿಂಗಯ್ಯ ನಾಗರಾಜ್ ಕುಮಾರ್ ಬಿನ್ ಲೇ.ರಾಮಲಿಂಗಯ್ಯ	1-20.	-	-	1-20.	ಆರ್.ಟಿ.ಸಿ.ಯ ಪ್ರಕಾರ ಹೆಚ್ಚುವರಿಯಾಗಿ ಮತ 1.30 ಎಕರೆ	ಸ.ನಂ.60/34 ಮತ್ತು 340 ರ ಜಮೀನು	ಸ.ನಂ.60 ರ ಪೈಕಿ ಎಲ್.ಮುನಿಯಪ್ಪ ಜಮೀನು	ಸ.ನಂ.60 ರ ಪೈಕಿ ಚಿಕ್ಕಮ್ಮ ಜಮೀನು	1-20.	
3	60/ಬ್ಲಾಕ್	ಪಿ.ಸರಸ್ವತಿ ಕೋಂ ಲೇ.ಪಿ. ಮುನಿಸ್ವಾಮಿಯಪ್ಪ	0-35	-	-	0-35	ಸ.ನಂ.60 ರ ಪೈಕಿ ಸರಸ್ವತಿ ರವರ ಜಮೀನು	ಸರಸ್ವತಿ ರವರ ಉಳಿಕೆ ಜಮೀನು	ನೀರು ಹರಿಯುವ ಹಳ್ಳ	ಬಂಡಿದಾರಿ	0-35	
4	60/ಬ್ಲಾಕ್ .1	ಪಿ.ಸರಸ್ವತಿ ಕೋಂ ಲೇ.ಪಿ. ಮುನಿಸ್ವಾಮಿಯಪ್ಪ	1-20.	-	-	1-20.	ಸ.ನಂ.60/ ಬ್ಲಾಕ್ ನಂ.2	ರಸ್ತೆ	ಸ.ನಂ.60, ರ ಪೈಕಿ ಜಮೀನು	ಸ.ನಂ.60 ರ ಪೈಕಿ ಜಮೀನು	1-20.	
5	60/ಬ್ಲಾಕ್ .2	ಪಿ.ಸರಸ್ವತಿ ಕೋಂ ಲೇ.ಪಿ. ಮುನಿಸ್ವಾಮಿಯಪ್ಪ	1-15.	-	-	1-15.	ಸ.ನಂ.60/ ಬ್ಲಾಕ್ ನಂ.3	ಸ.ನಂ.60/ ಬ್ಲಾಕ್ ನಂ.1	ಸ.ನಂ.60 ರ ಪೈಕಿ ಜಮೀನು	ರಸ್ತೆ	1-15.	
6	60/ಬ್ಲಾಕ್ .3	ಎಂ.ಮುನಿಸ್ವಾಮಪ್ಪ ಬಿನ್ ಲೇ.ಆರ್.ಸಣ್ಣಪ್ಪ	1-05.	-	-	1-05.	ಸ.ನಂ.60/ ಬ್ಲಾಕ್ ನಂ.4	ಸ.ನಂ.60/ ಬ್ಲಾಕ್ ನಂ.2	ಸ.ನಂ.60 ರ ಪೈಕಿ ಜಮೀನು	ರಸ್ತೆ.	1-05.	
7	60/ಬ್ಲಾಕ್ 4-ಪಿ-2	ಪಿ.ಸರಸ್ವತಿ ಕೋಂ ಲೇ.ಪಿ. ಮುನಿಸ್ವಾಮಿಯಪ್ಪ	1-00.	-	-	1-00.	ಸ.ನಂ.60/ ಬ್ಲಾಕ್ ನಂ.5	ಸ.ನಂ.60/ ಬ್ಲಾಕ್ ನಂ.3	ಸ.ನಂ.60 ರ ಪೈಕಿ ಜಮೀನು	ರಸ್ತೆ	1-00.	
8	60/ಬ್ಲಾಕ್. 5 ಪಿ1	ಎನ್.ಪಿ.ಮುನಿಸ್ವಾಮಿ ಬಿನ್ ಲೇ.ಪಿಳ್ಳಪ್ಪ ಮುನಿಯಮ್ಮ ಕೋಂ ಲೇ.ಪಿಳ್ಳಪ್ಪ	2-00.	-	-	2-00.	ಸ.ನಂ.60/ ಬ್ಲಾಕ್ ನಂ.6	ಸ.ನಂ.60/ ಬ್ಲಾಕ್ ನಂ.4	ಸ.ನಂ.60 ರ ಪೈಕಿ ಜಮೀನು	ರಸ್ತೆ	2-00.	
9	60/ಬ್ಲಾಕ್ 6	ಮುನಿಸ್ವಾಮಿ ಬಿನ್ ಮುನಿಯಪ್ಪ	1-10.	-	-	1-10.	ಸ.ನಂ.60/ ಬ್ಲಾಕ್ ನಂ.7	ಸ.ನಂ.60/ ಬ್ಲಾಕ್ ನಂ.5	ಸ.ನಂ.60 ರ ಪೈಕಿ ಜಮೀನು	ರಸ್ತೆ	1-10.	
10	60/ಬ್ಲಾಕ್. 7	ಪಿ.ಸರಸ್ವತಿ ಕೋಂ ಲೇ.ಪಿ. ಮುನಿಸ್ವಾಮಿಯಪ್ಪ	1-10.	-	-	1-10.	ಸ.ನಂ.60/ ಬ್ಲಾಕ್ ನಂ.8	ಸ.ನಂ.60/ ಬ್ಲಾಕ್ ನಂ.6	ಸ.ನಂ.60 ರ ಪೈಕಿ ಜಮೀನು	ರಸ್ತೆ	1-10.	

11	60/ಬ್ಲಾಕ್ 8	[illegible]	1-10.	-	-	1-10.	ಸ.ನಂ.60/ ಬ್ಲಾಕ್ ನಂ.9	ಸ.ನಂ.60/ ಬ್ಲಾಕ್ ನಂ.7	ಸ.ನಂ.60 [illegible]	[illegible]	1-10.	
12	60/ಬ್ಲಾಕ್ 9	[illegible]	1-10.	-	-	1-10.	ಸ.ನಂ.60/ ಬ್ಲಾಕ್ ನಂ.10, 11	ಸ.ನಂ.60/ ಬ್ಲಾಕ್ ನಂ.8	ಸ.ನಂ.60 [illegible]	[illegible]	1-10.	
13	60/ಬ್ಲಾಕ್ 10-ಎ1	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.12	ಸ.ನಂ.60/ ಬ್ಲಾಕ್ ನಂ.9	ಸ.ನಂ.60 [illegible]	[illegible]	2-00.	
14	60/ಬ್ಲಾಕ್ 10-ಎ2	[illegible]	0-30	-	-	0-30	ಸ.ನಂ.60/ ಬ್ಲಾಕ್ ನಂ.12	ಸ.ನಂ.60/ ಬ್ಲಾಕ್ ನಂ.9	ಸ.ನಂ.60 [illegible]	[illegible]	0-30	
15	60/ಬ್ಲಾಕ್ 11	[illegible]	0-20	-	-	0-20	ಸ.ನಂ.60/ ಬ್ಲಾಕ್ ನಂ.12	ಸ.ನಂ.60/ ಬ್ಲಾಕ್ ನಂ.9	ಸ.ನಂ.60 [illegible]	ಸ.ನಂ.60/ ಬ್ಲಾಕ್ ನಂ.10	0-20	
16	60/ಬ್ಲಾಕ್ 14	[illegible]	0-35	-	-	0-35	ಸ.ನಂ.60/ ಬ್ಲಾಕ್ ನಂ.15	ಸ.ನಂ.60/ ಬ್ಲಾಕ್ ನಂ.13	ಸ.ನಂ.60 [illegible]	[illegible]	0-35	
17	60/ಬ್ಲಾಕ್ 15	[illegible]	0-35	-	-	0-35	ಸ.ನಂ.60/ ಬ್ಲಾಕ್ ನಂ.16	ಸ.ನಂ.60/ ಬ್ಲಾಕ್ ನಂ.14	ಸ.ನಂ.60 [illegible]	[illegible]	0-35	
18	60/ಬ್ಲಾಕ್ 16	[illegible]	0-35	-	-	0-35	ಸ.ನಂ.60/ ಬ್ಲಾಕ್ ನಂ.17	ಸ.ನಂ.60/ ಬ್ಲಾಕ್ ನಂ.15	ಸ.ನಂ.60 [illegible]	[illegible]	0-35	
19	60/ಬ್ಲಾಕ್ 17	[illegible]	0-35	-	-	0-35	ಸ.ನಂ.60/ ಬ್ಲಾಕ್ ನಂ.18	ಸ.ನಂ.60/ ಬ್ಲಾಕ್ ನಂ.16	ಸ.ನಂ.60 [illegible]	[illegible]	0-35	
20	60/ಬ್ಲಾಕ್ 18	[illegible]	0-15	-	-	0-15	ಸ.ನಂ.60/ ಬ್ಲಾಕ್ ನಂ.19	ಸ.ನಂ.60/ ಬ್ಲಾಕ್ ನಂ.17	ಸ.ನಂ.60 [illegible]	[illegible]	0-15	

21	60/ಪ್ಲಾಟ್ 19	[illegible]	0-15	-	-	0-15	ಸ.ನಂ.60/ ಪ್ಲಾಟ್ ನಂ.20	ಸ.ನಂ.60/ ಪ್ಲಾಟ್ ನಂ.18	ಸ.ನಂ.60 [illegible]	ರಸ್ತೆ	0-15	
22	60/ಪ್ಲಾಟ್ 22	[illegible]	0-15	-	-	0-15	ಸ.ನಂ.60/ ಪ್ಲಾಟ್ ನಂ.22	ಸ.ನಂ.60/ ಪ್ಲಾಟ್ ನಂ.21	ಸ.ನಂ.60 [illegible]	ರಸ್ತೆ	0-15	
23	60/ಪ್ಲಾಟ್ 24	[illegible]	1-10.	-	-	1-10.	ಸ.ನಂ.60/ ಪ್ಲಾಟ್ ನಂ.25	ಸ.ನಂ.60/ ಪ್ಲಾಟ್ ನಂ.23	ಸ.ನಂ.60 [illegible]	ರಸ್ತೆ	1-10.	
24	60/ಪ್ಲಾಟ್ 27	[illegible]	0-35	-	-	0-35	ಸ.ನಂ.60/ ಪ್ಲಾಟ್ ನಂ.28	ಸ.ನಂ.60/ ಪ್ಲಾಟ್ ನಂ.26	ಸ.ನಂ.60 [illegible]	ರಸ್ತೆ	0-35	
25	60/ಪ್ಲಾಟ್ 25	[illegible]	0-30	-	-	0-30	ಸ.ನಂ.60/ ಪ್ಲಾಟ್ ನಂ.29	ಸ.ನಂ.60/ ಪ್ಲಾಟ್ ನಂ.27	ಸ.ನಂ.60 [illegible]	ರಸ್ತೆ	0-30	
26	60/ಪ್ಲಾಟ್ 29	[illegible]	1-00.	-	-	1-00.	ಸ.ನಂ.60/ ಪ್ಲಾಟ್ ನಂ.30	ಸ.ನಂ.60/ ಪ್ಲಾಟ್ ನಂ.28	ಸ.ನಂ.60 [illegible]	ರಸ್ತೆ	1-00.	
27	60/ಪ್ಲಾಟ್ 31 ಹೊಸ ನಂ.330	[illegible]	1-00.	-	-	1-00.	ಸ.ನಂ.60/ ಪ್ಲಾಟ್ ನಂ.32	ಸ.ನಂ.60/ ಪ್ಲಾಟ್ ನಂ.30	ಸ.ನಂ.329	ಸ.ನಂ.343	1-00	
28	60/ಪ್ಲಾಟ್ 33 ಹೊಸ ನಂ.327	[illegible]	0-33	-	-	0-33	ಸ.ನಂ.60/ ಪ್ಲಾಟ್ ನಂ.34	ಸ.ನಂ.329	ಸ.ನಂ.60 ರ [illegible]	ಸ.ನಂ.328	0-33	

29	60/[illegible] 34 [illegible] ಸ.ನಂ.328	[illegible]	0-30	-	-	0-30	ಸ.ನಂ.331	ಸ.ನಂ.329, 330	ಸ.ನಂ.327	ಸ.ನಂ.60 ರ [illegible]	0-30	
30	60/[illegible] 35 [illegible] ಸ.ನಂ.331	[illegible]	1-10	-	-	1-10	ಸ.ನಂ.341	ಸ.ನಂ.60 ರ [illegible]	ಸ.ನಂ.60 ರ [illegible]	ಸ.ನಂ.60 ರ [illegible]	1-10	
31	60/[illegible] 36-ಹಿ1	[illegible]	1-00	-	-	1-00	ಸ.ನಂ.60/ [illegible] ನಂ.37	ಸ.ನಂ.60/ [illegible] ನಂ.36	ಸ.ನಂ.60 ರ [illegible]	ಸ.ನಂ.60 ರ [illegible]	1-00	
32	60/[illegible] 40	[illegible]	4-20	-	-	4-20	ಸ.ನಂ.60/ [illegible] ನಂ.42	ಸ.ನಂ.60/ [illegible] ನಂ.39	[illegible] ನಂ.48	[illegible] ನಂ.41	4-20	
33	60/[illegible] 41 [illegible] ಸ.ನಂ.340	[illegible]	3-33	-	-	3-33	ಸ.ನಂ.398 [illegible]	ಸ.ನಂ.60 [illegible]	ಸ.ನಂ.331,341, 342,339	ಸ.ನಂ.60/ 51/ಹಿ2 [illegible]	3-33	
34	60/[illegible] 42 [illegible] ಸ.ನಂ.339	[illegible]	3-33	-	-	3-33	ಸ.ನಂ.60/ [illegible] ನಂ.43	ಸ.ನಂ.60/ [illegible] ನಂ.40 [illegible] ಸ.ನಂ.342	ಸ.ನಂ.60/ [illegible] ನಂ.46, 47	ಸ.ನಂ.340	3-33	
35	60/[illegible] 43	[illegible]	1-00	-	-	1-00	ಸ.ನಂ.60/ [illegible] ನಂ.44	ಸ.ನಂ.60/ [illegible] ನಂ.42	ಸ.ನಂ.60/ [illegible] ನಂ.47, 46	ಸ.ನಂ.59, 60	1-00	

36	60/ಬ್ಲಾಕ್ 45	[illegible]	1-00.	–	–	1-00.	[illegible]	ಸ.ನಂ.60/ ಬ್ಲಾಕ್ ನಂ.48	[illegible]	ಸ.ನಂ.60/ ಬ್ಲಾಕ್ ನಂ.44	1-00.	
37	60/ಬ್ಲಾಕ್ 47	[illegible]	1-00.	–	–	1-00.	ಸ.ನಂ.60/ ಬ್ಲಾಕ್ ನಂ.46	ಸ.ನಂ.60/ ಬ್ಲಾಕ್ ನಂ.48	ಸ.ನಂ.60/ ಬ್ಲಾಕ್ ನಂ.71	ಸ.ನಂ.60/ ಬ್ಲಾಕ್ ನಂ.42, 43	1-00.	
38	60/ಬ್ಲಾಕ್ 52 [illegible] ನಂ.328	[illegible]	0-30	–	–	0-30	ಸ.ನಂ.60 ರ [illegible]	ಸ.ನಂ.60/ ರ [illegible]	ಸ.ನಂ.324, 325 [illegible]	ಸ.ನಂ.60/42 [illegible] 340	0-30	
39	60/ಬ್ಲಾಕ್ 58	[illegible]	0-30	–	–	0-30	ಸ.ನಂ.60 [illegible]	ಸ.ನಂ.60 [illegible]	ಸ.ನಂ.60 [illegible]	ಸ.ನಂ.60 [illegible]	0-30	
40	[illegible]	[illegible]	2-00.	–	–	2-00.	ಸ.ನಂ.60 [illegible]	ಸ.ನಂ.60 [illegible] ಬ್ಲಾಕ್ ನಂ.64	ಸ.ನಂ.60 [illegible] ಬ್ಲಾಕ್ ನಂ.3, 4	ಸ.ನಂ.60 [illegible] ಬ್ಲಾಕ್ ನಂ.61	2-00.	
41	60/ಬ್ಲಾಕ್ 3-61	[illegible]	0-30	–	–	0-30	[illegible]	ರಸ್ತೆ	ರಸ್ತೆ	ಸ.ನಂ.29[illegible]	0-30	
42	60/ಬ್ಲಾಕ್ 63-62	[illegible]	0-30			0-30	[illegible]	ರಸ್ತೆ	[illegible]	ಸ.ನಂ.295	0-30	

43	60/[illegible]1	[illegible] 2-00, [illegible] 4-00	6-00.	-	-	6-00.	[illegible]	[illegible]	[illegible]	[illegible].295	6-00.	
44	60/[illegible]2	[illegible]	4-00.	-	-	4-00.	[illegible].60 [illegible]	[illegible].295,	[illegible].60 [illegible] 300 [illegible]	[illegible].60 [illegible]	4-00.	
45	60/[illegible]3	[illegible]	2-00.	-	-	2-00.	[illegible].60 [illegible]	[illegible].60 [illegible]	[illegible].60 [illegible]	[illegible].60 [illegible]	2-00.	
46	60/4	[illegible]	2-00.	-	-	2-00.	[illegible].60 [illegible]	[illegible].60 [illegible]	[illegible].60 [illegible]	[illegible].60 [illegible]	2-00.	
47	60/[illegible]4	[illegible]	0-30	-	-	0-30	[illegible].60 [illegible]	[illegible].60 [illegible]	[illegible].60 [illegible]	[illegible].60 [illegible]	0-30	
48	60/[illegible]5	[illegible]	2-00.	-	-	2-00.	[illegible].60 [illegible]	[illegible].60 [illegible]	[illegible].60 [illegible]	[illegible].60 [illegible]	2-00.	
49	60/5-[illegible]1	[illegible] 0.27 [illegible] 0.27 [illegible] 0.24	12-00.	-	-	12-00.	[illegible].60/ [illegible] 72, 73 [illegible]	[illegible].60/ [illegible] 72	[illegible].294	[illegible]	12-00.	
50	60/5-[illegible]2	[illegible]	2-00.	[illegible]	-	2-00.	[illegible] 60.53/1 [illegible]	[illegible] 60.40 [illegible]	348 [illegible].60 [illegible]	[illegible]	2-00.	

51	60/6	[illegible]	3-00.	-	-	3-00.	ಸ.ನಂ.60/ ಬ್ಲಾಕ್ ನಂ.7	ಸ.ನಂ.60/ ಬ್ಲಾಕ್ ನಂ.5	ಸ.ನಂ.60 ರ [illegible]	ಖುಷ್ಕಿ	3-00.	
52	60/7	[illegible]	2-00.	-	-	2-00.	ಸ.ನಂ.60/14 [illegible]	[illegible]	[illegible]	ಖುಷ್ಕಿ	2-00.	
53	60/10	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.12	ಸ.ನಂ.60/ ಬ್ಲಾಕ್ ನಂ.9	ಸ.ನಂ.60/14 ಬ್ಲಾಕ್ ನಂ.11	ಖುಷ್ಕಿ	2-00.	
54	60/11	[illegible]	2-00.	-	-	2-00.	ಸ.ನಂ.60/14 ಬ್ಲಾಕ್ ನಂ.12	ಸ.ನಂ.60/14 ಬ್ಲಾಕ್ ನಂ.9	ಸ.ನಂ.60/14 ಸ.ನಂ.60	ಸ.ನಂ.60/14 ಬ್ಲಾಕ್ ನಂ.10	2-00.	
55	60/12 [illegible] ಸ.ನಂ.343/14	[illegible]	4-00.	-	-	4-00.	ಸ.ನಂ.60/ ಬ್ಲಾಕ್ ನಂ.13	ಸ.ನಂ.60/ ಬ್ಲಾಕ್ ನಂ.10, 11	ಸ.ನಂ.330	ಖುಷ್ಕಿ	4-00.	
56	60/13-ಎ1	[illegible]	4-00.	-	-	4-00.	ಸ.ನಂ.60/ ಬ್ಲಾಕ್ ನಂ.14	ಸ.ನಂ.60/ ಬ್ಲಾಕ್ ನಂ.12	ಸ.ನಂ.60 ರ [illegible]	ಖುಷ್ಕಿ	4-00.	
57	60/13-ಎ2	[illegible]	3-00.	-	-	3-00.	ಸ.ನಂ.60/ ಬ್ಲಾಕ್ ನಂ.14	ಸ.ನಂ.60/ ಬ್ಲಾಕ್ ನಂ.12	ಸ.ನಂ.60	ಖುಷ್ಕಿ	3-00.	
58	60/14	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.15 54, 59	[illegible] ಸ.ನಂ.60/ ಬ್ಲಾಕ್.13	ಸ.ನಂ.60 ರ [illegible]	[illegible] ಖುಷ್ಕಿ	2-00.	
59	60/15	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.16	ಸ.ನಂ.60/ ಬ್ಲಾಕ್ ನಂ.14	ಸ.ನಂ.60 ರ [illegible]	ಖುಷ್ಕಿ	2-00.	
60	60/16-ಎ1	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.17	ಸ.ನಂ.60/ ಬ್ಲಾಕ್ ನಂ.15	ಸ.ನಂ.60 ರ [illegible]	ಖುಷ್ಕಿ	2-00.	
61	60/16-ಎ2	[illegible]	2-00.	-	-	2-00.	ಸ.ನಂ.60/ ಬ್ಲಾಕ್ ನಂ.17	ಸ.ನಂ.60/ ಬ್ಲಾಕ್ ನಂ.15	ಸ.ನಂ.60 ರ [illegible]	ಖುಷ್ಕಿ	2-00.	

62	60/17	[illegible]	2-00.	-	-	2-00.	[illegible] 60/14 [illegible] 15	[illegible] 60/14 [illegible] 16	[illegible] 60/14 [illegible] 60 [illegible]	[illegible]	2-00.	
63	60/18	[illegible]	2-00.	-	-	2-00.	[illegible] 60/ [illegible] 19	[illegible] 60/ [illegible] 17	[illegible] 60 [illegible]	[illegible]	2-00.	
64	60/19	[illegible]	3-00.	-	-	3-00.	[illegible] 60/ [illegible] 20	[illegible] 60/ [illegible] 18	[illegible] 60 [illegible]	[illegible]	3-00.	
65	60/22	[illegible]	3-00.	-	-	3-00.	[illegible] 60/ [illegible] 23	[illegible] 60/ [illegible] 21	[illegible] 60 [illegible]	[illegible]	3-00.	
66	60/24	[illegible]	4-00.	-	-	4-00.	[illegible] 60/ [illegible] 25	[illegible] 60/ [illegible] 23	[illegible]	[illegible]	4-00.	
67	60/25	[illegible]	1-00.	-	-	1-00.	[illegible] 60/14 [illegible] 25	[illegible] 60/14 [illegible] 24	[illegible]	[illegible]	1-00.	
68	60/27	[illegible]	2-00.	-	-	2-00.	[illegible] 60/ [illegible] 28	[illegible] 60/ [illegible] 26	[illegible]	[illegible]	2-00.	
69	60/28	[illegible]	2-00.	-	-	1-00.	[illegible] 60/ [illegible] 29	[illegible] 60/ [illegible] 26	[illegible]	[illegible]	2-00.	
70	60/29	[illegible]	2-00.	-	-	2-00.	[illegible] 60/ [illegible] 30	[illegible] 60/ [illegible] 29	[illegible]	[illegible]	2-00.	
71	60/30	[illegible]	2-00.	-	-	2-00.	[illegible] 60/14 [illegible] 31	[illegible] 60/14 [illegible] 35	[illegible]	[illegible]	2-00.	
72	60/31	[illegible]	4-00.	-	-	4-00.	[illegible] 60/ [illegible] 32	[illegible] 60/ [illegible] 36	[illegible]	[illegible]	4-00.	

73	60/32	[illegible]	3-00.	-	-	3-00.	[illegible]	[illegible]	[illegible]	[illegible]	3-00.	
74	341	[illegible]	[illegible]	-	-	[illegible]	[illegible]	[illegible]	[illegible]	[illegible]		
75	60/20 [illegible] [illegible]	[illegible]	1-00.	-	-	1-00.	[illegible]	[illegible]	[illegible]	[illegible]	1-00.	
76	60/25	[illegible]	4-00.	-	-	4-00.	[illegible]	[illegible]	[illegible]	[illegible]	4-00.	
77.	60/26	[illegible]	2-00.	-	-	2-00.	[illegible]	[illegible]	[illegible]	[illegible]	2-00.	
78	60/49	[illegible]	1-00.	-	-	1-00.	[illegible]	[illegible]	[illegible]	[illegible]	1-00.	
79	60/51 [illegible] [illegible]	[illegible]	0-30	-	-	0-30	[illegible]	[illegible]	[illegible]	[illegible]	0-30	
80	60/54	[illegible]	0-30	-	-	0-30	[illegible]	[illegible]	[illegible]	[illegible]	0-30	
81	60/59 [illegible] [illegible]	[illegible]	0-30	-	-	0-30	[illegible]	[illegible]	[illegible]	[illegible]	0-30	
82	60/a-72	[illegible]	1-00.	-	-	1-00.	[illegible]	[illegible]	[illegible]	[illegible]	1-00.	

83	60/ಬಿ-73	[illegible]	0-20	-	-	0-20	[illegible]	60/6 ರ [illegible]	[illegible]	[illegible]	0-20	
84	60/ಬಿ-74	[illegible]	0-30	-	-	0-30	[illegible]	60/6 ರ [illegible]	[illegible]	[illegible]	0-30	
85	60/ಬಿ-75	[illegible]	0-15	-	-	0-15	[illegible]	60/6 ರ [illegible]	[illegible]	[illegible]	0-15	
86	60/ಬಿ-77	[illegible]	0-30	-	-	0-30	[illegible]	60/6 ರ [illegible]	[illegible]	[illegible]	0-30	
87	60/78 [illegible] ಸಂ.329	[illegible]	1-20.	-	-	1-20.	ಸ.ನಂ.327,323	ಸ.ನಂ.60 ರ [illegible]	ಸ.ನಂ.323,324, 325	60/ [illegible]-31	1-20.	
88	281	[illegible]	0-24	-	-	0-24	ಸ.ನಂ.296	ಸ.ನಂ.91	ಸ.ನಂ.93	[illegible]	0-24	
89	293	[illegible]	6-03.	-	0-15	6-18.	ಸ.ನಂ.60ರ [illegible]	ಸ.ನಂ.67 68 69.	ಸ.ನಂ.295 60	ಸ.ನಂ.294	6-18.	
90	294.	[illegible]	5-17.	-	0-05	5-22.	ಸ.ನಂ.60ರ [illegible]	ಸ.ನಂ.70 71	ಸ.ನಂ.293	ಸ.ನಂ.60ರ [illegible]	5-22.	
91	290	[illegible]	[illegible]		0-07	[illegible]	ಸ.ನಂ.60ರ [illegible]	ಸ.ನಂ.60, 65 66	ಸ.ನಂ.308	[illegible]	[illegible]	

92	296/1	[illegible]	1-07.	-	-	1-07.	ಸ.ನಂ.296/2	ಸ.ನಂ.231	ಸ.ನಂ.93	ಸ.ನಂ.50ರ ಕೃಷಿ ಜಮೀನು	1-07.	
93	308	[illegible]	1-38.	-	-	1-38.	ಸ.ನಂ.60ರ ಕೃಷಿ ಜಮೀನು	ಸ.ನಂ.60ರ ಕೃಷಿ ಜಮೀನು	ಸ.ನಂ.60ರ ಕೃಷಿ ಜಮೀನು	ಸ.ನಂ.195	1-38.	
94	309	[illegible]	1-00.	-	-	1-00.	ಸ.ನಂ.60ರ ಕೃಷಿ ಜಮೀನು	ಸ.ನಂ.60ರ ಕೃಷಿ ಜಮೀನು	ಸ.ನಂ.60ರ ಕೃಷಿ ಜಮೀನು	ಸ.ನಂ.60ರ ಕೃಷಿ ಜಮೀನು	1-00.	
		ಒಟ್ಟು	185.14	-	1.05	186.19					187.09	

ಕರ್ನಾಟಕ ಸರ್ಕಾರ

ಸಂಖ್ಯೆ, ನಅಇ 444 ಮೈಅಪ್ರಾ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 12.11.2009.

ಇಂದ:
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:
ಆಯುಕ್ತರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

ಮಾನ್ಯರೇ,

ವಿಷಯ: ಮೈಸೂರು ತಾಲ್ಲೂಕು, ಬಸವನಹಳ್ಳಿ ಗ್ರಾಮದ ಸ.ನಂ. 24 ಮತ್ತು 128/2 ರಲ್ಲಿನ ಒಟ್ಟು 4–31 ಎಕರೆ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ, ಎಲ್‌ಎಕ್ಯೂ(5) ಸಿಆರ್ 205/09–10, ದಿ: 16.10.09.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಪರಿಶೀಲಿಸಿದ ನಂತರ, ಪ್ರಸ್ತಾಪಿತ ಮೈಸೂರು ತಾಲ್ಲೂಕು, ಬಸವನಹಳ್ಳಿ ಗ್ರಾಮದ ಸ.ನಂ. 24, ರಲ್ಲಿನ 4–17 ಎಕರೆ ಮತ್ತು ಸ.ನಂ. 128/2 ರ 1–18 ಎಕರೆಯಲ್ಲಿನ 0–26 ಗುಂಟೆ ಜಮೀನಿನ ಪೈಕಿ 0–14 ಗುಂಟೆ ಅಂದರೆ ಒಟ್ಟು 4 ಎಕರೆ 31 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ 15 ವರ್ಷ ವಯಸ್ಸಿನ 3000 ತೇಗದ ಮರ, 350 ತೆಂಗಿನ ಮರ ಹಾಗೂ '25 X 35 ಅಡಿ ಚದರದ ಆರ್.ಸಿ.ಸಿ. ಮನೆ, ಒಂದು ವಾಚ್‌ಮನ್ ಶೆಡ್ ಹಾಗೂ ಒಂದು ಪಂಪ್‌ಸೆಟ್ ಇರುವುದರಿಂದ ಈ ತೋಟದ ಜಮೀನನ್ನು ಮುಂದೆಯೂ ತೋಟವನ್ನಾಗಿಯೇ ಉಳಿಸಿಕೊಂಡು ಹೋಗುವುದಾಗಿ ಭೂ ಮಾಲೀಕರಿಂದ ಮುಚ್ಚಳಿಕೆ ಬರೆಯಿಸಿಕೊಳ್ಳುವ ಷರತ್ತಿಗೊಳಪಟ್ಟು ಸದರಿ 4 ಎಕರೆ 31 ಗುಂಟೆ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಸರ್ಕಾರದ ಅನುಮೋದನೆ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಈ ಬಗ್ಗೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವುದು.

ತಮ್ಮ ನಂಬುಗೆಯ,

(ಸಿ.ಟಿ.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಹಾಸನ ಜಿಲ್ಲೆಯಲ್ಲಿ ವಿದ್ಯುತ್ ಕೊರತೆ

183 (12) ಶ್ರೀ ಮಂಜು.ಎ. (ಅರಕಲಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ವಿದ್ಯುತ್ ಕೊರತೆಯಿಂದಾಗಿ ರೈತರಿಗೆ, ಮಕ್ಕಳ ವಿಧ್ಯಾಭ್ಯಾಸಕ್ಕೆ ಸಾರ್ವಜನಿಕರಿಗೆ, ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಅರಕಲಗೂಡು ವಿಧಾನಸಭೆ ಕ್ಷೇತ್ರದಲ್ಲಿ ವಿದ್ಯುತ್ ಕೊರತೆ ಹಾಗೂ ವೋಲ್ಟೇಜ್ ಇಲ್ಲದೆ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದಲ್ಲಿ, ಸರ್ಕಾರವು ಎಷ್ಟು ವಿದ್ಯುತ್ ಉಪ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಂಡಿದೆ? (ಯಾವ ವಿದ್ಯುತ್ ಕೇಂದ್ರಗಳು ವಿವರ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಎಲ್ಲಾ ಮೂಲಗಳಿಂದ ಹೆಚ್ಚಿನ ವಿದ್ಯುತ್ ಖರೀದಿಸಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದೆ.

ಇ) ರೈತರಿಗೆ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವೋಲ್ಟೇಜ್ ಸಮಸ್ಯೆ ಬಗೆಹರಿಸಲು ವಿದ್ಯುತ್ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ) ಅನ್ವಯಿಸುವುದಿಲ್ಲ.

ದಾಸರಹಳ್ಳಿ ಕ್ಷೇತ್ರದ ಕೊಳಚೆ ಪ್ರದೇಶಗಳ ಅಭಿವೃದ್ಧಿ

185 (460) ಶ್ರೀ ಮುನಿರಾಜು.ಎಸ್. (ದಾಸರಹಳ್ಳಿ) : ಮಾನ್ಯ ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕೊಳಚೆ ಪ್ರದೇಶಗಳೆಷ್ಟು; ಅವುಗಳಾವುವು;

0.14 F - 88

ಆ) ಕೊಳಚೆ ಪ್ರದೇಶದಲ್ಲಿ ವಾಸವಿರುವ ಒಟ್ಟು ಜನಸಂಖ್ಯೆ ಎಷ್ಟು; ಅವರಿಗೆ ಕಲ್ಪಿಸಿರುವ ಸೌಲಭ್ಯಗಳಾವುವು;

ಇ) ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು; ಕೊಳಚೆ ಪ್ರದೇಶಗಳ ಪುನರ್ ವಸತಿ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದಲ್ಲಿ, ಕೈಗೊಂಡ ಕ್ರಮಗಳ ಬಗ್ಗೆ ವಿವರ ನೀಡುವುದು;

ಈ) ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆಯೇ; ಇಲ್ಲವಾದಲ್ಲಿ, ಎಂದು ಹಕ್ಕುಪತ್ರಗಳನ್ನು ವಿತರಿಸ ಲಾಗುವುದು;

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 9 ಕೊಳಚೆ ಪ್ರದೇಶಗಳಿರುತ್ತವೆ. ವಿವರ ಕೆಳಕಂಡಂತಿರುತ್ತವೆ.

1.	ಸಿದ್ದಾರ್ಥ ನಗರ
2.	ಗುಲ್ಬರ್ಗ ಹಟ್ಸ್
3.	ನೀಲಗಿರಿ ತೋಪು
4.	ರಾಜಗೋಪಾಲ ನಗರ
5.	ಅಲೆಮಾರಿ ಸ್ಲಂ (ವೀಡಿಯಾ ಫ್ಯಾಕ್ಟರಿ)
6.	ಹರಿಜನ ಸೇವಾ ಸಂಘ
7.	ಪೀಣ್ಯ ಪ್ಲಾಂಟೇಷನ್
8.	ಚೊಕ್ಕಸಂದ್ರ
9.	ಅಶ್ವಥ್ ಕಟ್ಟೆ

ಆ) ಮೇಲ್ಕಂಡ ಕೊಳಚೆ ಪ್ರದೇಶಗಳಲ್ಲಿ 2932 ಕುಟುಂಬಗಳು ವಾಸವಾಗಿರುವುದಾಗಿ ಅಂದಾಜಿಸಲಾಗಿರುತ್ತದೆ. ಈ ಪ್ರದೇಶದಲ್ಲಿ ಸುಮಾರು 15000 ಜನಸಂಖ್ಯೆ ಇರುತ್ತಾರೆಂದು ಅಂದಾಜಿಸಲಾಗಿದೆ. ರಾಜಗೋಪಾಲ ನಗರ ಕೊಳಚೆ ಪ್ರದೇಶದಲ್ಲಿ ನರ್ಮ್ ಯೋಜನೆಯಡಿಯಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ 144 ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳ ಲಾಗುತ್ತಿದೆ. ಉಳಿದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಂತ ಹಂತವಾಗಿ ವಸತಿ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಜವಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ (JNNURM) ಕಾರ್ಯಕ್ರಮದಡಿ ಬೆಂಗಳೂರು ಮತ್ತು ಮೈಸೂರು ನಗರಗಳನ್ನು Mission Cities ಎಂದು ಪರಿಗಣಿಸಿ ಈ ನಗರಗಳ ವ್ಯಾಪ್ತಿಯಲ್ಲಿ ನಗರ ಬಡಜನರಿಗೆ ಮೂಲಭೂತ ಸೌಲಭ್ಯ ಒದಗಿಸುವ ಯೋಜನೆ (BSUP) ಯಡಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಮಗ್ರ ವಸತಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಸದರಿ ಯೋಜನೆಯಡಿ ಬೆಂಗಳೂರು ನಗರದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಒಟ್ಟು 18180 ಮನೆಗಳನ್ನು ರೂ.522.23 ಕೋಟಿಗಳ ಅಂದಾಜು ವೆಚ್ಚದಲ್ಲಿ ಹಾಗೂ ಮೈಸೂರು ನಗರದಲ್ಲಿ ಸೌಲಭ್ಯಗಳೊಂದಿಗೆ ಒಟ್ಟು 6328 ಮನೆಗಳನ್ನು ರೂ. 203.97 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ ಬೆಂಗಳೂರು ನಗರದಲ್ಲಿ ಸುಮಾರು 9000 ಮನೆಗಳು ಹಾಗೂ ಮೈಸೂರುನಗರದಲ್ಲಿ ಸುಮಾರು 4000 ಮನೆಗಳ ಕಾಮಗಾರಿಗಳು ಈಗಾಗಲೇ ಪ್ರಾರಂಭಿಸಲಾಗಿದ್ದು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಈ ಎಲ್ಲಾ ಕಾಮಗಾರಿಗಳನ್ನು 2011 ರ ಅಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿರುತ್ತದೆ.

ಇದೇ ರೀತಿಯಾಗಿ ರಾಜ್ಯದ ಇತರೆ ನಗರ/ಪಟ್ಟಣಗಳ ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಮಗ್ರ ವಸತಿ ಹಾಗೂ ಕೊಳಚೆ ಪ್ರದೇಶಗಳಾಭಿವೃದ್ಧಿ ಯೋಜನೆಯಡಿ (IHSDP) ಒಟ್ಟು 34 ನಗರ/ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 17237 ಮನೆಗಳನ್ನು ರೂ.410.05 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಂಜೂರು ಮಾಡಲಾಗಿದ್ದು

ಕಾಮಗಾರಿಗಳು ಈಗಾಗಲೇ ಪ್ರಾರಂಭಿಸಲಾಗಿದ್ದು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

ಈ) ಹಕ್ಕುಪತ್ರ ನೀಡಿರುವುದಿಲ್ಲ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಿಂಧನೂರು ತಾಲ್ಲೂಕಿನಲ್ಲಿ ವಿದ್ಯುತ್ ಪರಿವರ್ತಕಗಳು

186 (320) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ಸುಟ್ಟು ಹೋಗಿವೆ (ವಿವರಗಳನ್ನು ನೀಡುವುದು)?

ಆ) ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳ ಸ್ಥಳದಲ್ಲಿ ಹೊಸ ಪರಿವರ್ತಕಗಳನ್ನು ಅಳವಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಹಾಗಿದ್ದಲ್ಲಿ, ಹೊಸ ವಿದ್ಯುತ್ ಪರಿವರ್ತಕಗಳನ್ನು ಯಾವಾಗ ಅಳವಡಿಸಲಾಗುವುದು?

ಈ) ಈ ಹೊಸ ವಿದ್ಯುತ್-ಪರಿವರ್ತಕಗಳಿಗೆ ತಗಲುವ ವೆಚ್ಚವೆಷ್ಟು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ (03.03.2010ರಂತೆ) ಸುಟ್ಟು ಹೋಗಿರುವ ಪರಿವರ್ತಕಗಳ ಸಂಖ್ಯೆ: 9, ಅವುಗಳ ವಿವರ ಕೆಳಗಿನಂತಿದೆ :–

ಕ್ರಮ ಸಂಖ್ಯೆ	ಊರುಗಳ ಹೆಸರು	ಪರಿವರ್ತಕಗಳ ಸಾಮರ್ಥ್ಯ	ಪರಿವರ್ತಕಗಳು ಸುಟ್ಟಿರುವ ದಿನಾಂಕ
1	ಹೆಡಗಿನಾಳ	68 ಕೆ.ವಿ.ಎ	4.2.2010
2	ರಾಗಲಪರ್ವಿ	63 ಕೆ.ವಿ.ಎ	14.2.2010
3	ಒಳ ಬಳ್ಳಾರಿ	25 ಕೆ.ವಿ.ಎ	18.1.2010
4	ಮಾಡಸಿರವಾರ	25 ಕೆ.ವಿ.ಎ	28.1.2010
5	ಜೆಂಟೆರ ಕ್ಯಾಂಪ್	25 ಕೆ.ವಿ.ಎ	4.2.2010

6	ಗೋಮರ್ಸಿ	25	ಕೆ.ವಿ.ಎ	6.2.2010
7	ಹೆಡಗಿನಾಳ	25	ಕೆ.ವಿ.ಎ	20.2.2010
8	ರಾರಪೂರ	100	ಕೆ.ವಿ.ಎ	18.2.2010
9	ಕನ್ನಾರಿ	100	ಕೆ.ವಿ.ಎ	26.2.2010

ಆ) ಮತ್ತು ಇ) ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ತ್ವರಿತಗತಿಯಲ್ಲಿ ದುರಸ್ತಿ ಮಾಡಿ ಆದ್ಯತೆ ಮೇಲೆ ಬದಲಾಯಿಸಲಾಗುವುದು.

ಈ) ಹೊಸ ಪರಿವರ್ತಕಗಳಿಗೆ ತಗಲುವ ವೆಚ್ ರೂ. 5,40,000/–

ರಾಯಚೂರಿನಲ್ಲಿ ಸಂಚಾರಿ ಆರಕ್ಷಕ ಠಾಣೆ ಪ್ರಾರಂಭಿಸುವ ಬಗ್ಗೆ

187 (321) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಗಾಗಿ ಸ್ಥಳ ಗುರ್ತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ನಗರದ ಯಾವ ಭಾಗದಲ್ಲಿ, ಎಷ್ಟು ವಿಸ್ತೀರ್ಣದ ಸ್ಥಳವನ್ನು ಗುರ್ತಿಸಲಾಗಿದೆ;

ಈ) ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಯ ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ|| ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನನುಸರಿಸಿ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.

ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ ನಿಷಿದ್ಧ ಠೇವಣಿ ನಷ್ಟವಾಗಿರುವುದು

188 (427) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ 2007–08ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಇಟ್ಟ ಹಣವೆಷ್ಟು; ಹಾಗೂ ಠೇವಣಿ ಇಟ್ಟ ಹಣವನ್ನು ನಷ್ಟ ಮಾಡಲು ಕಾರಣಗಳೇನು; 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಆ) ಮಂಗಳೂರು ವಿದ್ಯುತ್ ಕಂಪನಿಯಲ್ಲಿ 2007–08. 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಇ) ಗುಲ್ಬರ್ಗಾ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಈ) ಚಾಮುಂಡಿ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಉ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

